ನಿ. ಮುರಾರಿ ಬಲ್ಲಾಳ

# ಕಿಟಕಿಗಳು ಕನ್ನಡಿಗಳು

ಗಾಂಧಿ ಕಥನದ ಮಹಾರೂಪಕ



# ಕಿಟಕಿಗಳು ಕನ್ನಡಿಗಳು

ಆಕರ ಗ್ರಂಥಮಾಲೆ

# ಕಿಟಕಿಗಳು ಕನ್ನಡಿಗಳು

ಗಾಂಧಿ ಕಥನದ ಮಹಾ ರೂಪಕ

ನಿ. ಮುರಾರಿ ಬಲ್ಲಾಳ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ ಬೆಂಗಳೂರು - ೨

**KITAKIGALU - KANNADIGALU**

A Collection of Articals

**Writer**

**Dr. N.Murari Ballala**

**'MANASA', Ambalapadi**

UDUPI

Ph: 0820-2523211

**Publisher**

**N. Tippeswamy**

Administrative Officer

Kannada Pustaka Pradhikara

Kannada Bhavana

J.C. Road, Bangalore-560 002

**First Print 2004**

© **Author**

Page xii+258 Price: **100/-**

ISBN 81-7713-170-2

**Printer**

**Shakthi Printers & Publishers,**

No. 277, 5th Cross,

Kavidhamanagara

Vidhanasoudha Layout,

Laggere, Bangalore-560 058

Ph: 080-22712264

# ಅಕ್ಷರಸೂರ್ಯನಿಗೆ ನಮನ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಅಧ್ಯಕ್ಷರು**

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೆ ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು - ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು !

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲ! ಅನೇಕ ತಳವರ್ಗದ ಜನಸ್ಥಾನಗಳು ಮೊದಲಬಾರಿಗೆ ಅಕ್ಷರ ಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದವು. ೧೮೦೦ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆಡಂ ವರದಿಗಳು ತಿಳಿಸುತ್ತವೆ. ಆದರೆ ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೂ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಆ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ!

ಕನ್ನಡದ ಜನ ಓದುವ ಮೂಲಕ ಓದುವ ಸಂಸ್ಕೃತಿಯನ್ನು ಬೆಳೆಸುತ್ತಿದ್ದಾರೆ. ಓದು ಎಂಬುದು ಕೇವಲ ಕುರುಡಲ್ಲ. ಅದಕ್ಕೊಂದು ಸಾಂಸ್ಕೃತಿಕ ಹಿನ್ನೆಲೆ ಇದೆ. ಓದೆಂಬುದು ಅಂತಿಮವಾಗಿ ಸಂಸ್ಕೃತಿಯನ್ನು ತಿಳಿಯುವ ಬಗೆ. ಅದು ಅಂತರಂಗವನ್ನು ಬೆಳಸಿಕೊಳ್ಳುವ ಒಂದು ಪರಿ. ಪುಸ್ತಕ

ಪ್ರಾಧಿಕಾರವು ಅತಿ ನಮ್ರತೆಯಿಂದ ಈ ಅಂಶಗಳನ್ನು ಭಾವಿಸುತ್ತದೆ; ಅದರಂತೆ ನಡೆಯಲು ಯತ್ನಿಸಿದೆ. ಇಂಥ ಸಾಂಸ್ಕೃತಿಕ ಓಡಾಟದಲ್ಲಿ ಹಲವಾರು ಗ್ರಂಥಗಳು ಪ್ರಕಟಗೊಂಡಿವೆ. ಈಗ ಪ್ರಕಟವಾಗುತ್ತಿರುವ ಡಾ. ನಿ. ಮುರಾರಿಬಲ್ಲಾಳ ಅವರ 'ಕಿಟಕಿಗಳು ಕನ್ನಡಿಗಳು' ಪ್ರಾಧಿಕಾರದ ವಿಶಿಷ್ಟ ಪ್ರಕಟಣೆಗಳಲ್ಲಿ ಅಗ್ರಗಣ್ಯವೆಂದು ನಾನು ತಿಳಿಯುತ್ತೇನೆ.

ಸಾಂಸ್ಕೃತಿಕ ಮಿತ್ರರಾದ ಬಲ್ಲಾಳರು ವರ್ತಮಾನದ ಸಂಘರ್ಷಗಳನ್ನು ತಿಳಿಯಲು ಈ ಗ್ರಂಥದ ಮೂಲಕ ಪ್ರಯತ್ನಿಸಿದ್ದಾರೆ ಹಾಗೂ ಅದರಲ್ಲಿ ಯಶಸ್ವಿಯಾಗಿದ್ದಾರೆ. ಇವರು ಅರ್ಥಶಾಸ್ತ್ರದ ಪದವೀಧರರಾಗಿ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪರಿಣತಿ ಸಾಧಿಸಿ, ಈಗ ಪರಿಸರ ಕ್ಷೇತ್ರದ ವಿಶಿಷ್ಟ ಆಗು-ಹೋಗುಗಳ ನಡುವೆ ಬದುಕುತ್ತಿದ್ದಾರೆ ನಮ್ಮನ್ನೂ ಬದುಕಿಸುತ್ತಿದ್ದಾರೆ. ಮುರಾರಿಯವರ ಚಿಂತನೆಯ ಬೇರುಗಳು ಆಧುನಿಕ ಸಾಂಸ್ಕೃತಿಕ ಚಿಂತಕರಾದ ಮಹಾತ್ಮಗಾಂಧಿ, ಲೋಹಿಯಾ, ಜೆ.ಪಿ. ಇವರ ದೇಶೀ ಚಿಂತನೆಯ ಗರ್ಭದಲ್ಲಿ ಹುದುಗಿರುವುದನ್ನು ಕಾಣಬಹುದಾಗಿದೆ. ಬಹುಮಟ್ಟಿಗೆ ಗಾಂಧಿ ಚಿಂತನೆಯ ವಿಸ್ತೃತ ಕ್ರಮಗಳನ್ನು ಮುರಾರಿ ಹಿಡಿದು ನೋಡಲು ಯತ್ನಿಸಿದ್ದಾರೆ. ಈ ವಿಧಾನವು ನನಗೆ ಮೆಚ್ಚುಗೆ ತಂದಿದೆ.

ಡಾ. ನಿ. ಮುರಾರಿ ಬಲ್ಲಾಳ ನಮ್ಮ ನಡುವಿನ ಸಮರ್ಥ ಸಾಂಸ್ಕೃತಿಕ ಚಿಂತಕರು. ಅವರು ಕಳೆದ ಕಾಲು ಶತಮಾನಕ್ಕೂ ಮೀರಿ ಪೂರ್ವದ ಚಿಂತಕರ ಜೊತೆ ನಡೆಸಿದ ವಾಗ್ವಾದ-ಸಂವಾದಗಳು ಬಹು ವಿಶೇಷವಾಗಿವೆ. ಇಲ್ಲಿಯ ಲೇಖನಗಳು ಸಮಕಾಲೀನ ಸಂದರ್ಭದ ಹಲವು ವಿನ್ಯಾಸಗಳನ್ನು ಸೂಕ್ಷ್ಮವಾಗಿ ಹಿಡಿಯುತ್ತವೆ, ವ್ಯಾಖ್ಯಾನಿಸುತ್ತವೆ, ಸಂಸ್ಕೃತಿ ಚಿಂತನೆ ಕನ್ನಡಿಗಳಾಗುವುದೂ ಕಿಟಕಿಗಳಾಗುವುದೂ ಜೀವಂತ ರೂಪಕವಾಗುವುದೂ ಈ ಬಗೆಗಳಲ್ಲಿಯೇ. ಇಲ್ಲಿಯ ಲೇಖನಗಳು ಅಂತಿಮವಾಗಿ ಗಾಂಧಿಯ ಮಹಾ ರೂಪಕದ ಮೂಲಕ ಕಥನಗೊಳ್ಳುತ್ತವೆ. ಸಮಕಾಲೀನ ವೈಚಾರಿಕತೆ ಹಾಗೂ ಪೂರ್ವದ ತತ್ವಚಿಂತಕರ ಜೊತೆ ಜಗಳವನ್ನೂ ಸ್ನೇಹವನ್ನೂ ಒಟ್ಟಿಗೆ ಅವು ಹಿಡಿಯುತ್ತವೆ. ಮುಖ್ಯವಾಗಿ ಸನ್ಮಿತ್ರರಾದ ನಿ.ಮುರಾರಿ ಬಲ್ಲಾಳರು ಸಂವಾದ ರೂಪಿಕೆಯ ದೀಪ ಹಿಡಿಯಲು ಯತ್ನಿಸಿದ್ದಾರೆ. ನಮಗೆ ಬೆಳಕು ಬೇಕು, ಬೆಂಕಿ ಬೇಡ. ಬೆಳಕು ನಮ್ಮನ್ನು ಮುಂದೆ ಕರೆದೊಯ್ಯುತ್ತದೆ. ಬೆಂಕಿ ನಮ್ಮನ್ನು ಸುಟ್ಟು ಹಾಕುತ್ತದೆ. ಸಂಸ್ಕೃತಿ ಚಿಂತನೆ ಅಂತಿಮವಾಗಿ ಬೆಳಕಾಗುವುದು ಈ ಬಗೆಗಳಲ್ಲಿಯೇ. ನಿನ್ನೆಯು ಇಂದಾಗಿ, ಇಂದು ನಾಳೆಯ ಬೆಳಕಲ್ಲಿ ಮುಳುಗುವ ಪರಿ ಇಲ್ಲಿಯ ಲೇಖನಗಳ ವಿನ್ಯಾಸವಾಗಿದೆ.

ಈ ಪುಸ್ತಕವು ಪ್ರಕಟಗೊಳ್ಳಲು ಕಾರಣರಾದ ಎಲ್ಲರನ್ನು ಈ ಹೊತ್ತು ನೆನಪಿಸಿಕೊಳ್ಳುವುದು ಸಂತೋಷದ ಸಂಗತಿ. ಮೊದಲಿಗೆ ಇಂತಹ ಮಹತ್ವದ ಪುಸ್ತಕವನ್ನು ಪ್ರಾಧಿಕಾರದ ಮೂಲಕ ಪ್ರಕಟಗೊಳ್ಳಲು ಕಾರಣಕರ್ತರಾದ ಡಾ. ನಿ. ಮುರಾರಿ ಬಲ್ಲಾಳ ಅವರಿಗೂ ಮುಖಪುಟ ವಿನ್ಯಾಸಕರಿಗೂ ಕೃತಜ್ಞತೆಗಳು. ಪ್ರಾಧಿಕಾರದ ಸದಸ್ಯ ಮಿತ್ರರನ್ನೂ ಅಂದವಾಗಿ ಮುದ್ರಿಸಿದ ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್‌ನ ಮಾಲೀಕರನ್ನೂ ನೆನೆಯುವುದು ಸಂತೋಷದ ಕೆಲಸ.

# ಲೇಖಕನ ಮಾತು

**ಕಳೆದ ಕೆಲವು ವರ್ಷಗಳಲ್ಲಿ** ನಾನು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಬರಹಗಳ ಸಂಕಲನ ಈ ಕೃತಿ. ಈ ವಿಶ್ವದ ಸಹಜ ವೈವಿಧ್ಯತೆಯನ್ನು ಹತ್ತಿಕ್ಕಿ ಎಲ್ಲವನ್ನೂ ಏಕಾಕೃತಿಗೆ ಇಳಿಸಲು ತವಕಿಸುವ ಮಾರುಕಟ್ಟೆ ಪ್ರೇರಿತ ಜಾಗತೀಕರಣ, ಮತ್ತು ವಿಭಿನ್ನ ಧಾರ್ಮಿಕ ನಂಬಿಕೆಗಳನ್ನು ಹೊಸಕಿಹಾಕುವ ಮತೀಯ ಮೂಲಭೂತವಾದ ಇವೆರಡೂ ಜಗತ್ತಿನಾದ್ಯಂತ ಅಮಾನವೀಯ ಸಂಸ್ಕೃತಿಯನ್ನು ಹರಡುತ್ತಾ ಎದೆನಡುಗಿಸುವ ಹಿಂಸೆ-ಯುದ್ಧಗಳಿಗೆ ಕಾರಣವಾಗುತ್ತಿವೆ. ತಮ್ಮ ಮೂಲ ಸ್ವರೂಪದಲ್ಲಿ ಬಿಡುಗಡೆಯ ಆಶಯ ಹೊಂದಿರುವ ಧರ್ಮ ಹಾಗೂ ವಿಜ್ಞಾನಗಳೂ ಹಿಂಸೆ-ದಬ್ಬಾಳಿಕೆಗಳ ಈ ಏಕರೂಪೀ ಸಂಸ್ಕೃತಿಯ ಪೋಷಣೆಗೆ ಸಹಾಯಕವಾಗಿ ನಿಲ್ಲುತ್ತಿರುವುದು ಈ ಕಾಲಧರ್ಮದ ವಿಶೇಷವೋ ಏನೋ. ಇದರ ಪ್ರಭಾವದಿಂದಾಗಿಯೇ ನಮ್ಮೆಲ್ಲರ ಮಾತು, ಮತಿ, ಕೃತಿ - ಎಲ್ಲವೂ ಸರ್ವವ್ಯಾಪಿಯಾಗಿ ಹಿಂಸಗೆ ಮುಖ ಮಾಡಿವೆ, ಹಿಂಸೆಯನ್ನು ಆರಾಧಿಸುತ್ತಿವೆ.

ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ನಾನು ತೀವ್ರವಾಗಿ ಹಚ್ಚಿಕೊಂಡ ಕಾಳಜಿಗಳಾದ ಅಧ್ಯಾತ್ಮ, ಪರಿಸರ, ಅರ್ಥನೀತಿ, ಶಿಕ್ಷಣ, ಸಾಹಿತ್ಯ, ಭಾಷೆ, ಹಿಂಸೆಯ ವಿಕಟವಿಲಾಸ, ಸೌಹಾರ್ದತೆ ಮುಂತಾದ ವಿಭಿನ್ನ ವಿಷಯಗಳ ಮೇಲೆ ಇಲ್ಲಿನ ಬರಹಗಳು ಚಾಚಿಕೊಳ್ಳುತ್ತವೆ. ಈ ಎಲ್ಲ ಬಿಡಿಬಿಡಿ ಲೇಖನಗಳ ಅಂತಃಚೇತನವೊಂದೇ - ಜೀವಸಂವಾದೀ ಮೌಲ್ಯಗಳಾದ ಪ್ರೀತಿ, ಪರಸ್ಪರ ಸಹಕಾರ, ಸಮರಸದ ಬಾಳ್ವೆಯ ಹುಡುಕಾಟ. ಹಾಗಾಗಿಯೇ ಈ ಎಲ್ಲ ಬರಹಗಳ ಕೇಂದ್ರಬಿಂದು-ಗಾಂಧಿ. ಮಾನವ ಜನಾಂಗದ ಉಳಿವಿನ ಅತ್ಯಂತಿಕ ನೆಲೆಯ ಶೋಧಕ್ಕಾಗಿ, ಮತ್ತೆ ಮತ್ತೆ ಇಲ್ಲಿನ ವಿಚಾರಗಳು ಗಾಂಧಿಯತ್ತ ಹೊರಳಿಕೊಳ್ಳುತ್ತವೆ. ಹಿಂಸೆಯೇ ವಿಜೃಂಭಿಸುತ್ತಿರುವ ಇಂದಿನ ಸನ್ನಿವೇಶದಲ್ಲಿ, ಇದು ಕೊಂಚ ಹಾಸ್ಯಾಸ್ಪದ ಆದರ್ಶವಾಗಿ ಕಾಣಬಹುದು. ಆದರೆ, ಸತ್ಯ ನುಡಿಯುವವರೇ ಹಾಸ್ಯಾಸ್ಪದರಾಗಿ ಕಾಣುವ ವಿಪರೀತ ಯುಗದಲ್ಲಿರುವ ನಮಗೆ ಈ ಮನೋಧರ್ಮ ಸಹಜವೆಂಬ ಅರಿವಿದ್ದರೆ ಸಾಕು.

ಈ ಬರಹಗಳನ್ನು ಪುಸ್ತಕರೂಪವಾಗಿ ಪ್ರಕಟಮಾಡಲು ಕೈಗೆತ್ತಿಕೊಂಡ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲ ಸದಸ್ಯರಿಗೆ, ಪ್ರಸ್ತಾವನೆಯನ್ನು ಬರೆದ ಪ್ರೊ. ಮಲ್ಲೇಪುರಮ್ ಜಿ. ವೆಂಕಟೇಶ್‌ರವರಿಗೆ, ಚೊಕ್ಕ ಹಾಗೂ ಸುಂದರ ವಿನ್ಯಾಸದೊಂದಿಗೆ "ಟೈಪ್ ಸೆಟ್" ಮಾಡಿದ

ಹೊನ್ನಪದ್ಮಾ ಪ್ರೆಸ್‌ನ ಶ್ರೀ ಪ್ರಶಾಂತ್ ಶೆಟ್ಟಿಯವರಿಗೆ, ಮತ್ತು ಈ ಲೇಖನಗಳನ್ನು ಪ್ರಕಟಿಸಿದ "ಮಾತುಕತೆ", "ಲಂಕೇಶ್ ಪತ್ರಿಕೆ", "ಸುಧಾ", "ತರಂಗ", "ಉದಯವಾಣಿ", "ಪ್ರಜಾವಾಣಿ", "ವಿಜಯಕರ್ನಾಟಕ", "ಜನವಾಹಿನಿ", "ಹೊಸದಿಗಂತ" ಮುಂತಾದ ಪತ್ರಿಕೆಗಳಿಗೆ, ಪ್ರಬಂಧ ಮಂಡನೆಗೆ ಆಹ್ವಾನಿಸಿದ ವಿವಿಧ ವಿಶ್ವವಿದ್ಯಾಲಯಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಮತ್ತು ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂಘಟನೆಗಳಿಗೆ ನಾನು ಕೃತಜ್ಞನಾಗಿದ್ದೇನೆ.

ಸೌರ ಯುಗಾದಿ
ಏಪ್ರಿಲ್ ೧೪, ೨೦೦೪,

ಡಾ. ನಿ. ಮುರಾರಿ ಬಲ್ಲಾಳ

# ಪರಿವಿಡಿ

*ಅಕ್ಷರ ಸೂರ್ಯನಿಗೆ ನಮನ /V*
*ಲೇಖಕನ ಮಾತು /IX*

ಶಿಕ್ಷಣ ಮತ್ತು ಹಿಂಸೆ :
ಅಮ್ಮ ಪೋಲೀಸಾದರೆ ಮನೆಯಲ್ಲಿ ಗುಮ್ಮನ ಭಯ/೧
ಈ ಭೂಮಿ ಯಾರಿಗೂ ಸೇರಿದ್ದಲ್ಲ/೬
ಧರ್ಮೋರಕ್ಷತಿ ರಕ್ಷಿತ : ನುಡಿಯನ್ನು ಪುಡಿಗುಟ್ಟಿದ ಗುಜರಾತ್/೧೫
ಜಾಗತೀಕರಣ : ಪರ್ಯಾಯ ಸಾಧ್ಯತೆಗಳು/೨೧
ಜಾಗತೀಕರಣ ಹಾಗೂ ಕನ್ನಡ/೪೧
ಶಿಕ್ಷಣದಲ್ಲಿ ಜ್ಞಾನಪರಂಪರೆಯ ಹಿನ್ನಡೆ/೪೬
ಸೌಹಾರ್ದತೆ-ಭಾವೈಕ್ಯತೆ : ಒಂದು ವಿವೇಚನೆ/೫೬
ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು/೬೭
ನದಿ ಜೋಡಣೆ : ಅಸಂಗತ, ಅವೈಜ್ಞಾನಿಕ/೮೧
ಶತಮಾನದ ಸಂತ : ಗಾಂಧಿ/೯೫
ಮತಾಂತರದ ಪ್ರಶ್ನೆ/೧೦೪
ಮತ, ಮತ ನಿರಪೇಕ್ಷತೆ/೧೧೦
ಹಿಂಸೆಯ ಸ್ವರೂಪಗಳು : ಬಲಿ - ಬಲಿದಾನ/೧೧೩
ತೊಗಾಡಿಯಾ : ಹಿಂದೂ ಧರ್ಮದ ವಿಕಾರ/೧೧೮
ಹಿಂಸೆಯ ಸ್ವರೂಪಗಳು : ತಾಲಿಬಾನ್ ಕೃತಿಯನ್ನು ಮೀರಿಸಿದ ೨೦೦೨ರ
ಗುಜರಾತ್ ವಿಕೃತಿ/೧೨೩
ಭೂಮಿ ಬೇಜಾರು ಬರಿಸುವುದಿಲ್ಲ/೧೨೭
ಕುರುಡರ ರಾಜ್ಯದಲ್ಲಿ ಕುರುಡನೇ ನೇತಾರ/೧೩೩

ಧರ್ಮದ ಹೆಸರಿನಲ್ಲಿ ಅಧಾರ್ಮಿಕ ಕೋಮುವಾದ/೧೩೮
ಬುಡಕಟ್ಟು, ಅಭಿವೃದ್ಧಿ ಪರಿಕಲ್ಪನೆ ಮತ್ತು ಮೀಮಾಂಸೆ/೧೪೨
ಮತಾತೀತ ಆಧ್ಯಾತ್ಮಿಕತೆ ಮತ್ತು ಧರ್ಮದ ವಿಕೇಂದ್ರೀಕರಣ : ಇಂದಿನ
ಮೂಲಭೂತ ಆವಶ್ಯಕತೆ/೧೫೦
ಛಿದ್ರಗೊಳ್ಳುತ್ತಿರುವ ಭಾಷಾ ಸಮುದಾಯ/೧೬೩
ಕಾಲೇಜ್‌ನಲ್ಲಿ ಶಿಕ್ಷಕನ ಪಾತ್ರ :/೧೭೦
ಕುದುರೆ ಮುಖ ಗಣಿಗಾರಿಕೆ : ಕಾಲ್ಪನಿಕ ಕಥನ ಮತ್ತು ನಿಜ ಸ್ಥಿತಿ/೧೭೫
ಜಾಗತೀಕರಣಕ್ಕೆ ಗಾಂಧಿಯ ಸವಾಲು : ಬೌದ್ಧಿಕತೆಯ ಆದಿಮ ಪ್ರಳಯ/೧೮೫
ಪ್ಲಾಸ್ಟಿಕ್ ಕಶ್ಮಲ : ಎಚ್ಚರ ಅಗತ್ಯ/೧೯೪
ಸೌರಯುಗದ ಹೊಸಬೆಳಕಿನತ್ತ/೨೦೧
ಅವಿಭಜಿತ ದಕ್ಷಿಣ ಕನ್ನಡದ ವೈಶಿಷ್ಟ್ಯ: ಇನ್ನೊಂದು ಮುಖ/೨೦೬
೨೦ನೇ ಶತಮಾನಕ್ಕೆ ಸಾಕ್ಷಿಯಾಗಿ ಬದುಕಿದ ಶಿವರಾಮ ಕಾರಂತ/೨೧೫
ಸ್ವತಂತ್ರ ಭಾರತ ಕಂಡ ಧೀಮಂತ ಜನಪರ ಮುಖ್ಯಮಂತ್ರಿ :
ಶ್ರೀ ದೇವರಾಜ್ ಅರಸು/೨೨೩
ಡಿ. ಆರ್. ಒಳಗಿದ್ದ ಅನುಭಾವಿ/೨೨೭
ಶಿವರಾಮ ಕಾರಂತ/೨೩೦
ಅಂದು ಉಪ್ಪು, ಇಂದು ಬೀಜ : ನವ ಸ್ವಾತಂತ್ರ್ಯ ಚಳವಳಿಗೆ ನಾಂದಿ/೨೩೩
ಕನ್ನಡಿಗಳು, ಕಿಟಕಿಗಳು / ೨೩೮
ಪರಿಸರದ ಪ್ರಶ್ನೆ : ಮಾನ್ಯ ಮಂತ್ರಿಯವರ ಜೊತೆ ಮುಕ್ತ ಸಂವಾದ /೨೪೧
ಅಶ್ವತ್ಥಮರ ಉರುಳಿಸುವ ಮುನ್ನ/೨೪೭
ಕಾಡನ್ನು ಸೀಳಿ ಮುನ್ನುಗ್ಗಿದ ಪೈಪ್ ಲೈನ್/೨೫೧
ಕನ್ನಡಿಗಳು, ಕಿಟಕಿಗಳು / ೨೫೭

# ಶಿಕ್ಷಣ ಮತ್ತು ಹಿಂಸೆ: ಅಮ್ಮ ಪೋಲೀಸಾದರೆ, ಮನೆಯಲ್ಲಿ ಗುಮ್ಮನ ಭಯ

ಬೆಳೆಯುತ್ತಿರುವ ಒಂದು ಮಗುವಿಗೆ ಶಿಕ್ಷಣದ ಜತೆ, ತಂತಾನೇ ಅರಳಿಕೊಳ್ಳಲು ಬೇಕಾದ ಸ್ವಾತಂತ್ರ್ಯ, ಸಾಕಷ್ಟು ಬಿಡುವು, ನಿರ್ಭಯತೆಯ ವಾತಾವರಣವಿರಬೇಕು. ತನ್ನದೇ ಆದ ಖಾಸಗೀ ಮಾನಸಿಕ ಒಳವಲಯ ವಿರಬೇಕು. ಶಿಕ್ಷಣದ ಜಂಜಾಟದ ನಡುವಿನ ಬಿಡುವಿನಲ್ಲಾದರೂ ಮಗು ಮನೆಯಲ್ಲಿ ತನ್ನದೇ ಆಯ್ದ ಮೂಲೆಗಟ್ಟಿನಲ್ಲಿ ಕೂತು ತನ್ನಷ್ಟಕ್ಕೇ ತಾನು ಕನಸುಕಾಣುವ ಅವಕಾಶಗಳಿರಬೇಕು. ಆ ಭಾವಪ್ರಪಂಚದೊಳಗೆ ಹೆತ್ತವರಿಗೂ ಪ್ರವೇಶವಿರಬಾರದು. ಇಂಥ ಗುಟ್ಟಿನ ಒಳಲೋಕದಲ್ಲಿ ಮಗುವಿನ ಮನಸ್ಸು ವಿಸ್ತಾರಗೊಳ್ಳುತ್ತದೆ; ಇಂದ್ರಿಯಗಳು ಉಲ್ಲಾಸದಿಂದ ಅರಳಿಕೊಳ್ಳುತ್ತವೆ; ಕಲ್ಪನಾಲೋಕ ಬಿಚ್ಚಿಕೊಳ್ಳುತ್ತದೆ; ಬದುಕಿನ ಲವಲವಿಕೆಯು ಇಮ್ಮಡಿಗೊಳ್ಳುತ್ತದೆ; ಅರಿಯುವ ಶಕ್ತಿ ಗರಿಗೆದರುತ್ತದೆ.

**ವಿದ್ಯೆ - ದಕ್ಷತೆ - ಒಳ್ಳೆಯತನ**

ಒಂದು ಮಗು ಒಳ್ಳೆಯತನದಲ್ಲಿ ಅರಳಿಕೊಳ್ಳುವುದು ಶಿಕ್ಷಣದ ಉದ್ದೇಶವಾಗಿರಬೇಕೇ ಹೊರತು ಕೇವಲ ದಕ್ಷತೆ, ನಿಪುಣತೆಯಲ್ಲ. ದಕ್ಷತೆಯು ಭಯೋತ್ಪಾದಕನಲ್ಲೂ ಇದೆ. ಅತ್ಯಂತ ನಿಪುಣತೆಯಿಂದ ಕೆಲಸ ನಿರ್ವಹಿಸದಿರುತ್ತಿದ್ದರೆ, ಅಮೇರಿಕಾದ ವಿಶ್ವವ್ಯಾಪಾರ ಕೇಂದ್ರವನ್ನು ಅಷ್ಟೊಂದು ಸಲೀಸಾಗಿ ಇಂದು ಪುಡಿಗೈಯ್ಯಲು ಸಾಧ್ಯವಿರುತ್ತಿರಲಿಲ್ಲ. ಎಲ್ಲ ವಿನಾಶಕಾರೀ ಕಾರ್ಯಗಳೂ ಅತ್ಯಂತ ದಕ್ಷತೆ - ಚಾಕಚಕ್ಯತೆಗಳಿಂದಲೇ

---

ಉದಯವಾಣಿ (ದೈನಿಕ), ಮಣಿಪಾಲ, ನವೆಂಬರ್ ೧೪, ೨೦೦೧

ನಡೆಯಬೇಕಾಗುತ್ತದೆ. ವಿಜ್ಞಾನ, ತಂತ್ರಜ್ಞಾನ, ಕಂಪ್ಯೂಟರ್ ಜ್ಞಾನ, ಭಯೋತ್ಪಾದಕತೆ ಅಥವಾ ಮಿಲಿಟರಿ ಕಾರ್ಯಾಚರಣೆ - ಹೀಗೆ ಯಾವ ಕ್ಷೇತ್ರದಲ್ಲೇ ಆಗಲಿ, ನಿಪುಣತೆಯನ್ನು ಗಳಿಸುವುದು ಬಹು ಪ್ರಯಾಸದ ಸಂಗತಿಯೇನೂ ಅಲ್ಲ. ನಾವು ಸಾಧಿಸಬೇಕಾದ ಗುರಿಯ ಕಡೆ ಸಂಪೂರ್ಣ ಲಕ್ಷ್ಯವಿರಬೇಕು, ಅಷ್ಟೆ. ಆದರೆ, ಈ ವಿಷಯ ನಿಪುಣತೆ, ಮಗುವಿನ ಮನಸ್ಸನ್ನು ಅರಳಿಸಲು ಅಷ್ಟೇನೂ ಸಹಾಯ ಮಾಡದು.

ಶಿಕ್ಷಣದ ಉದ್ದೇಶ ಕೇವಲ ವಿಷಯ ತಜ್ಞತೆಗಷ್ಟೇ ಸೀಮಿತವಾದರೆ, ಅನೇಕ ಬಾರಿ ಅದು ಜೀವನದ ಸೌಂದರ್ಯವನ್ನೇ ಕಡೆಗಣಿಸಿ ಬಿಡುವ ಅಪಾಯವಿದೆ. ವಿಜ್ಞಾನ, ತಂತ್ರಜ್ಞಾನ, 'ಮ್ಯಾನೇಜ್‌ಮೆಂಟ್' ವೈದ್ಯಕೀಯ ಮೊದಲಾದ ವಿಷಯ ತಜ್ಞರನ್ನು ಸೃಷ್ಟಿಸುವ ಜೊತೆಜೊತೆಗೇ ಅವರಿಗೆ ಈ ಜ್ಞಾನಶಾಖೆಗಳ ಮಿತಿಗಳನ್ನೂ ತಿಳಿಸಿಕೊಡದಿದ್ದರೆ, ನೇರ ರೇಖೆಯ ಇಂಥ ಶಿಕ್ಷಣವು ದುರಾಸೆ, ದುರಾಕಾಂಕ್ಷೆಗಳ ಹೃದಯಹೀನರನ್ನಷ್ಟೇ ಸೃಷ್ಟಿಸುತ್ತಿರುತ್ತದೆ. ಆಗ, ಇಡಿಯ ಜಗತ್ತು ಕೊಳ್ಳೆ ಹೊಡೆಯುವ ಮಾರುಕಟ್ಟೆಯಾಗಿ ರೂಪುಗೊಳ್ಳುತ್ತದೆ. ಇಂದು ನಾವು ಅತ್ಯಂತ ಪ್ರತಿಭಾವಂತ ತಜ್ಞರನೇಕರಲ್ಲಿ, ಸ್ವಾರ್ಥ, ಸಣ್ಣತನಗಳನ್ನು, ಪ್ರೀತಿ-ವಿಶ್ವಾಸ- ಸಹಕಾರ ಭಾವಗಳ ಕೊರತೆಯನ್ನು ಕಾಣುತ್ತೇವೆ. ತಾಯಿ-ತಂದೆಯರೇ ಹಲವೊಂದು ಬಾರಿ, ಸಮಾಜದಲ್ಲಿ ತಮ್ಮ ಪ್ರತಿಷ್ಠೆ-ಭದ್ರತೆ ಮೆರೆಸಲಿಕ್ಕಾಗಿ ಮಗುವಿಗೆ ಅತ್ಯಂತ ದಕ್ಷ ಹಾಗೂ ಆಧುನಿಕ ಉನ್ನತ ಶಿಕ್ಷಣ ಒದಗಿಸುವ ಆತುರದಲ್ಲಿ, ಆ ಮಗುವಿನ ಕನಸುಗಾರಿಕೆಯ ಲೋಕವನ್ನೇ ಛಿದ್ರಗೊಳಿಸಿ ಬಿಡುತ್ತಾರೆ. ಹಾಗಾಗಿಯೇ, ಮುಂದೆ ಆ ಮಕ್ಕಳು ಸ್ವಾರ್ಥಿಗಳಾಗಿ ಸಂವೇದನಾ ಶೂನ್ಯರಾಗಿ ಶುಷ್ಕ ರೋಬೋಟೋಗಳಂತಾಗಿ ತಮ್ಮೆಲ್ಲ ಸಂಬಂಧಗಳ ಪಾವಿತ್ರ್ಯತೆಯನ್ನೇ ಅಗೌರಿಸುವುದನ್ನೂ; ತಂದೆತಾಯಂದಿರು ಬದುಕಿನ ಕೊನೆಕಾಲದಲ್ಲಿ ಅನಾಥರಂತೆ ಮಾನಸಿಕ ಅಭದ್ರತೆಯಲ್ಲಿ ಬಳಲುವುದನ್ನೂ ಕಾಣುತ್ತೇವೆ. ಹೀಗಾಗದಂತೆ ಶಿಕ್ಷಣವು, ನಯ ನಿಪುಣತೆಯ ಜತೆ ಮಗುವಿನ ಮನಸ್ಸನ್ನು ಜೀವ ಸಂವಾದಿಯಾಗಿ ಕಟ್ಟಲು ಪೂರಕವಾದ ಮಾನವಿಕ ತಿಳುವಳಿಕೆ, ಕಲೆ, ನೈತಿಕತೆಗಳಿಗೂ ಗಮನಕೊಡುವುದು ಅಗತ್ಯ.

**ಸಂಬಂಧಗಳು ಪವಿತ್ರ**

ಈ ಬದುಕೆಂಬುದು ಸಂಬಂಧಗಳ ಸರಮಾಲೆ. ನಮ್ಮ ಸುತ್ತಲಿರುವ ಎಲ್ಲ ಸಂಗತಿಗಳೂ - ಪಶು, ಪಕ್ಷಿ, ಮನುಷ್ಯ; ಸಮಸ್ತ ಜೀವ ಸಂಕುಲ; ಈ ಭೂಮಿ, ನೀರು, ಗಾಳಿ, ಬೆಳಕು ಇವೆಲ್ಲವೂ - ನಮ್ಮನ್ನು ಪೊರೆಯುವ ಬಂಧುಗಳು. ನಮ್ಮ ಸುತ್ತ ಪರಸ್ಪರ ಹೆಣೆದುಕೊಂಡಿರುವ ಈ ಅಸಂಖ್ಯ ಸಂಗತಿಗಳ ಸರಮಾಲೆಯಲ್ಲಿ ಮಾನವನಿಗೆ ಒಂದು ನಿರ್ದಿಷ್ಟಸ್ಥಾನ ಮಾತ್ರ ವಿನಾ, ಪ್ರತ್ಯೇಕ ಅಸ್ತಿತ್ವವಿಲ್ಲ. ಹಾಗಾಗಿ ಸಂಬಂಧಗಳು ಪವಿತ್ರ. ಬದುಕನ್ನು ಹಸನಾಗಿಸುವ, ಲಾಲನೆ-ಪಾಲನೆ ಮಾಡುವ ಎಲ್ಲ ಸಂಗತಿಗಳ ಜತೆ ಪ್ರೀತಿ, ಪೋಷಣೆ, ಪರಸ್ಪರ ಸಹಕಾರ ಭಾವಗಳಿಂದ ಹೊಂದಿಕೊಂಡು ಬಾಳಲು ಕಲಿಸುವುದೇ ವಿದ್ಯೆಯ ಪ್ರಮುಖ ಉದ್ದೇಶ. ಶಿಕ್ಷಣವು ನಿಪುಣತೆ-ವಿದ್ವತ್ತುಗಳ ಜೊತೆ, ಮಕ್ಕಳಿಗೆ ಸಂಬಂಧಗಳ ಮರ್ಮತಿಳಿಸಿ, ಹೊಂದಿಕೆಯ ಬಾಳಿಗೆ ಪೋಷಕವಾಗಬೇಕು; ಸಂಬಂಧಗಳನ್ನು ಬೆಸೆಯಬೇಕು. ದಕ್ಷ ವಿದ್ಯೆಗೆ, ವಿನಯ-ಸಂಯಮಗಳ ನೈತಿಕ ಕಡಿವಾಣ ತೊಡಿಸಿದಾಗ ಮಾತ್ರ ಸಾಮಾಜಿಕ ಬದುಕು ಭದ್ರಗೊಂಡೀತು. ನೈತಿಕ ಚೌಕಟ್ಟಿನೊಳಗೆ ಎಚ್ಚರದಿಂದ ಬಾಳುವುದೇ ಜೀವನದ

ಸಹಜ ಸೌಂದರ್ಯ ಎಂಬುದನ್ನು ತಿಳಿಸಿ ಕೊಡುವುದೇ ನಿಜವಾದ ಶಿಕ್ಷಣದ ಗುರಿ. ಬದುಕುವ ಕಲೆಯನ್ನು ತಮ್ಮ ದೈನಂದಿನ ಕಾಯಕದ ಬಾಳಿನ ಅನುಭವದಿಂದ, ಪ್ರಾಣಿಗಳ ಬದುಕಿನಿಂದ, ನಿಸರ್ಗದಿಂದ ಅನುಭವ ರೂಪದಲ್ಲೇ ಮಕ್ಕಳು ಪಡೆಯುತ್ತಿರುತ್ತಾರೆ. ಆದ್ದರಿಂದ ಶಿಕ್ಷಣವು, ನೋಡುವ, ಕೇಳುವ, ಅನುಭವಿಸುವ ಕುತೂಹಲವನ್ನು ಮಕ್ಕಳಲ್ಲಿ ಉದ್ದೀಪಿಸಿದರೆ ಸಾಕು; ಬದಲಿಗೆ, ಮಗುವಿನ ಸಹಜ ಆಸಕ್ತಿಗಳನ್ನೇ ಮುರುಟಿಸಿ, ಕೇವಲ ವಿದ್ವತ್ತಿಗಷ್ಟೇ ಶಿಕ್ಷಣವನ್ನು ಸೀಮಿತಗೊಳಿಸಿ ಬದುಕನ್ನು ನೀರಸಗೊಳಿಸುವುದಲ್ಲ. ನೈತಿಕ ವಿವೇಕವಿಲ್ಲದ ಒಬ್ಬ ಶ್ರೇಷ್ಠ ವಿಜ್ಞಾನಿ ವಿನಾಶಕಾರೀ ಸಂಶೋಧನೆ ನಡೆಸಿ, ಭಯೋತ್ಪಾದಕರಿಗೆ ಸಹಾಯ ಮಾಡಬಲ್ಲ ಅಪಾಯಕಾರಿಯಾಗುವ ಸಂಭವವೂ ಇದೆ. ಇಂದು ನಮ್ಮ ನಡುವೆ ಇರುವ ಅನೇಕ ಮಂದಿ ವಿಷಯ ತಜ್ಞರ, ವೃತ್ತಿ ನಿಪುಣರ, ವಿಜ್ಞಾನಿಗಳ ಸಾಮಾಜಿಕ ಅನುಕಂಪ-ಕಾಳಜಿ ರಹಿತ ವಿಷಯ ವಿಜೃಂಭಣೆ ಇದನ್ನು ಪುಷ್ಟೀಕರಿಸುತ್ತದೆ. ಉದಾಹರಣೆಗೆ, ನಮ್ಮ ದೇಶದಲ್ಲಿ ಕಳೆದ ೫೦ ವರುಷಗಳಲ್ಲಿ 'ಭಾರತ ರತ್ನ' ಪಡೆದ ವಿಜ್ಞಾನಿಗಳಲ್ಲಿ ಶೇಕಡಾ ೭೦ಕ್ಕೂ ಹೆಚ್ಚಿನವರು ಮಿಲಿಟರಿ ತಂತ್ರಜ್ಞಾನದಲ್ಲಿ ಸಂಶೋಧನೆ ನಡೆಸಿದವರೇ ವಿನಾ ಜನಜೀವನಕ್ಕೆ ಪೋಷಕವಾದ ಕೃಷಿ, ಕೈಗಾರಿಕಾ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿದವರಲ್ಲ. ಇದು ನಮ್ಮ ಮುಂದಿರುವ ಆದರ್ಶವೇನೆಂಬುದನ್ನು ಸೂಚಿಸುತ್ತದೆ.

**ಛಿದ್ರಗೊಂಡ ಕನಸಿನ ಲೋಕ**

ಪೈಪೋಟಿ, ಹೋಲಿಕೆ, ದಕ್ಷತೆಗಳು ಕೈಗಾರಿಕಾ ಸಮಾಜ ಹುಟ್ಟುಹಾಕಿದ ಇಂದಿನ ಶಿಕ್ಷಣದ ಬೀಜಮಂತ್ರಗಳು. ಈ ಬೀಜಮಂತ್ರ, ಮಕ್ಕಳಲ್ಲಿ ಕೇವಲ ವಿಷಯ ಪರಿಣತಿಯ ಹೊಟ್ಟೆ ಬಾಕತನವನ್ನಷ್ಟೆ ಪ್ರಚೋದಿಸುತ್ತಿದೆಯೇ ವಿನಾ ಮಾನವೀಯತೆಯನ್ನಲ್ಲ. ಪೈಪೋಟಿ, ನಿಪುಣತೆಗಳ ರಾವು ನಮ್ಮ ಸುತ್ತ ಸ್ವಾರ್ಥ-ಮದ ತುಂಬಿದ ಪಾಶವೀ ಸಮಾಜವನ್ನು ಸೃಷ್ಟಿಸುತ್ತಿದೆ. ಮಗುವಿನ ಒಳಮನಸ್ಸಿನ ಎಲ್ಲ ವಲಯಗಳೂ ಈ ಪೈಪೋಟೀ ಶಿಕ್ಷಣ ಕ್ರಮದಲ್ಲಿ ಬಟ್ಟ ಬಯಲಾಗಿದೆ. ಕನಸುಗಾರಿಕೆಯ ಗುಟ್ಟಿನ ಅಂತರ್ಜಗತ್ತೇ ಮಾಯವಾಗಿದೆ. ಬಾಲ್ಯದ ಮುಗ್ಧತೆಯಲ್ಲಿ ಬೆರಗಿನಿಂದ ನೋಡುತ್ತಾ, ಅನುಭವಿಸುತ್ತಾ ಹೊಸಹೊಸತಾಗಿ ಈ ಜಗತ್ತನ್ನು ವಿಸ್ಮಯದಿಂದ ತಾವೇ ಆವಿಷ್ಕರಿಸಿಕೊಳ್ಳುತ್ತಾ ಅರಿಯುವ ರೋಮಾಂಚನದ ಅನುಭವವೇ ಭಗ್ನಗೊಂಡಿದೆ. ಹಾಗಾಗಿಯೇ ಪ್ರಚಲಿತ ಶಿಕ್ಷಣವು ಒಳ್ಳೆಯ ಮನಸ್ಸುಗಳನ್ನು ಕಟ್ಟಲಾರದು, ಸುಂದರ ಜಗತ್ತನ್ನು ಹೆಣೆಯಲಾರದು, ಲಾಲನೆ-ಪಾಲನೆ-ಪೋಷಣೆಗಳ ಮೌಲ್ಯಗಳನ್ನು ಬದುಕಿಗೆ ಬೆಸೆಯಲಾರದು. ಕೈಗಾರಿಕಾ ಸಮಾಜ ಶಿಕ್ಷಣದಿಂದ ಬಯಸುವುದು ಕೂಡ ಇದನ್ನೆ. ಕಲ್ಪನಾ ಸಾಮರ್ಥ್ಯವಿರುವ ಮಕ್ಕಳು ಕೈಗಾರಿಕಾ ಸಮಾಜ ಹೇಳಿದ್ದನ್ನೆಲ್ಲಾ ಹಾಗಾಗೇ ಒಪ್ಪಿಕೊಂಡು ಹಾಡಿ ಹೊಗಳುವ ಕುರಿಮಂದೆಯಲ್ಲಿರುವ ಕುರಿಯಾಗಲು ತಯಾರಿರುವುದಿಲ್ಲ. ಇವರು ಸ್ವಂತವಾಗಿ ಯೋಚಿಸಿಯಾರು. ಸ್ವಯಂ ಯೋಚಿಸುವ ಇಂಥ ಮಕ್ಕಳು ಕೈಗಾರಿಕಾ ಸಮಾಜಕ್ಕೆ ಅಪಾಯಕಾರಿ. ಇಂಥ ಸ್ವಂತಿಕೆಯಿರುವವರನ್ನು ಕೈಗಾರಿಕಾ ಸಮಾಜ ಅನುಮಾನದಿಂದ ನೋಡುತ್ತಿರುತ್ತದೆ.

ವಿಶಾಲ ಬಯಲಲ್ಲಿ ಇಬ್ಬನಿ ತುಂಬಿದ ಹುಲ್ಲಿನ ತಂಪಿನ ಮೇಲೆ ನಡೆಯುತ್ತಾ, ಗುನುಗುನಿಸುತ್ತಾ, ನದಿ-ಕೊಳಗಳಲ್ಲಿ ಈಜಾಡುತ್ತಾ, ಆಕಾಶ, ಸೂರ್ಯ, ಚಂದ್ರ, ನಕ್ಷತ್ರಗಳನ್ನು

ವೀಕ್ಷಿಸುತ್ತಾ, ಪಶುಪಕ್ಷಿಗಳ ಚಲನವಲನಗಳನ್ನು ಗಮನಿಸುತ್ತಾ ಮುದದಿಂದ ಬೆಳೆಯುವ ಅವಕಾಶವೇ ಇಲ್ಲದ ಈ ಪೈಪೋಟೀ ಶಿಕ್ಷಣ ನಿಜಕ್ಕೂ ಮಕ್ಕಳ ಮೇಲಿನ ದೌರ್ಜನ್ಯವೆನ್ನದೆ ವಿಧಿಯಿಲ್ಲ. ಇಂಥ ಕ್ರೂರ ವ್ಯವಸ್ಥೆಯಲ್ಲಿ ಹೃದಯ ಸಂಪನ್ನಗೊಳ್ಳುವುದಾದರೂ ಹೇಗೆ ?

**ಅಮ್ಮನ ಪೋಲಿಸಿಂಗ್**

ಶಾಲೆ ಗೋಡೆಗಳ ನಡುವೆ, ದಾರಿಯಲ್ಲಿ ವಾಹನಗಳ ನಡುವೆ, ಮನೆಯಲ್ಲಿ ತಾಯಿ-ತಂದೆಯರ ಆತಂಕಪೂರಿತ ಕಣ್ಣುಗಳ ನಡುವೆ, ಮಗುವಿಗೆ ತನ್ನನ್ನು ತಾನು ಬಚ್ಚಿಟ್ಟುಕೊಂಡು ಸ್ವಂತಿಕೆಯ ಉಸಿರಾಡಲೂ ಏಕಾಂತದ ಸಮಯವಿಲ್ಲ. ಸಮಯ ದೊರೆತಲ್ಲಿ ಅದನ್ನು ತುಂಬಲು ಗದ್ದಲದ ಟಿ.ವಿ., ವೀಡಿಯೋ ಗೇಮ್ಸ್, ಕಂಪ್ಯೂಟರ್ ಮೊದಲಾದ ಮನೋರಂಜನಾ ಸರಕುಗಳಿವೆ. ಈ ಎಲ್ಲಾ ಒತ್ತಡಗಳ ನಡುವೆಯೂ, ಮಗು ಸ್ವಲ್ಪ ಬಿಡುವಿನ ಅವಕಾಶ ಕಂಡುಕೊಂಡರೂ, ಅಲ್ಲೂ ಅನೇಕ ಬಾರಿ ಕೆಲವು ತಾಯಂದಿರು ಮುಖ್ಯೋಪಾಧ್ಯಾಯಿನಿಯಂತೆ ಮಗುವಿನ ಎಲ್ಲ ಚಲನವಲನಗಳನ್ನೂ ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ; ಮಗುವಿನ ಗುಟ್ಟಿನ ಖಾಸಗೀ ವಲಯವನ್ನೂ ಪ್ರವೇಶಿಸಿ ಪೋಲೀಸಿಂಗ್ ಮಾಡುತ್ತಿರುತ್ತಾರೆ. ಮಗುವಿನ ಎಲ್ಲ ಚಟುವಟಿಕೆಗಳೂ, ಅದರ ಯೋಚನೆಗಳೂ ಕೂಡ, ತಾಯಂದಿರಿಗೆ ದಾಖಲಾಗಬೇಕು. ತನ್ನೆಲ್ಲಾ ಶಾಲಾ ಕೆಲಸ ಮುಗಿದು, ಸಿಕ್ಕಿದ ಸ್ವಲ್ಪ ಸಮಯದಲ್ಲಿ ಮಗು ಓದಲು ಒಂದು ಕತೆಪುಸ್ತಕ ಎತ್ತಿಕೊಂಡರೂ ಸಾಕು, ತಾಯಿ ತಕ್ಷಣ, 'ಏನು ಓದುತ್ತಿದ್ದಿಯಾ?', 'ಯಾವ ಪುಸ್ತಕ?', ಅದರಿಂದ ಏನು ಉಪಯೋಗ?', 'ಶಾಲೆಯ ಪುಸ್ತಕ ಓದು' ಎಂದೆಲ್ಲ ಗದರಿಸಿಯಾಳು. ಮಗು ಬಿಡುವಿನಲ್ಲಿ ಸುಮ್ಮನೆ ಕೂತಿದ್ದರೂ, 'ಏನು ಸುಮ್ಮನೇ ಕೂತಿದ್ದಿ?' 'ಏನು ಯೋಚನೆ ಮಾಡ್ತಾ ಇದ್ದಿ?' 'ಯಾಕೆ ನೀನು ಇವತ್ತು ಒಂಥರಾ ಇದ್ದಿ?'' ಎಂದೆಲ್ಲಾ ಗಾಬರಿಯಿಂದ ವಿಚಾರಣೆ ನಡೆಸಿಯಾಳು. ಸ್ವಂತ ಯೋಚಿಸುವ ಸ್ವಾತಂತ್ರ್ಯವೂ ಇಲ್ಲ ಮಗುವಿಗೆ. ತನ್ನ ಅಂಕೆಯಿಂದ ಮಗು ಎಲ್ಲಿ ತಪ್ಪಿಹೋದೀತೋ ಎಂಬ ಭಯ ತಾಯಿಗೆ. ತನ್ನ ಸ್ವಾರ್ಥ ಆಸೆ-ಕಳವಳಗಳನ್ನೆಲ್ಲಾ ಮಗುವಿನ ಮೇಲೆ ಹೇರಿ ಆ ಮಗುವಿನ ಗೊಂದಲವನ್ನು ಇನ್ನಷ್ಟು ಹೆಚ್ಚಿಸಿಯಾಳು. ಮಗು, ಇಂಥ ತಾಯಂದಿರ ಸ್ವಾರ್ಥ ಅಪೇಕ್ಷೆ, ಪ್ರತಿಷ್ಠೆಗಳನ್ನು ತುಂಬಿಕೊಡಲು ಯಂತ್ರದಂತೆ ದುಡಿಯುತ್ತಾ, ತನ್ನ ಕನಸಿನ ಲೋಕವನ್ನು ಸಂಪೂರ್ಣ ಛಿದ್ರಗೊಳಿಸಿಕೊಳ್ಳುತ್ತಾ, ಅಮ್ಮನನ್ನು ಸದಾ ಮೆಚ್ಚಿಸಲು ಪ್ರಯತ್ನಿಸುತ್ತಾ, ಮೆಚ್ಚಿಸಲು ತನ್ನಿಂದ ಸಾಧ್ಯವಾದೀತೇ ಎಂಬ ಆತಂಕದಿಂದ ಸದಾ ನರಳುತ್ತಾ ಬದುಕೀತು.

**ಪೈಪೋಟಿ- ಹೋಲಿಕೆಗೆ ಹಿಂಸೆ**

ಪೈಪೋಟಿ, ಹೋಲಿಕೆಗಳು ಹಿಂಸೆಗೆ ಮೂಲ. ಪೈಪೋಟಿ, ಹೋಲಿಕೆ, ಮೇಲಾಟಗಳನ್ನು ಸತತ ಪ್ರಚೋದಿಸುವ ಶಿಕ್ಷಣ ಹಿಂಸೆಯನ್ನಷ್ಟೇ ಪ್ರಚೋದಿಸೀತು. ಆರ್ಥಿಕ, ಸಾಮಾಜಿಕ ಪ್ರಭುತ್ವ-ಪ್ರತಿಷ್ಠೆಗಳು ಶಿಕ್ಷಣದ ಅಂತಿಮ ಗುರಿಯಾದಾಗ ಅಸಮಾನತೆ, ದಬ್ಬಾಳಿಕೆಗಳಷ್ಟೇ ಸಮಾಜದಲ್ಲಿ ನೆಲೆಗೊಂಡೀತು. ಇಂದಿನ ಶಿಕ್ಷಣ ಕ್ರಮದಲ್ಲೇ ಮಕ್ಕಳ ಮನಸ್ಸಿನೊಳಗೆ ಸೂಕ್ಷ್ಮವಾಗಿ ಹೊಕ್ಕು, ಮೊಳೆತು, ಬಲಿಯುವ ಈ ಸ್ವಾರ್ಥಪೂರಿತ ಹಿಂಸೆ, ಇಂದು ಇಡಿಯ ಆಧುನಿಕ ಸಮಾಜವನ್ನೇ ಆವರಿಸಿ ಬಿಟ್ಟಿದೆ. ಇದರ ಫಲವಾಗಿಯೇ ನಮ್ಮ ಮುಂದೆ ಚಾಚಿಕೊಂಡಿರುವ ಈ ಭೂಮಿ ಇಂದು

ಕಾಣುವಷ್ಟು ಹಿಂಸೆ-ಆಕ್ರಮಣಗಳನ್ನು ಹಿಂದೆಂದೂ ಕಂಡಿಲ್ಲ. ಈ ಪೈಪೋಟಿಯ ಬದುಕು, ಇಡಿಯ ಜಗತ್ತನ್ನೇ 'ಉಳ್ಳವರ' ಮತ್ತು 'ಇಲ್ಲದವರ' ಎರಡು ನಾಗರಿಕತೆಗಳನ್ನಾಗಿ ವಿಭಜಿಸಿ ಬಿಟ್ಟಿದೆ. ಅಮೇರಿಕಾ ಮತ್ತು ಬಿನ್ ಲಾಡನ್ ನಡುವಿನ ಸಂಘರ್ಷ, ಈ ಎರಡು ನಾಗರಿಕತೆಗಳ ಸಂಘರ್ಷದ ಪ್ರತೀಕವೂ ಆಗಿದೆ. ಈ ಹಿಂಸೆ-ಪ್ರತಿಹಿಂಸೆಗಳ ಸರಮಾಲೆ ಮಾನವ ಜನಾಂಗವನ್ನೇ ತಲ್ಲಣಗೊಳಿಸಿ ನಾಳೆಗಳ ಭರವಸೆಯನ್ನೇ ಹುಡಿಗೊಳಿಸುತ್ತಿದೆ. ಈ ಹಿಂಸೆಯ ಮೂಲ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲೇ ಅಂತರ್ಗತವಾಗಿರುವುದು ಆಧುನಿಕ ಪ್ರಗತಿಯ ಸೋಲೆನ್ನದೆ ವಿಧಿಯಿಲ್ಲ. ಯಾಕೆಂದರೆ ಹಣ, ವ್ಯಾಪಾರ, ಲಾಭ, ಪ್ರಯೋಜನ, ಪ್ರಭುತ್ವಗಳನ್ನು ಆರಾಧನೆ ಮಾಡುವ ಕೈಗಾರಿಕಾ ಸಮಾಜ ಮಕ್ಕಳ ಮನಸ್ಸಿನಲ್ಲಿ ತನ್ನ ಮೌಲ್ಯಗಳನ್ನು ಶಿಕ್ಷಣದ ಮೂಲಕ ಸೂಕ್ಷ್ಮವಾಗಿ ಬೆಳೆಸುತ್ತಿದೆ; ಶಿಕ್ಷಣ ಕ್ಷೇತ್ರವನ್ನು ತನ್ನ 'ಏಜೆಂಡಾ'ಕ್ಕಾಗಿಯೇ ಬಳಸಿಕೊಳ್ಳುತ್ತಿದೆ. ಹಾಗಾಗಿಯೇ, ಇಂದಿನ ದಕ್ಷತೆ-ನಿಪುಣತೆಗಳ ಅತಿರೇಕ ವಿಜೃಂಭಣೆಯು, ಪೈಪೋಟಿ, ಗರ್ವ, ಅಸಹನೆಗಳನ್ನಷ್ಟೇ ಪೋಷಿಸುತ್ತಿದೆಯೇ ವಿನಾ ಸಾಮಾಜಿಕ ವಿವೇಕ -ಸಂಯಮಗಳನ್ನಲ್ಲ. ಇಲ್ಲಿ ಸತ್ಯ-ಸೌಂದರ್ಯೋಪಾಸನೆಗಳಿಗೆ ಸ್ಥಾನವಾದರೂ ಎಲ್ಲಿದೆ?

ಆದರೆ ಮಕ್ಕಳ ಕನಸಿನ ಲೋಕವನ್ನು ಹೊಸಕಿ ಹಾಕಿದರೆ, ಕಟ್ಟಕಡೆಯಲ್ಲಿ ಜಗತ್ತಿನ ಭವಿಷ್ಯದ ಕನಸುಗಳೂ ಭಗ್ನಗೊಂಡು, ಮಾನವ ಜನಾಂಗವು ಅತ್ಯಂತ ಅಭದ್ರತೆಯ ಪ್ರಪಾತದ ಅಂಚಿಗೆ ಬಂದು ನಿಲ್ಲುತ್ತದೆ. ಈ ದಿಗಿಲು ನಮ್ಮನ್ನು ಈಗಾಗಲೇ ಕಾಡುತ್ತಿಲ್ಲವೇ?

"ಮಕ್ಕಳಿಗೆ ಆಡಲು, ಗನ್ನು, ಎ. ಕೆ.೪೭ ರೈಫಲ್ ಅಥವಾ ಇನ್ನಿತರ ಅತಿ ತಂತ್ರಜ್ಞಾನ ಸಂಬಂಧೀ ಆಟಿಕೆಗಳನ್ನು ಹೆಮ್ಮೆಯಿಂದ ಒದಗಿಸುವ ನಮಗೆ, ಜಗತ್ತಿನಲ್ಲಿ ಶಾಂತಿ-ನೆಮ್ಮದಿಗಳು ನೆಲೆಗೊಳ್ಳಲಿ ಎಂದು ಆಶಿಸುವ ಹಕ್ಕಿದೆಯೇ ?" ಎಂದು ಪ್ರಶ್ನಿಸುತ್ತಾರೆ ತತ್ತ್ವಜ್ಞಾನಿ ಜೆ. ಕೃಷ್ಣಮೂರ್ತಿ. ಬದುಕನ್ನು ಸಮಗ್ರವಾಗಿ ನೋಡದೆ, ತುಂಡು ತುಂಡಾಗಿಯೇ ನೋಡುವ ನಾವು, ಹಿಂಸಾಪ್ರೇರಿತ ಆಟಿಕೆಗಳಿಗೂ, ಜಗತ್ತಿನಲ್ಲಿ ಏರುತ್ತಿರುವ ಭಯೋತ್ಪಾದನೆಗೂ ಸಂಬಂಧವಿದೆಯೆಂಬುದನ್ನು ಗ್ರಹಿಸುವುದಿಲ್ಲ. ಹೆಮ್ಮೆಯಿಂದ ಮಗುವಿಗೆ ಆಟಿಕೆಯಾಗಿ ಗನ್ನು ನೀಡುವಾಗಲೇ ನಾವು ಸಂಭವನೀಯ ಭಯೋತ್ಪಾದಕನನ್ನು ಮನೆಯಲ್ಲೇ ಸೃಷ್ಟಿಸುತ್ತಿರುತ್ತೇವೆ ಎಂಬುದನ್ನು ತಿಳಿಯಲಾರದೇ ಹೋಗುವುದೂ ಈ ಏಕಮುಖ ಶಿಕ್ಷಣದ ದುರಂತ.

ಇಂದಿನ ಶಿಕ್ಷಣಕ್ಷೇತ್ರದಲ್ಲಿರುವ ಈ ಸಂಕೀರ್ಣ ರಾಡಿಯನ್ನು ಎಚ್ಚರದಿಂದ, ಸಮಾಧಾನದಿಂದ ಗಮನಿಸಿ, ಅಲ್ಲಿ ಮೂಲಭೂತ ಪರಿವರ್ತನೆಯನ್ನು ತರುವ ಬಗ್ಗೆ ಚಿಂತಿಸುವ ಗಂಭೀರ ಕಾಲ ಘಟ್ಟದಲ್ಲಿ ಇಂದು ನಾವಿದ್ದೇವೆ. ಕೊನೆಯಪಕ್ಷ, ಆಧುನಿಕ ಜಗತ್ತಿನಲ್ಲಿ ಉಲ್ಬಣಿಸುತ್ತಿರುವ ಹಿಂಸೆಯ ಮೂಲವನ್ನು ಎಚ್ಚರದಿಂದ ಗಮನಿಸುವ, ವಿವೇಚನಾ ಶಕ್ತಿಯನ್ನಾದರೂ ಮಕ್ಕಳಿಗೆ ಕೊಡುವಷ್ಟರ ಮಟ್ಟಿಗೆ ಈ ಶಿಕ್ಷಣ ವ್ಯವಸ್ಥೆಯು ಬದಲಾಗಬೇಕು ಅದಕ್ಕೇ, ಈ ಅಬ್ಬರದ ಶಿಕ್ಷಣಕ್ರಮದ ನಡುವೆ ತಾಳ್ಮೆಯ ಪಿಸುದನಿಗೆ ಅವಕಾಶ ನಿರ್ಮಾಣವಾಗಬೇಕು.

❒

# ಈ ಭೂಮಿ ಯಾರಿಗೂ ಸೇರಿದ್ದಲ್ಲ

"ಒಂದು ಮರವನ್ನು ನೀನು ಪ್ರೀತಿಸಬಲ್ಲೆಯಾದರೆ ಸಮಸ್ತ ಮಾನವ ಜನಾಂಗವನ್ನೇ ನೀನು ಪ್ರೀತಿಸುತ್ತಿಯಾ. ಒಂದು ಮರದ ಜತೆಗೆ ನಿನಗೆ ಸಂಬಂಧ ಸಾಧ್ಯವಿಲ್ಲದಿದ್ದರೆ, ಈ ವಿಶ್ವದ ಯಾವ ಸಂಗತಿಯ ಜತೆಯೂ ಸಹಜ ಸಂಬಂಧ ಸಾಧ್ಯವಿಲ್ಲ" ಎಂದು ತತ್ತ್ವಜ್ಞಾನಿ ಜೆ. ಕೃಷ್ಣಮೂರ್ತಿ ಹೇಳುತ್ತಾರೆ. ಇದೊಂದು ಆಧ್ಯಾತ್ಮ ದರ್ಶನ !

ಪ್ರಕೃತಿ ಒಂದು ಅಖಂಡವಾದ ಜೀವಂತ ಪ್ರಕ್ರಿಯೆ. ಅದು ಉಕ್ಕುತ್ತಾ, ಹೊಳೆಯುತ್ತಾ, ಕ್ಷಣಕ್ಷಣಕ್ಕೂ ಬದಲಾಗುತ್ತಾ ತನ್ನ ಬಸಿರಿನ ಅನಂತ ಸೃಷ್ಟಿಸಾಧ್ಯತೆಗಳನ್ನು ಸತತವಾಗಿ ಹೊರಚೆಲ್ಲುತ್ತಾ ಮುನ್ನಡೆಯುತ್ತಿದೆ. ಈ ಜೀವಂತ ಪ್ರಕ್ರಿಯೆಯ ಬಸಿರಿನ ಒಳಗೆಯೇ ನಾನು, ನೀವು, ಪಶು, ಪಕ್ಷಿ, ಸಸ್ಯರಾಶಿ, ಸಮಸ್ತ ಜೀವಸಂಕುಲ; ಈ ನೆಲ, ಜಲ, ವಾಯು, ಆಕಾಶ - ಹೀಗೆ ಕಾಣುವ, ಕಾಣದ ಪ್ರಪಂಚದ ಎಲ್ಲ ಸಂಗತಿಗಳೂ ಇವೆ. ಹಾಗಾಗಿ ನಾವು, ನೀವು, ಎಲ್ಲವೂ ಪ್ರಕೃತಿಯ ಜೀವಂತ ಇರುವಿಕೆಗೆ ಸಾಕ್ಷಿ ಮಾತ್ರ.

ತೋರಿಕೆಗೆ ಬೇರೆ ಬೇರೆಯಾಗಿ ಕಾಣುವ ಈ ಪ್ರಪಂಚದ ಎಲ್ಲ ಸಂಗತಿಗಳೂ ಒಂದಕ್ಕೊಂದು ಪರಸ್ಪರ ಹೆಣೆದುಕೊಂಡಿವೆ, ಒಂದಕ್ಕೊಂದು ಅಂತರ್ ಪ್ರಭಾವ ಬೀರುತ್ತಿವೆ, ಒಂದನ್ನೊಂದು ಬೇರ್ಪಡಿಸಲಾರದಂತೆ ಆಧರಿಸಿಕೊಂಡಿರುವ ಅಖಂಡ ಜಾಲವಾಗಿದೆ. ಈ ಅಖಂಡ ಸೃಷ್ಟಿಜಾಲದಲ್ಲಿ, ಮನುಷ್ಯ ಒಂದು ಯಃಕಶ್ಚಿತ್ ಎಳೆ ಮಾತ್ರ.

---

ತರಂಗ (ಸಾಪ್ತಾಹಿಕ), ಮಣಿಪಾಲ, ಜೂನ್ ೧೬, ೨೦೦೨.

**ಸಂಬಂಧಗಳ ಸರಮಾಲೆ :**

ಮನುಷ್ಯನ ಇರುವಿಕೆಯೆಂಬುದು ಸಂಬಂಧಗಳ ಸರಮಾಲೆ. "ನಾನು ಇದ್ದೇನೆ" ಎಂದರೆ, ಬೇರ್ಪಡಿಸಲಾರದಂತೆ ಹೆಣೆದುಕೊಂಡಿರುವ ಗೊಣಸು, ಒಳಗೊಣಸುಗಳಿರುವ ಈ ಸಂಬಂಧಗಳ ಸರಮಾಲೆಯಲ್ಲಿ ಒಂದು ಗೊಣಸಾಗಿ ಇದ್ದೇನೆಯೇ ಹೊರತು ಪ್ರತ್ಯೇಕವಾಗಿ, ಸ್ವತಂತ್ರವಾಗಿ, ಇಲ್ಲ. ಇಡಿಯ ವಿಶ್ವವ್ಯವಸ್ಥೆಯ ಒಂದು ಅಂಶವಾಗಿ ಇದ್ದೇನೆ. ಹಾಗಾಗಿ ನಾನು ಈ ವಿಶ್ವವ್ಯವಸ್ಥೆಗೆ ಪೂರಕವಾಗಿ ಬದುಕುವುದು ಅನಿವಾರ್ಯ.

ದೃಷ್ಟಾಂತದೊಂದಿಗೆ ಈ ಮಾತನ್ನು ಗಮನಿಸುವ. "ನಾನು ಸ್ವತಂತ್ರವಾಗಿ ಇದ್ದೇನೆ." ಹೌದೇ? ಒಂದೈದು ನಿಮಿಷ ಉಸಿರಾಡಲು ಗಾಳಿ ಸಿಗದಿದ್ದರೆ ನಾನು ಇರುವುದಿಲ್ಲ. ಹಾಗಾಗಿ ನನಗೆ ಗಾಳಿಯ ಜೊತೆ ಸಂಬಂಧವಿದೆ. ಪ್ರತಿಕ್ಷಣದಲ್ಲೂ ಉಸಿರಾಡುವ ಗಾಳಿಯೇ ನಾನಾಗಿ ಮಾರ್ಪಾಡಾಗುತ್ತಿದ್ದೇನೆ. ಸೂರ್ಯನ ಶಕ್ತಿಯಿಲ್ಲದೆ ನನ್ನ ಒಂದು ಬೆರಳು ಕೂಡಾ ಅಲುಗಾಡಲಾರದು. ನನ್ನಿಂದ ಸ್ವಲ್ಪ ದೂರವಿರುವ ಸಸ್ಯಗಳು, ಮಣ್ಣು, ನೀರು, ಗಾಳಿ ಸೂರ್ಯನ ಶಕ್ತಿಯನ್ನು ವಿಶಿಷ್ಟವಾಗಿ ಸಂಯೋಜಿಸಿ ಆಹಾರವನ್ನು ತಯಾರಿಸಿ ನನಗೊದಗಿಸುತ್ತವೆ. ಹಾಗಾಗಿ ಇವುಗಳ ಜೊತೆ ನನಗೆ ಬಿಡಿಸಲಾಗದ ಸಂಬಂಧವಿದೆ; ಮಾತ್ರವಲ್ಲ, ಇವೆಲ್ಲವೂ ನನ್ನ ದೇಹದಲ್ಲಿ ಸೂಕ್ಷ್ಮವಾಗಿ ಸೇರಿಕೊಂಡವೆ. ನಾನು ನೀರು, ಗಾಳಿ, ಮಣ್ಣು, ಮರ-ಗಿಡ, ಸೂರ್ಯ, ಚಂದ್ರ, ನಕ್ಷತ್ರ, ಆಕಾಶ - ಹೀಗೆ ಪ್ರಪಂಚದ ಪ್ರತಿಯೊಂದು ಸಂಗತಿಯೂ ಆಗಿದ್ದೇನೆ. ನನ್ನ ದೇಹದ ಪ್ರತಿ ಕಣಕಣವೂ ಈ ಪ್ರಪಂಚದಿಂದ ಬಂದಿದೆಯೇ ಹೊರತು ಪ್ರಕೃತಿಯಿಂದ ಹೊರಗೆ ಬೇರೆಯಾಗಿ ಅದು ನಿಂತಿಲ್ಲ. ನನ್ನೀ ದೇಹದ ಆಕೃತಿ, ಹೊರಗೆ ಕಾಣುವ ಪ್ರಕೃತಿಯ ಒಂದು ಪ್ರಕಟರೂಪವಷ್ಟೆ. ಈ ಬೃಹತ್ ಅಸ್ತಿತ್ವ ಸಾಗರದ ಒಂದು ಚಿಕ್ಕ ತೆರೆ ನಾನು.

ಎರಡು ವರ್ಷಗಳ ಹಿಂದೆ ಗುಜರಾತಿನಲ್ಲಿ ಬರಗಾಲ ಬಂದಾಗ, ಬದುಕಿಗಾಗಿ ಜನರು ಚರಂಡಿಯ ನೀರು ಕುಡಿಯುವ ಪರಿಸ್ಥಿತಿ ಬಂದಿತ್ತು. ಒಂದು ಲೋಟ ನೀರಿಗಾಗಿ ಜನರು ಒಬ್ಬರನ್ನೊಬ್ಬರ ಕತ್ತು ಹಿಸುಕಲು ಆರಂಭಿಸಿದ್ದರು. ಯಾಕೆ? ನಮ್ಮ ಭ್ರಮೆಯ ಬದುಕಿನ ಇಷ್ಟಗಳಾದ ಫ್ರಿಜ್, ಟಿ.ವಿ., ಕಾರು, ಬಂಗಲೆ ಇಲ್ಲದೆಯೂ ಮನುಷ್ಯ ಬಾಳಿಯಾನು. ಈ ಭೋಗವಸ್ತುಗಳನ್ನು ಪಡೆಯಲಿಕ್ಕಾಗಿ ಮನುಷ್ಯ ರಾಕ್ಷಸನಾಗದೆ ಇದ್ದಾನು. ಆದರೆ ತನ್ನ ಬದುಕನ್ನು ಪೊರೆಯುವ ಮೂಲ ಅವಶ್ಯಕತೆಗಳಾದ ನೀರು, ಗಾಳಿ, ಆಹಾರ ಮುಂತಾದುವುಗಳು ದೊರಕದಿದ್ದಾಗ ಮನುಷ್ಯ ರಾಕ್ಷಸನಾಗುತ್ತಾನೆ, ಒಬ್ಬನನ್ನೊಬ್ಬ ಹಿಡಿದು ತಿನ್ನುತ್ತಾನೆ. ಆದರೆ, ಇವುಗಳ ಬಗ್ಗೆಯೇ ನಮಗೆ ತೀರ ಅಸಡ್ಡೆ ಏಕೆ?

**ಅಖಂಡ ಜೀವನ ದರ್ಶನ:**

ಇನ್ನೊಂದು ದೃಷ್ಟಾಂತದಿಂದ ಈ ಸತ್ಯವನ್ನು ಇನ್ನೂ ಮನದಟ್ಟುಮಾಡಿಕೊಳ್ಳುವ. ನನ್ನ ಮುಂದೆ ನಾನು ಬರೆಯುವ ಕಾಗದ ಇದೆ. ಈ ಕಾಗದದಲ್ಲಿ ಮರವೂ, ಮೋಡಗಳೂ, ಸೂರ್ಯಪ್ರಕಾಶವೂ ಇವೆ; ಮಾತ್ರವಲ್ಲ, ನಾನೂ, ನೀವೂ ಇದ್ದೇವೆ. ಅದು ಹೇಗೆ ಸಾಧ್ಯ?

ನೀವು ಕವಿಯಾದರೆ ಆಗಲೇ ಕಾಗದದಲ್ಲಿ ಮೋಡವನ್ನು ಕಾಣುತ್ತೀರಿ. ಮೋಡವಿಲ್ಲದೆ ಮಳೆಯಿಲ್ಲ. ಮಳೆಯಿಲ್ಲದೆ ಮರಗಳಿಲ್ಲ. ಮರವಿಲ್ಲದೆ ಈ ಕಾಗದವಿಲ್ಲ. ಅಲ್ಲಿ ಕಾಣುವ ಮೋಡಗಳು ಹಾಗಾಗಿ ಈ ಕಾಗದದಲ್ಲಿ ಸೇರಿಕೊಂಡಿವೆ.

ಮರ ಬೆಳೆಯಲು ಸೂರ್ಯಪ್ರಕಾಶವೂ ಬೇಕು. ಮರಕಡಿದು ಕಾಗದ ತಯಾರಿಸುವವನೂ ಸೂರ್ಯಪ್ರಕಾಶವಿಲ್ಲದೆ ಬದುಕಲಾರ. ಸೂರ್ಯಪ್ರಕಾಶ ಈ ಕಾಗದದೊಳಗೆ ಹೊಕ್ಕಿದೆ. ಹಾಗೆಯೇ ಮಣ್ಣು, ನೀರು, ಗಾಳಿ ಕೂಡ. ಹೀಗೆ ಬೋಧಿಸತ್ತ್ವನ ಕಣ್ಣುಗಳಿಂದ ಸೂಕ್ಷ್ಮವಾಗಿ ಅವಲೋಕಿಸುತ್ತ, ಇವೆಲ್ಲವನ್ನೂ ಸಮನ್ವಯ ಮಾಡಿಕೊಂಡು ಹೋದಂತೆ ಈ ಕಾಗದದಲ್ಲಿ ಮರಕಡಿಯುವವನೂ, ಆತ ತಿನ್ನುವ ಅನ್ನವೂ, ಆತನ ಅಪ್ಪನೂ, ನಾವೂ, ನೀವೂ, ವಿಶ್ವದ ಎಲ್ಲ ಸಂಗತಿಗಳೂ ಸೂಕ್ಷ್ಮವಾಗಿ ಅಡಕವಾಗಿರುವುದು ನಮಗೆ ಗೋಚರವಾಗುತ್ತದೆ. ಈ ಕಾಗದದಂತೆ, ವಿಶ್ವದ ಪ್ರತಿಯೊಂದು ಸಂಗತಿಯಲ್ಲೂ ಇತರ ಎಲ್ಲ ಸಂಗತಿಗಳು ಹಾಸುಹೊಕ್ಕಾಗಿರುವುದೂ ತಿಳಿಯುತ್ತದೆ - ಬಟ್ಟೆಯಲ್ಲಿ ಹತ್ತಿ, ನೂಲು, ನೇಕಾರ, ಗಿರಣಿ ಎಲ್ಲವೂ ಹೆಣೆದುಕೊಂಡಿದ್ದಂತೆ. ಇದು ಭ್ರಮೆಯಲ್ಲ. ಸ್ಥಿತಿ. ಇದೇ ಅರಿವಿನ ಸಾಕ್ಷಾತ್ಕಾರ. ಈ ತಿಳುವಳಿಕೆಯಿಂದ ಮಾತ್ರ ಪ್ರಕೃತಿಯ - ಅಂದರೆ ನಮ್ಮ ನಿಮ್ಮ ಜೊತೆಗೆ ಎಲ್ಲವುಗಳ - ಪಾಲನೆ ಸಾಧ್ಯ. ನಿಜಕ್ಕೂ ಇಂಥ ಎಚ್ಚರದ ಬದುಕಿನಲ್ಲಿ ಪ್ರಕೃತಿಯ ರಕ್ಷಣೆ ತಂತಾನೇ ಜರಗುತ್ತಿರುತ್ತದೆ. ನಾವು ಪ್ರಯತ್ನಪೂರ್ವಕವಾಗಿ ಮಾಡಬೇಕಾದ್ದೇನೂ ಇರುವುದಿಲ್ಲ.

ಆದರೆ ದಿಗಿಲಿನ ಸಂಗತಿಯೆಂದರೆ, ನಮ್ಮನ್ನು ಪೊರೆಯುವ ನಮ್ಮ ಆಪ್ತಬಂಧುಗಳನ್ನೇ ನಾವು ಅಜ್ಞಾನದಿಂದ ಸಂಪೂರ್ಣ ಕಡೆಗಣಿಸುತ್ತಿದ್ದೇವೆ, ಕಲುಷಿತಗೊಳಿಸುತ್ತಿದ್ದೇವೆ, ಅಪವಿತ್ರ ಗೊಳಿಸುತ್ತಿದ್ದೇವೆ. ಇವನ್ನೆಲ್ಲ ಕಲುಷಿತಗೊಳಿಸುವುದೆಂದರೆ ನಮ್ಮನ್ನೇ ನಾವು ಕಲುಷಿತಗೊಳಿಸಿ ಕೊಂಡಂತೆ. ಇವನ್ನು ಛಿದ್ರಗೊಳಿಸುವುದೆಂದರೆ ನಮ್ಮನ್ನೇ ನಾವು ಛಿದ್ರಗೊಳಿಸಿಕೊಂಡಂತೆ. ಇವನ್ನು ನಾಶಮಾಡುವುದೆಂದರೆ ನಮ್ಮನ್ನೇ ನಾವು ನಾಶಮಾಡಿಕೊಂಡಂತೆ. ಇದು ಕೇವಲ ಕಲ್ಪನೆಯಿಲ್ಲ. 'ಫಿಲಾಸಫಿ' ಅಲ್ಲ. ಬದುಕಿನ ವಾಸ್ತವ. ಹಾಗಾಗಿ ಸಂಬಂಧಗಳು ಪವಿತ್ರ. ಸಂಬಂಧಗಳನ್ನು ಅಪವಿತ್ರಗೊಳಿಸದೆ ಲಾಲನೆ-ಪಾಲನೆ ಮಾಡಿ ಪೋಷಿಸಿದರೆ ಅವು ನಮ್ಮನ್ನು ಪೋಷಿಸುತ್ತವೆ. ಇದೇ ಪರಮ ಜೀವನಧರ್ಮ.

ಈ ಸಂಬಂಧಗಳಲ್ಲಿ ಅಂತರ್ಗತವಾಗಿರುವ ಅಖಂಡತ್ವದಲ್ಲಿ ತನ್ನ ಸ್ಥಾನವೇನು ಎಂಬುದನ್ನು ಮನುಷ್ಯ ಒಳಬಗೆಯಲ್ಲಿ ಸಾಕ್ಷಾತ್ಕರಿಸಿಕೊಂಡು, ತನ್ನ ಇರವಿಗೆ ಕಾರಣವಾದ ಈ ಸೃಷ್ಟಿಜಾಲವನ್ನು ಛಿದ್ರಗೊಳಿಸದೆ ಪರಸ್ಪರ ಪ್ರೀತಿ, ಸಹಕಾರ ಭಾವಗಳಿಂದ ಪ್ರಕೃತಿಯ ಅಂತರ್ಲಯಕ್ಕೆ ತನ್ನ ಬದುಕಿನ ಗತಿಯನ್ನು ಮೇಳೈಸಿಕೊಂಡು ಬಾಳುವುದೇ ಜೀವನದರ್ಶನ. ಧಾರ್ಮಿಕ ದರ್ಶನ ಕೂಡ. ಧಾರ್ಮಿಕ ಬದುಕಿಗೆ ಇದಕ್ಕಿಂತ ಹೆಚ್ಚಿನ ಸಹಸ್ರಸಹಸ್ರ ವ್ಯಾಖ್ಯೆಗಳಿಲ್ಲ, ಅಥವಾ ಸಹಸ್ರಸಹಸ್ರ ವ್ಯಾಖ್ಯೆಗಳೂ ಈ ಜೀವನ ವಿವೇಕದಲ್ಲೇ ಅಡಕವಾಗಿವೆ.

**ಪರಂಪರಾಗತ ಸಮಾಜಗಳ ನೆಲದ ವಿವೇಕ :**

ಮನುಷ್ಯನನ್ನು ಹೊರತು ಪ್ರಕೃತಿಯಲ್ಲಿ ಎಲ್ಲೂ ಅವಸರ ಕಾಣುವುದಿಲ್ಲ. ಪ್ರಕೃತಿಯ ವಿಕಾಸದ

ಹಾದಿ. ಸಾವಧಾನದಿಂದ ಲಯಬದ್ಧವಾಗಿ ಮುಂದುವರಿಯುತ್ತದೆ. ಪ್ರಕೃತಿಯಿಂದರೇ ಮೂಡಿಬಂದ ನಾವು ನಿಸರ್ಗದ ಈ ಲಯಬದ್ಧ ಶ್ರುತಿಗೆ ಸರಿಯಾಗಿ ನಮ್ಮ ಗತಿಯನ್ನು 'ಟ್ಯೂನಿಂಗ್' ಮಾಡಿಕೊಂಡಾಗ ಮಾತ್ರ ಪರಿಪೂರ್ಣ ಪಕ್ವತೆಯಿಂದ ಸಹಜವಾಗಿ ಅರಳಲು ಸಾಧ್ಯ. ಪ್ರಕೃತಿಯ ತಾಳಕ್ಕೆ ಸರಿಯಾಗಿ ನಮ್ಮ ಬದುಕನ್ನು ಮೇಳೈಸಿಕೊಂಡಾಗ ಬದುಕು ಸುಂದರವಾಗುತ್ತದೆ. ಪ್ರಕೃತಿಯ ಆಶಯಕ್ಕೆ ವಿರುದ್ಧಗತಿಯಲ್ಲಿ ಸೆಟೆದುಕೊಂಡು ಹೋದಷ್ಟು ಬದುಕು ಹೋರಾಟವಾಗುತ್ತದೆ. ಸುಖ ಕೇವಲ ಮರೀಚಿಕೆಯಾಗುತ್ತದೆ. ನಾವು ಇಲ್ಲಿ ಈಗ 'ಇರುವುದು' (being) ಮುಖ್ಯವೇ ವಿನಾ ನಾಳೆ ಏನೋ 'ಆಗುವುದು' (becoming) ಅಲ್ಲ. 'ಆಗುವುದರಲ್ಲಿ ಆತುರವಿದೆ, ಆವೇಶವಿದೆ, ಆತಂಕವಿದೆ, ವಿನಾಶಕಾರಿ ಅಂಶಗಳಿವೆ. ನಾಳೆಯ ಬಗ್ಗೆ ಇರುವ ಈ ದುಗುಡಗಳೆಲ್ಲವೂ ನಮ್ಮ ಸುಂದರ ವರ್ತಮಾನವನ್ನು ಕೊಲ್ಲುವಂಥವುಗಳು.

ಜಗತ್ತಿನಾದ್ಯಂತ ಪರಂಪರಾಗತ ಸಮಾಜಗಳು, ಸಮುದಾಯಗಳು, ಜನಾಂಗಗಳು, ಈ ನೆಲದ ವಿವೇಕವನ್ನು ಅರಿತು, ವರ್ತಮಾನಕ್ಕಷ್ಟೇ ತಮ್ಮ ಬದುಕನ್ನು ಬದುಮಟ್ಟಿಗೆ ಸೀಮಿತಗೊಳಿಸಿಕೊಂಡು, ಅದಕ್ಕೆ ಪೂರಕವಾದ ಸರಳ ಜೀವನ ಮೌಲ್ಯಗಳನ್ನು ಮೈಗೂಡಿಸಿಕೊಂಡು, ಭವಿಷ್ಯದ ಅಭದ್ರತೆಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ, ತ್ಯಾಗದಿಂದ ಬದುಕಿ ಸಂತೋಷದ ಜೀವನ ನಡೆಸಿಕೊಂಡು ಬಂದವು. ಅಲ್ಲೊಬ್ಬ ಇಲ್ಲೊಬ್ಬ ಭಸ್ಮಾಸುರನಂತೆ ದುರಾಸೆಯನ್ನು ತೋರಿಸುತ್ತಾ ನಾಶವಾದರೂ ಕೂಡ, ಸಮುದಾಯಕ್ಕೆ ಸಮುದಾಯವೇ ದುರಾಸೆಯಲ್ಲಿ ಬದುಕಲಿಲ್ಲ.

೧೪೦ ವರ್ಷಗಳ ಹಿಂದೆ ಅಮೇರಿಕಾದ ರೆಡ್ ಇಂಡಿಯನ್ ಬುಡಕಟ್ಟುಗಳ ನಾಯಕ ಸಿಯೊಟಲ್ ಮಾತುಗಳು ಪರಂಪರಾಗತ ಸಮುದಾಯಗಳ ಈ ನೆಲದ ವಿವೇಕವನ್ನು ಅರ್ಥಪೂರ್ಣವಾಗಿ ಸ್ಪಷ್ಟಪಡಿಸುತ್ತದೆ: " ಈ ಭೂಮಿ, ಶುದ್ಧ ಗಾಳಿ, ಕಲಕಲರವದೊಂದಿಗೆ ಹರಿಯುವ ನೀರು ಇವು ನಮ್ಮ ಸ್ವಂತದ್ದು ಹೇಗಾದೀತು? ಭೂಮಿಯ ಪ್ರತಿಯೊಂದು ಚದರವೂ ನಮಗೆ ಪವಿತ್ರವಾದ್ದು; ಈ ಬೆಟ್ಟಗಳು, ಮರಗಳು, ಪೈನ್ ಮರದ ಪ್ರತಿ ಎಲೆ, ಹಸಿರುರಾಶಿ, ತಂಪು ನೀಡುವ ಪ್ರತಿಕೊಳದ ತೀರ, ಸಮತಟ್ಟಾದ ಹುಲ್ಲುಗಾವಲು, ಪಕ್ಷಿಗಳು, ಪ್ರಾಣಿಗಳು, ಗುಂಯ್ ಗುಡುವ ಪ್ರತೀ ಕೀಟದ ನಾದ.... ಇವೆಲ್ಲಾ ನಮ್ಮ ನೆನಪು ಮತ್ತು ಅನುಭವದಲ್ಲಿ ಅತ್ಯಂತ ಪವಿತ್ರವಾದವುಗಳು. ಈ ನದಿಗಳು ನಮ್ಮ ಪೊರೆಯುವ ಬಂಧುಗಳು; ಇವು ನಮ್ಮ ಬಾಯಾರಿಕೆಯನ್ನು ತಣಿಸಿವೆ; ನಮ್ಮ ಗಿಡ ಮರಗಳಿಗೆ ನೀರುಣಿಸಿವೆ. ನಮ್ಮ ದೋಣಿಗಳನ್ನು ಸಾಗಿಸಿವೆ; ನಮ್ಮ ಮಕ್ಕಳನ್ನು ಪೋಷಿಸಿವೆ. ನಾವು ಕೇಳುತ್ತೇವೆ; ಪಕ್ಷಿಗಳ ಕಲರವ, ರಾತ್ರಿಯ ಹೊತ್ತು ಕೊಳದಲ್ಲಿ ಕಪ್ಪೆಗಳು ನಡೆಸುವ ಸಂವಾದ, ಕೀಟಗಳ ನಿನಾದ, ನದಿಯ ಕಲಕಲ ಶಬ್ದ, ಮಧ್ಯರಾತ್ರಿ ಪೈನ್ ಮರಗಳ ಮೇಲಿಂದ ಗಾಳಿ ಹೋದಾಗ ಬರುವ ಸದ್ದು.... ಇತ್ಯಾದಿ ಎಲ್ಲಾ ನಮ್ಮ ಅನುಭೂತಿಗೆ ದಕ್ಕದೆ ಹೋದರೆ, ನಮ್ಮ ಬದುಕಿಗೆ ಏನು ಅರ್ಥವಿದೆ ? ಮನುಷ್ಯ ಜೀವವಿದ್ದಾಗ್ಯೂ ಒಂಟಿತನದಿಂದ ಶವವಾಗಿ ಹೋಗಲಾರನೇ ?"

**ತ್ಯಾಗದಿಂದ ನೆಮ್ಮದಿಯ ಬದುಕು :**

ಈಶಾವಾಸ್ಯ ಉಪನಿಷತ್ತಿನ ಮೊದಲ ಋಕ್ ಹೇಳುವುದೂ ಈ ಜೀವನದರ್ಶನವನ್ನೆ."ಈ ವಿಶ್ವ ಎಲ್ಲರಿಗೂ ಸೇರಿದ್ದು. ನಿನಗೆ ಮಾತ್ರವಲ್ಲ. ಈ ನೈಸರ್ಗಿಕ ಸಂಪತ್ತನ್ನು ಸಿಕ್ಕ ಹಾಗೆ ಭೋಗಿಸುವುದು

ಬೇರೆಯವರ ಪಾಲನ್ನು ಕದ್ದಂತೆ. ಇದು ಅನೈತಿಕ, ಅಧರ್ಮ. ನಿನ್ನ ಅಗತ್ಯಕ್ಕೆ ತಕ್ಕಷ್ಟೇ ಪ್ರಕೃತಿ ಸಂಪತ್ತನ್ನು ಅನುಭವಿಸುತ್ತಾ ತ್ಯಾಗದಿಂದ ನೆಮ್ಮದಿಯ ಬದುಕನ್ನು ಬದುಕು. ಈ ಉಪನಿಷತ್ ವಾಕ್ಯದಿಂದ ಪ್ರಭಾವಿತರಾಗಿಯೇ ಗಾಂಧೀಜಿ "ಈ ಭೂಮಿ ಪ್ರತಿಯೊಬ್ಬರ ಆವಶ್ಯಕತೆ ಗಳನ್ನು ಪೂರೈಸಬಲ್ಲುದು, ಆದರೆ ದುರಾಸೆಯನ್ನಲ್ಲ. ನಮ್ಮ ದುರಾಸೆಯನ್ನು ಪೂರೈಸಲು ಈ ಭೂಮಿ ಎಂದೂ ಬತ್ತದ ಅಕ್ಷಯಪಾತ್ರವೇನೂ ಅಲ್ಲ" ಎಂದು ಎಚ್ಚರಿಸಿದ್ದರು. ಪ್ರಾಯಃ ಇದಕ್ಕಿಂತ ಆದರ್ಶವಾದ ಪರಿಸರವಿಜ್ಞಾನೀಯ ದೃಷ್ಟಿಕೋನ ಇನ್ನೊಂದಿಲ್ಲ ಎಂದು ನನ್ನ ಅಭಿಪ್ರಾಯ.

ಲಕ್ಷಾಂತರ ಜಾತಿಯ ಜೀವಜಾತಿಗಳು ಈ ಭೂಮಿಯಲ್ಲಿ ಮಿಲಿಯಾಂತರ ವರ್ಷಗಳಿಂದ ಬಾಳಿಬದುಕುತ್ತಿದ್ದರೂ ಈ ಭೂಮಿಗೆ ಅವು ಹೊರೆಯಾಗಲಿಲ್ಲ. ಗಾಂಧೀಜಿ ಕಂಡುಕೊಂಡ ಜೀವನತತ್ತ್ವ ಈ ಜೀವಜಾತಿಗಳಲ್ಲಿ ಹಾಸುಹೊಕ್ಕಾಗಿದೆ. ಪ್ರಾಯಃ ಈ ಜೀವಿಗಳ ಜೀವನಕ್ರಮವೇ ಈಶಾವಾಸ್ಯದ ಋಷಿ ಯಾಜ್ಞವಲ್ಕ್ಯರ ಸ್ಫೂರ್ತಿಯ ನೆಲೆಯಾಗಿರಬೇಕು. ಅಸಂಖ್ಯ ಜೀವಜಾತಿಗಳಲ್ಲಿ ಕೇವಲ ಒಂದಾದ ಮನುಷ್ಯನೂ ಇತ್ತೀಚಿನವರೆಗೆ ನೆಲಕ್ಕೆ ಹತ್ತಿರವಾಗಿ ಭೂಮಿಗೆ ಹೊರೆಯಾಗದೇ ಬದುಕುತ್ತ ಬಂದ.

**ಮಲಿನ ಕಣ್ಣು, ಕಲುಷಿತ ಮನಸ್ಸು :**

ಆದರೆ, ನಾಗರಿಕನಾಗುತ್ತ, ಆಧುನಿಕನಾಗುತ್ತ ಬಂದಂತೆ ಮನುಷ್ಯನಿಗೆ ಪ್ರಕೃತಿಯ ಸೂಕ್ಷ್ಮತತ್ತ್ವಗಳ ಮರೆವು ಆವರಿಸಿ ಆತ ಭೂಮಿಗೆ ಭಾರವಾಗಿ, ಸಮಸ್ತ ಜೀವಸಂಕುಲಕ್ಕೆ ಕುತ್ತಾಗಿ ಪರಿಣಮಿಸಲು ಆರಂಭಿಸಿದ - ಯಾಕೆ ?

ಸಮಸ್ಯೆ ಆರಂಭವಾದದ್ದು ವಿಜ್ಞಾನಯುಗ ಆರಂಭವಾದ ನಂತರ. ಆದರೆ, ಇದು ವಿಜ್ಞಾನದ ತಪ್ಪಲ್ಲ. ವಿಜ್ಞಾನವನ್ನು ಮನುಷ್ಯ, ತನ್ನನ್ನು ಬಿಡುಗಡೆಗೊಳಿಸಬಲ್ಲ ದೃಷ್ಟಿಕೋನ ಅಥವಾ ತತ್ತ್ವಜ್ಞಾನವೆಂದು ಗ್ರಹಿಸದೆ, ಕೇವಲ ತನ್ನ ಸುಖ ಭೋಗಗಳ ಬಯಕೆಗಳನ್ನು ತಣಿಸಲು ಇರುವ ತಂತ್ರಜ್ಞಾನ ಎಂಬಂತೆ ತನ್ನ ಮಲಿನ ಕಣ್ಣು, ಕಲುಷಿತ ಮನಸ್ಸಿನಿಂದ ಗ್ರಹಿಸಲು ಆರಂಭಿಸಿದಂದಿನಿಂದ ಮನುಷ್ಯ ತಪ್ಪು ಹಾದಿ ಹಿಡಿದ. ವಿಜ್ಞಾನವು ಈ ಅಖಂಡ ವಿಶ್ವದ ವಿಭಿನ್ನ ಸಂಗತಿಗಳನ್ನು ಒಂದೊಂದನ್ನೇ ಬೇರ್ಪಡಿಸಿ ನೋಡುವುದನ್ನು ಮನುಷ್ಯನಿಗೆ ಸುಲಭಮಾಡಿಕೊಟ್ಟಿತು. ಇದರಿಂದಾಗಿ ಆತ ಎಲ್ಲವನ್ನೂ ಒಟ್ಟಂದದಲ್ಲಿ ನೋಡುವ ಪ್ರವೃತ್ತಿಯನ್ನು ಕೈಬಿಟ್ಟು, ಪ್ರತಿಯೊಂದನ್ನೂ ನೆಲೆಗೊಳಿಸಿ ನೋಡುವ, ವಿಶ್ಲೇಷಿಸುವ; ತನ್ನ ಲಾಭಕ್ಕಾಗಿ ಅಳೆಯುವ, ತೂಗುವ, ಸಂಕುಚಿತ ಪ್ರವೃತ್ತಿಯನ್ನು ಬೆಳೆಸಿಕೊಂಡ. ಜಗತ್ತಿನ ಎಲ್ಲ ಸಂಗತಿಗಳೂ ಬಲೆಯಂತೆ ಒಂದಕ್ಕೊಂದು ಬೆಸೆದುಕೊಂಡು ಪರಸ್ಪರ ಪ್ರಭಾವ ಬೀರುತ್ತಿರುತ್ತವೆ ಎಂಬ ಈ ನೆಲದ ವಿವೇಕವು ಕ್ರಮೇಣ ಮಾಯವಾಗಿ, ತಾಂತ್ರಿಕ ಸಂಸ್ಕೃತಿಯ ಬಳುವಳಿಯಾದ ಒಂದನ್ನೊಂದು ಹೊರಗಿಟ್ಟು ನೋಡುವ ಯಾಂತ್ರಿಕ ದೃಷ್ಟಿ ಮನುಷ್ಯನನ್ನು ಆವರಿಸಿತು. ನಿಸರ್ಗದ ಒಳಗೆಯೇ ಇರುವ ತಾನು, ತನ್ನಿಂದ ನಿಸರ್ಗ 'ಬೇರೆ' ಎಂದು ಕಾಣಲು ಆರಂಭಿಸಿ, ನಿಸರ್ಗದ ಮಡಿಲಿನಿಂದ ದೂರ ಸರಿದ. ಆ ದಾರಿಯಲ್ಲೇ ಮುನ್ನಡೆಯುತ್ತಾ ತಪ್ಪು ಹೆಜ್ಜೆ ಹಾಕುತ್ತಲೇ ನಡೆದ.

**ಈ ನೆಲದ ಮಾಯೆ:**

ತನ್ನನ್ನು ಪ್ರಕೃತಿಯಿಂದ ಬೇರ್ಪಡಿಸಿಕೊಂಡನಷ್ಟೆ. ಅಂದಿನಿಂದ ಈ ಭೂಮಿಯ ಸಂಪತ್ತು

ತನ್ನ ಭೋಗಕ್ಕಾಗಿ ಇರುವಂಥದು ಎಂಬ ಮಾಯೆಯಲ್ಲಿ ಮುಳುಗಿ ಮನುಷ್ಯ ತನ್ನನ್ನು ತಾನು ಸಂಪೂರ್ಣ ಕಳೆದುಕೊಂಡ. ತನ್ನ ದೈಹಿಕ ಸುಖ ಹೆಚ್ಚಿಸುವ ಆರ್ಥಿಕ ಪ್ರಗತಿ ಮನುಷ್ಯನಿಗೆ ಕಲ್ಯಾಣ ತರಬಲ್ಲುದು, ಮತ್ತು ಈ ಪ್ರಗತಿಗೆ ಅಂತ್ಯವಿಲ್ಲ ಎಂಬ ಅವೈಜ್ಞಾನಿಕ ದೃಷ್ಟಿಯಿಂದ ನಿಸರ್ಗದ ಸಮಸ್ತ ಸಂಪತ್ತು ತನ್ನದೇ ಎಂಬಂತೆ ಅಹಂಕಾರದಿಂದ ಬಳಸಿಕೊಳ್ಳಲು ಆರಂಭಿಸಿದ. ಸರಳ ಜೀವನ, ಪರಸ್ಪರ ಸಹಕಾರ, ನೆಮ್ಮದಿ, ತೃಪ್ತಿಯೇ ಮೊದಲಾದ ಜೀವಪೋಷಕ ಮೌಲ್ಯಗಳು ಮೂಲೆಗುಂಪಾಗಿಸಿ ಬದಲಿಗೆ ಅಸಂಖ್ಯ ಭೋಗವಸ್ತುಗಳ ಉತ್ಪಾದನೆ ಮತ್ತು ಅವನ್ನು ತನ್ನ ಸುತ್ತ ಕೂಡಿಹಾಕುವುದರಲ್ಲಿ ಮಗ್ನನಾದ. ಪ್ರಾಣಿ-ಪರಿಸರ-ಮನುಷ್ಯನ ಸಹಬಾಳ್ವೆಯ ಮೌಲ್ಯಗಳು ಹಿಂದೆ ಸರಿದುವು. ದುರಾಸೆ-ಸುಖಲೋಲುಪತೆಗಳು ಮುನ್ನಡೆ ಪಡೆದುವು. ಪೈಪೋಟೀ ಸಂಸ್ಕೃತಿ ಮತ್ತು ಅದರ ಜೊತೆ ಅನಿವಾರ್ಯವಾದ ಹಿಂಸೆ - ಕ್ರೌರ್ಯಗಳು ಬದುಕಿನ ಪ್ರಮುಖ ಎಜೆಂಡವಾಯಿತು. ಇದರ ಫಲವಾಗಿ, ಸ್ವಾರ್ಥಿ ಜನಾಂಗದ ಬಲಿಷ್ಠ ಶಕ್ತಿಗಳು ಈ ಭೂಮಿಯಲ್ಲಿ ಬಾಳಿ ಬದುಕುತ್ತಿದ್ದ ಸಸ್ಯ-ಪ್ರಾಣಿ-ಪಕ್ಷಿಗಳನ್ನು ನಿರ್ನಾಮ ಮಾಡಲು ಆರಂಭಿಸಿದುವು. ನೀರಸವಾದ ಏಕರೂಪೀ ಯಂತ್ರ ಸಂಸ್ಕೃತಿ ಜಗತ್ತನ್ನೆಲ್ಲಾ ವ್ಯಾಪಿಸಿತು. ಒಂದೆಡೆ ಅನಂತಸಾಧ್ಯತೆಯಿರುವ ಪ್ರಾಕೃತಿಕ ಜೀವ ವೈವಿಧ್ಯತೆಯನ್ನು, ಇನ್ನೊಂದೆಡೆ ಮನುಷ್ಯನಿರ್ಮಿತ ಬಹುಮುಖೀ ಸಾಂಸ್ಕೃತಿಕ ವೈವಿಧ್ಯತೆಯನ್ನು ಎರಡನ್ನೂ ಏಕಕಾಲದಲ್ಲಿ ಹೊಡೆದುರುಳಿಸಲು ಆರಂಭಿಸಿತು. ಬದುಕನ್ನು ಗುಣಾತ್ಮಕವಾಗಿ ಗ್ರಹಿಸದೆ, ಕೇವಲ ಬಾಹ್ಯ ಪ್ರಪಂಚದ ಸುಖಭೋಗಗಳಿಗಷ್ಟೇ ಸೀಮಿತಗೊಳಿಸಿದ್ದರಿಂದ ಮನುಷ್ಯನ ಅಂತಃ ಪ್ರಪಂಚವು, ಸಂಪೂರ್ಣ ಕಡೆಗಣಿಸಲ್ಪಟ್ಟಿತು. ಆತ ಒಳಗಿನಿಂದಲೇ ಕೊಳೆಯಲು ಆರಂಭಿಸಿದ.

'ಪ್ರಕೃತಿಯನ್ನು ತನ್ನ ಸಾಹಸದಿಂದ ರೂಪಿಸಲು ಹೊರಟ ಮನುಷ್ಯನನ್ನು ಪ್ರಕೃತಿಯೇ ಅದೃಶ್ಯವಾಗಿ ರೂಪಿಸುತ್ತಾ ಈ ಭೂಮಿಯ ಮೇಲೆ ಆತ ಇರಬೇಕೋ ಬೇಡವೋ ಎಂಬುದನ್ನು ತೀರ್ಮಾನಿಸುತ್ತದೆ' ಎಂಬ ಪ್ರಖರ ಸತ್ಯವನ್ನೂ ಕಾಣದಷ್ಟು ಮಬ್ಬುಕವಿಸಿಕೊಂಡ ಮನುಷ್ಯ ಇಂದು ಪ್ರಕೃತಿಯನ್ನು ತನ್ನ ಸೊಕ್ಕಿನಿಂದ ಗೆಲ್ಲುವ ಹುಚ್ಚು ಸಾಹಸ ಮಾಡುತ್ತಿದ್ದಾನೆ. ಈ ವಿಶ್ವಸಾಮರಸ್ಯದ ಸೂತ್ರಗಳೆಲ್ಲವನ್ನೂ ತುಂಡರಿಸಿ ಅಲ್ಲೋಲಕಲ್ಲೋಲ ಮಾಡಿ ಈ ಭೂಮಿಯನ್ನು ಬದುಕಲಸಾಧ್ಯವಾದ ತಿಪ್ಪೇಗುಂಡಿಯನ್ನಾಗಿ ಪರಿವರ್ತಿಸುತ್ತಿದ್ದಾನೆ. ತಾನು ಆಯ್ಕೆ ಮಾಡಿದ ತಂತ್ರಜ್ಞಾನಪ್ರೇರಿತ ವಿಜ್ಞಾನದ ಅನೇಕ ರಾಕ್ಷಸ ಮುಖಗಳು ಇಂದು ಪರಿಸರದ ಮೇಲೆ, ಮಾತ್ರವಲ್ಲ ಮನುಷ್ಯನ ಮೇಲೂ ತನ್ನ ಸರ್ವಾಧಿಕಾರವನ್ನು (eco-facism) ಸ್ಥಾಪಿಸುತ್ತಾ, ನಿಸರ್ಗ ವಿರೋಧಿಯಾಗಿ, ಜೀವವಿರೋಧಿಯಾಗಿ ಬೆಳೆಯುವುದರ ಬಗ್ಗೆ ದಿವ್ಯ ನಿರ್ಲಕ್ಷ್ಯದಿಂದಿದ್ದಾನೆ. ತಾನು ನಡೆಯುವ ದಾರಿ ತನ್ನನ್ನು, ಮತ್ತು ತನ್ನ ಜೊತೆ ಇಡೀ ಭೂಮಿಯನ್ನೇ ಆತ್ಮಹತ್ಯೆಯತ್ತ ಒಯ್ಯುತ್ತದೆ ಎಂಬ ಅರಿವೂ ಆತನಿಗೆ ಇದ್ದಂತಿಲ್ಲ. ಈ ಕುರುಡು ಪ್ರವೃತ್ತಿಯನ್ನು ನೋಡುವಾಗ ಹಲವು ದಶಕೋಟಿ ವರ್ಷಗಳ ಹಿಂದೆ ತಾನು ಸೃಷ್ಟಿಸಿದ ಅಗಾಧ ಕಶ್ಮಲದಲ್ಲಿ ತಾನೇ ಹೂತುಹೋಗಿ ನಾಶವಾದ ಏಕಾಣು ಜೀವಿಗಳಿಗೂ ಮನುಷ್ಯನಿಗೂ ಏನು ವ್ಯತ್ಯಾಸ ಎಂದು ಪ್ರಶ್ನಿಸಬೇಕಾಗುತ್ತದೆ. ಪ್ರಾಯಃ ವ್ಯತ್ಯಾಸವಿಷ್ಟೇ, ತನ್ನನ್ನೇ ತಾನು ನಾಶ ಮಾಡಿಕೊಳ್ಳುತ್ತಿರುವ ತನ್ನ ದಡ್ಡತನದ ಮಧ್ಯದಲ್ಲೂ, ಮನುಷ್ಯ ತಾನು ಮಹಾಬುದ್ಧಿವಂತ ಎಂದು ಭ್ರಮಿಸಿಕೊಂಡಿದ್ದಾನೆ. ಭೂಮಿಯ ಪ್ರತಿಯೊಂದು

ಸಂಗತಿಯನ್ನೂ "ತನಗೇನು ಲಾಭ" ಎಂದು ಉಪಯುಕ್ತತೆಯ ಮಾನದಂಡದಲ್ಲೇ ಅಳೆಯುವ ಆಧುನಿಕ ಮನುಷ್ಯ, ಏನನ್ನು ತಾನೇ ಉಳಿಸಿಯಾನು ? ಈ ಸೃಷ್ಟಿಯ ಮಹಾಯಜ್ಞದಲ್ಲಿ ಯಜ್ಞಪಶುವಾಗಿ ಉರಿದುಹೋದಾನು.

**ಗಾಂಧೀಜಿಯ ನೋವು :**

೧೯೨೦ರ ದಶಕದಲ್ಲೇ ಮನುಷ್ಯನ ಈ ಆಕ್ರಮಣಕಾರೀ ಅಭಿವೃದ್ಧಿ ಪ್ರವೃತ್ತಿಯನ್ನು, ಮತ್ತು ಆತನ ಮನೋಭಾವದಲ್ಲೇ ಬಲವಾಗಿ ನೆಲೆಗೊಳ್ಳಲು ಆರಂಭಿಸಿದ್ದ ಕೊಳ್ಳುಬಾಕ ಸಂಸ್ಕೃತಿಯ (consumerism) ವಿನಾಶಕಾರೀ ಬೀಜಗಳನ್ನು ಗಮನಿಸಿದ ಗಾಂಧೀಜಿ, "ಬಯಕೆಗಳನ್ನು ಆವಶ್ಯಕತೆಗೆ ತಕ್ಕಂತೆ ಮಿತಿಗೊಳಿಸುವುದು ಕೈಗಾರಿಕಾಪೂರ್ವ ಸಮಾಜದ ಮೌಲ್ಯವಾಗಿತ್ತು. ಆದರೆ ಇದಕ್ಕೆ ವಿರದ್ಧವಾಗಿ ಬಯಕೆಗಳನ್ನು ಒಟ್ಟಾರೆಯಾಗಿ ಪ್ರಚೋದಿಸಿ ಬೆಳೆಸುವುದೇ ಆಧುನಿಕ ನಾಗರಿಕತೆಯ ಪ್ರಮುಖ ಲಕ್ಷಣವಾಗಿದೆ.... ಇದರ ಫಲವಾಗಿ ಮನುಷ್ಯ ತನ್ನ ಆಕ್ರಮಣಕಾರೀ ದುರಾಸೆಗಳನ್ನು ಸಿದ್ಧಿಸಿಕೊಳ್ಳಲು, ತನ್ನ ಪಾಶವೀ ಹಸಿವನ್ನು ತಣಿಸಿಕೊಳ್ಳಲು, ಕಾಲದೇಶಗಳನ್ನೇ ನಾಶಗೊಳಿಸಿ ಅಪಾಯಕಾರಿಯಾಗಿ ಮುನ್ನುಗ್ಗುತ್ತಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ನಾನು ಅರ್ಥೈಸಿಕೊಂಡಂತೆ ಇದೇ ಇಂದಿನ ನಾಗರಿಕತೆಯ ಉದ್ದೇಶವಾಗಿದ್ದರೆ, ನಾನು ಈ ನಾಗರಿಕತೆಯನ್ನು ಪೈಶಾಚಿಕ ನಾಗರಿಕತೆಯೆಂದು ಕರೆಯುತ್ತೇನೆ" ಎಂದು ಹತಾಶೆಯಿಂದ ನುಡಿದಿದ್ದರು.

**ರೆಡ್ ಇಂಡಿಯನ್‌ನ ವೈಜ್ಞಾನಿಕ ವಿವೇಕ :**

ತಂತ್ರಜ್ಞಾನದ ಭೀಕರದಿಂದ ರೆಡ್ ಇಂಡಿಯನ್ ಬುಡಕಟ್ಟು ಜನಾಂಗವನ್ನು ನಿರ್ನಾಮಮಾಡಲು ಹೊರಟ ಬಿಳಿಯರಿಗೆ ನಾಯಕ ನಿಯೊಟಲ್ ಅಂದು ಎಸೆದ ಸವಾಲು ನೋಡಿ: "ಬಿಳಿಯರು ನಮ್ಮ ಆಲೋಚನೆಗಳನ್ನು ಅರ್ಥ ಮಾಡಿಕೊಳ್ಳಲಾರರು. ಅವರ ಪಾಲಿಗೆ ಈ ಭೂಮಿಯು ಒಂದು ನಿರ್ಜೀವ ಆಸ್ತಿ; ಅವರಿಗೆ ಅದು ಕಾಣುವುದೇ ಕೊಳ್ಳೆ ಹೊಡೆಯಲು ಇರುವ ಒಂದು ಆಸ್ತಿಯಾಗಿ.... ನಿಜವೇ; ನಾವು ಅನಾಗರಿಕರು. ಕಾಡು ಮನುಷ್ಯರು. ಬಿಳಿಯರು ನಮ್ಮೊಳಗೆ ಇಳಿಯುವುದಿಲ್ಲ.... ಗಾಳಿ ಬಹು ಅಮೂಲ್ಯ. ಪಶು, ಪಕ್ಷಿ, ಕೀಟ, ಮರ, ಮನುಷ್ಯ ಎಲ್ಲರಿಗೂ ಗಾಳಿ ಬೇಕು. ಆದರೆ ಬಿಳಿಯರಿಗೆ ಇದರ ಪರಿವೆಯೇ ಇಲ್ಲ ಗಾಳಿಯನ್ನೂ ಮಲಿನಗೊಳಿಸಿದ್ದಾರೆ. ಹಲವಾರು ದಿನಗಳಿಂದ ಮರಣದ ಹಾಸಿಗೆಯ ಮೇಲೆ ಇರುವವರಂತೆ ಅವರು ಹೊಲಸುಗೆಟ್ಟು ಹೋಗಿದ್ದಾರೆ... ನಾವು ಅನಾಗರಿಕರು. ಸಾವಿರಾರು ಕಾಡೆಮ್ಮೆಗಳನ್ನು ಮೋಜಿಗಾಗಿ ಕೊಂದುಹಾಕುವುದನ್ನು ಊಹಿಸುವುದೂ ನಮ್ಮಿಂದಾಗದು. ಪ್ರಾಣಿಗಳ ಮೇಲೆ ಪೌರುಷ ತೋರಿಸುವ ಹಕ್ಕು ನಮಗಿಲ್ಲ.... ಈ ಭೂಮಿ ಅನ್ನದಾತೆ ಎಂದು ಮನದಟ್ಟು ಮಾಡಿಕೊಳ್ಳಿ. ಈ ಭೂತಾಯಿಗೆ ಏನು ಸಂಭವಿಸಲಿದೆಯೋ ಅದು ನಮಗೆಲ್ಲಾ ಸಂಭವಿಸಲಿದೆ. ಹೇಗೆ ರಕ್ತವು ಒಂದು ಕುಟುಂಬವನ್ನು ಒಂದುಗೂಡಿಸುವುದೋ ಹಾಗೆ ಭೂಮಿಯು ವಿಶ್ವದ ಸಕಲ ಜೀವರಾಶಿಯನ್ನು ಒಂದುಗೂಡಿಸುತ್ತದೆ. ಜೈವಿಕ ಸಮತೋಲನವನ್ನು ಹದಗೆಡಿಸುವುದೆಂದರೆ ಸಕಲ ಜೀವರಾಶಿಗೆ ಬಗೆಯುವ ದ್ರೋಹವಾಗುತ್ತದೆ.... ಬಿಳಿಯರೇ, ನೀವು ನೆಲಸಿರುವ ಈ ನೆಲವನ್ನು ಮಲಿನಗೊಳಿಸುತ್ತ ಹೋದರೆ ಒಂದು ದಿನ ನೀವೂ ಕೂಡಾ ಹೊಲಸಿನಲ್ಲಿ ಬಿದ್ದು ಉಸಿರುಗಟ್ಟಿ ಸತ್ತು ಹೋಗಬಹುದು.... ನೀವು ಅಧಿಕಾರದ ಮದದಿಂದ ಈ ಕ್ಷಣದಲ್ಲಿ ಪ್ರಜ್ವಲಿಸಿ ಹೊಳೆಯುತ್ತಿದ್ದೀರಿ. ಇದು ಆರಲಿರುವ ದೀಪದ ಹೊಳಪಾಗಿರಬಹುದು.... "- ಹೀಗೆ

ಸಾಗುತ್ತದೆ ೧೪೦ ವರ್ಷಗಳ ಹಿಂದೆ ಆತ ಉದ್ಗರಿಸದ ವ್ಯಂಗ್ಯಪೂರಿತ ವೈಜ್ಞಾನಿಕ ಸತ್ಯದ ಮಾತುಗಳು!

**ಆಧುನಿಕನ ಅವೈಜ್ಞಾನಿಕ ದುರ್ಬುದ್ಧಿ :**

ಎಲ್ಲಿ ಬತ್ತಿತು ವೈಜ್ಞಾನಿಕಯುಗದಲ್ಲಿರುವವರೆಂದು ಬೀಗುವ ನಮ್ಮ ವೈಜ್ಞಾನಿಕ ವಿವೇಕ ? ಭೂತಾಯಿಯ ಜೊತೆ ಸಾಮಾನ್ಯ ಮನುಷ್ಯನ ಸಂಬಂಧ, ತಾಯಿ-ಮಗುವಿನ ಸಂಬಂಧದಂತೆ, ತಾಯಿಯ ಮೊಲೆಹಾಲನ್ನು ಕುಡಿಯುವಷ್ಟರ ಮಟ್ಟಿಗೆ ಮಗು ತಾಯಿಯನ್ನು ಶೋಷಣೆ ಮಾಡುತ್ತದೆ ಎಂದುಕೊಳ್ಳಿ. (ಹಾಗೆ ನೋಡಿದರೆ ಶೋಷಣೆಯಿಲ್ಲದೆ ಬದುಕೇ ಇಲ್ಲ.) ಇಂಥ ಪ್ರಿಯ ಶೋಷಣೆಯನ್ನು ತಾಯಿ ಬಯಸುತ್ತಾಳೆ, ಮಗುವಿಗೆ ತನ್ನನ್ನೇ ತಾನು ಕೊಟ್ಟುಕೊಳ್ಳುತ್ತಾಳೆ. ತಾನೂ ಬೆಳಗುತ್ತಾಳೆ. ಆದರೆ ಮೊಲೆಹಾಲು ಕುಡಿಯುವ ಅದೇ ಮಗು ತಾಯಿಯ ರಕ್ತ ಹೀರಲು ಆರಂಭಿಸಿದಾಗ ಮಾತ್ರ ಸಮಸ್ಯೆ ಉದ್ಭವಿಸುತ್ತದೆ. ತಾಯಿ-ಮಗು ಇಬ್ಬರೂ ಸಾಯುತ್ತಾರೆ. ನಾಳೆಗಾಗಿ ಕೂಡಿಡುವ ಆರ್ಥಿಕ ಮನುಷ್ಯನಿಗೆ ತಾಯಿಯ ಸತ್ವವನ್ನೇ ಹೀರಿ ಅವಸರವಸರದಲ್ಲಿ ರಾಕ್ಷಸನಂತೆ ಬೆಳೆಯುವ ಆಸೆ. ಭೂಮಿಯ ಮೇಲೆ ತನ್ನ ಅಗತ್ಯಕ್ಕಾಗಿ ಉತ್ತು ಗೀರು ಮಾಡಿ ಬೆಳೆ ತೆಗೆದು ರೈತ ಭೂಮಿಗೆ ಕೃತಜ್ಞತೆ ಸಲ್ಲಿಸಿದರೆ, ಇಂದಿನ ಆಧುನಿಕ ಮನುಷ್ಯ ಭೂಮಿಯನ್ನು ದುರಾಸೆಯಿಂದ ಅಗೆಯಲು, ಬಗೆಯಲು, ಸೀಳಲು ಆರಂಭಿಸಿದ್ದಾನೆ. ಆತನಿಗೆ ಜೀವ ಪಾವಿತ್ರ್ಯತೆಯ ಕಲ್ಪನೆಯೇ ಇಲ್ಲ. ಪಾವಿತ್ರ್ಯತೆಯ ಕಲ್ಪನೆಯೇ ಇಲ್ಲದವನಿಗೆ ಕಲ್ಲು, ಮಣ್ಣು, ಮರಮಟ್ಟು ಎಲ್ಲವೂ ತನ್ನ ಭೋಗಕ್ಕಾಗಿ. ಎಲ್ಲವೂ ಹಣದ ಲೆಕ್ಕಾಚಾರ. ಒಂದು ಮರ ಕಂಡಾಗ, ಅದರ ವಿಶಾಲ ಹರವು, ಅದು ನೀಡುವ ಪರಿಶುದ್ಧ ತಂಪು ಗಾಳಿ, ಅದರ ಅನನ್ಯ ಸೌಂದರ್ಯ - ಯಾವುದೂ ಕಾಣುವುದಿಲ್ಲ. "ಈ ಮರ ಕಡಿದು ಮೋಪು ಮಾಡಿ ಮಾರಿದರೆ ಎಷ್ಟು ಹಣ ಗಿಟ್ಟೀತು ?" ಎಂದು ಮಾತ್ರ ಲೆಕ್ಕ ಹಾಕುತ್ತಿರುತ್ತಾನೆ. ಈ ಮನೋಭಾವವೇ ಅವೈಜ್ಞಾನಿಕ.

ಇಂದಿನ ನಮ್ಮ ಆಧುನಿಕರ ಅವೈಜ್ಞಾನಿಕ ಮನೋಭಾವಕ್ಕೆ ಎಷ್ಟು ನಿದರ್ಶನಗಳನ್ನೂ ಕೊಡಬಹುದು. ಇಂದಿನ ಮಾರುಕಟ್ಟೆ ಅರ್ಥನೀತಿಯೇ ಅತ್ಯಂತ ಅವೈಜ್ಞಾನಿಕವಾದದ್ದು. ಇರುವ ಒಂದೇ ಭೂಮಿಯ ಸಂಪತ್ತನ್ನು ಬೇಕಾಬಿಟ್ಟಿ ಬಳಸುವುದೇ ಅವೈಜ್ಞಾನಿಕ. ಉದಾಹರಣೆಗೆ, ಸುಮಾರು ೨೦೩೧ನೆಯ ಇಸವಿಗೆ ಈ ಭೂಮಿಯಲ್ಲಿ ಪೆಟ್ರೋಲ್ ದಾಸ್ತಾನು ಮುಗಿಯಬಹುದಂತೆ. ಕಡಿಮೆ ಲಭ್ಯವಿರುವ ಸಂಪತ್ತನ್ನು ಮಿತವಾಗಿ ಬಳಸುವುದು ವೈಜ್ಞಾನಿಕ ವಿವೇಕ. ಚಾಪೆಯಿದ್ದಷ್ಟೇ ಕಾಲು ಚಾಚಬೇಕೆನ್ನುವ ಅನುಭವದ ಮಾತು ವೈಜ್ಞಾನಿಕ ವಿವೇಕದಿಂದ ಹೊರಹೊಮ್ಮಿದಂಥದು. ಇಂಧನದ ಇಂಥ ಬಿಕ್ಕಟ್ಟಿರುವಾಗ, ಒಬ್ಬೊಬ್ಬ ಒಂದೊಂದು ವಾಹನವಿಟ್ಟುಕೊಂಡು ಸಂಚರಿಸುವುದು ವಿವೇಕವಲ್ಲ. ಇಂಥ ಸಮಯದಲ್ಲಿ ಸಾಮುದಾಯಿಕ ಸಂಚಾರೀ ವ್ಯವಸ್ಥೆ ನಿಜಕ್ಕೂ ಸೂಕ್ತ. ಆದರೆ ವಿಪರ್ಯಾಸವೆಂದರೆ, ಇಂದಿನ ಮಾರುಕಟ್ಟೆ ಪ್ರೇರಿತ ಪೈಪೋಟೀ ಅರ್ಥವ್ಯವಸ್ಥೆ ನೂರಾರು ಮಾಡೆಲಿನ ಕಾರುಗಳನ್ನು ಹೊರತರುತ್ತಿದೆ. ಇದು ಅತ್ಯಂತ ಅವೈಜ್ಞಾನಿಕ ಪ್ರಗತಿಯ ಮಾದರಿ.

ಇಂದು ಭಾರತ ಮತ್ತು ಚೀನಾ ಅಮೇರಿಕಾದ ರೀತಿಯ ಭೋಗಜೀವನಕ್ಕೆ ಹಪಹಪಿಸುತ್ತಿದೆ. ಆದರೆ ಅಮೇರಿಕಾದ ಅನುಭೋಗಮಟ್ಟ ನಮ್ಮದಕ್ಕಿಂತ ೮೦ ಪಟ್ಟು ಹೆಚ್ಚಿದೆ. ನಮ್ಮೆರಡು ದೇಶಗಳಲ್ಲಿ ಜಗತ್ತಿನ ೩೯ ಶೇಕಡಾ ಜನರು ವಾಸಿಸುತ್ತಿದ್ದಾರೆ. ಇಷ್ಟೊಂದು ಮಂದಿಯ ಜೀವನಶೈಲಿಯನ್ನು ಅಮೇರಿಕಾದ ಜೊತೆ ಸರಿದೂಗಿಸಲು, ನಮ್ಮ ಭೂಮಿಯ ಗಾತ್ರದ ಸುಮಾರು ೧೨ ಭೂಮಿಗಳ

ಸಂಪನ್ಮೂಲಗಳು ಬೇಕಾದೀತಂತೆ. ಅಂದರೆ ಜಗತ್ತು ಅಮೇರಿಕಾದ ಜೀವನಮಟ್ಟಕ್ಕೇರಲು ಹವಣಿಸುವುದೆಂದರೆ ಮಾನವ ಜನಾಂಗ ಆತ್ಮಹತ್ಯೆ ಮಾಡಿಕೊಂಡಂತೆ. ಇಂಥ ಪ್ರಗತಿ ಮಾದರಿಯೇ ಅವೈಜ್ಞಾನಿಕ; ಮಾತ್ರವಲ್ಲ, ಜಗತ್ತಿನ ಕೇವಲ ೫ ಶೇಕಡಾ ಜನರಿರುವ ಅಮೇರಿಕನ್ನರು ಈ ಜಗತ್ತಿನ ಸುಮಾರು ೨೫ ಶೇಕಡಾ ಸಂಪತ್ತನ್ನು ಕಬಳಿಸುವುದಂತೂ ಅಷ್ಟೇ ಅವೈಜ್ಞಾನಿಕ ಮಾತ್ರವಲ್ಲ ಅನೈತಿಕ ಕೂಡ. ಬಡರಾಷ್ಟ್ರಗಳ ಸಜ್ಜಿಡಿಯ ಮೇಲೆ ಅಮೇರಿಕಾ ತನ್ನ ಭೋಗಜೀವನ ನಡೆಸುತ್ತಿದೆ. ಜಗತ್ತಿನಲ್ಲಿ ಅಮೇರಿಕಾ ಜೀವನಕ್ರಮ ಒಂದು ಕ್ಯಾನ್ಸರ್ ರೀತಿಯ ಬೆಳವಣಿಗೆ, ಮತ್ತು ಇದು ಇಡಿಯ ಜಗತ್ತಿನ ಉಳಿವಿಗೇ ಮಾರಕವಾದಂಥದು. ನಮ್ಮ ಅವೈಜ್ಞಾನಿಕ ನಡವಳಿಕೆಗೆ, ನಮ್ಮ ಅಜ್ಞಾನಕ್ಕೆ ಇಂಥ ನೂರೊಂದು ಉದಾಹರಣೆಗಳನ್ನು ಕೊಡಬಹುದು.

**ಭೂಮಿ ಯಾರಿಗೂ ಸೇರಿದ್ದಲ್ಲ :**

ಇರುವುದು ಒಂದೇ ಭೂಮಿ. ಈ ಭೂಮಿ ಯಾರಿಗೂ ಸೇರಿದ್ದಲ್ಲ. ನಾವು ಇಂದು ಇದ್ದು ನಾಳೆ ಹೋಗುವವರು. ನಮ್ಮನ್ನು ಪೊರೆಯುವ, ಲಾಲನೆ-ಪಾಲನೆ ಮಾಡುವ ಭೂತಾಯಿಯ ಮೈಯನ್ನು ಮಲಿನ ಮಾಡಲು ನಮಗೆ ಹಕ್ಕನ್ನು ಕೊಟ್ಟವರಾದರೂ ಯಾರು ? ಈ ನೆಲ ಮನುಷ್ಯನಿಗೆ ಮಾತ್ರ ಬಂದ ಬಳುವಳಿಯಲ್ಲ. ಇತರ ಅಸಂಖ್ಯ ಜೀವಿಗಳಂತೆ ಮಾನವಕೂಡ ಒಂದು ಜೀವಿಜಾತಿ ಅಷ್ಟೆ. ಜೀವಿಗಳ ಈ ಸಂಕೀರ್ಣ ಜಾಲವನ್ನು ಮನುಷ್ಯ ನೇಯ್ದುದಲ್ಲ; ಸೃಷ್ಟಿಸಿದ್ದಂತೂ ಅಲ್ಲವೇ ಅಲ್ಲ. ಸಮಸ್ತ ಜೀವಜಾಲಕ್ಕೆ ಇಲ್ಲಿ ಬದುಕುವ ಹಕ್ಕಿದೆ. ಈ ಜಾಲಕ್ಕೆ ಆತ ಏನೇ ವಿಪತ್ತು ತಂದರೂ ತನಗೆ ತಾನೇ ಕುತ್ತು ತಂದುಕೊಂಡಂತೆ. ಈ ಭೂಮಿಗೆ ದುರ್ಗತಿ ಬಂತೆಂದರೆ ಮಾನವನಿಗೂ ಅದೇ ಗತಿ ಬಂತೆಂದೇ ಅರ್ಥ. ಹಾಗಾಗಿ ಇದ್ದಷ್ಟು ದಿನ ನಾವು ವಿನಯದಿಂದ ಸ್ವಚ್ಛ ಬದುಕು ಬದುಕಿ, ಸ್ವಚ್ಛ ಭೂಮಿಯನ್ನು ನಾಳೆಗೆ ಉಳಿಸಿ ನಮ್ಮ ಮುಂದಿನ ಪೀಳಿಗೆಗೆ, ಸಮಸ್ತ ಜೀವಕೋಟಿಗೆ ಬಿಟ್ಟು ತೆರಳುವ ನೈತಿಕ ಹೊಣೆ ನಮ್ಮ ಮೇಲಿದೆ.

ಆದರೆ, ಈ ವಿವೇಕ ಬಂದೀತೆ? ಮನುಷ್ಯ ಈ ತಂತ್ರಜ್ಞಾನಯುಗದಲ್ಲಿ ವೇಗ ಮತ್ತು ರಭಸಕ್ಕೊಳಪಟ್ಟಿದ್ದಾನೆ. ನಿಸರ್ಗದಲ್ಲಿ ಎಲ್ಲೂ ಕಾಣದ ಈ ವೇಗ ಅತ್ಯಂತ ಅಪಾಯಕಾರಿ. ಇದು ನಮ್ಮ ಅವಘಡದ ಸಾಧ್ಯತೆಯನ್ನು ಹೆಚ್ಚಿಸಿದೆ. ವೇಗದ ಈ ಬದುಕಲ್ಲಿ ಅಂತಃನಿರೀಕ್ಷಣೆಗೆ, ಆತ್ಮಾವಲೋಕನಕ್ಕೆ ವ್ಯವಧಾನವಿಲ್ಲ. ಆತ್ಮ ನಿಷೇಧದ ಪರಿಕಲ್ಪನೆಯೇ ಇಲ್ಲದ ಈ ತಂತ್ರಜ್ಞಾನಯುಗ, ಅದು ಎಷ್ಟೇ ಆಕರ್ಷಕವಾಗಿರಲಿ, ಆತ್ಯಂತಿಕವಾಗಿ ಅದು ರೆಡ್ ಇಂಡಿಯನ್ ನಾಯಕ ನಿಯೊಟಲ್ ಹೇಳಿದಂತೆ ಆರುವ ನಂದಾದೀಪದ ಹೊಳಪು ಮಾತ್ರ ಆಗಬಹುದು.

ಈ ಸ್ಫಟಿಕಶುಭ್ರ ಸತ್ಯವನ್ನು, ಯಾವೊಂದು ಪೂರ್ವಗ್ರಹವೂ ಇಲ್ಲದೆ, ಇಂದಿನ ಪ್ರಗತಿಮಾದರಿಯು ತನ್ನ ಆಕ್ರಮಣಶೀಲ ಮುನ್ನಡೆಗಾಗಿಯೇ ಸೃಷ್ಟಿಸಿಕೊಂಡ ಈ ಆಧುನಿಕ ಶಿಕ್ಷಣದ ಮಾನಸಿಕ ಹೊರೆಯಿಲ್ಲದೆ ನೇರವಾಗಿ ಮುಖಾಮುಖಿಯಾಗುವ ಧೈರ್ಯ ನಮಗಿದೆಯೆ? ಆಗ ಮಾತ್ರ ಮನುಷ್ಯನ ಮನೋಭಾವದಲ್ಲಿ ಜೀವಪ್ರೀತಿಯ ಮೂಲಭೂತ ಕ್ರಾಂತಿ ಸಾಧ್ಯ. ನಮ್ಮ ಮನೋಭಾವದಲ್ಲೇ ಮೆತ್ತಮೆತ್ತಗಿನ ಸರಳ ಜೀವನ ನಡೆಸುವ ಕ್ರಾಂತಿಯ ಕಿಡಿ ಹೊತ್ತಿಕೊಳ್ಳದೆ, ನಿಸರ್ಗವನ್ನು ಪ್ರತ್ಯೇಕವಾಗಿ ರಕ್ಷಿಸಲು ಬರುವುದಿಲ್ಲ. ಆದರೆ, ಇದಕ್ಕೆ ಅಸಾಧಾರಣ ಧೈರ್ಯ ಬೇಕು. ಇಲ್ಲಿ ಮಾತಿಲ್ಲ, ಕೃತಿ ಮಾತ್ರ. ಇದು ಧೀರರ ಮಾರ್ಗ. ❒

# "ಧರ್ಮೋ ರಕ್ಷತಿ ರಕ್ಷಿತಃ"
# ನುಡಿಯನ್ನು ಪುಡಿಗುಟ್ಟಿದ ಗುಜರಾತ್

"ಪ್ರೀತಿ ಅನುಕಂಪಗಳು ಇರದಲ್ಲಿ, ನೀನು ಇತಿಹಾಸದ ನೆನಪುಗಳನ್ನು ಅಳಿಸಲು ಸಾಧ್ಯವಿಲ್ಲ. ಪ್ರೀತಿಯಿರುವಲ್ಲಿ, ಇತಿಹಾಸದ ನೆನಪುಗಳೇ ಇರುವುದಿಲ್ಲ"- ಜೆ. ಕೃಷ್ಣಮೂರ್ತಿ.

ಗುಜರಾತಿನ ಗೋಧ್ರಾದಲ್ಲಿ ನಡೆದ ಬರ್ಬರ ಹಿಂಸಾಕಾಂಡ, ಮತ್ತು ಅದಕ್ಕೆ ಪ್ರತಿಯಾಗಿ ರಾಜ್ಯಾದ್ಯಂತ ನಡೆದ ಸಾವಿರಾರು ಮುಗ್ಧ ಜನರ ಸಾಮೂಹಿಕ ಹತ್ಯೆ ನಮ್ಮ ಎದೆ ನಡುಗಿಸುವಂಥದು. ಮೊದಲು ನಡೆದ ಗೋಧ್ರಾ ಹಿಂಸೆಗೆ ನಂತರ ನಡೆದ ಸಾಮೂಹಿಕ ಹತ್ಯೆ ತತ್‌ಕ್ಷಣದ ಪ್ರತಿಕ್ರಿಯೆ ಎಂದು ಸಮರ್ಥಿಸುವವರು, ಗೋಧ್ರಾ ಹಿಂಸೆಯೂ ಕಳೆದ ಹತ್ತು ವರ್ಷಗಳಲ್ಲಿ ರಾಜಕೀಯ ಪ್ರೇರಿತ ಉದ್ರೇಕಕಾರಿ ಧಾರ್ಮಿಕ ಕ್ರಿಯೆಗಳಿಂದ ಸತತ ದಮನಕ್ಕೊಳಗಾದವರ ಅದುಮಿಟ್ಟ ಭಾವನೆಗಳ ಹಠಾತ್ ಸ್ಫೋಟ ಎಂಬುದನ್ನೂ ಮರೆಯಬಾರದು. ೧೯೦೮ರಲ್ಲಿ ಸ್ವಾತಂತ್ರ್ಯ ಚಳವಳಿಯ ನೆಪದಲ್ಲಿ ನಮ್ಮ ಉಗ್ರವಾದಿಗಳು ಇಂಗ್ಲಿಷರನ್ನು ಕೊಂದಾಗ ಗಾಂಧೀಜಿ, "ಇಂದು ಬ್ರಿಟಿಷರ ಮೇಲೆ ಎಸೆದ ಬಾಂಬುಗಳನ್ನು ಇಂಗ್ಲಿಷರು ಈ ನೆಲಬಿಟ್ಟು ತೆರಳಿದ ಮೇಲೆ ಭಾರತೀಯರ ಮೇಲೆಯೇ ಗುರಿಯಿಡಲಾಗುವುದು" ಎಂದು ನೊಂದು ನುಡಿದಿದ್ದರು. ಈ ಮಾತನ್ನು ನೆನಪಿಸಿಕೊಳ್ಳುತ್ತಾ ಗಾಂಧೀಜಿಯ ಮೊಮ್ಮಗ ರಾಜ್ ಮೋಹನ್‌ಗಾಂಧಿ, "ಇಂದು ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸಿದ ಬಹು ಸಂಖ್ಯಾತ ಉಗ್ರವಾದಿಗಳು, ನಾಳೆ ತಮ್ಮ ಸಮುದಾಯದ ಮೇಲೆಯೇ

---

ಲಂಕೇಶ್ ಪತ್ರಿಕೆ (ವಿಶೇಷ ಲೇಖನ) ಏಪ್ರಿಲ್, ೧೭, ೨೦೦೨

ತಿರುಗಿಬೀಳುತ್ತಾರೆ" ಎಂದು ಗುಜರಾತಿನ ಹಿಂಸೆಯನ್ನು ಕಂಡು ವಿಷಾದದಿಂದ ನುಡಿದಿದ್ದಾರೆ. ಹಿಂಸೆಯು ಒಂದು ಚಟವಾಗುವ ಅಪಾಯವನ್ನು ಇದು ಸೂಚಿಸುತ್ತದೆ.

ಹಿಂಸೆ - ಪ್ರತಿಹಿಂಸೆಗಳಿಗೆ ತುದಿಮೊದಲೆಂಬುದಿಲ್ಲ. ಹಿಂಸೆ ಯಾವಾಗಲೂ ಹಿಂಸೆಯೇ. ಅದು ಮತ್ತಷ್ಟು ಹಿಂಸೆಯನ್ನು ಬೇಡುತ್ತದೆ. ಯಾವ ರೀತಿಯಲ್ಲೇ ಆಗಲಿ, ಹಿಂಸೆಯನ್ನು ಸಮರ್ಥಿಸುವುದು ನಮ್ಮೊಳಗಿನ ಪೈಶಾಚಿಕತೆಯ ವ್ಯಕ್ತರೂಪವೆನ್ನದೆ ವಿಧಿಯಿಲ್ಲ. ಕೆಲವೇ ಮಂದಿ ಉಗ್ರ ಮತಾಂಧರಿಂದ ಮತ್ತು ಆತಂಕವಾದಿಗಳಿಂದ ನಡೆಯುತ್ತಿರುವ ಇಂಥ ಅಮಾನುಷ ಕ್ರೌರ್ಯ, ದೈನಂದಿನ ಕಾಯಕದ ನಡುವೆ ಸಂಕಷ್ಟದಿಂದ ಬದುಕುತ್ತಿರುವ ಅಸಂಖ್ಯಾತ ಸಾಮಾನ್ಯ ಜನರ ಬಲಿ ತೆಗೆದುಕೊಳ್ಳುತ್ತಿರುವುದು ಅತ್ಯಂತ ದುಃಖದ ವಿಷಯ. ಈ ವಿದ್ಯಮಾನ ಈ ದೇಶದಲ್ಲಿ ನಾಗರಿಕ ಸಮಾಜ ಎಂಬುದೊಂದಿದೆಯೇ ಎಂಬ ಅನುಮಾನವನ್ನು ನಮ್ಮಲ್ಲಿ ಮೂಡಿಸುತ್ತದೆ. ಒಂದು ನಾಗರಿಕ ಸಮಾಜದಲ್ಲಿ ಅನ್ಯಾಯ-ಬರ್ಬರತೆಗಳಿಂದ ಪ್ರಜೆಗಳನ್ನು ರಕ್ಷಿಸಲು ಎಲ್ಲ ವಿಭಿನ್ನ ಸಮುದಾಯಗಳೂ ಒಪ್ಪಿಕೊಂಡ ಸಂವಿಧಾನಾತ್ಮಕ ಕಾನೂನು ಕಟ್ಟಳೆಗಳಿವೆ. ಕಾನೂನಿನ ಮುಂದೆ ಎಲ್ಲರೂ ಸಮಾನರು. ದುರಾದೃಷ್ಟವಶಾತ್ ಇಂದು ಈ ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನ "ಕ್ಯಾಂಗರೂ ನ್ಯಾಯ" ಅಥವಾ ಅಮೇರಿಕಾದ "ಲಿಂಚಿಂಗ್ ಕಾನೂನು" ಕ್ರಮವನ್ನು ಹೋಲುತ್ತದೆ.

ಯಾವುದೇ ನೈಜ ಧಾರ್ಮಿಕತೆ ಧರ್ಮ ಸಾಮ್ರಾಜ್ಯವನ್ನಾಗಲೀ, ಮಠ, ಮಂದಿರ, ಮಸೀದಿ, ಚರ್ಚುಗಳನ್ನಾಗಲೀ ಹಿಂಸೆಯ ತಳಕಟ್ಟಿನ ಮೇಲೆ ಕಟ್ಟಲು ಹೇಳುವುದಿಲ್ಲ. ಧರ್ಮದ ಮೂಲಭೂತ ಕಾಳಜಿ ಪಾವಿತ್ರ್ಯತೆಯ ಕಲ್ಪನೆ ಮತ್ತು ಜೀವ ಪ್ರೀತಿ. ಅಭಯದತ್ತ ಪಯಣವೇ ಧರ್ಮದ ಆತ್ಯಂತಿಕ ಗುರಿ. ಇನ್ನೊಬ್ಬರಲ್ಲಿ ಭೀತಿ ಹುಟ್ಟಿಸುವುದು ಅಧರ್ಮ. ಪಾವಿತ್ರ್ಯತೆಯ ಕಲ್ಪನೆಯೇ ಇಲ್ಲದ ನಾಸ್ತಿಕ ಮಾತ್ರ ಧರ್ಮದ ಹೆಸರಿನಲ್ಲಿ ಭೀತಿವಾದವನ್ನು ಹುಟ್ಟುಹಾಕಿ, ತನ್ನ ಸ್ವಾರ್ಥ ಸಾಧಿಸಿಕೊಂಡಾನು.

ಕೋಟ್ಯಂತರ ಮಂದಿ ನಮ್ಮ ದೇಶದಲ್ಲಿ ಊಟದಿಂದ ಊಟದವರೆಗೆ ಹಸಿವು - ದಾರಿದ್ರ್ಯಗಳ ತೀವ್ರ ಜೀವನ ನಡೆಸುತ್ತಿರುವಾಗ, ಇಂಥ ಅಮಾಯಕ ಮಂದಿಯ ನಡುವೆ ಧಾರ್ಮಿಕ ಅಸಹನೆ - ಅಪನಂಬಿಕೆ - ಪ್ರತೀಕಾರ ಮನೋಭಾವನೆಗಳನ್ನು ಸೃಷ್ಟಿಸುವುದು ಅಧರ್ಮ. "ಧರ್ಮೋ ರಕ್ಷತಿ ರಕ್ಷಿತಃ" ಎಂಬ ಮಾತು "ಧರ್ಮದ ತಿರುಳಾದ ಪ್ರೀತಿ, ಸಮಾನತೆ, ಸಹಬಾಳ್ವೆಯನ್ನು ನಾವು ರಕ್ಷಿಸಿದರೆ ಅವು ನಮ್ಮನ್ನು ರಕ್ಷಿಸುತ್ತದೆ" ಎಂದು ಸಾರುತ್ತದೆಯೇ ವಿನಾ ಸಂಘಟನೆ, ಬಲ ಪ್ರದರ್ಶನ, ಸಂಘರ್ಷಗಳ ಮೂಲಕ ಧರ್ಮದ ರಕ್ಷಣೆಯನ್ನಲ್ಲ. ವಿವೇಕಾನಂದರು ಉದ್ಧರಿಸುವ "ಏಳು ಎದ್ದೇಳು, ಗುರಿಮುಟ್ಟುವ ತನಕ ನಿಲ್ಲದಿರು"ಎಂಬ ಉಪನಿಷತ್ ಘೋಷಣೆಯು, "ನಿನ್ನೊಳಗಿಂದ ಎದ್ದೇಳು, ಜಾಗೃತನಾಗು, ಸತ್ಯ ಸಾಕ್ಷಾತ್ಕಾರದ ತನಕ ಎಲ್ಲೂ ನಿಂತ ನೀರಾಗಬೇಡ" ಎಂಬ ಆತ್ಮೋನ್ನತಿಯ ಮಾತೇ ವಿನಾ "ದಂಡ ಹಿಡಿದು ಧರ್ಮದ ಬಾಹ್ಯ ತೊಗಲುಕೋಟೆಯನ್ನು ರಕ್ಷಿಸಲು ಅಣಿಯಾಗು" ಎಂದಲ್ಲ. ಧರ್ಮವು ನಮ್ಮೊಳಗಿನ ಬೆಳಗುವಿಕೆಗೆ ಸಂಬಂಧಪಟ್ಟದ್ದು, ಅಂತರಂಗವನ್ನು ಅರಳಿಸುವಂಥದು. ನಮ್ಮ ಭಾವವನ್ನು ಪರಿಶುದ್ಧಗೊಳಿಸಿ ನಮ್ಮ ಸುತ್ತಲಿನ ಪರಿಸರದ ಜೊತೆ ಸಮರಸದಿಂದ ಬದುಕುವ ಕಲೆಯನ್ನು ಕಲಿಸುವಂಥದು. ನಮ್ಮ ವ್ಯಕ್ತಿತ್ವದ ಸಂಪೂರ್ಣ ವಿಕಾಸವೇ

ಧರ್ಮದ ನಿಜವಾದ ಉದ್ದೇಶ. ಇನ್ನು ಸಾಮಾಜಿಕ ನೆಲೆಯಲ್ಲಿ ಧರ್ಮ, ಮಹಾಭಾರತದಲ್ಲಿ ಭೀಷ್ಮರು ನಿರ್ವಚಿಸುವಂತೆ ಸಮಾಜದ ಸಮಷ್ಟಿ ಹಿತ ಕಾಯುವಂಥದು, ಎಲ್ಲ ವರ್ಗಗಳನ್ನೂ ಒಂದು ಗೂಡಿಸುವಂಥದು ಮತ್ತು ಸಮಾಜದ ಎಲ್ಲಾ ಸ್ತರಗಳಲ್ಲಿ ಶಾಂತಿ - ಸಮರಸಗಳನ್ನು ನೆಲೆಗೊಳಿಸುವಂಥದು.

ಇಂದು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಮತೀಯ ಬಲಪ್ರದರ್ಶನಗಳು, ಉದ್ವೇಗಪೂರ್ಣ ಆಡಂಬರಗಳು, ಬಹಿರಂಗ ಅಸೌಂದರ್ಯ ನಡವಳಿಕೆಗಳು ಧರ್ಮದ ಮೂಲಸತ್ತ್ವವನ್ನೇ ಮರೆಮಾಚಿದೆ. ಇಡಿಯ ದೇಶದಲ್ಲಿ ಇಂದು ನಾವು ಧರ್ಮದ ಮೇಲಾಟಗಳನ್ನಷ್ಟೇ ಕಾಣುತ್ತಿದ್ದೇವೆಯೇ ಹೊರತು ನೈತಿಕ ಅನುಶಾಸನವು ಅಂತರ್ಗತವಾಗಿರುವ ಧಾರ್ಮಿಕ ಜೀವನವನ್ನಲ್ಲ. ಇಂಥ ಪುರೋಹಿತಶಾಹಿ (priestcraft) ವ್ಯಾಪಾರೀ ಧಾರ್ಮಿಕ ನೀತಿಯಿಂದಾಗಿಯೇ ಸದ್ಭಾವನೆ, ಮಾನವೀಯತೆಗಳು ಹಿಂದಕ್ಕೆ ತಳ್ಳಲ್ಪಟ್ಟು ಧರ್ಮದ ಹೆಸರಲ್ಲಿ ವಾದ-ವಿವಾದ, ತರ್ಕ-ಕುತರ್ಕಗಳು ಪ್ರದರ್ಶಿಸಲ್ಪಡುತ್ತಿವೆ.

ಮತೀಯ ಅಶ್ಲೀಲ ಬಾಹ್ಯ ಪ್ರದರ್ಶನಕ್ಕೂ ಧಾರ್ಮಿಕ ಜೀವನದ ಅಧಃಪತನಕ್ಕೂ ನೇರ ಸಂಬಂಧವಿದೆ. ಎಲ್ಲೆಲ್ಲಿ ಪುರೋಹಿತ ತಂತ್ರ ಪ್ರೇರಿತ ಧಾರ್ಮಿಕತೆ ಮೇಲ್ಮೆ ಪಡೆದಿದೆಯೋ ಅಲ್ಲಲ್ಲಿ ನೈಜ ಧಾರ್ಮಿಕತೆ ಅವನತಿಗೊಂಡದ್ದನ್ನು ನಾವು ಜಗತ್ತಿನ ಇತಿಹಾಸದುದ್ದಕ್ಕೂ ಗಮನಿಸಬಹುದು. ಇಂದು ನಮ್ಮ ಜನರು ಮೊರೆಹೋಗುವ ಹುಸಿ ಧಾರ್ಮಿಕ ಗುರುಗಳು, ವಿಲಾಸೀ ಸಂತರು, ಧರ್ಮವನ್ನು ಪ್ಯಾಕೇಜ್ ಮಾಡಿ ಕನ್ಸ್ಯೂಮರ್ ಸರಕಿನಂತೆ ಮಾರುವ ಹೈಟೆಕ್ ಯೋಗಾಚಾರ್ಯರು, ದೇವಾಲಯ - ಮಠ - ಮಸೀದಿಗಳನ್ನೂ ಉಗ್ರ ಧಾರ್ಮಿಕ ಸಂಘಟನೆಗಳ ಬೀಡಾಗಿ ಮಾಡಿಕೊಂಡು ಸಂಘಬಲದಿಂದ ವಿಜೃಂಭಿಸುವ ಪ್ರಾಪಂಚಿಕ ಮೋಹ ಪೀಡಿತ ಧಾರ್ಮಿಕ ನೇತಾರರು, ಜನರಿಗೆ ಇಂದು ಧರ್ಮದ ಸಿಪ್ಪೆಯನ್ನಷ್ಟೇ ಕೊಟ್ಟು ವಂಚಿಸುತ್ತಿದ್ದಾರೆ.

ಸಂಭಾವಿತರಾಗಿ ಬಾಳುವ ಮಧ್ಯಮವರ್ಗವಂತೂ ತಮ್ಮ ಪಶ್ಚಿಮಪ್ರೇರಿತ ಐಷಾರಾಮ ಸುಖದ ರಾಪಿನಿಂದ ತಮ್ಮ ಪ್ರಾಚೀನ ಸಂಸ್ಕೃತಿಯಲ್ಲಿರುವ ಸತ್ವಯುತವಾದ್ದಕ್ಕೂ, ಪರಕೀಯರಾಗಿ, ಅಂತಾರಾಷ್ಟ್ರೀಯ ಹೆದ್ದಾರಿಯಲ್ಲಿ ಮಾನಸಿಕ ಅಭದ್ರತೆಯಿಂದ ಬಳಲುವ ಅನಾಥರಾಗಿ ತಲ್ಲಣದಿಂದ ಬದುಕುತ್ತಾ ತಮ್ಮ "ಐಡೆಂಟಿಟಿ"ಗಾಗಿ ಉಗ್ರ ಧಾರ್ಮಿಕ ಮತಾಂಧರಾಗುತ್ತಿದ್ದಾರೆ.

ಭಾರತದಲ್ಲಿ ಧರ್ಮದ ಸಾರ್ವಜನಿಕೀಕರಣಕ್ಕೆ, ಸಾಮೂಹಿಕ ಮತಾಚರಣೆಗಳಿಗೆ ೨೦೦ ವರ್ಷಗಳಿಗಿಂತ ಹೆಚ್ಚಿನ ಇತಿಹಾಸವಿಲ್ಲ. ಹಿಂದೂಧರ್ಮವು ಸಾರರೂಪದಲ್ಲಿ ಗೃಹ್ಯಸೂತ್ರಗಳ ರೂಪದಲ್ಲಿ ಮನೆಯೊಳಗಿನ ಧಾರ್ಮಿಕ ಬದುಕಿಗೆ ಪ್ರಾಶಸ್ತ್ಯ ಕೊಡುತ್ತದೆ. ಎಲ್ಲ ವಿಧಿ ನಿಯಮಗಳೂ ಮನೆಯಲ್ಲಿ ಗೃಹಸ್ಥನು ಅನುಸರಿಸಬೇಕಾದ ನೈತಿಕ ಜೀವನಕ್ರಮವನ್ನು ನಿರ್ದೇಶಿಸುತ್ತದೆ ; ವೈಯಕ್ತಿಕ ಆತ್ಮೋನ್ನತಿ, ಕಾಯಕದ ಪ್ರಾಮಾಣಿಕ ಹಾಗೂ ತ್ಯಾಗದ ಸರಳ ಜೀವನಕ್ಕೆ ಒತ್ತುಕೊಡುತ್ತದೆ. ಆದರೆ ಮುಂದೆ ಯರೋಪಿನ 'ಸೆಮೆಟಿಕ್' ಧರ್ಮಗಳ ಪ್ರಭಾವದಿಂದ ಸಾರ್ವಜನಿಕ ಉಪಾಸನೆಯ ಹೊಸ ಮುಖವಾಡ ನಾವು ತೊಟ್ಟುಕೊಂಡಾಗ, ಮನೆಯಲ್ಲಿ ಧಾರ್ಮಿಕತೆಯೆಂಬುದು ಸಂಪೂರ್ಣ ಮರೆಯಾಯಿತು. ಮೌಲ್ಯರಹಿತ ಅಪವಿತ್ರ ಬದುಕು ಸಾಗಿಸಿಯೂ ಸಾರ್ವಜನಿಕ ನೆಲೆಯಲ್ಲಿ ಧಾರ್ಮಿಕ

ಮುಖವಾಡ, ಮುಖಂಡತ್ವ ಮಾತ್ರದಿಂದ ಧಾರ್ಮಿಕನೆನಿಸಿಕೊಳ್ಳುವ ಕೆಟ್ಟ ಪರಂಪರೆ ಆರಂಭವಾಯಿತು. ಇದರ ಫಲವಾಗಿ ಇಂದು ಎಂಥ ದುಷ್ಟನೂ ವೇಷ ಮಾತ್ರದಿಂದಲೇ ಧಾರ್ಮಿಕನೆನಿಸಿಕೊಂಡು ಬಿಡುವಷ್ಟು ನಾವು ನಮ್ಮ ಧರ್ಮ ಸಂಸ್ಕೃತಿಗಳ ಕುಲಗೆಡಿಸಿಬಿಟ್ಟಿದೇವೆ. ಇದು ಧರ್ಮದ ಅಧಃ ಪತನವಲ್ಲದೆ ಮತ್ತೇನು ?

ಅಯೋಧ್ಯೆಯಲ್ಲಾಗಲೀ, ಗುಜರಾತಿನಲ್ಲಾಗಲೀ, ಕಾಶ್ಮೀರದಲ್ಲಾಗಲೀ ಇಂದು ನಡೆಯುತ್ತಿರುವ ಮತೀಯತೆಯ ಲಜ್ಜೆಗೆಟ್ಟ ಸಾರ್ವಜನಿಕ ಪ್ರದರ್ಶನ ಕಂಡಾಗ ಉಪನಿಷತ್ - ವೇದಾಂತದ ಸಾರವೇ ಕುಸಿದು ಭಗ್ನಗೊಂಡು ನಿಜಕ್ಕೂ ಈ ನೆಲದಲ್ಲಿ ಧರ್ಮಗ್ಲಾನಿಯಾಗಿದೆ ಎಂದೆನಿಸುತ್ತದೆ. ಸದ್ಭಾವನೆ, ಹೃದಯ ಸಂಪನ್ನತೆಗಳು ಇಲ್ಲದಿದ್ದರೆ ಧರ್ಮಕ್ಕೆ ಏನು ಅರ್ಥ ? ಒಂದು ಧರ್ಮ ತನ್ನ ಅಂತಸ್ಸತ್ವದಿಂದ ಮಾತ್ರ ಶ್ರೀಮಂತವಾಗಿ ಉಳಿದೀತೇ ವಿನಾ ಕೇವಲ ಘೋಷಣೆಗಳಿಂದಲ್ಲ. ಧರ್ಮದ ಸುತ್ತ ಇಂದು ನಡೆಯುತ್ತಿರುವ ಕಸರತ್ತುಗಳೆಲ್ಲ ಅರ್ಥಹೀನ ಮತ್ತು ಧಾರ್ಮಿಕತೆಯನ್ನೇ ನಾಶಮಾಡುವ ಗುಣವುಳ್ಳಂಥದು.

**ಸಂತ ಪರಂಪರೆಗೇ ಕಳಂಕ ಹಚ್ಚುವ "ಆಧುನಿಕ" ಸಂತರು**

ಸಮಷ್ಟಿಹಿತ, ಪ್ರೀತಿ, ಸಮಾನತೆ, ಪರಧರ್ಮದ ಬಗ್ಗೆ ಗೌರವವನ್ನು ತೋರಿಸಿದ ರಾಮಕೃಷ್ಣ ಪರಮಹಂಸ, ರಮಣ, ತುಕಾರಾಮ, ಕಬೀರ, ನಾನಕ, ಚೈತನ್ಯ, ತುಳಸೀದಾಸ, ಮೀರಾ, ಅಕ್ಕ, ಬಸವಣ್ಣ, ಕನಕ, ಪುರಂದರ, ಸೂಫೀ ಸಂತರು, ಗಾಂಧಿಯಂಥ ಮಹಾನ್ ಸಂತರನ್ನು ಹೊಂದಿದ ನಾಡು ನಮ್ಮದು. ಧರ್ಮಧರ್ಮಗಳ ನಡುವೆ ಪ್ರೀತಿಯ ಸೇತುವೆಯಾಗಿ ತಮ್ಮ ಜೀವನವನ್ನೇ ಸವೆಸುತ್ತ ಬದುಕಿದ ಸಾಕಷ್ಟು ನಿದರ್ಶನಗಳು ಈ ಸಂತ ಮಹಾನುಭಾವರಲ್ಲಿ ಕಾಣಬಹುದು. ದುರಾದೃಷ್ಟವಶಾತ್ ಸಂತರೆಂದು ಇಂದು ಕರೆಸಿಕೊಳ್ಳುತ್ತಿರುವವರು ಸಾಮಾನ್ಯ ಗೃಹಸ್ಥರಿಗಿಂತಲೂ ಕ್ರೂರವಾಗಿ ನಡೆದುಕೊಳ್ಳುತ್ತಿರುವುದು ಕಂಡಾಗ ದುಃಖವಾಗುತ್ತದೆ. ಈ ಮಂದಿಗೆ ಪಾವಿತ್ರ್ಯತೆಯ ಕಲ್ಪನೆಯಿದೆಯೇ ಎಂಬ ಅನುಮಾನವುಂಟಾಗುತ್ತದೆ. ಸಂತರೂ ಹಿಂಸೆ-ಗಲಭೆಗಳನ್ನು ಪ್ರಚೋದಿಸುವಂತಾದರೆ ಅಮಾಯಕ ಜನರು ದಾರಿಗೆಡದಿರುತ್ತಾರೆಯೇ ?

**ನಾವು ಮಾಡಬಹುದಾದದ್ದು ಏನನ್ನು ?**

ಭಾರತದ ಬಹುದೊಡ್ಡ ತತ್ತ್ವಜ್ಞಾನಿಯಾದ ಗಾಂಧೀಜಿಯ ಮೊಮ್ಮಗ ರಾಮಚಂದ್ರ ಗಾಂಧಿ ಇಂದಿನ ಆಧ್ಯಾತ್ಮದ ಅವನತಿಯ ಬಗ್ಗೆ, "ನಿಜಕ್ಕೂ ಇಂದು ಅತ್ಯಂತ ಅಪಾಯದ ಅಂಚಿನಲ್ಲಿರುವುದು, ಸಾತ್ವಿಕ ಆಧ್ಯಾತ್ಮದ ಪರಂಪರೆಯ ಘನತೆ - ಗೌರವಗಳು. ಎಲ್ಲೆಲ್ಲೂ ವ್ಯಾಪಿಸುತ್ತಿರುವ 'ನಾನು' ಮತ್ತು 'ಅವರು' ಎಂಬ ಬೇಧ ದ್ವಂದ್ವ ಕಲ್ಪನೆಯು ನಾಗರಿಕತೆಯನ್ನು ಸಂಪೂರ್ಣ ವಿನಾಶದ ಆಘಾತದತ್ತ ಎಸೆಯುತ್ತಿದೆ" ಎಂದು ಖೇದದಿಂದ ಉಲ್ಲೇಖಿಸುತ್ತಾರೆ. 'ಸೆಕ್ಯುಲರಿಸಂ'ನ್ನು ವಿರೋಧಿಸುವ ಹಿಂದೂ ಮೂಲಭೂತ ಮತೀಯವಾದಿಗಳು, ತಮ್ಮ ಆಳವಾದ ಕೀಳರಿಮೆಯಿಂದಾಗಿಯೇ ಪಶ್ಚಿಮದ 'ಡೊಗ್ಮಾಟಿಕ್' ಮತತತ್ತ್ವಗಳಾದ ಒಬ್ಬ ಪ್ರವಾದಿ, ಒಂದು ಪವಿತ್ರ ಗ್ರಂಥ, ದೇವವಾಣಿ ಮುಂತಾದ ಮತ ಸಿದ್ಧಾಂತಗಳ ಮೇಲೆ ತಮ್ಮ ಧರ್ಮವನ್ನು ಪುನರ್ ವ್ಯಾಖ್ಯಾನಿಸಲು ಪ್ರಯತ್ನಿಸುವ ಮೂಲಕ ಈ ನೆಲದ ಪ್ರಾಚೀನ ನಾಗರಿಕತೆಯ 'ಸೆಕ್ಯುಲರ್' ಪರಂಪರೆಯನ್ನೇ ನಾಶ ಮಾಡುತ್ತಿದ್ದಾರೆ. ಇದರ

ಜತೆಗೆ ನಮ್ಮ ಅನೇಕ ಚಿಂತಕರೂ ಕೂಡಾ ಭಾರತದ ಬಹುಮುಖೀ ಸಾಂಸ್ಕೃತಿಕ ಚಿಂತನೆಯೊಳಗೇ ಇರುವ ಧರ್ಮ ವಿಮರ್ಶೆಯ ಸೆಕ್ಯೂಲರ್ ಪರಂಪರೆಯನ್ನು ಒಂದಿಷ್ಟೂ ಗುರುತಿಸಲಾರದಷ್ಟು ಈ ದೇಶದ ಒಟ್ಟು ಚಿಂತನ ಪರಂಪರೆಗೇ ಪರಕೀಯರಾದ ನಿದರ್ಶನಗಳೂ ಇವೆ. ಈ ಎರಡೂ ಬಣಗಳ ಮಧ್ಯೆ ಸಮನ್ವಯ ಸಾಧಿಸುವುದು ಹೇಗೆ ಎಂಬುದೇ ನಮ್ಮ ಎದುರಿರುವ ಮುಂದಿನ ಪ್ರಶ್ನೆಯಾಗಿದೆ.

ಈ ದೇಶದ ಶೇಕಡಾ ೯೫ ಜನರು ಧಾರ್ಮಿಕ ಶ್ರದ್ಧೆ ಉಳ್ಳವರಾಗಿರುವಾಗ, ಧರ್ಮದ ಒಟ್ಟು ಅವಹೇಳನವು ಕೇವಲ ಬೇಜವಾಬ್ದಾರಿತನವಾಗಿ ಬಿಡುತ್ತದೆ. ಈ ಒಟ್ಟಾರೆ ಅವಹೇಳನ, ಉದಾರೀ ಧಾರ್ಮಿಕರನ್ನು ಮತಾಂಧತೆಗೆ ತಳ್ಳಿ ಬಿಡುವ ಅಪಾಯವಿದೆ. ಇದನ್ನು ತಪ್ಪಿಸಬೇಕಾದರೆ, ಇಂದು ಎಲ್ಲಾ ಧರ್ಮಗಳ ಉದಾರವಾದೀ ಧಾರ್ಮಿಕ ಜನರು ಧರ್ಮದ ನಿಜವಾದ ಮೌಲ್ಯಗಳಾದ ಪ್ರೀತಿ, ಸಹಬಾಳ್ವೆ, ಸರಳ ಜೀವನ, ನ್ಯಾಯ - ಸಮಾನತೆಗಳನ್ನು ನಮ್ಮ ಮುಂದಿಗೆ ತಿಳಿಸಿಕೊಡಲು ಮುಂದಾಗಬೇಕು. ಅದಕ್ಕಾಗಿ ಧರ್ಮದೊಳಗೇನೇ ತೆರೆದ ಮನಸ್ಸಿನ ಸಾಮಾನ್ಯ ನೆಲೆ (liberal space) ಒಂದನ್ನು ನಿರ್ಮಿಸಿಕೊಂಡು ಅಲ್ಲಿ ಎಲ್ಲಾ ಧರ್ಮದ ಜನರೂ ಸೇರುವಂತಾಗಬೇಕು. ಬುದ್ಧ - ಬಸವ - ಗಾಂಧಿ - ಪರಮಹಂಸರೇ ಮೊದಲಾದ ಅನುಭಾವಿಗಳು ನಂಬಿದ ಸರ್ವಧರ್ಮ ಸಮಭಾವ, ವಿಶ್ವಬಂಧುತ್ವ, ಸಮಾನತೆಯ ಅಧ್ಯಾತ್ಮತತ್ತ್ವಕ್ಕೆ ಹೆಚ್ಚು ಹೆಚ್ಚು ಒತ್ತು ಕೊಡಬೇಕು. ಮುಖ್ಯವಾಗಿ ನಮ್ಮ ಪೇಟೆ - ಪಟ್ಟಣಗಳ, ಕಲಿತ ತರುಣ ತರುಣಿಯವರಿಗೆ ಯಾವುದು ಧಾರ್ಮಿಕತೆ ಅಲ್ಲ, ಯಾವುದು ನಿಜವಾದ ಧಾರ್ಮಿಕ ಜೀವನ ಎಂದು ತಿಳಿಸಿಕೊಡುವ ದೊಡ್ಡ ಜವಾಬ್ದಾರಿ ಪ್ರಜ್ಞಾವಂತ ಹಿರಿಯರಿಗೆ ಇದೆ.

ಎಲ್ಲಾ ಧರ್ಮಗಳು ಜೀವ ಪೋಷಕ ಮೌಲ್ಯಗಳನ್ನೇ ಸಾರುತ್ತವೆ. ಆದರೆ ಒಂದೊಂದು ಧರ್ಮದಲ್ಲಿ ಒಂದೊಂದು ಮೌಲ್ಯವು ಪ್ರಧಾನವಾಗಿ ಅಭಿವ್ಯಕ್ತಿಯಾದುದನ್ನು ಗಮನಿಸಬಹುದು. ಉಪನಿಷತ್ತುಗಳು, ಈ ಇಡೀ ವಿಶ್ವವು, ವ್ಯಕ್ತಪ್ರಪಂಚದ ಪ್ರತಿಯೊಂದು ಸಂಗತಿಯೂ ಒಂದಕ್ಕೊಂದು ಹೆಣೆದುಕೊಂಡಿರುವ ಅಖಂಡ ಜಾಲ. ಮನುಷ್ಯ ಈ ಅಖಂಡದಲ್ಲಿ ಒಂದು ಎಳೆ ಮಾತ್ರ. ಹಾಗಾಗಿ ಆತ ಈ ಅಂತರ್ಗತ ಅಖಂಡತ್ವಕ್ಕೆ ಧಕ್ಕೆ ಬರುದಂತೆ ಪೂರಕವಾಗಿ ತನ್ನ ಬದುಕನ್ನು ಶಾಂತಿ - ಸಹಕಾರ ಭಾವಗಳಿಂದ ಮೆತ್ತ ಮೆತ್ತಗೆಯಾಗಿ ರೂಪಿಸಿಕೊಳ್ಳಬೇಕು. ಇದೇ ಧಾರ್ಮಿಕ ಜೀವನವಲ್ಲದೆ ಧರ್ಮಕ್ಕೆ ಬೇರೆ ಸಹಸ್ರ ವ್ಯಾಖ್ಯೆಗಳಿಲ್ಲ ಎನ್ನುತ್ತೇವೆ. ಬುದ್ಧ, ಅನುಕಂಪ, ಆಸೆಯ ಸಂಯಮಗಳಿಗೆ ಒತ್ತು ಕೊಡುತ್ತಾನೆ. ಮಹಾವೀರ ಅಹಿಂಸೆ, ಅಸ್ವಾದಗಳ ಋಜುಮಾರ್ಗವನ್ನು ಬೋಧಿಸಿದರೆ, ಏಸುಕ್ರಿಸ್ತ ಕ್ಷಮೆ, ಜೀವಪ್ರೀತಿಗಳನ್ನು ಎತ್ತಿ ಹಿಡಿಯುತ್ತಾನೆ. ಮುಸಲ್ಮಾನ ಧರ್ಮವು ಬದುಕಿನ ಪರಿಶುದ್ಧತೆ, ಪಾವಿತ್ರ್ಯತೆ, ಋತಶೀಲ ಬದುಕನ್ನು ಸಾರುತ್ತದೆ. ಈ ಎಲ್ಲಾ ಜೀವ ಪೋಷಕ ಧಾರ್ಮಿಕ ತತ್ತ್ವಗಳನ್ನು ತನ್ನ ಜೀವನದಲ್ಲಿ ಏಕತ್ರವಾಗಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದ ನಮ್ಮ ಕಾಲದ ಅಪೂರ್ವ ವ್ಯಕ್ತಿ ಮಹಾತ್ಮಾ ಗಾಂಧಿ. ಈ ದೇಶ ಗಾಂಧಿಗೆ ಹತ್ತಿರವಾದಷ್ಟು, ವಿವಿಧತೆಯ ಸಂಪನ್ನತೆಯಿಂದ ಜಗತ್ತಿನಲ್ಲಿ ಮರೆದೀತು. ಗಾಂಧಿಯಿಂದ ದೂರ ಸರಿದಷ್ಟು ಮತಾಂಧ ರಾಷ್ಟ್ರವೆನಿಸಿಕೊಂಡು, ನಾಚಿಕೆಯಿಂದ ತಲೆ ತಗ್ಗಿಸುವಂತಾದೀತು, ಮಾತ್ರವಲ್ಲ, ಆತ್ಯಂತಿಕವಾಗಿ

ಛಿದ್ರಗೊಂಡೀತು.

ಭಾರತದಲ್ಲಿ ಮುಖ್ಯವಾಗಿ ಹಿಂದೂ ಧರ್ಮದಲ್ಲಿ, ಧರ್ಮದ ಸಾರ್ವಜನಿಕೀಕರಣವು ನಿಜವಾದ ಪರಂಪರೆಯಲ್ಲ, ಮತ್ತು ಇದರಿಂದಾಗಿಯೇ ಧರ್ಮವು ಇಂದು ಅವನತಿಯ ಹಾದಿಯನ್ನು ಹಿಡಿಯುತ್ತಿದೆ ಎಂದು ಸ್ಪಷ್ಟವಾಗಿ ನಮ್ಮ ಯುವಜನಾಂಗಕ್ಕೆ ತಿಳಿಸಿಕೊಡಬೇಕಾಗಿದೆ. ಇಂದು ನಡೆಯುತ್ತಿರುವ ಧರ್ಮದ ರಾಜಕೀಯ ಪ್ರೇರಿತ ಸಾರ್ವಜನೀಕರಣ ಹಿಂದೆ ಸರಿದು, ಮಠ, ಮಂದಿರ, ಗುರುಗಳ ಬಂಧನದಿಂದ ಪಾರಾಗಿ, ಭಾರತದ ಪರಂಪರೆಗೆ ಅನುಗುಣವಾಗಿ ಗೃಹಧರ್ಮವಾಗಿ ಮತ್ತೆ ಮನೆಗೆ ಮರಳುವಂತೆ ಪ್ರಚೋದಿಸಬೇಕು. ಆದರೆ ಈ ಕೆಲಸ, ಸರಳ, ಧಾರ್ಮಿಕ ಜೀವನ ನಡೆಸಿಕೊಂಡು ಬರುವವರಿಂದ ಆಗಬೇಕೇ ವಿನಾ ಧಾರ್ಮಿಕ ಪುಡಾರಿ, ವ್ಯಾಪಾರೀ ಗುರು, ವಿಲಾಸೀ ಸಂತರಿಂದಲ್ಲ.

ಈ ಸಂಕೀರ್ಣ ಆಧುನಿಕ ಸಮಾಜದಲ್ಲಿ, ಧಾರ್ಮಿಕನಾಗುವುದೆಂದರೆ, ಧಾರ್ಮಿಕ ಬಹುತ್ವವೇ ನಿಜವಾದ ಆಧ್ಯಾತ್ಮಿಕತೆ ಎಂಬುದನ್ನು ಮನಗಂಡು, ಅಂತರ್ಧರ್ಮೀಕನಾಗಿ ಬದುಕುವುದು. ಇದನ್ನು ಸಾಮುದಾಯಿಕ ಬದುಕಿನಲ್ಲಿ ಸಾಧಿಸಲು ನಾಲ್ಕು ನೈತಿಕ ಅನುಶಾಸನಗಳಿಗೆ ನಾವು ಬದ್ಧರಾಗಿರುವುದು ಮುಖ್ಯ ಎಂದು ನನ್ನ ಅನಿಸಿಕೆ -

1. ಮಾನವನ ಘನತೆ - ಗೌರವಗಳಿಗೆ ಮನ್ನಣೆ.
2. ಇನ್ನೊಬ್ಬರನ್ನು ಲಕ್ಷ್ಯವಿಟ್ಟು ಕೇಳುವ ಸಹನೆ - ಸಮಾಧಾನ.
3. ವಿಭಿನ್ನ ವರ್ಗಗಳು ಪರಸ್ಪರ ಹಂಚಿಕೊಳ್ಳಬಹುದಾದ ಸಾಮಾನ್ಯ ನೆಲೆಯನ್ನು ಕಂಡುಕೊಳ್ಳುವುದು, ಮತ್ತು
4. ಪರಸ್ಪರ ದಬ್ಬಾಳಿಕೆಯನ್ನು ಸಂಪೂರ್ಣ ತ್ಯಜಿಸುವುದು.

ಧರ್ಮ ಇಟ್ಟಿಗೆಯಿಂದ ಕಟ್ಟಿದ ಕೋಟೆಯಾಗಬಾರದು, ಬಯಲಾಗಬೇಕು. ಇಟ್ಟಿಗೆಯಿಂದ ಕೋಟೆ ಕಟ್ಟಿದರೆ ಅದನ್ನು ಒಡೆಯುವವ ಒಳಗಿನಿಂದಲೇ ಹುಟ್ಟಿಕೊಳ್ಳುತ್ತಾನೆ. ಬಯಲು ಕಾಯುವವನಿಗೆ ಕಲಿಯಾಗುತ್ತದೆ. ಧರ್ಮವು ಕೇವಲ ಕೋಟೆಯಾಗದಂತೆ ನೋಡಿಕೊಳ್ಳಬೇಕಾದರೆ ಧರ್ಮದ ತಿರುಳನ್ನು ಅರ್ಥಮಾಡಿಕೊಳ್ಳಬೇಕಾದ ತೆರೆದ ಮನಸ್ಸು, ಸಹನೆ, ಜವಾಬ್ದಾರಿಯುತ ನಡವಳಿಕೆ ಬೇಕಾಗುತ್ತದೆ. ಮತಿಯಿಲ್ಲದ ಮತ ಮನುಷ್ಯ ಕುಲಕ್ಕೆ ಅಪಾಯಕಾರಿ. ತತ್ತ್ವದ ಅತಿರೇಕತೆ, ತತ್ತ್ವದ ಹಿಂದಿರುವ ಸತ್ತ್ವವನ್ನು ಅಲ್ಲಗಳೆಯುತ್ತದೆ. ತತ್ತ್ವ, ಆದರ್ಶ ಮತ್ತು ಮಾನವೀಯತೆಗಳ ನಡುವೆ ಸಮರಸದ ಸಂಬಂಧವಿದ್ದಾಗಲೇ ಧರ್ಮಕ್ಕೆ ಕಂಪು. ಈ ಅರ್ಥದಲ್ಲಿ ಗುಜರಾತ್ ಹಿಂಸೆಯು ಧರ್ಮದ ವಿಕಾರರೂಪ. ❒

# ಜಾಗತೀಕರಣ : ಪರ್ಯಾಯ ಸಾಧ್ಯತೆಗಳು

### ೧. ಪರಿಣಾಮಗಳು

ನಿಜ ಜಗತ್ತಿನಲ್ಲಿ ಯಾವುದೂ ಅನಿವಾರ್ಯವಲ್ಲ – ಜಾಗತೀಕರಣವಂತೂ ಅಲ್ಲವೇ ಅಲ್ಲ. ಇಂದಿನ ಜಾಗತೀಕರಣ ಪ್ರಕ್ರಿಯೆಯು, ವೈಜ್ಞಾನಿಕ ಯುಗ ಆರಂಭವಾದಂದಿನಿಂದ ಮೊದಲುಗೊಂಡು ಹಲವು ಶತಮಾನಗಳಿಂದ ನಿರಂತರವಾಗಿ ಬಿಚ್ಚಿಕೊಳ್ಳುತ್ತ ಬಂದ ವಸಾಹತೀಕರಣ ಪ್ರಕ್ರಿಯೆಯ ಮಹತ್ವದ ಘಟನೆಗಳ ಸೂತ್ರರೂಪವಾಗಿದೆ. ಇದಕ್ಕೆ ೪-೫ ಶತಮಾನಗಳ ಇತಿಹಾಸವಿದೆ. ಇಂಥ ಪ್ರಕ್ರಿಯೆಯನ್ನು, ದೇಶೀ ರಚನೆಗಳ ಸಾಂಸ್ಕೃತಿಕ ಆಕೃತಿಗಳ ಮೂಲಕ ಮಾತ್ರ ಎದುರಿಸಲು ಸಾಧ್ಯ.

ವೈಜ್ಞಾನಿಕ ಯುಗದಲ್ಲಿ ಮನುಷ್ಯನ ಮನೋಭಾವದಲ್ಲೇ ಆದ ಮೂಲಭೂತ ಬದಲಾವಣೆ, ಇದು ಆತನನ್ನು ವರ್ತಮಾನದಲ್ಲಿ ಬದುಕುವ ಮನುಷ್ಯನ ಸಾಮಾನ್ಯ ನೆಲೆಯಿಂದ, ಕೇವಲ ಭವಿಷ್ಯದ ಭದ್ರತೆಗಾಗಿ ಹಪಹಪಿಸುವ ಕೊಳ್ಳುಬಾಕ ಆರ್ಥಿಕ ಮನುಷ್ಯನನ್ನಾಗಿ ಪರಿವರ್ತಿಸಿದ್ದು, ಇದು ಹುಟ್ಟು ಹಾಕಿದ ದುರಾಸೆ, ಈ ದುರಾಸೆಯನ್ನು ಪೋಷಿಸುವ ನಿರ್ದಿಷ್ಟ ಮಾದರಿಯ ಅನಿರ್ಬಂಧಿತ ಅಭಿವೃದ್ಧಿ ಮೀಮಾಂಸೆ – ಇವೆಲ್ಲವೂ ಮನುಷ್ಯನನ್ನು ಅತ್ಯಂತ ಕ್ರೌರ್ಯ ತುಂಬಿದ

---

*ಕರ್ನಾಟಕ ಸಾಹಿತ್ಯ ಅಕಾದೆಮಿ, ಕುವೆಂಪು ವಿಶ್ವವಿದ್ಯಾಲಯ ಮತ್ತು ಶಿವಮೊಗ್ಗ ಕರ್ನಾಟಕ ಸಂಘಗಳು ಜಂಟಿಯಾಗಿ ಶಿವಮೊಗ್ಗದಲ್ಲಿ ಜೂನ್೮-೯; ೨೦೦೨ರಂದು ಹಮ್ಮಿಕೊಂಡ ಎರಡು ದಿನಗಳ "ಜಾಗತೀಕರಣ: ಸಮಗ್ರಮಂಥನ " ಕುರಿತ ವಿಚಾರ ಸಂಕಿರ್ಣದಲ್ಲಿ ಮಂಡಿಸಿದ ಪ್ರಬಂಧ

ನೋಡಿ : ಮಾತುಕತೆ (ತ್ರೈಮಾಸಿಕ), (ಹೆಗ್ಗೋಡು, ಅಕ್ಷರ ಪ್ರಕಾಶನ, ೨೦೦೬

ಜೀವವಿರೋಧೀ ನೆಲೆಗಳಿಗೆ ಕೊಂಡೊಯ್ದು ಹಿಂಸೆಯನ್ನು ಶಾಶ್ವತೀಕರಿಸಿ ನ್ಯಾಯ ಸಮ್ಮತಗೊಳಿಸಿ ಬಿಟ್ಟಿದೆ.

ಅಭಿವೃದ್ಧಿಯ ಹೆಸರಿನಲ್ಲಿ ಇಂದು ನಡೆಯುತ್ತಿರುವ ಪೈಪೋಟೀ ಪ್ರೇರಿತ ಆಕ್ರಮಣಕಾರೀ ಹಿಂಸೆ, ತನ್ನದೇ ಆದ ಅಭಿವೃದ್ಧಿ ವ್ಯಾಖ್ಯೆಯನ್ನು ಸೃಷ್ಟಿಸಿಕೊಂಡಿದ್ದು, ಅದನ್ನು ಅನಿವಾರ್ಯವೆಂಬಂತೆ ತರ್ಕಬದ್ಧವಾಗಿಯೂ, ವೈಜ್ಞಾನಿಕವಾಗಿಯೂ, ಭಾವರಹಿತವಾಗಿಯೂ ಮುಂದಿಡುತ್ತದೆ. ಇದರ ಫಲವೇ ದುರ್ಬಲ ಬಹುಜನರ ನಿರಂತರ ಬಲಿ. ಕೋಮುವಾದದ ಬಲಿ-ಬಲಿದಾನಗಳ ರೂಪಕ್ಕಿಂತಲೂ ಭೀಕರ ಸ್ವರೂಪವನ್ನು ಇದು ಹಲವೊಮ್ಮೆ ಪಡೆಯುತ್ತದೆ. ಇಲ್ಲಿ ಬಲಿಹಾಕುವವರು ಯಾರು, ಬಲಿಯಾಗುವವರು ಯಾರು ಎಂದೇ ತಿಳಿಯದಷ್ಟು ಸೂಕ್ಷ್ಮವಾಗಿ ದೂರದಲ್ಲೆಲ್ಲೋ ಅಗೋಚರ ಶಕ್ತಿಗಳಿಂದ – ಮಂತ್ರಿ ಮಂಡಲಗಳಲ್ಲೋ, ಬಹುರಾಷ್ಟ್ರೀಯ ಕಂಪೆನಿಗಳ 'ಬೋರ್ಡ್ ರೂಮ್' ಗಳಲ್ಲೋ ಬಲಿಯ ನಿರ್ಧಾರಗಳಾಗುತ್ತಿರುತ್ತವೆ.

ಆಧುನಿಕ ಮನಸ್ಸಿನ ಪ್ರಗತಿಕಲ್ಪನೆಯೆಂದರೆ ನಿರ್ಗತೀಕರಣವೆಂದೇ ಅರ್ಥ (modern mind's notion of prosperity is pauperisation) ಎಂದು ಇಂದು ನಮ್ಮ ನಡುವಿರುವ ಒಬ್ಬ ಹಿರಿಯ ಸಮಾಜವಾದಿ ಚಿಂತಕ ಶ್ರೀ ಕಿಶನ್ ಪಟ್ನಾಯಕ್ ಜಾಗತೀಕರಣದ ಬಗ್ಗೆ ಉಡುಪಿಯಲ್ಲಿ ಪ್ರತಿಕ್ರಿಯಿಸಿದ್ದರು. ಯಾಕೆಂದರೆ ಇದು ಎಲ್ಲರನ್ನೂ ಒಳಗೊಳ್ಳುವ ಸಿದ್ಧಾಂತವಲ್ಲ, ಕೆಲವರಿಗಾಗಿ ಅನೇಕರನ್ನು ಹೊರಗಿಡುವ ಸಿದ್ಧಾಂತ (theory of exclusion). ತೋರಿಕೆಯ ಮಟ್ಟಿಗೆ ಈ ಮಾದರಿ, "ಸಮಸುಖೀ ರಾಜ್ಯ"(welfare state) ದ ಆದರ್ಶವಿಟ್ಟುಕೊಂಡಿದೆಯೇ ವಿನಾ ಇಲ್ಲಿ ಸಮಷ್ಟಿಹಿತದ ಸಾಮಾಜಿಕ ದರ್ಶನವೇ ಇಲ್ಲ. ತಂತ್ರಜ್ಞಾನ ಯುಗದ ಆರಂಭದ ಹಂತದಲ್ಲೇ, ಯಾವಾಗ ಅರ್ಥಶಾಸ್ತ್ರಕ್ಕೆ ಇರಲೇಬೇಕಾದ ಮನುಷ್ಯನ ಸಮಗ್ರಹಿತಕ್ಕೆ ಪೂರಕವಾದ ನೈತಿಕ ಅನುಶಾಸನ (normative aspects)ದ ಅಗತ್ಯವಿಲ್ಲವೆಂದು ತೀರ್ಮಾನವಾಯಿತೋ ಅಂದೇ ಅರ್ಥಶಾಸ್ತ್ರದ ದಾರಿ ನಿರ್ಣಾಯಕವಾಗಿ ಬದುಕಿನ ಆವಶ್ಯಕತೆಯಿಂದ ತಣಿಯದ ಬಯಕೆ – ಭೋಗಗಳತ್ತ ಸರಿಯಿತು. ಅನೈತಿಕ ವ್ಯಾಪಾರ, ಲಾಭ, ಜಾಹೀರಾತು ಪ್ರಣೀತ ಮಾರುಕಟ್ಟೆ,ಯುದ್ಧ, ನಿಸರ್ಗದ ಅಸಹ್ಯ ಲೂಟಿ, ಸುಖ-ಭೋಗದ ರಾವುಗಳೆಲ್ಲವೂ ನ್ಯಾಯಸಮ್ಮತವಾಗಿ ಬಿಟ್ಟಿತು. ಇವೆಲ್ಲದರ ವಿಕೃತ ಅಭಿವ್ಯಕ್ತಿಯೇ ಜಾಗತೀಕರಣ. ನೈತಿಕ ಅನುಶಾಸನವಿಲ್ಲದ, ಆತ್ಮನಿಷೇಧದ ಪರಿಕಲ್ಪನೆಯೇ ಇಲ್ಲದ ಇಂಥ ಅರ್ಥ ನೀತಿಯ ತಾತ್ತ್ವೀಕರಣ, ತನ್ನ ಮೂಲನೆಲೆಯಲ್ಲೇ ಪೈಪೋಟಿ, ದಕ್ಷತೆ, ಅಸಮಾನತೆಗಳನ್ನು ಪೋಷಿಸಿಕೊಂಡು ಬರುತ್ತಿರುವಾಗ, ಅದು ಮಾನವ ನಾಗರಿಕತೆಯನ್ನು ದೀರ್ಘಾವಧಿಯಲ್ಲಿ ಉಳಿಸಲು ಸಾಧ್ಯವೇ? ಹಾಗಾಗಿ, ಜಾಗತೀಕರಣದ ಶಕ್ತಿಗಳು "ಜಗತ್ತೇ 'ಗ್ಲೋಬಲ್ ವಿಲೇಜ್' ಆಗಿ ಪಲ್ಲಟಗೊಳ್ಳುತ್ತಿದೆ" ಎಂದು ಹೇಳುತ್ತಿರುವಾಗ ಕೂಡ ಅವುಗಳ ಕಲ್ಪನೆಯ "ಗ್ಲೋಬಲ್ ವಿಲೇಜ್" ನಲ್ಲಿ ನಿಜವಾದ ಹಳ್ಳಿಗಳು ಹಾಜರಿರುವುದಿಲ್ಲ ಎಂಬುದನ್ನೂ ಮರೆಯಬಾರದು.

ಈ ಶತಮಾನದ ಆರಂಭದಲ್ಲಿ ಕೈಗಾರಿಕಾ ಆಶಯ - ಆಕೃತಿಗಳು ಯೋಜನಾ ಪ್ರಕ್ರಿಯೆಯ ಪ್ರಮುಖ ಸ್ವರೂಪವಾದಾಗ ಜನಸಾಮಾನ್ಯರ ಬದುಕಿನ ಉಸಿರಾದ, ಬೇಸಾಯ, ಕೈಕಸುಬುಗಳು ನಗಣ್ಯವಾದುವು. ಇಂದು, ಈ ಜಗತ್ತನ್ನು ಕಳೆದ ೨೦೦ ವರ್ಷಗಳಿಂದ ಆಳುತ್ತ, ರೂಢಿಗತವಾಗಿದ್ದ

ಕೈಗಾರಿಕಾ ಅರ್ಥಸಿದ್ಧಾಂತವೇ ಕುಸಿದು ಬಿದ್ದು, ಆ ಸ್ಥಾನವನ್ನು ಮಾಹಿತಿ (information), ಸಂವಹನ (communication), ಮನೋರಂಜನೆಗಳು (entertainment), ಒಟ್ಟಾಗಿ "ಐಸ್" (ICE) ಅಭಿವೃದ್ಧಿ ಮಾಡೆಲ್ ಎಂಬ ಹೆಸರಲ್ಲಿ ಆಕ್ರಮಿಸಿಕೊಳ್ಳುತ್ತಿವೆ. ನಮ್ಮ ಬದುಕಿನ ಮೂಲ ಆಸ್ತಿಯಾದ ಕೃಷಿ ಎಂದೋ ನಿರ್ಲಕ್ಷ್ಯಕ್ಕೊಳಗಾಗಿತ್ತು. ಇಂದು ಎಲ್ಲಾ ಉತ್ಪಾದನಾ ಕ್ಷೇತ್ರಗಳೂ ಅಂದರೆ ಕೈಗಾರಿಕಾ ಕ್ಷೇತ್ರವೂ ಕೂಡ "ಕಲ್ಲು ಮತ್ತು ಸಿಮೆಂಟಿನ ಕ್ಷೇತ್ರ" (brick and mortar sector) ಎಂದು ಅವಗುಂಟನೆಗೆ ಪಾತ್ರವಾಗುತ್ತಿದೆ. ಇದು "ಐಸ್ ಕ್ಷೇತ್ರದ ಕಾಲ" ಎಂದು ಉತ್ಪ್ರೇಕ್ಷಿತ ಹೇಳಿಕೆ ನೀಡಲಾಗುತ್ತಿದೆ. ಬಂಡವಾಳ ಇಂದು ಹಿಂದಿನಂತೆ ಯಂತ್ರರೂಪದಲ್ಲಿ ಪ್ರಕಟವಾಗದೆ, ಮಾಹಿತಿ ತಂತ್ರಜ್ಞಾನ ರೂಪದಲ್ಲಿ ಅಭಿವ್ಯಕ್ತಿ ಪಡೆಯುತ್ತಿದೆ. ಮಾಹಿತಿ ತಂತ್ರಜ್ಞಾನವೇ ಹೊಸ ಖಾಸಗೀ ಬಂಡವಾಳ ಎಂದು ಪರಿಗಣಿಸಲ್ಪಡುತ್ತಿದೆ: ಹಾಗಾಗಿಯೇ, ಇಂದು ಕೈಗಾರಿಕಾ ಉತ್ಪಾದನಾ ಕ್ಷೇತ್ರಗಳು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಬಂಡವಾಳಶಾಹೀ ಸಾಮಾಜಿಕ ನಿರ್ಮಿತಿಯಿಂದ ಹೊರಗಿರುವ ತೃತೀಯ ಜಗತ್ತಿನ ರಾಷ್ಟ್ರಗಳತ್ತ ಚಲಿಸುತ್ತಿವೆ; ಮತ್ತು ಕೈಗಾರಿಕಾ ಕಾರ್ಮಿಕ ವರ್ಗಗಳು, ಸಂಘಟನೆಗಳು, ಸಂಪೂರ್ಣ ಛಿದ್ರಗೊಳ್ಳುತ್ತಾ ಸಮಹಿತ ಸಮಾಜದ ಆಶಯ ಹಿನ್ನಡೆ ಕಾಣುತ್ತಿದೆ. ಉತ್ಪಾದನೆಯೇ ಮಾಡದೆ ಕೇವಲ ಗಾಳಿ ತಿಂದುಕೊಂಡು ಬದುಕಬಹುದೆಂಬ ಇಂದಿನ ಮಾನವನ ವಿಕಲ್ಪಕ್ಕೆ ಇತಿಹಾಸದಲ್ಲಿ ಇನ್ನೊಂದು ನಿದರ್ಶನವಿಲ್ಲ.

ಜಾಗತಿಕ ಹಣಕಾಸು ವ್ಯವಸ್ಥೆ ಎಂದೂ ಆಯಾಯಾ ದೇಶಗಳ ನೆಲದ ಜನರ ಆಶಯಗಳಿಗೆ ಪ್ರತಿಸ್ಪಂದಿಸದು. ಅಸಮಾನತೆಯ ಹೆಚ್ಚಳ ಜಾಗತೀಕರಣದ ಮಾರುಕಟ್ಟೆ ವ್ಯವಸ್ಥೆಯಲ್ಲೇ ಅಂತರ್ಗತವಾಗಿರುವುದರಿಂದ, ಸೂಕ್ಷ್ಮವಾಗಿ ಇದು ವಿವಿಧ ದೇಶಗಳು ತಮ್ಮ ತಮ್ಮ ಅಭಿವೃದ್ಧಿ ಮಾದರಿಯನ್ನು ತಾವೇ ರೂಪಿಸಿಕೊಂಡು ವಿಶಿಷ್ಟತೆಯಿಂದ ಬೆಳೆಯುವ ಹಕ್ಕನ್ನೇ ನಿರಾಕರಿಸುತ್ತದೆ.

ಜಾಗತಿಕ ಮಾರುಕಟ್ಟೆ ನೀತಿಯು, ಬೆಳವಣಿಗೆಯ ಅತ್ಯಂತಿಕ ಗುರಿಯನ್ನು ನಿರ್ದೇಶಿಸುತ್ತಿರುವಾಗ, ಈ ಅವೈಜ್ಞಾನಿಕ ಮಾದರಿಯು ಅನಿವಾರ್ಯವಾಗಿ ಸಾಮಾಜಿಕ ವಿಭಜನೆ, ನಾಗರೀಕಾತ್ಮಕ ಸಂಘರ್ಷಗಳನ್ನು ಭದ್ರಗೊಳಿಸುತ್ತದೆ. ಇಂಥ ಜಾಗತಿಕ ಮಾರುಕಟ್ಟೆಗೆ ನಮ್ಮ ರೈತಾಪಿ ವರ್ಗವನ್ನು, ಹೊಂದಿಸಿಕೊಂಡು ಲಾಭ ಪಡೆಯಲು ಒತ್ತಾಯಿಸಲಾಗುತ್ತಿದೆ. ಆದರೆ, ಜಾಗತಿಕ ಮಾರುಕಟ್ಟೆಯ ಅರ್ಥವ್ಯವಸ್ಥೆಯ ಒಳ ಲೋಕಕ್ಕೆ ಪ್ರವೇಶಿಸುವುದಿರಲಿ, ಆ ಬಲಿಷ್ಠ ವ್ಯಾಪಾರೀ ಶಕ್ತಿಗಳ ಅತ್ಯಂತ ಸಂಕೀರ್ಣ ವ್ಯಾಪಾರೀ ನಿಯಮಗಳನ್ನು ಅರ್ಥಮಾಡಿಕೊಳ್ಳಲೂ ನಮ್ಮ ಬಡರೈತನಿಗೆ ಸಾಧ್ಯವಾಗದು. ತನ್ನ ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲೂ ರೈತ, ತನ್ನ ಬೆಳೆಯ ಆಯ್ಕೆ ಮತ್ತು ತನಗೆ ಅವಶ್ಯವಾದ ತಂತ್ರಜ್ಞಾನದ ಆಯ್ಕೆಯ ಮಟ್ಟಿಗಾದರೂ ಇಂದಿನವರೆಗೆ ಸ್ವತಂತ್ರನಾಗಿದ್ದ. ಬಡತನದಲ್ಲೂ, ಪರಂಪರಾಗತವಾದ ಹಳ್ಳಿಯ ಕೂಡುಬಳಕೆಯ ಸಂಪತ್ತಿನ (village commons) ಬಲದಿಂದ ಮರ್ಯಾದೆಯಿಂದ ಬದುಕಲು ಆತನಿಗೆ ಸಾಧ್ಯವಾಗಿತ್ತು. ಈ ವ್ಯವಸ್ಥೆಯೇ ಇಂದು ಛಿದ್ರೀಕರಣಗೊಂಡು, ಆತ ಸಂಪೂರ್ಣ ದಿವಾಳಿಯೆದ್ದು ದರಿದ್ರನಾಗಿ, ನಿರ್ಗತಿಕ ಸ್ಥಿತಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಹಂತ ತಲುಪಿದ್ದಾನೆ. ಈ ದೇಶದ ಸುಮಾರು ೬೦ ಶೇಕಡಾ ಜನರು ೫೦ ವರುಷಗಳ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಬಳಿಕವೂ "ತಮಗೆ ಈ ದೇಶದಲ್ಲಿ ಬದುಕಲು ಸಾಧ್ಯವಾಗುತ್ತಿಲ್ಲ" ಎಂದು ಆತ್ಮಹತ್ಯೆಯ ಮೂಲಕ ಸಾರುತ್ತಿರುವಾಗ, ನಿಜಕ್ಕೂ ನಮ್ಮ

ಪ್ರಗತಿ ಪಥದ ದೃಷ್ಟಿಯಿಂದ ಧ್ಯೇಯಗಳೇನು ಎಂಬುದನ್ನು ಅನುಮಾನದಿಂದ ಶೋಧಿಸಬೇಕಾಗುತ್ತದೆ. ಆದರೆ ಈ ಅತ್ಯಂತ ಕಳವಳಕಾರೀ ವಿದ್ಯಮಾನದ ಬಗ್ಗೆ ಯಾವುದೇ ರಾಜ್ಯಸಭೆಗಳಲ್ಲಾಗಲೀ, ಲೋಕಸಭೆಯಲ್ಲಾಗಲೀ ಗಂಭೀರವಾದ ಚಿಂತನೆಯೇ ನಡೆಯದಿರುವುದು, ಮತ್ತು ದೇಶದ ರಾಷ್ಟ್ರೀಯ ಚರ್ಚೆಗಳ ಪ್ರಧಾನವಾಹಿನಿಯಲ್ಲಿ ಇದು ಪ್ರಮುಖ"ಎಜೆಂಡಾ" ಆಗದಿರುವುದು, ಅತ್ಯಂತ ವಿಷಾದದ ಸಂಗತಿ. ಈ ದೇಶದ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವ ನಮ್ಮ ಪ್ರತಿಷ್ಠಿತ, ಸಂಭಾವಿತ ಸಮಾಜಕ್ಕೆ "ಸೆನ್ಸ್ ಆಫ್ ಶೇಮ್", "ಸೆನ್ಸ್ ಆಫ್ ಶಾಕ್" ಕೂಡಾ ಈ ಬಗ್ಗೆ ಇದ್ದಂತಿಲ್ಲ.

"೨೦೦ ವರ್ಷಗಳ ಹಿಂದೆ ಮ್ಯಾಂಚೆಸ್ಟರ್, ಲ್ಯಾಂಕ್‌ಶಯರ್‌ನ 'ಕಾಟನ್ ಫ್ಯಾಬ್ರಿಕ್ಸ್' ಭಾರತವನ್ನು ಪ್ರವೇಶಿಸಿದಾಗ ಈ ದೇಶದ ಸ್ವಾವಲಂಬೀ ಅರ್ಥವ್ಯವಸ್ಥೆಯನ್ನೇ ಅದು ಛಿದ್ರಗೊಳಿಸಿತ್ತು. ಇಂದಿನ ಈ ಜಾಗತೀಕರಣ ವ್ಯವಸ್ಥೆಯಲ್ಲಿ ಇದು ಇನ್ನೂ ಭವ್ಯ ಪ್ರಮಾಣದಲ್ಲಿ ನಡೆಯುತ್ತದೆ" ಎಂದು ಪ್ರಸಿದ್ಧ ಸಮಾಜಶಾಸ್ತ್ರಜ್ಞ ಆಶಿಸ್ ನಂದಿ ಅಭಿಪ್ರಾಯ ಪಡುತ್ತಾರೆ. ಇಂದೂ ಕೂಡ ಈ ದೇಶದ ೧೯.೩ ಕೋಟಿ ಜನರು ಕೈ ಮಗ್ಗ ಕ್ಷೇತ್ರದಲ್ಲಿ, ೨.೩ ಕೋಟಿ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಮತ್ತು ೬೦ ಲಕ್ಷ ಜನರು ಖಾದಿ ಮತ್ತು ಗ್ರಾಮೋದ್ಯೋಗ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದು, ಈ ಮೂರು ಕ್ಷೇತ್ರಗಳು ಒಟ್ಟು ರಾಷ್ಟ್ರೀಯ ಆದಾಯದ ೭೦ ಶೇಕಡಾ ಪಾಲು ಹೊಂದಿವೆ. ಭಾರತದ ವಿದೇಶೀ ವಿನಿಮಯದ ೭೦ ಶೇಕಡಾ ಇನ್ನೂ ಅಸಂಘಟಿತ ಕ್ಷೇತ್ರ (unorganised Sector) ಗಳಿಂದಲೇ ಬರುತ್ತಿದೆ. ಕೇವಲ 'ವಜ್ರ ಪರಿಷ್ಕರಣೆ' ಗುಡಿಕೈಗಾರಿಕೆಯೊಂದೇ ಶೇಕಡಾ ೪೦ರಷ್ಟು ವಿದೇಶೀ ವಿನಿಮಯವನ್ನು ಸಂಪಾದಿಸುತ್ತಿದೆ. ದೇಶದಲ್ಲಿ ಒಟ್ಟು ಉದ್ಯೋಗ ನಿರತರಲ್ಲಿ ಶೇಕಡಾ ೯೨ ಜನ ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ಇಂಥ ವಿಪುಲ ಕ್ಷೇತ್ರಗಳಿಗೆ ಕೇಡು ಬಗೆದರೆ ದೇಶಕ್ಕೇ ಕೇಡು ಬಗೆದಂತೆ; ದೇಶವೇ ಆತ್ಮಹತ್ಯೆ ಮಾಡಿಕೊಂಡಂತೆ. ಆದರೆ ತಲ್ಲಣದ ಸಂಗತಿಯೆಂದರೆ ಕಳೆದ ೫ ವರುಷಗಳಲ್ಲಿ ಭಾರತದಲ್ಲಿ ಸುಮಾರು ೩,೭೫,೦೦೦ ಸಣ್ಣಕೈಗಾರಿಕೆಗಳು ಮುಚ್ಚಿವೆ. ಕರ್ನಾಟಕ ರಾಜ್ಯವೊಂದರಲ್ಲೇ ೪೮,೦೦೦ ಸಣ್ಣ ಕೈಗಾರಿಕೆಗಳು ಮುಚ್ಚಲ್ಪಟ್ಟವೆಯೆಂದು ಅಂಕಿ ಅಂಶಗಳು ತಿಳಿಸಿಕೊಡುತ್ತವೆ. ಜಾಗತೀಕರಣದ ಕಣ್ಣು ಕೋರೈಸುವ ಪ್ರದರ್ಶನದ ಅಡಿಯಲ್ಲಿ, ಇಂದು ವೈವಿಧ್ಯಮಯ ಕರಕುಶಲಗಾರರ ಪರಂಪರೆ ಮತ್ತು ಅಂಥವರ ತಳಿಯೇ ಅಳಿಯುವ ಭೀತಿಯಲ್ಲಿದೆ. ನಮ್ಮ ದೇಶದ ಆಶಯಗಳಾದ ಸಂಪತ್ತಿನ ಹಂಚಿಕೆ, ವಿಪುಲ ಉದ್ಯೋಗ ನಿರ್ಮಾಣ ಮತ್ತು ಉದ್ಯೋಗ ಅವಕಾಶಗಳೆರಡರಲ್ಲೂ ಸಾಮಾಜಿಕ ಸಮಾನತೆಯನ್ನು ಕಾಯುವ ಮತ್ತು ವಿಶ್ವ ಮಟ್ಟದಲ್ಲಿ ಇಂದೂ ಪೈಪೋಟಿಯನ್ನೆದುರಿಸಲು ಸಮರ್ಥವಾಗಿರುವ ಇಂಥ ದಕ್ಷ ಕೈಕಸುಬು, ಸಣ್ಣಕೈಗಾರಿಕಾ ಕ್ಷೇತ್ರಗಳನ್ನು ಬುಡಮೇಲು ಮಾಡಿ, ಈ ಜನಸಂಪದ್ಭರಿತ ರಾಷ್ಟ್ರದಲ್ಲಿ ಅವರಿಗೆ ನಾವು ಪರ್ಯಾಯವಾಗಿ ಏನನ್ನು ಕೊಡಲು ಸಾಧ್ಯ? ಶತಮಾನಗಳಿಂದ ಹಲವು ಸ್ತರಗಳಲ್ಲಿ ದತ್ತವಾಗಿ ಪಾರಂಪರಿಕವಾಗಿ ಹರಿದು ಬಂದ ೭೫ ಶೇಕಡಾ ಜನರ ಅನುಭವ ಜನ್ಯ ಜನಪದ ಜ್ಞಾನ ಸಂಪನ್ಮೂಲಕ್ಕೆ ನಮ್ಮ ಯೋಜನೆಯಲ್ಲಿ ಪ್ರಾಶಸ್ತ್ಯ ಕೊಡದೆ, ಅವರನ್ನು ಯೋಜನೆಯ ವರ್ತುಲದಿಂದ ಹೊರಗಿಟ್ಟು, ದುರ್ಬಲೀಕರಿಸಿ ಈ ದೇಶದ ಪ್ರಗತಿ ಸಾಧ್ಯವೇ?

ಇಷ್ಟಾದರೂ ಜಾಗತೀಕರಣವನ್ನು ಅನಿವಾರ್ಯವೆಂಬಂತೆ ಹಾಡಿಹೊಗಳುವ

ಸಂಕೀರ್ತನಕಾರರಿಗೆ, ಮುಖ್ಯವಾಗಿ ನಮ್ಮ ಮಧ್ಯಮ ವರ್ಗಕ್ಕೆ, " ಜಾಗತೀಕರಣದ ಅತ್ಯಂತ ಸೂಕ್ಷ್ಮ ರಚನಾ ವಿಧಗಳು ಜಗತ್ತಿನ ಒಟ್ಟು ಜನಸಂಖ್ಯೆಯ ೧೫-೨೦ ಶೇಕಡಾ ಜನರನ್ನು ಈ ಜಗತ್ತಿನ ಭೂಪಟದಿಂದಲೇ ಅಳಿಸಿ ಹಾಕಿ ನಿರ್ನಾಮ ಮಾಡಿಬಿಡುತ್ತವೆ ಮತ್ತು, ಅರೆವಾಸಿಗಿಂತಲೂ ಅಧಿಕ ಪಾಲಿಯನ್ನು ನಿರ್ವಿವಾದವಾಗಿ ಸಮಾಜದ ಅಂಚಿಗೆ ತಳ್ಳಿ ಬಿಡುತ್ತವೆ. ಇಷ್ಟಾಗಿಯೂ ನೀವು ಜಾಗತೀಕರಣ ಬೇಕು ಎನ್ನುವವರಾದರೆ, ನೀವು ಕ್ರೂರಿಗಳು ಮತ್ತು ಪಾಪಿಗಳು (cruel and guilty). ಈ ಕ್ರೌರ್ಯದ ಪಾಪವನ್ನು ಹೊತ್ತುಕೊಂಡೇ ನೀವು ಜಾಗತೀಕರಣವನ್ನು ಇಟ್ಟುಕೊಳ್ಳಿ" ಎಂದು ಜೋರಿನಿಂದ ಹೇಳಬೇಕಾಗಿದೆ.

ಈ ದೇಶದ ಜಾತಿ ವ್ಯವಸ್ಥೆ, ದಲಿತರ, ಮಹಿಳೆಯರ ಶೋಷಣೆ, ಗಿರಿಜನರ ಒಕ್ಕಲೆಬ್ಬಿಸುವಿಕೆ ಮುಂತಾದ ಪ್ರಶ್ನೆಗಳಿಗೆ ಜಾಗತೀಕರಣ ಪರಿಹಾರವಾಗಬಲ್ಲುದೇ ಎಂಬುದನ್ನೊಮ್ಮೆ ಅವಲೋಕಿಸಿದರೆ, ಚಿತ್ರಣ ಇನ್ನಷ್ಟು ಮಸುಕುಗೊಳ್ಳುವುದನ್ನು ನಾವು ನೋಡಬಹುದು. ಸಮಾಜದ ಅಂಚಿನಲ್ಲಿ ವಾಸಿಸುತ್ತಿರುವವರ ಬಿಡುಗಡೆಯ ದಾರಿಯಾಗುವ ಬದಲು ಜಾಗತೀಕರಣ, ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತಿದೆ. ಸಾಮಾಜಿಕ ಬದುಕಿನ ಸಮಾನತೆಯ ಸತ್ವವನ್ನೇ ಕುಗ್ಗಿಸಿ, ಶಿಥಿಲಗೊಳಿಸಿ, ಕೊನೆಯ ಪಕ್ಷ ದುರ್ಬಲರ ಗೌರವದಿಂದ ಬದುಕುವ ಅವಕಾಶವನ್ನು ವಂಚಿಸುತ್ತಿದೆ. ಮೀಸಲಾತಿಯ ಸಾಮಾಜಿಕ ನ್ಯಾಯದ ಆಶಯವನ್ನು, ಖಾಸಗೀಕರಣ, ದಕ್ಷತೆ, ಲಾಭಗಳ ಹೆಸರಲ್ಲಿ ಸಂಪೂರ್ಣ ಪರಿಣಾಮಶೂನ್ಯ ಮಾಡಲಾಗುತ್ತಿದೆ. ಈ ಮಂದಿಗೆ ಕನಿಷ್ಠ ಉದ್ಯೋಗ ಅವಕಾಶಗಳಿದ್ದ ಸರಕಾರೀ ಕ್ಷೇತ್ರಗಳೆಲ್ಲ ಖಾಸಗೀಕರಣದ ಹೆಸರಲ್ಲಿ ಇಂದು ಮುಚ್ಚಿಕೊಂಡು ಬರುತ್ತಿವೆ. ತೋರಿಕೆಗೆ ಒಂದೆಡೆ ಮಹಿಳೆಯರಿಗೆ ಉದ್ಯೋಗ ಅವಕಾಶ ಹೆಚ್ಚುತ್ತಿದ್ದಂತೆ ಕಂಡರೂ, ಅವರ ಕಾರ್ಮಿಕ ಹಕ್ಕುಗಳೆಲ್ಲಾ ಮೊಟಕುಗೊಳ್ಳುತ್ತಿದ್ದು, ಅವರು 'ಬಾಂಡೆಡ್ ಲೇಬರ್' ರೀತಿಯಲ್ಲಿ ದುಡಿಯಬೇಕಾದ ಸನ್ನಿವೇಶ ನಿರ್ಮಾಣವಾಗುತ್ತಿದೆ. ಉದ್ಯೋಗ ಕ್ಷೇತ್ರದಲ್ಲಿ ಮೇಲ್ವರ್ಗದವರು ತೆರವು ಮಾಡಿದ ಖಾಲಿ ಜಾಗಗಳು ಮಾತ್ರ ಕೆಳವರ್ಗಕ್ಕೆ ಲಭ್ಯವಾಗುತ್ತಾ, ಈ ಕೊನೆಯಿರದ "ಕ್ಯಾಚಿಂಗ್ ಅಪ್" ಓಟದಲ್ಲಿ ವರ್ಗವರ್ಗಗಳ ನಡುವಿನ ವಿಷಮತೆಯು ವ್ಯಾಪ್ತಿ ಹೆಚ್ಚುತ್ತಿದೆ. ಒಂದು ಅಂಕಿ ಅಂಶ ಪ್ರಕಾರ, ಸಮಾಜದ ಮೇಲ್‌ಸ್ತರದಲ್ಲಿರುವ ೨೦ಶೇಕಡಾ ಮತ್ತು ಅತ್ಯಂತ ಕೆಳಸ್ತರದಲ್ಲಿರುವ ೨೦ಶೇಕಡಾ ಮಂದಿಯ ಸರಾಸರಿ ತಲಾ ಆದಾಯಗಳ ನಡುವೆ ೧೯೬೦ ರಲ್ಲಿ ೩೦:೧ ಅಂತರವಿದ್ದರೆ, ೧೯೯೦ರಲ್ಲಿ ಇದು ೬೦:೧ಕ್ಕೆ ದ್ವಿಗುಣಗೊಂಡು ೨೦೦೧ ರಲ್ಲಿ ಈ ಅಂತರ ೮೪:೧ನ್ನು ತಲುಪಿದೆ.

**ದಲಿತರ ಕಳವಳಗಳು:** ಈ ಜಾಗತಿಕ ಆರ್ಥಿಕ ಸಂದರ್ಭದಲ್ಲಿ ಇನ್ನೂ ಭೀಕರವಾದದ್ದು. ಅವರು ಈ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಅಂಚಿಗೆ ತಳ್ಳಲ್ಪಡುತ್ತಿದ್ದಾರೆ. ಜಾಗತೀಕರಣವು ದಲಿತರ ಉದ್ಯೋಗಾವಕಾಶ ಹೆಚ್ಚಿಸುತ್ತದೆ ಎಂದು ನಂಬಿಸಲಾಗುತ್ತಿದೆ. ಆದರೆ ತಳಮಟ್ಟದಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ, ಈ ಮಾತಿನ ಪೊಳ್ಳುತನ ಬಯಲಾಗದಿರದು. ಉದಾಹರಣೆಗೆ, ಒಂದೆಡೆ ಸುಲಭ ಶೌಚಾಲಯ, ರ್‍ಯಾಗ್ ಪಿಕಿಂಗ್ ಮುಂತಾದ ಹೊಸ ಕ್ಷೇತ್ರಗಳಲ್ಲಿ ಅವಕಾಶ ಹೆಚ್ಚುತ್ತಿದೆ ಎನ್ನಲಾಗುತ್ತಿದೆ. ಹೆಚ್ಚುತ್ತಿರುವ ಸುಲಭ ಶೌಚಾಲಯಗಳಲ್ಲಿ ಜಾತಿವ್ಯವಸ್ಥೆ ಬಲಗೊಳ್ಳುತ್ತಿರುವುದನ್ನು

ನಾವು ಇನ್ನೊಂದೆಡೆ ಗಮನಿಸಬಹುದು. ಸುಲಭ ಶೌಚಾಲಯವನ್ನು ಮೇಲ್ವರ್ಗ ಗುತ್ತಿಗೆ ತೆಗೆದುಕೊಂಡರೆ ಹಿಂದುಳಿದ ವರ್ಗ ಅದರ ಆಡಳಿತ ನಡೆಸುತ್ತಿದೆ. ಅವನ್ನು ಸ್ವಚ್ಛಗೊಳಿಸುವ ತೋಟಿ ಕೆಲಸವನ್ನು ಇಂದೂ ಅಂತ್ಯಜರೆನಿಸಿಕೊಂಡವರೇ ಮಾಡುತ್ತಿದ್ದಾರೆ. ರ್‍ಯಾಗ್ ಪಿಕಿಂಗ್‌ನಲ್ಲೂ - 'ವೆಟ್ ರ್‍ಯಾಗ್ ಪಿಕಿಂಗ್', 'ಡ್ರೈ ರ್‍ಯಾಗ್ ಪಿಕಿಂಗ್' ಗಳಲ್ಲಿ ವೈಷಮ್ಯವಿದ್ದು, ಕನಿಷ್ಠವೆನಿಸಿದ 'ವೆಟ್ ರ್‍ಯಾಗ್ ಪಿಕಿಂಗ್' ದಂಧೆಯನ್ನು ದಲಿತರೇ ಮಾಡಬೇಕಾದ ಪರಿಸ್ಥಿತಿ ಇದೆ.

ಇನ್ನೊಂದೆಡೆ ಅವರ ಇದ್ದ ಉದ್ಯೋಗಾವಕಾಶಗಳು ವಿಚಿತ್ರ ರೀತಿಯಲ್ಲಿ ಕೈ ತಪ್ಪಿ ಹೋಗುವುದನ್ನೂ ಗಮನಿಸಬಹುದು. ಸಮಾಜದಲ್ಲಿ ಅತ್ಯಂತ ಅವಮಾನಕರವೆಂದು ಪರಿಗಣಿಸಲ್ಪಡುವ ಊರಿನ ಘನ ತ್ಯಾಜ್ಯ ವಿಲೇವಾರಿ, ಮಲಮೂತ್ರ ವಿಲೇವಾರಿ ಮುಂತಾದ ಉದ್ಯೋಗವನ್ನು ದಲಿತರು ಮಾತ್ರ ಮಾಡುವ ಹೀನ ಪರಿಸ್ಥಿತಿಯಿತ್ತು. ತಂತ್ರಜ್ಞಾನದ ಬಲದಿಂದ ಅವು ಇಂದು, "ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್" "ಸ್ಯೂವೇಜ್ ಟ್ರೀಟ್‌ಮೆಂಟ್" ಎಂಬ ತಂತ್ರಜ್ಞಾನಗಳಾಗಿ ಪರಿವರ್ತನೆಗೊಂಡು, ಆ ಕೆಲಸ ಘನತೆ- ಗೌರವಗಳ ಸ್ಥಾನ ಪಡೆದುಕೊಳ್ಳುತ್ತಿವೆ. ಇದು ಅತ್ಯಂತ ಸ್ವಾಗತಾರ್ಹ ಸಂಗತಿ. ಆದರೆ ಈ ಕೆಲಸಗಳು ಘನತೆ-ಗೌರವಗಳು ಪಡೆದುಕೊಳ್ಳುತ್ತಿರುವಂತೆಯೇ ಈ ಕೆಲಸಗಳೇ ಮೇಲ್ಮುಖ ಚಲನೆಗೆ ಆರಂಭಿಸಿ ದಲಿತರ ಕೈ ತಪ್ಪಿ, ತಂತ್ರಜ್ಞಾನ ಮ್ಯಾನೇಜ್‌ಮೆಂಟ್ ಆಗಿ ಮೇಲ್ವರ್ಗದ ತಜ್ಞರಿಗೆ ವರ್ಗಾಯಿಸಲ್ಪಡುತ್ತಿರುವುದನ್ನೂ ನಾವು ಗಮನಿಸಬಹುದು. ದಲಿತರ ಅವಕಾಶಗಳು ನಿಜವಾದ ಅರ್ಥದಲ್ಲಿ ಕುಸಿಯುತ್ತ ಬರುತ್ತಿರುವುದಂತೂ ಸ್ಪಷ್ಟ.

ಪಟ್ಟಣಗಳಲ್ಲಿ 'ಫ್ಲೈ ಓವರ್ಸ್'ಗಳ ನಿರ್ಮಾಣ ಇಂದು ಹೆಚ್ಚುತ್ತಿದ್ದು, ಅವುಗಳಲ್ಲಿ ಉದ್ಯೋಗ ಅವಕಾಶಗಳು ಹೆಚ್ಚುತ್ತಿವೆ. ಆದರೆ ಅವುಗಳ ನಿರ್ಮಾಣ ಕಾರ್ಯದಲ್ಲಿ ದಲಿತರು ಹಿಂದುಳಿದವರು ಅತ್ಯಂತ ಕನಿಷ್ಠ ಪರಿಸ್ಥಿತಿಯಲ್ಲಿ ತಮ್ಮನ್ನೇ ತಾವು ಶೋಷಿಸಿಕೊಳ್ಳುತ್ತ ಏನೊಂದೂ ಭದ್ರತೆಯಿಲ್ಲದೆ ರಾತ್ರಿ ಹಗಲು ದುಡಿಯುತ್ತಿದ್ದಾರೆ. ದಲಿತರು ಕಾಲ-ದೇಶಗಳೆರಡರಲ್ಲೂ ಒತ್ತಡಕ್ಕೊಳಗಾಗುತ್ತಿದ್ದಾರೆ.

ಪ್ರಸಿದ್ಧ ಸಮಾಜ ಶಾಸ್ತ್ರಜ್ಞರಾದ ಪೂನಾ ವಿಶ್ವವಿದ್ಯಾಲಯದ ಮಹಾತ್ಮಾ ಗಾಂಧಿ ಪ್ರೊಫೆಸರ್ ಗೋಪಾಲ್ ಗುರು ಉಡುಪಿಗೆ ಬಂದಾಗ ಒಂದು ಆತಂಕದ ವಿಷಯ ತಿಳಿಸಿದರು. ಮುಂಬಯಿಯಲ್ಲಿ ಇಂದು ಮ್ಯಾಕ್‌ಡೊನಾಲ್ಡ್ ಕಂಪೆನಿಯಂಥ ದೊಡ್ಡ ದೊಡ್ಡ ಆಹಾರ ವಸ್ತು ತಯಾರೀ ಕಂಪೆನಿಗಳು, ಉದ್ಯೋಗನಿರತರಿಗೆ ಮಧ್ಯಾಹ್ನ ಊಟದ ಬುತ್ತಿಯನ್ನು ತಯಾರಿಸಿ ಅವರವರು ಕೆಲಸ ಮಾಡುವ ಜಾಗಕ್ಕೇ ರವಾನಿಸುವ ವ್ಯವಸ್ಥೆ ಆರಂಭಿಸಿವೆ. ಇದೊಂದು ದೊಡ್ಡ ಕೈಗಾರಿಕೆಯಾಗಿಯೇ ಬೆಳೆಯುತ್ತಿದ್ದು, ಈ ಬುತ್ತಿಗಳನ್ನು ವಿತರಿಸುವ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಹೆಚ್ಚುತ್ತಿರುವುದು ನಿಜ. ಈ ವಿತರಕರನ್ನು 'ಡಿಬ್ಬಾವಾಲಾಸ್'ಎಂದು ಕರೆಯುತ್ತಾರೆ. ಆದರೆ ಈ ಡಿಬ್ಬಾ ವಾಲಾಸ್ ಯಾರು, ಯಾವ ವರ್ಗದಿಂದ ಬಂದವರು ಎಂದು ಗಮನಿಸಿದಾಗ, ಅವರಲ್ಲಿ ಒಬ್ಬರೂ ದಲಿತರಿರಲಿಲ್ಲ. ಈ ದೇಶದ ಜಾತಿವ್ಯವಸ್ಥೆಯ ಮಡಿ-ಮೈಲಿಗೆ ನಂಬಿಕೆಯಿಂದಾಗಿ, ದಲಿತರು ಬೇಯಿಸಿದ ಅಥವಾ ಮುಟ್ಟಿದ ಆಹಾರ ಮೈಲಿಗೆಯೆಂದು ಪರಿಗಣಿಸಲ್ಪಟ್ಟಿದ್ದರಿಂದ ಬೇರೆ ಜಾತಿಯವರು ಅದನ್ನು ಮುಟ್ಟುವುದಿಲ್ಲ. ಹಾಗಾಗಿ, ಈ ಅವಮಾನಕರ ಸಾಮಾಜಿಕ ನಂಬಿಕೆ, ಏನೊಂದೂ ಆತಂಕವಿಲ್ಲದೆ ಜಾಗತೀಕರಣ ಯುಗದಲ್ಲೂ ಮುಂದುವರಿಯುತ್ತಿದೆ. ಯಾವುದೇ ವ್ಯಾಪಾರೀ ಕಂಪೆನಿ

ಯಾವಾಗಲೂ ವ್ಯಾಪಾರದ ತನ್ನ ಸ್ವಾರ್ಥದ ದೃಷ್ಟಿಯಿಂದ ಒಂದು ಪ್ರದೇಶದ ಸ್ಥಳೀಯ ನಂಬಿಕೆ, ಸಾಮಾಜಿಕ ವ್ಯವಸ್ಥೆಗಳನ್ನು ಕೆದಕಲು ಹೋಗುವುದಿಲ್ಲ. ಪ್ರಾಯಃ ಅವು ಆ ಶೋಷಣಾ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸುತ್ತಿರುತ್ತದೆ. ಈ ಎಲ್ಲ ವಿದ್ಯಮಾನಗಳ ಮೊತ್ತವಾಗಿ ದಲಿತರು ಬದುಕಿಕೊಂಡು ಬಂದ ಬಹುಮುಖೀ ಜೀವನಕ್ರಮ, ಸಮಾಜ, ಆರ್ಥಿಕ ಕಸುಬು - ಉಪಕಸುಬುಗಳೂ ಜಾಗತೀಕರಣ ಸಂದರ್ಭದಲ್ಲಿ ನಾಶವಾಗುತ್ತ ಮೇಲ್ವರ್ಗದ ಏಕಮಾದರಿಯ ಸಾಂಸ್ಕೃತಿಕ ಬದುಕಿನ ಶೈಲಿಯನ್ನು ಅನಿವಾರ್ಯವಾಗಿ ಅಪ್ಪಿಕೊಳ್ಳಬೇಕಾದ ಪರಿಸ್ಥಿತಿಯಿಂದ, ತಾವು ಸತತವಾಗಿ ಛಿದ್ರೀಕರಣಕ್ಕೊಳಗಾಗುತ್ತ, ಮತ್ತಷ್ಟು ವಿಫಲರಾಗುತ್ತ, ಸೊರಗುತ್ತ ಬರುತ್ತಿದ್ದಾರೆ.

ಜಾಗತೀಕರಣದ ಪ್ರಭುಶಕ್ತಿಯ ಒತ್ತಡಕ್ಕೆ ಮಣಿದು, ಸರಕಾರಗಳು ಸಂವಿಧಾನದಲ್ಲಿ ನಮೂದಿಸಿದ "ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ" ಯಲ್ಲಿ ಸೂಚಿಸಿದ ಸಮಸುಖೀ ರಾಜ್ಯ ಕಟ್ಟುವ ಸಾಮಾಜಿಕ ಜವಾಬ್ದಾರಿಯನ್ನೇ ಬಿಟ್ಟುಕೊಟ್ಟು, ಸಮಾಜದಲ್ಲಿ ದ್ವೀಪದಂತಿರುವ ಶ್ರೀಮಂತ ಲೋಕಕ್ಕೆ ಸಾಮಾನ್ಯ ಪ್ರಜಾವರ್ಗಗಳನ್ನು ಅಡಿಯಾಳಾಗಿಸಲಿಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವ ಆಡಳಿತ ಕೆಲಸಕ್ಕಷ್ಟೇ ಸೀಮಿತಗೊಂಡಿವೆ. ಬದುಕಿನ ಕನಿಷ್ಠ ಸೌಲಭ್ಯಗಳಾದ ಆಹಾರ ಭದ್ರತೆ, ಹಸಿವಿನಿಂದ ರಕ್ಷಣೆ, ಸಾರ್ವತ್ರಿಕ ಆರೋಗ್ಯ, ಶಿಕ್ಷಣ ಸೌಲಭ್ಯ ಪೂರೈಕೆ ಮುಂತಾದ ತನ್ನ ಮೂಲಭೂತ ಜವಾಬ್ದಾರಿಗಳನ್ನೂ ಬಿಟ್ಟುಕೊಟ್ಟು, ಜಾಗತಿಕ ಶಕ್ತಿಗಳಿಗೆ ಪೂರಕವಾಗಿ ಜನರ ಬದುಕುವ ಹಕ್ಕನ್ನೇ ಸೂಕ್ಷ್ಮವಾಗಿ ನಿರಾಕರಿಸುವ ಸರಕಾರಗಳ ಅತ್ಯಂತ ಸೂಕ್ಷ್ಮ ವಿಧಿ-ವಿಧಾನಗಳನ್ನು ಗಮನಿಸಿದರೆ, ಪ್ರಜಾಪ್ರಭುತ್ವವು ಪ್ರಜೆಗಳ ರಾಜಕೀಯ, ಸಾಮಾಜಿಕ ಬಲಿಷ್ಠೀಕರಣ ಪ್ರಕ್ರಿಯೆಯಾಗಿ ಸಂಪೂರ್ಣ ಸೋಲುತ್ತಿರುವುದು ವ್ಯಕ್ತವಾಗದಿರದು.

ಜಾಗತಿಕ ಮಾರುಕಟ್ಟೆ ಮೀಮಾಂಸೆಯಲ್ಲಿ ದೀರ್ಘಾವಧಿಯ ಜನಹಿತ ದರ್ಶನವೇ ಇಲ್ಲ ; ಮಾತ್ರವಲ್ಲ, ಸಾಮಾಜಿಕ ಹೊಣೆಯೇ ಇಲ್ಲದ ವ್ಯವಸ್ಥೆಗೆ ತನಗೆ ತಾನೇ ಸಾಮಾಜಿಕ ತಿರುವು ಕೊಟ್ಟುಕೊಳ್ಳುವ ಗುರಿ ಅಥವಾ ಸ್ವಯಂ ಸೌಲಭ್ಯ ಕೂಡ ಇಲ್ಲ, ಈ ಪರಿಸ್ಥಿತಿಯಲ್ಲಿ, ಬಹುರಾಷ್ಟ್ರೀಯ ಕಂಪೆನಿಗಳು ನಮ್ಮ ನೆಲದಲ್ಲಿ ಸಾಮಾಜಿಕ ನ್ಯಾಯ ಸಮಾನತೆಗಳಿಗೆ ಪ್ರಾಶಸ್ತ್ಯ ಕೊಟ್ಟಾವೇ? ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ಕೊನೆಯ ಪಕ್ಷ ಜನತಂತ್ರ ಸರಕಾರವಾದರೂ ತನ್ನ ಉಚಿತ ಸಾಮಾಜಿಕ ಧೋರಣೆಗಳ ಮೂಲಕ ಈ ಶಕ್ತಿಗಳನ್ನು ಜನಹಿತ ಆಶಯಗಳನ್ನು ಪೂರೈಸುವಂತೆ ಒತ್ತಾಯಿಸುವಲ್ಲಿ ಕಟ್ಟುನಿಟ್ಟಾಗಿ ವರ್ತಿಸಬೇಕು; ಮತ್ತು ಜನರನ್ನು ಶೋಷಕ ಶಕ್ತಿಗಳಿಂದ ರಕ್ಷಿಸಲು ಪ್ರಜೆಗಳ ಬಗ್ಗೆ ಮೃದು ಧೋರಣೆ ತಳೆಯಬೇಕು. ಇದು ಒಂದು ಪುರೋಗಾಮೀ ಸರಕಾರದ ಪ್ರಮುಖ ಜವಾಬ್ದಾರಿಯಾಗಿದೆ. ಆದರೆ ಸ್ವಾರಸ್ಯವೆಂದರೆ ಸರಕಾರವು ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಾ ಜನರ ವಿರುದ್ಧ ಕಟ್ಟುನಿಟ್ಟಾಗಿಯೂ, ಬಹುರಾಷ್ಟ್ರೀಯ ಕಂಪೆನಿಗಳಿಗೆ ಬೇಕಾದ ಅನುಕೂಲ ಮಾಡಿಕೊಡುವಲ್ಲಿ ಮೃದುವಾಗಿಯೂ ವರ್ತಿಸುತ್ತಿದೆ.

೨. ಸಂಬಂಧಗಳು

ಪರ್ಯಾಯಗಳ ಬಗ್ಗೆ ಅವಲೋಕಿಸುವ ಮೊದಲು, ಜಾಗತೀಕರಣದ ಜತೆ ಸೂಕ್ಷ್ಮವಾಗಿ

ಸಾವಯವ ಸಂಬಂಧ ಹೊಂದಿರುವ ಒಂದು ಪ್ರಮುಖ ಪ್ರಸ್ತುತ ವಿದ್ಯಮಾನವನ್ನು ಆತಂಕಪೂರ್ವಕವಾಗಿ ಪ್ರಸ್ತಾಪಿಸಿ ಮುಂದುವರಿಯುತ್ತೇನೆ.

ಜಾಗತೀಕರಣ ಮತ್ತು ಮತೀಯ ಮೂಲಭೂತವಾದವು ಅನೇಕ ಸಾಮ್ಯ ಲಕ್ಷಣಗಳಿಂದ ಒಂದನ್ನೊಂದು ಪೋಷಿಸಿಕೊಂಡಿರುವ ಮತ್ತು ಪರಸ್ಪರ ಶಕ್ತಿಯನ್ನು ಪಡೆದುಕೊಳ್ಳುತ್ತಿರುವ ಇಂದಿನ ಪ್ರಮುಖ ವಿದ್ಯಮಾನವಾಗಿದೆ. ಮತೀಯ ಮೂಲಭೂತವಾದದ ನೆಲೆ ಧರ್ಮವಾದರೆ, ಜಾಗತೀಕರಣದ ಮೂಲನೆಲೆ ವಿಜ್ಞಾನ. ಧರ್ಮ ಮತ್ತು ವಿಜ್ಞಾನಗಳು, ಉದಾತ್ತಾರ್ಥದಲ್ಲಿ ಸತ್ಯಶೋಧನೆಯ ಮಾರ್ಗವಾಗಿ ಬಿಡುಗಡೆಯತ್ತ ಮುನ್ನಡೆಸುವವುಗಳು. ಆದರೆ ಇವು ಎರಡೂ ಸ್ವಹಿತಾಸಕ್ತಿಗಳಿಂದ ದುರ್ಬಳಕೆಗೊಳಪಟ್ಟು, ಮೂಲಗುಣ ಕಳೆದುಕೊಂಡು ಭ್ರಷ್ಟಗೊಂಡಿವೆ. ಧರ್ಮವು ಸಾಂಸ್ಥೀಕರಣಗೊಂಡು ಮತೀಯ ಕಟ್ಟುನಿಟ್ಟಿನ ಅಂಧ ಮತಾಚರಣೆಗಳಾಗಿ ಭ್ರಷ್ಟಗೊಳ್ಳುತ್ತಾ ಹೋಯಿತು. ಮುಂದೆ ಮತ-ಮತಗಳ ಮೇಲಾಟದಲ್ಲಿ ಧರ್ಮವು ಕೇವಲ ಮತೀಯ ಮೂಲಭೂತವಾದಿಗಳ ಗುಂಪುಗಳಾಗಿ ಹರಳುಗಟ್ಟುತ್ತಾ ಹೋಗಿ ಜಡ್ಡುಗಟ್ಟಿತು. ಇತ್ತ ವಿಜ್ಞಾನವು ವಾಣಿಜ್ಯ ಹಿತಾಸಕ್ತಿಗಳಿಂದ, ಸುಖಭೋಗಗಳನ್ನು ತಣಿಸುವ ತಂತ್ರಜ್ಞಾನವಾಗಿ, ಮುಂದೆ ಕೇವಲ ನಿಯಂತ್ರಣಾತೀತ ಮಾರುಕಟ್ಟೆ ಆಧಾರಿತ ಅಭಿವೃದ್ಧಿ ಮಾದರಿಯನ್ನು ಪೋಷಿಸುವ ಸಾಧನವಾಗಿ, ಕೊನೆಯಲ್ಲಿ ಅಂತಃ ನಿರೀಕ್ಷಣೆಯೇ ಇಲ್ಲದ ಉಪಭೋಗವಾದ (consumerism) ವನ್ನು ಪೋಷಿಸುವ ಕೈಂಕರ್ಯಕ್ಕೆ ಇಳಿಯಿತು. ಕನ್ಸ್ಯೂಮರಿಸಂನ ವಿಕಾರಮುಖವಾದ ಜಾಗತೀಕರಣವೊಂದೇ ಅಭಿವೃದ್ಧಿಯ ಮಾರ್ಗವೆನ್ನುವ ಧೋರಣೆಯಿಂದ ವಿಜ್ಞಾನವೂ ತರ್ಕಾತೀತವಾಗಿ ಒಂದರ್ಥದಲ್ಲಿ ಮೂಲಭೂತವಾದವೇ ಆಗಿ ಪರಿವರ್ತನೆಯಾಯಿತೆನ್ನಬಹುದು.

ಕೋಮುವಾದ ಮತ್ತು ಜಾಗತೀಕರಣ - ಇವು ಎರಡೂ ತಮ್ಮ ತಮ್ಮ ಆಸಕ್ತಿಗಳನ್ನು ಕಾಪಾಡಿಕೊಳ್ಳಲು ಮತ್ತು ಜಗತ್ತನ್ನು ತಮ್ಮ "ಏಜೆಂಡಾ"ಗಳಿಗಾಗಿ ನಿಯಂತ್ರಿಸಲು, ಎಲ್ಲ ರೀತಿಯ ಆರ್ಥಿಕ - ಸಾಮಾಜಿಕ ವೈವಿಧ್ಯತೆಯನ್ನೂ, ಬಹುಮುಖೀ ಸಾಂಸ್ಕೃತಿಕ ಸಮಾಜವನ್ನೂ ವಿರೋಧಿಸುತ್ತಾ, ವಿಕೃತಗೊಳಿಸುತ್ತಾ ತಮಗೆ 'ಮ್ಯಾನೇಜ್' ಮಾಡಲು ಸಾಧ್ಯವಾಗಬಲ್ಲ ಏಕರೂಪದ ಪ್ರಬಲ ರಾಷ್ಟ್ರವನ್ನಾಗಿ (homogeneous strong nation) ಪಲ್ಲಟಿಸಲು ಶಪಥ ತೊಡುತ್ತವೆ. ತಮ್ಮ ಮೂಲ ಸ್ವರೂಪಗಳಲ್ಲೇ ಇವು 'ತಾನು' - 'ಅದು' ಎಂದು ವಿಭಜಿಸುತ್ತಾ 'ಅದನ್ನು', 'ತಾನು' ನಿಯಂತ್ರಿಸಿ ಇಚ್ಛಾನುಸಾರ ಭೋಗಿಸಲು ಬೇಕಾದ ಶಕ್ತಿಯನ್ನು ತನ್ನಲ್ಲಿ ಕೇಂದ್ರೀಕೃತಗೊಳಿಸಲು ಹುನ್ನಾರಗಳನ್ನು ನಡೆಸುತ್ತಿರುತ್ತವೆ. ನಿಯಂತ್ರಣಾತೀತ ಶಕ್ತಿಯ ಉಪಾಸನೆ ಮಾಡುವ ಈ ಎರಡೂ ಜಾಗತಿಕ ಪ್ರವೃತ್ತಿಗಳು ದಮನ- ದಬ್ಬಾಳಿಕೆಗಳಿಗೆ ಧರ್ಮ, ವಿಜ್ಞಾನಗಳನ್ನು ಬಳಸಿಕೊಳ್ಳುತ್ತವೆ.

ಇದಕ್ಕೆ ಪೂರಕವಾಗಿ, ವ್ಯವಸ್ಥೆಯನ್ನು ನಿಯಂತ್ರಿಸಿಕೊಳ್ಳಲಿಕ್ಕಾಗಿ ಈ ಜಾಗತಿಕ ಸಮಾಜ ಶಿಕ್ಷಣವನ್ನೂ ತನ್ನ ತತ್ತ್ವ ಮೀಮಾಂಸೆಯನ್ನೇ ಪರಿಣಾಮಕಾರಿಯಾಗಿ ಬಳಸುವ ಮಾಧ್ಯಮವಾಗಿ [illegible] ಮೂಲಕ ಜನರಿಗೆ ಈ ಜಾಗತಿಕ ಅರ್ಥವ್ಯವಸ್ಥೆಯೇ ಸರಿಯೆನ್ನುವ ನಿರ್ದಿಷ್ಟ ಲೋಕದೃಷ್ಟಿಯನ್ನು ಕಲಿಸುತ್ತದೆ. "ಎಡ್ವರ್ಡ್ ಸೈದ್, ಫ್ರಾಂಟ್ಜ್ ಫ್ಯಾನನ್ ಮುಂತಾದ ಚಿಂತಕರು ಅಭಿಪ್ರಾಯ ಪಡುವಂತೆ ಈ ನೋಟಕ್ರಮದಲ್ಲಿ ವಸಾಹತೀಕರಣದ ರಾಜಕಾರಣದಿಂದ ಪ್ರತ್ಯೇಕವಾಗಿ

ಉಳಿಯುವ ಸಾಂಸ್ಕೃತಿಕ ರಚನೆಗಳೇ ಇಲ್ಲ. ವಸಾಹತೀಕರಣದ ಜಾಗತಿಕ ಶಕ್ತಿಗಳು, ವಸಾಹತೀಕೃತ ದೇಶೀ ಸಂಸ್ಕೃತಿ-ಸಮಾಜಗಳ ಮೇಲೆ ಪೂರ್ಣ ಸಾಂಸ್ಕೃತಿಕ, ರಾಜಕೀಯ ದಿಗ್ವಿಜಯವನ್ನು ಸಾಧಿಸುತ್ತವೆ" ('ಸಾಹಿತ್ಯ ಕಥನ' - ಡಾ। ಡಿ. ಆರ್. ನಾಗರಾಜ್, ಆದರೆ, ತೃತೀಯ ಜಗತ್ತಿನಲ್ಲಿರುವ ಅಸಂಖ್ಯ ದೇಶೀ ಆಕೃತಿಗಳ ಶಕ್ತಿಯ ಬಗ್ಗೆ ಗಾಢ ವಿಶ್ವಾಸವಿದ್ದ ಡಿ. ಆರ್., ತಾನು ಸ್ವತಃ ಈ ವಾದವನ್ನು ಒಪ್ಪುವುದಿಲ್ಲ). ಈ ನೋಟಕ್ರಮದ ಪ್ರಮುಖ ಪರಿಣಾಮವೇನೆಂದರೆ ಬಹುಮುಖೀ ಆಯ್ಕೆಗಳ ಕಣ್ಮರೆ. ವಿಭಿನ್ನ ರೀತಿಯ, ಆರ್ಥಿಕ, ಸಾಮಾಜಿಕ ಬದುಕಿನ ಕ್ರಮಗಳನ್ನೂ, ಬದುಕಿನ ಒಳಗಿಯ ವಿವಿಧ ಸಾಧ್ಯತೆಗಳನ್ನೂ ಮತ್ತು ಮಾನವ ಸಮಾಜದ ಶ್ರೇಯೋಭಿವೃದ್ಧಿಗೆ ಅನೇಕಾನೇಕ ದಾರಿಗಳಿವೆ ಎಂಬುದನ್ನು ಅನ್ವೇಷಿಸುವ, ಕನಸು ಕಾಣುವ ಶಕ್ತಿಯನ್ನೂ ನಾವಿಂದು ಕಳಕೊಂಡಿದ್ದೇವೆ; ಮಾತ್ರವಲ್ಲ, ಪ್ರಗತಿಯ ನಿರ್ದಿಷ್ಟ ಸಿದ್ಧಾಂತಕ್ಕೇ ಅತು ಬಿದ್ದು ಮಾನವ ಜನಾಂಗದ ಭವಿಷ್ಯವನ್ನೇ ಮುಚ್ಚಿಕೊಳ್ಳುತ್ತ ಬರುತ್ತಿದ್ದೇವೆ ಎಂದು ಆಶಿಸ್ ನಂದಿ ಅಭಿಪ್ರಾಯ ಪಡುತ್ತಾರೆ. ಇದರ ಆತ್ಯಂತಿಕ ಸ್ಥಿತಿಯೇ 'ಸಾಂಸ್ಕೃತಿಕ ಶೂನ್ಯತೆ'. ಹಾಗಾಗಿಯೇ ಈ ಶಿಕ್ಷಣ ವ್ಯವಸ್ಥೆಯಲ್ಲಿ ಮನುಷ್ಯ ತನ್ನತನದಿಂದ ಪರಕೀಯನಾಗಿ, 'ಐಡೆಂಟಿಟಿ' ಕಳಕೊಂಡು, ಅಭದ್ರನಾಗುತ್ತಿದ್ದಾನೆ; ಮತ್ತು, ತನ್ನ ಮಾನಸಿಕ ಅಭದ್ರತೆಯನ್ನು ಪರಿಹರಿಸಿಕೊಳ್ಳುವ ಉಪಾಯವಾಗಿ ವಿಕಟಾಲದಲ್ಲಿ ಕೊಳ್ಳುಬಾಕನೂ, ಧಾರ್ಮಿಕ ಮತಾಂಧನೂ ಆಗಿ ರೂಪಾಂತರ ಹೊಂದುತ್ತಿದ್ದಾನೆ. ಆರ್ಥಿಕವಾಗಿ, ಸಾಮಾಜಿಕವಾಗಿ ದಿಕ್ಕು ಕೆಟ್ಟು, ಕಂಗಾಲಾದವನಲ್ಲಿ, ಮತೀಯ ಗುಂಪುಗಳು ಧರ್ಮೀಯ ಅಥವಾ ಜನಾಂಗೀಯ ಕಲ್ಪಿತ ಐಡೆಂಟಿಟಿಯನ್ನು ಪ್ರತಿಷ್ಠಾಪಿಸಿ ಬಿಡುವುದು ಬಹಳ ಸುಲಭದ ಕೆಲಸ. ಇಂದು ಅನೇಕ ನಿರುದ್ಯೋಗೀ ಯುವಕ-ಯುವತಿಯರು ಬಹುಬೇಗ ಉದ್ರೇಕಕಾರೀ ಮತಾಂಧ ಒತ್ತಾಸೆಗಳಿಗೆ ಹತಾಶೆಯಿಂದಲೇ ಬಲಿಬೀಳುತ್ತಿರುವುದನ್ನು ನಾವು ಗಮನಿಸಬಹುದು. ಇದನ್ನು ಗಮನಿಸುವಾಗ ನಿಜಕ್ಕೂ ಜಗತ್ತಿನಲ್ಲಿ ಆಧುನಿಕತೆಗೆ ವಿರೋಧವಾಗಿ ಇಸ್ಲಾಂ ಮತಾಂಧತೆ ಹುಟ್ಟಿಕೊಂಡಿರಬಹುದೇ, ಮತ್ತು ಭಾರತದಲ್ಲಿ ಮೂಲಭೂತವಾದವೇ ಆಧುನಿಕತೆಯ ಪ್ರಕಟರೂಪವಿರಬಹುದೇ ಎಂಬ ಜಿಜ್ಞಾಸೆ ಒಂದರೆ ಕ್ಷಣ ನನ್ನ ಮನಸ್ಸಿನಲ್ಲಿ ಮೂಡಿ ಮಾಯವಾಗುತ್ತದೆ. (ಈ ಮಹತ್ವದ ಚರ್ಚೆ, ನನ್ನ ಈ ಬರಹದ ಮೂಲ ಉದ್ದೇಶವಲ್ಲವಾದ್ದರಿಂದ, ಅದನ್ನು ಹೆಚ್ಚು ವಿಸ್ತೃತವಾಗಿ ಮುಂದುವರಿಸುವುದಿಲ್ಲ.)

ಈ ನೆಲದ ಆರ್ಥಿಕ- ಸಾಮಾಜಿಕ ಬಹುತ್ವವನ್ನು ಕಡೆಗಣಿಸಿ ಒಪ್ಪಿಕೊಂಡ ಏಕೀಕೃತ ಅಭಿವೃದ್ಧಿ ಯೋಜನೆ ಮತ್ತು ಇಂದಿನ ಜಾಗತೀಕರಣಗಳು ಪ್ರಜೆಗಳನ್ನು ಹೆಚ್ಚು ಹೆಚ್ಚು ಸಂಕುಚಿತಗೊಳಿಸುತ್ತಿರುವುದಂತೂ ಖಂಡಿತ. ಯುರೋಪ್ಯ ಮಾದರಿಯ ಪ್ರಗತಿ ಸಿದ್ಧಾಂತ ಮನುಷ್ಯನ ಬೇರುಗಳನ್ನು ಬುಡಮೇಲು ಮಾಡುವ ಮೂಲಕ, ಆತನನ್ನು ಸಾಂಸ್ಕೃತಿಕ ವಿಸ್ಮೃತಿಗೆ ಕೆಡವಿ, ಪರೋಕ್ಷವಾಗಿ ಆತನನ್ನು ಮೂಲಭೂತವಾದಿಯಾಗಿ ಪರಿವರ್ತಿಸುತ್ತಿದೆಯೇ? ಇದು ನಿಜವಾದರೆ, ಜಾಗತೀಕರಣ ಪ್ರಕ್ರಿಯೆ ಮುಂದುವರಿದಂತೆ ಭಾರತದಲ್ಲಿ ಮತೀಯ ಗಲಭೆ, ಜನಾಂಗೀಯ ಸಂಘರ್ಷಗಳು ಇನ್ನೂ ಉಲ್ಬಣಿಸಿ, ಭವಿಷ್ಯದಲ್ಲಿ ಇನ್ನಷ್ಟು ಗುಜರಾತುಗಳು ನಿರ್ಮಾಣವಾದಾವೇ? ದೇಶದಲ್ಲಿ ಮತೀಯ ಮೂಲಭೂತವಾದಿಗಳು, ವಿಭಜನಾವಾದಿಗಳು ಮೇಲ್ಗೈ ಸಾಧಿಸಿಯಾರೇ ? ನಾಗರಿಕ ಸಮಾಜ ಸಂಪೂರ್ಣ ಭಗ್ನಗೊಂಡು ಕುಸಿದು ಬೀಳಬಹುದೇ ? ಭಾರತ ಎರಡು

ನಾಗರಿಕತೆಗಳಾಗಿ ಒಡೆದು ನಾಗರಿಕ ಸಂಘರ್ಷಕ್ಕೆಡೆ ಮಾಡಿಕೊಡಬಹುದೇ ? ಇವು ನನ್ನ ಆತಂಕದ ವೈಯಕ್ತಿಕ ಪ್ರಶ್ನೆಗಳು.

## ೬. ಪರ್ಯಾಯ ಸಾಧ್ಯತೆಗಳು : ಗಾಂಧಿ

ಜಾಗತೀಕರಣಕ್ಕೆ ಪರ್ಯಾಯ ಎಂಬುದು ಬದಲಾವಣೆಯ ಭಾಷೆಯಲ್ಲ. ೧೯೮೦ರಿಂದೀಚೆ 'ರ್‍ಯಾಡಿಕಲ್' ರಾಜಕೀಯವು ಈ ದೇಶದಲ್ಲಿ ಇಳಿಮುಖವಾಗುತ್ತಿದ್ದಂತೆ ಚಾಲ್ತಿಗೆ ಬಂದ ಪರಿಕಲ್ಪನೆಯಿದು. ಈಗ ಇರುವ ರಾಜಕೀಯ ಪ್ರಕ್ರಿಯೆ, ಚಿಂತನೆ, ನಿರ್ಮಿತಿಗಳೊಳಗೇನೇ, ಮನುಷ್ಯ ಮತ್ತು ವಸ್ತು ಪರಿಕರಗಳನ್ನು ಬೇರೆ ರೀತಿಯಲ್ಲಿ ಜೋಡಿಸುವುದನ್ನಷ್ಟೇ ಈ ಪರಿಕಲ್ಪನೆ ಸೂಚಿಸುತ್ತದೆ. ಹಾಗಾಗಿ ಜಾಗತೀಕರಣಕ್ಕೆ ಪರ್ಯಾಯ ಎನ್ನುವ ಬದಲು ಪ್ರತಿರೋಧ (challenge) ಎಂಬುದು ಹೆಚ್ಚು ಉಚಿತವಾದೀತು. ನಿರಂತರ ಅಭಿವೃದ್ಧಿಗೆ (sustainable development) ಸಾಧನವಾದ ಯಾವ ಅಭಿವೃದ್ಧಿ ರಚನೆ ಜಾಗತೀಕರಣಕ್ಕೆ ಪ್ರತಿರೋಧ ನೀಡೀತು?

ನನ್ನ ಅನಿಸಿಕೆಯಂತೆ, ಏಕರೂಪೀ ಜಗತ್ತಿನ ಕೇಂದ್ರಿಕೃತ ಪ್ರಭುತ್ವವನ್ನು ಬಯಸುವ ಜಾಗತೀಕರಣ ಹಾಗೂ ಅದರ ಜತೆ ಜತೆಯೇ ಉಲ್ಬಣಿಸುತ್ತಿರುವ ಕೋಮು ಮೂಲಭೂತವಾದ ಮತ್ತು ಎಲ್ಲ ರೀತಿಯ ಇಂಥ ಪ್ರಭುತ್ವದ ಭಾಷೆ, ಸಂಕೇತ, ಆಕೃತಿ, ಪ್ರಕ್ರಿಯೆಗಳನ್ನು ಎದುರಿಸಲು ಗಾಂಧಿಯತ್ತ ಮರಳುವುದು ಒಂದು ಉತ್ತಮ ಮಾರ್ಗ. ಗಾಂಧಿ ಪ್ರತಿನಿಧಿಸುವ ಮೌಲ್ಯಗಳಾದ ಗ್ರಾಮಸ್ವರಾಜ್ಯ, ವಿಕೇಂದ್ರಿಕೃತ ಸ್ಥಳೀಯ ಉತ್ಪನ್ನ ಹಾಗೂ ಮಾರುಕಟ್ಟೆ ಮಾದರಿ, ಮತ್ತು ಇದಕ್ಕೆ ಪೂರಕವಾಗಿ ಜನರ ಸಹಭಾಗಿತ್ವದ ಪ್ರಜಾತಾಂತ್ರಿಕ ರಾಜಕೀಯವನ್ನು ಅರ್ಥಪೂರ್ಣ ಹಾಗೂ ಸತ್ವಯುತಗೊಳಿಸುವ ನಿಟ್ಟಿನಲ್ಲಿ ಪ್ರಜಾಪ್ರಭುತ್ವವನ್ನು ಪುನರ್ವ್ಯಾಖ್ಯಾನಿಸುವುದು, ಇಂದು ತಪ್ಪು ತಪ್ಪಾಗಿ ವಿಶ್ವಮಾನ್ಯತೆ ಪಡೆದ ಜಾಗತಿಕ ಮಾರುಕಟ್ಟೆ ವ್ಯವಸ್ಥೆಗೆ ಪ್ರಬಲ ಸವಾಲಾಗಬಲ್ಲ ಸಾಧ್ಯತೆ ಪಡೆದಿದೆ. ಈ ರಾಜಕೀಯ ಮಾರ್ಗದಲ್ಲಿ ಅನೇಕ ತೊಡಕುಗಳಿದ್ದರೂ ಕೂಡ, ಇದಕ್ಕಿಂತ ಉತ್ತಮ ಮಾರ್ಗ ನಮ್ಮ ಮುಂದಿಲ್ಲ.

ಆದರೆ ಜನತಾಂತ್ರಿಕ ರಾಜಕೀಯದ ನಿಜ ಆಶಯ ಮತ್ತು ಮಾರುಕಟ್ಟೆ ಆರ್ಥಿಕತೆಯ ಆಶಯಗಳು ಪರಸ್ಪರ ವಿರುದ್ಧ ಗತಿಯಲ್ಲಿ ಭಿನ್ನ ನೆಲೆಗಳತ್ತ ಚಲಿಸುತ್ತಿರುತ್ತವೆ. ರಾಜಕೀಯ ಆಶಯವು ನಿಜಕ್ಕೂ ಜನಸಾಮಾನ್ಯರ ಏಳಿಗೆಯನ್ನು ಬಯಸುವುದಾದರೆ, ಜನರು ತಮ್ಮ ಏಳಿಗೆಗೆ ಅಗತ್ಯವಾದ ನಿರ್ಧಾರಗಳನ್ನು ತಾವೇ ಪಾರದರ್ಶಕತೆಯಿಂದ ತೆಗೆದುಕೊಳ್ಳಲು ಸಾಧ್ಯವಾಗುವುದೇ ಅದನ್ನು ಸಾಧಿಸುವ ಖಂಡಿತ ಮಾರ್ಗ. ಇದು ಸಫಲ ಜನತಾಂತ್ರಿಕ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯ. ಆಗ ಮಾತ್ರ ಜನರು ತಮ್ಮ ಬದುಕಿನ ನಿರ್ಧಾರಗಳನ್ನು ತಾವೇ ಸಾಮೂಹಿಕವಾಗಿ ತೆಗೆದುಕೊಳ್ಳುವ ಗಾಂಧೀಜಿಯ ಸ್ವರಾಜ್ಯದ ಕಲ್ಪನೆ ಫಲಿಸುತ್ತದೆ. ಈ ಅರ್ಥದಲ್ಲಿ, ವಿಶ್ವ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕುವ ನಿರ್ಧಾರ ಪಾರ್ಲಿಮೆಂಟಿನಲ್ಲಿ ಚರ್ಚೆಗೇ ಬರದೆ, ಮಂತ್ರಿ ಮಂಡಲದಲ್ಲೇ ತೀರ್ಮಾನವಾದದ್ದು, ಭಾರತೀಯ ಗಣತಂತ್ರದ ಮೇಲೆ ಜಾಗತಿಕ ವ್ಯವಸ್ಥೆಯ ದಬ್ಬಾಳಿಕೆ ಮತ್ತು ಜನತಂತ್ರದಲ್ಲಿ ಜನರ ಸಹಭಾಗಿತ್ವದ ಸಂಪೂರ್ಣ ವಿಫಲತೆಯನ್ನು ಸೂಚಿಸುತ್ತದೆ.

ಅಂದರೆ ಈ ಸಾಮೂಹಿಕ ನಿರ್ಧಾರಗಳ ನೆಲೆ, ತಳಮಟ್ಟದಲ್ಲಿ ಸ್ಥಳೀಯ ಸಮುದಾಯ

ಗಳಲ್ಲಿದ್ದರೆ, ಈ ಪ್ರಕ್ರಿಯೆ ಸತ್ವಶಾಲಿಯಾಗಿರುತ್ತದೆ. ನಿರ್ಧಾರದ ನೆಲೆ, ಮೇಲ್ಮುಖ ಚಲಿಸುತ್ತಾ ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಕೇಂದ್ರೀಕೃತಗೊಂಡಂತೆ ಜನರ ಸಹಭಾಗಿತ್ವ ಅರ್ಥಹೀನವಾಗುತ್ತ ಹೋಗುತ್ತದೆ.

ಆದರೆ ಮಾರುಕಟ್ಟೆಯ ಆಶಯಗಳು ಇದಕ್ಕೆ ತದ್ವಿರುದ್ಧವಾಗಿರುತ್ತದೆ. ತಳಮಟ್ಟದಲ್ಲಿ ಮಾರುಕಟ್ಟೆಗೆ ಲಾಭಗಳಿಕೆಯ ಸಾಮರ್ಥ್ಯ ಕಡಿಮೆಯಿದ್ದು, ಮೇಲ್ಮುಖವಾಗಿ ಚಲಿಸುತ್ತಾ ರಾಜ್ಯ, ರಾಷ್ಟ್ರ, ಜಾಗತಿಕ ಮಟ್ಟಕ್ಕೆ ಬಂದಾಗ, ಲಾಭ ಗಳಿಸುವ ಸಾಮರ್ಥ್ಯ ರಾಕ್ಷಸೀಯವಾಗಿ ಹೆಚ್ಚುತ್ತದೆ. ಹಾಗಾಗಿ, ಮಾರುಕಟ್ಟೆ ಶಕ್ತಿಗಳು ಯಾವಾಗಲೂ ರಾಷ್ಟ್ರೀಯ ಸರಕಾರಗಳ ಜತೆ ವ್ಯವಹರಿಸಲು ಇಚ್ಛಿಸುತ್ತವೆ. ಈ ಜಾಗತಿಕ ಶಕ್ತಿಗಳಿಗೆ, ತಳಮಟ್ಟದ ರಾಜಕೀಯ ವ್ಯವಸ್ಥೆಯಾದ ಗ್ರಾಮ ಪಂಚಾಯತುಗಳ ಜತೆ ಸಂಧಾನಗಳನ್ನು ಮಾಡುವ ಶಕ್ತಿ ಹಾಗೂ ನೆಲೆಗಳೇ ಇರುವುದಿಲ್ಲ. ಹಾಗಾಗಿಯೇ, ಜಾಗತಿಕ ವ್ಯಾಪಾರೀ ವ್ಯವಸ್ಥೆಯೇ ಜನರ ಸಹಭಾಗಿತ್ವದ ಪ್ರಜಾಪ್ರಭುತ್ವ ಮಾದರಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿರುತ್ತವೆ; ಮತ್ತು ಅವು ರಾಷ್ಟ್ರೀಯ ಸರಕಾರಗಳನ್ನೇ ನಿಯಂತ್ರಿಸಿ ತಮ್ಮ ವ್ಯಾಪಾರಕ್ಕೆ ಅನುಕೂಲವಾಗುವಂತೆ ಮಣಿಸಲು ಪ್ರಯತ್ನಿಸುತ್ತಿರುತ್ತವೆ. ವಿಶ್ವವ್ಯಾಪಾರೀ ಒಪ್ಪಂದ ಈ ಪ್ರಯತ್ನದ ಒಂದು ಅಭಿವ್ಯಕ್ತಿಯಷ್ಟೇ. ಕೈಗಾರಿಕಾ ಸಮಾಜದ ಗರ್ಭದಲ್ಲೇ ಅಡಗಿರುವ ಕೇಂದ್ರೀಕರಣದ ಸೆಳೆತವನ್ನು ಸೂಕ್ಷ್ಮವಾಗಿ ಗಮನಿಸಿಯೇ, ಗಾಂಧೀಜಿ, ಗ್ರಾಮ ಸ್ವರಾಜ್ಯದ ವಿಕೇಂದ್ರೀಕರಣದ ಬಯಲ ತತ್ವಕ್ಕೆ ಅಷ್ಟೊಂದು ಮಹತ್ವ ಕೊಟ್ಟಿರುವುದು ಸ್ವಯಂ ಸ್ಪಷ್ಟ.

ಜನರು ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ನಾವು ನಿಜಕ್ಕೂ ಮಾತಾಡುವುದಾದರೆ, ಮಾರುಕಟ್ಟೆ ಸ್ಥಳೀಯ ನೆಲೆಗೆ ವಿಕೇಂದ್ರೀಕರಣಗೊಳ್ಳುವುದು ಅನಿವಾರ್ಯ. ಆಗ ಮಾತ್ರ ಜನರ ಕ್ರಿಯಾತ್ಮಕ ಸಹಭಾಗಿತ್ವ ಸಾಧ್ಯ. ಆದರೆ ಇದಕ್ಕೆ ಪ್ರಜಾಪ್ರಭುತ್ವದ ನೆಲೆಗಳನ್ನು ಭದ್ರಗೊಳಿಸಬೇಕಾಗಿದೆ; ಮತ್ತು ಜನತಾಂತ್ರಿಕ ಸರಕಾರಗಳು ನಿಜಕ್ಕೂ ಜೀವ ಪೋಷಕವಾಗಿಯೇ ಕರ್ತವ್ಯ ನಿರ್ವಹಿಸುವಂತೆ ಮಾಡಲು ಪ್ರಜೆಗಳು ಜಾಗೃತರಾಗಿದ್ದು, ಸಂವಾದ, ಚರ್ಚೆ, ಚಳವಳಿಗಳ ಮೂಲಕ ಸತತವಾಗಿ ಸರಕಾರವನ್ನು ಎಚ್ಚರಿಸುತ್ತಾ, ಒತ್ತಾಯಿಸುತ್ತಾ ಇರಬೇಕಾಗುತ್ತದೆ.

ಪ್ರಜಾಪ್ರಭುತ್ವ ರಾಜಕೀಯದಲ್ಲಿ ಸರಕಾರಗಳ ಕ್ರಿಯಾತ್ಮಕ ಸಾಮಾಜಿಕ ಪಾತ್ರ ಬಹಳ ಆವಶ್ಯವಾಗಿದೆ. ಹಾಗಾಗಿ ಜಾಗತಿಕ ಶಕ್ತಿಗಳು ರಾಷ್ಟ್ರೀಯ ಸರಕಾರಗಳ ಮೇಲೆ ದಮನಕಾರೀ ಒತ್ತಡವನ್ನು ಮೇಲಿನಿಂದ ತರುತ್ತಿರುವಾಗ, ಪ್ರಜೆಗಳು ಇದರ ವಿರುದ್ಧ ಸಾಕಷ್ಟು ಪ್ರತಿ ಒತ್ತಡ (counter pressure) ನಿರ್ಮಾಣಮಾಡಿ, ನಮ್ಮ ಸರಕಾರಗಳು ಜಾಗತಿಕ ಶಕ್ತಿಗಳ ಆಶಯಗಳ ಎದುರು ಅಧೀರರಾಗದೆ ನಿಲ್ಲುವಷ್ಟು ಪ್ರಜ್ಞೆ ಮತ್ತು ಚೈತನ್ಯ - ಎರಡನ್ನೂ ಅಂತರಂಗೀಕರಿಸಿ ಕೊಳ್ಳುವಂತೆ ಪ್ರಚೋದಿಸಬೇಕು.

ಜನತಾಂತ್ರಿಕ ರಾಜಕೀಯದಲ್ಲಿ ಮಾತ್ರ ಸರಕಾರಗಳು ಪರಿಣಾಮಕಾರಿಯಾಗಿ ಸಮಾಜದ ಎಲ್ಲ ವರ್ಗಗಳನ್ನೂ ಒಳಗೊಳ್ಳುವಂತೆ ಸಾಮಾಜಿಕ ಒಳಿತನ್ನು ಸಾಧಿಸುವ ಶಕ್ತಿ ಸಾಧ್ಯತೆಗಳನ್ನು ಪಡೆದಿವೆ ಎಂದು ನನ್ನ ನಂಬಿಕೆ. ವಿಕೇಂದ್ರೀಕೃತ ಸ್ಥಳೀಯ ನೆಲೆಯಲ್ಲಿ ಅಲ್ಲೊಂದು, ಇಲ್ಲೊಂದು ಜನಸಂಘಟನೆಗಳು ಯಶಸ್ವಿಯಾಗಿ ಜನಹಿತ ಕೆಲಸ ಮಾಡಿದ ನಿದರ್ಶನಗಳು ಸಿಗುತ್ತವೆ.

ಉದಾಹರಣೆಗೆ, ಅಂತರ್ಜಲ ಅಭಿವೃದ್ಧಿಗೆ ಅಣ್ಣಾ ಹಜಾರೆ ಮಾಡಿದ ಪ್ರಾಮಾಣಿಕ ಕೆಲಸ, ಚಂಡೀದಾಸ ಭಟ್ ಹಿಮಾಲಯ ತಪ್ಪಲಲ್ಲಿ ಯಶಸ್ವಿಯಾಗಿ ನಡೆಸಿದ ಕಾಡು ಉಳಿಸುವ ಚಿಪ್ಕೋ ಆಂದೋಳನ - ಇವು ರಾಷ್ಟ್ರದ ಗಮನ ಸೆಳೆದಿವೆ. ಆದರೆ ಇಂಥ ಚಳವಳಿಗಳು ಜನತಂತ್ರ ಸರಕಾರದ ಮೂಲಕ ಸಾರ್ವತ್ರೀಕರಣಗೊಂಡಾಗ ಮಾತ್ರ ಅವು ಸಮಷ್ಟಿ ಹಿತ ಸಾಧಿಸುವ ಸಾಧ್ಯತೆ ಪಡೆಯುತ್ತವೆ. ಇಂಥ ಪ್ರತ್ಯೆ ಪ್ರತ್ಯೇಕ ಪ್ರಯತ್ನಗಳ ಎಳೆಗಳು ಸಮಗ್ರವಾಗಿ ಹೆಣೆದುಕೊಂಡು ದೇಶವ್ಯಾಪಿಯಾಗಿ ಪಸರಿಸಬೇಕು. ರಾಜ್ಯ ಸರಕಾರಗಳು ಇಂಥ ಮಾದರಿಗಳನ್ನು ತಮ್ಮ ಯೋಜನೆಯಲ್ಲಿ ಅಂತರಂಗೀಕರಿಸಿಕೊಂಡಾಗ, ಅವು ರಾಜ್ಯವ್ಯಾಪಿಯಾಗಿ ಕನಿಷ್ಠರಲ್ಲಿ ಕನಿಷ್ಠರನ್ನೂ ತಲುಪುವ ಸಾಧ್ಯತೆಯಿದೆ.

ಆದರೆ 'ಅಣ್ಣಾ ಹಜಾರೆ ಮಾದರಿ'ಯಂಥ ವಿಶಿಷ್ಟ ಮಾದರಿಗಳು ಸರಕಾರದ ಗಮನ ಸೆಳೆಯಲು ಕಾಲಾವಕಾಶ ಬೇಕಾಗುತ್ತದೆ. ಪ್ರಜಾಪ್ರಭುತ್ವ ಮಾರ್ಗದಲ್ಲಿ ಸರಕಾರಗಳು ಕಲಿಯುವ ಪ್ರಕ್ರಿಯೆಯೇ ನಿಧಾನ. ಇದು ಸಂವಾದ, ಚರ್ಚೆ, ಸಂಧಾನ-ಅನುಸಂಧಾನಗಳ ಮೂಲಕ, ಸಕಾರಾತ್ಮಕ ಚಳುವಳಿಗಳ ಮೂಲಕ ಘಟಿಸಬೇಕಾಗುತ್ತದೆಯೇ ವಿನಾ ಬಲವಂತದಿಂದಲ್ಲ.

ಆದ್ದರಿಂದಲೇ ಪ್ರಜಾಪ್ರಭುತ್ವ ರಾಜಕೀಯ ತುಂಬ ಕ್ಲಿಷ್ಟಕರವಾದ ಪ್ರಕ್ರಿಯೆ. ಆದರೆ ಸದ್ಯದ ಮಟ್ಟಿಗೆ ಅದಕ್ಕೆ ಪರ್ಯಾಯಗಳಿಲ್ಲ, ಒಳದಾರಿಗಳಿಲ್ಲ. ಆದರೆ ನಮ್ಮ ಸುಶಿಕ್ಷಿತರಲ್ಲನೇಕರು ಜನತಂತ್ರದ ತಮ್ಮ ಕನಿಷ್ಠ ಜವಾಬ್ದಾರಿಗಳಿಂದಲೂ ನುಣುಚಿಕೊಂಡು, ಸಂವಾದ ಚರ್ಚೆ, ಜನರ ಪಾಲುಗೊಳ್ಳುವಿಕೆಯ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ತಾಳ್ಮೆ ವ್ಯವಧಾನಗಳಿಲ್ಲದೆ ಅತಿ ಬೇಗ ಸಿನಿಕರಾಗಿ ಸರಕಾರವನ್ನು ಒಟ್ಟಾರೆಯಾಗಿ ದೂಷಿಸುತ್ತಾ ಸರಕಾರವೇ ಬೇಡ ಎನ್ನುವಷ್ಟರ ಮಟ್ಟಿಗೆ 'ಅನಾರ್ಕಿಸ್ಟ್' ಆಗಿಬಿಡುತ್ತಾರೆ. ಇಂಥವರು ಮೂಲಭೂತವಾದಿಗಳಷ್ಟೇ ಅಪಾಯಕಾರಿಗಳಾಗಿ ಬಿಡುವ ಸಂಭವವಿದೆ. ಇದು ನಿಜಕ್ಕೂ ಪ್ರಜಾಪ್ರಭುತ್ವದ ಅಣಕ. ನಮ್ಮ ಶಿಕ್ಷಣ ನಿಜಕ್ಕೂ 'ಎನೇಬ್ಲಿಂಗ್' (enabling) ಶಿಕ್ಷಣ ಆಗಿಲ್ಲದಿರುವುದೇ ಇದಕ್ಕೆ ಕಾರಣವೆನ್ನಬಹುದು. ಆದರೆ ನಮಗೆ ಗಣತಂತ್ರ ರಾಜಕೀಯ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಹಾಜರಾಗುವ ಹೊಣೆಯಿದೆ. ದೇಶದ ರಾಜಕೀಯ ಪ್ರಕ್ರಿಯೆಗಳ ಮೇಲೆ ನಮಗೆ ಪ್ರಭಾವ ಬೀರಲು ಸಾಧ್ಯವಾಗದಿದ್ದರೆ, ನಾವು ಉತ್ತಮ ಪ್ರಜೆಗಳಾಗಲಾರೆವು; ಮಾತ್ರವಲ್ಲ, ಅಂಥ ಪ್ರಜಾತಾಂತ್ರಿಕ ವ್ಯವಸ್ಥೆಯೇ ಪೊಳ್ಳಾಗಿಬಿಡಬಹುದು.

ಇದೂವರೆಗೂ ನಾವು ಇಂದಿನ ಈ ಜಾಗತಿಕ ಆರ್ಥಿಕ ಸಂದರ್ಭದಲ್ಲಿ ಪ್ರಜಾತಾಂತ್ರಿಕ ಒಳಲೋಕದ ಗಟ್ಟಿ ನೆಲೆಗಳ ಆವಶ್ಯಕತೆಯ ಬಗ್ಗೆ ವಿವರಿಸಿದೆ. ಇಂಥ ಗಟ್ಟಿ ನೆಲೆಯಲ್ಲಿ, ಜಾಗತೀಕರಣಕ್ಕೆ ಪ್ರತಿರೋಧಾತ್ಮಕತೆಯು ಯಾವ ಜೀವಶಕ್ತಿಯ ಮೂಲದಿಂದ ಹಾಜರಾಗಬಹುದು ಎಂಬುದನ್ನು ಸ್ವಲ್ಪ ವಿಸ್ತಾರವಾಗಿ ಗಮನಿಸುವ. ಸಾಮಾನ್ಯ ಜನರ ದೈನಂದಿನ ಬದುಕಿನ ಸತ್ಯಗಳಲ್ಲೇ ಜಾಗತೀಕರಣದ ವಿರುದ್ಧ ವಿದ್ರೋಹೀ ನೆಲೆಗಳು ನಿಜಕ್ಕೂ ಮೂರ್ತವಾಗಿ ಹರಳುಗಟ್ಟಲು ಖಂಡಿತ ಸಾಧ್ಯ ಎಂದು ನನ್ನ ನಮ್ರ ತಿಳುವಳಿಕೆ. ಇಂದಿನ ಪಶ್ಚಿಮಪ್ರಣೀತ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬಿಕ್ಕಟ್ಟಿನ ಸಂದರ್ಭದಲ್ಲಿ, ಮತ್ತೆ ಮತ್ತೆ ನಾವು ಜನಸಾಮಾನ್ಯರ ದೈನಂದಿನ ಕಾಯಕದ ಬದುಕಿನ ಬತ್ತದ ನೆಲೆಗಳನ್ನು (ordinary life) ಸಂದರ್ಶಿಸಿ ಅವರಲ್ಲಡಗಿ ಕೂತಿರುವ ಸತ್ತ್ವವನ್ನು

ಯಾವೊಂದೂ ಪೂರ್ವಾಗ್ರಹವಿಲ್ಲದ ಮರುವಿಮರ್ಶೆಗೊಡ್ಡಬೇಕು. ದೈನಂದಿನ ಬದುಕು ಷರತ್ತು ರಹಿತವಾಗಿ (unconditional), ಸಮಗ್ರವಾಗಿ, ವರ್ತಮಾನದಲ್ಲಿ ಜರಗುತ್ತಿರುವಂಥದು. ಸತ್ಯ-ಅಸತ್ಯ, ಒಳ್ಳೆಯದು-ಕೆಟ್ಟದು, ಸೌಂದರ್ಯ-ಕುರೂಪತೆ - ಎಲ್ಲವೂ ಈ ದೈನಂದಿನ ಕಾಯಕದ ಬದುಕಿನ ವಿವಿಧ ಮೈಗಳಾಗಿದ್ದು, ಶ್ರೀಮಂತಿಕೆಯಿಂದ ತುಂಬಿಕೊಂಡಿದ್ದು, ಅಖಂಡವಾಗಿದೆ. ನಿಜಕ್ಕೂ ಸತ್ಯ-ತತ್ವದ ಮೂಲಸೆಲೆಯಾಗಿದೆ. ಜಾಗತಿಕ ವಸಾಹತೀಕರಣ ಶಕ್ತಿಗಳು, ದೈನಂದಿನ ಸಾಮಾನ್ಯ ಬದುಕಿನ ಅಸಂಖ್ಯ ಆಕೃತಿಗಳ ಸಂಕೀರ್ಣತೆಯನ್ನು ಅಸಹನೆಯಿಂದ ಮುಗ್ಧವೆಂದು ಸರಳೀಕರಿಸಿ ನಿರಾಕರಿಸಿದರೂ, ಅಲ್ಲಿ ಅಡಕವಾಗಿರುವ ಅಂತರ್ ಪ್ರಕ್ರಿಯೆಯೇ ನಿಜಕ್ಕೂ ಅತ್ಯಂತ ಮೂಲಭೂತವಾದ ಬದುಕಿನ ಕ್ರಮ; ಮಾತ್ರವಲ್ಲ, ಅದಿಲ್ಲದೆ ಬದುಕೇ ಇಲ್ಲ. ಯಾವುದೇ ನಂಬಿಕೆ, ಭಾವನೆ, ಕಲ್ಪನೆ, ಸಿದ್ಧಾಂತ, ನಿರ್ಮಿತಿಗಳು ಈ ಬಹು ರೂಪತೆಯ ಜೀವನ ಕ್ರಮವನ್ನು ಸ್ವಾಧೀನ ಪಡಿಸಿಕೊಳ್ಳಲು (appropriate ಮಾಡಲು) ಸಾಧ್ಯವಿಲ್ಲ. ಆದರೂ ಬದುಕಿನ ಈ ಅಪಾರ ಶ್ರೀಮಂತಿಕೆಯನ್ನು ಪ್ರಸ್ತುತಕ್ಕೂ ಪುನರ್ರಚಿಸಿಕೊಳ್ಳುವುದು ಅಷ್ಟೇನೂ ಕಷ್ಟವಲ್ಲ, ಅದೇ'ಆರ್ಡಿನರಿ ಲೈಫ್'ನ (ಸಾಮಾನ್ಯ ಜೀವನ) ಸೌಂದರ್ಯ ಕೂಡ.

ಜನ ಸಮೂದಾಯದ ದೈನಂದಿನ ಬದುಕಿನ ಕ್ರಮಗಳು ನಿರಂತರ ಅಭಿವೃದ್ಧಿಗೆ (ಸಸ್ಟೇನೆಬಲ್) ಪೂರಕವಾಗಿದೆ. ಈ 'ಸಸ್ಟೇನೆಬಲ್'ಸಮುದಾಯಗಳ ಬದುಕಿನ ಸಂರಚನೆಗಳು, ನಾವು ಬದುಕುತ್ತಿರುವ 'ಅನ್‌ಸಸ್ಟೇನೆಬಲ್' ಸಮುದಾಯಗಳ ಬದುಕಿನ ಸಂರಚನೆಗಿಂತ, ಆಶಯ - ಆಕೃತಿಗಳೆರಡರಲ್ಲೂ ತೀರ ಭಿನ್ನ. 'ಅನ್‌ಸಸ್ಟೇನೆಬಲ್' ಸಮುದಾಯಗಳಿಗೆ ಸತ್ಯವು ವಿಜ್ಞಾನದ ಅನ್ವೇಷಣೆಯಂತೆ ಹೊರಗಿನಿಂದ ಅರಸುವ ಸಂಗತಿಯಾದರೆ, ಸಾಮಾನ್ಯ ಜನ ಸಮುದಾಯಗಳು, ಸತ್ಯವನ್ನು ತಮ್ಮ ಬದುಕಿನ ಜೀವ ಶಕ್ತಿಯ ಮೂಲಕವೇ ಸತತವಾಗಿ ಬೇಕಾದಂತೆ ಕಟ್ಟುತ್ತಾ (construct), ಮುರಿಯುತ್ತಾ (deconstruct) ವರ್ತಮಾನದ ಜೀವಂತಿಕೆಯಲ್ಲೇ ರೂಪಿಸುತ್ತಿರುತ್ತವೆ. ಇದು ನಿಜ ಸಂತರ ಪರಂಪರೆಯೂ ಆಗಿತ್ತು. ಅವರು ಅದನ್ನು ತಮ್ಮ ಬದುಕಿನ ಕ್ರಮದಲ್ಲೇ ಸಾಧಿಸುತ್ತಿರುತ್ತಾರೆ. ಇಂಥ ಸಮುದಾಯಗಳ ಬದುಕಿನ ಸತ್ಯವನ್ನು ರಚಿಸುವುದು, ಪುನರ್‌ರಚಿಸುವುದರ ಮೂಲಕ ಈ ಜೀವನ ತತ್ತ್ವ ಜಾಗತೀಕರಣಕ್ಕೆ ಸವಾಲಾಗಬಲ್ಲುದೇ ವಿನಾ ಯಾವುದೇ ನಿರ್ದಿಷ್ಟ ಸಿದ್ಧಾಂತ, ಆಧುನಿಕ ತರ್ಕಬದ್ಧ ಮಾದರಿಗಳಲ್ಲ. ಹಾಗೆ ನೋಡಿದರೆ, ಇಂದು 'ಗಾಂಧಿಯನ್', 'ಮಾರ್ಕ್ಸಿಯನ್' ಮುಂತಾದ ಯಾವುದೇ ಮಾದರಿಗಳು ಹಾಗಾಗೇ ಪ್ರಶಸ್ತವಾಗಿ ಉಳಿದಿಲ್ಲ. ಇಂಥ ಬಿಕ್ಕಟ್ಟಿನಲ್ಲಿ ನಮ್ಮ ಸ್ಫೂರ್ತಿಗೆ ಮತ್ತೆ ಜನಸಾಮಾನ್ಯರ ಬದುಕಿನ ಬಹುಮುಖೀ ಆಕೃತಿಗಳತ್ತ ಹೊರಳಿ, ನಮ್ಮದೇ ಆದ 'ಮೆಥಡ್'ನ್ನು ಅಂತರ್‌ರಾಷ್ಟ್ರೀಯ ಶೋಧನೆಗಳ ಮೂಲಕ ಹೇಗೆ ನಾವೇ ಆವಿಷ್ಕರಿಸಿಕೊಳ್ಳಬಹುದು ಎಂಬುದು ನಮ್ಮ ಮುಂದಿರುವ ಬಹುಮುಖ್ಯ ಪ್ರಶ್ನೆ.

ಈ ದೇಶೀ ಸಮಾಜ ಮತ್ತು ಮೂಲನಿವಾಸಿ ಜೀವನ ದರ್ಶನದಲ್ಲಿ ಅಡಕವಾಗಿರುವ ಶತಮಾನಗಳಿಂದ ದತ್ತವಾಗಿ ಹರಿದು ಬಂದಿರುವ ವೈವಿಧ್ಯಮಯ ಹಾಗೂ ಸಂಚಿತ ಅನುಭವ ಜನ್ಯ ಜ್ಞಾನ ಸಂಪನ್ಮೂಲಗಳನ್ನು ನಾವು ಈ ನೆಲದ "ಜನಪದೀಯ ಜ್ಞಾನ ಭಂಡಾರ" (peoples' accumulated experiential knowledge base) ಅಥವಾ "ಜನಾಂಗೀಯ ಪ್ರತಿಭೆ" ಎನ್ನಬಹುದೋ ಏನೋ. ಇದನ್ನೇ ಸಹಸ್ರಬುದ್ಧೆ ಸೂತ್ರೀಕರಿಸಿ 'ಲೋಕ ವಿದ್ಯೆ' ಎಂದು ಕರೆಯುತ್ತಾರೆ.

(ಮುಂದೆ ನಾನು ಅನುಕೂಲಕ್ಕಾಗಿ ಲೋಕ ವಿದ್ಯೆ ಎಂದೇ ಸಂಬೋಧಿಸುತ್ತೇನೆ). ವಿಶ್ವವಿದ್ಯಾಲಯಗಳ ಶೈಕ್ಷಣಿಕ ಹಣೆಪಟ್ಟಿಯ ಹಂಗಿಲ್ಲದ ಜನಪದದ ಪ್ರಾದೇಶಿಕ ತಿಳುವಳಿಕೆಯ ಮೊತ್ತವಾದ ಈ ಪಾರಂಪರಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ಜೀವಂತ ನೆಲೆಗಳು ಲೋಕವಿದ್ಯೆಯ ರೂಪದಲ್ಲಿ ಪ್ರಕಟಗೊಳ್ಳುತ್ತಿರುತ್ತವೆ. ಈ ಜ್ಞಾನ ಶಾಖೆಗಳ ವಿಶಿಷ್ಟ ರೂಪಗಳು ಸ್ಥಳೀಯ ಸಂದರ್ಭ, ಅಗತ್ಯಗಳಿಗೆ ತಕ್ಕಂತೆ ಹೊಸ ಹೊಸ ತಂತ್ರಜ್ಞಾನೀಯ ಆವಿಷ್ಕಾರಗಳಾಗಿ, ವಿನ್ಯಾಸಗಳಾಗಿ ರೂಪಾಂತರಗೊಳ್ಳುವ ಅಂತಃಶಕ್ತಿ ಪಡೆದಿವೆ. ಲೋಕವಿದ್ಯೆಯ ಈ ರೂಪಾಂತರ ಪ್ರತಿಭೆಯು ನಿಜಕ್ಕೂ ಒಂದು ದೇಶದ ಮೂಲ ಆಸ್ತಿ. ಇದನ್ನು ಸಹಸ್ರವ್ಯಾಖ್ಯೆಗಳಿಂದಲೂ ಸಮರ್ಪಕವಾಗಿ ನಿರ್ವಚಿಸಲು ಬರುವುದಿಲ್ಲ; ಅನುಭವಿಸುವುದು ಮಾತ್ರ ಸಾಧ್ಯ. ಈ ಲೋಕವಿದ್ಯಾ ದೃಷ್ಟಿ ನಮ್ಮನ್ನು ಬಿಡುಗಡೆಗೊಳಿಸುವಂಥದು. ಇದು ಗಾಂಧೀಜಿಯ ದೃಷ್ಟಿ ಕೂಡ. ಲೋಕವಿದ್ಯೆಯು ತನ್ನಲ್ಲಡಗಿರುವ ದಿಗ್ಭ್ರಮೆಗೊಳಿಸುವ 'ಅಪರಿಚಿತ ' ಹಾಗೂ 'ಅನಿರೀಕ್ಷಿತ' ಬಹುಮುಖೀ ಹತಾರಗಳನ್ನು ವಿಸರ್ಜಿಸುವ ಮೂಲಕ ಏಕಮುಖೀ ಜಾಗತೀಕರಣಕ್ಕಿಂತಲೂ ದೊಡ್ಡ ರಾಕ್ಷಸನನ್ನು ಎದುರಿಸಬಲ್ಲ ಎಂದೂ ಬತ್ತದ ಜೀವ ಸೆಲೆ. ಪರಂಪರೆಯ ನಿಜಸಾರವಿರುವುದು ಈ ಅನುಭವೀ ವಿದ್ಯೆಯ ಸೃಷ್ಟಿ, ಮರುಸೃಷ್ಟಿಗಳಲ್ಲಿ ತೊಡಗುವುದರಲ್ಲಿ. ಇದು ಹಳತರ ಹಳಹಳಿಕೆಯಲ್ಲ; ಬದಲಾಗಿ ಪೂರ್ವಾಗ್ರಹವಿಲ್ಲದೆ ದತ್ತವಾದ ಈ ಬಯಲ ತತ್ವವನ್ನು ಪುನರ್‌ವಿಮರ್ಶೆ ಮಾಡಿ ಸತ್ಯಯುತವಾದ್ದನ್ನು ಪ್ರಸ್ತುತಗೊಳಿಸುವ ಕ್ರಮ. ಈ ಕೆಲಸವನ್ನು ಜನಸಮುದಾಯಗಳು, ದಿನ ದಿನವೂ ತಮ್ಮ ದೈನಂದಿನ ಬದುಕಿಗೆ ಬಂದೆರಗುವ ಆಘಾತಗಳಿಗೆ ಪ್ರತ್ಯಾಘಾತಗಳನ್ನು ಒಡ್ಡುತ್ತ ಸಂಘರ್ಷಾತ್ಮಕ ನೆಲೆಯಲ್ಲೇ ಬದುಕಿನ ಸತ್ಯಗಳನ್ನು ನಿರಂತರವಾಗಿ ಪುನರ್ರಚಿಸಿಕೊಳ್ಳುವುದರ ಮೂಲಕ ರೂಢಿಸಿಕೊಂಡಿವೆ. ಹಾಗಾಗಿಯೇ ಈ ದಾರಿ ನಿತ್ಯ ನಾವೀನ್ಯತೆಯನ್ನು ಪಡೆದಿದೆ. ಈ ಕೆಲಸವನ್ನು ಸಂತ ಪರಂಪರೆಯೂ ಮಾಡಿತ್ತು. ಗಾಂಧೀಜಿ ಆ ಪರಂಪರೆಯಿಂದ ಬಂದವರು.

ಆದರೆ ಲೋಕವಿದ್ಯೆಯು ಪೂರ್ಣ ಪ್ರಮಾಣದಲ್ಲಿ ವಿಕಾಸವಾಗಿ, ಕ್ರಿಯಾರೂಪದಲ್ಲಿ ಪ್ರಕಟಗೊಳ್ಳಲು ಸಾಧ್ಯವಾಗುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾತ್ರ ಎಂದು ನನ್ನ ನಂಬಿಕೆ. ಬೇಸಾಯಗಾರರು, ಕೈಕಸುಬುಗಾರರು, ಕರಕುಶಲಗಾರರು, ದಲಿತರು, ಗುಡ್ಡಗಾಡು ಜನಾಂಗದವರು, ಮಹಿಳೆಯರೇ ಮೊದಲಾದ ಈ ದೇಶದ ೮೫ ಶೇಕಡಾ ಜನರು ಈ ಲೋಕವಿದ್ಯೆಯ ವಾರಿಸುದಾರರು. ಇಷ್ಟು ದೊಡ್ಡ ಜನಸಂಖ್ಯೆಯನ್ನು, ನಮ್ಮ ಮಧ್ಯಮವರ್ಗ ಸಮಾಜದ ಅಂಚಿನಲ್ಲಿರುವವರೆಂದು ನಿರ್ಲಕ್ಷಿಸುವುದೆಂದರೆ, ನಿಜಕ್ಕೂ ಈ ದೇಶದ ಪ್ರಧಾನವಾಹಿನಿಯಾದ ಸಾಮಾನ್ಯ ಬದುಕಿನ ಒಟ್ಟು ದೇಶೀ ಜ್ಞಾನ ಸಂಪತ್ತನ್ನೇ ಅವಮಾನಿಸಿದಂತೆ; ಮಾತ್ರವಲ್ಲದೆ, ಈ ಬಹುಸಂಖ್ಯಾತರನ್ನು 'ಅನ್ಯ'ರೆಂದು ತಿರಸ್ಕರಿಸಿ ದೇಶದ ಅಭಿವೃದ್ಧಿ ವರ್ತುಲದ ಕೇಂದ್ರ ಬಿಂದುವಿನಿಂದ ಪರಿಧಿಗೆ ಸರಿಸಿದಂತೆ. ಇವರ ಸಂತತಿ ನಿರ್ನಾಮವಾಗುವುದೆಂದರೆ, ಹಲವು ಸ್ತರಗಳಲ್ಲಿ ಒಟ್ಟೊಟ್ಟಿಗೆ ಆವಿರ್ಭಾವವಾಗುತ್ತಿರುವ ಈ ದೇಶದ ಒಟ್ಟು ಸಾಮುದಾಯಿಕ ಜ್ಞಾನ-ವಿವೇಕಗಳ ಕೇಂದ್ರ ನೆಲೆಗಟ್ಟೇ ನಿರ್ನಾಮವಾದಂತೆ. ಇಂಥ ವಿಕಲ್ಪ ನಿಜಕ್ಕೂ ಸಮಾಜವೊಂದರ ಅಂತರ್ಗತ ಶಕ್ತಿಯ ಅರಿವಿನ ಲಕ್ಷಣವಲ್ಲ.

ಈ ಅಪಾಯವನ್ನು ತಪ್ಪಿಸುವುದು ಹೇಗೆ? ಸಾಮಾನ್ಯ ಜನರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲೇ ಹಾಸು ಹೊಕ್ಕಾಗಿ ಹೆಣೆದುಕೊಂಡು, ಅತ್ಯಂತ ಸಂಕಷ್ಟಗಳ ಸಮಯದಲ್ಲೂ ಈ

ಸಮುದಾಯಗಳನ್ನು ಪೊರೆಯುತ್ತಾ ಬಂದ ವೈವಿಧ್ಯಮಯ ಕಸುಬು-ಉಪಕಸುಬುಗಳ ಜ್ಞಾನ ಪರಂಪರೆಯನ್ನು ನಮ್ಮೆಲ್ಲ ಅಭಿವೃದ್ಧಿ ವ್ಯಾಖ್ಯೆಗಳ ಕೇಂದ್ರ ಸ್ಥಾನದಲ್ಲಿ ಕೂಡಿಸುವುದು ಹೇಗೆ?

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಪಶ್ಚಿಮಪ್ರಭಾವಿತ ಅಭಿವೃದ್ಧಿ ಮಾರ್ಗ, ಈ ಲೋಕ ವಿದ್ಯೆಯನ್ನು ಸಾಕಷ್ಟು ಬದಿಗೆ ಸರಿಸಿಬಿಟ್ಟಿತು. ಹಾಗಾಗಿಯೇ ಕ್ರಮೇಣ ಈ ಬಹುಪಾಲು ಜನಾಂಗೀಯ ಪ್ರತಿಭೆಗಳು ದೈಹಿಕವಾಗಿ ಕಣ್ಮರೆಯಾಗದಿದ್ದರೂ ಅವುಗಳ ಆಕರ್ಷಣೆ ಮತ್ತು ಸ್ವಾಯತ್ತತೆಗಳು ಕುಂಠಿತವಾಗಲು ಆರಂಭವಾಯಿತು. ಮುಂದೆ ನಮಗೆ ಸ್ವಾತಂತ್ರ್ಯ ದೊರಕಿವಾಗ ಈ ಲೋಕವಿದ್ಯೆಯನ್ನು ಗುರುತಿಸಿ, ವಿದ್ಯೆಯ 'ಫಾರ್ಮಲ್' ಸ್ಥಾನಮಾನವನ್ನು ಕೊಟ್ಟು, ಬಲಿಷ್ಠೀಕರಿಸಿದ್ದರೆ, ಅದರ ವಾರಿಸುದಾರ ಜನಾಂಗಗಳು "ವಿದ್ಯಾವಂತ"ರೆಂದು ಗೌರವ-ಘನತೆಗಳಿಂದ ಬದುಕುವಂತೆ ಮಾಡುವ ಒಂದು ಅಪೂರ್ವ ಅವಕಾಶ ನಮಗಿತ್ತು. ಒಬ್ಬ ಬಡಗಿ ಅಥವಾ ಶಿಲ್ಪಿ, ಇಂದಿನ ಔಪಚಾರಿಕ ಕಾಲೇಜು ಶಿಕ್ಷಣ ಪಡೆದ ಇಂಜಿನೀಯರ್ ಅಥವಾ 'ಆರ್ಕಿಟೆಕ್ಟ್'ಗೆ ಸರಿ ಸಮಾನವಾಗಿ ಅಥವಾ ಇನ್ನೂ ದಕ್ಷತೆಯಿಂದ ಕಟ್ಟಡ ನಿರ್ಮಾಣವನ್ನು ನಿಭಾಯಿಸಬಲ್ಲನಾದರೆ, ಆತನಿಗೆ ಶಿಕ್ಷಣದ ಮಾನದಂಡದಲ್ಲಿ ಸಮಾನ ಸ್ಥಾನಮಾನ ಪಡೆಯುವ ಅವಕಾಶವೂ ದೊರೆಯುತ್ತಿತ್ತೋ ಏನೋ. ಆದರೆ ನಾವು ಅಂಥ ಅವಕಾಶವನ್ನು ಕಳಕೊಂಡೆವು[1]. ಕೇವಲ ಅಕ್ಷರ ಜ್ಞಾನಕ್ಕಷ್ಟೇ ಮಾನ್ಯತೆಯಿತ್ತು, ಲೋಕವಿದ್ಯೆಯನ್ನು ನಿರ್ಲಕ್ಷಿಸಿ ಮೂಲೆ ಗುಂಪುಮಾಡಿ, ದುರ್ಬಲೀಕರಿಸಿ ಬಿಟ್ಟೆವು. ಈ ವರ್ಗಕ್ಕೆ ಅಕ್ಷರ ಜ್ಞಾನ ಮುಖ್ಯವೆನ್ನುವುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಅವರಿಗೆ ದತ್ತವಾದ ಅನುಭವೀ ಲೋಕಕ್ಕೆ ಮೊದಲ ಮನ್ನಣೆ ದೊರೆಯಬೇಕಿತ್ತು. ನಮ್ಮ

---

೧. ಹೀಗೆಂದ ಕೂಡಲೆ ಈ ವಾದ ಸರಣಿಯು ಹಿಂದಿನ ಶ್ರೇಣೀಕೃತ ವರ್ಗ ವ್ಯವಸ್ಥೆಯನ್ನು ಇನ್ನಷ್ಟು ಭದ್ರಗೊಳಿಸುವ ಸಾಧನವಾಗದೇ ಎಂಬ ಅನುಮಾನ ಮೂಡುವುದು ಸಹಜ. ಆದರೆ, ಯಾವುದೇ ವೃತ್ತಿಯು, ವ್ಯಾವಹಾರಿಕ ಸಮಾಜದಲ್ಲಿ ಗೌರವದ ಸ್ಥಾನ ಪಡಕೊಂಡಾಗ ಅದು ತನ್ನ ಆರೋಪಿತ ಕೀಳರಿಮೆಯಿಂದ ಮುಕ್ತಿ ಪಡೆಯುತ್ತದೆ. ಗೌರವದ ಜ್ಞಾನ ಶಾಖೆಯಾಗಿ ಪಲ್ಲಟಗೊಳ್ಳುತ್ತದೆ. ಸಮಾಜದ ಎಲ್ಲ ಸ್ತರಗಳಿಂದಲೂ ಆ ವೃತ್ತಿಗೆ ಜನ, ಇಂಥ ಸಂದರ್ಭದಲ್ಲಿ ವಲಸೆ ಹೋಗಲು ಆರಂಭಿಸುತ್ತಾರೆ. ಈ ವಿದ್ಯಮಾನಕ್ಕೆ ನಾನು ಹಿಂದೆಯೇ ದೃಷ್ಟಾಂತ ನೀಡಿದ್ದೇನೆ. ಈ ಅಂತರ್ ವೃತ್ತೀಯ, ಅಂತರ್‌ಜಾತೀಯ ಚಲನೆಯನ್ನು ನಾನು 'ವರ್ಣ ಸಂಕರ' ಎಂದು ಕರೆಯುತ್ತೇನೆ. ಈ ವರ್ಣ ಸಂಕರವೇ ಭಾರತೀಯ ಸಮಾಜವನ್ನು ಜಾತಿ ವ್ಯವಸ್ಥೆಯಿಂದ ಬಿಡುಗಡೆಗೊಳಿಸುವ ಸಾಮರ್ಥ್ಯವನ್ನೂ ಪಡೆದಿದೆ ಎಂದು ನನ್ನ ನಂಬಿಕೆ. (ಕಳೆದ ಶತಮಾನದಲ್ಲಿ ಕೈಗಾರೀಕರಣ ಪ್ರಕ್ರಿಯೆಯು, ಭಾರತದಲ್ಲಿ ಜಾತಿ ಕಟ್ಟನ್ನು ಮೀರುವ ಊರ್ಧ್ವಮುಖಿ ಸಂಸ್ಕೃತಾನುಸರಣ ಚಲನೆಗೆ ಸ್ವಲ್ಪಮಟ್ಟಿಗೆ ಚಾಲನೆ ಕೊಟ್ಟಿತ್ತು.) ಆದರೆ, ಇಲ್ಲೊಂದು ಆತಂಕವೂ ಇದೆ. ಲೋಕವಿದ್ಯೆಯ ಸಾಮಾಜಿಕ ಮೇಲ್ಚಲನೆ ಆರಂಭವಾಗುತ್ತಿದ್ದಂತೆಯೇ ಮೇಲ್ಸ್ತರದ ಪ್ರಭಾವಿಗಳು, ಈ ಕ್ಷೇತ್ರವನ್ನು ಸ್ವಾಧೀನ ಪಡಿಸಿಕೊಂಡು ಈ ಪಾರಂಪರಿಕ ಕ್ಷೇತ್ರದ ನಿಜ ವಾರಿಸುದಾರರನ್ನು ಮೂಲೆ ಗುಂಪು ಮಾಡುವ ಸಾಧ್ಯತೆಯೂ ಇನ್ನೊಂದೆಡೆ ಇದೆ. ಹಾಗಾಗಿ ಇದನ್ನು ಪ್ರತಿರೋಧಿಸುವುದು ಹೇಗೆ ಎಂಬುದು ಕೂಡ ಪರ್ಯಾಯ ಸಾಧ್ಯತೆಗಳ ಶೋಧದ ಪ್ರಮುಖ ಭಾಗವಾಗಬೇಕಾಗಿದೆ ಪ್ರಾಯಶಃ ಒಂದುಜನ ತಾಂತ್ರಿಕ ರಚನೆಯಲ್ಲಿ, ಜನ ಸಂಘರ್ಷದ ಮೂಲಕ, ಮತ್ತು ಹೆಚ್ಚು ಹೆಚ್ಚು ಜನರು ವಿಕೇಂದ್ರೀಕೃತ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೂಲಕ ಈ ಸವಾಲನ್ನು ಎದುರಿಸಬಹುದೋ ಏನೊ.

"ನಿರ್ದಿಷ್ಟ ಬಗೆಯ ಅಭಿವೃದ್ಧಿ ಪಥ, ನಿರ್ದಿಷ್ಟ ಬಗೆಯ ರಾಷ್ಟ್ರೀಯ ಸಮಾಜ ನಿರ್ಮಾಣ, ನಿರ್ದಿಷ್ಟ ಬಗೆಯ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ನಿರ್ದಿಷ್ಟ ಬಗೆಯ ಜೀವನ ಕ್ರಮ "(ಡಿ. ಆರ್. ನಾಗರಾಜ್) ಗಳು ಈ ದೇಶದ ಬಹು ಜನರನ್ನು ಹೀಗೆ ಶಾಶ್ವತ 'ಅನ್ಯ'ರನ್ನಾಗಿ ಮಾಡಿ ಬಿಟ್ಟಿದ್ದರಿಂದಲೇ, ಇಂದು ಈ ದೇಶದ ನಾಗರೀಕತೆ ತೀವ್ರ ಬಿಕ್ಕಟ್ಟಿನ ಸ್ಥಿತಿ ತಲುಪಿದೆ. ದುರಾದೃಷ್ಟವಶಾತ್, ಜಾಗತೀಕರಣ ಈ ಪ್ರಕ್ರಿಯೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರಿಸುತ್ತಿದೆ.

ಆದರೂ ಲೋಕವಿದ್ಯೆ, ಈ ಎಲ್ಲ ಸಂಕಷ್ಟಗಳ ನಡುವೆಯೂ ಜೀವಂತವಾಗಿ ಸ್ವಲ್ಪ ಮಟ್ಟಿಗಾದರೂ, ಇನ್ನೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಆಧುನಿಕ ಯುಗದ ಜ್ಞಾನ ಶಾಖೆಗಳ ದಬ್ಬಾಳಿಕೆಯ ಎಡೆಯಲ್ಲೂ ತನ್ನದೇ ಆದ ಇಕ್ಕಟ್ಟಿನ ಜಾಗದಲ್ಲಿ ಆಧುನಿಕ ಅಭಿವೃದ್ಧಿ ವ್ಯಾಖ್ಯೆಯ ಹಂಗಿಲ್ಲದೆ ಬಹುಮಟ್ಟಿಗೆ ಸ್ವತಂತ್ರವಾಗಿ ಕ್ರಿಯಾಶೀಲವಾಗಿ ಬಾಳಿದೆ. ಗಾಂಧೀಜಿ ಸಂಕೇತಿಸುವ ಚರಕ, ಖಾದಿ, ಗುಡಿ ಕೈಗಾರಿಕೆಗಳು ಮತ್ತು ವಿಕೇಂದ್ರೀಕೃತ ಸ್ಥಳೀಯ ಉತ್ಪಾದನೆಯ ಮಾರುಕಟ್ಟೆ ಸೌಲಭ್ಯಗಳ ಮೂಲಕ ಗ್ರಾಮ ಸ್ವರಾಜ್ಯ ಈ ಅರ್ಥದಲ್ಲಿ ಈ ಬಹುಮುಖೀ ಪ್ರಜ್ಞೆಯ ಬಿಂಬ ರೂಪಗಳೇ ಆಗಿವೆ. ಇದೇ ಗಾಂಧೀಜಿಯ ಸ್ವದೇಶೀ ದರ್ಶನ ಕೂಡ. ಲೋಕವಿದ್ಯೆಯ ಈ ತತ್ವಾನುಭವವನ್ನು ಬದಲಾದ ಸಂದರ್ಭಕ್ಕೆ ತಕ್ಕಂತೆ ಜೀವಶಕ್ತಿ ತುಂಬಿ ಪರಿಷ್ಕರಿಸಬೇಕು. ಬಹುಶಃ ಸ್ವಾಯತ್ತತೆಯುಳ್ಳ ಸಮಾಜಗಳ ಅಂತಃವಿಸ್ತಾರದಲ್ಲೇ ಇವು ಬಹು ಸೂಕ್ಷ್ಮವಾಗಿ ಸತತ ಪರಿವರ್ತನೆಗೊಳ್ಳುತ್ತಲೇ ಇರುತ್ತವೆ.

ಆದರೆ ಜೀವ ಪ್ರೀತಿಯ ಇಂಥ ಮೌನ ಪರಿವರ್ತನೆ ಸಮಾಜದ ಪ್ರಧಾನ ವಾಹಿನಿಯಲ್ಲಿ ಸೇರಿಕೊಳ್ಳಬೇಕಾದರೆ ಸಾಮಾನ್ಯ ಮನುಷ್ಯನ ಬದುಕಿನ ತತ್ತ್ವಜ್ಞಾನವು ಒಂದು ಸಾಮಾಜಿಕ ಶಕ್ತಿಯಾಗಿ ಅಭಿವ್ಯಕ್ತಿ ಪಡೆಯುವ ಅಗತ್ಯತೆಯಿದೆ. ಆಗ ಈ ತತ್ತ್ವಜ್ಞಾನದ ತಿಳುವಳಿಕೆ ಮತ್ತು ಕ್ರಿಯೆ ಒಂದೇ ಆಗಿ ಬಿಡುತ್ತದೆ; ತಿಳುವಳಿಕೆಯೇ ಕ್ರಿಯೆಯಾಗಿ ಬಿಡುತ್ತದೆ.

ನಿಜಕ್ಕೂ ಲೋಕವಿದ್ಯೆಯ ತಳಹದಿಯೇ 'ರ್‍ಯಾಡಿಕಲ್' ಚಿಂತನ ರೂಪಿಯಾಗಿದ್ದು, ಇದೇ ನಿಜಕ್ಕೂ ಬದಲಾವಣೆಯ ಭಾಷೆಯೂ ಆಗಿದೆ. ಈ ವಿದ್ಯಾರೂಪಿಕೆಯನ್ನು ನಾವು ಕೇವಲ ಬೌದ್ಧಿಕವಾಗಿ ಅರ್ಥೈಸಿಕೊಂಡರೆ ಅದರ ಶಕ್ತಿಯ ನಿಜ ಪರಿಚಯವಾಗಲಾರದು. ಕ್ರಿಯೆಯ ಮೂಲಕವೇ ಅರ್ಥೈಸಿಕೊಳ್ಳಬೇಕಾಗುತ್ತದೆ. ಯಾಕೆಂದರೆ ಲೋಕವಿದ್ಯೆಯ ಲೋಕದ ಮೌಲ್ಯಗಳು, ತರ್ಕಗಳು, ಜ್ಞಾನ ಶಾಖಾ ನಿರೂಪಣೆಗಳು, ಎಲ್ಲವೂ ಸಂಪೂರ್ಣ ಭಿನ್ನ. ಕೇವಲ ಸಿದ್ಧಾಂತಗಳು ಇಲ್ಲಿ ಕೆಲಸಕ್ಕೆ ಬರುವುದಿಲ್ಲ. ಇದು ಯಾವ ನಿರ್ಬಂಧಕ್ಕೂ ಒಳ ಪಡದೆ ನಿಬ್ಬೆರಗಾಗಿಸುವ ಸ್ವಂತಿಕೆ ಪಡೆದಂಥದು. ಹಾಗಾಗಿಯೇ ಇದು ಜಾಗತೀಕರಣಕ್ಕೂ ಸವಾಲಾಗುವ ಶಕ್ತಿ ವಿನ್ಯಾಸಗಳನ್ನು ಪಡೆದಿದೆ. ಮಾತ್ರವಲ್ಲ ದೇಶದ ಸಿಂಹಾಸನಾರೂಢ ಯಜಮಾನ ರಾಜಕೀಯಕ್ಕೂ ಸವಾಲಾಗುವ ರಾಜಕೀಯವನ್ನೂ ಮಾಡಬಲ್ಲದು.

ಲೋಕವಿದ್ಯೆಯ ವಾರಿಸುದಾರರಾದ ಕೃಷಿಕರು, ಕೈಕಸುಬುದಾರರು, ದಲಿತರು, ಗಿರಿಜನರು, ಮಹಿಳೆಯರು ಮುಂತಾದ ಶ್ರಮಿಕ ವರ್ಗ ಈ ದೇಶದ ರಾಜಕೀಯ ಪ್ರಕ್ರಿಯೆಯ ಮೂಲಕ ಶಕ್ತಿ

ಪಡೆದವರಲ್ಲ. ಅವರ ಶಕ್ತಿಯ ಮೂಲ ಸ್ವಂತದ್ದು, ಅವರ ವಿದ್ಯೆಯದ್ದು. ಹಾಗಾಗಿಯೇ ಈ ವಿದ್ಯೆಯನ್ನೇ ನಾಶಮಾಡಲು ಹವಣಿಸುವ ಜಾಗತೀಕರಣಕ್ಕೆ ಪ್ರತಿರೋಧ ಶಕ್ತಿಯಾಗಿಯೂ ಈ ಜನರ ರಾಜಕೀಯೇತರ ಶಕ್ತಿಯನ್ನು ಗಟ್ಟಿಗೊಳಿಸುವುದೇ ನಿರ್ಣಾಯಕ ಮಾರ್ಗ. ರಾಜಕೀಯ ನಿರ್ಮಿತಿಯೊಳಗೇ ಆಕೃತಿ ಪಡೆಯುವ ಜಾಗತೀಕರಣ ಶಕ್ತಿಗಳಿಗೆ ಹೋಲಿಸಿದರೆ, ಈ ಲೋಕವಿದ್ಯೆಯ ಶಕ್ತಿಯ ಮೂಲದಲ್ಲಿ ಜೀವದಾಯಿಕ ಗುಣವಿದೆ. ನ್ಯಾಯ-ನೈತಿಕ ಭಾವಗಳು ಹಾಸು ಹೊಕ್ಕಾಗಿ ಅಡಕವಾಗಿವೆ. ಅವೇ ಅದರ ಅಂತಃಚೇತನ ಕೂಡ.

ಆದರೆ ಈ ದಿಸೆಯಲ್ಲಿ ಆಗಬೇಕಾದ ಮಹತ್ವದ ಮೊದಲ ಕಾರ್ಯವೆಂದರೆ, ರಾಜಕೀಯೇತರ ಮಾರ್ಗಗಳನ್ನು ನಿರ್ಮಾಣಮಾಡಿ ಭದ್ರಗೊಳಿಸಿ, ರಾಜಕೀಯವನ್ನೂ ಮಾರ್ಪಾಡು ಮಾಡಲು ಪ್ರಯತ್ನಿಸುವುದು. ಗಾಂಧಿಯಿಂದ ಇದಕ್ಕೆ ನಾವು ಸಹಾಯ ಪಡೆಯಬಹುದೋ ಏನೋ. ಗಾಂಧಿ ಕನಸುಕಂಡ ವಿಕೇಂದ್ರೀಕರಣ, ಗ್ರಾಮ ಸ್ವಾಯತ್ತತೆಗಳಿಗಾಗಿ ಜನಸಂಘರ್ಷ, ಚಳುವಳಿಗಳನ್ನು ರೂಪಿಸುವುದೇ ಈ ರಾಜಕೀಯೇತರ ಪ್ರಕ್ರಿಯೆಗಳನ್ನು ಬಲಪಡಿಸುವ ಮಾರ್ಗ. ಗಾಂಧೀಜಿಯ ಸ್ವಾಯತ್ತತೆಯ ಗ್ರಹಿಕೆ ಛಿದ್ರೀಕರಣಗೊಂಡ ಕೇವಲ ರಾಜಕೀಯ ಸ್ವಾಯತ್ತತೆಯ ಆಕೃತಿಯಲ್ಲ. ಯಾಕೆಂದರೆ ಆರ್ಥಿಕ - ರಾಜಕೀಯ -ಸಾಂಸ್ಕೃತಿಕ ಸ್ವಾಯತ್ತತೆಗಳು ಒಂದನ್ನೊಂದು ಬಿಟ್ಟಿಲ್ಲ. ಇವೆಲ್ಲವೂ ಅಂತರ್ ಪ್ರಕ್ರಿಯೆಗಳ ಮೂಲಕ ಲೋಕವಿದ್ಯೆಯಲ್ಲಿ ಅಖಂಡವಾಗಿ ಹೆಣೆದುಕೊಂಡಿವೆ; ಮತ್ತು ಬಹುರೂಪತೆಯ ಸಂಸ್ಕೃತಿ ಸಮಾಜಕ್ಕೆ ಪೋಷಕವಾಗಿವೆ. ಈ ಸ್ವಾಯತ್ತತೆಯಲ್ಲಿ ಜಾಗತೀಕರಣ - ಮೂಲಭೂತವಾದಗಳು ಇರಲು ಸಾಧ್ಯವಿಲ್ಲ. ಅದಕ್ಕೇ ಕೋಮುವಾದಿಗಳು, ಹಾಗೂ ಜಾಗತಿಕ ಮಾರುಕಟ್ಟೆ ಶಕ್ತಿಗಳು ಬಹುತ್ವವನ್ನು ಪೋಷಿಸುವ ಸ್ವಾಯತ್ತತೆಯ ಸಮಾಜದ ಬದಲಾಗಿ, ಪ್ರಭುತ್ವವನ್ನು ಪೋಷಿಸುವ ಪ್ರಬಲ ರಾಷ್ಟ್ರೀಯತೆ, 'ಗ್ಲೋಬಲ್ ವಿಲೇಜ್'ಗಳ ಗುಲ್ಲೆಬ್ಬಿಸುವುದು. ಈ ರಾಷ್ಟ್ರೀಯತೆಯ ಕಲ್ಪನೆ, ಜನತಂತ್ರವನ್ನು ಪೊಳ್ಳಾಗಿಸಿ, ಈ ಎರಡೂ ಶಕ್ತಿಗಳಿಗೆ ಬಹಳ ಸುಲಭವಾಗಿ ಬೇರು ಬಿಡಲು ಸಹಕಾರಿಯಾಗಿದೆ. ಇಂಥಲ್ಲಿ ಯಜಮಾನ ಶಕ್ತಿಗಳು ದಬ್ಬಾಳಿಕೆ ನಡೆಸುತ್ತಾ ರಾಷ್ಟ್ರೀಯ ಸರಕಾರಗಳು ದುರ್ಬಲವಾಗಿ ಬಿಡುತ್ತವೆ. ರಾಷ್ಟ್ರೀಯವಾದಿಗಳ ಸ್ವದೇಶಿಯೂ ಇಂಥ ಜಾಗತೀಕರಣ ಎಜೆಂಡಾದ ಭಾಗವೇ ಆಗಿರುವುದರಿಂದ, ಗಾಂಧೀಜಿಯ ಸ್ವದೇಶೀ ಕಲ್ಪನೆಗೆ ತದ್ವಿರುದ್ಧವಾಗಿದೆ.

ಸಂಪೂರ್ಣ ಸ್ವಾಯತ್ತತೆಗೆ ಚಾಲನೆ ನೀಡಬಲ್ಲ ಚಳವಳಿಗೆ ಯಾವುದು ಪರ್ಯಾಯ ನೆಲೆಯಾದೀತು? ಬಹುಶಃ ಸ್ಥಳೀಯ ಉತ್ಪಾದನೆ ಮತ್ತು ಸ್ಥಳೀಯ ಮಾರುಕಟ್ಟೆ ವ್ಯವಸ್ಥೆಗೆ ಒತ್ತಾಯಿಸುವುದು. ಆದರೆ ಇಲ್ಲಿ ಸ್ವಲ್ಪ ಬದಲಾವಣೆಯ ಅಗತ್ಯವಿದೆ. ಎನ್ನುತ್ತಾರೆ ಸುನಿಲ್ ಸಹಸ್ರಬುದ್ಧೆ. ಅಂದು ಉತ್ಪಾದನಾ ವ್ಯವಸ್ಥೆಯೇ ಶೋಷಣೆಯ ನೆಲೆಯಾದ್ದರಿಂದ ಸ್ಥಳೀಯ ಮಟ್ಟಕ್ಕೆ ಉತ್ಪಾದನಾ ಪ್ರಕ್ರಿಯೆಯು ವಿಕೇಂದ್ರೀಕರಣಗೊಂಡರೆ, ಆ ಉತ್ಪನ್ನಗಳಿಗೆ ಬೇಡಿಕೆ ಸಹಜ ಸಿದ್ಧವಾಗಿತ್ತು. ಅಂದು ಸ್ಥಳೀಯ ಮಾರುಕಟ್ಟೆಗಳು ಇಷ್ಟೊಂದು ದುಃಸ್ಥಿತಿಯಲ್ಲಿರಲಿಲ್ಲ. ಹಾಗಾಗಿ ಗಾಂಧೀಜಿಯ ಗ್ರಾಮ ಸ್ವರಾಜ್ಯ ಕಲ್ಪನೆಯಲ್ಲಿ ಸ್ಥಳೀಯ ಮಟ್ಟದಲ್ಲಿ ಉತ್ಪಾದನೆಗೆ ಸ್ಥಳೀಯ ಮಾರುಕಟ್ಟೆಗಿಂತ ಮೊದಲ ಪ್ರಾಶಸ್ತ್ಯವಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಶೋಷಣೆಯು

ಸ್ಥಳೀಯ ಉತ್ಪಾದನಾ ಕೇಂದ್ರದಿಂದ ಮಾರುಕಟ್ಟೆ ಕೇಂದ್ರಕ್ಕೆ ಸ್ಥಳಾಂತರಗೊಂಡಿದೆ. ಜಾಗತಿಕ ಮಾರುಕಟ್ಟೆ ಶಕ್ತಿಗಳು ಸ್ಥಳೀಯ ಮಾರುಕಟ್ಟೆಯನ್ನು ಸಂಪೂರ್ಣ ಧ್ವಂಸ ಮಾಡಿ ಸ್ಥಳೀಯ ಉತ್ಪಾದನಾ ವ್ಯವಸ್ಥೆಯನ್ನೇ ನಿರ್ಮೂಲ ಮಾಡುವ ಹಂತದಲ್ಲಿವೆ.

ಆದರೆ ಇನ್ನೊಂದೆಡೆ ಈ ಕೇಂದ್ರಗಳಲ್ಲೇ ಬದುಕುವ ಹಕ್ಕಿಗಾಗಿ ಹೋರಾಟದ ಹೊಸ ಹೊಸ ಚಳುವಳಿಗಳು ರೂಪಗೊಳ್ಳುತ್ತಿರುವುದನ್ನೂ ನಾವು ಗಮನಿಸಬಹುದು. ಕಳೆದ ೨೦ ವರ್ಷಗಳಿಂದ ಈ ಸಮುದಾಯಗಳು ರಾಜಕೀಯೇತರ ಸಂಘಟನೆಗಳಾಗಿ ರೂಪುಗೊಂಡು ರಾಜಕೀಯೇತರ ಶಕ್ತಿ ಸಂಚಯಿಸಿಕೊಂಡು ರಾಜಕೀಯ ಪ್ರಭುತ್ವಕ್ಕೆ ಸಕಾರಾತ್ಮಕ ಪ್ರತಿರೋಧ ತೋರಿಸಲು ಆರಂಭಿಸಿವೆ. ಇದನ್ನು ಕಾಣುವ ಕಣ್ಣು ನಮಗೆ ಬೇಕು. ಈ ರಾಜಕೀಯೇತರ ವಿದ್ಯಮಾನದ ಜತೆ ಇನ್ನೊಂದು ಪ್ರಬಲವಾದ ವಿದ್ಯಮಾನವನ್ನೂ ಸಹಸ್ರಬುದ್ಧೆ ಗುರುತಿಸುತ್ತಾರೆ, ಕೇಂದ್ರಿಕೃತ ಉತ್ಪಾದನೆಯ ಬಟ್ಟೆಯ ದೊಡ್ಡ ದೊಡ್ಡ ಗಿರಣಿಗಳು ಇಂದು ಮುಚ್ಚಲ್ಪಟ್ಟು, ಬಟ್ಟೆ ಉತ್ಪಾದನೆಯ ಹಲವಾರು ಹಂತಗಳು ಮರಳಿ ವಿಕೇಂದ್ರಕೃತ ನೆಲೆಯಲ್ಲಿ ಮನೆ ಮನೆಗೆ ಮರಳುತ್ತಿವೆ. ಇದರ ಜತೆ, ಕಂಪ್ಯೂಟರ್ ಚಿಪ್ಸ್‌ನಿಂದ ಹಿಡಿದು, ಹಲವಾರು ಇಲೆಕ್ಟ್ರಾನಿಕ್ ಅರೆ ಸರಕುಗಳು, ಮಾಹಿತಿ ತಂತ್ರಜ್ಞಾನದ 'ಸಾಫ್ಟ್‌ವೇರ್'ಉತ್ಪಾದನೆಗಳೇ ಮುಂತಾದ ಇಲೆಕ್ಟ್ರಾನಿಕ್ ಯುಗದ ಉತ್ಪಾದನೆಯ ಅನೇಕ ಹಂತಗಳು, ಗುಡಿ ಕೈಗಾರಿಕೆಯಂತೆ ಮನೆ ಮನೆಗೆ ವಿಕೇಂದ್ರಿಕರಣಗೊಳ್ಳುತ್ತಿವೆ. ಇಂದು ಈ ಕ್ಷೇತ್ರಗಳು ಹೊಳಪಿನಿಂದ ಮಿಂಚುತ್ತಿದ್ದರೂ, ಭವಿಷ್ಯದಲ್ಲಿ ಇವೂ ಶೋಷಣೆಗೆ ಒಳಗಾಗುವ ಎಲ್ಲ ಸೂಚನೆಗಳಿವೆ. 'ಸಾಫ್ಟ್‌ವೇರ್' ಕ್ಷೇತ್ರದ ಇಂದಿನ ಬಿಕ್ಕಟ್ಟಿನಲ್ಲಿ ಈಗಾಗಲೇ ನಾವು ಇದನ್ನು ಗಮನಿಸಬಹುದು. ಹೀಗಾಗಿ ಮುಂದಿನ ದಶಕಗಳಲ್ಲಿ. ಪಾರಂಪರಿಕ ಲೋಕವಿದ್ಯಾ ವಾರಿಸುದಾರರಾದ ಕುಂಬಾರ, ನೇಕಾರ, ಕೃಷಿಕ - ಮುಂತಾದವರಿಂದ ಹಿಡಿದು ಕಂಪ್ಯೂಟರ್ ಚಿಪ್ಸ್, ಸಾಫ್ಟ್‌ವೇರ್‌ಗಳ ವಾರಿಸುದಾರರವರೆಗೆ ಹಮ್ಮಿ ಕೊಂಡಿರುವ ಒಂದು ವಿಶಾಲವಾದ ಹೊಸ "ಸೋಶಿಯಲ್ ಕ್ಲಾಸ್" ಆಗಿ ರೂಪುಗೊಳ್ಳುವ ಸಾಧ್ಯತೆಗಳಿವೆ. ಇವೆಲ್ಲವೂ ಒಟ್ಟಾಗಿ ಸತ್ವಶಾಲಿಯಾಗಿ ತಮ್ಮ ಹೊಸ 'ಪರ್ಯಾಯ ಅಜೆಂಡಾ'ವನ್ನು ಮಂಡಿಸುವ ಎಲ್ಲ ಸಾಧ್ಯತೆಗಳೂ ಇವೆ. ಕಾರಣ, ಈ ಸಮುದಾಯಗಳನ್ನು ಸಂಪೂರ್ಣ ಅಂಚಿಗೆ ತಳ್ಳಿ ದೇಶದ ಪ್ರಮುಖ ವಾಹಿನಿಯಿಂದ ಹೊರಗಿಡುವ ಮೂಲಕ ಈ ರಾಜಕೀಯೇತರ ಶಕ್ತಿಗಳನ್ನು ರಾಜಕೀಯ ಶಕ್ತಿಗೆ ಸಂಪೂರ್ಣ ಅಡಿಯಾಳಾಗಿಸುವುದಕ್ಕೂ ಒಂದು ಮಿತಿ ಬೇಕು.

ಈಗಾಗಲೇ ಲೋಕವಿದ್ಯೆಯ ಸಹಾಯದಿಂದಾಗಿ ಹೊಸ ಸಾಮಾಜಿಕ ವರ್ಗವಾಗಿ ಮರುಹುಟ್ಟು ಪಡೆಯುತ್ತಿರುವ ಈ ವಿದ್ಯೆ ಮತ್ತೆ ರಾಜಕೀಯೇತರ ಪ್ರಕ್ರಿಯೆಗಳಿಗೆ ಚಾಲನೆ ಕೊಟ್ಟಿದೆ. ಇಂದು ನಾವು ಹೆಚ್ಚುತ್ತಿರುವ ಮಾನವ ಹಕ್ಕಿನ ಚಳವಳಿ, ಪರಿಸರ ಚಳವಳಿ, ನಿರಾಶ್ರಿತರ ಚಳವಳಿ, ಮಹಿಳಾ ಹಕ್ಕುಗಳ ಚಳವಳಿ ಮುಂತಾದುವುಗಳಲ್ಲಿ ಇದನ್ನು ಗಮನಿಸಬಹುದು. ನರ್ಮದಾ ಬಚಾವೋ ಆಂದೋಲನ, ಜಾಗತೀಕರಣದ ವಿರುದ್ಧ ಕರ್ನಾಟಕದಲ್ಲಿ ಕಾಣಸಿಕೊಳ್ಳುತ್ತಿರುವ ರೈತರ ಪ್ರತಿಭಟನೆಗಳು, ಅವಿಭಜಿತ ದಕ್ಷಿಣ ಕನ್ನಡದಲ್ಲಿ ನಡೆದ ಕೊಜೆಂಟ್ರಿಕ್ಸ್, ನಾಗಾರ್ಜುನ ವಿದ್ಯುತ್ ಸ್ಥಾವರಗಳ ವಿರುದ್ಧ ಮೀನುಗಾರರ ಚಳವಳಿ, ಇಂದು ನಡೆಯುತ್ತಿರುವ ಕುದುರೆಮುಖ ಗಣಿಗಾರಿಕೆಗಳ ವಿರುದ್ಧ ಚಳವಳಿ ಮತ್ತು ಪಶ್ಚಿಮಘಟ್ಟ, ತಪ್ಪಲಲ್ಲಿರುವ ಗಿರಿಜನರ ಬದುಕಿನ ಹಕ್ಕಿನ ಚಳವಳಿ - ಮುಂತಾದುವುಗಳು ಇದಕ್ಕೆ ಕೆಲವು ನಿದರ್ಶನಗಳಷ್ಟೇ. ಯಾವ ಸಾಮಾಜಿಕ ವ್ಯವಸ್ಥೆಯಲ್ಲೂ

ಸರಿಯಾಗಿ ಸೇರಿಕೊಳ್ಳಲಾರದೆ ನಿರಂತರವಾಗಿ ಶೋಷಣೆಗೊಳಗಾಗುತ್ತಿರುವ ಮಹಿಳೆಯರಿಗೆ ಇಲ್ಲೊಂದು ಐತಿಹಾಸಿಕ ಅವಕಾಶವಿದೆ.

ಆದರೆ ಈ ಚಳವಳಿಗಳು ದೀರ್ಘಾವಧಿಯಲ್ಲಿ ನಿಜಕ್ಕೂ ಜನರ ಏಳಿಗೆಗೆ ಶ್ರಮಿಸಬೇಕಾದರೆ, ಈ ಚಳವಳಿಗಳ ಬೇಡಿಕೆಗಳು, ಕೆಲಸ ಮಾಡುವ ಕ್ರಮಗಳು, ಖಂಡಿತವಾಗಿಯೂ ಲೋಕವಿದ್ಯೆಯ ಜತೆ ಶಾಸ್ತ್ರೀಕವಾದ, ಹಾಗೂ ಕ್ರಿಯಾತ್ಮಕವಾದ ಸಾವಯವ ಸಂಬಂಧವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆಗ ಮಾತ್ರ ಇಂಥ ಚಳವಳಿಗಳು ರಾಜಕೀಕರಣದ ಪ್ರಕ್ರಿಯೆಯಲ್ಲಿ, ಕೇವಲ ಸೀಮಿತ ಬೇಡಿಕೆ, ಆಸಕ್ತಿಗಳಲ್ಲೇ ಸ್ಥಗಿತಗೊಳ್ಳದೆ, ವಿಶಾಲ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ. ಅರ್ಥಾತ್ 'ಲೋಕವಿದ್ಯೆ'ಯನ್ನು ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿ ಅಳವಡಿಸಿಕೊಳ್ಳುವ ಯೋಜನೆಯನ್ನು ರೂಪಿಸಿ ಈ ಬೇಡಿಕೆಗಳನ್ನು ತಮ್ಮ ಬೇಡಿಕೆಗಳ ಪಟ್ಟಿಯಲ್ಲಿ ರಾಜಕೀಯೇತರ ಸಮುದಾಯ ಸಂಘಟನೆಗಳು ಸೇರಿಸಿಕೊಳ್ಳಬೇಕು; ಮತ್ತು, ಈ ರಾಜಕೀಯೇತರ ಸಂಘಟನೆ, ರಾಜಕೀಯ ಸಂಘಟನೆಗಳ ನಡುವೆ ನಿರಂತರ ಸಂವಾದ ನಡೆಯುತ್ತಿರಬೇಕಾಗುತ್ತದೆ.

ಇಂದಿನ ಪ್ರಸ್ತುತ ಸಂದರ್ಭದಲ್ಲಿ, ಈ ಹಿಂದೆ ವಿವರಿಸಿದ ಕಾರಣಗಳಿಗಾಗಿ ಸ್ಥಳೀಯ ಮಾರುಕಟ್ಟೆ, ಸ್ಥಳೀಯ ಉತ್ಪಾದನೆಗಿಂತ ಮೊದಲ ಪ್ರಾಶಸ್ತ್ಯ ಪಡೆಯಬೇಕಾಗಿಯೆಂದೆನಷ್ಟೇ. ಇಲ್ಲೇ ಗಾಂಧೀಜಿಯ ಸ್ವರಾಜ್ ಪ್ರಕ್ರಿಯೆ, ಅಂದರೆ ಉತ್ಪಾದನೆ ಮತ್ತು ಅನುಭೋಗ (consumption) ಗಳು ಸ್ಥಳೀಯವಾಗಿ ತಮ್ಮ ಪ್ರಾಮುಖ್ಯತೆಯನ್ನು ವಿನಿಮಯ ಮಾಡಿಕೊಂಡು ಮರುಹುಟ್ಟು ಪಡೆಯಬೇಕಾಗಿರುವುದು. ಇದಕ್ಕಾಗಿ ಖಾದಿ ಗ್ರಾಮೋದ್ಯೋಗ ಚಳುವಳಿಯನ್ನು ಸ್ಥಳೀಯ ಮಾರುಕಟ್ಟೆ ಚಳುವಳಿಯಾಗಿ ಪರಿವರ್ತಿಸಬೇಕು. ಕೈ ಕಸುಬುದಾರರ, ಕೃಷಿಕರ, ಗುತ್ತಿಗಾರು ಜನರ, ಮಹಿಳೆಯರ ಸಂಘಟನೆಗಳು ಪರಸ್ಪರ ಕೈ ಜೋಡಿಸಿ ಒಗ್ಗೂಡಿ, ಸ್ಥಳೀಯ ಮಾರುಕಟ್ಟೆಯನ್ನು ಹಿಡಿತದಲ್ಲಿಟ್ಟುಕೊಳ್ಳುವ ಬಲ ಪ್ರಾಪ್ತವಾಗಬೇಕು. ಇಂದು ಸ್ಥಳೀಯ ಉತ್ಪಾದನೆಯು ಸ್ಥಳೀಯ ನೆಲೆಯಲ್ಲಿ ಹಿಂದಿನಂತೆ ತಾನೇ ತಾನಾಗಿ ಬೇಡಿಕೆಯನ್ನು ಸೃಷ್ಟಿಸಿಕೊಳ್ಳಲಾರದು. ಸ್ಥಳೀಯ ಮಾರುಕಟ್ಟೆ ವ್ಯವಸ್ಥೆಯು ಮೊದಲು ಊರ್ಜಿತಗೊಂಡು, ಈ ಜನಾಂಗಗಳು ಮಾರುಕಟ್ಟೆಯನ್ನು ನಿಯಂತ್ರಿಸುವಂತಾದರೆ ಕೆಲವೇ ತಿಂಗಳುಗಳಲ್ಲಿ ಆ ಪ್ರದೇಶವು ಸಾಮಾನ್ಯ ಬದುಕಿಗೆ ಬೇಕಾದ ಎಲ್ಲಾ ಆವಶ್ಯಕತೆಗಳನ್ನೂ ಉತ್ಪಾದಿಸಿ, ಧಾರಾಳವಾಗಿ ಸ್ಥಳೀಯ ಬಾಜಾರುಗಳಿಗೆ ಹರಿಸಲು ಆರಂಭಿಸಿ ಬಿಡುತ್ತದೆ. ದೇಶೀ ಜ್ಞಾನ ಮೂಲಗಳು ಇನ್ನೂ ಊರ್ಜಿತ ಸ್ಥಿತಿಯಿದ್ದು ಈ ಅವಕಾಶಕ್ಕಾಗಿಯೇ ಕಾಯುತ್ತಿವೆ. ಹಾಗಾಗಿ ಈ ಜಾಗತೀಕರಣ ಸಂದರ್ಭದಲ್ಲಿ ಸ್ಥಳೀಯ ಮಾರುಕಟ್ಟೆ ಕ್ರಾಂತಿಯೇ ಅತ್ಯಂತ ಮುಖ್ಯವಾದ ಪ್ರಜಾಪ್ರಭುತ್ವವಾದೀ ಘಟನೆ ಎಂದು ನನ್ನ ಅನ್ನಿಸಿಕೆ.

ಆಗ ಈ ಸ್ಥಳೀಯ ಮಾರುಕಟ್ಟೆಯು, ಸರಿಸಮಾನ ವಿನಿಮಯ, ಕೊಂಡುಕೊಳ್ಳುವಿಕೆಯ ಕೇಂದ್ರವಾಗಿ, ಕ್ರಮೇಣ ರಾಜಕೀಯೇತರ ಶಕ್ತಿಯ ಸಂಘಟಿತ ಚಟುವಟಿಕೆಯ ಕೇಂದ್ರವಾಗುವ ಸಾಧ್ಯತೆ ಪಡೆಯುತ್ತದೆ ; ಮತ್ತು ಇದು ಕ್ರಮೇಣ ರಾಜಕೀಯೇತರ ಸಮುದಾಯಗಳ ಸೃಷ್ಟಿ ಸಾಧ್ಯತೆಯನ್ನು ಸ್ವಲ್ಪಕಾಲದಲ್ಲೇ ಆಗಗೊಡುತ್ತದೆ. ಅಂಥ ಸ್ಥಳೀಯ ಮಾರುಕಟ್ಟೆ ಕೇಂದ್ರಗಳ

ಸಮಗ್ರಜಾಲ, ಜಾಗತಿಕ ಮಾರುಕಟ್ಟೆ ವ್ಯವಸ್ಥೆಯನ್ನೂ ನಿಯಂತ್ರಿಸಬಲ್ಲುದು; ಮಾತ್ರವಲ್ಲ, ರಾಷ್ಟ್ರದ ರಾಜಕೀಯ ಪ್ರಭುತ್ವವನ್ನೂ ನಿಯಂತ್ರಿಸಬಲ್ಲುದು.

ಆದರೆ ಈ ಪ್ರಕ್ರಿಯೆಗೆ ತೊಡಕಿರುವುದು ನಾನು ಹಿಂದೆ ಪ್ರಸ್ತಾಪಿಸಿದಂತೆ ರಾಜಕೀಯವಾಗಿ ಸಂಘಟಿಸಲ್ಪಟ್ಟಿರುವ ವೈಜ್ಞಾನಿಕ ನೆಲೆಗಟ್ಟಿನ ಪಠ್ಯಪುಸ್ತಕಗಳ ಆಧುನಿಕ ಶಿಕ್ಷಣದಲ್ಲಿ ; ಮತ್ತು ನಿರ್ದಿಷ್ಟ ರೀತಿಯಲ್ಲಿ ಸಾಗುವ ನಮ್ಮ ಇಂದಿನ ಬೌದ್ಧಿಕ ಚಿಂತನೆಯ ದಾರಿಯಲ್ಲಿ. ಈ ಚಿಂತನೆಯ ಮಹಾಕಥನ ರೂಪಕದಲ್ಲಿ, ಡಿ. ಆರ್. ನಾಗರಾಜ್ ಅವರು ಎನ್ನುವಂತೆ, " ಮಾನಕೀಕೃತ ಸಮಾಜಗಳ ಬಗ್ಗೆ ಒಂದು ಮುಗ್ಧವಾದ ಏಕರೂಪೀ ಕಲ್ಪನೆಯಿದೆ. ಇದು ಪಾಶ್ಚಾತ್ಯ ಅಭಿವೃದ್ಧಿ ಪಥದ ಹೊರಗೆ ವಿವಿಧ ಸ್ತರಗಳ ಬಹುಮುಖೀ ಸ್ವತಂತ್ರ ಜಗತ್ತೊಂದು ಇರಲು ಸಾಧ್ಯವೆಂದು ಪರಿಗಣಿಸುವುದಲ್ಲ .... (ನಾವು) ಕಾಣುವ ರೀತಿಯು ಇಷ್ಟೊಂದು ಶಿಕ್ಷಿತವೂ, ಶಾಸ್ತ್ರೀಯವೂ ಆಗಿ ಬಿಟ್ಟಾಗ ಯಾವ ಲೋಕವೂ ಎದುರಾಗುವುದಿಲ್ಲ .....". ಹಾಗಾಗಿ, "ಒಂದು ನಿರ್ದಿಷ್ಟ ಬಗೆಯ ಜ್ಞಾನ, ಒಂದು ನಿರ್ದಿಷ್ಟ ಬಗೆಯ ಚಿಂತನಕ್ರಮವನ್ನು ಪ್ರಚೋದಿಸಿ ಉಳಿದೆಲ್ಲ ಸಾಧ್ಯತೆಗಳನ್ನು ಅವುಗಳ ಸೃಷ್ಟಿ ಪ್ರತಿಭೆಗಳನ್ನು ಅಲ್ಲಗಳೆಯುವ ಬೌದ್ಧಿಕ ಜಗತ್ತಿನಲ್ಲಿ ಆದಿಮ ಪ್ರಳಯವೇ ಅತ್ಯಂತ ಸೃಜನಶೀಲ ಸ್ಥಿತಿ.... ಈ ಬೌದ್ಧಿಕ ಪ್ರಳಯ ಹೊಸಬಗೆಯ ಸಂಯೋಜನೆಗಳಿಗೆ ದಾರಿ ಮಾಡಿಕೊಡುವುದು" ಎಂದು ಡಿ. ಆರ್. ಅಭಿಪ್ರಾಯ ಪಡುತ್ತಾರೆ. ಆದ್ದರಿಂದಲೇ ರಾಜಕೀಯವಾಗಿ ಸಂಘಟಿಸಲ್ಪಟ್ಟಿರುವ ಈ ಆಧುನಿಕ ಶಿಕ್ಷಣದ ಸಮಗ್ರ ಮೂಲವನ್ನೇ ಪ್ರಶ್ನಿಸುವ ಮೂಲಕ, ಸಮಾಜದಲ್ಲಿ ರಾಜಕೀಯೇತರ ಶಕ್ತಿಯ ಅಭಿವೃದ್ಧಿಗೆ ಲೋಕವಿದ್ಯೆಯ ತಳಗಟ್ಟಿನಲ್ಲಿ ಶಿಕ್ಷಣವ್ಯವಸ್ಥೆಯನ್ನು 'ರ್‍ಯಾಡಿಕಲ್' ಆಗಿ ಪುನರ್ರಚಿಸಬೇಕಾಗಿದೆ. " ಈ ದೇಶವನ್ನು ಸಮಸ್ತ ಪ್ರಜೆಗಳ ಹಿತಕ್ಕೆ ಪೂರಕವಾಗಿ ನಡೆಸಬೇಕಾದರೆ ಕಳೆದ ಹಲವಾರು ದಶಕಗಳಿಂದ ಕಲಿಯುತ್ತ ಬಂದ ಶಿಕ್ಷಣದ ಭಾರವನ್ನು ನಾವು ಮೊದಲು ಕಳಚಿಕೊಳ್ಳಬೇಕು" ಎಂದು ೧೯೪೭ರ ಮೊದಲೇ ಹೇಳಿದ್ದ ಗಾಂಧೀಜಿಯೇ ಈ ಮಹತ್ವದ ಬದಲಾವಣೆಗೆ ಮತ್ತೊಮ್ಮೆ ನಮಗೆ ಆರಂಭದ ನೆಲೆ. ಗಾಂಧೀಜಿ ಬ್ರಿಟಿಷರ ವಿರುದ್ಧ ತನ್ನ ಪ್ರತಿರೋಧದ ಆಕೃತಿಗಳ ಆಯ್ಕೆಗಾಗಿ ಮತ್ತೆ ಮತ್ತೆ ಮರಳುತ್ತಿದ್ದ ಸಾಮಾನ್ಯ ಜನರ ಲೋಕವಿದ್ಯೆಯ ನೆಲೆಗಟ್ಟಿನಲ್ಲಿ ಜಾಗತಿಕ ಶಕ್ತಿಗಳನ್ನು ದಂಗುಬಡಿಸುವ, ಅವುಗಳಿಗೆ ತಿರುಮಂತ್ರವಾಗಬಹುದಾದ, ತೀರ ಅಗ್ರಾಹ್ಯವಾದ ವಿದ್ರೋಹೀ ಪ್ರತಿಭೆಯಿದೆ ಎಂದು ನನ್ನ ನಂಬಿಕೆ.

# ಜಾಗತೀಕರಣ ಹಾಗೂ ಕನ್ನಡ

ನಮ್ಮ ಇಂದಿನ ಒಟ್ಟು ಜೀವನಕ್ರಮವೇ ಕೇವಲ ಆರ್ಥಿಕ ಪ್ರಗತಿ ಸಿದ್ಧಾಂತದ ಮೇಲೆ ನಿಂತಿದೆ. ಈ ಆಧುನಿಕ ಪ್ರಗತಿ ಸಿದ್ಧಾಂತವಾದರೋ, ನೈತಿಕ ಸಂಯಮ, ಪರಸ್ಪರ ಸಹಕಾರ ಭಾವ, ಸಮಾನತೆಯ ಆಶಯಗಳನ್ನು ಸಂಪೂರ್ಣ ಬಿಟ್ಟುಕೊಟ್ಟಿದೆ. ಜಾಗತೀಕರಣ ಹುಟ್ಟುಹಾಕಿದ ಮಾರುಕಟ್ಟೆಯ ಆಶಯಗಳಂತೂ, ಏಕಮುಖಿ ಅಭಿವೃದ್ಧಿ ಕಲ್ಪನೆಗಳನ್ನು ಇನ್ನಷ್ಟು ಮೊನಚು ಮಾಡಿ, ಇಡಿಯ ಜಗತ್ತನ್ನು ಮಾರುಕಟ್ಟೆ, ಪೋಷಕ ಸರಕು ಸಂಸ್ಕೃತಿಯಲ್ಲಿ ನೆಲೆಗೊಳಿಸುವತ್ತ ರಭಸದಿಂದ ಸಾಗಿದೆ.

ಇಂಥ ಬದುಕಿನ ಕ್ರಮದಲ್ಲಿ ಹಣ-ವ್ಯಾಪಾರ-ವಾಣಿಜ್ಯ-ಪೈಪೋಟಿ-ಲಾಭಗಳೇ ದಿನನಿತ್ಯ ಪೂಜೆಗೊಳ್ಳುವ ಪರದೈವಗಳಾಗಿ ಬಿಡುತ್ತವೆ. ಬಹುರಾಷ್ಟ್ರೀಯ ಕಂಪೆನಿಗಳ ಮಾರುಕಟ್ಟೆ ನಿಯಂತ್ರಣ ಶಕ್ತಿಯು ಇಂದು, ತಮ್ಮ ತಮ್ಮ ದೇಶಗಳ ಗಡಿಗಳನ್ನೆಲ್ಲ ಮೀರಿ ತಮ್ಮ ಆರ್ಥಿಕ - ರಾಜಕೀಯ ಪ್ರಭಾವಲಯಗಳನ್ನು ವಿಸ್ತರಿಸಿಕೊಂಡಿವೆ. ತಮ್ಮ ಮಾರುಕಟ್ಟೆ ಅವಕಾಶ ಕುದುರಿಸಿಕೊಳ್ಳಲು, ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಯಾವ ಸರಕಾರ ಆಳುತ್ತಿರಬೇಕೆಂಬುದನ್ನೂ, ನಿರ್ಧರಿಸುವಷ್ಟು, ಈ ಕಂಪೆನಿಗಳು ಶಕ್ತವಾಗಿವೆ. ಜೊತೆಗೆ ಇವನ್ನೆಲ್ಲಾ ಭದ್ರಗೊಳಿಸಲು, ಬಲಿಷ್ಠರಾದ ಮೇಲ್ವರ್ಗ ಮತ್ತು ಮಧ್ಯಮ ವರ್ಗದ ಜನ, ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳನ್ನು ಹಾಡಿ ಹೊಗಳುವಂತೆ, ಅವರನ್ನು ಮೋಡಿ ಮಾಡುವ ವ್ಯವಸ್ಥೆಯೂ ಇನ್ನೊಂದೆಡೆ ಶಿಕ್ಷಣ, ಸಂವಹನ ಮಾಧ್ಯಮಗಳ ಮೂಲಕ ನಡೆಯುತ್ತಿವೆ. ನಿಜಕ್ಕೂ ಜಾಗತಿಕ ವ್ಯವಸ್ಥೆ, ತನ್ನ ಪರ ತಾನೇ [illegible] "ಲೋಕದೃಷ್ಟಿ"ಯನ್ನು ಶಿಕ್ಷಣದ ಮೂಲಕ, ನಮ್ಮೆಲ್ಲರ ಮನಸ್ಸಿನೊಳಗೆ ಭದ್ರಗೊಳಿಸಿಬಿಟ್ಟು, "ಜಾಗತೀಕರಣ ಪ್ರಗತಿಗೆ ಅನಿವಾರ್ಯ ಮತ್ತು ಇದೊಂದೇ ಮಾನವ ಕಲ್ಯಾಣದ ದಾರಿ" ಎಂಬ ಭ್ರಮೆ ಹುಟ್ಟಿಸಿ ಬಿಡುತ್ತಿದೆ.

ಹಾಗಾಗಿ, ಈ ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಶಿಕ್ಷಣ ಕ್ಷೇತ್ರವು ಮನುಷ್ಯನ ಅಂತರಂಗವನ್ನು ಅರಳಿಸಿ, ಸಮಾನತೆ-ಪರಸ್ಪರ ಸಹಕಾರ ಭಾವಗಳ ಹಸಿವನ್ನು ಆತನಲ್ಲಿ ಹೆಚ್ಚಿಸಿ, ಆತನನ್ನು ಸಾಮುದಾಯಿಕ ಬದುಕಿನ ಬಿಡುಗಡೆಯತ್ತ ನಡೆಸುವ ಬದಲು, ಮಾರುಕಟ್ಟೆಯ ಪೈಪೋಟಿ-ಲಾಭಗಳ ಕಾರ್ಯಯೋಜನೆಯನ್ನು ಪೋಷಿಸಲು ಅನುಕೂಲವಾಗುವ ಪೂರ್ವಾಗ್ರಹ ಪೀಡಿತ ಸ್ವಾರ್ಥಿಯಾಗಿ ಛಿದ್ರೀಕರಿಸುವ ಕೆಲಸ ಮಾಡುತ್ತಿದೆ. ಬಂಡವಾಳಶಾಹೀ ಮಾರುಕಟ್ಟೆಯ ಒತ್ತಡ, ಒತ್ತಾಸೆಗಳು, ಶಿಕ್ಷಣ ಕ್ಷೇತ್ರವನ್ನು ತನಗೆ ಪ್ರಯೋಜನವಾಗುವ ರೀತಿಯಲ್ಲಿ ಉಪಯೋಗಿಸಿ ಸಹಜವಾಗಿಯೇ ತನ್ನ ಹಿತಾಸಕ್ತಿಯನ್ನು ಪೋಷಿಸುವ, ಜೋರಿನ ಇಂಗ್ಲೀಷನ್ನು ಬೆಳೆಸುವ ಭಾಷಾ ನೀತಿಯನ್ನು ರೂಪಿಸಿಕೊಳ್ಳುತ್ತಿದೆ.

ಸಮಸ್ತ ಜನಸಮೂಹವನ್ನೇ ಏಕಮಾದರಿಯಲ್ಲಿ ರೂಪಿಸುವ ಮೂಲಕ ಮನುಷ್ಯನ ಬೌದ್ಧಿಕ ಜಾಗತೀಕರಣ ಮಾಡಿದಾಗ ಮಾತ್ರ ಕೈಗಾರಿಕಾ ಸಮಾಜಕ್ಕೆ ಇಡಿಯ ಜಗತ್ತನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯ. ಮಾರುಕಟ್ಟೆಯು ಯಾವಾಗಲೂ ತನಗೆ 'ಮ್ಯಾನೇಜ್' ಮಾಡಲು ಅನುಕೂಲವಾಗುವ ಏಕಮಾದರಿಯ ಕೇಂದ್ರೀಕೃತ ವ್ಯವಸ್ಥೆಯನ್ನು ಬಯಸುತ್ತದೆ. ವಿವಿಧತೆ, ವಿಪುಲತೆಗಳಿಗೆ ಅವಕಾಶವಿರುವ ವಿಕೇಂದ್ರೀಕೃತ ನೆಲೆಯಲ್ಲಿ ವಿಶ್ವಮಾರುಕಟ್ಟೆಗೆ ಅವನ್ನು 'ಮ್ಯಾನೇಜ್' ಮಾಡಲು ಕಷ್ಟವಾಗುತ್ತದೆ. ಅನೇಕ ಭಾಷೆಗಳು, ಅನೇಕ ಜೀವನ ಕ್ರಮಗಳು, ಅನೇಕ ಬೇಸಾಯ ಪದ್ಧತಿಗಳು, ಹೀಗೆ ಅನೇಕದೊಡನೆ, ವಿಶ್ವ ಮಾರುಕಟ್ಟೆ ವ್ಯವಸ್ಥೆಗೆ ಸಂಧಾನ ಮಾಡಿಕೊಳ್ಳುವುದು ಕಷ್ಟ. ಉದಾಹರಣೆಗೆ, ಭಾರತವೊಂದರಲ್ಲೇ 3600ಕ್ಕೂ ಮಿಕ್ಕ ಭತ್ತದ ವಿಭಿನ್ನ ತಳಿಗಳಿದ್ದಾವಂತೆ. ಅವಷ್ಟನ್ನೂ ಯಾವುದೇ ಬಹುರಾಷ್ಟ್ರೀಯ ಕಂಪನಿಗೆ ಪೇಟೆಂಟ್ ಮಾಡಿಕೊಂಡು, ಒಡೆತನ ಸಾಧಿಸುವದು ಕಷ್ಟ. ಹಾಗಾಗಿ ಈ ತಳಿಗಳನ್ನೆಲ್ಲಾ ಬಂಜೆಗೊಳಿಸಿ, ಕ್ರಮೇಣ ನಾಶ ಮಾಡಿ, ತಮಗೆ 'ಮ್ಯಾನೇಜ್' ಮಾಡಲು ಸಾಧ್ಯವಾಗುವಷ್ಟೇ ತಳಿಗಳನ್ನು ಉಳಿಸಿ, ಅವುಗಳ ಸ್ವಾಮ್ಯವನ್ನು ತೆಗೆದುಕೊಳ್ಳುವುದನ್ನು ನಾವಿಂದು ನೋಡುತ್ತಿದ್ದೇವೆ. ಇದೇ ರೀತಿ ಬದುಕಿನ ರೀತಿ-ರಿವಾಜು - ಭಾಷೆಗಳೂ ಅನೇಕವಿದ್ದಾಗ, ವಿಶ್ವ ಮಾರುಕಟ್ಟೆಯ ನೀತಿ, ನಿಯಮಗಳನ್ನು ಜನಮನದಲ್ಲಿ ಶೈಕ್ಷಣಿಕವಾಗಿ ಮನದಟ್ಟು ಮಾಡುವುದು ಕಷ್ಟಸಾಧ್ಯ. ವಿಶ್ವಕ್ಕೇ ಮಾನ್ಯವಾಗುವ ಒಂದು ಭಾಷೆ, ಹಾಗಾಗಿ ಅನಿವಾರ್ಯವಾಗುತ್ತದೆ. ಆ ಭಾಷೆ, ಜಾಗತೀಕರಣದ ಹರಿಕಾರರಾದ ಪಾಶ್ಚಾತ್ಯ ಸಂಸ್ಕೃತಿಯ ವಾಸನೆ ಹೊತ್ತ ಇಂಗ್ಲೀಷಲ್ಲದೆ ಮತ್ತಾವುದು ? ಪಿಸು ಮಾತಾಡಲೂ ಸಾಧ್ಯವಾಗದಷ್ಟು ಅಬ್ಬರದ ಇಂಗ್ಲೀಷ್ ಭಾಷೆಯಲ್ಲಿ ನಮ್ಮನ್ನು ನಾವು ಗೋಪ್ಯವಾಗಿ ಬಚ್ಚಿಟ್ಟುಕೊಳ್ಳಲು ಸಾಧ್ಯವಾಗುವ ಅಡಗುತಾಣಗಳೇ ಇಲ್ಲದಿರುವುದರಿಂದ, ನಮ್ಮ ಅಂತರಂಗ ಸತತವಾಗಿ ಬಯಲಾಗುತ್ತಲೇ ಇರುತ್ತವೆ. ಹಾಗಾಗಿ ಕೈಗಾರಿಕಾ ಸಮಾಜಕ್ಕೆ, ಇಂಗ್ಲೀಷಿನ ಮಕ್ಕಳನ್ನು ತನ್ನ "ಎಜೆಂಡಾ"ಕ್ಕೆ ಬೇಕಾದಂತೆ ಕಚ್ಚಾ ವಸ್ತುವಿನಂತೆ ಬಳಸಿಕೊಳ್ಳಲು ಸುಲಭವಾಗುತ್ತದೆ.

ಇಂಗ್ಲೀಷ್ ಹೇರಿಕೆಗೆ, ಅಖಿಲ ಭಾರತ ಹರಹನ್ನು ತೆಗೆದುಕೊಂಡಿರುವ ಬಂಡವಾಳಶಾಹೀ ಮಾರುಕಟ್ಟೆಯ ಶಕ್ತಿಗಳು ಖಂಡಿತ ಕಾರಣವಾಗಿವೆ. ಬಿಳಿ ಮನುಷ್ಯನ ಹೊರೆಯಾಗಿ, ಆಳುವ ವರ್ಗದ ಭಾಷೆಯಾದ ಇಂಗ್ಲೀಷ್, ತನ್ನ ಅಧಿಕಾರದ ಜತೆ, ಪ್ರತಿಷ್ಠೆ, ಆಳುವ ವರ್ಗದ ಗೆಳೆತನ, ಸಾಮಾಜಿಕ-ಆರ್ಥಿಕ ಸವಲತ್ತು, ಮತ್ತು ಒಟ್ಟಾರೆಯಾಗಿ, ಆರ್ಥಿಕ -ಸಾಮಾಜಿಕ ಪ್ರಭುತ್ವವನ್ನು

ಒದಗಿಸಿಕೊಡುತ್ತದಲ್ಲವೇ ? ಹಾಗಾಗಿ, ನಮ್ಮ ದೇಶದ ಮೇಲ್ವರ್ಗದ ಜನ, ಈ ಆಳುವ ಭಾಷೆ - ಸಂಸ್ಕೃತಿಯನ್ನು, ಆಳುವವರಿಗೆ ತಾವೂ ಸಲ್ಲುವ ಸಲುವಾಗಿ ಬಳಸಿಕೊಂಡರು. ಇಂದೂ ಕೂಡ ಇಂಗ್ಲೀಷ್, ಆರ್ಥಿಕ ಬಲ, ಸಾಮಾಜಿಕ ಪ್ರತಿಷ್ಠೆ ಮತ್ತು ಅಧಿಕಾರವನ್ನು ಪ್ರತಿನಿಧಿಸುತ್ತಿರುವುದರಿಂದ, ಕನ್ನಡ ಭಾಷೆ ಹ್ಯಾಗೆ ತಾನೇ ಉಳಿದೀತು ? ಪ್ರತಿಷ್ಠಿತ ವರ್ಗ, ಅಂದರೆ ದೇಶದಲ್ಲಿ ಅತ್ಯುತ್ತಮ ವಾದ್ದನ್ನೆಲ್ಲಾ ತನ್ನದಾಗಿ ಮಾಡಿಕೊಂಡ ಸುಮಾರು ೧೦ ಕೋಟಿಯಷ್ಟು ಜನ ನಮ್ಮ ಭಾಷಾ ನೀತಿ ಯನ್ನು, ತಮ್ಮ ಅನುಕೂಲಕ್ಕಾಗಿ ರೂಪಿಸಿಕೊಂಡಿದ್ದಾರೆ. ಸಹಜವಾಗಿಯೇ, ಅವರ ಹಿತಾಸಕ್ತಿಯನ್ನು ಬೆಳೆಸುವ ಇಂಗ್ಲೀಷಿಗೇ ಹೆಚ್ಚು ಪ್ರಾಮುಖ್ಯತೆ ಬಂದು, ಪ್ರಾದೇಶಿಕ ಭಾಷೆಗಳು ಪ್ರಾಶಸ್ತ್ಯ ಕಳೆಕೊಳ್ಳುತ್ತಿವೆ. ಅಂತೂ, ಒಂದು ಮಾತು ವಿವಾದಾತೀತವಾದದ್ದು. ಈ ಭಾಷಾ ನೀತಿಯ ರೂಪಣೆಯಲ್ಲಿ ಜನರ ಸಹಭಾಗಿತ್ವದ ಜನತಂತ್ರವೆಂದು ಹೇಳಿಕೊಳ್ಳುವ ನಮ್ಮ ರಾಷ್ಟ್ರದಲ್ಲಿ, ಈ ನಾಡಿನ ಬಹುಸಂಖ್ಯಾತರಾದ ಬಡವರಿಗೆ, ಗ್ರಾಮೀಣ ಜನರಿಗೆ ಯಾವ ಸ್ಥಾನವೂ ಇಲ್ಲ, ಸ್ವಾತಂತ್ರ್ಯವೂ ಇಲ್ಲ.

ಆದರೆ, ಜಾಗತೀಕರಣದ ಸಾಂಸ್ಕೃತಿಕ ಧಾಳಿಯ ವಿರುದ್ಧ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ನಿಜಕ್ಕೂ ಸಾಧ್ಯವಾಗುವುದು, ನಮ್ಮ ನಮ್ಮ ಪ್ರಾದೇಶಿಕ ನಡೆ-ನುಡಿ-ಸಂಸ್ಕೃತಿ-ಭಾಷೆಗಳ ಮರೆಯಲ್ಲಿ. ಏಕೆಂದರೆ ಯಾವುದೇ ಭಾಷೆ ಸಾಂಸ್ಕೃತಿಕವಾಗಿ ತಟಸ್ಥವಲ್ಲ. ಅದು ತನ್ನ ಜೊತೆ, ತನ್ನ ನೆಲದ ಸಂಸ್ಕೃತಿಯನ್ನೂ ಸೂಕ್ಷ್ಮವಾಗಿ ನಮ್ಮ ಮನೆಯ ಪಡಸಾಲೆಗೆ ರವಾನಿಸಿರುತ್ತದೆ. ಹಾಗಾಗಿ ನಮ್ಮ ನಮ್ಮ ನೆಲದ ಭಾಷೆ ನಮಗೆ ಸಾಂಸ್ಕೃತಿಕವಾಗಿ ಬಹಳ ಮುಖ್ಯವಾಗಿದೆ. ಅವರವರ ಮಾತೃಭಾಷೆಯೊಂದಿಗೆ ಆಯಾಯ ಜನರಿಗೆ ಭಾವನಾತ್ಮಕ ಸಂಬಂಧವಿರುತ್ತದೆ. ನಮ್ಮ ನಮ್ಮ ಪ್ರಾದೇಶಿಕ ಭಾಷೆಯಲ್ಲಿ ಮಾತ್ರ ನಮ್ಮ ನಮ್ಮ ಪ್ರತ್ಯಪ್ರತ್ಯೇಕ ವ್ಯಕ್ತಿವಿಶಿಷ್ಟತೆ ಅರಳಿಕೊಳ್ಳುತ್ತದೆ. ಆದರೆ ಇಂದು "ವ್ಯಕ್ತಿವಿಶಿಷ್ಟತೆ" ಪ್ರತ್ಯಪ್ರತ್ಯೇಕ "ಐಡೆಂಟಿಟಿ"ಗಳು ಜಾಗತೀಕರಣದ ಸಫಲತೆಯ ದೃಷ್ಟಿಯಿಂದ ಅಪಾಯಕಾರಿಯಾಗಿವೆ. ಹಾಗಾಗಿ, ನಮ್ಮ ಸಾಂಸ್ಕೃತಿಕ "ಐಡೆಂಟಿಟಿ" ಗಳನ್ನು ನಮ್ಮಿಂದ ಕಳಚಿ, ವಿಶ್ವಭಾಷೆಯ ಮೂಲಕ ನಮ್ಮ "ಮುಖ ಚಹರೆ" ಕಳೆದು ಕುರೂಪರನ್ನಾಗಿ (deface) ಮಾಡಲಾಗುತ್ತಿದೆ. ಇದರಿಂದಾಗಿ, ನಮ್ಮ ಕನ್ನಡ ಮಕ್ಕಳು ಈ ನೆಲದ ಕಂಪನ್ನು ಹೊರಹೊಮ್ಮಿಸುವ ಬೇಂದ್ರೆ-ಕುವೆಂಪು-ಕಾರಂತ- ಮುಂತಾದ ಕನ್ನಡದ ಪ್ರಮುಖರನ್ನೂ ಓದಲು ಸಾಧ್ಯವಾಗದ ಶೋಚನೀಯ ಸ್ಥಿತಿ ತಲುಪಿದ್ದಾರೆ. ಈ ರೀತಿ ನಮ್ಮ ಮಕ್ಕಳು ತಮ್ಮ ಸಂಸ್ಕೃತಿಗೇ ಪರಕೀಯರಾಗಿ, ತ್ರಿಶಂಕುಗಳಾಗುವುದು ಅಥವಾ ಅಂತಾರಾಷ್ಟ್ರೀಯ ಹೆದ್ದಾರಿಯಲ್ಲಿ ಬಿದ್ದು ಅಭದ್ರತೆಯ ಭಯದಿಂದ ನರಳುವ ಅನಾಥರಾಗುವುದು ಕೊಳ್ಳುಬಾಕ ಮಾರುಕಟ್ಟೆ ಸಂಸ್ಕೃತಿಗೆ ಬಹಳ ಮುಖ್ಯವಾಗುತ್ತದೆ. ಯಾಕೆಂದರೆ, ನಾವು ಸಾಂಸ್ಕೃತಿಕವಾಗಿ ದರಿದ್ರರಾಗಿ ಅಭದ್ರರಾದಾಗ ಮಾತ್ರ, ಸ್ವಂತಿಕೆಯ ಬೇರು ಕಳಕೊಂಡು ನಾವು ಜಾಗತೀಕರಣದ ಹೊಟ್ಟೆಬಾಕ (ಕನ್ಸೂಮರಿಸಮ್) ಸಂಸ್ಕೃತಿಗೆ ಬಲಿಪಶುಗಳಾಗುತ್ತೇವೆ; ಜಾಗತೀಕರಣ ಕೊಡುವ ಅನಾವಶ್ಯಕ ಸವಲತ್ತುಗಳ ಒಟ್ಟಾರೆ ಗ್ರಾಹಕರಾಗುತ್ತೇವೆ. ಅನಗತ್ಯ ಸರಕುಗಳನ್ನು ನಮ್ಮ ಸುತ್ತ ಕೂಡಿ ಹಾಕಿ ಆ ಮೂಲಕ ಹುಸಿ ಐಡೆಂಟಿಟಿಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತೇವೆ. ಈ ದೃಷ್ಟಿಯಲ್ಲಿ ನೋಡಿದರೆ ಭಾರತೀಯ ಸಂಸ್ಕೃತಿಯ ಮೇಲೆ ಇಂದು ಧಾಳಿಯಾಗುತ್ತಿರುವುದು ಅನ್ಯಮತೀಯರಿಂದಲ್ಲ; ಬದಲಿಗೆ ನಮ್ಮ ಸಾಂಸ್ಕೃತಿಕ ಬೇರುಗಳನ್ನೇ ಕತ್ತರಿಸುವ ಅನ್ಯ ಮಾಧ್ಯಮ ಶಿಕ್ಷಣದಿಂದೆನ್ನಬಹುದು.

ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ಯಾರ ಸದಾಶಯದಿಂದಲೂ ಅಥವಾ ಪಾಳುಪಾಳಾದ "ಕಾಸ್ಮೆಟಿಕ್" ಭಾಷಾ ನೀತಿಯಿಂದಲೂ, ಭಾಷೆ ಬೆಳೆಯುವುದಿಲ್ಲ. ಅದಕ್ಕೆ ತಕ್ಕ ಆಂತರಿಕ ಒತ್ತಡಗಳು ಇರಬೇಕು. ಮತ್ತು ಅದಕ್ಕಿಂತ ಹೆಚ್ಚಾಗಿ ಅದು ಆರ್ಥಿಕವಾಗಿ ಲಾಭದಾಯಕವೂ, ಪ್ರಭುತ್ವ ಹಾಗೂ ಸಾಮಾಜಿಕ ಪ್ರತಿಷ್ಠೆಯ ಸಂಕೇತವೂ ಆಗಿರಬೇಕು. ಆಗ ಮಾತ್ರ ಕನ್ನಡ ಭಾಷೆ ಬೆಳೆದೀತು. ಉದಾಹರಣೆಗೆ ಪಶ್ಚಿಮ ಬಂಗಾಳದಿಂದ ಕರ್ನಾಟಕಕ್ಕೆ ವೃತ್ತಿಪರ ಶಿಕ್ಷಣಕ್ಕಾಗಿ ಬರುವ ಮಕ್ಕಳಿಗೆ, ಅವರ ಸಾಹಿತ್ಯ-ಸಂಸ್ಕೃತಿಯ ಪರಿಚಯ ಚೆನ್ನಾಗಿರುತ್ತದೆ ಎಂದು ನನ್ನ ಅಧ್ಯಾಪಕ ಗೆಳೆಯರು ಹೇಳುತ್ತಾರೆ. ಟಾಗೋರ್, ಬಂಕಿಮಚಂದ್ರ, ಶರಚ್ಚಂದ್ರರ ಬಗ್ಗೆ ಗೊತ್ತಿರದ ಮಕ್ಕಳೇ ಅಪರೂಪವಂತೆ. ಪಶ್ಚಿಮ ಬಂಗಾಳದ ಖಚಿತ ಭಾಷಾ ರೀತಿಯೇ ಇದಕ್ಕೆ ಕಾರಣ. ಅಲ್ಲಿ ಬೆಂಗಾಳಿಯಲ್ಲಿ ಕಲಿತ ಮಕ್ಕಳಿಗೆ ಶೇಕಡಾ ೫೦ ರಷ್ಟು ಮೀಸಲಾತಿ ಇದೆಯಂತೆ. ಹಾಗಾಗಿ, ಎಲ್ಲರೂ ತಮ್ಮ ಮಾತೃಭಾಷೆಯನ್ನು ಕಲಿಯುವುದರಲ್ಲಿ ಉತ್ಸುಕರಾಗಿದ್ದಾರೆ. ತಮ್ಮ ಭಾಷೆಯ ಬಗ್ಗೆ ಅವಜ್ಞೆ ಇಲ್ಲ. ಅಭಿಮಾನ ಇದೆ. ಇಲ್ಲೂ ಕೂಡ ಕನ್ನಡದಲ್ಲಿ ವಿಜ್ಞಾನ ಬೋಧನೆ ಆರಂಭಿಸುವ ಹೊರತು, ೫೦ ಶೇಕಡಾದಷ್ಟು ಉದ್ಯೋಗ ಅವಕಾಶ, ಸಿ.ಇ.ಟಿ. ಸೀಟುಗಳನ್ನು ಕನ್ನಡದ ಮಕ್ಕಳಿಗೆ ಮೀಸಲಿರಿಸದ ಹೊರತು, ಭಾಷೆ ಈ ನಿಟ್ಟಿನಲ್ಲಿ ಬೆಳೆಯುವುದೇ ಇಲ್ಲ. ಜಾಗತಿಕ ವಿದ್ಯಮಾನಗಳಿಂದೆಲ್ಲ ಪ್ರಾದೇಶಿಕ ಭಾಷೆಯನ್ನು ಈ ರೀತಿಯಲ್ಲಿ ರಕ್ಷಿಸಲು ಸರಕಾರಕ್ಕೆ ನಿಜಕ್ಕೂ ಪ್ರಬಲ ಇಚ್ಛಾಶಕ್ತಿ ಬೇಕು. ಆಗ ಮಾತ್ರ, ಸರಿಯಾದ ಭಾಷಾ ನಿಲುವು, ನೀತಿ ನಿಯಮಗಳನ್ನು ರೂಪಿಸಿಕೊಂಡು ಅವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸಾಧ್ಯ.

ಸಂಸ್ಕೃತಿ ಪ್ರೇಮ, ದೇಶಪ್ರೇಮ, ರಾಷ್ಟ್ರೀಯತೆಗಳ ಬಗ್ಗೆ ಮಾತಾಡುವ ಮೊದಲು, ಒಂದು ವಿಷಯವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ವೈವಿಧ್ಯಮಯ ಪ್ರಾದೇಶಿಕ ಭಾಷೆಗಳ ಬಗ್ಗೆ ವಿವೇಕಯುತ ಧೋರಣೆಯಿಲ್ಲದೆ, ಸಂಸ್ಕೃತಿಯ ಬಗ್ಗೆ ಸೃಜನಾತ್ಮಕ ಧೋರಣೆ ಹೊಂದುವುದು ಸಾಧ್ಯವಿಲ್ಲ. ಆಧುನಿಕ ವಿಜ್ಞಾನದ ಪ್ರಗತಿಯ ತಾಣವಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ, ಭಾಷೆಗಳ ವೈವಿಧ್ಯ, ಮತ್ತು ತಮ್ಮ ತಮ್ಮ ಭಾಷೆಗಳ ಮೇಲೆ ಜನರಿಗಿರುವ ಸಹಜ ಪ್ರೀತಿಯನ್ನು ನಾವು ಗಮನಿಸಬೇಕು. ಹಾಗೆಯೇ ವಿಶಾಲವಾದ ಭಾರತದ ಸಾಂಸ್ಕೃತಿಕ ರಂಗದಲ್ಲಿ ವಿವಿಧತೆಯಲ್ಲಿ ಏಕತೆಯನ್ನು ಭದ್ರಗೊಳಿಸಬೇಕಾದರೆ, ಮೊದಲು ಭಾಷೆಗಳ ವಿವಿಧತೆಯ ಪ್ರಾಮುಖ್ಯತೆಯನ್ನು ಪಾಲಿಸಬೇಕಾಗಿದೆ. ಆಗ ಮಾತ್ರ ಬಹುಮುಖೀ ಸಾಂಸ್ಕೃತಿಕ ರಂಗ ಅರ್ಥಪೂರ್ಣವಾದೀತು.

ಆದರೆ, ಈ ದಿಸೆಯಲ್ಲಿ ಇಂದು ಭಾರತಕ್ಕೆ ಇಚ್ಛಾಶಕ್ತಿಯ ಕೊರತೆಯಿದೆ. ಹಾಗಾಗಿ, ಈ ಜಾಗತಿಕ ವಿದ್ಯಮಾನದಡಿ, ಕನ್ನಡದಂಥ ಪ್ರಾದೇಶಿಕ ಭಾಷೆಗಳ ಭವಿಷ್ಯ ಮಸುಕಾಗಿದೆ. ಬಹುರಾಷ್ಟ್ರೀಯ ಸಂಸ್ಥೆಗಳ ಒತ್ತಡಗಳನ್ನೆದುರಿಸುವ ಶಕ್ತಿ ಸಾಲದೆ, ಎಲ್ಲವನ್ನೂ ಅಂದರೆ ಮೂಲಭೂತ ಅವಶ್ಯಕತೆಗಳಾದ ಶಿಕ್ಷಣ, ಆರೋಗ್ಯ ಕ್ಷೇತ್ರಗಳನ್ನೂ ಕೂಡ ಖಾಸಗೀ ಕ್ಷೇತ್ರಕ್ಕೆ ಬಿಟ್ಟುಕೊಟ್ಟು ತಮ್ಮ ಕನಿಷ್ಠ ಸಾಮಾಜಿಕ, ನೈತಿಕ ಜವಾಬ್ದಾರಿಯಿಂದಲೇ, ನುಣುಚಿಕೊಂಡು ಕೈಚೆಲ್ಲಿ ಕುಳಿತುಕೊಳ್ಳುವ ಹಂತಕ್ಕೆ ತಲುಪಿರುವ ನಮ್ಮೀ ಪ್ರಭುತ್ವ, ಕನ್ನಡವನ್ನು ಉಳಿಸುತ್ತದೆ ಎಂಬ ಭರವಸೆಯಿಲ್ಲ. ಖಾಸಗೀ ಕ್ಷೇತ್ರದ ನೀತಿಯೇ ಮೊದಲು ಲಾಭ, ಆಮೇಲೆ ಸೇವೆಯ ಲೆಕ್ಕಾಚಾರವಾಗಿರುವಾಗ, ಆರ್ಥಿಕ ಬಲ, ಸಾಮಾಜಿಕ ಪ್ರತಿಷ್ಠೆ, ರಾಜಕೀಯ ಪ್ರಭುತ್ವದ ಗೆಳೆತನ,

ಅಧಿಕಾರೀ ಪ್ರಭಾವಗಳನ್ನೆಲ್ಲಾ ತಂದು ಕೊಡುವ, ಪ್ರಬಲರ ಭಾಷೆಯಾದ ಇಂಗ್ಲೀಷೇ ಬಲಗೊಂಡು, ಕನ್ನಡ ಸೊರಗುವ ಸಾಧ್ಯತೆಗಳೇ ಹೆಚ್ಚು. ಯಾವ ಸಾಹಿತ್ಯ ಉತ್ಸವಗಳೂ ಕನ್ನಡವನ್ನು ಉಳಿಸಲಾರದು. ಇತ್ತೀಚಿನ ದಿನಗಳಲ್ಲಿ ಸಾಹಿತ್ಯ ಉತ್ಸವಗಳಲ್ಲಿ ಹೊಸ ಮುಖಗಳೇ ಕಾಣುವುದು ಅಪರೂಪವಾಗುತ್ತಿದೆ. ಕಾರಣ, ನಮ್ಮ ಯುವಕರು, ಇಂದು ಕನ್ನಡ ಸಾಹಿತ್ಯದೊಳಗೆನೇ ಪ್ರವೇಶಿಸುತ್ತಿಲ್ಲ. ಈ ವಿದ್ಯಮಾನಗಳನ್ನೆಲ್ಲಾ ಹೇಗೆ ಎದುರಿಸಬಹುದು ಎಂಬುದನ್ನು ಎಲ್ಲಾ ಕ್ಷೇತ್ರಗಳಲ್ಲಿರುವ ಕನ್ನಡದ ಸುಮನಸ್ಸುಗಳು ಕೂಡಿ ಗಂಭೀರವಾಗಿ ಚಿಂತಿಸಬೇಕು. ❒

# ಶಿಕ್ಷಣದಲ್ಲಿ ಜ್ಞಾನ ಪರಂಪರೆಯ ಹಿನ್ನಡೆ

ಕನಸುಗಳು, ಆದರ್ಶಗಳು ಇಲ್ಲದೆ ಯಾವುದೇ ಕ್ಷೇತ್ರವನ್ನು ಅರ್ಥಪೂರ್ಣವಾಗಿ ಬೆಳೆಸಲು ಸಾಧ್ಯವಿಲ್ಲವೆಂದು ನನ್ನ ನಂಬಿಕೆ. ಇತ್ತೀಚಿನವರೆಗೂ, ಅಂದರೆ ೮೦ರ ದಶಕದ ಆರಂಭದವರೆಗೂ, ಭಾರತದಲ್ಲಿ ಶಿಕ್ಷಣಕ್ಷೇತ್ರಕ್ಕೆ, ಮುಖ್ಯವಾಗಿ ಉಚ್ಚಶಿಕ್ಷಣ ಕ್ಷೇತ್ರಕ್ಕೆ, ತನ್ನದೇ ಆದ ಕನಸುಗಳಿದ್ದುವು. ಆರ್ಥಿಕ ಬದುಕಿಗೆ ಸಹಕಾರಿಯಾಗುವುದರ ಜೊತೆಗೆ ಶಿಕ್ಷಣ, ಜ್ಞಾನಾರ್ಜನೆಯ ಮಾರ್ಗವೂ ಅಂತರಂಗದ ಅರಳುವಿಕೆಯ ಸಾಧನವೂ ಆಗಿರಬೇಕೆಂಬ ಭಾವನೆ ದಟ್ಟವಾಗಿತ್ತು. ಆದರೆ ಇಂದಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಯುಗದಲ್ಲಿ ಈ ಆದರ್ಶಗಳು ಭಗ್ನಗೊಂಡಿವೆ. ಉಚ್ಚ ಶಿಕ್ಷಣವೆಂಬುದು ವಿದ್ಯಾರ್ಥಿಯ ಬೌದ್ಧಿಕ ಉನ್ನತಿಗೆ, ಹೃದಯ ಸಂವೇದನೆಗಳಿಗೆ, ವ್ಯಕ್ತಿತ್ವ ವಿಕಾಸಕ್ಕೆ, ಜೀವನ ಮೌಲ್ಯಗಳ ಉದ್ದೀಪನೆಗೆ ಸಹಕಾರಿಯಾಗಬೇಕೆಂಬ ಪರಿಕಲ್ಪನೆ ಕ್ರಮೇಣ ಮಾಯವಾಗಿ, ಕೇವಲ ಆರ್ಥಿಕ ಬಲವರ್ಧನೆ (economic empowerment), ಸಾಮಾಜಿಕ ಪ್ರಭುತ್ವದ ಸಂಕೇತವಾಗುತ್ತಿದೆ; ಕೈಗಾರಿಕಾ ಸಮಾಜವನ್ನು ಭದ್ರಗೊಳಿಸುವ ಮಾರ್ಗವಾಗುತ್ತಿದೆ; ಕೇವಲ ವೃತ್ತಿ ಕುಶಲತೆ ತಾಂತ್ರಿಕ ಮಾಹಿತಿ (professional and technical information) ಮತ್ತು ಕೌಶಲ್ಯ ಅಭಿವೃದ್ಧಿ (skill development)

---

'ಮಾಹಿತಿ ತಂತ್ರಜ್ಞಾನ ಯುಗದಲ್ಲಿ, ಪದವಿ ಶಿಕ್ಷಣದ ಪುನರಾಚನೆ" ಎಂಬ ಕುರಿತು ಮಂಗಳೂರು ವಿಶ್ವವಿದ್ಯಾಲಯ ಕಾಲೇಜುಗಳ ಶಿಕ್ಷಕ ಸಂಘ (ಅಮುಕ್ತ) ಆಗಸ್ಟ್ ೨೦೦೧ರಲ್ಲಿ ಉಡುಪಿಯಲ್ಲಿ ಏರ್ಪಡಿಸಿದ್ದ ಮೂರು ದಿನಗಳ ರಾಷ್ಟ್ರಮಟ್ಟದ ವಿಚಾರ ಸಂಕಿರ್ಣ, ಮತ್ತು ಏಪ್ರಿಲ್ ೨೦೦೧ರಲ್ಲಿ ಉಡುಪಿಯಲ್ಲಿ ಅಮುಕ್ತ ಸಂಯೋಜಿಸಿದ "ಶಿಕ್ಷಕರ ಸಮಾವೇಶ"ದಲ್ಲಿ ಮಂಡಿಸಿದ ವಿಚಾರಗಳು.

ದುನ್ನು ವಿದ್ಯಾರ್ಥಿಗಳಿಗೆ ದಾಟಿಸಿ ಅವರನ್ನು ವಿಷಯ ವಿದ್ವಾಂಸರನ್ನಾಗಿ ಪರಿವರ್ತಿಸುವ ಮತ್ತು ಬಲಿಷ್ಠರಾದವರನ್ನು ಇನ್ನಷ್ಟು ಬಲಿಷ್ಠಗೊಳಿಸುವ (empowering the empowered) ಮಟ್ಟಕ್ಕೆ ಇಳಿದಿದೆ.

**ಮೂಲ ವಿದ್ಯಾಪರಂಪರೆಯ ನಾಶ**

ವಿಶ್ವಮಾರುಕಟ್ಟೆ ಅರ್ಥನೀತಿ ಮತ್ತು ಅದರ ಹಿಂದಿರುವ ಪ್ರಬಲ ಬಂಡವಾಳ ಶಾಹೀ ಮೌಲ್ಯಗಳು ಇಂದು ಶಿಕ್ಷಣ ಕ್ಷೇತ್ರವನ್ನು ಆಳಲು ಆರಂಭಿಸಿವೆ. ಪರಿಣಾಮವಾಗಿ, ಖಾಸಗೀ ಶಿಕ್ಷಣ ವ್ಯವಸ್ಥೆ ಹಿಂದಿನ ತನ್ನ ಆದರ್ಶ, ಸಾಮಾಜಿಕ ಕಳವಳಿಯನ್ನು ಕಳಕೊಂಡು ಶಿಕ್ಷಣವನ್ನು ಒಂದು ಲಾಭದಾಯಕ ಉದ್ದಿಮೆ ಎಂದು ಪರಿಗಣಿಸಲು ಆರಂಭಿಸಿದೆ. ಇನ್ನೊಂದೆಡೆ ಸಾಮಾಜಿಕ ಹಿತ ಕಾಯಬೇಕಾದ ಸರಕಾರವೂ 'ಬೆಲೆ ತೆತ್ತು ಶಿಕ್ಷಣ' (education at a cost) ಎಂಬ ಶ್ರೀಮಂತ ಪರ ನಿಲುವನ್ನು ತಳೆಯುತ್ತಿದೆ.

ಹಾಗಾಗಿ ಭಾರತದಲ್ಲಿ ಇಂದು ಕೈಗಾರಿಕಾ ಸಮಾಜದ ಮೌಲ್ಯಗಳೇ ಪರಮವಾಗಿ, ಜ್ಞಾನ, ತಿಳುವಳಿಕೆಗಳ ಪರಂಪರೆ ಹಿನ್ನಡೆ ಕಾಣುತ್ತಿದೆ. 'ಮ್ಯಾನೇಜ್‌ಮೆಂಟ್,' 'ಮಾರ್ಕೆಟಿಂಗ್,' 'ಕಂಪ್ಯೂಟರ್,' 'ಬಯೋಟೆಕ್ನಾಲಜಿ', 'ಮೆಡಿಕಲ್,' 'ಇಂಜಿನಿಯರಿಂಗ್' ಮುಂತಾದ ಸೀಮಿತ ಅನ್ವಯಿಕ ಸಮಾಜ ವಿಜ್ಞಾನ (applied social sciences) ಹಾಗೂ ಅನ್ವಯಿಕ ವಿಜ್ಞಾನ (applied sciences) ಶಾಖೆಗಳ ಮೇಲೆ ಇಡಿಯ ದೇಶದ ವಿದ್ಯಾಕ್ಷೇತ್ರವನ್ನು ನಿಲ್ಲಿಸಲಾಗುತ್ತಿದೆ. ಪರಿಣಾಮವಾಗಿ, ಇವು ಇತರ ವಿದ್ಯಾಕ್ಷೇತ್ರಗಳ ಮೇಲೆ ಸವಾರಿ ನಡೆಸುತ್ತಿವೆ; ಮತ್ತು ಹುಸಿ ವಿದ್ಯಾಕ್ಷೇತ್ರಗಳೇ ನಿಜ ವಿದ್ಯಾಕ್ಷೇತ್ರವನ್ನೆಲ್ಲಾ ವ್ಯಾಪಿಸಿಕೊಂಡು ಮೆರೆಯುತ್ತಿವೆ. ವೃತ್ತಿಪರ ಶಿಕ್ಷಣಕ್ಕೆ ಕೊಡುವ ಈ ಅತಿ ಒತ್ತು, ಸಮಾಜದಲ್ಲಿ ಪ್ರೀತಿ, ಸಹಭಾಗಿತ್ವದ ಬಾಳು, ಬದುಕಿನ ಸಾರಗ್ರಹಣ, ಸಾಮಾಜಿಕ ಸ್ಪಂದನಗಳನ್ನು ಬೆಳೆಸಲು ಅಷ್ಟೇನೂ ಸಹಕಾರಿಯಾಗಲಾರದು. ಮನುಷ್ಯ-ಮನುಷ್ಯ ಸಂಬಂಧಗಳನ್ನು ಮಾನವೀಯ ನೆಲೆಯಲ್ಲಿ ಬೆಸೆಯಲು ಪೋಷಕವಾಗಲಾರದು.

ಇದರರ್ಥ, ವೃತ್ತಿಪರ ಶಿಕ್ಷಣ ಅಗತ್ಯವಿಲ್ಲವೆಂದಲ್ಲ. ಒಂದು ದೇಶದ ಸಮಗ್ರ ಏಳಿಗೆಗೆ ಜ್ಞಾನಶಾಖೆಗಳ ಸರ್ವಾಂಗೀಣ ಅಭಿವೃದ್ಧಿ ಅತೀ ಅವಶ್ಯ. ಆದರೆ, ಯಾವುದು ಎಷ್ಟು ಬೇಕು ಎಂಬ ಪರಿಜ್ಞಾನವಿರಬೇಕಾಗುತ್ತದೆ. ಇಲ್ಲವಾದರೆ ಏಕ ರೂಪದ, ಏಕ ಚಿಂತನೆಯ ರಾಕ್ಷಸೀ ಸಮಾಜವಾಗಿ ದೇಶವು ಪರಿವರ್ತನೆಗೊಳ್ಳುವ ಅಪಾಯವಿದೆ. ಸಂವೇದನಾಶೀಲ ಮನುಷ್ಯರ ಬದಲು, ದುಡಿಯುವ ಮರದ ಕೈಗಳು ಮಾತ್ರ ಈ ದೇಶದಲ್ಲಿ ಇದ್ದಾವು.

ಇಂದು ಭಾರತದ ವಿದ್ಯಾಕ್ಷೇತ್ರ ಸಾಗುವ ದಾರಿಯನ್ನು ಗಮನಿಸಿದರೆ, ಇನ್ನು ಕೆಲವೇ ವರ್ಷಗಳಲ್ಲಿ ಈ ದೇಶದಲ್ಲಿ ನಿಜ ವಿದ್ವಾಂಸರು, ಸಮಾಜ ವಿಜ್ಞಾನಿಗಳು, ವಿಜ್ಞಾನಿಗಳು, ಸಾಹಿತಿಗಳು, ಪ್ರತಿಭಾವಂತ ಚಿಂತಕರು, ಜ್ಞಾನಿಗಳ ಸಂಖ್ಯೆ ವಿರಳವಾಗಿ ನಾವು ಹೊರದೇಶಗಳಿಂದ ವಿದ್ವಾಂಸರನ್ನು ಆಮದು ಮಾಡಿಕೊಳ್ಳುವ ಶೋಚನೀಯ ಪರಿಸ್ಥಿತಿ ಎದುರಾದೀತು. ಇದು ಶಿಕ್ಷಣಕ್ಷೇತ್ರದ ಅವನತಿಯ ಸಂಕೇತವೆನ್ನದೆ ವಿಧಿಯಿಲ್ಲ.

**ದೇಶೀ ಶಿಕ್ಷಣ ನೀತಿಯ ಕೊರತೆ**

ಸ್ವಾತಂತ್ರ್ಯ ದೊರಕಿ ೫೭ ವರ್ಷ ಸಂದರೂ, ನಮ್ಮ ದೇಶಕ್ಕೆ ತನ್ನದೆನ್ನುವ ಶಿಕ್ಷಣ ಕ್ರಮವಿಲ್ಲದಿರುವುದು ವಿಷಾದದ ಸಂಗತಿ. ಶತಮಾನಗಳಿಂದ ನಮ್ಮ ಅಗಾಧ ಜನಸ್ತೋಮಕ್ಕೆ ಅತ್ಯಂತ ಕಷ್ಟಪರಿಸ್ಥಿತಿಯಲ್ಲೂ ಬಸಿರಿಗೆ ಅನ್ನ ಕೊಟ್ಟು ಪೊರೆಯುತ್ತ ಬಂದ ಅಸಂಖ್ಯ ದೇಶೀ ಕಸುಬು, ಉಪಕಸುಬುಗಳ ಸಾಮುದಾಯಿಕ ಪರಂಪರಾಗತ ಅನುಭವ ಜನ್ಯ ಜ್ಞಾನಭಂಡಾರವನ್ನು ನಾವು, ಅನ್ಯರ ಶಿಕ್ಷಣ ಪ್ರಭಾವಕ್ಕೊಳಗಾಗಿ ಅಜ್ಞಾನದಿಂದ ತಿರಸ್ಕರಿಸಿದ್ದೇವೆ. ಅವಿದ್ಯೆಯೆಂದು ಈ ವಿದ್ಯೆಯನ್ನು ನಮ್ಮ ಔಪಚಾರಿಕ ಶಿಕ್ಷಣ ಕ್ರಮದಿಂದಲೇ ಹೊರಗಿಟ್ಟದ್ದೇವೆ. ಇದನ್ನು ಅವಲಂಬಿಸಿರುವ ೭೫ ಶೇಕಡಾಕ್ಕೂ ಮಿಕ್ಕ ಜನರ ವಿದ್ಯೆ ಹಾಗಾಗಿ ಅಸಂಗತವಾಗಿ, ಅವರು ತಮ್ಮ ಶಕ್ತಿ ಕಳಕೊಂಡಿದ್ದಾರೆ. ಮತ್ತು ಆಧುನಿಕ ಅಭಿವೃದ್ಧಿ ಪಥದ ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ಇದರ ಫಲವಾಗಿ, ಇಂದು ವಿದೇಶಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ನಮ್ಮ ಶಿಕ್ಷಣ ಮೌಲ್ಯಗಳನ್ನು ಅಜ್ಞಾತವಾಗಿ ಬರೆಯುತ್ತಿವೆ. ಉದಾಹರಣೆಗೆ, ೧೯೬೦ರ ದಶಕದಲ್ಲಿ ಅಮೇರಿಕಾ ದೇಶದಲ್ಲಿ ಗಣಿತ ಶಾಸ್ತ್ರಜ್ಞರ ಕೊರತೆಯಿತ್ತು. ಆ ಸಂದರ್ಭದಲ್ಲಿ ಗಣಿತ ಶಿಕ್ಷಣ ಶ್ರೇಷ್ಠ ಎಂಬ ಮೌಲ್ಯವನ್ನು ಹುಟ್ಟುಹಾಕಲಾಯಿತು. ಎಲ್ಲರೂ ಗಣಿತ ಪದವೀಧರರಾಗಿ ವಿದೇಶಕ್ಕೆ ಹೋಗಲು ಹಾತೊರೆಯುತ್ತಿದ್ದರು. ಇಂದು ಅಮೇರಿಕಾವು ಮಾಹಿತಿ ತಂತ್ರಜ್ಞಾನ ಆಧಾರಿತ ಅರ್ಥವ್ಯವಸ್ಥೆಯಾಗಿ ಪರಿವರ್ತಿತವಾಗಿರುವುದರಿಂದ, ಆ ದೇಶದಲ್ಲಿ ಕೂಲಿಗಳಂತೆ ದುಡಿಯುವ ಭಾರೀ ಸಂಖ್ಯೆಯ ಕಂಪ್ಯೂಟರ್ ಸಾಫ್ಟ್‌ವೇರ್ ಇಂಜಿನಿಯರುಗಳ ಅಗತ್ಯವಿದೆ. ಹಾಗಾಗಿ ಭಾರತದಲ್ಲಿಂದು ಕಂಪ್ಯೂಟರ್ ಇಂಜಿನಿಯರಿಂಗ್ ಶಿಕ್ಷಣಕ್ಕೆ ನೂಕುನುಗ್ಗಲಾಗಿದೆ. ನಮ್ಮ ಬಹಳಷ್ಟು ಮಂದಿ ಪ್ರತಿಭಾವಂತ ತರುಣ- ತರುಣಿಯರು ಇಂದು ಕಂಪ್ಯೂಟರ್ "ಬಾಡಿ ಶಾಪಿಂಗ್" (body shopping)ಗೆ ತಮ್ಮನ್ನೇ ತಾವು ತಯಾರು ಮಾಡಿಕೊಳ್ಳುತ್ತಿದ್ದಾರೆ; ಮಾತ್ರವಲ್ಲ, ಈ ವಿದ್ಯಮಾನದಿಂದಾಗಿ ತಮ್ಮ ನಿಜ ಪ್ರತಿಭೆಯ ಅನಂತ ಸಾಧ್ಯತೆಗಳನ್ನು ಸ್ವಯಂಕಂಡುಕೊಳ್ಳಲಾಗದೆ ಬೌದ್ಧಿಕವಾಗಿ ಮುರುಟ ಹೋಗುತ್ತಿದ್ದಾರೆ.

ಕಂಪ್ಯೂಟರ್ ಶಿಕ್ಷಣ ಮೌಲ್ಯವನ್ನು ಹಾಡಿಹೊಗಳುವ ಪರಂಪರೆಯಿಂದಾಗಿ, "ಕಂಪ್ಯೂಟರ್ ವಿಪ್ರ"ರ ಒಂದು ಅತಿ ಶ್ರೀಮಂತ ಮೇಲ್ವರ್ಗವೇ ಇಂದು ನಿರ್ಮಾಣವಾಗುತ್ತಿದೆ. ಕಂಪ್ಯೂಟರ್ ತಜ್ಞರ ಮತ್ತು ಇತರ ಜ್ಞಾನಕ್ಷೇತ್ರಗಳಲ್ಲಿ ದುಡಿಯುವ ಪ್ರತಿಭಾವಂತರ ನಡುವಿನ ಆರ್ಥಿಕ ಸಂಪಾದನೆ, ಸಾಮಾಜಿಕ ಸ್ಥಾನಮಾನದ ನಡುವಿನ ಕಂದರ ದಿನೇ ದಿನೇ ನಾವು ಊಹಿಸಲಾಗದಷ್ಟು ಅಗಲವಾಗುತ್ತಿದೆ. ಇವು ಎರಡು ಪ್ರತ್ಯಪ್ರತ್ಯೇಕ ಸಮಾಜಗಳಾಗಿಯೇ ವಿಭಜನೆಗೊಳ್ಳುತ್ತಿವೆ. ಕೇವಲ ಕೆಲವೇ ವಿದ್ಯಾ ಕ್ಷೇತ್ರಗಳ ಅತಿ ಬೆಳವಣಿಗೆಯಿಂದ, ತತ್ಕಾಲಕ್ಕೆ ಒಂದು ದೇಶದ ಆದಾಯವು ಹೆಚ್ಚಾದರೂ ಕೂಡ ದೀರ್ಘಾವಧಿಯಲ್ಲಿ ಇದು ಸುಭದ್ರ ದೇಶ ನಿರ್ಮಾಣಕ್ಕೆ ಅಷ್ಟೇನೂ ಸಹಕಾರಿಯಾಗದು. ಮೂಲಜ್ಞಾನ ಕ್ಷೇತ್ರಗಳು (pure sciences and social sciences) ದೇಶದ ಸಮಗ್ರ ಬೆಳವಣಿಗೆಗೆ ಅತೀ ಅಗತ್ಯ.

ಬದುಕೆಂಬುದು ಸಂಬಂಧಗಳ ಸರಮಾಲೆ. ಸಂಬಂಧಗಳು ಪವಿತ್ರ. ನಮ್ಮ ಸುತ್ತಲಿನ ಕಾಣುವ ಕಾಣದಿರುವ ಸಮಸ್ತ ಜಡ-ಚೇತನ ಸಂಗತಿಗಳ ಜೊತೆ ನಮ್ಮ ಬದುಕು ಹೆಣೆದುಕೊಂಡಿದ್ದು,

ಅವೆಲ್ಲವೂ ನಮ್ಮ ಬದುಕಿಗೆ ಕಾರಣವಾಗಿದೆ, ಅಷ್ಟೇ ಅಲ್ಲ, ಕ್ಷಣಕ್ಷಣಕ್ಕೂ ಅವು ನಮ್ಮ ಬದುಕನ್ನು ರೂಪಿಸುತ್ತಿರುತ್ತವೆ. ಅವುಗಳು ಸುಸ್ಥಿತಿಯಲ್ಲಿಲ್ಲದಿದ್ದರೆ, ಅವುಗಳ ಸಹಕಾರವಿಲ್ಲದಿದ್ದರೆ, ನಾವು ಇರುವುದಿಲ್ಲ. ಇದು ಬದುಕಿನ ವಾಸ್ತವ. ಈ ಸಂವೇದನೆಯನ್ನು ನಮ್ಮಲ್ಲಿ ಉದ್ದೀಪಿಸಿ, ಈ ವಿಶ್ವದ ಅಂತರ್ಗತ ಅಖಂಡತೆಯನ್ನು ಅರ್ಥೈಸಿಕೊಂಡು ಎಚ್ಚರದಿಂದ, ಜವಾಬ್ದಾರಿಯಿಂದ ಬದುಕಲು ಕಲಿಸುವುದೇ ನಿಜವಾದ ಶಿಕ್ಷಣದ ಗುರಿಯಾಗಬೇಕು. ಆಗ ಮಾತ್ರ ಸಹಭಾಗಿತ್ವ, ಸಹಬಾಳ್ವೆಯ , ಸಾಮುದಾಯಿಕ ಸಭ್ಯನಾಗರಿಕ ಸಮಾಜ (civil society) ನಿರ್ಮಾಣ ಸಾಧ್ಯ. ಇದರ ಬದಲು ಉಚ್ಚ ಶಿಕ್ಷಣವೂ ಮಾರುಕಟ್ಟೆಯ ಮೌಲ್ಯಗಳನ್ನು ಅನುಸರಿಸುತ್ತಾ ಅದರ ಹಿಂದಿರುವ ಪೈಪೋಟೀ ಸಂಸ್ಕೃತಿಯನ್ನು ಸ್ವೀಕರಿಸಿದರೆ, ಮಾರುಕಟ್ಟೆಯ ನಿರ್ಮಿತಿಯೊಳಗೇ ಅಂತರ್ಗತವಾಗಿರುವ ದಕ್ಷತೆ, ಸ್ವಾರ್ಥ, ಪೈಪೋಟಿ, ಆಕ್ರಮಣಶೀಲತೆ, ದಬ್ಬಾಳಿಕೆ, ಹಿಂಸೆ, ಅಸಮಾನತೆ, ಅನ್ಯಾಯಗಳು ಅನಿವಾರ್ಯವಾಗಿ ಬಿಡುತ್ತವೆ. ಸಮಸುಖೀ ರಾಜ್ಯದ ಉನ್ನತ ಆದರ್ಶ ನಾಶವಾಗುತ್ತದೆ.

### ವೃತ್ತಿಪರ ಶಿಕ್ಷಣದ ವಿಜೃಂಭಣೆ

ಕೇವಲ ವೃತ್ತಿಪರ ಶಿಕ್ಷಣಕ್ಕೆ ಸೀಮಿತವಾದ ಸಂಕುಚಿತ ಶಿಕ್ಷಣ ವ್ಯವಸ್ಥೆಯಿಂದ ಸತ್ಪ್ರಜೆಗಳ ನಿರ್ಮಾಣವು ಕಷ್ಟಸಾಧ್ಯ. ಭಾರತದಂತಹ ವಿಶಾಲ ದೇಶದ ಶ್ರೇಣೀಕೃತ ಜಾತಿವ್ಯವಸ್ಥೆ, ಅಸ್ಪೃಶ್ಯತೆ, ಸಾಮಾಜಿಕ ಬದುಕಿನ ಸಂಕೀರ್ಣ ಅಸಮಾನತೆ, ಮತೀಯ ಮೂಲಭೂತವಾದ, ಪ್ರಭುತ್ವದ ದಬ್ಬಾಳಿಕೆ ಮುಂತಾದ ಸಾಮಾಜಿಕ ಪಿಡುಗುಗಳಿಗೆ ಯಾವ ರೀತಿ ಒಬ್ಬ ಪ್ರಜೆ ಸ್ಪಂದಿಸಬೇಕೆಂದು ಸರಿಯಾದ ಸಾಮಾಜಿಕ ದೃಷ್ಟಿಯಿಲ್ಲದ ಕೇವಲ ಆರ್ಥಿಕ ಬುದ್ಧಿವಂತ ವಿಷಯ ತಜ್ಞನಿಗೆ ತಿಳಿಯುವ ಸಂಭವ ಕಡಿಮೆ. ಸಮಾಜ ವ್ಯವಸ್ಥೆಯ ಬಗೆಗಿನ ಸಮಾಜಶಾಸ್ತ್ರೀಯ ಅಧ್ಯಯನ, ಚರಿತ್ರೆ, ಸಾಹಿತ್ಯ ಮುಂತಾದ ಇತರ ವಿದ್ಯಾ ಶಾಖೆಗಳು ಮಾತ್ರ ನಮ್ಮನ್ನು ಈ ಬಗಗೆ ಸಂವೇದನಾಶೀಲರನ್ನಾಗಿ ಮಾಡೀತು. ಇತ್ತೀಚೆಗೆ ನಡೆದ ಒಂದು ಸಮಾಜಶಾಸ್ತ್ರೀಯ ಸರ್ವೇ ಕೂಡ ಈ ಮಾತನ್ನು ಪುಷ್ಟೀಕರಿಸುತ್ತದೆ. ಇಂಗ್ಲೀಷು ಮಾಧ್ಯಮದಲ್ಲಿ ಕಲಿತ ಪೇಟೆಯ ಮಧ್ಯಮ ವರ್ಗದ ಜನರಲ್ಲಿ ಕೇವಲ ಮೂರು ಶೇಕಡಾ ಮಂದಿ ಮಾತ್ರ ದೀರ್ಘ ಇತಿಹಾಸವಿರುವ, ಪದರು, ಒಳಪದರುಗಳಿರುವ ಭಾರತೀಯ ಸಮಾಜದ ಸಂಕೀರ್ಣತೆಯನ್ನು ಸರಿಯಾಗಿ ಗ್ರಹಿಸಬಲ್ಲರಂತೆ. ಆದರೆ ಗ್ರಾಮಾಂತರ ಪ್ರದೇಶದ ಜನರಲ್ಲಿ ಸುಮಾರು ೫೦ ಶೇಕಡಾಕ್ಕೂ ಮಿಕ್ಕಿ ಮಂದಿ ಈ ಸಂಕೀರ್ಣತೆಯನ್ನು ಗ್ರಹಿಸಿ ಸ್ಪಂದಿಸಬಲ್ಲರಂತೆ. ಅಂದರೆ ಇದರರ್ಥ, ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ವಿಭಿನ್ನ ಸಂದರ್ಭಗಳಲ್ಲಿ ನಡೆಯುವ ಅನಿರೀಕ್ಷಿತ ಸಾಮಾಜಿಕ ಘಟನೆಗಳನ್ನು ಅರ್ಥೈಸಲು ಬೇಕಾದ ಗ್ರಹಣ ಸಾಮರ್ಥ್ಯ, ಒಳನೋಟಗಳನ್ನು ಕೊಡಲು ಅಸಮರ್ಥವಾಗಿದೆ (not enabling education). ಬುದ್ಧಿಯ ಪರಿಧಿಯನ್ನು ವಿಸ್ತರಿಸುವ ಬದಲು ಸಂಕುಚಿತಗೊಳಿಸಿ ಊಹೆಗೂ ನಿಲುಕದ 'ಸಾಧಾರಣ'ಗ' (mediocre) ನನ್ನಾಗಿ ಇಂದಿನ ಶಿಕ್ಷಣ ಪರಿವರ್ತಿಸುತ್ತಿದೆ. ಮಹಾ ಆನ್ವಯಿಕ ವಿಷಯ ವಿದ್ವಾಂಸರೂ, ತಜ್ಞರೂ, ಸಾಮಾಜಿಕ ತಿಳುವಳಿಕೆಯಿಲ್ಲದ, ಬದುಕಿನ ಸಾರವನ್ನು ಗ್ರಹಿಸಲು ಅಸಮರ್ಥರಾದ ಪೆದ್ದರಾಗಿ ವಿಫಲರಾಗುವುದನ್ನು ನಾವು ನಮ್ಮ ಸುತ್ತಮುತ್ತಲೂ ಇಂದು ಕಾಣುತ್ತಿದ್ದೇವೆ.

ಹೀಗಾಗಿ ಪ್ರಚಲಿತ ಶಿಕ್ಷಣ ವ್ಯವಸ್ಥೆ, ಕೇವಲ ಬಲಿಷ್ಠರ "ಜಂಟಲ್‌ಮ್ಯಾನ್"ಗಳ "ಪ್ರಕಾಶ

ಮಾನ ಇಂಡಿಯಾ" ಮತ್ತು ಉಳಿದ ೮೦ ಶೇಕಡಾ ಜನರು ಬದುಕುವ "ಕತ್ತಲು ಭಾರತ" ಎಂದು ವಿಭಜನೆಗೆ ಕಾರಣವಾಗುತ್ತಿದೆ; ಮತ್ತು ಪ್ರಾಯಃ ದೇಶದೊಳಗೆ ಎರಡು ನಾಗರಿಕತೆಗಳನ್ನು ಸೃಷ್ಟಿಸಿ, ನಾಗರಿಕ ಸಂಘರ್ಷದ ಸಾಧ್ಯತೆಯನ್ನು ಹೆಚ್ಚಿಸುತ್ತಿದೆ.

**ಲಿಬರಲ್ ಶಿಕ್ಷಣದ ಮಹತ್ತ್ವ**

ಈ ದೃಷ್ಟಿಯಲ್ಲಿ ಸಮಗ್ರ ಸಾಮಾಜಿಕ ದೃಷ್ಟಿ, ಸಾಂಸ್ಕೃತಿಕ ಸಂಗ್ರಹಿಕೆ, 'ಅನ್ಯ'ದ ಬಗ್ಗೆ ಸಂವೇದನಾಶೀಲತೆ, ಬೌದ್ಧಿಕ ಸೂಕ್ಷ್ಮತೆ, ಬದುಕಿನ ಬಗ್ಗೆ ಒಳನೋಟಗಳುಳ್ಳ ವಿಶಾಲ ದರ್ಶನ, ಧಾರ್ಮಿಕ - ಸಾಮಾಜಿಕ ಶಾಂತಿ, ಸಾಮರಸ್ಯ, ಸಹಬಾಳ್ವೆ ಮುಂತಾದ ಜೀವಪೋಷಕ ಮೌಲ್ಯಗಳಲ್ಲಿ ವಿಶ್ವಾಸ - ಮುಂತಾದ ಮನುಷ್ಯನನ್ನು ಸದಭಿರುಚಿಯ ಪ್ರಜೆಯನ್ನಾಗಿ ಪರಿವರ್ತಿಸಲು "ಲಿಬರಲ್ ಶಿಕ್ಷಣ" (Liberal Education) ಅತ್ಯಂತ ಆವಶ್ಯವಾಗಿದೆ. ಮೂಲ ಸಾಮಾಜಿಕ ವಿಜ್ಞಾನ ಶಾಖೆಗಳಾದ ಸಮಾಜಶಾಸ್ತ್ರ, ಚರಿತ್ರೆ, ರಾಜಕೀಯ ಶಾಸ್ತ್ರ , ಅರ್ಥಶಾಸ್ತ್ರ, ಸಾಹಿತ್ಯ, ತತ್ತ್ವಶಾಸ್ತ್ರ, ಭಾಷಾಶಾಸ್ತ್ರ, ಕಲೆ, ಲಲಿತಕಲಾಶಾಸ್ತ್ರ, ಮತ್ತು ಮೂಲ ವಿಜ್ಞಾನ ಶಾಖೆಗಳಾದ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಮುಂತಾದ ಲಿಬರಲ್ ವಿದ್ಯಾಶಾಖೆಗಳು ನಮ್ಮೀ ವಿಶ್ವದ ಮತ್ತು ಬದುಕಿನ ಸತ್ತ್ವದರ್ಶನ ಮಾಡಿಸುತ್ತದೆ. ಕಾಲಾತೀತ ನಿಗೂಢತೆಯ ಬೆರಗಿನ ಅರಿವಿನ ದರ್ಶನ ಮಾಡಿಸುತ್ತದೆ. ಬೌದ್ಧಿಕ ಗುಣಮಟ್ಟವನ್ನು ಹೆಚ್ಚಿಸುತ್ತದೆ ಸ್ವಾತಂತ್ರ್ಯದ ದಾರಿಯಲ್ಲಿ ನಮ್ಮನ್ನು ಮುನ್ನಡೆಸುತ್ತದೆ. ಆ ಮೂಲಕ ದೇಶವನ್ನು ಗುಣಾತ್ಮಕವಾಗಿ ಮುನ್ನಡೆಸುತ್ತದೆ. ಈ ದೃಷ್ಟಿಯಲ್ಲಿ, ಕೆಲವೊಂದು ಕೊರತೆಗಳ ನಡುವೆಯೂ. ಬಿ. ಎ., ಬಿ. ಎಸ್.ಸಿ. ಮುಂತಾದ ಉದಾತ್ತ ವಿಜ್ಞಾನ ಹಾಗೂ ಮಾನವಿಕ ಜ್ಞಾನ ಶಾಖೆಗಳು ದೇಶದ ಒಟ್ಟು ಹಿತದೃಷ್ಟಿಯಿಂದ ಬಹಳ ಆವಶ್ಯಕ ಎಂದೆನಿಸುತ್ತದೆ. ಭಾರತದ ಮೊದಲ ಪ್ರಧಾನಿ ಪಂ। ಜವಾಹರಲಾಲ್ ನೆಹರೂರವರಿಗೆ ಈ ಆದರ್ಶ, ಕನಸುಗಳಿದ್ದುದರಿಂದಲೇ ಅವರು ಮೂಲಜ್ಞಾನ ಶಾಖೆಗಳ ಲಿಬರಲ್ ಶಿಕ್ಷಣಕ್ಕೆ ಅಷ್ಟೊಂದು ಮಹತ್ತ್ವಕೊಟ್ಟರು.

**ದಕ್ಷತೆಗೆ ಅತಿ ಮನ್ನಣೆಯ ಅಪಾಯ**

ಶಿಕ್ಷಣದಲ್ಲಿ ದಕ್ಷತೆಗೆ ಒತ್ತು ಒಂದು ಹಂತದ ವರೆಗ ಮಾತ್ರ ಅಗತ್ಯ. ಆದರೆ ಆ ಒತ್ತು ಮಿತಿ ಮೀರಿದರೆ, ಅದು ರಾಕ್ಷಸ ದಕ್ಷತೆಯಾಗಿ ಅನ್ಯರ ದಮನ ಶೋಷಣೆಗಳಿಗೆ ಕಾರಣವಾಗುವ ಅಪಾಯವಿದೆ. "ಕೇವಲ ವಿಷಯ ಪಾಂಡಿತ್ಯ, ದಕ್ಷತೆಗಳಷ್ಟೇ ಶಿಕ್ಷಣದ ಮೂಲ ಉದ್ದೇಶಗಳಲ್ಲ ಬದಲಿಗೆ ಒಳ್ಳೆಯತನದಲ್ಲಿ ವಿದ್ಯಾರ್ಥಿ ಅರಳಿಕೊಳ್ಳುವುದು" ಎಂದು ತತ್ತ್ವಜ್ಞಾನಿ ಜೆ. ಕೃಷ್ಣಮೂರ್ತಿ ಹೇಳಿದ್ದನ್ನು ಇಲ್ಲಿ ನಾವು ಸ್ಮರಿಸಬೇಕು. ಇದನ್ನು ಮನಗಂಡೇ ೩೦-೪೦ ವರ್ಷಗಳ ಹಿಂದೆ ನಾವು ಕಲಿಯುತ್ತಿರುವ ಕಾಲದಲ್ಲಿ ವಿಜ್ಞಾನದ ವಿದ್ಯಾರ್ಥಿಗಳಿಗೆ ಸಾಮಾನ್ಯ ಸಮಾಜ ವಿಜ್ಞಾನ ಶಿಕ್ಷಣವನ್ನೂ, ಸಮಾಜ ವಿಜ್ಞಾನ ವಿದ್ಯಾರ್ಥಿಗಳಿಗೆ ಸಾಮಾನ್ಯ ವಿಜ್ಞಾನದ ಶಿಕ್ಷಣವನ್ನೂ ಕಡ್ಡಾಯವಾಗಿ ನೀಡುವ ಶಿಕ್ಷಣ ವ್ಯವಸ್ಥೆಯಿತ್ತು. ವೈದ್ಯಕೀಯ, ಇಂಜಿನಿಯರಿಂಗ್ ಶಿಕ್ಷಣದಲ್ಲಿ ಇಂಗ್ಲೀಷು ಸಾಹಿತ್ಯವನ್ನು ಮೊದಲ ಹಂತದಲ್ಲಿ ಕಲಿಸಲಾಗುತ್ತಿತ್ತು. ಆದರೆ ಇಂದು ಈ ಸಮಗ್ರ ಶಿಕ್ಷಣ ಕಲ್ಪನೆಯೇ

ಮಾಯವಾಗಿದೆ. ಕೇವಲ ಆರ್ಥಿಕ ಪ್ರಯೋಜನಕ್ಕಷ್ಟೇ ಶಿಕ್ಷಣವನ್ನು ಸೀಮಿತಿಗೊಳಿಸುವ ಸಂಕುಚಿತ ವಿದ್ಯಾವ್ಯವಸ್ಥೆ ಜ್ಯಾರಿಯಲ್ಲಿದೆ.

**ಸಮಗ್ರ ಶಿಕ್ಷಣ ದೃಷ್ಟಿಯ ಜೀವಂತ ಮಾದರಿಗಳು**

ಆದರೆ ಇದಕ್ಕೆ ಪ್ರತಿಯಾಗಿ ಪಾಶ್ಚಾತ್ಯ ದೇಶಗಳಲ್ಲಿ ಇಂದು ಕೂಡ ವೃತ್ತಿಪರ ಶಿಕ್ಷಣಕ್ಕೆ ಸೇರಲು ಒಬ್ಬ ವಿದ್ಯಾಕಾಂಕ್ಷಿ ಅರ್ಹನಾಗಬೇಕಾದರೆ ಮೊದಲು ಒಂದು 'ಸೆಮೆಸ್ಟರ್'ನ್ನು ಸಮಾಜ ವಿಜ್ಞಾನ ಕ್ಷೇತ್ರದಲ್ಲೋ, ಮಾನವಿಕ ವಿಭಾಗದಲ್ಲೋ, ಲಲಿತ ಕಲೆಗಳಲ್ಲೋ ಅಥವಾ ತತ್ತ್ವಶಾಸ್ತ್ರ ಮನಃಶಾಸ್ತ್ರಗಳಲ್ಲೋ ಮುಗಿಸುವುದು ಕಡ್ಡಾಯವಾಗಿದೆ. ಉದಾಹರಣೆಗೆ ನಾವು ಅನುಕರಣೆ ಮಾಡುತ್ತಿರುವ ಅಮೇರಿಕಾದಲ್ಲಿ, 'ಮ್ಯಾನೇಜ್‌ಮೆಂಟ್,' 'ಕಂಪ್ಯೂಟರ್', 'ಸಂವಹನ ತಂತ್ರಜ್ಞಾನ' ಮುಂತಾದ ಅನ್ವಯಿಕ ಶಿಕ್ಷಣದಷ್ಟೇ ಮಹತ್ತ್ವವನ್ನು ಮೂಲಜ್ಞಾನ ಶಾಖೆಗಳಿಗೂ ನೀಡಲಾಗುತ್ತದೆ. ಆ ಉನ್ನತ ಸತ್ಪರಂಪರೆಯನ್ನು ಅವರು ಬಹಳ ಮುತುವರ್ಜಿಯಿಂದ ಮುಂದುವರಿಸುತ್ತಿದ್ದಾರೆ. ಹಾರ್ವರ್ಡ್, ಪ್ರಿನ್ಸ್‌ಟಾನ್, ಮೈಸಚುಸೆಟ್ಸ್, ಶಿಕಾಗೋ ಮುಂತಾದ ವಿಶ್ವವಿದ್ಯಾಲಯಗಳು, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಭಾಷಾಶಾಸ್ತ್ರ, ದಕ್ಷಿಣಾ ಏಶಿಯಾ ಪ್ರಾದೇಶಿಕ ಅಧ್ಯಯನಗಳೇ ಮೊದಲಾದ ಕೆಲವೊಂದು ಸಮಾಜ ವಿಜ್ಞಾನ ಶಾಖೆಗಳಿಗೆ, 'ಥಿಯೊರೆಟಿಕಲ್ ಫಿಸಿಕ್ಸ್,' 'ಅಸ್ಟ್ರೋನಮಿ', 'ಸ್ಟ್ರಕ್ಚರಲ್ ಫಿಸಿಕ್ಸ್' ಮುಂತಾದ ಮೂಲ ವಿಜ್ಞಾನ ಶಾಖೆಗಳಿಗೆ ಜಗತ್ತಿನಲ್ಲೇ ಪ್ರಸಿದ್ಧವಾಗಿವೆ. ಎಲ್ಲ ವಿದ್ಯಾಶಾಖೆಗಳಿಗೂ ಪ್ರಾಮುಖ್ಯತೆ ಇಲ್ಲಿ ಕೊಡಲಾಗುತ್ತದೆ.

ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯವು, ತಾನು ಇತರ ವಿಶ್ವವಿದ್ಯಾಲಯಗಳಿಗಿಂತ ವಿಶಿಷ್ಟ ಹಾಗೂ ಶ್ರೇಷ್ಠ ಎಂದು ಪ್ರತಿಬಿಂಬಿಸಿಕೊಳ್ಳಲು, ತಾಂತ್ರಿಕ ಶಿಕ್ಷಣದ ಜೊತೆಗೇ, ಇಲ್ಲಿ ವಿದ್ಯಾರ್ಥಿಗಳಿಗೆ ಸಮಾಜಶಾಸ್ತ್ರೀಯ ತಿಳುವಳಿಕೆ ಕೊಡುವ ಸಲುವಾಗಿ ಮಾನವಿಕ ವಿಭಾಗದ ಕೋರ್ಸುಗಳನ್ನು ಕೊಡಲಾಗುತ್ತದೆ. ತನ್ನಲ್ಲಿ ನಾಬೆಲ್ ಪ್ರಶಸ್ತಿ ಪಡೆದ ಸಾಹಿತಿಗಳು, ಸಂಗೀತ ವಿದ್ವಾಂಸರು, ಪರಿಸರ ವಿಜ್ಞಾನಿಗಳು ಇದ್ದಾರೆ ಎಂದು ಹೇಳಿಕೊಳ್ಳುತ್ತದೆ.

ಮಣಿಪಾಲ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ, ವೃತ್ತಿಪರ ಶಿಕ್ಷಣ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಬದ್ಧತೆ, ಜೀವಪ್ರೀತಿ, ಮಾನವೀಯ ಸಂವೇದನೆಗಳನ್ನು ಉದ್ದೀಪಿಸಲು 'ಸೆಂಟರ್ ಫಾರ್ ಹ್ಯೂಮಾನಿಟೀಸ್' ಎಂಬ ಕೇಂದ್ರವನ್ನು ಪ್ರೊ. ಯು. ಆರ್. ಅನಂತಮೂರ್ತಿ ಮತ್ತು ನಾನು ಆರಂಭಿಸಿದ್ದೆವು. ವಿದ್ಯಾರ್ಥಿಗಳಿಗೆ, ಗ್ರಾಮೀಣ ಭಾರತ, ತತ್ತ್ವಶಾಸ್ತ್ರ, ಸಾಹಿತ್ಯ, ಕಾವ್ಯ, ವಿಜ್ಞಾನದ ಚರಿತ್ರೆ ಮತ್ತು ತತ್ತ್ವಶಾಸ್ತ್ರ (history and philosophy of sciences), ವೈದ್ಯಕೀಯ ಸಮಾಜ ಶಾಸ್ತ್ರ (sociology of medicine), ಲಲಿತ ಕಲೆಗಳಾದ ಸಂಗೀತ, ಚಿತ್ರಕಲೆ, ನಾಟಕ, ಸಿನೇಮಾ, ಮುಂತಾದುವುಗಳ ಮತ್ತು ವಿದ್ಯಾರ್ಥಿಗಳ ಬೇಡಿಕೆಗೆ ತಕ್ಕಂತೆ ಇತರ ರಸ ಗ್ರಹಣ ಶಿಬಿರಗಳನ್ನು ಆಯಾಯಾ ಕ್ಷೇತ್ರಗಳ ಸುಪ್ರಸಿದ್ಧ ವಿದ್ವಾಂಸರನ್ನು ಕರೆಸಿ ಸಂಘಟಿಸಲು ಆರಂಭಿಸಿದ್ದೆವು. ವಿದ್ಯಾರ್ಥಿಗಳಲ್ಲಿ ಈ ಶಿಬಿರಗಳು ಬಹಳ ಜನಪ್ರಿಯವಾಗಿತ್ತು ಮತ್ತು ಪ್ರಯೋಜನವೂ ಆಗಿತ್ತೆನ್ನಬಹುದು. ಉದಾಹರಣೆಗೆ, ದೇಶದ ಸುಪ್ರಸಿದ್ಧ ಸಮಾಜ ಶಾಸ್ತ್ರಜ್ಞರಾದ ಪ್ರೊ. ಎಂ. ಎನ್. ಶ್ರೀನಿವಾಸ್‌ರವರ ನಿರ್ದೇಶನದಲ್ಲಿ ವಿದ್ಯಾರ್ಥಿಗಳಿಗೆ ೫ ದಿನಗಳ 'ಗ್ರಾಮೀಣ ಭಾರತ' ಶಿಬಿರ

ನಡೆಯಿತು. ಆರಂಭದ ದಿನ ಪ್ರೊ. ಶ್ರೀನಿವಾಸ್, 'ಎಲ್ಲರೂ ಹಳ್ಳಿಗಳನ್ನು ನೋಡಿದ್ದೀರಲ್ಲವೇ ?' ಎಂದು ಶಿಬಿರಾರ್ಥಿಗಳನ್ನು ಕೇಳಿದಾಗ ಡೆಲ್ಲಿಯ ಒಬ್ಬಳು ಶ್ರೀಮಂತ ವಿದ್ಯಾರ್ಥಿನಿ, 'ನಾನು ಹಳ್ಳಿಗಳನ್ನೇ ನೋಡಲಿಲ್ಲ. ನನಗೆ ಆ ಅಗತ್ಯವೂ ಇಲ್ಲ' ಎಂದು ಉಡಾಫೆಯ ಮಾತನ್ನಾಡಿದಳು. ಐದು ಲಕ್ಷದ ನಲುವತ್ತು ಸಾವಿರಾರು ಹಳ್ಳಿಗಳ ಈ ದೇಶವನ್ನು ಗಾಂಧೀಜಿ 'ಭಾರತದ ನಾಗರಿಕತೆ, ಗ್ರಾಮೀಣ ನಾಗರಿಕತೆ' ಎಂದಿದ್ದರು. ಇಂಥ ಗ್ರಾಮೀಣ ಸಂಸ್ಕೃತಿಯ ದೇಶದಲ್ಲಿ ಒಂದು ಹಳ್ಳಿಯನ್ನೂ ನೋಡಿಲ್ಲ' ಎಂಬ ಮಾತಿನ ಬಗ್ಗೆ ಪ್ರೊ। ಎಂ. ಎನ್. ಶ್ರೀನಿವಾಸ ಪ್ರತಿಕ್ರಿಯಿಸುತ್ತಾ 'ನೀನು ಅತಿ ಬುದ್ಧಿವಂತಳಿದ್ದಿರಬಹುದು. ಆದರೆ ಬೌದ್ಧಿಕವಾಗಿ ಪೆದ್ದಿ ಆಗಿದ್ದಿ' ಎಂದು ವ್ಯಂಗ್ಯಾತ್ಮಕವಾಗಿ ನುಡಿದಿದ್ದರು. ಆದರೆ ೫ ದಿವಸಗಳ ಶಿಬಿರ ಆಕೆಯ ಮೇಲೆ ಎಷ್ಟು ಪರಿಣಾಮ ಬೀರಿತೆಂದರೆ ಆಕೆ ಶಿಬಿರದ ಕೊನೆಯಲ್ಲಿ ಬಂದು ಎಂ. ಎನ್. ಶ್ರೀನಿವಾಸ್‌ರವರಿಗೆ ನಮಸ್ಕರಿಸಿ, "ನೀವು ನನಗೆ ಹೊಸಕಣ್ಣು, ಹೊಸ ಕಿವಿ, ಹೊಸಪ್ರಜ್ಞೆ ಕೊಟ್ಟಿರಿ. ನಾನು ಅಜ್ಞಾನದಿಂದ ನುಡಿದ ಮಾತುಗಳನ್ನು ದಯವಿಟ್ಟು ಕ್ಷಮಿಸಿ' ಎಂದು ಮನತುಂಬಿ ಕೇಳಿಕೊಂಡಳು. ಇದು ಒಂದು ನಿದರ್ಶನವಷ್ಟೆ. ಇಂಥ ಗುಣಾತ್ಮಕ ಶಿಕ್ಷಣದಿಂದ, ವಿದ್ಯಾರ್ಥಿಗಳ ದೃಷ್ಟಿಕೋನವೇ ಸಂಪೂರ್ಣ ಬದಲಾಗುವ ಸಾಧ್ಯತೆಗಳಿವೆ ನಿಜಕ್ಕೂ ಲಿಬರಲ್ ಶಿಕ್ಷಣಕ್ಕೆ ಸಮಗ್ರದೃಷ್ಟಿ ಕೊಡುವ ಶಕ್ತಿ ಸಾಧ್ಯತೆಗಳಿವೆ.

**ಮೂಲಜ್ಞಾನ ಶಾಖೆಗಳನ್ನು ಮುಚ್ಚುತ್ತಿರುವ ವಿಶ್ವವಿದ್ಯಾಲಯಗಳು**

ಆದರೆ ದುರ್ದೈವದ ಸಂಗತಿಯೆಂದರೆ, ವಿಶ್ವವಿದ್ಯಾಲಯಗಳ ಪಿತೃಗಳಾದ ಕುಲಪತಿಗಳು, ಸಿಂಡಿಕೇಟ್, ಸೆನೆಟ್ ಸದಸ್ಯರುಗಳೇ, ಸಮಾಜ ವಿಜ್ಞಾನ, ಚರಿತ್ರೆ, ಸಾಹಿತ್ಯ, ತತ್ತ್ವಶಾಸ್ತ್ರ ಮುಂತಾದ ಮೂಲ ಸಮಾಜ ವಿಜ್ಞಾನ ಮತ್ತು ಮೂಲ ವಿಜ್ಞಾನ ವಿಭಾಗಗಳನ್ನು, ಅವಕ್ಕೆ ಬೇಡಿಕೆಯಿಲ್ಲ ಎಂಬ ಕಾರಣಕ್ಕಾಗಿ ಮುಚ್ಚುವ ನಿರ್ಧಾರ ಮಾಡುತ್ತಿದ್ದಾರೆ. ನನ್ನ ಜಿಲ್ಲೆಯ ಒಂದು ಖಾಸಗೀ ಸಂಸ್ಥೆಯ ಮುಖ್ಯಸ್ಥರು ಒಂದು ಸಂದರ್ಭದಲ್ಲಿ," ಮೂಲವಿಜ್ಞಾನ, ಸಮಾಜ ವಿಜ್ಞಾನ ಶಾಖೆಗಳಿಗೆ ಇನ್ನು ಭವಿಷ್ಯವಿಲ್ಲ. ಎಲ್ಲರೂ ಮುಂದೆ ತಮ್ಮ ಆರ್ಥಿಕ ಭವಿಷ್ಯಕ್ಕಾಗಿ ಇಂಜಿನಿಯರಿಂಗ್, ಮೆಡಿಕಲ್, ಕಂಪ್ಯೂಟರ್ ಕಲಿಯಿರಿ" ಎಂದು ಅಪ್ಪಣೆ ಕೊಡಿಸಿದ್ದಾರೆ. ವಿದ್ಯಾಸಂಸ್ಥೆಗಳನ್ನು ನಡೆಸುವವರೇ ಈ ಮಟ್ಟದ ಅಜ್ಞಾನಿಗಳಾದರೆ, ಈ ದೇಶಕ್ಕೇ ನಿಜಕ್ಕೂ ಭವಿಷ್ಯವಿಲ್ಲ ಎಂದೆನಿಸುತ್ತದೆ. ಕೇವಲ ಒಂದು ವಿದ್ಯಾರ್ಥಿ ಒಂದು ವಿಶಿಷ್ಟ ಜ್ಞಾನ ಶಾಖೆಯಲ್ಲಿ ಕಲಿಯಬೇಕೆಂದು ಇಚ್ಛಿಸಿದರೂ, ವಿಶ್ವವಿದ್ಯಾಲಯ ಮಟ್ಟದಲ್ಲಾದರೂ, ಕೊನೆಯ ಪಕ್ಷ ಆತನಿಗೆ ಆ ಶಿಕ್ಷಣ ಲಭ್ಯವಿರಬೇಕು. ಅಮೇರಿಕಾದ ವಿಶ್ವವಿದ್ಯಾಲಯಗಳು ಕೇವಲ ಒಬ್ಬ ವಿದ್ಯಾರ್ಥಿಯ ವಿದ್ಯಾಸಕ್ತಿಗಾಗಿ ಒಂದು ಜ್ಞಾನ ವಿಭಾಗವನ್ನೇ ಹೊಸದಾಗಿ ಆರಂಭಿಸಿದ ನಿದರ್ಶನಗಳು ಸಾಕಷ್ಟಿವೆ.

ವಿಶ್ವವಿದ್ಯಾಲಯವು ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸುವ ಕೇವಲ ಲಾಭಾಸಕ್ತ ವ್ಯಾಪಾರೀ ಸಂಸ್ಥೆಯಲ್ಲ. ಅದಕ್ಕೊಂದು ಸಾಮಾಜಿಕ ಹೊಣೆಯಿದೆ, ನೈತಿಕ ಜವಾಬ್ದಾರಿಯಿದೆ. ಎಲ್ಲ ಜ್ಞಾನ ಶಾಖೆಗಳಲ್ಲೂ ಅಧ್ಯಯನ - ಸಂಶೋಧನೆಗಳ ಉನ್ನತ ಪರಂಪರೆಯನ್ನು ಮುಂದುವರಿಸುವ ಜವಾಬ್ದಾರಿಯಿದೆ. ಇದಕ್ಕೆ ತಗಲುವ ಸಾಮಾಜಿಕ ವೆಚ್ಚವನ್ನು ಜನತಂತ್ರ ಸರಕಾರ ಭರಿಸಬೇಕು. ಒಂದು ದೇಶದಲ್ಲಿ ಶಿಕ್ಷಣಾಕ್ಷೇತ್ರಕ್ಕೆ ಮಾಡುವ ವೆಚ್ಚವು ರಕ್ಷಣಾಕ್ಷೇತ್ರಕ್ಕೆ ಮಾಡುವ ವೆಚ್ಚಕ್ಕಿಂತಲೂ ಮುಖ್ಯ ಎಂದು ನನ್ನ ಅನ್ನಿಸಿಕೆ.

ವಿಶ್ವವಿದ್ಯಾಲಯವೂ ಸಾಕಷ್ಟು ಬೇಡಿಕೆಯಿಲ್ಲ ಎಂಬ ಕಾರಣಕ್ಕಾಗಿ ಪೂರೈಕೆಯನ್ನು ಮುನ್ನಡೆಸಿ ಬೇಡಿಕೆ ಸೃಷ್ಟಿಸುವ ಕ್ರಿಯಾಶೀಲ ಧೋರಣೆ (supply leading active role)ಯನ್ನು ಕೈಬಿಟ್ಟು ಕೇವಲ ಬೇಡಿಕೆ ನಿರಾಸಕ್ತ ಅನುಸರಣ ಧೋರಣೆ (demand- following possive role)ಯನ್ನು ಅನುಸರಿಸುವುದು ಖೇದಕರ ವಿಷಯ. ಇಂಥ ದೇಶ ದೀರ್ಘಾವಧಿಯಲ್ಲಿ ಬೌದ್ಧಿಕವಾಗಿ ಸೊರಗುತ್ತಾ, ಆತ್ಯಂತಿಕವಾಗಿ ವಿಷಯ ಲೋಲುಪತೆ, ಹಣದ ಉಪಾಸನೆಗಳಲ್ಲೇ ಮುಳುಗಿ ಛಿದ್ರಗೊಂಡೀತು. ಏಕೆಂದರೆ ಕೇವಲ ಹಣಕ್ಕೆ ಅತಿ ಮಹತ್ವ ಕೊಟ್ಟು ನಮ್ಮ ವೈವಿಧ್ಯಮಯವಾದ ಸಮಾಜದ ಸಂಕೀರ್ಣ ಸನ್ನಿವೇಶ, ಘಟನಾವಳಿಗಳನ್ನು ಸಮರ್ಥವಾಗಿ ನಿಭಾಯಿಸಲಾರವೆ, ಕೇವಲ ಸಂಘರ್ಷ, ಘರ್ಷಣೆ, ಹಿಂಸೆಗಳಲ್ಲಿ ಪರ್ಯವಸಾನಗೊಂಡೀತು. ಈಗಾಗಲೇ ೨೦೦೨ರಲ್ಲಿ ನಡೆದ ಗುಜರಾತಿನ ಅಮಾನುಷ ಜನಾಂಗೀಯ ಹಿಂಸಾಕಾಂಡದಲ್ಲಿ ನಮ್ಮ ಪೇಟೆಯ ಶಿಕ್ಷಿತ ವರ್ಗವೇ ಹೆಚ್ಚಾಗಿ ಪಾಲುಗೊಂಡಿರುವುದು, ಇದನ್ನು ಪುಷ್ಟೀಕರಿಸುತ್ತದೆ. ಜಾಗತಿಕ ವ್ಯಾಪಾರೀ ಒಪ್ಪಂದವು (W.T.O.) ಈ ದೇಶವನ್ನು ಎರಡು ನಾಗರಿಕತೆಗಳಾಗಿ ಒಡೆದು, ಸಂಘರ್ಷಕ್ಕೆ ಕಾರಣವಾಗುತ್ತಿರುವ ಈ ದಿಗಿಲಿನ ಸಂಗತಿಯ ಬಗ್ಗೆ ನಮ್ಮ ಕಲಿತ ವರ್ಗದ ಪ್ರತಿಕ್ರಿಯೆ ತೀರ ಸಪ್ಪೆಯಾಗಿದೆ.

**ಮಾರುಕಟ್ಟೆ ಪ್ರೇರಣೆಗಳು**

ಜನಬಾಹುಳ್ಯವಿರುವ ನಮ್ಮ ಬಡರಾಷ್ಟ್ರದಲ್ಲಿ ಜಾಗತಿಕ ಮಾರುಕಟ್ಟೆಯ ನಿಯಮವಾದ 'ಎಲ್ಲಕ್ಕೂ ಬೆಲೆ ತರಬೇಕು' ಎಂಬ ಸಿದ್ಧಾಂತವನ್ನು ಶಿಕ್ಷಣಕ್ಕೂ ಅನ್ವಯಿಸಿದರೆ, ಶಿಕ್ಷಣವು ದುಬಾರಿಯಾಗಿ ಬಹುಪಾಲು ಜನರು ಕನಿಷ್ಟ ಶಿಕ್ಷಣದಿಂದಲೂ ವಂಚಿತರಾದಾರು. ಉದಾಹರಣೆಗೆ, ನಾನು ಪದವಿ ಶಿಕ್ಷಣ ಪಡೆಯುತ್ತಿರುವ ಕಾಲದಲ್ಲಿ, ಕೆಲವು ನೂರು ರೂಪಾಯಿ ವೆಚ್ಚದಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಲು ಸಾಧ್ಯವಿತ್ತು. ಹಾಗಾಗಿ, ಕೆಳ ಮಧ್ಯಮವರ್ಗದ ಮತ್ತು ಬಡವರ್ಗದ ವಿದ್ಯಾರ್ಥಿಗಳಿಗೂ ಸ್ನಾತಕೋತ್ತರ ಪದವಿ ಶಿಕ್ಷಣ ಎಟಕುತ್ತಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. 'ಶಿಕ್ಷಣವು ಆರ್ಥಿಕ ಅಭಿವೃದ್ಧಿ, ಸಮಾನತೆ, ಸಾಮಾಜಿಕ ನ್ಯಾಯದ ಪೋಷಣೆಗೆ ಕಾರಣವಾಗುತ್ತದೆ' ಎಂಬ ಅರ್ಥಶಾಸ್ತ್ರದ ಸಾಂಪ್ರದಾಯಿಕ ಸಿದ್ಧಾಂತ ಇಂದು ತಿರುವು ಮುರುವಾಗಿದೆ. ಶಿಕ್ಷಣವೇ ಸಾಮಾಜಿಕ ವಿಷಮತೆಯನ್ನು ಇನ್ನಷ್ಟು ಹರಿತಗೊಳಿಸುವ ಹತಾರವಾಗುತ್ತಿದೆ. ಪ್ರತಿಷ್ಠಿತ ಪೇಟೆಯ ಮಂದಿ ಈ ಶಿಕ್ಷಣ ಕ್ರಮದಲ್ಲಿ, ಇನ್ನಷ್ಟು ಆರ್ಥಿಕ ಸಾಮಾಜಿಕ ಅಧಿಕಾರವನ್ನು ಗಳಿಸಿಕೊಡುವ ಉನ್ನತ ಗುಣಮಟ್ಟದ ಶಿಕ್ಷಣವನ್ನು ದುಬಾರಿ ಬೆಲೆ ತೆತ್ತು ಪಡೆಯುತ್ತಿದ್ದರೆ, ಉಳಿದ ಶೇಕಡಾ ೭೫ಕ್ಕೂ ಮಿಕ್ಕ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಕಳಪೆ ಗುಣಮಟ್ಟದ ಶಿಕ್ಷಣವಾಹಿನಿಯಲ್ಲಿ ಅನಿವಾರ್ಯವಾಗಿ ಸೇರ್ಪಡೆಯಾಗಿ ಸಮಾನ ಅವಕಾಶದಿಂದ ಮತ್ತು ಆರ್ಥಿಕ-ಸಾಮಾಜಿಕ ಸಬಲೀಕರಣದ ಪ್ರಕ್ರಿಯೆಯಿಂದಲೇ ಬದಿಗೊತ್ತಲ್ಪಡುತ್ತಿದ್ದಾರೆ. ಈ ಅಗಾಧ ಬಡ ವಿದ್ಯಾರ್ಥಿ ಸಮೂಹದ ನಡುವೆ, ಉನ್ನತ ಶಿಕ್ಷಣ ಪಡೆದ ಶ್ರೀಮಂತ ವರ್ಗ ದ್ವೀಪಗಳಂತಿದ್ದು, ದೇಶದ ಅಭಿವೃದ್ಧಿ ಲಾಭವನ್ನು ತಮ್ಮ ಸುತ್ತವೇ ಕೇಂದ್ರೀಕರಿಸಿಕೊಳ್ಳುತ್ತಾ ಸಮಾಜದ ಅಂಚಿನಲ್ಲಿರುವವರ ಶೋಷಕರಾಗುತ್ತಾರೆ. ಇಂಥ ವ್ಯವಸ್ಥೆಯಲ್ಲಿ ಬಹುಜನರ ಕಲ್ಯಾಣದ ಎಜೆಂಡಾ ಇರಲು ಸಾಧ್ಯವೇ ?

### ಸಾಮಾಜಿಕ ದರ್ಶನದ ಅವಸಾನ

ಖಾಸಗೀ ವ್ಯವಹಾರೀ ನಿರ್ವಿತಿಯಲ್ಲಿ ಬಹುತೇಕವಾಗಿ ಸಾಮಾಜಿಕ ದರ್ಶನ ಸ್ಪಂದನಶೀಲತೆಗಳೇ ಇರುವುದಿಲ್ಲ. ಇಂದು ನಾವು ನೋಡುತ್ತಿರುವ ಅನೇಕ ಖಾಸಗೀ ಶಿಕ್ಷಣ ಸಂಸ್ಥೆಗಳಿಗಂತೂ ಉದಾತ್ತವಾದ ಬಂಡವಾಳಶಾಹೀ ಆದರ್ಶವೂ ಇಲ್ಲ. ಶಿಕ್ಷಣವನ್ನು ಒಂದು ಬಿಸಿನೆಸ್ ಆಗಿ ಪರಿವರ್ತಿಸಿ ವ್ಯಾಪಾರದ ಅಂಗಡಿಗಳನ್ನು ತೆರೆದಂತೆ, ಅವು 'ಶಿಕ್ಷಣ ಶಾಪ್ಸ್'ಗಳನ್ನು ತೆರೆಯುವ ಪೈಪೋಟಿಯಲ್ಲಿ ನಿರತವಾಗಿವೆ. ತಮ್ಮ ವಿಶಿಷ್ಟತೆಯನ್ನು ಪ್ರಚಾರಮಾಡಲು, ಹುಸಿ ಅಥವಾ ಕಳಪೆ ವಿದೇಶೀ ಶಿಕ್ಷಣ ಸಂಸ್ಥೆಗಳ ಜೊತೆ ಸಂಯೋಜನಾ ಒಪ್ಪಂದ (twinning programme) ಮಾಡಿಕೊಳ್ಳುವ ಹಲವು ಸಂಸ್ಥೆಗಳು ಆರಂಭಿಸಿವೆ.

### 'ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ'ಗೆ ತಿಲಾಂಜಲಿ

ಇದಕ್ಕೆಲ್ಲ ಮೂಲಭೂತ ಕಾರಣ, ಜಾಗತೀಕರಣದ ಕಲ್ಪಿತ ಒತ್ತಾಸೆಗಳಿಂದ ಜನತಂತ್ರ ಸರಕಾರ ಇಂದು ಹಿಂದಿನ ತನ್ನ ಸಮಸುಖೀ ಕಲ್ಯಾಣ ರಾಜ್ಯದ ಆದರ್ಶ-ಕನಸುಗಳಿಂದ ಹಿಂದಕ್ಕೆ ಸರಿಯುತ್ತಿರುವುದು. ಆದರೆ ನಿಜ ಸ್ಥಿತಿಯೆಂದರೆ, ಸುಮಾರು ೭೫ ಶೇಕಡಕ್ಕೂ ಮಿಕ್ಕಿ ಭಾರತೀಯ ಜನಸಾಮಾನ್ಯರು ಶಿಕ್ಷಣ ಮತ್ತು ವೈದ್ಯಕೀಯ ಸೌಕರ್ಯಗಳಿಗಾಗಿ ಸರಕಾರೀ ಕ್ಷೇತ್ರವನ್ನೇ ಅವಲಂಬಿಸಿದ್ದಾರೆ. ಹಾಗಾಗಿ, ಭಾರತದಂತಹ ಶ್ರೇಣೀಕೃತ ವರ್ಗ ವ್ಯವಸ್ಥೆಯಿರುವ ವಿಶಾಲ ರಾಷ್ಟ್ರದಲ್ಲಿ, ಅನ್ನ, ನೀರು, ವಸತಿ, ವೈದ್ಯಕೀಯ, ಶಿಕ್ಷಣ ಮುಂತಾದ ಬದುಕಿನ ಮೂಲಭೂತ ಅವಶ್ಯಕತೆಗಳನ್ನು ಪ್ರಜೆಗಳಿಗೆ ಒದಗಿಸುವ ತನ್ನ ಪ್ರಮುಖ ಸಾಮಾಜಿಕ ಜವಾಬ್ದಾರಿಯನ್ನು ಖಾಸಗೀ ರಂಗಕ್ಕೆ ವಹಿಸಿಕೊಟ್ಟು, ಸರಕಾರ ಕೈ ಚೆಲ್ಲಿ ಕುಳಿತರೆ, ಶಿಕ್ಷಣ, ವೈದ್ಯಕೀಯ ಸೇವೆಗಳೂ ಮಾರುಕಟ್ಟೆ ಸರಕಾಗಿ, ದೇಶದ ಬಹುಜನರು ಈ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಬಡರಾಷ್ಟ್ರಗಳಲ್ಲಿ ನಿಜಕ್ಕೂ ಸರಕಾರ, ಜನಪರ ಗುರಿಗಳನ್ನು ಇಟ್ಟುಕೊಂಡಿರುವ ಬೃಹತ್ ಸಾಮಾಜಿಕ ಸಂಘಟನೆಯೇ ಆಗಿದೆ. ಹಾಗಾಗಿಯೇ ನಮ್ಮ ಸಂವಿಧಾನ ನಿರ್ಮಾತೃಗಳು, 'ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ'ಯ ಪರಿಚ್ಛೇದದಲ್ಲಿ, ಸರಕಾರಕ್ಕೆ ಕೆಲವೊಂದು ಮೂಲಭೂತ ಜವಾಬ್ದಾರಿಗಳನ್ನು ನಿಗದಿಪಡಿಸಿದ್ದಾರೆ. ಸಾರ್ವತ್ರಿಕವಾಗಿ ಸಾಮಾನ್ಯರಿಗೂ ಎಟುಕುವಂತೆ ಶಿಕ್ಷಣಕ್ಷೇತ್ರವನ್ನು ರೂಪಿಸುವುದು ಜನಪರ ಸರಕಾರದ ಮೂಲಭೂತ ಕರ್ತವ್ಯವಾಗಿದೆ. ಅರ್ಥಶಾಸ್ತ್ರದಲ್ಲಿ ನಾಬೆಲ್ ಪ್ರಶಸ್ತಿ ಪಡೆದ ಪ್ರೊ| ಅಮರ್ತ್ಯಸೇನ್ ಕೂಡ, "ಸಾರ್ವತ್ರಿಕ ಶಿಕ್ಷಣ ಮತ್ತು ವೈದ್ಯಕೀಯ ಸೌಕರ್ಯವನ್ನು ಸಮಸ್ತ ಸಮುದಾಯಕ್ಕೆ ಒದಗಿಸುವುದು ಒಂದು ಪುರೋಗಾಮಿ ಸರಕಾರದ ಅಭಿವೃದ್ಧಿ ಪಥದ ಆತ್ಯಂತಿಕ ಗುರಿಯಾಗಬೇಕು" ಎನ್ನುತ್ತಾರೆ.

ಆದರೆ ದುರಾದೃಷ್ಟವಶಾತ್, ಉಚ್ಚನ್ಯಾಯಾಲಯವೂ, ವಿದ್ಯಾರ್ಥಿಗಳು ಶಿಕ್ಷಣಕ್ಕೆ ತಕ್ಕ ಬೆಲೆ ತೆರಬೇಕು' ಎಂದು ಮಾರುಕಟ್ಟೆ ಅರ್ಥನೀತಿಯನ್ನು ಸಮರ್ಥಿಸುವ ರೀತಿಯಲ್ಲಿ ೨೦೦೨ನೇ ಇಸವಿಯಲ್ಲಿ ಉಚ್ಚಶಿಕ್ಷಣದ ಬಗ್ಗೆ ನಡೆದ ಒಂದು ದಾವೆಯಲ್ಲಿ ಪ್ರತಿಗಾಮಿ ತೀರ್ಪು ನೀಡಿದೆ. ಇದರಿಂದಾಗಿ ಕಾಲೇಜುಗಳಲ್ಲಿ ದೊರೆಯುವ ಸಾಮಾನ್ಯ ಪದವಿ ಶಿಕ್ಷಣವೂ ಇಂದು ಮಧ್ಯಮ ವರ್ಗಕ್ಕೂ ಎಟುಕದಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ; ಮಾತ್ರವಲ್ಲ, ಈ ತೀರ್ಪಿನಿಂದಾಗಿ

ಶಿಕ್ಷಣಕ್ಷೇತ್ರದಲ್ಲಿ ಸೂಕ್ಷ್ಮವಾಗಿ ಲಿಂಗಾಧಾರಿತ ಅಸಮಾನತೆ ಹೆಚ್ಚುವ ಸಾಧ್ಯತೆಯಿದೆಯೆನ್ನುವುದನ್ನು ನಾವು ಮರೆಯಬಾರದು. ಪದವಿ ಶಿಕ್ಷಣ ದುಬಾರಿಯಾದಾಗ ಒಂದು ಸಾಮಾನ್ಯ ಕುಟುಂಬಕ್ಕೆ ಕೇವಲ ಒಬ್ಬ ವ್ಯಕ್ತಿಯ ವಿದ್ಯಾಭ್ಯಾಸದ ವೆಚ್ಚವನ್ನು ಮಾತ್ರ ಭರಿಸಲು ಸಾಧ್ಯವಾದರೆ, ಆಗ ಈ ಗಂಡುಪರ ಸಮಾಜದಲ್ಲಿ ಹೆಣ್ಣಿನ ಬದಲು ಗಂಡನ್ನೇ ಕಾಲೇಜು ಶಿಕ್ಷಣಕ್ಕೆ ಆಯ್ಕೆ ಮಾಡಿ ಹೆಣ್ಣು ಮಕ್ಕಳನ್ನು ಮನೆಯಲ್ಲೇ ಕೂರಿಸುವ ಅಪಾಯವಿದೆ.

ಜಾಗತಿಕ ಮಾರುಕಟ್ಟೆ ನೀತಿಯ ಇಂಥ ದುಷ್ಪರಿಣಾಮಗಳು ಕೇವಲ ಶಿಕ್ಷಣಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೆ, ಭಾರತದ ೮೦ ಶೇಕಡಾ ಜನರ ಬದುಕಿನ ಆಸರೆಯಾದ ಬೇಸಾಯ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ, ದಲಿತ, ಬುಡಗಟ್ಟು ಜನಾಂಗ, ಗ್ರಾಮಾಂತರ ಮಹಿಳಾ ವರ್ಗ, ಕಾರ್ಮಿಕ ವರ್ಗಗಳ ಮೇಲೂ ಬೀಳುತ್ತದೆ.

ಒಟ್ಟಾರೆಯಾಗಿ, ಶಿಕ್ಷಣಕ್ಷೇತ್ರದ ಉದಾತ್ತ ಆದರ್ಶಗಳೆಲ್ಲವೂ ನುಚ್ಚು ನೂರಾಗುವ ಲಕ್ಷಣಗಳ ಕಾಣುತ್ತಿವೆ. ಬೌದ್ಧಿಕವಾಗಿ ನಾವು ಚಿಂತಿಸುವ, ವಿಮರ್ಶೆ ಮಾಡುವ ಶಕ್ತಿಯನ್ನೇ ಕಳಕೊಳ್ಳುತ್ತಿದ್ದೇವೆ. ಇಲ್ಲವಾದರೆ, ಸರಕಾರಕ್ಕೆ ಶಿಕ್ಷಣ ಸಲಹೆಗಾರರಾಗಿ ಶಿಕ್ಷಣ ತಜ್ಞರು, ಸಾಮಾಜಿಕ ಚಿಂತಕರು, ಸಮಾಜ ವಿಜ್ಞಾನಿಗಳ ಬದಲು ಬಂಡವಾಳಶಾಹೀ ಕೈಗಾರಿಕಾ ದೊರೆಗಳು, ಅಣು ವಿಜ್ಞಾನಿಗಳು, ಕಂಪ್ಯೂಟರ್ ಸಂಸ್ಥೆಯ ದೊರೆಗಳು ರಾರಾಜಿಸುತ್ತಿರಲಿಲ್ಲ. ❐

# ಸೌಹಾರ್ದತೆ - ಭಾವೈಕ್ಯತೆ: ಒಂದು ವಿವೇಚನೆ

ಇಂದಿನ ಈ ವಿಶಿಷ್ಟವಾದ ಸೌಹಾರ್ದತಾ ಸಮ್ಮೇಳನದಲ್ಲಿ ಚರ್ಚಿತವಾಗುವ ವಿಷಯವು ಅನೇಕ ಸ್ತರಗಳಲ್ಲಿ ಬಿಚ್ಚಿಕೊಳ್ಳುತ್ತದೆ. 'ಸೌಹಾರ್ದತೆ' ಎಂಬುದು ಏಕಕಾಲದಲ್ಲಿ ವಾಸ್ತವ ಬದುಕಿನ ಮೂರ್ತ ಅಗತ್ಯತೆಯೂ ಹೌದು, ಆಧ್ಯಾತ್ಮಿಕ ನೆಲೆಯ ಅಮೂರ್ತ ಆದರ್ಶವೂ ಹೌದು. 'ಸೌಹಾರ್ದತೆ' ಪದವನ್ನು ಭೌತಿಕ ಸತ್ಯದ ನೆಲೆಯಲ್ಲೂ, ಬೌದ್ಧಿಕ ಆದರ್ಶದ ನೆಲೆಯಲ್ಲೂ ಮತ್ತು ಆಧ್ಯಾತ್ಮಿಕ ದರ್ಶನದ ನೆಲೆಯಲ್ಲೂ ಅರ್ಥೈಸಬಹುದು; ಮಾತ್ರವಲ್ಲ, ಮನುಷ್ಯ-ಮನುಷ್ಯ ಸಂಬಂಧ, ಮನುಷ್ಯ-ನಿಸರ್ಗ ಸಂಬಂಧ ಮತ್ತು ಮನುಷ್ಯ-ದೈವಿಕ ಸಂಬಂಧಗಳ ನೆಲೆಯಲ್ಲೂ ವ್ಯಾಖ್ಯಾನಿಸಬಹುದು. ಅಮೂರ್ತ ಆದರ್ಶಗಳ ನೆಲೆಯನ್ನು ಈ ಪ್ರಬಂಧದ ಪರಿವ್ಯಾಪ್ತಿಯೊಳಗೆ ತರದೆ, ವಾಸ್ತವ ಬದುಕಿನ ನೆಲೆಯಲ್ಲಿ ಮನುಷ್ಯ-ಮನುಷ್ಯ ಸಂಬಂಧದ ಬಗೆಗಿನ ಚಿಂತನಕ್ಕೆ ಮಾತ್ರ ನನ್ನ ಚರ್ಚೆಯನ್ನು ಸೀಮಿತಗೊಳಿಸಿದ್ದೇನೆ.

ಇಲ್ಲಿ ಪ್ರಸ್ತುತ ಪಡಿಸಲು ಪ್ರಯತ್ನಿಸುವ ಕೆಲವು ವಿಚಾರಗಳನ್ನು ನಾನು ಎರಡು ವಿಭಾಗಗಳಾಗಿ ವಿಂಗಡಿಸಿಕೊಂಡಿದ್ದೇನೆ. ಇದು ಅನುಕೂಲಕ್ಕಾಗಿ ಮಾಡಿಕೊಂಡ ವಿಂಗಡನೆಯೇ ವಿನಾ ಅವು ಒಂದನ್ನೊಂದು ಹೊರಗಿಟ್ಟು, ವಿಭಿನ್ನ ಚೌಕಟ್ಟಿನಲ್ಲಿ ಕೂಡಿಸಬಹುದಾದ ಸ್ವತಂತ್ರ ವಿಚಾರಗಳೇನೂ ಅಲ್ಲ. ನಿಜಕ್ಕೂ ಈ ವಿಚಾರಗಳು ಒಂದರೊಳಗೊಂದು ಅಂತರ್ಗತವಾಗಿ ಅನ್ಯೋನ್ಯ ಸಂಬಂಧ ಹೊಂದಿವೆ. ಒಂದೇ ಅಖಂಡ

---

ಭಟ್ಕಳದಲ್ಲಿ ಮಾರ್ಚ್ ೧, ೧೯೯೭ ರಂದು ನಡೆದ ಸೌಹಾರ್ದತಾ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ

ವ್ಯಾಖ್ಯೆಯ ವಿಭಿನ್ನ ಆಯಾಮಗಳಾಗಿವೆ. ಆದರೂ ಸುಲಭ ನೆಲೆಯಲ್ಲಿ ಚರ್ಚಿಸುವ ಅನುಕೂಲಕ್ಕಾಗಿ ಈ ರೀತಿ ವಿಂಗಡಣೆ ಮಾಡಿಕೊಂಡಿದ್ದೇನೆ.

೧. ಭಾರತದಲ್ಲಿ ಇಂದು ನಾವು ಕಾಣುತ್ತಿರುವ ಸೌಹಾರ್ದತೆಯ, ಭಾವೈಕ್ಯತೆಯ ಸಹ್ಯ ನಿರ್ಮಿತಿಯ ಹಿಂದಿರುವ ಗತ ಇತಿಹಾಸ ದರ್ಶನ ಮತ್ತು ಅದು ಹರಳುಗಟ್ಟಿದ ರೀತಿ; ಮತ್ತು

೨. ಇಂದಿನ ಆಧುನಿಕ ತಂತ್ರಜ್ಞಾನದ ವಿಧಾನದಲ್ಲೇ ಅಡಗಿರುವ ಸಮಾಜ ವಿಭಾಜಕ ಸ್ವರೂಪಗಳು, ಮತ್ತು ಅವು ಭವಿಷ್ಯದಲ್ಲಿ ಸೌಹಾರ್ದತೆಗೆ ತಂದಿಡಬಹುದಾದ ಮೂಲಭೂತ ಸವಾಲುಗಳು.

ಈಗ ನಾವು ಬದುಕುತ್ತಿರುವ ಆಧುನಿಕ ಭಾರತವು ಗಾಂಧಿ-ನೆಹರೂ-ಅಂಬೇಡ್ಕರ್- ಈ ತ್ರಿವಳಿ ಕಂಡ ಕನಸಿನ ಭಾರತವಾಗಿದೆ. ಈ ಮೂವರ ನಡುವೆ ನಡೆದ ಸಂವಾದ-ವಾಗ್ವಾದಗಳಲ್ಲಿ ಈ ಆಧುನಿಕ ಭಾರತದ ಆಶಯಗಳು ಹರಳುಗಟ್ಟಿದವು. ಸರ್ವರಿಗೂ ಸಮಾನ ಮತದಾನ ಹಕ್ಕು, ಹೆಣ್ಣು-ಗಂಡು ಸಮಾನತೆ, ವಿಭಿನ್ನ ಧರ್ಮಗಳ ನಡುವೆ ಸಮಾನತೆಯನ್ನು ಬೋಧಿಸುವ "ಸೆಕ್ಯೂಲರಿಸಂ", ಹಲವು ಭಾಷೆಗಳು, ಹಲವು ಸಂಸ್ಕೃತಿಗಳು ಒಟ್ಟೊಟ್ಟಿಗೇ ಬಾಳಿ ಬದುಕುವ ಪ್ರಜಾಪ್ರಭುತ್ವ ಕಲ್ಪನೆ, ಸಮಾನತೆ - ಜಾತ್ಯಾತೀತತೆಗಳ ತಳಗಟ್ಟಿನ ಮೇಲೆ ನಿಲ್ಲಬೇಕಾದ ಸಭ್ಯ ನಾಗರಿಕ ಸಮಾಜ ಕಲ್ಪನೆ - ಇವೆಲ್ಲವೂ ಪ್ರಧಾನವಾಗಿ ಈ ಮೂವರು ವ್ಯಕ್ತಿಗಳ ನಿರಂತರ ಪರಿಶ್ರಮದಿಂದ ರೂಪಿತವಾದವುಗಳು; ಮತ್ತು ಈ ಮೌಲ್ಯಗಳು ಭಾರತವನ್ನು ತನ್ನೆಲ್ಲ ಸಮಸ್ಯೆಗಳ ನಡುವೆಯೂ, ಒಂದು ಸಶಕ್ತ ಪ್ರಜಾಪ್ರಭುತ್ವವನ್ನಾಗಿ ಉಳಿಸಿಕೊಂಡವುಗಳು. 'ಜವಾಬ್ದಾರಿ'ಯಿರುವ ಅಕ್ಷರಸ್ಥರಿಗೆ ಮಾತ್ರ ಮತದಾನದ ಹಕ್ಕು ಇರಬೇಕು, ಬೇಜವಾಬ್ದಾರಿಯ ಅನಕ್ಷರಸ್ಥರಿಗೆ ಇರಬಾರದು ಎಂಬ ಪೊಳ್ಳುವಾದವನ್ನು ಪ್ರತಿಪಾದಿಸುವ ಮೂಲಕ, ಭಾರತದ ಬಹುಸಂಖ್ಯಾತ ನಿರಕ್ಷರಸ್ಥರನ್ನು, ಬೇಸಾಯಗಾರರನ್ನು, ಮುಖ್ಯವಾಗಿ ಹಳ್ಳಿಯ ಜನತೆಯನ್ನು ಹೊಸ ಭಾರತ ನಿರ್ಮಾಣದ ಪ್ರಧಾನವಾಹಿನಿಯಿಂದಲೇ ಹೊರಗಿಡುವ ಪ್ರಯತ್ನ ಸ್ವಾತಂತ್ರ್ಯದ ಆರಂಭದ ವರುಷಗಳಲ್ಲಿ ನಡೆದಿತ್ತು. ಅಂಥ ಪ್ರಯತ್ನವೇನಾದರೂ ಮೇಲುಗೈ ಪಡೆದಿದ್ದರೆ ಭಾರತವು ಎಂದೆಂದೂ, 'ನಾವು' ಮತ್ತು 'ಅವರು' ಎಂದು ವಿಭಾಜಿಸಲ್ಪಟ್ಟು, ಬಹುಸಂಖ್ಯಾಕರು ಇಂದು ಎರಡನೆಯ ದರ್ಜೆಯ ಪ್ರಜೆಗಳಾಗಿ ಬದುಕುತ್ತಿದ್ದರು. ಪುಣ್ಯವಶಾತ್ ಹಾಗಾಗಲಿಲ್ಲ. ಇಂದು ಪ್ರಾಯಃ 'ಎಮರ್ಜನ್ಸಿ'ಯಂಥ ಅತ್ಯಂತ ಆತಂಕದ ಪರಿಸ್ಥಿತಿಯಿಂದ ಭಾರತವನ್ನು ಪಾರುಮಾಡಿ, ಪ್ರಜಾಪ್ರಭುತ್ವವನ್ನು ತಮ್ಮ ಓಟಿನ ಮೂಲಕ ಜವಾಬ್ದಾರಿಯಿಂದ ರಕ್ಷಿಸಿದವರು, ತಿಳುವಳಿಕೆಯಿಲ್ಲದ ನಿರಕ್ಷರಸ್ಥರೆಂದು ನಾವು ನಿರ್ಲಕ್ಷಿಸುವ ಪ್ರಜೆಗಳೇ ಎನ್ನಬಹುದು. ಸರ್ವಾಧಿಕಾರೀ ಪ್ರವೃತ್ತಿಯನ್ನು, ಪ್ರತಿಗಾಮೀ ನಿಲುವುಗಳನ್ನು ನಮ್ಮ ಅನಕ್ಷರಸ್ಥರು ಮತಗಳ ಮೂಲಕ ವಿರೋಧಿಸಿದ್ದಾರೆ. ಜನರಿಂದ ದೂರಸರಿದು ಬಹು ಜನದ ಹಿತಕ್ಕೆ ಧಕ್ಕೆ ತಂದ ಎಲ್ಲ ರಾಜಕಾರಣಿಗಳಿಗೆ ಪಾಠ ಕಲಿಸಿದ್ದಾರೆ. ಜಾಗತೀಕರಣದ ಮೋಹಕ ಆಕರ್ಷಣೆಗೆ ತುತ್ತಾಗಿ ಗ್ರಾಮೀಣ ಜೀವನದ ಸೌಖ್ಯವನ್ನು ಕಡೆಗಣಿಸಿದ ಪಿ. ವಿ. ನರಸಿಂಹರಾಯರ ಕಾಂಗ್ರೆಸ್ಸನ್ನು ನೆಲಕಚ್ಚುವಂತೆ ಮಾಡಿದ್ದೂ ಈ ಸಾಮಾನ್ಯ ಜನತೆಯೇ, ಇದಕ್ಕೆ ವಿರುದ್ಧವಾಗಿ ಪೇಟೆಯಲ್ಲಿ ವಾಸಿಸುತ್ತಿರುವ 'ಬುದ್ಧಿವಂತ' ಅಕ್ಷರಸ್ಥರು ತಮ್ಮ ಸ್ವಾರ್ಥಕ್ಕಾಗಿ ದುಷ್ಟರಾಜಕೂಟದ ಜತೆ ಕೈ ಜೋಡಿಸಿದ ನಿದರ್ಶನಗಳು ಸಾಕಷ್ಟಿವೆ. 'ತಿಳುವಳಿಕೆ' ಎಂಬುದು ಕೇವಲ ಅಕ್ಷರಸ್ಥರ ಗುತ್ತಿಗೆಯ ಸ್ವತ್ತಲ್ಲ ಎಂಬುದನ್ನು ಇದು ಸಾಬೀತು ಪಡಿಸುತ್ತದೆ.

ಅಂಬೇಡ್ಕರ್, ನೆಹರೂ, ಗಾಂಧೀಜಿಯವರ ಚಿಂತನದ ಫಲವಾದ ಭಾರತ, ಏಕ ಒಂದೇ ಧರ್ಮ ಪ್ರಧಾನವಾದ ಭಾರತವಲ್ಲ. ಬೌದ್ಧ, ಜೈನ, ಕ್ರಿಶ್ಚಿಯನ್, ಹಿಂದೂ, ಮುಸ್ಲಿಮ್ - ಹೀಗೆ ಹಲವು ಧರ್ಮಗಳು ಸೌಹಾರ್ದತೆಯಿಂದ ಸಹಬಾಳ್ವೆ ನಡೆಸಬೇಕೆಂಬುದು ಇವರ ಆಶಯವಾಗಿತ್ತು. ಇದೇ ಮುಂದೆ ಸ್ವತಂತ್ರ ಭಾರತದ ಪ್ರಧಾನ ಆಶಯವಾಗಿ ಮೂಡಿ ಬಂತು. ಇದರಿಂದಾಗಿ, ಹಿಂದೂ ಮುಸ್ಲಿಮರ ನಡುವೆ ಮಾತ್ರವಲ್ಲ, ಹಿಂದೂ ಧರ್ಮದ ಒಳಗೇನೇ ಸೌಹಾರ್ದತೆಯ ಅಗತ್ಯವನ್ನು ಮನಗಾಣುವಂತಾಯಿತು. ಮೇಲ್ಜಾತಿಯ ಹಿಂದುಗಳು ಹರಿಜನರನ್ನು ಕೀಳಾಗಿ ಕಾಣುವುದು ತಪ್ಪಬೇಕಾದರೆ ಹಿಂದೂ ಮೇಲ್ಜಾತಿ ಮತ್ತು ಕೆಳಜಾತಿಗಳ ನಡುವೆಯೂ ಸೌಹಾರ್ದತೆ ಅಗತ್ಯ ಎಂಬುದು ಅಂಬೇಡ್ಕರ್ ನಿಲುವಾಗಿತ್ತು. ಬ್ರಾಹ್ಮಣ ಮತ್ತು ಹರಿಜನರ ನಡುವೆ ಸಾಮರಸ್ಯಕ್ಕಾಗಿ ಗಾಂಧೀಜಿ ಹೆಣಗಿದರು. ಈ ಮೂವರ ಜ್ಯಾತಾತೀತ ಕಲ್ಪನೆಯು, ಹಿಂದೂ ಧರ್ಮದ ಒಳಗೆ ಕೂಡ ಒಂದು ಮತವು ಪ್ರಧಾನವಾಗಿ ಇತರ ಮತಗಳು ಕಡೆಗಣಿಸಲ್ಪಡದಂತೆ ಎಚ್ಚರವಹಿಸಿತ್ತು.

ಗಾಂಧೀಜಿ ತನ್ನ ಕಲ್ಪನೆಯ ರೀತಿಯ ಭಾರತವನ್ನು ಕಟ್ಟುವ ಆದರ್ಶ ಹೊತ್ತವರು. ಅದೊಂದು ಅಮೂರ್ತ ಧಾರ್ಮಿಕ ಆದರ್ಶವಾಗಿತ್ತು. ಅನೇಕ ಬಾರಿ ಗಾಂಧೀಜಿಯು ಧರ್ಮದ ವಿಷಯದಲ್ಲಿ ಭಾವನಾತ್ಮಕರಾಗಿ ಬಿಡುತ್ತಿದ್ದರು. ಈ ಅಮೂರ್ತ ಧಾರ್ಮಿಕತೆ ಅನೇಕ ಬಾರಿ ಕ್ಷಯರೋಗ ಪೀಡಿತನಾದ ಒಬ್ಬ ಭಿಕ್ಷುಕನೂ, ನಾನೂ ಒಂದೇ ರೀತಿ ಸುಖ-ದುಃಖ ಅನುಭವಿಸುವವರು ಮತ್ತು ಇಬ್ಬರೂ ಸಮಾನವಾಗಿ ಸಾವನ್ನಪ್ಪುವವರು. ಹಾಗಾಗಿ, ನಾವಿಬ್ಬರ ಸಮಾನರು ಎಂದು ಸುಲಭದಲ್ಲಿ ತಾತ್ವಿಕ ಆದರ್ಶದ ಸಾಂತ್ವನ ನೀಡಿ ನಮ್ಮನ್ನು ಸಮಾನತೆಯ ಭ್ರಮೆಯ ಲೋಕದಲ್ಲಿಟ್ಟು ಬಿಡುವ ಅಪಾಯ ಇದೆ. ಈ ಅಮೂರ್ತ ತರ್ಕ ನಮ್ಮ ಯೋಚನೆಯ ದಾರಿ ತಪ್ಪಿಸಿ ಬಿಡುತ್ತದೆ. ಈ ಪ್ರಾಪಂಚಿಕ ವಾಸ್ತವದ ನೆಲೆಯಲ್ಲಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ನಾನೂ, ಭಿಕ್ಷುಕನೂ ಸಮಾನರಲ್ಲ. ಗಾಂಧೀಜಿ ಮಾಡುವ ಇಂಥ ವಸ್ತುಸ್ಥಿತಿಯ ತೀರ ಸರಳೀಕರಣ ಮತ್ತು ಅವರ ತೇಲುನೋಟದ ಆದರ್ಶದ ಎದುರು ಅಂಬೇಡ್ಕರ್ ಸಿಡಿದೆದ್ದರು. ಈ ರೀತಿಯಲ್ಲಿ ಅಮೂರ್ತನೆಲೆಯಲ್ಲಿ ಯೋಚಿಸಿದರೆ ಖಂಡಿತವಾಗಿಯೂ ಸಮಾನತೆ ಬರೋದಿಲ್ಲ. ಸಭ್ಯ ನಾಗರಿಕ ಸಮಾಜ ನಿರ್ಮಾಣದಲ್ಲಿ ಸಮಾನ ಆರ್ಥಿಕ, ಸಾಮಾಜಿಕ ಅವಕಾಶಗಳು ಎಲ್ಲ ವರ್ಗಕ್ಕೂ ಮೊದಲು ದೊರಕಬೇಕು ಎಂದು ಅಂಬೇಡ್ಕರ್ ಸ್ವಾತಂತ್ರ್ಯ ಪೂರ್ವದಲ್ಲೇ ಪ್ರತಿಪಾದಿಸಿದರು.

ಒಂದು ನಾಗರಿಕ ಸಮಾಜದ ಹಿರಿಮೆಯಿರುವುದು, ಭೌತಿಕವಾಗಿ ಸರ್ವರಿಗೂ ಸಮಾನ ಅವಕಾಶ ಕಲ್ಪಿಸುವುದರಲ್ಲಿ ಎಂಬುದು ಅಂಬೇಡ್ಕರ್ ಅವರ ನಿಲುವಾಗಿತ್ತು ಈ ಕಾರಣಕ್ಕಾಗಿಯೇ ಅಂಬೇಡ್ಕರ್ ಬ್ರಾಹ್ಮಣ ಸಂಸ್ಕೃತಿಯ ಪ್ರಭುತ್ವವನ್ನೂ ನಿರಾಕರಿಸಿದರು. ಈ ಬಗ್ಗೆ ಗಾಂಧಿ-ಅಂಬೇಡ್ಕರ್ ನಡುವೆ ನಡೆದ ಸಂವಾದದಲ್ಲಿ ಅಂಬೇಡ್ಕರ್ ಅವರ ಚಿಂತನೆಗೆ ನಿಜಕ್ಕೂ ಪುರಸ್ಕಾರ ದೊರಕಿತು. ಗಾಂಧಿ ತತ್ವಶಃ ಇದನ್ನು ಒಪ್ಪಿದರು. ಅಂಬೇಡ್ಕರ್ ಅವರ ಚಿಂತನೆಗೆ ದೊರಕಿದ ಪುರಸ್ಕಾರದ ಪ್ರಭಾವವನ್ನು ನಾವು ನಮ್ಮ ಸಂವಿಧಾನದ ಆಶಯಗಳಲ್ಲೇ ಸ್ಪಷ್ಟವಾಗಿ ಗುರುತಿಸಬಹುದು. ಬಲಹೀನರಿಗೆ ಮೀಸಲಾತಿಯ ಕಲ್ಪನೆ ಕೂಡ, ಈ ಇಬ್ಬರ ಸಂವಾದದ ಫಲವಾಗಿಯೇ ಮೂಡಿಬಂತು, ಮಾತ್ರವಲ್ಲ, ಸಂವಿಧಾನ ರಚಿಸುವ ಗುರುತರ ಹೊಣೆಯನ್ನು ಕೂಡ ಇತರರ ಜತೆ ಪ್ರಧಾನವಾಗಿ ಅಂಬೇಡ್ಕರ್ ಅವರಿಗೆ ಈ ಕಾರಣಕ್ಕಾಗಿಯೇ ವಹಿಸಲಾಯಿತು. ಹಾಗಾಗಿ ಯಾವೊಂದು ಯಜಮಾನಿಕೆಯೂ

ಇಲ್ಲದ ಭದ್ರವಾದ ಸೌಹಾರ್ದತೆಯ ಕಲ್ಪನೆಯು ಈ ಮೂರು ವ್ಯಕ್ತಿಗಳ ಪರಸ್ಪರ ಮುಖಾಮುಖಿಯ ಫಲ ಎಂದು ನನ್ನ ಅನ್ನಿಸಿಕೆ. ಅವರು ಕಂಡ ಪ್ರಭುತ್ವ ಯಾವುದೇ ಒಂದು ವರ್ಗದ; ಒಂದು ಜಾತಿಯ ಯಜಮಾನಿಕೆಯ ಪ್ರಭುತ್ವವಾಗಿರಲಿಲ್ಲ. ಈ ದೃಷ್ಟಿಯಲ್ಲಿ ಈ ಮೂವರು ನಿಜಕ್ಕೂ ದೊಡ್ಡವರು.

ಇಂದು ನಾವು ನಮ್ಮ ಸುತ್ತಮುತ್ತಲಿರುವ ಬಹುತೇಕ ರಾಷ್ಟ್ರಗಳಲ್ಲಿ ನಡೆಯುವ ವಿದ್ಯಮಾನಗಳನ್ನು ಒಮ್ಮೆ ಅವಲೋಕಿಸಿದರೆ, ಆಧುನಿಕ ಭಾರತ ರಾಷ್ಟ್ರ ರಚನೆಯಲ್ಲಿ ಈ ಮೂವರ ಮಹತ್ವದ ಅರಿವಾಗದಿರದು. ದಕ್ಷಿಣ ಏಶಿಯಾ, ದಕ್ಷಿಣ-ಪೂರ್ವ ಏಶಿಯಾ, ಮಧ್ಯಪ್ರಾಚ್ಯದ ರಾಷ್ಟ್ರಗಳಿಗೆ ಹೋಲಿಸಿದಾಗ ಪ್ರಾಯಃ ಭಾರತದಲ್ಲಿ ಮಾತ್ರ, ತನ್ನೆಲ್ಲ ಸಮಸ್ಯೆ-ದ್ವಂದ್ವಗಳ ನಡುವೆಯೂ, ಪ್ರಜಾಪ್ರಭುತ್ವವು ಭದ್ರವಾಗಿ ನೆಲೆಗೊಂಡದ್ದನ್ನು ಕಾಣಬಹುದು. ಪಾಕಿಸ್ತಾನದಲ್ಲಿ ಎರಡು ವಿಭಿನ್ನ ಮುಸ್ಲಿಮ್ ವರ್ಗಗಳ ನಡುವೆ ನಡೆಯುತ್ತಿರುವ ಹೋರಾಟ, ಮತ್ತು ಪಶ್ಚಿಮ ಪಾಕಿಸ್ತಾನವು, ಪೂರ್ವ ಪಾಕಿಸ್ತಾನದ ಮೇಲೆಸಗಿದ ದಬ್ಬಾಳಿಕೆ ಮತ್ತು ಕೈಕೊಂಡ ನರಮೇಧವನ್ನು ಗಮನಿಸಿದರೆ ಕೇವಲ ಭಾಷೆ ಅಥವಾ ಧರ್ಮ, ಸಭ್ಯ ನಾಗರಿಕ ಸಮಾಜದ ತಳಪಾಯವಾಗಲು ಸಾಧ್ಯವಿಲ್ಲ ಎಂಬುದು ಮನವರಿಕೆ ಆದೀತು. ವಿಭಿನ್ನ ಜಾತಿ, ವಿಭಿನ್ನ ವರ್ಗಗಳ ನಡುವೆ ಸೌಹಾರ್ದತೆಯಿದ್ದಾಗ ಮಾತ್ರ ಮನುಷ್ಯ ಸಮಾಜದಲ್ಲಿ ಸಭ್ಯನೆನಿಸಿಕೊಳ್ಳುತ್ತಾನೆ; ಮತ್ತು ಸಭ್ಯ ಸಮಾಜ ಕಟ್ಟುವಲ್ಲಿ ನೆರವಾಗುತ್ತಾನೆ. ಅರ್ಥಪೂರ್ಣವಾದ ಸೌಹಾರ್ದತೆಯು ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ ವಿಶಿಷ್ಟತೆಯನ್ನು ಒಪ್ಪಿಕೊಳ್ಳುತ್ತದೆ. ವ್ಯಕ್ತಿ ವ್ಯಕ್ತಿಗಳ ನಡುವಿನ ವಿಭಿನ್ನತೆಯನ್ನು ಪರಸ್ಪರ ಗೌರವಿಸಿದಾಗ ಮಾತ್ರ ಸೌಹಾರ್ದ ಸಮಾಜ ನಿರ್ಮಾಣ ಸಾಧ್ಯ ಎಂಬುದನ್ನು ಚೋಮ್‌ಸ್ಕಿಯೂ ಪ್ರತಿಪಾದಿಸುತ್ತಾನೆ. ನನ್ನ ನಿಲುವನ್ನು ವಿರೋಧಿಸುವ ನಿಲುವನ್ನು ಗೌರವಿಸುವಷ್ಟು ಸಭ್ಯತೆ ನನ್ನಲ್ಲಿರಬೇಕು. ಭಾರತದ ಒಬ್ಬ ಪ್ರಜೆ ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡು ಮತ್ತು ಇನ್ನೊಬ್ಬ ಪ್ರಜೆಯ ಬಗ್ಗೆ ಭಿನ್ನಾಭಿಪ್ರಾಯವನ್ನು ಇಟ್ಟುಕೊಂಡು, ಸೌಹಾರ್ದತೆಯಲ್ಲಿ ಬದುಕಲು ಸಾಧ್ಯವಾದಾಗ ಮಾತ್ರ ಸಭ್ಯ ನಾಗರಿಕ ಸಮಾಜ ನಿರ್ಮಾಣ ಸಾಧ್ಯ ಎಂಬುದು ಗಾಂಧಿ, ನೆಹರೂ, ಅಂಬೇಡ್ಕರ್ ಅವರಿಗೆ ತಿಳಿದಿತ್ತು. ಇಂಥ ಪುಣ್ಯ ಪುರುಷರು ನಮ್ಮಲ್ಲಿ ಒಟ್ಟೊಟ್ಟಿಗೇ ಇದ್ದದ್ದು ಭಾರತದ ಭಾಗ್ಯವೆನ್ನಬೇಕು.

ನಿಜಕ್ಕೂ, ಈ ಶತಮಾನದಲ್ಲಿ ಏಕಕಾಲದಲ್ಲಿ ಭಾರತವು ಕಂಡಷ್ಟು ಮಹಾನ್ ವ್ಯಕ್ತಿಗಳನ್ನು ಇಡಿಯ ಜಗತ್ತೇ ಕಾಣಲಿಲ್ಲ ಎಂದು ಜಗತ್ತಿನ ಅನೇಕ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇವರೆಲ್ಲರೂ ಕಂಡ ಕನಸಿನ ಭಾರತದಲ್ಲಿ, ಕಟ್ಟಲು ಪ್ರಯತ್ನಿಸಿದ ಸಮಾಜದಲ್ಲಿ ಯಾವ ಒಂದು ಘಟಕದ ಪ್ರಧಾನ ಯಜಮಾನಿಕೆಯೂ ಇಲ್ಲ. ಆದರೆ ಇದರ ಅರ್ಥ, ಭಾರತದ ಪ್ರಜೆ ಧರ್ಮವನ್ನೇ ಬಿಟ್ಟುಕೊಡಬೇಕೆಂದೇನೂ ಅಲ್ಲ. 'ಸೆಕ್ಯೂಲರ್' ಎಂಬ ಪದವನ್ನು ಕಮ್ಯೂನಿಸ್ಟ್ ದೇಶಗಳು ಬಳಸಿಕೊಂಡ ಪರಿಣಾಮವಾಗಿ ಅದು 'ನಾಸ್ತಿಕವಾದ' ಎಂಬರ್ಥದಲ್ಲಿ 'ಕ್ಲೀಷೆ' ಆಗಿರುವುದು ನಿಜಕ್ಕೂ ದುರಾದೃಷ್ಟಕರ. ಈ ಶಬ್ದದ ಬಗ್ಗೆ ಇಂದು ಸಾಕಷ್ಟು ಅಪಕಲ್ಪನೆ ಬೆಳೆದುಬಿಟ್ಟಿದೆ. ನೆಹರೂ, ಅಂಬೇಡ್ಕರ್, ಗಾಂಧಿಯವರು, ಸರಕಾರದಲ್ಲಿ ಧರ್ಮದ ಪ್ರಭುತ್ವವಿರಕೂಡದು, ಸಾರ್ವಜನಿಕ

ಜೀವನದಲ್ಲಿ ಧರ್ಮದ ಹಸ್ತಕ್ಷೇಪವಿರ ಕೂಡದು ಎಂದರೇ ವಿನಾ ಪ್ರಜೆಗಳ ವೈಯಕ್ತಿಕ ಧಾರ್ಮಿಕ ಭಾವನೆಗೆ ಅಡ್ಡಿ ಹೇಳಲಿಲ್ಲ, ಮಾತ್ರವಲ್ಲ, ಅದನ್ನು ಗೌರವಿಸಿದ್ದಾರೆ ಕೂಡ.

ಇತಿಹಾಸವನ್ನೇ ನಾವು ಸೂಕ್ಷ್ಮವಾಗಿ ಅವಲೋಕಿಸಿದರೆ, ಧರ್ಮಕ್ಕೆ ಬೆಸೆಯುವ ಶಕ್ತಿ ಅಷ್ಟಾಗಿ ಇರುವುದು ಕಾಣುವುದಿಲ್ಲ. ಬ್ರಿಟನ್ - ಐಯರ್‌ಲ್ಯಾಂಡ್‌ಗಳಲ್ಲಿ ಒಂದೇ ಧರ್ಮದ ಕೆಥೋಲಿಕ್ ಕ್ರಿಶ್ಚಿಯನ್ನರ ನಡುವೆ, ಪಾಕಿಸ್ತಾನದಲ್ಲಿ ಶಿಯಾ-ಸುನ್ನಿ ಮುಸ್ಲಿಮರ ನಡುವೆ ಹೋರಾಟಗಳು ನಡೆಯುತ್ತಲೇ ಇವೆ. ಧರ್ಮದ ನೆಲೆಯಲ್ಲಿ ರಾಷ್ಟ್ರಕಟ್ಟಲು ಹೋಗಿ, ಪಾಕಿಸ್ತಾನವು ಇಂದು ಎರಡು ದೇಶಗಳಾಗಿ ಒಡೆಯಿತು. ಕೆಲವು ಸಮಾಜ ಶಾಸ್ತ್ರಜ್ಞರಂತೂ ಪಾಕಿಸ್ತಾನದಲ್ಲಿ ನಿಜಕ್ಕೂ ಸಭ್ಯ ನಾಗರಿಕ ಸಮಾಜ ಅಸ್ತಿತ್ವದಲ್ಲಿದೆಯೇ ಎಂಬುದರ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಾರೆ. ಧರ್ಮದ ತಳಗಟ್ಟಿನ ಮೇಲೆ ಕಟ್ಟಲು ಹೋದ ಭವ್ಯ ಪವಿತ್ರ ರೋಮನ್ ಸಾಮ್ರಾಜ್ಯ - ಸಂಪೂರ್ಣ ಕುಸಿದು ಬಿತ್ತು. ಸಮಸ್ತ ಯುರೋಪ್ಪ, ಅಮೇರಿಕಾ ಖಂಡಗಳಲ್ಲಿ ಒಂದೇ ಕ್ರಿಶ್ಚಿಯನ್ ಧರ್ಮವಿದ್ದರೂ ಕೂಡ, ಅವು ಯಾಕೆ ಇಷ್ಟು ಪ್ರತ್ಯಾಪ್ರತ್ಯೇಕ ರಾಷ್ಟ್ರಗಳಾಗಿ ರೂಪುಗೊಂಡಿವೆ ?

ಇತಿಹಾಸದಲ್ಲಿ ಧರ್ಮದಿಂದುದ್ಭವಿಸಿದ ಎಲ್ಲ ದುರಂತಗಳ ಚಿತ್ರಣ ಗಾಂಧಿ, ಅಂಬೇಡ್ಕರ್, ನೆಹರೂರವರ ಸ್ಮೃತಿಯಲ್ಲಿದ್ದುದರ ಫಲವಾಗಿ, ಅವರು ಸಂವಿಧಾನದಲ್ಲಿ, ಭಾರತವು ಹಲವು ಭಾಷೆಗಳ, ಹಲವು ಧರ್ಮಗಳ, ಹಲವು ಸಂಸ್ಕೃತಿಗಳ, ಜಾತ್ಯಾತೀತ ಪ್ರಜಾಪ್ರಭುತ್ವಕ್ಕೆ ಭದ್ರ ಬುನಾದಿ ಹಾಕಲು ಪ್ರಯತ್ನಿಸಿದರು. ಇಂಥ ಚಿಂತನೆಯ ಅಂತರ್ ಶಕ್ತಿಯಿಂದಾಗಿಯೇ ಸ್ವತಂತ್ರ ಭಾರತದ ಜನನದ ಸಂದರ್ಭದಲ್ಲಿ ಹಿಂದೂ-ಮುಸ್ಲಿಮ್ ಗಲಭೆಯಿಂದ ಅನುಭವಿಸಿದ ಹೆರಿಗೆ ನೋವನ್ನು ಭಾರತವು ಜೀರ್ಣಿಸಿಕೊಂಡು, ಈ ಮಹಾಬಿಕ್ಕಟ್ಟಿನಿಂದ ಪಾರಾಗಲು ಸಮರ್ಥವಾಯಿತು.

ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ಒಟ್ಟು ಜನಸಂಖ್ಯೆಯಷ್ಟು, ಸುಮಾರು ೧೫ ಕೋಟಿಯಷ್ಟು ಈ ದೇಶದಲ್ಲಿರುವ ಮುಸ್ಲಿಮರನ್ನು ಹೊರಗಿಟ್ಟು ರಾಷ್ಟ್ರೀಯ ಭಾವೈಕ್ಯತೆ, ಸೌಹಾರ್ದತೆ ಸಾಧ್ಯವೇ ? ಅವರೂ ಭಾರತೀಯರು. ಹಿಂದೆ ಮಧ್ಯಪ್ರಾಚ್ಯ, ಭಾರತ, ದಕ್ಷಿಣ ಪೂರ್ವ ಏಶಿಯಗಳಲ್ಲಿ ಬಹುತೇಕ ಒಂದೇ ಸಂಸ್ಕೃತಿ ಹಮ್ಮಿಕೊಂಡಿದ್ದು ಈ ವಿಭಿನ್ನ ಪ್ರದೇಶಗಳೊಳಗೆ ಅನೇಕ ಕೊಳ್ ಕೊಡುಗೆಗಳು, ವಲಸೆಗಳು ನಡೆಯುತ್ತಿದ್ದುವು. ಬ್ರಿಟಿಷರು ಹೊರಗಿಂದ ಬಂದು ಇಲ್ಲಿನ ಸಂಪತ್ತನ್ನು ದೋಚಿ ತಮ್ಮ ನಾಡನ್ನು ಕಟ್ಟಲು ಹವಣಿಸಿದವರು. ಆದರೆ ಮುಸ್ಲಿಮರು ಇಲ್ಲೇ ನೆಲೆಸಿ ಭಾರತದ ಕಲೆ- ಸಂಸ್ಕೃತಿಗಳನ್ನು ಇನ್ನಷ್ಟು ಶ್ರೀಮಂತಗೊಳಿಸಿದವರು. ಅವರು 'ಅನ್ಯ'ರು ಹೇಗಾದಾರು ? ಅವರಿಗೆ ಅವರದೇ ಆದ ಜೀವನ ಶೈಲಿ, ಸಾಂಸ್ಕೃತಿಕ ನಡವಳಿಕೆ, ಧಾರ್ಮಿಕ ಆಚರಣೆ, ಪ್ರತ್ಯೇಕ ಭಾಷೆ - ಎಲ್ಲವೂ ಇವೆ. ಅವನ್ನೆಲ್ಲ ಬಿಟ್ಟುಕೊಟ್ಟು, 'ಅವರು', 'ನಮ್ಮ' ಜತೆ ನಮ್ಮ ಶರ್ತಗಳಿಗೆ ಒಪ್ಪಿಕೊಂಡು ಸೌಹಾರ್ದತೆಯಲ್ಲಿರಬೇಕೆಂಬ ತರ್ಕ ಸರಿಯೇ ? ಅಂಬೇಡ್ಕರ್, ನೆಹರೂ, ಗಾಂಧಿಯವರ ಕಲ್ಪನೆಯ ಸೌಹಾರ್ದತೆಗೆ ತೀರ ವಿರುದ್ಧವಾದ ಸೌಹಾರ್ದತೆಯ ಕಲ್ಪನೆಯಿದು. 'ಅವರು ನಮ್ಮದನ್ನು ಒಪ್ಪಿಕೊಂಡು ಸೌಹಾರ್ದತೆಯಲ್ಲಿರಲಿ' ಎಂಬ ಕಲ್ಪನೆಯಲ್ಲಿ ಯಜಮಾನಿಕೆ ಕಾಣುತ್ತದೆಯೇ ವಿನಾ ಪ್ರಜಾಪ್ರಭುತ್ವದ ಸತ್ವಕ್ಕೆ ಮೂಲವಾದ ಸೌಹಾರ್ದತೆಯಲ್ಲ. 'ಅವರು', 'ನಾವು' ಎಂದು ವಿಭಾಜಿಸುವ ಪ್ರಭುತ್ವದ ನಿಲುವಿನಿಂದ ಸೌಹಾರ್ದಯುತ ಸಮಾಜವನ್ನು ಕಟ್ಟಲು ಬರುವುದಿಲ್ಲ. ಇದು ಪರಸ್ಪರ ಅಪನಂಬಿಕೆ, ದ್ವೇಷ, ವಿಭಜನೆಗಳನ್ನು ಪ್ರೋತ್ಸಾಹಿಸುತ್ತದೆ. ಇನ್ನೊಬ್ಬ

ನನ್ನಂತೆಯೇ ಆಗಬೇಕೆನ್ನುವುದು ಅನಾಗರಿಕತೆಯೆನ್ನಿಸುತ್ತದೆ. ಅಂಥ ಸಮಾಜವು ನಾಗರಿಕ ಸಮಾಜವಾಗಿ ಉಳಿಯುವುದು, ಬೆಳೆಯುವುದು ಸಾಧ್ಯವಿಲ್ಲ. ಇಂಥ ಮನೋಭಾವವು ಇಂದಿನ ಪ್ರಸ್ತುತ ಸಂದರ್ಭದಲ್ಲಿ ಒಂದು ಕೋಮಿನವರನ್ನು ದೇಶದಿಂದ ಹೊರಗಟ್ಟಲು ಸಫಲವಾದರೂ ಕೂಡ, ನಾಳೆ ತನ್ನಲ್ಲೇ ಒಂದು ಮತ, ಒಂದು ಜಾತಿ, ದುರ್ಬಲ, ಹರಿಜನ ಮುಂತಾದ ವಿಭಜನೆಗಳನ್ನು ಮಾಡಿಕೊಂಡು, ಕಲ್ಪಿತ 'the other'ನ್ನು ತನ್ನೊಳಗೇ ಸೃಷ್ಟಿಸಿಕೊಂಡು , ನಿರಂತರ ಬಿಕ್ಕಟ್ಟಿಗೆ ಕಾರಣವಾಗುತ್ತದೆ. ಇಂಥ ಪ್ರತಿಗಾಮಿ ಪ್ರವೃತ್ತಿಯೇ ಪ್ರಜಾಪ್ರಭುತ್ವಕ್ಕೆ ಮಾರಕವಾದದ್ದು.

ಇಲ್ಲೊಂದೆರಡು ತಪ್ಪು ಕಲ್ಪನೆಗಳ ಬಗ್ಗೆ ಉಲ್ಲೇಖಿಸಲೇ ಬೇಕು. ಅಲ್ಪ ಸಂಖ್ಯಾಕರಿಗೆ ವಿಶೇಷ ಸವಲತ್ತುಗಳ ಬಗ್ಗೆ ಗುಲ್ಲೆಬ್ಬಿಸುವಾಗ, ಹಜ್‌ಯಾತ್ರೆಗೆ ಸರಕಾರ ಒದಗಿಸುವ ವಿಶೇಷ ಸವಲತ್ತುಗಳ ಬಗ್ಗೆ ಆಗಾಗ್ಗೆ ಉಲ್ಲೇಖ ಬರುತ್ತದೆ. ಇದೊಂದು ಅಪಕಲ್ಪನೆ. ಹಿಂದೂ ಧಾರ್ಮಿಕ ಸಂಸ್ಥೆಗಳಿಗೂ ಸರಕಾರ ವಿಶೇಷ ಸವಲತ್ತು ರಕ್ಷಣೆಗಳನ್ನು ಒದಗಿಸುತ್ತಿರುತ್ತದೆ. ಕುಂಭಮೇಳ, ಪುರಿ ಜಗನ್ನಾಥ ಜಾತ್ರೆ, ತಿರುಪತಿ ಯಾತ್ರೆ, ಜಮ್ಮೂವಿನ ವೈಷ್ಣೋದೇವಿ ಯಾತ್ರೆ, ಉಡುಪಿಯ ಪರ್ಯಾಯ, ಶ್ರೀಮಾನ್ ದೇವೇಗೌಡರ ಆಯುತ ಚಂಡಿಕಾಯಾಗಕ್ಕೆ ವಿಶೇಷ ವ್ಯವಸ್ಥೆ ಹೀಗೆ ಸರಕಾರ ವೆಚ್ಚ ಮಾಡುತ್ತಲೇ ಇರುತ್ತದೆ. ಕಾನೂನು ರಕ್ಷಣೆ ಒದಗಿಸುವುದು ಮತ್ತು ಇತರ ಸಾಮಾಜಿಕ ಸೌಲಭ್ಯಗಳನ್ನು ಒದಗಿಸುವುದು ಸರಕಾರದ ಜವಾಬ್ದಾರಿಯಾಗಿದೆ. ಎರಡನೆಯದಾಗಿ ಕಾನೂನಿನಲ್ಲಿ ಮುಸ್ಲಿಮರಿಗೆ ಅವರ ಮನೆಯೊಳಗೆ ವೈಯಕ್ತಿಕವಾಗಿ ಕೆಲವು ಸವಲತ್ತುಗಳನ್ನು ಒದಗಿಸಿದೆಯೇ ವಿನಾ ಸಾಮಾಜಿಕ ಜೀವನದಲ್ಲಿ ಸಾರ್ವಜನಿಕ ಕಾನೂನಿನಲ್ಲಿ ಇಂಥ ಸವಲತ್ತುಗಳನ್ನೇನೂ ನೀಡಲಿಲ್ಲ. ಇಂಥ ಸವಲತ್ತುಗಳನ್ನು ಹಿಂದೂ ವೈಯಕ್ತಿಕ ಕಾನೂನಿನಲ್ಲೂ ಕೊಡಲಾಗಿದೆ. ಆದರೆ ಕ್ರಿಮಿನಲ್ ಕಾನೂನಿನಡಿ ಅಪರಾಧವೆಸಗಿದ ಒಬ್ಬ ಹಿಂದೂವಿಗೂ, ಮುಸ್ಲಿಮನಿಗೂ ಏಕರೀತಿಯ ದಂಡನೀತಿ ಅನ್ವಯಿಸುತ್ತದೆ.

೨೦ನೆಯ ಶತಮಾನದಲ್ಲಿ, ರಶಿಯಾ - ಚೀನಾಗಳಲ್ಲಿ ಯಜಮಾನಿಕೆಯಿಂದ ನಡೆದ ನರಮೇಧ ನಮ್ಮ ಸ್ಮೃತಿಪಟಲದಿಂದ ಇನ್ನೂ ಅಳಿಸಿಹೋಗಲಿಲ್ಲ. ಆದರೆ, ಸ್ವತಂತ್ರ ಭಾರತದಲ್ಲಿ, ಧರ್ಮದ ಹೆಸರಲ್ಲಿ ಅಂಥ ನರಮೇಧ ಆಗಲಿಲ್ಲ. ಅದರ ಯಶಸ್ಸು ೨೦ನೆಯ ಶತಮಾನದಲ್ಲಿ ಬಂದ ಅನೇಕ ನೇತಾರರಿಗೆ ಮುಖ್ಯವಾಗಿ ಗಾಂಧಿ, ನೆಹರೂ, ಅಂಬೇಡ್ಕರ್ ಅವರಿಗೆ ಸಲ್ಲಬೇಕು. ಭಟ್ಕಳದಲ್ಲಿ ಇಂದು ಸೌಹಾರ್ದತೆಯ ಬಗ್ಗೆ ಮಾತಾಡಲು ಸಾಧ್ಯವಾದುದ್ದು ಕೂಡ ಈ ಮಹಾ ಪುರುಷರು ಕಂಡ ಭಾರತದ ದರ್ಶನದಿಂದಲೇ ಎಂದು ನನ್ನ ನಂಬಿಕೆ.

ಆದರೆ ಇಂದು ನಾವು ಅನಿವಾರ್ಯವಾಗಿ ನೆಚ್ಚಿಕೊಳ್ಳುತ್ತಿರುವ ತಂತ್ರಜ್ಞಾನ ಪ್ರೇರಿತ ಆಧುನಿಕತೆ ಮತ್ತು ಮಾರುಕಟ್ಟೆ ಆಧಾರಿತ ಅಭಿವೃದ್ಧಿ ಪಥಗಳು, ಭೌತಿಕ ಜಗತ್ತಿನ ಸಕಲ ಸಂಗತಿಗಳ ಮೇಲೆ ತಂದೊಡ್ಡುತ್ತಿರುವ ವಿಪತ್ತು, ಮತ್ತು ಇದು ಸಮಾಜದಲ್ಲಿ ಸೃಷ್ಟಿಸುತ್ತಿರುವ ಆಳವಾದ ವಿಭಜನೆ ಹಿಂದೆಂದೂ ಮಾನವ ನಾಗರಿಕತೆ ಕಾಣದಷ್ಟು ಭೀಕರ ಸ್ವರೂಪದ್ದಾಗಿದೆ. ಈ ಅತಿವೇಗದ ಅಭಿವೃದ್ಧಿಯ ಕಲ್ಪನೆ ವಿಶ್ವದ ಲಯಬದ್ಧ ವಿಕಾಸದ ಗತಿಯನ್ನೇ ತಿರುಚಿ, ಸಮಸ್ತ ಮನುಷ್ಯನ ನಾಗರಿಕತೆಯನ್ನೇ ಎರಡು ಹೋಳಾಗಿ ವಿಂಗಡಿಸಿ, ನಿರಂತರ ಹೋರಾಟ ಮಾಡುವ ಎರಡು ಶತ್ರು ಬಣಗಳಂತೆ

ಮುಖಾಮುಖಿಯಾಗಿ ನಿಲ್ಲಿಸಿದೆ. ಪ್ರಗತಿಯ ಹೆಸರಲ್ಲಿ, ಧರ್ಮದ ಹೆಸರಲ್ಲಿ, ೨೦ನೆಯ ಶತಮಾನದಲ್ಲಿ ಜಗತ್ತು ಕಂಡಷ್ಟು ಹಿಂಸೆ ಹಿಂದೆಂದೂ ಕಂಡಿರಲಿಲ್ಲ. ಎರಡು ಮಹಾಯುದ್ಧಗಳು, ವಿಯಟ್ನಾ ಹಿಂಸೆ, ರಶಿಯಾ- ಚೀನಾದಲ್ಲಿ ಪ್ರಗತಿಯ ಹೆಸರಲ್ಲಿ ನಡೆದ ಹಿಂಸೆ, ಪಾಕಿಸ್ತಾನ, ಮಧ್ಯ ಪ್ರಾಚ್ಯ ದೇಶಗಳಲ್ಲಿ ಇಂದೂ ನಡೆಯುತ್ತಿರುವ ಹಿಂಸೆ, ಇವೆಲ್ಲದರ ಜತೆ ಇಂದು ಅಲ್ಲಲ್ಲಿ ಭುಗಿಲೇಳುತ್ತಿರುವ ಜನಾಂಗೀಯ ಹತ್ಯೆಗಳ ಬರ್ಬರತೆ ನಿಜಕ್ಕೂ ನಮ್ಮಲ್ಲಿ ದಿಗಿಲು ಹುಟ್ಟಿಸುತ್ತದೆ.

"ವಿಜ್ಞಾನದ ಮೆಥೆಡ್‌ನಲ್ಲೇ ಆತ್ಮ ನಿಷೇಧದ ಪರಿಕಲ್ಪನೆಯಿಲ್ಲದಿರುವುದರಿಂದಾಗಿ ಪ್ರಕೃತಿ ಜತೆ ಶೋಷಣಾತ್ಮಕ ಸಂಬಂಧ ಮಾತ್ರವುಳ್ಳ ವಿಜ್ಞಾನ ಮತ್ತು ತಂತ್ರಜ್ಞಾನ, ಯಾವುದೇ ತಿಳುವಳಿಕೆಯ ಹಂಗಿಲ್ಲದೆ ಆಕ್ರಮಣಕಾರಿಯಾಗಿ ಬೆಳೆಯುತ್ತದೆ" ಜಗತ್ತಿನ ಎಲ್ಲ ಸಂಗತಿಗಳನ್ನು ತನ್ನ ಉಪಭೋಗದ ಸೊತ್ತೆಂದು ಪರಿಗಣಿಸುತ್ತಾ, ಎಲ್ಲವನ್ನೂ ತನ್ನ ಉಪಯುಕ್ತತೆಯ ಮಾನದಂಡದಿಂದಲೇ ಅಳೆಯಲು ಆರಂಭಿಸಿದೆ. ಜಗತ್ತಿನ ಸಕಲ ಸಂಗತಿಗಳೂ ಪರಸ್ಪರ ಹೆಣೆದುಕೊಂಡಿದ್ದು ಸತತವಾಗಿ ಒಂದಕ್ಕೊಂದು ಅಂತರ್ ಪ್ರಭಾವ ಬೀರುತ್ತಿರುವ ಅಖಂಡ ಜಾಲ ಎಂಬ ಸಮಗ್ರ ದೃಷ್ಟಿಗೆ ಇಂದು ಮಬ್ಬು ಕವಿದಿದೆ. ಎಲ್ಲವನ್ನೂ ವಿಭಾಜಿಸಿ, ಪ್ರತ್ಯೇಕಪ್ರತ್ಯೇಕ ಸ್ವತಂತ್ರ ಘಟಕಗಳಾಗಿ ಇಳಿಸಿ, ಉಪಯೋಗಿಸಲು ತೊಡಗಿದ ಆಧುನಿಕ ಬದುಕಿನ ಕ್ರಮ, ಆತ್ಮಘಾತಕ ಕ್ರಮ ಎನ್ನದೆ ವಿಧಿಯಿಲ್ಲ. ಈ ಭೂಮಿ, ಪ್ರಾಣಿ, ಪಕ್ಷಿ, ಸಸ್ಯರಾಶಿಯ ಜತೆ ಹೊಕ್ಕಳ ಬಳ್ಳಿ ಸಂಬಂಧವಿಟ್ಟುಕೊಂಡು ವರ್ತಮಾನದಲ್ಲಿ ಸ್ಥಳೀಯ ಬೇರುಗಳ ಜತೆ ಬದುಕುತ್ತಿದ್ದ ಜೀವಂತ ಮನುಷ್ಯ ಇಂದು ಆಧುನಿಕತೆಯ ಪ್ರಭಾವದಿಂದ ಭವಿಷ್ಯದ ಭದ್ರತೆ ಮಾಡಿಕೊಳ್ಳುವ ಆರ್ಥಿಕ ಮನುಷ್ಯನಾಗಿ ಪರಿವರ್ತಿತನಾಗಿ, ತನ್ನ ಸುತ್ತಲಿರುವ ಎಲ್ಲವೂ ತನಗೆ ಭೋಗಿಸಲಿಕ್ಕಿರುವ ನಿರ್ಜೀವ ಆಸ್ತಿ ಎಂಬ ಭ್ರಮೆಯನ್ನು ಬೆಳೆಸಿಕೊಂಡಿದ್ದಾನೆ; ಎಲ್ಲವನ್ನೂ ಅವ್ಯಾಹತವಾಗಿ ಮುಕ್ಕುತ್ತಿರುವ ರಾಕ್ಷಸನಾಗಿದ್ದಾನೆ.

ಈ ಕಾರ್ಟೀಶಿಯನ್ - ಡೆಕಾರ್ಟೆ ಪ್ರೇರಿತ ಯಾಂತ್ರಿಕ ದೃಷ್ಟಿಕೋನದ ದೋಷವೇನೆಂದರೆ, ಒಂದು ಇನ್ನೊಂದಕ್ಕಿಂತ ಶ್ರೇಷ್ಠ; ಮತ್ತು ಮೇಲ್ವರ್ಗದ ಶ್ರೇಷ್ಠ 'ನಾವು'ಗಳ ಅಡಿಯಾಳಾಗಿ ಕನಿಷ್ಠ 'ಅವರು' ಉಪಯೋಗಕ್ಕೆ ಬರಬೇಕೆಂಬ ಕಲ್ಪನೆ, ಪ್ರಕೃತಿಯು-ಮನುಷ್ಯನಿಗೆ ಹೆಣ್ಣು-ಗಂಡಿಗೆ, ಉತ್ಪಾದನೆ-ಉಪಭೋಗಕ್ಕೆ, ಸ್ಥಳೀಯವು-ಜಾಗತಿಕಕ್ಕೆ, ಹಳ್ಳಿ-ಪೇಟೆಗೆ, ಕಾರ್ಮಿಕ-ಮಾಲಿಕನಿಗೆ, ಹೀಗೆ ತಗ್ಗಿಕೊಂಡು, ಪೂರೈಸಿಕೊಂಡು ಇರಬೇಕಾಗಿದೆ. ಈ ಪ್ರಾಪಂಚಿಕ ದೃಷ್ಟಿಯು, ಸಾರ್ತ್ರೆ ಹೇಳುವಂತೆ "hell with other people" ಎಂಬ ಮನೋಭಾವದ ಮೇಲೆ ನಿಂತಿದೆ. ಇದರಿಂದಾಗಿ ಮನುಷ್ಯ-ಪ್ರಕೃತಿ, ಪ್ರಬಲ-ದುರ್ಬಲ, ಗಂಡು-ಹೆಣ್ಣು, ಪೇಟೆ-ಹಳ್ಳಿ-ಮುಂತಾದುವುಗಳ ನಡುವಿನ ಗೀರುಗಳು ಹೃದಯದಾಳಕ್ಕೆ ಇಳಿದು ಇಡೀ ಸಮಾಜವೇ ಎರಡು ನಾಗರಿಕತೆಗಳಾಗಿ ವಿಭಜನೆಗೊಂಡು, ಒಂದನ್ನೊಂದು ಎದುರಿಸುವಂತಾಗಿದೆ. ಇಂಥ ಸಾಮಾಜಿಕ ವಿಷಮತೆಯ ಬದುಕಲ್ಲಿ, ಭಯ-ಅನಿಶ್ಚಿತತೆ - ಸ್ವಾರ್ಥ- ಆಸೆ ಪುರುಕತನದ ಹೊರತು ಸಮಷ್ಟಿಹಿತ - ಸೌಹಾರ್ದತೆ ಸಾಧ್ಯವೇ ?

ಅತಿ ತಾಂತ್ರಿಕತೆಯೇ, ಗಂಡುದರ್ಪದ ಪ್ರತೀಕವಾದ ಆಕ್ರಮಣಶೀಲ ಪ್ರವೃತ್ತಿಯುಳ್ಳದ್ದು. ಹಾಗಾಗಿ ಈ ಭೂಮಿ, ಪ್ರಕೃತಿ, ಪಶು ಪಕ್ಷಿ ದುರ್ಬಲ ವರ್ಗ ಮತ್ತು ಹೆಣ್ಣು ಕೂಡ, ಆಕ್ರಮಣಶೀಲ ತಂತ್ರಜ್ಞಾನದ ಹಿಂದೆಯಿರುವ ಬೆರಳೆಣಿಕೆಯ ಬಲಿಷ್ಠರ ಆಕ್ರಮಿತ ಪ್ರದೇಶವಾಗಿ ಬಿಡುತ್ತಿದೆ.

ಆಧುನಿಕತೆ ಹುಟ್ಟು ಹಾಕಿದ "ಅಭಿವೃದ್ಧಿ ಪಥ", ತನ್ನ ಸ್ವರೂಪದಲ್ಲೇ ಎಲ್ಲ ಮಾನವೀಯ ಅಂಶಗಳನ್ನು ಕಳಕೊಂಡು, ಕೇಂದ್ರೀಕರಣದತ್ತವೇ ಮುಂದುವರಿಯುವ ಲಕ್ಷಣ ಹೊಂದಿರುವುದರಿಂದ, ತನ್ನ ಕೇಂದ್ರೀಕೃತ ಮೆಗಾ ಕೈಗಾರಿಕಾ ರಾಕ್ಷಸತ್ವನ್ನ ಮಾದರಿಯಲ್ಲಿ ಬಹುಸಂಖ್ಯಾತ ಜನರನ್ನು ಸರಕುಗಳಂತೆ ತನಗೆ ಬೇಕಾದಂತೆ ಬಳಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುತ್ತಿರುತ್ತದೆ. ಇಂಥ ಸಂಕೀರ್ಣ ಅಭಿವೃದ್ಧಿ ವ್ಯವಸ್ಥೆಯ ಫಲವು, ಕಡಿಮೆ ಕಡಿಮೆ ಜನರಿಗೆ ಹೆಚ್ಚು ಹೆಚ್ಚು ಹಂಚಿಹೋಗಿ, ಶೇಕಡಾ ಎಂಬತ್ತು ಮಿಕ್ಕಿ ಹಳ್ಳಿ ಮಂದಿ ಕೃಷಿಕರು, ವರ್ಗ ನಿಷ್ಠರು, ಕೈ ಕೆಲಸಗಾರರು ಈ ಅಭಿವೃದ್ಧಿ ಪಥದಿಂದಲೇ ಹೊರ ತಳ್ಳಲ್ಪಡುತ್ತಿರುತ್ತಾರೆ. ಶತಮಾನಗಳಿಂದ ಈ ಮಂದಿಯ ಬದುಕಿನ ಉಸಿರಾದ, ಸಾಮಾಜಿಕ - ಸಾಂಸ್ಕೃತಿಕ ಆಯಾಮ ಪಡೆದುಕೊಂಡಿರುವ ಆರ್ಥಿಕ ಕಸುಬುಗಳು ಮೂಲೆ- ಗುಂಪಾಗಿ ಈ ಮಂದಿ, ಬಲಹೀನರೂ, ನಿರಾಶ್ರಿತರೂ ಆಗುತ್ತಾರೆ. ಅವರ ಕಸುಬುಗಳಿಗೆ ಅಗತ್ಯವಾದ ಅವರ ಒಡೆತನದಲ್ಲೇ ಇರಬೇಕಾದ ಸ್ಥಳೀಯ ಸಂಪನ್ಮೂಲಗಳ ಹಕ್ಕನ್ನು ಈ ಕೇಂದ್ರೀಕೃತ ಮಾದರಿ ಅವರಿಂದ ಕಸಿದುಕೊಂಡು, ಅವರನ್ನು ಇನ್ನಷ್ಟು ದುರ್ಬಲರನ್ನಾಗಿ ಮಾಡುತ್ತದೆ. ಶ್ರೀಮಾನ್ ದೇವೇಗೌಡರ ಮೆಗಾ ಡೆವಲಪ್‌ಮೆಂಟ್ ಮೋಹದ ಅತಿರೇಕದಿಂದಾಗಿ, ಈ ದೇಶದ ಸಮಸ್ತ ಭೂಮಿಯನ್ನು ಅಂತಾರಾಷ್ಟ್ರೀಯ ಕಂಪೆನಿಗಳು ಕೊಳ್ಳೆ ಹೊಡೆಯುವಂತಾಗಿದೆ. ಇನ್ನೊಂದೆಡೆ ನಮ್ಮ ಪ್ರಧಾನಿಗಳು ನಾಯಿಗೆ ರೊಟ್ಟಿ ಚೂರು ಬಿಸಾಡುವಂತೆ ಕೆಲವು ಕ್ಷುಲ್ಲಕ ಸಬ್ಸಿಡಿಗಳನ್ನು ಎಂದೆಂದೂ ತಾವು ಕಳಕೊಂಡು ಭೂಮಿ ಮರಳಿ ಪಡೆಯಲಾರದ ಬಡ ಹಳ್ಳಿ ಜನಕ್ಕೆ ಘೋಷಿಸುವ ಮೂಲಕ ತಾನು ಮಣ್ಣಿನ ಮಗ ಎಂದು ಪ್ರಚಾರ ಪಡೆಯುತ್ತಿದ್ದಾರೆ. ಹೇರಳ ಲಾಭ ಮಾಡಲಿಕ್ಕಾಗಿಯೇ ಈ ನೆಲಕ್ಕೆ ಬರುವ ಅಂತಾರಾಷ್ಟ್ರೀಯ ಕಂಪೆನಿಗಳು ಇಡೀ ದೇಶವನ್ನೆ ಪುನಃ ಈಸ್ಟ್ ಇಂಡಿಯಾ ಕಂಪೆನಿಯಂತೆ ವಸಾಹತೀಕರಣ ಮಾಡುವ ಅಪಾಯವಿದೆ ಎಂಬ ಎಚ್ಚರವೂ ನಮ್ಮ ಪ್ರಧಾನಿಗೆ ಇದ್ದಂತಿಲ್ಲ. ಮೆಗಾ ಡೆವಲಪ್‌ಮೆಂಟ್ ಮಾದರಿಗಳು ಹಳ್ಳಿಗಳಿಗೆ ಧಾಳಿ ಮಾಡಿ ಅಲ್ಲಿಯ ಆರ್ಥಿಕ - ಸಾಮಾಜಿಕ, ಪ್ರಾಕೃತಿಕ - ಸಾಂಸ್ಕೃತಿಕ ಪರಿಸರವನ್ನೇ ಅಸ್ತವ್ಯಸ್ತಗೊಳಿಸಿ ಮೇದು ಹೋದ ಮೇಲೆ, ಕೈಗಾರಿಕೆಗಳು ಸೃಷ್ಟಿಸಿದ ಕೊಳೆಯ ಮಧ್ಯೆ ಬಲಹೀನ ಕೃಷಿಕ ಏನು ತಾನೇ ಬೆಳೆಸಿಯಾನು ?

ಈ ದೇಶದ ೭೦ ಶೇಕಡಾ ಜನರನ್ನು ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲೂ ಪೊರೆದು ಪೋಷಿಸಿದ ಪರಂಪರಾಗತ ಜ್ಞಾನ ಸಂಪತ್ತನ್ನು, ಕರಕುಶಲ ಪರಿಣತಿಯನ್ನು ನಮ್ಮ ಯೋಜನೆಯ ನಿರ್ಮಿತಿಯಿಂದಲೇ ಹೊರಗಿಟ್ಟು, ಯುರೋಪು -ಕೇಂದ್ರಿತ ಬೃಹತ್ ಅಭಿವೃದ್ಧಿ ಯೋಜನೆಗಳನ್ನು ಈ ಜನರ ಮೇಲೆ ಹೇರಿದಾಗ, ಈ ಬಹುಸಂಖ್ಯಾಕರು ಸ್ವಂತ ನೆಲೆಕಳಕೊಂಡು, ತಮ್ಮ ಬದುಕುವ ಹಕ್ಕನ್ನೇ ಕಳಕೊಳ್ಳುತ್ತಾರೆ. ಬಹುಸಂಖ್ಯಾತ ಜನರು ಬದುಕಿ ಬಂದ ರೀತಿಯನ್ನು ಸಾರಾಸಗಟಾಗಿ ನಿರ್ಲಕ್ಷಿಸಿ ರೂಪಿಸಿದ ಯಾವುದೇ ಅಭಿವೃದ್ಧಿ ಯೋಜನೆಯ ಫಲ ಅವರಿಗೆ ತಲುಪದೇ ಹೋಗುತ್ತದೆ. ಇಂಥ ಕೇಂದ್ರೀಕೃತ ಯೋಜನೆಯ ಪಥ ಈ ದೇಶವನ್ನು ಸುಭದ್ರ ಆರ್ಥಿಕ - ಸಾಮಾಜಿಕ ಗುರಿಯತ್ತ ಒಯ್ಯದು.

ಈ ನಿರ್ದಿಷ್ಟ ಅಭಿವೃದ್ಧಿ ಪಥವು ನೀರು, ಗಾಳಿ, ಬೆಳಕು, ಸಸ್ಯರಾಶಿಯ ಮೇಲೆ ತಂದೊಡ್ಡುವ ಹಿಂಸೆಯ ಬಗ್ಗೆ ಹಿಂದೆಯೇ ಹೇಳಿದ್ದೆ. ಅದಕ್ಕೆ ಒಂದು ನಿದರ್ಶನ ಮಾತ್ರ ಇಲ್ಲಿ ನೀಡುತ್ತೇನೆ. ಸ್ವತಂತ್ರ ಭಾರತ ಕೈಗೊಂಡ ದೊಡ್ಡ ನೀರಾವರಿ ಯೋಜನೆಗಳು ಇಂದು ೨೨ ಮಿಲಿಯ ಜನರನ್ನು

ನಿರಾಶ್ರಿತರನ್ನಾಗಿ ಮಾಡಿದೆ. ಇದರ ಬಗ್ಗೆ ಆಧುನಿಕ ನಾಗರಿಕತೆಗೆ 'ಶಾಕ್' ಕೂಡ ಇಲ್ಲ. ಪ್ರಗತಿಗಾಗಿ ಕೆಲವರು ತ್ಯಾಗ ಮಾಡುವುದು ಅನಿವಾರ್ಯ ಎಂಬ ನಾಚಿಕೆಗೆಟ್ಟ ಸಮಜಾಯಿಶಿಕೆ ನೀಡಲಾಗುತ್ತಿದೆ. ಆದರೆ ತ್ಯಾಗ ಮಾಡಬೇಕಾದವರು ಯಾರು ? ಮತ್ತು ಅಭಿವೃದ್ಧಿ ಯಾರಿಗಾಗಿ ? ಯಾವ ವಿಧಾನದಿಂದ ? ಕೇವಲ ೨೦ ಶೇಕಡಾ ಪೇಟೆಯ ಅಕ್ಷರಸ್ತರಿಗೆ ದಕ್ಕುವ ಈ ಅಭಿವೃದ್ಧಿಯನ್ನು, ಅದು ಎಂಥ ಆಕರ್ಷಕವಾಗಿದ್ದರೂ, ಉಳಿದ ಬಹುಸಂಖ್ಯಾತ ಪ್ರಜೆಗಳ ಹಿತದೃಷ್ಟಿಯಿಂದ ಸಾರಾಸಗಟಾಗಿ ತಿರಸ್ಕರಿಸಬೇಕಾಗಿದೆ.

ಕೈಗಾರಿಕಾ ಸಮಾಜದ ವೈಶಿಷ್ಟವೇ ಹಾಗೆ. ಸಮುದಾಯಗಳನ್ನು, ಸಾಮುದಾಯಿಕ ಪ್ರಜ್ಞೆಯನ್ನು ನಾಶ ಮಾಡುವ ಮೂಲಕ, ಅದು ಮನುಷ್ಯನನ್ನು ಏಕಾಂಗಿಯಾಗಿ ಬತ್ತಲೆ ನಿಲ್ಲಿಸಿ ಅನಾಥಪ್ರಜ್ಞೆಯ ಹಂತಕ್ಕೆ ಆತನನ್ನು ತಂದು ನಿಲ್ಲಿಸುತ್ತದೆ ಮಾನಸಿಕ ಭದ್ರತೆ ಮತ್ತು ಬೆಚ್ಚಗಿನ ಪರಿಸರವನ್ನು ಒದಗಿಸುವ ಅವನ ಸಮುದಾಯ ಸಂಬಂಧಗಳನ್ನು, ಧಾರ್ಮಿಕ - ಸಾಂಸ್ಕೃತಿಕ ವೈಶಿಷ್ಟ್ಯಗಳನ್ನೆಲ್ಲ ಆತನಿಂದ ಕಳಚಲು ಪ್ರಯತ್ನಿಸುತ್ತದೆ. ತನ್ನ ಸ್ವಂತ ಹಿತಾಸಕ್ತಿಗಾಗಿ ಕೈಗಾರಿಕಾ ಸಮಾಜವು ಮನುಷ್ಯನ ವ್ಯಕ್ತಿ ವಿಶಿಷ್ಟತೆ, ಐಡೆಂಟಿಟಿಯನ್ನೇ ನಾಶಮಾಡಿ, ಆತನನ್ನು ಒಂದೇ ರೀತಿಯಲ್ಲಿ ಯೋಚಿಸುವ, ಚಿಂತಿಸುವ, ಪ್ರತಿಕ್ರಿಯಿಸುವ ನಾಗರಿಕ ಮನುಷ್ಯನನ್ನಾಗಿ ಪರಿವರ್ತಿಸುತ್ತದೆ. ತನಗೆ ಉಪಯೋಗಕ್ಕೆ ಬೇಕಾಗುವ ರೀತಿಯ ಶಿಕ್ಷಣ ಮಾದರಿಯನ್ನೇ ಸಮಾಜಕ್ಕೆ ನೀಡುತ್ತದೆ. ಈ ನೆಲಕ್ಕೆ ಸಲ್ಲದ ಇಂಥ ಶಿಕ್ಷಣ ಪದ್ಧತಿ ಆತನ ಸಾಂಸ್ಕೃತಿಕ ಬೇರುಗಳನ್ನೇ ಕತ್ತರಿಸಿ ತಬ್ಬಲಿಯನ್ನಾಗಿ ಮಾಡಿ, ತಾನೇ ಸೃಷ್ಟಿಸಿದ ಅಸಂಖ್ಯ 'ಗೂಡ್ಸ್'ಗಳನ್ನು ಕೊಳ್ಳುವ ಕನ್ಸೂಮರನನ್ನಾಗಿ ಪರಿವರ್ತಿಸುತ್ತದೆ. ಆತ ತನ್ನ ಮಾನಸಿಕ ಅಭದ್ರತೆ ಹೋಗಲಾಡಿಸಿಕೊಳ್ಳಲು ಕೃತಕ ಮನೋರಂಜನೆ, ಕೃತಕ ಆಹಾರ, ಸಿನೆಮಾ ಟಾಕೀಸ್, ಪಬ್ಸ್, ಕೃತಕ ಸಂಗೀತ, ವಿಹಾರ ಧಾಮಗಳು, ಪ್ರವಾಸಿಕೇಂದ್ರಗಳು ಟಿ.ವಿ., ರೇಡಿಯೋ ಮುಂತಾದ ಹೇರಳವಾದ ಉಪಭೋಗ ಸರಕುಗಳನ್ನು ಉತ್ಪಾದನೆ ಮಾಡಿ ಆತನನ್ನು ಕೊಳ್ಳುವಂತೆ ತನ್ನ ಪ್ರಚಾರ ತಂತ್ರದ ಮೂಲಕ ಪ್ರಚೋದಿಸುತ್ತಿರುತ್ತದೆ. ಈ ಗ್ರಾಹಕ ಮನುಷ್ಯನಾದರೋ ತನ್ನ ಒಂಟಿತನವನ್ನು ಮರೆಮಾಚಲು ತನ್ನ ಸುತ್ತ ಅನಾವಶ್ಯಕ ಆಡಂಬರದ ವಸ್ತುಗಳನ್ನು ಕೂಡಿ ಹಾಕಿ, ಅವುಗಳ ನಾಚಿಕೆಕೆಟ್ಟ ಪ್ರದರ್ಶನಗಳ ಮೂಲಕ ಕಳೆದುಕೊಂಡ 'ತನ್ನತನ'ವನ್ನು ಹುಡುಕಿಕೊಳ್ಳಲು ಪ್ರಯತ್ನಿಸುತ್ತಿರುತ್ತಾನೆ. ಹಾಗಾಗಿ, ಈ ಆ ಮಾನಸಿಕ ಒಂಟಿ, ತನ್ನ ಸುತ್ತಮುತ್ತಲಿರುವ ಎಲ್ಲ ಸಂಗತಿಗಳನ್ನೂ ಕೊಳ್ಳಬಹುದಾದ ಗೂಡ್ಸ್ ಅಂತ ಭ್ರಮಿಸುತ್ತಾ, ಕೊನೆಗೆ ತಾನೂ ಒಂದು 'ಕಮ್ಮಡಿಟಿ' ಎಂದೇ ಭ್ರಮಿಸುತ್ತಾ ಈ ಸಂಕೀರ್ಣ ವ್ಯವಸ್ಥೆಯ ಸಮ್ಮೋಹಿನಿಯಿಂದ ತಾನೇ ಸ್ವಯಂ ಶೋಷಣೆಗೆ ಒಳಗಾಗಿ ಬಿಡುತ್ತಾನೆ.

ಇದರ ಜತೆ ಯಂತ್ರನಾಗರಿಕತೆಯ, ಏಕತಾನತೆಯು ಮನುಷ್ಯನನ್ನು ತೀರ ನಗಣ್ಯನನ್ನಾಗಿ ಮಾಡಿ ಆತನ ಬದುಕನ್ನು ಅರ್ಥಹೀನ ಮಾಡಿಬಿಡುವುದರಿಂದ, ತನ್ನ ಮಾನಸಿಕ ಭದ್ರತೆಗಾಗಿ, ಆತ ತನ್ನ ಜನಾಂಗೀಯ ಪ್ರಜ್ಞಾಗುಹೆಗೆ ಮರಳುತ್ತಾನೆ ಅಥವಾ ಧರ್ಮಕ್ಕೆ ಆತುಕೊಳ್ಳುತ್ತಾನೆ. ಆದರೆ, ದುರದೃಷ್ಟವಶಾತ್, ಧರ್ಮದ ಪ್ರಾಚೀನ ಸತ್ತ್ವದ ವಿಸ್ಮೃತಿಯಿಂದ ಆತ ಧರ್ಮಗ ಆಕರ್ಷಕವಾದ ತಪ್ಪುದಾರಿಯನ್ನೇ ನೆಚ್ಚಿಕೊಂಡು, ಕೇವಲ ಧರ್ಮದ ಆವೇಶ ಭರಿತ ಮತಾಂಧನಾಗುತ್ತಾನೆ. ಬೃಹತ್ ಯಂತ್ರಯುಗದಲ್ಲಿ ಮನುಷ್ಯ ತಾನು ವಿಶ್ವಮಾನವ ಎಂಬ ಭ್ರಮೆಗೊಳಪಟ್ಟು, ಒಳಗಿಂದ ಪೊಳ್ಳಾಗುತ್ತಾ, ಸುಳ್ಳಾಗುತ್ತಾ ಹೋಗಿ, ಅಂತಾರಾಷ್ಟ್ರೀಯ ಹೆದ್ದಾರಿಯಲ್ಲಿ ಬಿದ್ದು ಮಾನಸಿಕವಾಗಿ

ಅನಾಥನಾಗಿ, ಮತಾಂಧನಾಗುವ ಪ್ರವೃತ್ತಿಯನ್ನು ಮುಖ್ಯವಾಗಿ ನಾವು ಕಲಿತ ಪಟ್ಟಣಿಗರಲ್ಲಿ ಕಾಣುತ್ತೇವೆ.

ಈ ಕನ್ಸ್ಯೂಮರ್ ಸಂಸ್ಕೃತಿಯನ್ನು ಹುಟ್ಟುಹಾಕಿದ ಪಾಶ್ಚಾತ್ಯ ರಾಷ್ಟ್ರಗಳು, ಮುಖ್ಯವಾಗಿ ಅಮೇರಿಕಾ, ಇಡಿಯ ಜಗತ್ತನ್ನು ಇಬ್ಭಾಗ ಮಾಡಿ, ತೃತೀಯ ಜಗತ್ತಿನ ರಾಷ್ಟ್ರಗಳನ್ನು ತನ್ನ ಸೊತ್ತುಗಳನ್ನು ಮಾರುವ ಮಾರುಕಟ್ಟೆಯಾಗಿ ತನ್ನ ತಾಜ್ಯವನ್ನು ವಿಲೇವಾರಿ ಮಾಡುವ ತಿಪ್ಪೆ ಗುಂಡಿಯಾಗಿ ಕಾಣುತ್ತಿದೆ. ಆಯಾಯಾ ದೇಶದ ಇತಿಹಾಸ ಗರ್ಭದಲ್ಲಿ ಜನರ ಅನುಭವದಿಂದ ಮೂಡಿ ಬಂದ ಜ್ಞಾನಸಂಪನ್ಮೂಲಗಳು, ಸ್ಥಳೀಯ ಸಾಂಸ್ಕೃತಿಕ ವೈಶಿಷ್ಟ್ಯತೆಗಳು, ಸ್ಥಳೀಯ ನಡೆ-ನುಡಿ ಸಮುದಾಯ ಸಂಬಂಧಗಳು ಒಂದೋ ಜಾಗತೀಕರಣದ ರಭಸದಲ್ಲಿ ಅವನತಿಯ ಹಾದಿ ಹಿಡಿಯುತ್ತವೆ. ಅಥವಾ ಆಕರ್ಷಕ ಪ್ಯಾಕೇಜಿನಲ್ಲಿ ದೊರೆಯುವ 'ಎಕ್ಸ್‌ಪೋರ್ಟ್ ಐಟಮ್ 'ಆಗಿ ವಿದೇಶೀ ಪ್ರವಾಸಿಗರಿಗೆ ಮಾರುವ 'ಎತ್ನಿಕ್' ಸರಕಾಗಿ ಪರಿವರ್ತಿತವಾಗುತ್ತದೆ.

ಒಟ್ಟಾರೆ, ಈ ಅವಸರದ ನಿರ್ದಿಷ್ಟ ಪ್ರಗತಿ ಕಲ್ಪನೆಯ ಲಕ್ಷಣವಾದ, ನೇರ ರೇಖೆಯ ಊರ್ಧ್ವಮುಖಿ ಅಭಿವೃದ್ಧಿಯ ಅಪಕಲ್ಪನೆ, ಮಾರುಕಟ್ಟೆ ಅರ್ಥವ್ಯವಸ್ಥೆ. ಉಪಯೋಗ ಸಂಸ್ಕೃತಿ, ಪೈಪೋಟಿ ಸಮಾಜವ್ಯವಸ್ಥೆ, ಬೆಳವಣಿಗೆಯ ತೀರದ ದಾಹ, ಸುಖಜೀವನದ ದುರಾಸೆ ಇವು ಮನುಷ್ಯ-ಮನುಷ್ಯರ ನಡುವೆ ಕೃತಕ ಗೋಡೆ ನಿರ್ಮಿಸಿ `ನಾವು', `ಅವರು' ಎಂದು ಸಮುದಾಯದಲ್ಲಿ ಅತ್ಯಂತ ಕ್ರೂರ ರೀತಿಯ ವಿಭಜನೆಯನ್ನು ಸೃಷ್ಟಿಸುತ್ತಾ, `ಅವರು' ನಮ್ಮ ಶತ್ರುಗಳು ಎಂಬ ಭ್ರಮೆ ಹುಟ್ಟಿಸಿ ಬಿಡುತ್ತದೆ.

ಜಗತ್ತಿನ ಎಲ್ಲಾ ಚರಾಚರ ಸಂಗತಿಗಳ ಒಳಗಿರುವ ಪೊರೆಯುವ ಸೂಕ್ಷ್ಮಗೊಣಸು. ಒಳಗೊಣಸುಗಳನ್ನು ತುಂಡರಿಸುತ್ತಲಿರುವ ಈ ಆತ್ಮಘಾತಕ ಸಮಾಜದಲ್ಲಿ ಸೌಹಾರ್ದತೆ-ಮುಕ್ತಿ-ಗಳೆಲ್ಲಿ? ಎಲ್ಲ ಜೀವಿಗಳನ್ನೂ ನಮ್ಮಂತೆ ಕಾಣುವ ಜೀವ ಪ್ರೀತಿ, ಸಹಬಾಳ್ವೆ, ಪರಸ್ಪರ ರಕ್ಷಣೆ, ಪೋಷಣೆಗಳಿಗೆಲ್ಲ ಇಲ್ಲಿ ಸ್ಥಾನವಿದೆಯೇ? ಈ ಆಧುನಿಕ ನಾಗರಿಕತೆಯ ಜೀವನ ಶೈಲಿಯ ಪರಿಣಾಮವಾಗಿ , ಸಮಾಜದಲ್ಲಿ ಸಂಭವಿಸುತ್ತಲಿರುವ ಕ್ಷೋಭೆಯ ಗಾಯವನ್ನು ಉಪಶಮನಗೊಳಿಸಿ ಪುನಃ ಜಗತ್ತಿನ ಅಖಂಡ ಜಾಲದ ಸಮರಸ ಸಂಬಂಧವನ್ನು ಪುನರ್ರಚಿಸಲು ಸಾಧ್ಯವೇ?

ಭಾರತೀಯನಿಗೆ ಪ್ರಾಯಃ ಇರುವುದು ಒಂದೇ ದಾರಿ. ಗಾಂಧೀಜಿಯ ಚಿಂತನೆಯನ್ನು ಗಂಭೀರವಾಗಿ ಪುನರ್ವಿಮರ್ಶಿಸಿ ಅಳವಡಿಸಿಕೊಳ್ಳುವುದು. ಸಕಲ ಜೀವಜಾತಿಯ ರಕ್ಷಣೆಯನ್ನು ಗುರಿಯಾಗಿಟ್ಟುಕೊಂಡು, ಜವಾಬ್ದಾರಿ ತಿಳುವಳಿಕೆಗಳಿಂದ, ಜೀವಿಗಳನ್ನು ಗೌರವಿಸುವ ವಿಜ್ಞಾನ ಮತ್ತು ತಂತ್ರಜ್ಞಾನ ವಿಧಾನಗಳನ್ನು ಅನುಸರಿಸುವುದು, ಆಸೆಗಳಿಗೆ ಮಿತಿಹಾಕಿ ಹಿತಮಿತದ ಸರಳ ಬದುಕು, ಮನುಷ್ಯನ ಮೂಲಭೂತ ಸೌಕರ್ಯಗಳಿಗೆ ತಕ್ಕಷ್ಟೇ ಉತ್ಪಾದನೆ, ವಿಕೇಂದ್ರೀಕೃತ ಜೀವನ ಶೈಲಿಯ ಅಳವಡಿಕೆ, ಸಮಷ್ಟಿ ಜೀವಪೋಷಕ ಬೆಳವಣಿಗೆಯ ಅಭಿವೃದ್ಧಿ ಪಥ. ಆರ್ಥಿಕ ಮನುಷ್ಯನ ಬದಲು ಸ್ಥಳೀಯ ಪರಿಸರಕ್ಕೇ ಸಲ್ಲುತ್ತ ವರ್ತಮಾನದಲ್ಲೇ ಬದುಕುವ ಸಾಮಾನ್ಯ ಮನುಷ್ಯನ ಪುನರ್ ಪ್ರತಿಷ್ಠಾಪನೆ, ನೀರು-ಗಾಳಿ–ತ್ಯಾಜ್ಯ ಮಣ್ಣು ಮೊದಲಾದ ಮನುಷ್ಯನ ಮೂಲಭೂತ

ಪ್ರಾಕೃತಿಕ ಸಂಪತ್ತು ವ್ಯಾಪಾರೀಕರಣವಾಗದಂತೆ ತಡೆಗಟ್ಟುವಿಕೆ-ಮುಂತಾದ ಪರಿಸರ ವಿಜ್ಞಾನೀಯ ಸಮಗ್ರ ದೃಷ್ಟಿಯತ್ತ ಹೊರಳಿದರೆ ಒಳ್ಳೆಯದು. ಇಂಥ ಜೀವನಶೈಲಿ ಪುನಃ ಸ್ಥಾಪನೆಗೊಳ್ಳಬೇಕಾದರೆ ಇರುವ ಒಂದೇ ಭೂಮಿಯನ್ನು ಮನುಷ್ಯ ಅತಿದಣಿಸದೆ, ತನ್ನ ದುರಾಸೆಗಳಿಗೆ ಕಡಿವಾಣ ಹಾಕಿ, ಗಾಂಧೀಜಿ ಪ್ರತಿಪಾದಿಸುವ ಸರಳತೆ, ಅಸ್ವಾದಗಳ ಮೌಲ್ಯಗಳತ್ತ ಗಮನಹರಿಸುವ ಜವಾಬ್ದಾರಿಯಿದೆ. ಯಾಕೆಂದರೆ, ಇಂದಿನ ನಮ್ಮ ಜೀವನ ಶೈಲಿ ಖಂಡಿತವಾಗಿಯೂ ಸಹ್ಯ (sustainable) ಅಲ್ಲ. ಇದು ನಾವು ಬಳುವಳಿ ಪಡೆದ ಜೀವಂತ ಭೂಮಿಯನ್ನು ಸದ್ಯದಲ್ಲೇ ನಿರ್ಜೀವಗೊಳಿಸಿ ಬಿಡುವ ಸಂಭವವಿದೆ. ಇಂಥ ಭೀಕರ ಬಿಕಟ್ಟಿನ ಸಂದರ್ಭದಲ್ಲಿ ಗಾಂಧೀಜಿಯ ಆರ್ಥಿಕ ಚಿಂತನೆಗಳನ್ನು ಮಾನವ ಜನಾಂಗದ ಉಳಿವಿಗಾಗಿ ಒಪ್ಪಿಕೊಳ್ಳುವುದು ಅನಿವಾರ್ಯವಾಗಿ ಬಿಡುತ್ತದೆ.

ಶಾಂತಿ -ಸೌಹಾರ್ದತೆಗಳ ಸಾಮುದಾಯಿಕ ಬದುಕಿಗೆ, ಮನುಷ್ಯನಿಗೆ ಯಾವ ರೀತಿಯ ಸಮಗ್ರ ದೃಷ್ಟಿಬೇಕು ಎಂಬುದಕ್ಕೆ ಪ್ರಾಯಃ ಪ್ರಾಚೀನ ಋಷಿಗಳು ಸಾಕ್ಷಾತ್ಕರಿಸಿಕೊಂಡ ಬದುಕಿನ ಸಮ್ಯಕ್ ದರ್ಶನವು ಅತ್ಯಂತ ಮಹತ್ವದ್ದು ಅಂತ ನನ್ನ ಅನಿಸಿಕೆ. ನಮ್ಮ ಪೂರ್ವ ಸೂರಿಗಳು ನನಗೆ ಶಾಂತಿ-ನೆಮ್ಮದಿ ದೊರಕಲಿ ಎಂದು ಪ್ರಾರ್ಥಿಸುವುದೇ ಇಲ್ಲ. "ಭೂಃಶಾಂತಿ:, ಭುವಃ ಶಾಂತಿ; ಅಂತರಿಕ್ಷ: ಶಾಂತಿ:..... ಹೀಗೆ ಭೂಮಿಯಲ್ಲಿ ಶಾಂತಿ ನೆಲೆಸಲಿ, ಅಂತರಿಕ್ಷದಲ್ಲಿ ಶಾಂತಿ ನೆಲೆಸಲಿ, ಆಕಾಶದಲ್ಲಿ ಶಾಂತಿ ನೆಲೆಸಲಿ, ಸೂರ್ಯ ಚಂದ್ರ, ನಕ್ಷತ್ರ ಮಂಡಲಗಳಲ್ಲಿ ಶಾಂತಿ ನೆಲೆಸಲಿ, ಗಾಳಿ, ನೀರು ಬೆಂಕಿಗಳಲ್ಲಿ ಶಾಂತಿ ನೆಲೆಸಲಿ, ವನಸ್ಪತಿಗಳಲ್ಲಿ ಶಾಂತಿ ನೆಲೆಸಲಿ, ಔಷಧಿಯ ಬಳ್ಳಿಗಳಲ್ಲಿ ಶಾಂತಿ ನೆಲೆಸಲಿ, ನಾಲ್ಕು ಕಾಲಿನ ಪ್ರಾಣಿಗೆ ಶಾಂತಿಯಾಗಲಿ, ಎರಡು ಕಾಲಿನ ಪ್ರಾಣಿಗಳಿಗೆ ಶಾಂತಿಯಾಗಲಿ, ಪಕ್ಷಿ ಸಂಕುಲಕ್ಕೆ ಶಾಂತಿಯಾಗಲಿ.... "ಎಂದು ಒಂದು ಭವ್ಯ ಆಶಯದಿಂದ ಮುಂದುವರಿಯುತ್ತದೆ. ಇಡಿಯ ಜಗತ್ತು ಒಂದೇ ಸೂತ್ರದಲ್ಲಿ ಪೋಣಿಸಿಕೊಂಡಿರುವಾಗ ನಾವು ನಮ್ಮನ್ನು ಇತರ ಎಲ್ಲದರಿಂದ ಬೇರ್ಪಡಿಸಿಕೊಂಡು, ನನ್ನ ಮಟ್ಟಿಗೆ ಶಾಂತಿ- ಸೌಹಾರ್ದತೆಗಳಿಂದಿರಲು ಸಾಧ್ಯವಿಲ್ಲ. ನಮ್ಮ ಶಾಂತಿಗೆ, ನಮ್ಮ ಸುತ್ತಲಿರುವ ಸಕಲ ಸಂಗತಿಗಳಲ್ಲೂ ಒಟ್ಟು ವ್ಯವಸ್ಥೆಯಲ್ಲೇ ಶಾಂತಿ ನೆಲೆಸಬೇಕಾಗುತ್ತದೆ. ನನ್ನ ಸುತ್ತಲಿರುವ ನಿಸರ್ಗ, ಪಶು, ಪಕ್ಷಿ, ಪ್ರಾಣಿ, ಮನುಷ್ಯ ಎಲ್ಲ ಸಂಗತಿಗಳಲ್ಲೂ ಸಮರಸ - ಶಾಂತಿ ನೆಲೆಸಿವಾಗ, ನಮ್ಮಲ್ಲಿ ಸಹಜವಾಗಿಯೇ ಶಾಂತಿ ನೆಲೆಸುತ್ತದೆ. ಅಶಾಂತಿಯ, ಹಿಂಸೆಯ ವಿಭಜನೆಯ ವ್ಯವಸ್ಥೆಯಲ್ಲಿ, ವೈಯಕ್ತಿಕ ಶಾಂತಿ-ನೆಮ್ಮದಿ ಎಲ್ಲಿಯದು ? ಸೌಹಾರ್ದತೆಯನ್ನು ಬಯಸುವವರಿಗೆಲ್ಲ ಈ ಸಾಲುಗಳು ಬಹಳ ಮಹತ್ವದ 'ಮೆಸ್ಸೇಜ್' ನೀಡುತ್ತದೆ ಎಂದು ನನ್ನ ಅನಿಸಿಕೆ.

❐

# ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು

ಸುನಿಲ್ ಸಹಸ್ರಬುಧೆಯವರ "ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು" ಪುಸ್ತಕವು ಗಾಂಧೀಜಿಯವರ "ಹಿಂದ್ ಸ್ವರಾಜ್ಯ"ದ ಬಳಿಕ ನನ್ನ ಮೇಲೆ ಗಾಢ ಪ್ರಭಾವ ಬೀರಿದ ಪುಸ್ತಕವಾಗಿದೆ. "ಹಿಂದ್ ಸ್ವರಾಜ್ಯ"ದಷ್ಟೇ ಪ್ರಮುಖವಾಗಿರುವ ಈ ಗ್ರಂಥ, ಗಾಂಧೀಜಿಯ ಚಿಂತನೆಯನ್ನು ವಿಶ್ವನಿಯತಿ(ಋತ)ಗೊಳಪಟ್ಟ ಸಮಾಜಶಾಸ್ತ್ರೀಯ, ಆರ್ಥಿಕ ಸಿದ್ಧಾಂತದ ಚೌಕಟ್ಟಿನಲ್ಲಿ ಕೂಡಿಸಿ ಗಟ್ಟಿಗೊಳಿಸಿದೆ. ಸಾಮಾನ್ಯ ಜನರ ದೈನಂದಿನ ಬದುಕಿನ ವಾಸ್ತವತೆಯ ನೆಲೆಗಟ್ಟಿನ ಮೇಲೆ ಪುನಾರಚಿಸಿದ ಸಹಸ್ರಬುಧೆಯ ವಿಚಾರಧಾರೆಯನ್ನು ಓದುತ್ತಾ ಹೋದಂತೆ ನನ್ನ ಮನಸ್ಸು ಅದನ್ನು ಬಹುತೇಕ ಸ್ವೀಕರಿಸುತ್ತಾ ಹೋಗುತ್ತಿತ್ತು. ಪ್ರಾಯಃ ಸಾಮಾನ್ಯ ಬದುಕಿನಲ್ಲಿ (ordinary life) ಹುದುಗಿರುವ ಸತ್ಯವನ್ನು ಅಪ್ರತಿಮವಾಗಿ ಹಿಡಿದಿಡುವ ಅವರ ಕ್ರಮವೇ ಇದಕ್ಕೆ ಕಾರಣ.

ದೈನಂದಿನ ಕಾಯಕದ ಬದುಕು ವಾಸ್ತವದಲ್ಲಿ ನೆಲೆನಿಂತಿದೆ. ಅದು ಷರತ್ತುರಹಿತ (unconditional)ವಾಗಿ, ಸಮಗ್ರವಾಗಿ, ವರ್ತಮಾನದಲ್ಲಿ ಸಂಭವಿಸುತ್ತಿರುತ್ತದೆ. ಅದಕ್ಕೆ ಸಿದ್ಧಾಂತಗಳ ಅಗತ್ಯವಿಲ್ಲ. ಬಿಡಿ ಅಂಶಗಳ ಹಂಗಿಲ್ಲ. ಅದು ಕೇವಲ ಇದೆ. ಸತ್ಯ-ಅಸತ್ಯ, ಒಳ್ಳೆಯದು-ಕೆಟ್ಟದು, ಸೌಂದರ್ಯ- ಕುರೂಪತೆ - ಎಲ್ಲವೂ ಕಾಯಕದ ಬದುಕಿನ ವಿವಿಧ ಮೈಗಳಾಗಿವೆ. ಆದರೂ ಈ ಅಂಕು-ಡೊಂಕುಗಳು ಒಟ್ಟು ವಿಶ್ವನಿಯತಿ

---

ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು' (ಮೂ: ಪ್ರೊ. ಸುನಿಲ್ ಸಹಸ್ರಬುಧೆ ಕನ್ನಡಕ್ಕೆ ಕೆ. ಪುಟ್ಟಸ್ವಾಮಿ) ಪುಸ್ತಕಕ್ಕೆ ಹಿನ್ನುಡಿಯಾಗಿ, ಕನ್ನಡ ಪುಸ್ತಕ ಪ್ರಾಧಿಕಾರ : ೨೦೦೬)

ಯನ್ನು (cosmic order) ಉಲ್ಲಂಘಿಸದೆ ಅದಕ್ಕೆ ಸೀಮಿತವಾಗಿಯಷ್ಟೇ ಕಾಣಿಸಿಕೊಳ್ಳುತ್ತದೆ. ಹಾಗಾಗಿ ಅದು ಕಾಯಕದ ಬದುಕಿನ ಶ್ರೀಮಂತಿಕೆಯನ್ನು ಛಿದ್ರಗೊಳಿಸುವುದಿಲ್ಲ; ಮಾತ್ರವಲ್ಲದೆ, ನಮ್ಮ ಯಾವ ನಿರ್ವಚನೆಗೂ ಸಿಗದೆ ತಾನೇ ತಾನಾಗಿ ಇರುವಂಥದು. ಅದು ಸತ್ಯತತ್ತ್ವದ ಮೂಲನೆಲೆಯಾಗಿದೆ. ಆದರೆ ಈ ನಿಸರ್ಗ ಪೂರಕ ವಾಸ್ತವವನ್ನು ನೋಡುವ ಸೂಕ್ಷ್ಮ ಕಣ್ಣು, ಆಲಿಸುವ ಸೂಕ್ಷ್ಮ ಕಿವಿ ಬೇಕು. ಅದರ ಶ್ರುತಿಗೆ ನಮ್ಮ ಬದುಕಿನ ಲಯವನ್ನು ಹಚ್ಚುವ ಸೂಕ್ಷ್ಮ ಸಂವೇದನಾಶೀಲ ಮನಸ್ಸು ಬೇಕು.

ವಿಶ್ವನಿಯಮದಲ್ಲಿ ಅಡಕವಾಗಿರುವ ನೈತಿಕ ತತ್ತ್ವಗಳು, ಈ ತತ್ತ್ವಗಳ ವರ್ತುಲದೊಳಗೇ ಸಂಭವಿಸುತ್ತಿರುವ ಪ್ರಪಂಚದ ಸಕಲ ಸೃಷ್ಟಿ ವಿದ್ಯಮಾನಗಳು, ಮತ್ತು ಈ ನಿಯತಿಯ ಗರ್ಭದಿಂದಲೇ ಮೂಡಿಬಂದ ಮನುಷ್ಯ, ಪ್ರಕೃತಿದತ್ತವಾಗಿ ಆತನಿಗೆ ಬಂದಿರುವ ವಿಶೇಷ ಸ್ವಾತಂತ್ರ್ಯ, ಈ ದತ್ತ ಸ್ವಾತಂತ್ರ್ಯವನ್ನು ಪ್ರಾಕೃತಿಕ ನಿಯಮಗಳಿಗೆ ಹೊಂದಿಸಿಕೊಂಡೇ ನೈತಿಕವಾಗಿ ಬದುಕಬೇಕಾದ ಆತನ ಅನಿವಾರ್ಯತೆ; ಮಾತ್ರವಲ್ಲ, ಈ ನಿಯಮಗಳಿಗೆ ಭಂಗವುಂಟಾದಾಗ ಆಗುವ ಅನಾಹುತಗಳು, ಮತ್ತು ದುರಾದೃಷ್ಟವಶಾತ್, ಆಧುನಿಕ ವಿಜ್ಞಾನವು ತನ್ನೊಡಲೊಳಗೇ ಧರಿಸಿಕೊಂಡಿರುವ ವಿಶ್ವನಿಯಮಗಳನ್ನು ಛಿದ್ರೀಕರಿಸುವ ಕ್ರಿಯಾಪ್ರವೃತ್ತಿಗಳು – ಇವನ್ನೆಲ್ಲಾ ಸಹಸ್ರಬುಧೆ, ಗಾಂಧೀಜಿಯ 'ರ‍್ಯಾಡಿಕಲ್' ಚಿಂತನೆಯ ಚೌಕಟ್ಟಿನೊಳಗೆ ನಮ್ಮ ಮುಂದೆ ಎಳೆಎಳೆಯಾಗಿ ಬಯಲುಗೊಳಿಸುತ್ತಾರೆ.

ಯಾವ ಸಂದರ್ಭದಲ್ಲೂ ಸಹಸ್ರಬುಧೆ ಗಾಂಧೀಜಿಯ ಬಗ್ಗೆ ಅತಿಭಾವುಕರಾಗುವುದಿಲ್ಲ; ಭಾವಾವೇಶದಿಂದ ಅವರ ಚಿಂತನೆಯನ್ನು ವೈಭವೀಕರಿಸುವುದಿಲ್ಲ. ಗಾಂಧೀಜಿಯವರನ್ನು ರಂಜನೀಯವಾಗಿ ಚಿತ್ರಿಸುವ (romanticising) ಹಲಬಗೆಯವರು ನಮ್ಮ ಸುತ್ತ ಸಿಗಬಹುದು. ಆದರೆ ಸಹಸ್ರಬುಧೆಯಂತೆ ಗಾಂಧೀಜಿಯ ಸತ್ಯ ತತ್ಪರತೆಯನ್ನು ಪ್ರಾಕೃತಿಕ ನಿಯತಿಯ ತಳಗಟ್ಟಿನ ಮೇಲೆ 'ಪ್ರಾಕ್ಟಿಕಲ್' ಆಗಿ ವರ್ತಮಾನದಲ್ಲಿ ಪ್ರಸ್ತುತಗೊಳಿಸುತ್ತಾ ಅದನ್ನು ಮೂರನೆಯ ಸಹಸ್ರಮಾನದ ಜೀವಪೋಷಕ ಆಶಾಕಿರಣವಾಗಿ ನಿರೂಪಿಸಿದವರು ಬಹಳ ವಿರಳವೆನ್ನಬಹುದು. ತಾನು ಪಡೆದ ಐ.ಐ.ಟಿ. ಡಿಗ್ರಿಗಳನ್ನೆಲ್ಲಾ ಒತ್ತಟ್ಟಿಗಿಟ್ಟು ಶ್ರಮಿಕರ, ಕರಕುಶಲಗಾರರ, ಗ್ರಾಮೀಣ ಮಹಿಳೆಯರ, ಬುಡಗಟ್ಟು ಜನಾಂಗದ ಪರಂಪರಾಗತ ಅನುಭವಜನ್ಯ ಜ್ಞಾನ ಭಂಡಾರದಲ್ಲಿರುವ ಮುತ್ತು-ರತ್ನಗಳನ್ನು ಹೆಕ್ಕಿ ಪ್ರಸ್ತುತಗೊಳಿಸುವ ಕಾರ್ಯದಲ್ಲಿ ನಿರತರಾಗಿ ಸರಳವಾಗಿ ಬದುಕುತ್ತಿರುವ ಸಹಸ್ರಬುಧೆಯವರ ಪುಸ್ತಕವು ಈ ಕಾಲದ ಮಹತ್ವದ ಗ್ರಂಥ. ಓದುತ್ತಿದ್ದಂತೆ, ನನಗೆ ಈ ಪುಸ್ತಕವು ಕನ್ನಡದಲ್ಲಿ ನಮ್ಮ ಜನಕ್ಕೆ ದೊರೆಯಬೇಕೆಂಬ ಹಂಬಲ ಬಂತು. ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಈ ಬಗ್ಗೆ ಮನವಿ ಮಾಡಿಕೊಂಡೆ. ಕನ್ನಡ ಪುಸ್ತಕ ಪ್ರಾಧಿಕಾರವು ಒಪ್ಪಿ ಭಾಷಾಂತರಕ್ಕೆ ಈ ಪುಸ್ತಕವನ್ನು ಕೈಗೆತ್ತಿಕೊಂಡಿತು. ನಿಜಕ್ಕೂ ನಾನು ಈ ಬಗ್ಗೆ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಕೃತಜ್ಞನಾಗಿದ್ದೇನೆ.

* * *

ಗಾಂಧೀಜಿ ೧೯೩೦ರ ದಶಕದಲ್ಲೇ ನುಡಿದ ಈ ಮೂರು ಮಾತುಗಳು ಅವರ ಚಿಂತನ ಕ್ರಮದ ಸಾರವನ್ನು ಸೂತ್ರೀಕರಿಸುತ್ತದೆ :

"ಪಾಶ್ಚಾತ್ಯ ರಾಷ್ಟ್ರಗಳ ರೀತಿಯಲ್ಲಿ ಭಾರತವು ಒಟ್ಟಾರೆ ಉದ್ಯಮೀಕರಣದ ಮೋಹಕ್ಕೆ ಬಲಿಬೀಳದಂತೆ ಭಾರತವನ್ನು ದೇವರು ಸಂರಕ್ಷಿಸಲಿ. ಒಂದು ಚಿಕ್ಕದೇಶವಾದ ಇಂಗ್ಲೇಂಡಿನ ಆರ್ಥಿಕ ಸಾಮ್ರಾಜ್ಯಶಾಹೀ ಪ್ರವೃತ್ತಿ ಇಂದು (1920ರ ದಶಕ) ಇಡೀ ಜಗತ್ತನ್ನೇ ಒತ್ತೆಯಿಟ್ಟುಕೊಂಡಿದೆ. 300 ಮಿಲಿಯ ಜನರಿರುವ ಭಾರತವು ಇದೇ ರೀತಿ ಸಾಮ್ರಾಜ್ಯಶಾಹೀ ಆರ್ಥಿಕ ಶೋಷಣೆ ಆರಂಭಿಸಿದರೆ, ಅದು ಜಗತ್ತನ್ನು ಸಂಪೂರ್ಣ ನಗ್ನಗೊಳಿಸೀತು."

"ಬಯಕೆಗಳನ್ನು ಆವಶ್ಯಕತೆಗೆ ತಕ್ಕಷ್ಟೇ ಮಿತಿಗೊಳಿಸುವುದು ಪ್ರಾಂ[illegible]ಸಮಾಜದ ಲಕ್ಷ್ಯವಾಗಿತ್ತು. ಆದರೆ ಇದಕ್ಕೆ ವಿರುದ್ಧವಾಗಿ ಬಯಕೆಗಳನ್ನು ಬಿಟ್ಟಾರಿಯಾಗಿ [illegible]ಮೋದಿಸಿ ಬೆಳೆಸುವುದೇ ಆಧುನಿಕ ನಾಗರಿಕತೆಯ ಪ್ರಮುಖ ಲಕ್ಷಣವಾಗಿದೆ."

"ಮನುಷ್ಯ ತನ್ನ ಆಕ್ರಮಣಕಾರೀ ದುರಾಸೆಗಳನ್ನು ಸಿದ್ಧಿಸಿಕೊಳ್ಳಲು, ತನ್ನ ಪಾಶವೀ ಹಸಿವನ್ನು ತಣಿಸಿಕೊಳ್ಳಲು ಕಾಲದೇಶಗಳನ್ನೇ ನಾಶಗೊಳಿಸಿ, ಈ ಭೂಮಿಯನ್ನು [illegible]ವರೆಗೂ ಅಪಾಯಕಾರಿಯಾಗಿ ಮುನ್ನುಗ್ಗುವುದನ್ನು ನಾವಿಂದು ಕಾಣುತ್ತಿದ್ದೇವೆ. ನಾನು [illegible]ಕೊಂಡಂತೆ ಇದೇ ಇಂದಿನ ನಾಗರಿಕತೆಯ ಉದ್ದೇಶವಾಗಿದ್ದರೆ, ನಾನು ಈ ನಾಗರಿಕತೆಯನ್ನು ಪೈಶಾಚಿಕ ನಾಗರಿಕತೆ ಎಂದು ಕರೆಯುತ್ತೇನೆ" ಎಂದು ಹತಾಶೆಯಿಂದ ನುಡಿದಿದ್ದರು. ಈ ಪೈಶಾಚಿಕ ನಾಗರಿಕತೆಗೆ ಬಹುತೇಕ ಕಾರಣವಾದ ಆಧುನಿಕ ವಿಜ್ಞಾನವನ್ನು ಸಹಸ್ರಬುದ್ಧೆ 'ಆಸುರೀ ವಿಜ್ಞಾನ' ಎಂದು ಕರೆಯುತ್ತಾರೆ.

ಗಾಂಧೀಜಿಗೆ ತಂತ್ರಜ್ಞಾನ ಪ್ರೇರಿತ ಮನುಷ್ಯನ ಕೊಳ್ಳುಬಾಕ ಮನೋಭಾವದಲ್ಲೇ ಬಲವಾಗಿ ಬೇರೂರಿದ ಕೊಳ್ಳುಬಾಕ ಸಂಸ್ಕೃತಿಯ ಪ್ರಳಯಾಂತಕ ಮುಖದ ಅರಿವಿತ್ತು. ಇಂದಿನ [illegible] ಸಂಸ್ಕೃತಿಯನ್ನು ಹುಟ್ಟು ಹಾಕುವಲ್ಲಿ ಪ್ರಧಾನ ಪಾತ್ರವಹಿಸಿದ ಆಧುನಿಕ ವಿಜ್ಞಾನದ ಬಗ್ಗೆ ತನಗಿದ್ದ ಅನುಮಾನಗಳಿಗೆ ಅವರಿಗೆ ವೈಜ್ಞಾನಿಕ ಪುರಾವೆ ಅಥವಾ ತರ್ಕದ ಬಲದ ಹಂಬಲ ಬೇಕಿರಲಿಲ್ಲ. ಅವರ ಮೇಲೆ ಅತ್ಯಂತ ಪ್ರಭಾವ ಬೀರಿದ "ತೇನ ತ್ಯಕ್ತೇನ ಭುಂಜೀಥಾಃ" (ಈ ಭೂಮಿ ಯಾರಿಗೂ ಸೇರಿದ್ದಲ್ಲ ನಿನ್ನ ಅಗತ್ಯಕ್ಕೆ ತಕ್ಕಷ್ಟೇ ಈ ಭೂಮಿಯ ಸಂಪತ್ತನ್ನು ಬಳಸಿಕೊಂಡು ತ್ಯಾಗದಿಂದ ಬದುಕು) ಎಂಬ ಯಾಜ್ಞವಲ್ಕ್ಯರ ನುಡಿಯ ಹಿನ್ನೆಲೆಯಲ್ಲಿ ಸಾಮಾನ್ಯ ಜೀವನಾನುಭವದಿಂದ ಕಂಡುಕೊಂಡ ಒಳನೋಟ ಅದು.

ಕಲ್ಪಿತ ಪ್ರಗತಿಯ ನೆಪದಲ್ಲಿ ನಾವು ನಮ್ಮ ಸುತ್ತಲೂ ಇಂದು ಸೃಷ್ಟಿಸುತ್ತಿರುವ ನರಕಕ್ಕೆ ಆದರದೇ ಆದ ಮೋಡಿಮಾಡುವ ಅಭಿವೃದ್ಧಿ ತರ್ಕಗಳಿವೆ, ಸಿದ್ಧಾಂತಗಳಿವೆ. ಈ ತರ್ಕ, ಜಗತ್ತಿನಲ್ಲಿ ಎರಡು ಪರಸ್ಪರ ವಿರೋಧಿ ಬಣಗಳನ್ನೇ ಸೃಷ್ಟಿಸಿದೆ. ಬೃಹತ್ ಉದ್ಯಮದಾರರು, ರಾಜಕಾರಣಿಗಳು ಒಂದೆಡೆ - ರೈತಾಪಿ ವರ್ಗ, ಸಣ್ಣ ಕೈಗಾರಿಕೆ ಮತ್ತು ಗ್ರಾಮೀಣ ಕಸುಬು ಉಪಕಸುಬುಗಳ ವರ್ಗ ಇನ್ನೊಂದೆಡೆ; ಕೈಗಾರಿಕಾ ಸಮಾಜ, ಅಕ್ಷರಸ್ಥ ಪೇಟೆಯ ಜನ ಒಂದೆಡೆ – ವಿಶಾಲ ಗ್ರಾಮೀಣ ಸಮಾಜ, ಅನಕ್ಷರಸ್ಥ ಹಳ್ಳಿಗರು ಇನ್ನೊಂದೆಡೆ; ಇಂಟರ್‌ನೆಟ್ ಗ್ರಾಹಕರು ಒಂದೆಡೆ- ಇನ್ನೂ ಅರಬೆತ್ತಲೆಯಾಗಿ ಬದುಕುವ ಅನಿವಾರ್ಯತೆಯಿರುವ ಗುಡ್ಡಗಾಡು ಜನಾಂಗ ಇನ್ನೊಂದೆಡೆ - ಈ ರೀತಿ ಜಗತ್ತಿನ ಇತಿಹಾಸ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಸಮಸ್ತ ಜನಾಂಗವೇ ಇಬ್ಭಾಗವಾಗುತ್ತಿದೆ; ಈ ಎರಡು ವರ್ಗಗಳ ನಡುವೆ ಆಳವಾದ ಸ್ಪಷ್ಟ ಬಿರುಕು ಕಾಣುತ್ತಿದೆ. ಈ

ಬಿರುಕಿಗೆ ಮೂಲಕಾರಣ ಯಂತ್ರ (machine) ಎಂದು ಗಾಂಧೀಜಿಯವರ ಬಲವಾದ ನಂಬಿಕೆ. ಸಹಸ್ರಬುಧೆ, ಸಹಸ್ರದೃಷ್ಟಾಂತಗಳಿಂದ ಇದನ್ನು ಸಮರ್ಥಿಸುತ್ತಾರೆ.

ಗಾಂಧೀಜಿ, ಆಧುನಿಕ ವಿಜ್ಞಾನ ಬೆಳೆಸಿದ ಚಿಂತನ ಕ್ರಮಕ್ಕೆ ಪರ್ಯಾಯವಾಗಿ ತನ್ನ ಚಿಂತನೆಯನ್ನಿಡುವುದಿಲ್ಲ. ಸ್ವವಿಮರ್ಶೆಯ ಪರಿಕಲ್ಪನೆಯೇ ಇಲ್ಲದ, ವಿಶ್ವನಿಯತಿಯ ಬಗ್ಗೆ ತಟಸ್ಥ ಧೋರಣೆ ತಳೆಯುವ, ಮಾತ್ರವಲ್ಲದೆ ಆ ನಿಯತಿಯನ್ನು ಸತತ ಭಂಗಪಡಿಸುವುದರ ಸಮರ್ಥನೆಗೇ ತನ್ನ ತರ್ಕವನ್ನು ಬೆಳೆಸಿಕೊಂಡ ಆಧುನಿಕ ವಿಜ್ಞಾನಕ್ರಮವನ್ನೇ ಸಾರಸಗಟಾಗಿ ತಿರಸ್ಕರಿಸುವ ಮೂಲಕ ವಿಜ್ಞಾನಕ್ಕೆ ಮೂಲಭೂತ ಸವಾಲನ್ನೆಸೆಯುತ್ತಾರೆ; ಮತ್ತು ವಿಶ್ವಋತಕ್ಕೆ ಸಮ್ಮುಖವಾದ ಚಿಂತನಾಕ್ರಮವನ್ನು ತನ್ನ ಬದುಕಿನ ಮೂಲಕವೇ ಹಣೆಯುತ್ತಾರೆ.

ಇಷ್ಟೆಂದಾಗಲೂ, ಗಾಂಧೀಜಿಯನ್ನು ಯಂತ್ರ ವಿರೋಧಿಯೆಂದು ಪರಿಗಣಿಸುವುದು ಸಮಂಜಸವಲ್ಲ. ಗಾಂಧೀಜಿಯೇ ಒಮ್ಮೆ," ನಾನು ಹೇಗೆ ಯಂತ್ರ ವಿರೋಧಿಯಾಗಲಿ? ಈ ಮಾನವ ದೇಹವೇ ಒಂದು ಯಂತ್ರವಲ್ಲವೇ ?" ಎಂದಿದ್ದರು. ಚರಕ, ರಾಟೆ, ಹೊಲಿಗೆಯಂತ್ರ, ಕುಂಬಾರನ ಚಕ್ರಕ್ಕೆ ಅಳವಡಿಸಿದ ಯಂತ್ರವೇ ಮೊದಲಾದ ಮನುಷ್ಯನ ಕೈಗಳನ್ನು ಬಲಪಡಿಸಿ ಅವನ ಸಾಮರ್ಥ್ಯ ವೃದ್ಧಿಪಡಿಸುವ, ಅವನ ಕಸುಬನ್ನು ಬುಡಮೇಲು ಮಾಡದೆ ಆತನ ಏಕತಾನತೆಯ ದೈಹಿಕ ಶ್ರಮವನ್ನು ಒಂದಿಷ್ಟು ಕಡಿಮೆಗೊಳಿಸುವ ಯಂತ್ರಗಳನ್ನು ಅವರು ಸ್ವಾಗತಿಸುತ್ತಾರೆ. ಈ ಪರಂಪರಾಗತ ಯಂತ್ರಗಳು ವಿಶ್ವನಿಯತಿಗೊಳಪಟ್ಟೇ ಮನುಷ್ಯನ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಸಹಕಾರಿಯಾಗಿ ಕೆಲಸ ಮಾಡುತ್ತವೆ. ಆದರೆ ಮನುಷ್ಯನನ್ನೇ ಪದಚ್ಯುತಿಗೊಳಿಸಿ ತಾನು ಆ ಸ್ಥಾನವನ್ನು ಆಕ್ರಮಿಸುವ ಯಂತ್ರಗಳನ್ನು, ಅಥವಾ ಮನುಷ್ಯನ ಬದುಕಿನ ವೇಗ, ರಭಸಗಳನ್ನು ಅತಿಯಾಗಿ ಹೆಚ್ಚಿಸಿ ಪ್ರಕೃತಿನಿಯಮಗಳನ್ನೇ ತುಂಡರಿಸುವ ಯಂತ್ರಗಳನ್ನು ವಿರೋಧಿಸುತ್ತಾರೆ. ಆಧುನಿಕ ವಿಜ್ಞಾನದ ಅನ್ವೇಷಣಾಕ್ರಮ ಮತ್ತು ಪ್ರಾಚೀನ ಸಮಾಜಗಳ ಶೋಧನೆಯ ಕ್ರಮಗಳ ನಡುವೆ ಭಿನ್ನತೆ ಇರುವುದು ಇಲ್ಲಿಯೆ. ಪರಂಪರಾಗತ ಸಮಾಜಗಳ ವಿಜ್ಞಾನದ ಅನ್ವೇಷಣೆಯಲ್ಲಿ ವಿಶ್ವದ ಋತ ವ್ಯವಸ್ಥೆಯನ್ನು ಛಿದ್ರೀಕರಿಸುವ ಯಂತ್ರಶೋಧನೆಗಳ ಬಗ್ಗೆ ಅಥವಾ ಅಂಥ ಯಂತ್ರಗಳ ಬಳಕೆಯ ಬಗ್ಗೆ ಅನೇಕ ಆಧ್ಯಾತ್ಮಿಕ ಕಟ್ಟುಪಾಡುಗಳಿದ್ದುವು. ಭಸ್ಮಾಸುರನಂತೆ ತಾನು ಕಂಡುಕೊಂಡ ಶಕ್ತಿಯ (ವೈಜ್ಞಾನಿಕ ಆವಿಷ್ಕಾರಗಳು ಕೊಡುವ ಶಕ್ತಿ) ಸ್ವಚ್ಛಂದ ಬಳಕೆಯ ಮೇಲೆ ನಿಯಂತ್ರಣವಿತ್ತು. ಈ ಅನ್ವೇಷಣೆಗಳು ನೀಡಬಲ್ಲ ಶಕ್ತಿಯ ದುರ್ಬಳಕೆಯಿಂದ ಸಂಭವಿಸಬಹುದಾದ ಅನಾಹುತಗಳ ವಿರುದ್ಧ ವಿವೇಕಯುತ ಎಚ್ಚರವಿತ್ತು. ಇವೆಲ್ಲವೂ ನೀತಿನಿಷ್ಠವಾಗಿದ್ದವು.

ಉದಾಹರಣೆಗೆ, ರಸ ವಿಜ್ಞಾನದಿಂದ ಚಿನ್ನವನ್ನು ತಯಾರಿಸುವ ಕಲೆ, ಅಥವಾ ಮಂತ್ರ, ತಂತ್ರಾಚಾರ ಮುಂತಾದ ದಕ್ಷಿಣ ಮಾರ್ಗದ ತಾಂತ್ರಿಕ ಅನುಸರಣೆಯಿಂದ ಸಿದ್ಧಿಸುವ ಅದ್ಭುತ ಸೃಷ್ಟಿ ಶಕ್ತಿಗಳಿಗೆ, ಆಯಾಯಾ ಪದ್ಧತಿಯೊಳಗಿಂದಲೇ ಅವು ಅನೈತಿಕವೆಂಬ ಹಣೆಪಟ್ಟಿಯಿತ್ತು, ನಿಷೇಧವಿತ್ತು. ಅವು ಮಾನವನ ಶ್ರೇಯಸ್ಸಿನ ಮಾರ್ಗಗಳಲ್ಲ ಎಂಬ ಪರಿಕಲ್ಪನೆಯಿತ್ತು. ಲೋಕಕ್ಕೆ ಕೇಡಾಗಬಹುದಾದ ಈ ಮಾರ್ಗವನ್ನು ವಾಮಾಚಾರ ಮಾರ್ಗ ಎಂದು ಕರೆದರು. ಇದರಿಂದ ಸಂಚಿತವಾದ ಶಕ್ತಿಯನ್ನು ಅಸುರೀ ಶಕ್ತಿ ಎಂದು ಕರೆದರು, ಮತ್ತು ಇಂಥ ಶಕ್ತಿಗಳನ್ನು ಗಳಿಸಿ ಅವನ್ನು ನೈತಿಕ ಸಂಯಮವಿಲ್ಲದೆ

ಬಳಸುವವರನ್ನು ರಾಕ್ಷಸರೆಂದು ಕರೆದರು, ಅಥವಾ 'ಯೋಗ ಭ್ರಷ್ಟ'ರೆಂದು ಸಂಭೋಧಿಸಿದರು.

ಉದಾಹರಣೆಗೆ, ಪಶ್ಚಿಮಕ್ಕೆ ಗೊತ್ತಾಗುವ ಎಷ್ಟೋ ಶತಮಾನಗಳ ಮೊದಲೇ ಚೀನಾಕ್ಕೆ 'ಗನ್‌ಪೌಡರ್'ನ ಉಪಯೋಗದ ಬಗ್ಗೆ ತಿಳಿದಿತ್ತು. ಆದರೆ ಚೀನಾ ಅದನ್ನು ಕೆಲವು ಮದ್ದುಗಳ ತಯಾರಿಗೆ ಮಾತ್ರ ಉಪಯೋಗಿಸುತ್ತಿತ್ತು. ಪಾಶ್ಚಾತ್ಯರ ಕೈಗೆ ಗನ್ ಪೌಡರ್ ಸಿಕ್ಕಿದ ಕೂಡಲೇ, ಅವರು ಅದನ್ನು ಯುದ್ಧದ ಮದ್ದುಗುಂಡು ತಯಾರಿಗೆ ಬಳಸಲು ಪ್ರಾರಂಭಿಸಿದರು. ಪೌರಾತ್ಯ - ಪಾಶ್ಚಾತ್ಯರ ನಡುವಿನ ಈ ಭಿನ್ನ ಪ್ರವೃತ್ತಿಗೆ ಕನ್ನಡಿ ಹಿಡಿದಂತೆ ೧೧ನೆಯ ಶತಮಾನದಲ್ಲಿ ಭಾರತಕ್ಕೆ ಆಗಮಿಸಿದ ವಿದೇಶೀ ಪ್ರವಾಸಿಗ (ಅಲ್ಬರೂನಿಯಿರಬೇಕು?), 'ಜಗತ್ತಿನಲ್ಲಿ ವಿಜ್ಞಾನ ಮತ್ತು ಖಗೋಳ ವಿಜ್ಞಾನಗಳಲ್ಲಿ ಮುಂದುವರಿದ ಎಂಟು ರಾಷ್ಟ್ರಗಳಲ್ಲಿ ಭಾರತವು ಮುಂಚೂಣಿಯಲ್ಲಿದೆ. ಕಾರಣ, ಭಾರತವು ವಿಜ್ಞಾನವನ್ನು ತಿಳುವಳಿಕೆಯ ನೈತಿಕ ಸಂಯಮದ ಜೊತೆ ಬೆಳೆಸಿದೆ (developed science with wisdom)' ಎಂದು ಅಂದಿನ ನೀತಿನಿಷ್ಠ ಪ್ರಗತಿ ಮೌಲ್ಯಗಳನ್ನು ಉಲ್ಲೇಖಿಸುತ್ತಾನೆ.

೧೭-೧೮ ಶತಮಾನಗಳವರೆಗೆ ಪಾಶ್ಚಾತ್ಯರಲ್ಲೂ ವಿಜ್ಞಾನದಲ್ಲಿ ಮನುಷ್ಯ - ಆತ್ಮ - ವಿಶ್ವನಿಯತಿ (man-spirit-cosmos)ಗಳ ತ್ರಿಪುಟಿಯ ಪರಿಕಲ್ಪನೆಯಿತ್ತು. ೧೮ನೆಯ ಶತಮಾನದಲ್ಲಿ, ಪಾಶ್ಚಾತ್ಯ ಜಗತ್ತಿನಲ್ಲಿ ವಿಜ್ಞಾನವು ತತ್ತ್ವಶಾಸ್ತ್ರದ ಉಪಶಾಖೆಯಾಗಿತ್ತು. ಭೌತವಿಜ್ಞಾನವನ್ನು, ಪ್ರಾಕೃತಿಕ ತತ್ತ್ವಶಾಸ್ತ್ರವೆಂದು ೧೯ನೆಯ ಶತಮಾನದ ಮಧ್ಯಭಾಗದವರೆಗೂ ಪರಿಗಣಿಸಲಾಗುತ್ತಿತ್ತು. ಗಣಿತಶಾಸ್ತ್ರವನ್ನು ಪ್ರಾಕೃತಿಕ ತತ್ತ್ವಶಾಸ್ತ್ರದಲ್ಲಿರುವ ಗಣಿತ ತತ್ತ್ವಗಳು ಎಂದು ಸಂಭೋಧಿಸಲಾಗುತ್ತಿತ್ತು. ಆದರೆ ೧೯ನೆಯ ಶತಮಾನದ ಮಧ್ಯದಲ್ಲಿ ವಿಜ್ಞಾನದಲ್ಲಿ ಮೂಡಿಬಂದ ಕ್ರಾಂತಿಕಾರೀ ಪರಿಕಲ್ಪನೆಗಳ ಫಲವಾಗಿ ೨೦ನೆಯ ಶತಮಾನದ ಹೊತ್ತಿಗೆ ವಿಜ್ಞಾನವು ತನ್ನ 'ಮೆಥೆಡ್'ನಲ್ಲೇ ತತ್ತ್ವಶಾಸ್ತ್ರದಿಂದ ನಿರ್ದಾಕ್ಷಿಣ್ಯವಾಗಿ ಬೇರ್ಪಟ್ಟಿತು. ಅದುವರೆಗಿದ್ದ 'ಪ್ರಕೃತಿಯಲ್ಲಿ ಮನುಷ್ಯ' ಎಂಬ ಅಖಂಡ ಪರಿಕಲ್ಪನೆ ಮಾಯವಾಗಿ 'ಪ್ರಕೃತಿ ಮತ್ತು ಮನುಷ್ಯ' ಎಂಬ ಬಿಡಿಬಿಡಿ ಖಂಡ ಪರಿಕಲ್ಪನೆ ಗಟ್ಟಿಗೊಂಡಿತು. ವಿಜ್ಞಾನ ಸಂಪೂರ್ಣ ನೀತಿ ಮುಕ್ತವಾಗಿ, ಅಗ್ರಪಟ್ಟವೇರಿ, ಸ್ವಚ್ಛಂದವಾಗಿ ವಿಹರಿಸಲು ಆರಂಭಿಸಿತು. ನಿಯಂತ್ರಣಾತೀತ ಸ್ವಚ್ಛಂದತೆಯೇ ಸ್ವಾತಂತ್ರ್ಯ ಎಂದು ನಂಬಿಸಲಾಯಿತು. ಇಂಥ ನೀತಿ ಮುಕ್ತ ಸ್ವಾತಂತ್ರ್ಯವನ್ನು ನಿರಾಕರಿಸುವ ಗಾಂಧೀಜಿ, ಇದಕ್ಕೆ ಎದುರಾಗಿ ತಾನು ಅಂತರ್‌ದನಿಯಿಂದ ಕಂಡುಕೊಂಡ 'ಸತ್ಯ'ವನ್ನು ಮುಂದಿಟ್ಟರು.

ತಾನು ಹುಟ್ಟು ಹಾಕಿದ ತರ್ಕದ ಮಾನದಂಡದಲ್ಲೇ ತನ್ನನ್ನು ತಾನು ನೀತಿ ಮುಕ್ತಗೊಳಿಸಿಕೊಂಡು ಸಂಯಮವಿಲ್ಲದ ಸಂಪೂರ್ಣ ಸ್ವಚ್ಛಂದತೆಯಲ್ಲಿ ಸಾಗಲು ತೊಡಗಿದ ಇಂದಿನ ಈ ಆಧುನಿಕ ವಿಜ್ಞಾನ ಪ್ರಣೀತ ನಾಗರೀಕತೆಯನ್ನೇ ಗಾಂಧೀಜಿ ಪಾಶವೀ ನಾಗರೀಕತೆಯೆಂದು ಕರೆದಿರುವುದು. ಏಕೆಂದರೆ ಆಧುನಿಕ ವಿಜ್ಞಾನವು ಕಾಲದೇಶಗಳ ಪರಿಮಿತಿಯಲ್ಲಿ ಒಂದು ಸಂಗತಿ (phenomenon) ಯ ರೂಪವನ್ನು (form) ಗ್ರಹಿಸುವುದಕ್ಕೆ ಹೆಚ್ಚು ಮಹತ್ತ್ವಕೊಡುತ್ತದೆಯೇ ವಿನಾ, ಅದರ ಅಂತರ್ ಸಂಬಂಧಿ ಅಖಂಡ ಸ್ವರೂಪ (content) ದರ್ಶನದ ಬಗ್ಗೆ ಗಮನ ಹರಿಸುವುದಿಲ್ಲ. ಅರ್ಥಾತ್, ಒಂದು ಸಂಗತಿಯನ್ನು ಕಾಲ ದೇಶದಲ್ಲಿ ಪ್ರತ್ಯೇಕವಾಗಿ ಕೂಡಿಸಿಟ್ಟು, ಅದರ ರೂಪ

ಗ್ರಹಣದಲ್ಲೇ ಮಗ್ನವಾಗಿ ಕಾಲದೇಶಗಳನ್ನು ಮೀರಿದ ವಿಶ್ವಜಾಲದ ಜೊತೆಗಿನ ಅಂತರ್-ಸಂಬಂಧ ಸಹಿತ ಆ ಸಂಗತಿಯ ಸತ್ತ್ವ (core)ವನ್ನು ಗ್ರಹಿಸಲಾರದೇ ಹೋಗುತ್ತದೆ. ಈ ರೀತಿಯ ಬಿಡಿಬಿಡಿಯಾದ ಖಂಡ ಗ್ರಹಿಕೆಯ ಯಾಂತ್ರಿಕ ದೃಷ್ಟಿಕೋನವೇ ಆಧುನಿಕ ವಿಜ್ಞಾನದ ಪ್ರಧಾನ ಸಮಸ್ಯೆಯಾಗಿದೆ. ನಾವು ಇಂದು ನಮ್ಮ ಮುಂದೆ ಕಾಣುತ್ತಿರುವ ಎಲ್ಲ ಬಿಕ್ಕಟ್ಟುಗಳೂ ಈ ವಿಜ್ಞಾನದಲ್ಲಿ ಉದ್ಭವಿಸಿದ ಬೃಹತ್ ಬಿಕ್ಕಟ್ಟಿನ ವಿಭಿನ್ನ ಮುಖಗಳಷ್ಟೇ. ಈ ಬೃಹತ್ ಬಿಕ್ಕಟ್ಟು ಮೂಲತಃ ನಮ್ಮ ಗ್ರಹಿಕೆಯ ಸಮಸ್ಯೆಯೇ ಆಗಿದೆ.

ವಿಜ್ಞಾನದ ಈ ಮುಖದ ಬಗ್ಗೆ ಅಂದೇ ಎ.ಎನ್. ವೈಟ್‌ಹೆಡ್, ಜೆ.ಡಿ. ಹಾಲ್ಡೇನ್, ಬರ್ನಾಲ್ ಮುಂತಾದವರು ತೀವ್ರ ಹತಾಶೆ, ಪ್ರತಿರೋಧ ವ್ಯಕ್ತಪಡಿಸಿದ್ದರು. ಮುಂದೆ ಕಾಪ್ರಾ, ಥಾಮಸ್ ಕುನ್, ಫೇಯರ್‌ಬೆಂಡ್, ಡೇವಿಡ್ ಬಾಮ್ ಮೊದಲಾದ ವಿಜ್ಞಾನಿಗಳೂ ವಿಜ್ಞಾನದ ಈ ಸೀಮಿತ ಖಂಡ ಗ್ರಹಿಕೆ ಮತ್ತು ಮೆಥೆಡ್‌ನ್ನು ಟೀಕೆಮಾಡಿದ್ದಾರೆ. ಸಹಸ್ರಬುಧೆ ವಿಜ್ಞಾನದ ಮಾನವೀಕಾರಣದ ಬಗ್ಗೆ ಉಲ್ಲೇಖಿಸುತ್ತಾ, ಗಾಂಧೀಜಿ ಒತ್ತುಕೊಡುವ ಮಾನವ ಆಯಾಮದ ಯಂತ್ರದ ಬಗ್ಗೆ ಪ್ರಸ್ತಾಪಿಸುತ್ತಾರೆ. ಯಂತ್ರಕ್ಕೆ ಮಾನವೀಯ ಆಯಾಮದ ಅನಿವಾರ್ಯತೆಯ ಬಗ್ಗೆ ತುಸು ನೋಡೋಣ.

* * *

ಪ್ರಕೃತಿ ತನ್ನ ಎಲ್ಲ ಕಾರ್ಯ ಚಟುವಟಿಕೆಗಳಲ್ಲೂ ಅಲ್ಪ ಪ್ರಮಾಣದಲ್ಲಿ ಶಕ್ತಿಯನ್ನು ಸಾವಧಾನವಾಗಿ ಬಿಡುಗಡೆಗೊಳಿಸುತ್ತಿರುತ್ತದೆ. ಎಲ್ಲ ಪ್ರಾಕೃತಿಕ ವಿಕಾಸ, ಬೆಳವಣಿಗೆ, ಪರಿವರ್ತನೆಗಳಲ್ಲೂ ಅಲ್ಪ ಪರಿಮಾಣದ ಶಕ್ತಿಯ ಬಿಡುಗಡೆಯಾಗುತ್ತಿರುತ್ತದೆ. ಒಮ್ಮೆಲೇ ಭಾರೀ ಪ್ರಮಾಣದ ಶಕ್ತಿ ಬಿಡುಗಡೆಗೊಂಡಾಗಲೆಲ್ಲಾ ಅದು ಭಾರೀ ಆಪತ್ತಿಗೆ ಕಾರಣವಾಗುತ್ತದೆ. ಉದಾಹರಣೆಗೆ : ಸಿಡಿಲು, ಜ್ವಾಲಾಮುಖಿ, ಭೂಕಂಪಗಳಲ್ಲಿ ಒಮ್ಮೆಲೇ ಅಪಾರ ಶಕ್ತಿ ಬಿಡುಗಡೆಗೊಂಡು ಅನಾಹುತಕ್ಕೆ ಕಾರಣವಾಗುತ್ತವೆ. ಒಮ್ಮೆಲೇ ಅಗಾಧ ಪ್ರಮಾಣದ ಶಕ್ತಿಯ ಬಿಡುಗಡೆ, ಕೆಲವು ವಿಶೇಷ ಸನ್ನಿವೇಶಗಳಲ್ಲಿ ಮಾತ್ರ ಪ್ರಕೃತಿಯ ನಿಯಮದೊಳಗೇ ನಿಸರ್ಗದ ಸಮಗ್ರ ರಕ್ಷಣೆಗಾಗಿ ಆಗುತ್ತಿರುತ್ತದೆ. ಇಂಥ ವಿದ್ಯಮಾನಗಳು ಬಹಳ ಅಪರೂಪ. ಇಂದು ಈ ಆಧುನಿಕ ವಿಜ್ಞಾನವು ಅತ್ಯಲ್ಪಕಾಲದಲ್ಲಿ ಅಗಾಧ ಪ್ರಮಾಣದ ಶಕ್ತಿಯನ್ನು ಬಯಸುವ ದಿನ ಬಳಕೆಯ ಯಂತ್ರಗಳನ್ನು ಸೃಷ್ಟಿಸಿದೆ. ರಭಸದಿಂದ ಶಕ್ತಿಯನ್ನು ಬಿಡುಗಡೆಗೊಳಿಸಿ, ರಾಕ್ಷಸ ದಕ್ಷತೆಯಿಂದ ಕೆಲಸಮಾಡುವ ಮತ್ತು ಮಾನವನಿಂದ ಮುಕ್ತಿ ಪಡೆದ ಸ್ವಯಂಚಾಲಿತ ವಾಹನಗಳು, ಮಿಕ್ಸಿ, ರೆಫ್ರಿಜರೇಟರ್, ಗ್ರೈಂಡರ್ ಮೊದಲಾದ ಉಪಕರಣಗಳು ಇದಕ್ಕೆ ಉದಾಹರಣೆಗಳು. ಈ ಉಪಕರಣಗಳು ಪ್ರಕೃತಿಯ ನಿಯಮವನ್ನು ಉಲ್ಲಂಘಿಸುವ ಮೂಲಕ, ದೀರ್ಘಾವಧಿಯಲ್ಲಿ ಮನುಷ್ಯ ಮತ್ತು ಒಟ್ಟು ವಿಶ್ವಸೃಷ್ಟಿಯ ಮೇಲೆ ತರಬಹುದಾದ ಅನಾಹುತಕಾರೀ ಪರಿಣಾಮಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಬಹುದು. 'ಮನುಷ್ಯ ಕಾರು ಕಂಡು ಹಿಡಿದ, ತನ್ನ ಕಾಲಿನ ನಡೆಯುವ ಶಕ್ತಿ ಕಳಕೊಂಡ' ಎಂಬ ಅಮೇರಿಕನ್ ಚಿಂತಕ, ಲೇಖಕ ಆರ್. ಡಬ್ಲ್ಯು. ಎಮರ್ಸನ್‌ನ ಮಾತಿನಲ್ಲಿ ಸತ್ಯಾಂಶವಿದೆ. ವಿಶ್ರಾಮ ಬದುಕಿಗೆ ಬೇಕಾದ ನೀತಿ ಮುಕ್ತ ಯಂತ್ರಗಳನ್ನು ವಿವೇಚನೆಯ

ಇಲ್ಲದೆ ಬಳಸಿಕೊಳ್ಳುವುದರ ಪರಿಣಾಮವಾಗಿ, ಮನುಷ್ಯ ಇಂದು ನಾನಾ ರೀತಿಯ ದೈಹಿಕ-ಮಾನಸಿಕ ಏವಣೆಗಳಿಗೆ, ರೋಗಗಳಿಗೆ ತುತ್ತಾಗುವುದನ್ನು ನಾವು ನೋಡುತ್ತಿದ್ದೇವೆ. ಯಂತ್ರದ ಬಳಕೆಯಿಂದ ಲಭ್ಯವಾದ ಬಿಡುವಿನ ವೇಳೆಯೇ ಇಂದು ಮನುಷ್ಯನನ್ನು ಹಿಡಿದು ನುಂಗುತ್ತಿರುವುದನ್ನು ನಾವಿಂದು ಗಮನಿಸುತ್ತಿದ್ದೇವೆ. ಏರುತ್ತಿರುವ ಹಿಂಸೆ, ಯುದ್ಧ, ಪಾತಕಗಳೂ ನಮ್ಮ ಆಧುನಿಕ ವಿಜ್ಞಾನ ಸಾಗುತ್ತಿರುವ ಕ್ರೌರ್ಯದ ಮುಖವೇ ಆಗಿದೆ. ಜಗತ್ತಿನಲ್ಲಿ ನಡೆಯುವ ಸಮಗ್ರ ವಿದ್ಯಮಾನಗಳನ್ನು, ಅವುಗಳ ಅಂತರ್ ಪ್ರಕ್ರಿಯೆಗಳ ಜೊತೆಗಿಟ್ಟು ಅಖಂಡವಾಗಿ ಗ್ರಹಿಸಿದಾಗ, ನಾವು ಪ್ರತಿಯೊಂದನ್ನು ಪಡೆಯುವಾಗಲೂ ಏನನ್ನೋ ಕಳೆದುಕೊಳ್ಳುತ್ತಿರುತ್ತೇವೆ ಎಂಬುದನ್ನು ಕಂಡುಕೊಳ್ಳದಿರೆವು. ಆದರೆ ಪಡೆಯುವುದು, ಕಳೆದುಕೊಳ್ಳುವುದಕ್ಕಿಂತ ಅಧಿಕವಾಗಿರುವವರೆಗೆ ಪ್ರಕೃತಿಯಲ್ಲಿ ಸಮತೋಲನವಿರುತ್ತದೆ. ಆದರೆ ಇಂದಿನ ಆಧುನಿಕ ವಿಜ್ಞಾನದ ಬೆಳವಣಿಗೆಯ ರೀತಿಯಲ್ಲೇ ನಾವು ಪಡೆಯುವುದಕ್ಕಿಂತ ಕಳೆದುಕೊಳ್ಳುವುದು ಹೆಚ್ಚಾಗಿ ಮನುಷ್ಯನ ಒಟ್ಟು ಪ್ರಾಪಂಚಿಕ ಬದುಕೇ 'ಅನ್‌ಸಸ್ಟೇನೇಬಲ್' ಆಗಿ ಪರಿವರ್ತನೆಯಾಗುತ್ತಿದೆ. ಇಂಥ ವಿದ್ಯೆಯನ್ನೇ ನಮ್ಮ ಪ್ರಾಚೀನರು ಅವಿದ್ಯೆ ಎಂದು ಕರೆದರು, ಸಹಸ್ರಬುಧೆ, ಅಸುರಿ ವಿದ್ಯೆ ಎಂದು ಕರೆಯುತ್ತಾರೆ. ಗಾಂಧೀಜಿ ಪಾಶವೀ ವಿದ್ಯೆ ಎಂದು ಸಂಬೋಧಿಸುತ್ತಾರೆ. ಈ ವಿದ್ಯೆ ನಮ್ಮನ್ನು ಕತ್ತಲೆಗೆ ಒಯ್ಯುತ್ತದೆ ಎಂದು ಈ ಎಲ್ಲರೂ ಎಚ್ಚರಿಸುತ್ತಾರೆ. ಇದನ್ನೆಲ್ಲಾ ಸರಿಯಾಗಿ ಗ್ರಹಿಸುವುದೇ ಪರಿಸರ ವಿಜ್ಞಾನೀಯ ಅಖಂಡ ದೃಷ್ಟಿಯಾಗಿದೆ. ಇದೇ ಆಧ್ಯಾತ್ಮ ದೃಷ್ಟಿಕೋನ ಕೂಡ.

ಇಲ್ಲಿ ನಾನು ನಮ್ಮ ಜನಾಂಗದ ಇನ್ನೊಂದು ವೈಚಾರಿಕ, ವಿಕಲ್ಪವನ್ನೂ ಉಲ್ಲೇಖಿಸಲು ಇಚ್ಛಿಸುತ್ತೇನೆ. ಆಧುನಿಕ ವಿಜ್ಞಾನ ಪಥ ಮತ್ತು ವೈಜ್ಞಾನಿಕ ಮನೋಭಾವಗಳ ನಡುವೆ ಸಾಕಷ್ಟು ಬಿರುಕಿದೆ. ಸ್ವಯಂಕೇಂದ್ರಿತ ತರ್ಕ ನಿರತವಾದ ಇಂದಿನ ವಿಜ್ಞಾನವು ಅನುಸರಿಸುತ್ತಿರುವ ಆತ್ಮಸಂಯಮವಿಲ್ಲದ ಮಾರುಕಟ್ಟೆ ಪ್ರೇರಿತ ಪಥವು ಅತ್ಯಂತ ಅವೈಜ್ಞಾನಿಕವಾದುದು. ವಿಜ್ಞಾನದ ವಿದ್ವಾಂಸನಿಗೆ ವೈಜ್ಞಾನಿಕ ಮನೋಭಾವವಿರುವುದು ಸಹಜವೆಂದು ಭ್ರಮಿಸಿ ಇಂದಿನ ಆಧುನಿಕ ಸಮಾಜ ಆತನನ್ನು ವಿಮರ್ಶಾತೀತ ಅಗ್ರಪೀಠದಲ್ಲಿ ಕೂಡಿಸಿದೆ. ಆದರೆ ವಿಜ್ಞಾನಿಗೆ ವೈಜ್ಞಾನಿಕ ಮನೋಭಾವ ಇರಬೇಕೆಂಬ ನಿಯಮವೇನಿಲ್ಲ. 'ಅನ್‌ಸಸ್ಟೇನೇಬಲ್' ಗ್ರಾಹಕ ಸಂಸ್ಕೃತಿಗೆ ವಿಜ್ಞಾನಿಗಳೂ, ಇಂದಿನ ವಿದ್ಯಾವಂತರೂ ಆಕರ್ಷಿತರಾಗುವುದನ್ನು ನಾವು ನೋಡುತ್ತಿದ್ದೇವೆ . ತನ್ನ ವಿಜ್ಞಾನದ ಸಂಶೋಧನೆಯನ್ನು ಅಣುಬಾಂಬು ತಯಾರಿಸಲು ಅಥವಾ ಜೀವ ವಿನಾಶಕ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಬಳಸಿಕೊಳ್ಳುವ ವಿಜ್ಞಾನಿಯನ್ನು ಅವೈಜ್ಞಾನಿಕ ಮನೋಭಾವದವನೆಂದೇ ಪರಿಗಣಿಸಬೇಕಾಗುತ್ತದೆ. ಹಿಂಸೆಯನ್ನು ವೃದ್ಧಿಸುವ ವೈಜ್ಞಾನಿಕ ಆವಿಷ್ಕಾರಗಳಲ್ಲಿ ರತಿಯಿರುವ ವಿಜ್ಞಾನಿಯನ್ನು ಮನುಕುಲಕ್ಕೆ ಕೇಡುಂಟುಮಾಡುವ ಧಿಮಾಕಿನ ಅವಿದ್ಯಾವಂತನೆಂದೇ ಪರಿಗಣಿಸಬೇಕಾಗುತ್ತದೆ. ಪ್ರಕೃತಿ ನಿಯಮವನ್ನು ಗೌರವಿಸುತ್ತಾ ವಿನಯದಿಂದ ಜೀವ ಪೋಷಕವಾಗಿ ಬಾಳುವುದು ವೈಜ್ಞಾನಿಕ ವಿವೇಕ. ಒಬ್ಬ ಅನಕ್ಷರಸ್ಥನಾದ ಬೇಸಾಯಗಾರನಿಗೆ ಇಂಥ ವೈಜ್ಞಾನಿಕ ವಿವೇಕವಿರಬಹುದು. 'ಚಾಪೆಯಿದ್ದಷ್ಟೇ ಕಾಲು ಚಾಚು' ಎಂಬ ಅತ್ಯಂತ ಸರಳ ಹಳ್ಳಿಯ ಗಾದೆ ಮಾತು, ಅನುಭವಜನ್ಯ ವೈಜ್ಞಾನಿಕ ವಿವೇಕದಿಂದ ಮೂಡಿಬಂದುದು. ಉದಾಹರಣೆಗೆ, ಇನ್ನೆರಡು-ಮೂರು ದಶಕಗಳಲ್ಲಿ ಭೂತೈಲ ಇಂಧನದ ದಾಸ್ತಾನು ಭೂಮಿಯಲ್ಲಿ ಬರಿದಾಗಬಹುದು ಎಂದು

ಅಂದಾಜು ಮಾಡಿದ್ದಾರೆ. ಇಂಥ ಸಂದರ್ಭದಲ್ಲಿ, ನೂರಾರು ರೀತಿಯ ಕಾರು ಮಾಡೆಲ್‌ಗಳನ್ನು ಹೊರ ತರುತ್ತಾ, ಜನರನ್ನು ಸುಳ್ಳು ಪ್ರಚಾರದಿಂದ ಮೋಡಿ ಮಾಡುತ್ತಾ, ಪ್ರತಿಯೊಬ್ಬನೂ ಒಂದು ಕಾರಿಗಿಂತ ಹೆಚ್ಚು ಕಾರನ್ನು ಖರೀದಿಸಲು ಪ್ರಚೋದಿಸುವುದು ನಿಜಕ್ಕೂ ಅವೈಜ್ಞಾನಿಕ ಪ್ರಗತಿ ಮಾದರಿ. ಇಂಥ ಬಿಕ್ಕಟ್ಟಿನಲ್ಲಿ, ನಿಜಕ್ಕೂ ಅಮೂಲ್ಯವಾದ ತೈಲ ಇಂಧನವನ್ನು ತೀರ ಅವಶ್ಯಕತೆಗಷ್ಟೇ ಬಳಸುವಂತೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಮಾತ್ರವಲ್ಲದೆ, ಸಾಧ್ಯವಿದ್ದಲ್ಲೆಲ್ಲ, ಒಬ್ಬೊಬ್ಬ ಒಂದೊಂದು ಪ್ರತ್ಯಪ್ರತ್ಯೇಕ ಕಾರು ಬಳಸುವ ಬದಲು ಸಾಮುದಾಯಿಕ ಸಾರಿಗೆ ವ್ಯವಸ್ಥೆಯನ್ನು ಪ್ರಚೋದಿಸಬೇಕು. ಇದು ವೈಜ್ಞಾನಿಕ ವಿವೇಕ. ಇರುವ ಒಂದೇ ಭೂಮಿಯ ಸಂಪನ್ಮೂಲವನ್ನು ಅವಿವೇಕದಿಂದ ಎಗ್ಗಿಲ್ಲದೆ ಬಳಸಿ ಬರಿದು ಮಾಡುವ ಮಾರುಕಟ್ಟೆ ಪ್ರೇರಿತ ಅಭಿವೃದ್ಧಿ ಪಥವೇ ಅವೈಜ್ಞಾನಿಕವಾಗಿರುವಾಗ ಇದಕ್ಕೆ ಪೂರಕವಾಗಿ ಕೆಲಸ ಮಾಡುವ ವಿಜ್ಞಾನಿಯಲ್ಲಿ ವೈಜ್ಞಾನಿಕ ವಿವೇಕ ಎಲ್ಲಿದೆ ? ಈ ದೃಷ್ಟಿಯಲ್ಲಿ ಜನಪದದ ಅನುಭವಜನ್ಯ ತಿಳುವಳಿಕೆಯ ತಳಗಟ್ಟಿನ ಮೇಲೆ ವಿಶ್ವ ನಿಯಮದೊಳಗೆನೇ ಬದುಕನ್ನು ರೂಪಿಸಿಕೊಳ್ಳುವ ಸಾಮಾನ್ಯ ಮನುಷ್ಯನ ನಿತ್ಯ ಬದುಕು, ಅದರೆಲ್ಲ ತೋರಿಕೆಯ ಕುರೂಪತೆಯ ನಡುವೆಯೂ, ವೈಜ್ಞಾನಿಕ ಮನೋಭಾವದ ಆಧಾರದಲ್ಲಿ ಹರಳುಗಟ್ಟಿದೆ ಎಂದು ನನಗನ್ನಿಸುತ್ತದೆ. ಗಾಂಧೀಜಿ ಸಾಮಾನ್ಯ ಮನುಷ್ಯನ ಬದುಕಿನಲ್ಲಿರುವ ವೈಜ್ಞಾನಿಕ ವಿವೇಕವನ್ನು ಕಂಡುಕೊಂಡು ಆ ವಿವೇಕದಲ್ಲೇ ತನ್ನ ಬದುಕನ್ನು ರೂಪಿಸಿಕೊಂಡವರು.

* * *

ವಿಜ್ಞಾನವು ಉದಾತ್ತಾರ್ಥದಲ್ಲಿ ಧರ್ಮದಂತೆ ಸತ್ಯ ಶೋಧನೆಯ ಮಾರ್ಗವಾಗಿ ಮನುಷ್ಯನ ಬಿಡುಗಡೆಯ ಮೂಲ ಆಶಯದಿಂದ ಹೊರಟಂಥದು. ಆದರೆ ಇಂದು ಧರ್ಮ ಮತ್ತು ವಿಜ್ಞಾನ - ಎರಡೂ ಸ್ವಹಿತಾಸಕ್ತಿಗಳಿಂದ ದುರ್ಬಳಕೆಗೊಳಪಟ್ಟು ತಮ್ಮ ಮೂಲಗುಣ ಕಳಕೊಂಡು ಭ್ರಷ್ಟಗೊಂಡಿವೆ. ಧರ್ಮವು ಸಾಂಸ್ಥೀಕರಣಗೊಂಡು ಮತೀಯ ಕಟ್ಟುನಿಟ್ಟಿನ ಅಂಧಾಚರಣೆಗಳಾಗಿ ಭ್ರಷ್ಟಗೊಳ್ಳುತ್ತಾ ಹೋಯಿತು. ಮುಂದೆ ಮತ - ಮತಗಳ ಮೇಲಾಟದಲ್ಲಿ ಧರ್ಮವು ಕೇವಲ ಮತೀಯ ಮೂಲಭೂತವಾದಿಗಳ ಗುಂಪಾಗಿ ಹರಳುಗಟ್ಟುತ್ತಾ ಹೋಗಿ ಜಡ್ಡಾಯಿತು. ಇತ್ತ ಹಾಲ್ಡೇನ್ ಹೇಳುವಂತೆ ವಿಜ್ಞಾನವನ್ನು ಒಂದು ತತ್ತ್ವಜ್ಞಾನೀಯ ದೃಷ್ಟಿಕೋನವೆಂದು ಪರಿಗಣಿಸದೆ, ಅದರೊಳಗೆ ಇರಲೇಬೇಕಾಗಿದ್ದ ನೈತಿಕ ನಿಯತಿಯನ್ನು ಬಿಟ್ಟುಕೊಟ್ಟದ್ದರ ಪರಿಣಾಮವಾಗಿ ವಿಜ್ಞಾನವು ತನ್ನೆಲ್ಲ ಪಾವಿತ್ರ್ಯತೆಯನ್ನು ಕಳಕೊಂಡು, ವಾಣಿಜ್ಯ ಹಿತಾಸಕ್ತಿಗಳ ಕೈಯೊಳಗೆ ಸಿಲುಕಿ, ಮನುಷ್ಯನ ಅತಿ ಸುಖಭೋಗದ ಅನೈತಿಕ ದುರಾಸೆಯನ್ನು ತಣಿಸುವ ತಂತ್ರಜ್ಞಾನವಾಗಿ ಪರಿವರ್ತಿತವಾಯಿತು. ಮುಂದೆ ಕೇವಲ ನೈತಿಕ ನಿಯಂತ್ರಣಾತೀತ ಮಾರುಕಟ್ಟೆ ಆಧಾರಿತ ಅವೈಜ್ಞಾನಿಕ ಅಭಿವೃದ್ಧಿ ಮಾದರಿಯನ್ನು ಪೋಷಿಸುವ ಸಾಧನವಾಗಿ, ಕೊನೆಯಲ್ಲಿ ಅಂತಃನಿರೀಕ್ಷಣೆಯೇ ಇಲ್ಲದ ಉಪಭೋಗವಾದ (consumerism)ವನ್ನು ಪೋಷಿಸುವ ಪಾಪದ ಕೈಂಕರ್ಯಕ್ಕಿಳಿಯಿತು. ಕನ್ಸ್ಯೂಮರಿಸಂನ ವಿಕಾರ ಮುಖವಾದ ಜಾಗತೀಕರಣವೊಂದೇ ಅಭಿವೃದ್ಧಿ ಮಾರ್ಗ ಎನ್ನುವ ಧೋರಣೆಯಿಂದ ವಿಜ್ಞಾನವೂ ತರ್ಕಾತೀತ, ಚರ್ಚಾತೀತವಾಗಿ ಒಂದರ್ಥದಲ್ಲಿ ಸರ್ವಾಧಿಕಾರ ಪ್ರವೃತ್ತಿಯ ಮೂಲಭೂತವಾದವಾಗಿಯೇ ಪರಿವರ್ತಿತವಾಯಿತೆನ್ನಬಹುದು. ಹೀಗೆ ವಿಜ್ಞಾನ

ಹುಟ್ಟುಹಾಕಿದ ಮನುಷ್ಯ ನಾಗರಿಕತೆಯ ಅಭಿವೃದ್ಧಿ ಮಾದರಿ, ತನ್ನ ಆಸಕ್ತಿಯನ್ನು ಕಾಪಾಡಿಕೊಳ್ಳಲಿಕ್ಕಾಗಿ ಜಗತ್ತನ್ನೇ ನಿಯಂತ್ರಿಸುವ, ಪ್ರಕೃತಿ ಸಹಜವಾದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವೈವಿಧ್ಯತೆಯನ್ನೇ ಹೊಸಕಿ ಹಾಕುತ್ತಿದೆ. ಸೃಷ್ಟಿಯ ಅನಂತ ವೈವಿಧ್ಯತೆಯ ಮೂಲ ಆಶಯವನ್ನೇ ವಿಕೃತಗೊಳಿಸುತ್ತಾ, ಭಂಗಪಡಿಸುತ್ತಾ, ತನಗೆ ಮ್ಯಾನೇಜ್ ಮಾಡಲು ಸಾಧ್ಯವಾಗುವಂತೆ ಕೆಲವೇ ಸಾಧ್ಯತೆಗಳ ಏಕರೂಪತೆ ಎಲ್ಲವನ್ನೂ ಪಲ್ಲಟಿಸುತ್ತಿದೆ. ತನ್ನ ಮೂಲ ಸ್ವರೂಪದಲ್ಲೇ ಈ ಮಾರುಕಟ್ಟೆ ಪ್ರೇರಿತ ಮಾಡೆಲ್, ಯಂತ್ರದ ಒಡೆಯರಾದ 'ನಾವು' ಯಂತ್ರದಿಂದ ವಂಚಿತರಾದ 'ಅವರನ್ನು' ನಿಯಂತ್ರಿಸಲು ಬೇಕಾದ ಶಕ್ತಿಯನ್ನು ತನ್ನಲ್ಲಿ ಕೇಂದ್ರೀಕೃತಗೊಳಿಸುತ್ತಿರುತ್ತದೆ. ಈ ನಿಯಂತ್ರಣಕ್ಕೆ ಅನಿವಾರ್ಯವಾದ ದಮನ, ದಬ್ಬಾಳಿಕೆಗಳಿಗೆ ಆತ್ಮರತಿ ನಿರತವಾದ ವಿಜ್ಞಾನವನ್ನು ಬಳಸಿಕೊಳ್ಳುತ್ತದೆ. ಇದಕ್ಕೆ ಮೂಲಕ ಕಾರಣ, ವಿಜ್ಞಾನದ 'ಮೆಥೆಡ್'ನಲ್ಲೇ ಸಂಯಮದ ವ್ಯಾಖ್ಯಾನ ಇಲ್ಲದಿರುವುದು.

ಇದರ ಫಲವಾಗಿ, ಮಾನವನ ಹೃದಯದ ಮೂಲದ್ರವ್ಯವಾದ ಜನಸಾಮಾನ್ಯರ ದೈನಂದಿನ ಬಾಳಿನ ನೆಮ್ಮದಿ, ಸೌಂದರ್ಯಗಳು ಹದಗೆಡುತ್ತಿವೆ. ವಿಜ್ಞಾನವು ತನ್ನ ಮೂಲಭೂತ ವೈಚಾರಿಕತೆಗಳ ಸಂಶೋಧನಾ ಶಕ್ತಿಗಳನ್ನು ಕೂಡ ತೊರೆದು ಇಂದು ತಂತ್ರಜ್ಞಾನಕ್ಕಷ್ಟೇ ಪರಿಮಿತಗೊಳ್ಳುತ್ತಿದೆ. ಕಲೆಯು ಅತಿತಾಂತ್ರಿಕತೆಯ ಭಾರದಿಂದಾಗಿ ಸೌಂದರ್ಯೋಪಾಸನೆಯ ಗುಣ ಕಳೆಕೊಂಡು ಮಾರುಕಟ್ಟೆ ಪ್ರೇರಿತ 'ಹೈಟೆಕ್' ಉತ್ಪಾದನೆಯಾಗುತ್ತಿದೆ. ವಿಜ್ಞಾನಪೂರ್ವ ನಾಗರಿಕತೆಯಲ್ಲಿ ಹಿತ - ಉಪಯುಕ್ತತೆ - ಸೌಂದರ್ಯ - ಈ ತತ್ತ್ವಗಳ ನಡುವೆ ಸುಮಾರಾಗಿ ಇದ್ದ ಸಾಮರಸ್ಯ ಕಳಚಿಹೋಗಿ, ಕೇವಲ ಮನುಷ್ಯನ ದೈಹಿಕ ಸುಖದ ಉಪಯುಕ್ತತೆಯ ಯಾಂತ್ರಿಕ ದೃಷ್ಟಿ, ಇಂದು ಸಾರ್ವತ್ರಿಕವಾಗಿದೆ. ಹಾಗಾಗಿ ಸೌಂದರ್ಯೋಪಾಸನೆಯ ನೈತಿಕ ನೆಲೆ ವಿಜ್ಞಾನದಲ್ಲಿ ನಷ್ಟವಾಗಿದೆ. ಇದರ ಪರಿಣಾಮವಾಗಿ ಪ್ರಕೃತಿಯನ್ನು ಕೇವಲ ನಿರ್ಜೀವ ಆಸ್ತಿಯಂತೆ ಮಾರುವ ಸರಕಾಗಿ ಪರಿವರ್ತಿಸಲಾಗಿದೆ. ಈ ಪ್ರಕೃತಿ ವಿರೋಧಿ ಮನೋಧರ್ಮವೇ ಆತ್ಯಂತಿಕವಾಗಿ ನೀತಿಮುಕ್ತ ಆಧುನಿಕ ವಿಜ್ಞಾನದ ಬಳುವಳಿ. ಹಾಗಾಗಿಯೇ ಸಹಸ್ರಬುಧೆ ಇದನ್ನು ಅಸುರೀ ವಿಜ್ಞಾನ ಎಂದು ಸಂಬೋಧಿಸುತ್ತಾರೆ. ವಿಶ್ವನಿಯತಿಯ ಲಯದ ಜೊತೆ ಮೇಳೈಸಿಕೊಂಡು ಮುಂದೆ ಸಾಗುವಂತೆ ತನಗೆ ತಾನೇ ನೈತಿಕ ಆಯಾಮವನ್ನು ಕೊಟ್ಟುಕೊಳ್ಳಲು ಬೇಕಾದ ಸೌಲಭ್ಯ, ಸಲಕರಣೆಗಳೇ ಆಧುನಿಕ ವಿಜ್ಞಾನದ 'ಮೆಥೆಡ್'ನಲ್ಲಿ ಇಲ್ಲದಿರುವುದರಿಂದಲೇ ಇದು ಅಸುರೀ ವಿಜ್ಞಾನ.

ಇದರರ್ಥ, ಎಲ್ಲ ವಿಕಾಸ, ಅಭಿವೃದ್ಧಿ, ಮಾನವನ ಸೃಷ್ಟಿಶೀಲತೆಯನ್ನೇ ಕಡೆಗಣಿಸುವುದೆಂದಲ್ಲ; ಬದಲಿಗೆ, ಯಂತ್ರವು ವಿಶ್ವನಿಯತಿಗೊಳಪಟ್ಟೇ ಅತ್ಯಂತ ದಕ್ಷತೆಯಿಂದ ಜೀವ ಪೋಷಕವಾಗಿ, ಪರಿಪೂರ್ಣ ಲೋಕಕಲ್ಯಾಣಕ್ಕೆ ಪೂರಕವಾಗಿ ಕೆಲಸ ನಿರ್ವಹಿಸಬಲ್ಲುದು ಎಂಬ ತಿಳುವಳಿಕೆ. ನಿಜಕ್ಕೂ, ಮನುಷ್ಯನ ಸೃಷ್ಟಿಶೀಲತೆಯ ಪರಿಪೂರ್ಣ ವಿಕಾಸ ವಿಶ್ವನಿಯತಿಯೊಳಗೆ ಮಾತ್ರ ಸಾಧ್ಯ. ಆಧುನಿಕ ವಿಜ್ಞಾನವು ಪ್ರಕೃತಿ ಸಹಜ ಋತವನ್ನು ಭಂಗಪಡಿಸುವುದರಿಂದ, ವೈವಿಧ್ಯತೆಯ ಸೃಷ್ಟಿ ಕಣ್ಮರೆಯಾಗಿ, ವಿಕೃತಿಯ ಹಾದಿ ಹಿಡಿಯುತ್ತದೆ. ಇಂದಿನ ಯಂತ್ರಯುಗವು ತನ್ನ ಅತಿ ವಿಜೃಂಭಿತ ಸಾಧನೆಯಿಂದ ತತ್‌ಕ್ಷಣಕ್ಕೆ ಕಣ್ಣು ಕೋರೈಸುವಂತೆ ಹೊಳೆಯಬಹುದು. ಆದರೆ

ದೀರ್ಘಾವಧಿಯಲ್ಲಿ ಅದು ಸಾಧಿಸುವುದಕ್ಕಿಂತ ಕಳೆದುಕೊಳ್ಳುವುದೇ ಹೆಚ್ಚಾಗಿ, ಆರುವ ನಂದಾದೀಪವಾಗಬಹುದು. ಒಟ್ಟು ಲಾಭ ನಷ್ಟಗಳ ತಖ್ತೆಯನ್ನು ತಯಾರಿಸಿದಾಗ ನಷ್ಟದ ಖಾತೆಯೇ ಹೆಚ್ಚು ಎಂಬುದನ್ನು ನಾವು ನಮ್ಮ ಕಣ್ಮುಂದೆಯೇ ಇಂದು ಕಾಣುತ್ತಿದ್ದೇವೆ.

* * *

ಆಧುನಿಕ ವಿಜ್ಞಾನದ ನೋಟದ ಕ್ರಮದಲ್ಲೇ ಅಂತರ್ಗತವಾಗಿರುವ ಪ್ರಭುತ್ವದ ಭಾಷೆ, ಸಂಕೇತ, ಆಕೃತಿ, ಪ್ರಕ್ರಿಯೆಗಳ ಪ್ರತಿರೋಧಾತ್ಮಕ ನೆಲೆಯನ್ನು ನಾವು ಎಲ್ಲಿ ಕಂಡುಕೊಳ್ಳಬಹುದು? ಇದಕ್ಕೆ ಗಾಂಧೀಜಿಯ ಪುನರವಲೋಕನ ಒಂದು ಉತ್ತಮ ಮಾರ್ಗ ಎಂದು ನನ್ನ ನಂಬಿಕೆ. ಗಾಂಧೀಜಿ ಪ್ರತಿನಿಧಿಸುವ ಸಾಮಾನ್ಯರ ವರ್ತಮಾನದ ಬದುಕಿನ ಮೌಲ್ಯಗಳ ಗಟ್ಟಿ ನೆಲೆಯಿಂದ ಆಧುನಿಕ ವಿಜ್ಞಾನಕ್ಕೆ ಪ್ರತಿರೋಧಾಕೃತಿಯು ಹಾಜರಾಗಬಲ್ಲುದು. ಆಧುನಿಕ ವೈಜ್ಞಾನಿಕ ಲೋಕದೃಷ್ಟಿಯು ನಿರ್ಮಿಸುತ್ತಿರುವ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಗೊಂದಲಕ್ಕೆ ಸಾಮಾನ್ಯರ ಕಾಯಕದ ಬದುಕಿನ ಬತ್ತದ ನೆಲೆಗಳನ್ನು ಸಂದರ್ಶಿಸಿ ಅದರಲ್ಲಿ ಅಡಕವಾಗಿರುವ ತತ್ತ್ವವನ್ನು ಯಾವುದೇ ಪೂರ್ವಾಗ್ರಹವಿಲ್ಲದೆ ಮರುವಿಮರ್ಶೆಗೊಡ್ಡಬೇಕು. ಗಾಂಧೀಜಿ ಬ್ರಿಟಿಷರ ವಿರುದ್ಧ ತನ್ನ ಪ್ರತಿರೋಧದ ಆಕೃತಿಗಳಾಗಿ ಚರಕ, ಖಾದಿ, ಉಪ್ಪು, ಉಪವಾಸ ವ್ರತ, ಬಡತನದ ಸ್ವಂತ ಆಯ್ಕೆ, ಮಿತಶೀಲ ಸರಳ ಬದುಕು, ಮುಂತಾದುವುಗಳ ಆಯ್ಕೆಗಾಗಿ ಮತ್ತೆ ಮತ್ತೆ ಸಾಮಾನ್ಯ ಜನರ ಲೋಕವಿದ್ಯೆಗೆ ಮರಳುತ್ತಿದ್ದರಲ್ಲಾ, ಆ ನೆಲೆಗಟ್ಟಿನಲ್ಲೇ ಜಾಗತಿಕ ಶಕ್ತಿಗಳನ್ನೂ ದಂಗುಪಡಿಸುವ ಶಕ್ತಿಗಳಿವೆ.

ಗಾಂಧೀಜಿ ತನ್ನ ಬದುಕಿನ ಮೂಲಕ, ಬಲ, ಅಹಮಿಕೆ ದಬ್ಬಾಳಿಕೆಗಳನ್ನು ಸಂಪೂರ್ಣ ನಿರಾಕರಿಸುತ್ತಾರೆ. ೨೦-೨೧ನೆಯ ಶತಮಾನದ ಆಧುನಿಕ ವೈಜ್ಞಾನಿಕ ಜಗತ್ತು, ಬಲದ ಆರಾಧಕರಾಗಿರುವಾಗ ಗಾಂಧಿ ನಿರ್ಬಲತೆಯನ್ನು ಆರಾಧಿಸುತ್ತಾರೆ. ಗಾಂಧಿಯ ಲೋಕ ನಿಶ್ಶಕ್ತರ ಲೋಕ, ದುರ್ಬಲರ ಲೋಕ, ಜನಸಾಮಾನ್ಯರ ಲೋಕ. ಈ ಲೋಕದ ಸತ್ವದಿಂದಲೇ ತಮ್ಮ ಬದುಕನ್ನು ರೂಪಿಸಿಕೊಂಡವರು. ಗಾಂಧೀಜಿ ದುರ್ಬಲರನ್ನು ಬಲಪಡಿಸುವ ಕ್ರಿಯೆಯಲ್ಲಿ ನಿರತರಾಗಿದ್ದವರು. ಹೆಣ್ತನದ ಲಾಲನೆ-ಪಾಲನೆ, ಪೋಷಣೆ, ಸೈರಣೆಯ ಅಂಶ ಗಾಂಧಿಯ ಜೀವನದಲ್ಲಿ ಪ್ರಮುಖ ಲಕ್ಷಣವಾಗಿತ್ತು. ಗಂಡು ದರ್ಪದ ಆಧುನಿಕ ವಿಜ್ಞಾನ ಪ್ರೇರಿತ ಆಕ್ರಮಣಕಾರೀ ಬದುಕಿಗೆ ತನ್ನ ಹೆಣ್ತನದ ಜೀವ ಸಂರಕ್ಷಕ ಮೌಲ್ಯಗಳನ್ನು ಮುಖಾಮುಖಿಯಾಗಿ ನಿಲ್ಲಿಸಿದವರು ಅವರು.

ಈ ದೇಹ ಮತ್ತು ದೇಹಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಗಾಂಧಿ ಬಹಳ ಮಹತ್ತ್ವ ಕೊಡುತ್ತಿದ್ದರು. ದೇಹದ ಶುಚಿ, ಲಾಲನೆ - ಪಾಲನೆ, ಆಹಾರ ಮುಂತಾದ ದೈನಂದಿನ ಸಾಮಾನ್ಯ ವಿಷಯಗಳು ಗಾಂಧಿ ಸದಾ ಹಚ್ಚಿಕೊಂಡಿದ್ದ ಕಾಳಜಿಗಳಾಗಿದ್ದವು. ಒಬ್ಬ ನೇತಾರನಿಗೆ ಕ್ಷುಲ್ಲಕವೆನಿಸಬಹುದಾದ ತಿನ್ನುವುದರಿಂದ ಹಿಡಿದು ಮಲವಿಸರ್ಜನೆಯ ವರೆಗಿನ ದೈನಂದಿನ ಕ್ರಿಯೆಗಳಿಗೆಲ್ಲಾ ಗಾಂಧೀಜಿ ಬಹಳ ಮಹತ್ತ್ವ ಕೊಡುತ್ತಿದ್ದರು. ಕ್ವಿಟ್ ಇಂಡಿಯ ಚಳವಳಿ, ಉಪ್ಪಿನ ಸತ್ಯಾಗ್ರಹಗಳಂತಹ ದೇಶವ್ಯಾಪೀ ಸ್ವಾತಂತ್ರ್ಯ ಸಂಗ್ರಾಮದ ಚಳವಳಿಗಳ ಜೊತೆ ಜೊತೆಯೇ ಗಾಂಧಿ ಯಾವ ಆಹಾರ ತಿಂದರೆ ಸುಲಭದಲ್ಲಿ ಮಲವಿಸರ್ಜನೆ ಆಗುತ್ತದೆ, ಯಾವ ಆಹಾರ ಬೇಯಿಸಿದಾಗ

ಅದು ಒದಗಿ ಬಡವನಿಗೆ ಅಗ್ಗದಲ್ಲಿ ಹೊಟ್ಟೆ ತುಂಬುತ್ತದೆ, ಅಕ್ಕಿ ತೌಡಿನಿಂದ ಗಂಜಿ - ಪಾನಕ ಮಾಡುವುದು ಹೇಗೆ ಎಂಬೆಲ್ಲ ವಿಷಯಗಳ ಬಗ್ಗೆ ಕೂಡ ಯೋಚಿಸುತ್ತಿದ್ದರು; ಮಾತ್ರವಲ್ಲ, ಅದರಲ್ಲಿ ಪ್ರಯೋಗ ನಡೆಸುತ್ತಿದ್ದರು. ಹಸಿವಿಲ್ಲದವನಿಗೆ ಇವೆಲ್ಲಾ ತಲೆತಿರುಕತನ (cranky idea) ಎಂದೆನಿಸಬಹುದು. ಹಸಿವಲ್ಲೇ ಬದುಕುವ ಅಸಂಖ್ಯ ಜನರಿಗೆ ಈ ಯೋಚನೆಗಳು ಬಹಳ ಪ್ರಸ್ತುತವಾಗಿ ಬಿಡುತ್ತವೆ.

ಆಹಾರದ ಜೊತೆ, ಸಾಮಾನ್ಯರ ಆರೋಗ್ಯದ ಬಗ್ಗೆಯೂ ಗಾಂಧೀಜಿಗೆ ಕಾಳಜಿಯಿತ್ತು. ನೀರಿನ ಚಿಕಿತ್ಸೆ, ಮಣ್ಣಿನ ಚಿಕಿತ್ಸೆ, ಇತರ ನೈಸರ್ಗಿಕ ಚಿಕಿತ್ಸೆ - ಹೀಗೆ ಬಡವರಿಗೆ ಎಟಕಬಹುದಾದ ಅಗ್ಗದ ಚಿಕಿತ್ಸಾ ಕ್ರಮಗಳ ಬಗ್ಗೆ ಗಾಂಧೀಜಿ ಪ್ರಯೋಗಗಳನ್ನು ಮಾಡುತ್ತಿದ್ದರು. ಶ್ರೀಮಂತನಿಗೆ ಮಾತ್ರ ಎಟಕುತ್ತಿದ್ದ 'ಅಲೋಪತಿ' ವೈದ್ಯ ಪದ್ಧತಿಯನ್ನು ಬಳಸುವವನಿಗೆ ಅಗ್ಗದ ನೈಸರ್ಗಿಕ ಚಿಕಿತ್ಸೆಯು ಮನುಷ್ಯನ ಘನತೆಯನ್ನೇ ಬಗ್ಗು ಬಡಿಯುವ ರಾಕ್ಷಸಯಂತ್ರಗಳ ಬಲದ ನಿರಾಕರಣೆಯ ಸಂಕೇತವೇ ಆಗಿದೆ.

ಗಾಂಧೀಜಿ ಇವೆಲ್ಲವನ್ನೂ ಸ್ವಾತಂತ್ರ್ಯ ಚಳವಳಿಯ ಮುಂಚೂಣಿಯಲ್ಲಿದ್ದುಕೊಂಡೂ, ಅಷ್ಟೇ ಗಂಭೀರವಾಗಿ ಪರಿಗಣಿಸುತ್ತಾರೆ. ದನಗಳಿಗೆ ಹುಲ್ಲು ಹಾಕುತ್ತಿರುವಾಗ ಹಟ್ಟಿಯಲ್ಲೇ ಮಹತ್ತ್ವದ ರಾಜಕೀಯ ಚರ್ಚೆಗಳನ್ನೂ ಮಾಡುತ್ತಾರೆ. ದನಕ್ಕೆ ಹುಲ್ಲು ಹಾಕುವುದು, ಅಕ್ಕಚ್ಚು ಇಡುವುದು ಮುಂತಾದ ದೈನಂದಿನ ಬದುಕಿನ ಸಾಮಾನ್ಯ ಕ್ರಿಯೆಗಳೂ ಗಾಂಧೀಜಿಗೆ ಸ್ವಾತಂತ್ರ್ಯ ಚಳವಳಿಯಷ್ಟೇ ಪ್ರಮುಖ ಸಂಗತಿಗಳಾಗಿದ್ದವು. ಜನ ಸಾಮಾನ್ಯರ ಬದುಕನ್ನು ಪುನರ್‌ರಚಿಸಿ ಬ್ರಿಟಿಷರ ವಿರುದ್ಧ ಕೇಂದ್ರ ಸ್ಥಾನದಲ್ಲಿ ಕೂಡಿಸುವ ಕ್ರಿಯೆಯೂ ಸ್ವಾತಂತ್ರ್ಯ ಚಳವಳಿಯಷ್ಟೇ ಮುಖ್ಯವಾಗಿತ್ತು.

ಗಾಂಧೀಜಿ ಈ ದೇಶವನ್ನು ಕೇವಲ ರಾಷ್ಟ್ರವನ್ನಾಗಿ ನೋಡುತ್ತಿರಲಿಲ್ಲ, ಏಕಕಾಲದಲ್ಲಿ ದೇಶವನ್ನು ರಾಷ್ಟ್ರವನ್ನಾಗಿಯೂ ಸಮಾಜವನ್ನಾಗಿಯೂ ಗ್ರಹಿಸುತ್ತಾ, ವಿದೇಶಿ ಆಳ್ವಿಕೆಯಿಂದ ರಾಷ್ಟ್ರ ಮುಕ್ತಿಯ ಜೊತೆ, ಸಮಾಜವನ್ನು ಸಾಮಾಜಿಕ ಅನಿಷ್ಟಗಳಿಂದೆಲ್ಲ ಆಂತರಿಕವಾಗಿ ಮುಕ್ತಗೊಳಿಸುವ ಬಗ್ಗೂ ಕೆಲಸ ಮಾಡುತ್ತಿದ್ದರು. ಅಸ್ಪೃಶ್ಯತೆ, ಸ್ತ್ರೀಯರ ಮೇಲಿನ ದಬ್ಬಾಳಿಕೆ ಮಂತಾದ ಪಿಡುಗಿನ ವಿರುದ್ಧವೂ ಹೋರಾಡುತ್ತಿದ್ದರು. ಅದಕ್ಕಾಗಿ, ಅವರು ಜನಸಾಮಾನ್ಯರ ಸಾಮಾನ್ಯ ಬದುಕಿನೆಡೆಗೆ ಮತ್ತೆ ಮತ್ತೆ ಹೊರಳಿಕೊಳ್ಳುತ್ತಿದ್ದರು. ಪರಂಪರಾಗತವಾಗಿ ಹರಿದುಬಂದ ಜನಸಾಮಾನ್ಯರ ಮೌಲ್ಯಗಳಾದ ಅಸ್ವಾದ, ಋತಶೀಲ ಸರಳ ಬದುಕು, ಅಹಿಂಸೆ, ಸತ್ಯ, ಮುಂತಾದ ಅನೇಕ ಧಾರ್ಮಿಕ ತತ್ತ್ವಗಳನ್ನು ಗಾಂಧೀಜಿ ಅನುಷ್ಠಾನ ಮಾಡುವ ಮೂಲಕ ಈ ಮೌಲ್ಯಗಳಲ್ಲಿ ಆಧುನಿಕ ವಿಜ್ಞಾನ ಮತ್ತು ಮಾರುಕಟ್ಟೆ ಆರ್ಥಿಕತೆ ಹುಟ್ಟುಹಾಕಿದ ಅತಿರಾವಿನ ಗ್ರಾಹಕ ಸಂಸ್ಕೃತಿಗಳ ವಿರುದ್ಧ ಪ್ರತಿರೋಧದ ವಿದ್ರೋಹೀ ನೆಲೆಯನ್ನು ಕಂಡುಕೊಂಡರು.

ಜನಸಾಮಾನ್ಯರ ದೈನಂದಿನ ಬದುಕಿನ ಮೌಲ್ಯಗಳು ಮಾತ್ರ ನಿರಂತರ ಅಭಿವೃದ್ಧಿ (ಸಸ್ಟೇನೆಬಲ್)', ಸಮಷ್ಟಿ ಕಲ್ಯಾಣ, ಸಮಗ್ರ ಹಿತಕ್ಕೆ ಪೂರಕವಾಗಲು ಸಾಧ್ಯ ಎಂಬುದನ್ನು ಗಾಂಧೀಜಿ ಅರಿತುಕೊಂಡಿದ್ದರು. ಈ 'ಸಸ್ಟೇನೆಬಲ್' ಸಮುದಾಯಗಳ ವೈಜ್ಞಾನಿಕ ಮನೋಭಾವದ ಬದುಕಿನ ಸಂರಚನೆಗಳು ನಾವು ಇಂದು ಬದುಕುತ್ತಿರುವ, ಅವೈಜ್ಞಾನಿಕ ಮನೋಭಾವದ ಮೇಲೆಯೇ ನಿಂತಿರುವ

'ಅನ್ ಸಸ್ಟೇನೆಬಲ್' ಸಮುದಾಯಗಳ ಬದುಕಿನ ಸಂರಚನೆಗಿಂತ ಆಶಯ -ಆಕೃತಿಗಳೆರಡರಲ್ಲೂ ತೀರ ಭಿನ್ನ. 'ಅನ್‌ಸಸ್ಟೇನೆಬಲ್' ಸಮುದಾಯಗಳಿಗೆ ಸತ್ಯವು ವಿಜ್ಞಾನದ ಅನ್ವೇಷಣೆಯಂತೆ ಹೊರಗಿನಿಂದ ಅರಸುವ ಸಂಗತಿಯಾದರೆ, ಸಾಮಾನ್ಯ ಜನ ಸಮುದಾಯಗಳು ಸತ್ಯವನ್ನು ತಮ್ಮ ಬದುಕಿನ ಜೀವಶಕ್ತಿಯ ಮೂಲಕವೇ ಸತತವಾಗಿ ಬೇಕಾದಂತೆ ಕಟ್ಟುತ್ತಾ (construct), ಮುರಿಯುತ್ತಾ (deconstruct) ವರ್ತಮಾನದ ಜೀವಂತಿಕೆಯಲ್ಲೇ ರೂಪಿಸುತ್ತಿರುತ್ತವೆ. ಇದು ನಿಜ ಸಂತರ ಪರಂಪರೆ. ಇದೇ ಗಾಂಧಿಯ ಪರಂಪರೆಯೂ ಆಗಿತ್ತು. ಅವರು ಅದನ್ನು ತಮ್ಮ ಬದುಕಿನ ಕ್ರಮದಲ್ಲೇ ಸಾಧಿಸುತ್ತಾರೆ. ಇಂಥ ಸಮುದಾಯಗಳ ಬದುಕಿನ ಸತ್ಯದ ರಚನೆ, ಪುನರ್‌ರಚನೆಯ ಮೂಲಕ ಈ ಜೀವನ ತತ್ತ್ವ, ಆಧುನಿಕ ವಿಜ್ಞಾನದ ಆಸುರೀ ವೃತ್ತಿಯಿಂದ ಉದ್ಭವಿಸಿದ ಜಾಗತೀಕರಣದಂಥ 'ಅನ್‌ಸಸ್ಟೇನೆಬಲ್' ಮಾದರಿಗೆ ಪ್ರಬಲ ಸವಾಲಾಗಬಲ್ಲದು.

ಕೃಷಿಕರು, ಕೈಕಸುಬುದಾರರು, ದಲಿತರು, ಗಿರಿಜನರು, ಮಹಿಳೆಯರು ಮುಂತಾದ ದೇಶೀ ಸಮಾಜಗಳ ಮತ್ತು ಮೂಲನಿವಾಸಿಗಳ ಜೀವನದರ್ಶನದಲ್ಲಿ ಅಡಕವಾಗಿರುವ ಶತಮಾನಗಳಿಂದ ದತ್ತವಾಗಿ ಹರಿದು ಬಂದಿರುವ ವೈವಿಧ್ಯಮಯ ಹಾಗೂ ಸಂಚಿತ ಅನುಭವಜನ್ಯ ಜ್ಞಾನ ಸಂಪನ್ಮೂಲಗಳನ್ನು ನಾವು ಈ ನೆಲದ 'ಜನಪದೀಯ ಜ್ಞಾನ ಭಂಡಾರ' (peoples' accumulated experiencial knowledge base) ಅಥವಾ 'ಜನಾಂಗೀಯ ಪ್ರತಿಭೆ' ಎಂದು ಕರೆಯಬಹುದು. ಇದನ್ನೇ ಸಹಸ್ರಬುಧೆ ಸೂತ್ರೀಕರಿಸಿ 'ಲೋಕ ವಿದ್ಯೆ' ಎಂದು ಕರೆಯುತ್ತಾರೆ. ವಿಶ್ವವಿದ್ಯಾಲಯಗಳ ಶೈಕ್ಷಣಿಕ ಹಣೆಪಟ್ಟಿಯ ಹಂಗಿಲ್ಲದ ಜನಪದದ ಪ್ರಾದೇಶಿಕ ತಿಳುವಳಿಕೆಯ ಮೊತ್ತವಾದ ಈ ಪಾರಂಪರಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ಜೀವಂತ ನೆಲೆಗಳು ಲೋಕವಿದ್ಯೆಯ ರೂಪದಲ್ಲಿ ಪ್ರಕಟಗೊಳ್ಳುತ್ತಿರುತ್ತವೆ. ಈ ಜ್ಞಾನ ಶಾಖೆಗಳ ವಿಶಿಷ್ಟ ರೂಪಗಳು ಸ್ಥಳೀಯ ಸಂದರ್ಭ, ಅಗತ್ಯಗಳಿಗೆ ತಕ್ಕಂತೆ ಹೊಸ ಹೊಸ ತಂತ್ರಜ್ಞಾನೀಯ ಆವಿಷ್ಕಾರಗಳಾಗಿ, ವಿನ್ಯಾಸಗಳಾಗಿ ರೂಪಾಂತರಗೊಳ್ಳುವ ಅಂತಃಶಕ್ತಿ ಪಡೆದಿವೆ. ಲೋಕವಿದ್ಯೆಯ ಈ ರೂಪಾಂತರ ಪ್ರತಿಭೆಯು ನಿಜಕ್ಕೂ ಒಂದು ದೇಶದ ಮೂಲ ಆಸ್ತಿ. ಇದನ್ನು ಸಹಸ್ರ ವ್ಯಾಖ್ಯೆಗಳಿಂದಲೂ ಸಮರ್ಪಕವಾಗಿ ನಿರ್ವಚಿಸಲು ಬರುವುದಿಲ್ಲ; ಅನುಭವಿಸುವುದು ಮಾತ್ರ ಸಾಧ್ಯ. ಈ ಲೋಕವಿದ್ಯಾ ದೃಷ್ಟಿ ನಮ್ಮನ್ನು ಬಿಡುಗಡೆಗೊಳಿಸುವಂಥದು. ಇದು ಗಾಂಧೀಜಿಯ ದೃಷ್ಟಿ ಕೂಡ. ಲೋಕ ವಿದ್ಯೆಯು ತನ್ನಲ್ಲಡಗಿರುವ ದಿಗ್ಭ್ರಮೆಗೊಳಿಸುವ 'ಅಪರಿಚಿತ' ಹಾಗೂ 'ಅನಿರೀಕ್ಷಿತ' ಬಹುಮುಖೀ ಹತಾರಗಳನ್ನು ವಿಸರ್ಜಿಸುವ ಮೂಲಕ ಏಕಮುಖೀ ಆಧುನಿಕ ವಿಜ್ಞಾನಕ್ಕಿಂತಲೂ ದೊಡ್ಡ ರಾಕ್ಷಸನನ್ನು ಎದುರಿಸಬಲ್ಲ ಎಂದೂ ಬತ್ತದ ಜೀವಸೆಲೆ. ಪರಂಪರೆಯ ನಿಜಸಾರವಿರುವುದು ಈ ಅನುಭವೀ ವಿದ್ಯೆಯ ಸೃಷ್ಟಿ ಮರುಸೃಷ್ಟಿಗಳಲ್ಲಿ ತೊಡಗುವುದರಲ್ಲಿ. ಇದು ಹಳತರ ಹಳಹಳಿಕೆಯಲ್ಲ; ಬದಲಾಗಿ ಪೂರ್ವಾಗ್ರಹವಿಲ್ಲದೆ ದತ್ತವಾದ ಈ ಬಯಲ ತತ್ತ್ವವನ್ನು ಪುನರ್‌ವಿಮರ್ಶೆ ಮಾಡಿ ಸತ್ತ್ವಯುತವಾದದ್ದನ್ನು ಪ್ರಸ್ತುತಗೊಳಿಸುವ ಕ್ರಮ. ಈ ಕೆಲಸವನ್ನು ಜನಸಮುದಾಯಗಳು, ದಿನದಿನವೂ ತಮ್ಮ ದೈನಂದಿನ ಬದುಕಿಗೆ ಬಂದೆರಗುವ ಆಘಾತಗಳಿಗೆ ಪ್ರತ್ಯಾಘಾತಗಳನ್ನು ಒಡ್ಡುತ್ತ ಸಂಘರ್ಷಾತ್ಮಕ ನೆಲೆಯಲ್ಲೇ ಬದುಕಿನ ಸತ್ಯಗಳನ್ನು ನಿರಂತರವಾಗಿ ಪುನರ್ರಚಿಸಿಕೊಳ್ಳುವುದರ ಮೂಲಕ ರೂಢಿಸಿಕೊಳ್ಳುತ್ತವೆ. ಹಾಗಾಗಿಯೇ ಈ ದಾರಿ ನಿತ್ಯ ನಾವೀನ್ಯತೆಯನ್ನು ಪಡೆದಿದೆ. ಆಧುನಿಕ

ವಿಜ್ಞಾನದ ದಬ್ಬಾಳಿಕೆಯ ಎಡೆಯಲ್ಲೂ ತನ್ನದೇ ಆದ ಇಕ್ಕಟ್ಟಿನ ಜಾಗದಲ್ಲಿ ಆಧುನಿಕ ವಿಜ್ಞಾನದ ತರ್ಕದ ಹಂಗಿಲ್ಲದೆ ಬಹುಮಟ್ಟಿಗೆ ಸ್ವತಂತ್ರವಾಗಿ ಕ್ರಿಯಾಶೀಲವಾಗಿ ಸಾಮಾನ್ಯ ಜನಪದ ಬಾಳಿದೆ. ಗಾಂಧೀಜಿ ಸಂಕೇತಿಸುವ ಚರಕ, ಖಾದಿ, ಗುಡಿಕೈಗಾರಿಕೆಗಳು ಮತ್ತು ವಿಕೇಂದ್ರೀಕೃತ ಸ್ಥಳೀಯ ಉತ್ಪಾದನೆಯ ಮಾರುಕಟ್ಟೆ ಸೌಲಭ್ಯಗಳ ಮೂಲಕ ಗ್ರಾಮ ಸ್ವರಾಜ್ಯ ಈ ಅರ್ಥದಲ್ಲಿ ಈ ಬಹುಮುಖೀ ಪ್ರಜ್ಞೆಯ ಬಿಂಬರೂಪಗಳು. ಇದೇ  ಗಾಂಧೀಜಿಯು ಆಧುನಿಕ ವಿಜ್ಞಾನಕ್ಕೆ ಸವಾಲೆಸೆಯುವ ಸ್ವದೇಶೀ ದರ್ಶನ. ಲೋಕ ವಿದ್ಯೆಯ ಈ ತತ್ತ್ವಾನುಭವವನ್ನು ಬದಲಾದ ಸಂದರ್ಭಕ್ಕೆ ತಕ್ಕಂತೆ ಜೀವಶಕ್ತಿ ತುಂಬಿ ಪರಿಷ್ಕರಿಸಬೇಕು. ಬಹುಶಃ ಸ್ವಾಯತ್ತತೆಯು ಸಮಾಜಗಳ ಅಂತಃ ವಿಸ್ತಾರದಲ್ಲೇ ಇವು ಬಹು ಸೂಕ್ಷ್ಮವಾಗಿ ಸತತ ಪರಿವರ್ತನೆಗೊಳ್ಳುತ್ತಲೇ ಇರುತ್ತವೆ. ಹಾಗಾಗಿ ಈ ಲೋಕ ವಿದ್ಯೆಯು ಪೂರ್ಣಪ್ರಮಾಣದಲ್ಲಿ ವಿಕಾಸವಾಗಿ, ಕ್ರಿಯಾರೂಪದಲ್ಲಿ ಪ್ರಕಟಗೊಳ್ಳಲು ಸಾಧ್ಯವಾಗುವಂತೆ, ಸ್ವಾಯತ್ತತೆಯನ್ನು ಪೋಷಿಸುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕಾಗಿದೆ.

ಆದರೆ, ಜೀವಪ್ರೀತಿಯ ಇಂಥ ಮೌನ ಪರಿವರ್ತನೆ, ಸಮಾಜದ ಪ್ರಧಾನ ವಾಹಿನಿಯಲ್ಲಿ ಸೇರಿಕೊಳ್ಳಬೇಕಾದರೆ ಸಾಮಾನ್ಯ ಮನುಷ್ಯನ ಬದುಕಿನ ತತ್ತ್ವಜ್ಞಾನವು ಒಂದು ಸಾಮಾಜಿಕ ಶಕ್ತಿಯಾಗಿಯೂ ಅಭಿವ್ಯಕ್ತಿ ಪಡೆಯುವ ಅಗತ್ಯವಿದೆ. ಆಗ ಈ ತತ್ತ್ವಜ್ಞಾನದ ತಿಳುವಳಿಕೆ ಮತ್ತು ಕ್ರಿಯೆ ಒಂದೇ ಆಗಿ ಬಿಡುತ್ತದೆ; ತಿಳುವಳಿಕೆಯೇ ಕ್ರಿಯೆಯಾಗಿ ಬಿಡುತ್ತದೆ.

ನಿಜಕ್ಕೂ ಲೋಕವಿದ್ಯೆಯ ತಳಹದಿಯೇ 'ರ್‍ಯಾಡಿಕಲ್' ಚಿಂತನರೂಪಿಯಾಗಿದ್ದು, ಇದೇ ನಿಜಕ್ಕೂ  ಬದಲಾವಣೆಯ ಭಾಷೆಯೂ ಆಗಿದೆ. ಈ ವಿದ್ಯಾರೂಪಿಕೆಯನ್ನು ನಾವು ಕೇವಲ ಬೌದ್ಧಿಕವಾಗಿ  ಅರ್ಥೈಸಿಕೊಂಡರೆ ಅದರ ಶಕ್ತಿಯ ನಿಜ ಪರಿಚಯವಾಗಲಾರದು. ಕ್ರಿಯೆಯ ಮೂಲಕವೇ ಅರ್ಥೈಸಿಕೊಳ್ಳಬೇಕಾಗುತ್ತವೆ. ಯಾಕೆಂದರೆ ಲೋಕವಿದ್ಯೆಯ ಲೋಕದ ಮೌಲ್ಯಗಳು, ಜ್ಞಾನಶಾಖಾನಿರೂಪಣೆಗಳು, ಎಲ್ಲವೂ ಸಂಪೂರ್ಣ ಭಿನ್ನ. ಕೇವಲ ಸಿದ್ಧಾಂತಗಳು ಇಲ್ಲಿ ಕೆಲಸಕ್ಕೆ ಬರುವುದಿಲ್ಲ. ಇದು ಯಾವ ನಿರ್ಬಂಧಕ್ಕೂ ಒಳಪಡದೆ ನಿಬ್ಬೆರಗಾಗಿಸುವ ಸ್ವಂತಿಕೆ ಪಡೆದಂಥದು. ಹಾಗಾಗಿಯೇ ಇದು ಆಧುನಿಕ ವಿಜ್ಞಾನಕ್ಕೆ ಸವಾಲಾಗುವ ಶಕ್ತಿ ವಿನ್ಯಾಸಗಳನ್ನು ಪಡೆದಿದೆ. ಮಾತ್ರವಲ್ಲ ದೇಶದ ಸಿಂಹಾಸನಾರೂಢ ಆಧುನಿಕ ವಿಜ್ಞಾನದ ಯಾಜಮಾನ್ಯ ರಾಜಕೀಯಕ್ಕೂ ಸವಾಲಾಗುವ ರಾಜಕೀಯವನ್ನೂ ಮಾಡಬಲ್ಲದು. ಏಕೆಂದರೆ ಇಂದು ರಾಜಕೀಯ, ಆರ್ಥಿಕ ನಿರ್ಮಿತಿಗಳೊಳಗೆ ಆಕೃತಿ ಪಡೆಯುವುದಕ್ಕಷ್ಟೇ ಸೀಮಿತವಾದ ಆಧುನಿಕ ವಿಜ್ಞಾನದ ಆಸುರೀ ಶಕ್ತಿಗೆ ಹೋಲಿಸಿದರೆ, ಈ ಲೋಕವಿದ್ಯೆಯ ಶಕ್ತಿಯ ಮೂಲದಲ್ಲಿ ಜೀವದಾಯಕ ಗುಣವಿದೆ. ನ್ಯಾಯ - ನೈತಿಕ ಭಾವಗಳು ಹಾಸುಹೊಕ್ಕಾಗಿ ಅಡಕವಾಗಿವೆ. ಈ ನೈತಿಕ ಮೌಲ್ಯಗಳೇ ಅನೈತಿಕ ಆಧುನಿಕ ವಿಜ್ಞಾನಕ್ಕೆ ಸವಾಲಾಗುವ ಸಾಧ್ಯತೆಯಿರುವ ಅದರ ಅಂತಃಚೇತನ ಕೂಡ.

'ಈ ಅಂತಃಚೇತನವನ್ನು ಇನ್ನಷ್ಟು ಜಾಗೃತಗೊಳಿಸುವ ಪ್ರಯತ್ನವೇ ಗಾಂಧೀಜಿಯ ತತ್ತ್ವ ಮೀಮಾಂಸೆ.  ನಾವು ಹಾಗಾಗಿ ಗಾಂಧೀಜಿಯಿಂದ ನಿಜಕ್ಕೂ ಇದಕ್ಕೆ ಸಹಾಯ ಪಡೆಯಬಹುದು. ಗಾಂಧೀಜಿ ಕನಸುಕಂಡ ವಿಕೇಂದ್ರೀಕರಣ, ಗ್ರಾಮ ಸ್ವಾಯತ್ತೆಗಳಿಗಾಗಿ ಜನ ಸಂಘರ್ಷ, ಚಳವಳಿಗಳನ್ನು

ರೂಪಿಸುವುದೂ. ಲೋಕವಿದ್ಯಾ ಪ್ರಕ್ರಿಯೆಯನ್ನು ಬಲಪಡಿಸುವ ಮಾರ್ಗ. ಗಾಂಧೀಜಿಯ ಸ್ವಾಯತ್ತತೆಯ ಗ್ರಹಿಕೆ, ಛಿದ್ರೀಕರಣಗೊಂಡ ಕೇವಲ ರಾಜಕೀಯ ಸ್ವಾಯತ್ತತೆಯ ಆಕೃತಿಯಲ್ಲ. ಯಾಕೆಂದರೆ ಆರ್ಥಿಕ - ರಾಜಕೀಯ- ಸಾಂಸ್ಕೃತಿಕ ಸ್ವಾಯತ್ತತೆಗಳು ಒಂದನ್ನೊಂದು ಬಿಟ್ಟಿಲ್ಲ. ಇವೆಲ್ಲವೂ ಅಂತರ್ ಪ್ರಕ್ರಿಯೆಗಳ ಮೂಲಕ ಲೋಕವಿದ್ಯೆಯಲ್ಲಿ ಅಖಂಡವಾಗಿ ಹೆಣೆದುಕೊಂಡಿವೆ; ಮತ್ತು ಬಹುರೂಪತೆಯ ಸಂಸ್ಕೃತಿ ಸಮಾಜಕ್ಕೆ ಪೋಷಕವಾಗಿವೆ. ಗಾಂಧೀಜಿ ಕಾಣುವ ಈ ಸ್ವಾಯತ್ತತೆಯ ಬಹುಮುಖೀ ಸಮಾಜದಲ್ಲಿ ಆಧುನಿಕ ವಿಜ್ಞಾನದ ಅನೈತಿಕ ದಬ್ಬಾಳಿಕೆ ಇರಲು ಸಾಧ್ಯವಿಲ್ಲ; ಮಾತ್ರವಲ್ಲ ಒಂದು ನಿರ್ದಿಷ್ಟ ಬಗೆಯ ಜ್ಞಾನ, ಒಂದು ನಿರ್ದಿಷ್ಟ ಬಗೆಯ ಚಿಂತನೆ, ತರ್ಕ, ಮೆಥಡ್‌ಗಳನ್ನಷ್ಟೇ ವಿಜೃಂಭಿಸಿ, ಉಳಿದೆಲ್ಲ ಸಾಧ್ಯತೆಗಳನ್ನು, ಸೃಷ್ಟಿ ಶಕ್ತಿಗಳನ್ನು ಅಲ್ಲಗಳೆಯುವ ಆಧುನಿಕ ವಿಜ್ಞಾನದ ಸಾರ್ವಭೌಮತೆಯೂ ಸಾಧ್ಯವಿಲ್ಲ.

# ನದೀ ಜೋಡಣೆ : ಅವೈಜ್ಞಾನಿಕ, ಅಸಂಗತ

### ನಂಬಿಕೆಯ ಪ್ರಶ್ನೆ

ಮಾನವ ಜೀವಿಯ ಸಾವಿರ ಸಾಧ್ಯತೆಗಳನ್ನು ತನ್ನ ಜೀರ್ಣಾಗ್ನಿಯಲ್ಲಿ ಜೀರ್ಣಿಸಿಕೊಳ್ಳಲು ಸಮರ್ಥವಾದ ಭಾರತವು ನದಿಗಳಿಗೆ ಕೊಟ್ಟ ಪ್ರಾಶಸ್ತ್ಯ ಪ್ರಾಯಃ ಬೇರಾವ ನಾಗರಿಕತೆಯೂ ಕೊಟ್ಟಿರಲಿಕ್ಕಿಲ್ಲ. ಹಿಂದೂ ದೇಶದ ಹೆಸರೇ ನದೀ ಮೂಲದಿಂದ ಬಂದಿದೆ. ಭಾರತವು ನದಿಗಳನ್ನು ಸ್ತ್ರೀ ದೇವತೆಯ ಪ್ರತೀಕವೆಂದು ಗುರುತಿಸಿ, ಗೌರವಿಸಿದೆ. ಮಾನವ ಜೀವಿಯ ಸಹಾಯಕ್ಕಾಗಿ ಸ್ತ್ರೀ ಶಕ್ತಿಯನ್ನು ನದೀ ರೂಪದಲ್ಲಿ ಭೂಮಿಗೆ ಕಳಿಸಲಾಗಿದೆಯಂತೆ. 'ನದಿಗಳು ತಮ್ಮ ಭೂ ಸಂಪತ್ತಿನ ಮೂಲ, ಈ ದೈವೀ ಕೃಪೆಯನ್ನು ಮರೆತಾಗ, ತಮ್ಮನ್ನು ಎಚ್ಚರಿಸಲು ಬರುಗಾಳಿ ನೆರೆಗಳು ಬರುತ್ತವೆ' ಎಂಬುದು ನಮ್ಮ ಬೇಸಾಯಗಾರರ ನಂಬಿಕೆ. ಹಾಗಾಗಿಯೇ ಅಮರಕೋಶದಲ್ಲಿ ನದಿಗೆ 'ಜೀವನ'ವೆಂದೇ ಇನ್ನೊಂದು ಹೆಸರಿದೆ.

"ಈ ಬದುಕಿನ ಅರ್ಥವೇನು ಎಂದು ಶೋಧಿಸುತ್ತಿದ್ದ ನನ್ನ ಮೂಲಭೂತ ಪ್ರಶ್ನೆಗಳಿಗೆ, ಪಶ್ಚಿಮದಲ್ಲಿ ಉತ್ತರ ದೊರಕದಾಗ ಭಾರತದಲ್ಲಿ ಅವಕ್ಕೆ ಸಮರ್ಪಕ ಉತ್ತರ ಕಂಡುಕೊಂಡೆ. ರಮಣ ಮಹರ್ಷಿಗಳಂಥ ಮಹಾಮಹಿಮರ 'ದರ್ಶನ' ಭಾಗ್ಯವಿರುವ ಭಾರತವು ನಿಜಕ್ಕೂ ಮಾನವನ ಪರಿಶುದ್ಧ ತಿಳುವಳಿಕೆಯ ನೆಲೆ. ಅನಿಶ್ಚಿತತೆ, ಅನಾಥಪ್ರಜ್ಞೆಯಿಂದ ಬಳಲುವ ನನ್ನಂಥ ಪಾಶ್ಚಾತ್ಯರಿಗೆ ಸಾಂಸ್ಕೃತಿಕ ಮರೆ

---

ತರಂಗ (ಮುಖಪುಟ - ವಿಶೇಷ ಲೇಖನ), ಅಕ್ಟೋಬರ್ ೯, ೨೦೦೨, ಮತ್ತು ಇದರ ಜೊತೆ "ನದಿ ತಿರುಗಿಸುವವರು ?" ಎನ್ನುವ ನೇತ್ರಾವತಿ ನದಿ ತಿರುಗಿಸುವ ಪ್ರಸ್ತಾಪದ ಬಗ್ಗೆ 'ವಿಜಯ ಕರ್ನಾಟಕ'ದಲ್ಲಿ ಪ್ರಕಟವಾದ (ಮಾರ್ಚ್ ೩, ೨೦೦೪) ಲೇಖನವನ್ನೂ, ವಿಷಯಗಳ ಪುನರಾವರ್ತನೆ ತಪ್ಪಿಸಲು ಸೇರಿಸಲಾಗಿದೆ.

ಮತ್ತು ರಕ್ಷಣೆ ನೀಡಬಲ್ಲ ಬೆಚ್ಚಗಿನ ಏಕೈಕ ತಾಣ. ಪಾವಿತ್ರ್ಯತೆಯ ಅರ್ಥವನ್ನು ಅಂತರಂಗೀಕರಿಸಿಕೊಳ್ಳಲು ಭಾರತದ ನೆಲದಲ್ಲಿ ಮಾತ್ರ ಸಾಧ್ಯ . ಆದರೆ ದುರಾದೃಷ್ಟವಶಾತ್, ಇಂದಿನ ರಾಜಕಾರಣಗಳು ನದಿಗಳ ಪಾವಿತ್ರ್ಯತೆಯನ್ನು ತಮ್ಮ ಅಜ್ಞಾನ-ಅಂಧಕಾರಗಳಿಂದ ಭಂಗಪಡಿಸುತ್ತಿರುವುದು ಮಾನವ ಜನಾಂಗದ ದುರಂತ." ಎಂದು ಭಾರತದ ನದೀ ದಂಡೆಗಳಲ್ಲಿ ೪೦-೫೦ ವರ್ಷಕಾಲ ಸಂಚರಿಸುತ್ತ ಕಳೆದ ಬ್ರಿಟಿಷ್ ಲೇಖಕ ಬಿಸ್ ಎಟ್‌ಕಿನ್ 'ಭಾರತದ ಏಳು ಪವಿತ್ರನದಿಗಳು' (ಸೆವೆನ್ ಸೇಕ್ರೆಡ್ ರಿವರ್ಸ್) ಎಂಬ ತನ್ನ ಪ್ರಸಿದ್ಧ ಪುಸ್ತಕದಲ್ಲಿ ಅನುಭವದ ಮಾತನ್ನು ಬರೆಯುತ್ತಾನೆ.

**ಪುರಾಣಗಳು, ಫ್ಯಾಂಟಸಿಗಳು, ಪ್ರತಿಮೆಗಳು**

ನದಿಗಳ ಬಗ್ಗೆ ನಾನಾರೀತಿಯ ಪುರಾಣಗಳು, ಫ್ಯಾಂಟಸಿಗಳು, ಪ್ರತಿಮೆಗಳು, ಜನಪದ ಲಾವಣಿಗಳು, ಭಾರತದಾದ್ಯಂತ ಅಸಂಖ್ಯ ಕವಲುಗಳಾಗಿ ಹರಿದು ಬಂದಿವೆ. ನಮ್ಮ ಪೂರ್ವಾಗ್ರಹ ಪೀಡಿತ ಜಡ ಅಭ್ಯಾಸಗಳ ಮರುಭೂಮಿಯನ್ನು ನುಚ್ಚುನೂರು ಮಾಡಿ ಹಾದು ಬರುವ ಪರಿಶುದ್ಧ ವಿಚಾರಧಾರೆಯನ್ನು ನದಿಯ ಹರಿವಿಗೆ ಹೋಲಿಸುತ್ತಾರೆ. ನದಿಯ ನಿರಂತರ ಪರ್ಯಟನವನ್ನು ಸಂವಹನದ ಪ್ರಬಲ ಸಂಕೇತವಾಗಿ ಬಳಸುವ ರೂಢಿ ನಮ್ಮಲ್ಲಿದೆ. ತನ್ನ ಹುಟ್ಟು, ಸಂಗಾತಿಯಾದ ಪರ್ವತದ ಸಖ್ಯವನ್ನು ತೊರೆದು ಬಯಲಿಗೆ ಬಂದು ಜೀವಜಾಲಕ್ಕೆ ನೀರುಣಿಸುವ ತಾಯಿ ಎನ್ನುವ ಕಾರಣಕ್ಕಾಗಿಯೇ, ದೇವತೆಗಳ ಆಗಮನದ ಮಹಾದ್ವಾರವಾದ ಹರಿದ್ವಾರದಲ್ಲಿ ಪ್ರತಿದಿನವೂ ಗಂಗಾಮಾಯಿಗೆ ಅಷ್ಟೊಂದು ಸಂಭ್ರಮದ ನಿತ್ಯೋತ್ಸವ! ಆಕೆ ದೇವಲೋಕದ ರಾಣಿ. ಹುಲುಮಾನವನ ನೆರವಿಗಾಗಿ, ತನ್ನ ನಿತ್ಯಕರ್ಮಗಳನ್ನೆಲ್ಲ ತೊರೆದು ಪ್ರೀತಿಯಿಂದ ನಮ್ಮ ನೆಲಕ್ಕೆ ಇಳಿದು ಬಂದವಳು.

"ನದಿ ಎಂದರೇನೇ ಹರಿವು. ಹಾಗಾಗಿ ಅದು ಹರಿವ ಜೀವನದ ಸಂಕೇತ ಕೂಡ. ನಿಂತ ನೀರು ನಿರ್ಜೀವ, ಜಡ. ಹರಿವಿಗೆ ತಡೆ ಬಂದಾಗ ನದಿಯ ಸಾವು. ನದಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಒಂದು ಕಡೆ ಹುಟ್ಟಿ ಇನ್ನೊಂದು ಕಡೆ ಕೊನೆಗೊಳ್ಳುವುದು ನದಿಯಲ್ಲ. ಇವುಗಳ ಮಧ್ಯೆ ನಿರಂತರ ಹರಿವ ನೀರು ನದಿ. ಅದು ನಿತ್ಯಶುದ್ಧ, ನಿತ್ಯ ಪವಿತ್ರ. ನಮ್ಮ ಕೊಳೆ ಕಳೆಯುವಂಥದು. ಎಂದು ವಾರಣಾಸಿಯ ರಾಜಘಾಟ್‌ನಲ್ಲಿ ಗಂಗೆಯ ತಡಿಯಲ್ಲಿ ನಿಂತು ತತ್ತ್ವಜ್ಞಾನಿ ಜೆ. ಕೃಷ್ಣಮೂರ್ತಿ ಗಂಗೆಯನ್ನು ವರ್ಣಿಸುತ್ತಾರೆ.

'ನದಿ, ಯೋನಿಯ ಪ್ರತೀಕ, ಪ್ರೀತಿ, ವಿಶಾಲತೆಗಳ ಸಂಕೇತ. ಹಾಗಾಗಿಯೇ ಎಲ್ಲ ಜನರ ಪ್ರಿಯೆಯಾಗಿ, ಎಲ್ಲರನ್ನೂ ಜೋಡಿ ಮಾಡಿ ಹರಿಯುವ ನದಿಯ ಜೊತೆ ಬೆಸೆದುಕೊಳ್ಳುವುದೇ ಜೀವನದ ಪರಮ ಗುರಿ' ಎಂಬುದು ಉತ್ತರ ಭಾರತದ ಜನರ ನಂಬಿಕೆ. ಹೃದಯದ ಭಾವವನ್ನು, ಇಷ್ಟು ಗಾಢವಾಗಿ ನದಿಯ ಓಟದ ಜೊತೆ ಮೇಳೈಸಿ ನೋಡುವ ಇನ್ನೊಂದು ದೇಶ ಜಗತ್ತಿನಲ್ಲಿಲ್ಲ. ಮನುಷ್ಯನ ಭಾವನೆಗಳ ಸೂಕ್ಷ್ಮಾತಿಸೂಕ್ಷ್ಮ ಎಳೆಗಳನ್ನು ಮೀಟಿದೆ, ನದಿಯ ಸಂಕೇತ.

ಪರ್ವತ ಶಿಖರಗಳಿಂದ ಧುಮುಕುತ್ತಾ, ಬಂಡೆಗಳನ್ನು ಸೀಳುತ್ತಾ, ಭೋರ್ಗರೆಯುತ್ತಾ, ಒಂದೆಡೆ ರಭಸದಿಂದ ಮುನ್ನುಗ್ಗುತ್ತಾ, ಇನ್ನೊಂದೆಡೆ ಉದಾಸೀನತೆಯಿಂದ ಮಂದಗತಿಯಲ್ಲಿ ಸಾಗುತ್ತಾ, ಒಂದೆಡೆ ದಪ್ಪವಾಗಿ ಊದಿಕೊಳ್ಳುತ್ತಾ, ಇನ್ನೊಂದೆಡೆ ತೆಳುವಾಗಿ ಬಳುಕುತ್ತಾ, ನಾನಾ ಭಾವ-ಭಂಗಿಗಳಲ್ಲಿ ಸಾಗುತ್ತಿರುವ ನದಿಯ ಪ್ರತಿಮೆ, ಋಷಿ-ಮುನಿಗಳ, ಕವಿಗಳ, ಚಿಂತಕರ, ಹಾಗೆಯೇ

ಭೂಕಸುವಿನಲ್ಲಿ ನಿರತರಾದ ಸಾಮಾನ್ಯ ಶ್ರಮಿಕರ ಮನಸ್ಸಿನ ತೆರೆತೆರೆಗಳಲ್ಲೂ ತೆರೆದುಕೊಳ್ಳುತ್ತ ಮನಮೋಹಕ ಉದ್ಗಾರಗಳಾಗಿ ಹರಿದು ಬಂದಿದೆ. ಇದರ ಜೊತೆಗೆಯೇ ನದಿ, ಮನುಷ್ಯನ ಪಾಶವೀ ಮನೋವಿಕಾರಗಳ ಹುಚ್ಚು ಪ್ರವಾಹದ ಬಗ್ಗೆ ಜಾಗೃತಿಯನ್ನೂ ಜನಪದದ ಗಾದೆ ಮಾತುಗಳಲ್ಲಿ ಪ್ರತಿನಿಧಿಸುತ್ತಾ ಬಂದಿದೆ. ನದಿಗಳ ಕಣ್ಣೀರಿನ ಕೃಪೆಯಲ್ಲೇ ಬದುಕುವ ಚೀನೀ ಜನಾಂಗವು ತಮ್ಮೆಲ್ಲ ದುಃಖ -ದುಮ್ಮಾನಗಳ ನಡುವೆಯೂ, ದೈವೀ ಕೃಪೆಯ ಘರ್ಜನೆಯನ್ನು ನದಿಗಳಲ್ಲಿ ಕಾಣುತ್ತಾರೆ.

ನದೀ ದಂಡೆಯಲ್ಲಿ ಕೂತು ನಮ್ಮೊಳಬಗೆಯನ್ನು ಪ್ರಶಾಂತವಾಗಿ ಹರಿಯುವ ನದಿಯ ಜೋಗುಳದ ಒಂಟಿ ಧ್ವನಿಗೆ ಹಚ್ಚಿ ಆಲಿಸುತ್ತಿದ್ದರೆ, ಸೃಷ್ಟಿಮೂಲದ ಕಾಲಾತೀತವಾದ ಆದಿಮ ಕಂಪನದ ಧ್ವನಿ ತರಂಗಗಳಲ್ಲಿ ನಮ್ಮಂತರಂಗ ನೆಲೆಗೊಳ್ಳುತ್ತದೆ; ಮನಸ್ಸು ಧ್ಯಾನ ದೇಗುಲವನ್ನು ಪ್ರವೇಶಿಸುತ್ತದೆ, ಎಂದು ನನ್ನ ಗಾಢ ನಂಬಿಕೆ. ಹರಿವ ನದಿಯ ದೃಶ್ಯವೇ ನಮ್ಮ ಅಂತರಂಗದ ಗಾಯಗಳನ್ನು ಮೃದುವಾಗಿ ನೇವರಿಸಿ ವಾಸಿ ಮಾಡಬಲ್ಲದು, ಮನಸ್ಸಿಗೆ ಸಾಂತ್ವನ ನೀಡಬಲ್ಲದು, ಭಾವೋದ್ವೇಗಗಳನ್ನು ಉಪಶಮನಗೊಳಿಸಬಲ್ಲದು. ಈ ಸಂವೇದನೆ ನಮ್ಮ ಮನಸ್ಸಿನಲ್ಲಿ ಮೂಡದಿದ್ದರೆ, ಅದೊಂದು ದ್ರವಿಸುವ ಗುಣ ಕಳಕೊಂಡ ಮರುಭೂಮಿ. ಅದಕ್ಕೆ ಪಾವಿತ್ರ್ಯತೆಯ ಸ್ಪರ್ಶವೇ ಇರದು. ಅಂಥ ಆಧುನಿಕ ಮನಸ್ಸು ನದಿಯ ಲಾಲನೆ ಪಾಲನೆಯ ಪುಳಕವನ್ನು ಅನುಭವಿಸಲಾರದು, ಜನಸಾಮಾನ್ಯರ ತೀರ್ಥಸ್ನಾನದ ಪುಣ್ಯಕಲ್ಪನೆಯನ್ನು ಅರ್ಥಮಾಡಿಕೊಳ್ಳಲಾರದು.

**ಆಚರಣೆಗಳು :**

ಪ್ರಾಚೀನ ಭಾರತದ ಆಚರಣೆಗಳಲ್ಲಂತೂ ನದಿ, ಬೆಟ್ಟ, ಹಸಿರು ರಾಶಿಗಳು ಸಂಸ್ಕೃತಿಯ ಸಂಕೇತಗಳಾಗಿ ಜನರ ಸಮಗ್ರ ಬದುಕನ್ನೇ ಆವರಿಸಿಕೊಂಡಿತ್ತು. ಜನಪದದ ಕಟ್ಟುಕಟ್ಟಳೆ, ಶಿಲ್ಪ, ಸಾಹಿತ್ಯವೇ ಮುಂತಾದವೆಲ್ಲವೂ ನದೀ ದಂಡೆಯ ಮೇಲೆ, ಪರ್ವತ ತಪ್ಪಲುಗಳಲ್ಲಿ, ಕೊಳ್ಳಗಳ ಮಧ್ಯದಲ್ಲಿ, ಒಟ್ಟು ಪ್ರಕೃತಿಯ ಮಡಿಲಲ್ಲೇ ವಿಕಾಸವಾಗುತ್ತ ಬಂದಿದೆ.

ಅಪೂರ್ವ ದೃಷ್ಟಿಯು ಜೀವನ ಕ್ರಮವಾಗಿದ್ದ ಬಾಳಿನಲ್ಲಿ ಹಾಗಾಗಿಯೇ ಭಾರತೀಯ ತನಗೆ ಶಾಂತಿಯನ್ನು ಬೇಡುವ ಬದಲು, ಸಮಸ್ತ ಚರಾಚರ ವಿಶ್ವಕ್ಕೇ ಶಾಂತಿಯನ್ನು ಬಯಸುತ್ತಾನೆ. ಅದರಲ್ಲೇ ತನ್ನ ಶಾಂತಿಯನ್ನೂ ಕಂಡುಕೊಳ್ಳುತ್ತಾನೆ. ತನ್ನದೇ ವಿಸ್ತರಣೆಯಾದ ಪ್ರಕೃತಿಯನ್ನು ಭೋಗಿಸುವಾಗ ಎಚ್ಚರವಹಿಸುತ್ತಾ ಅಡಿಗಡಿಗೆ ಕ್ಷಮಾಪಣೆ ಕೇಳುತ್ತಾನೆ. ಒಂದು ಮರಕಡಿದರೆ ಹತ್ತು ಮಕ್ಕಳನ್ನು ಕೊಂದಂತೆ, ಹಾಗೆಯೇ ಮರ ನೆಟ್ಟರೆ, ಕೆರೆ, ಬಾವಿ ತೋಡಿಸಿದರೆ ಪುಣ್ಯವೆಂದು ತಿಳಿಯುತ್ತಾನೆ. ಬೆಳಗಿನ ಜಾವ ಎದ್ದು ಭೂಮಿಯ ಮೇಲೆ ಕಾಲಿಡುವ ಮೊದಲು, 'ತಾಯೇ ನಿನ್ನ ಮೈಮೇಲೆ ಕಾಲಿಡುತ್ತಿದ್ದೇನೆ. ನನ್ನನ್ನು ಕ್ಷಮಿಸು' ಎಂದು ಪ್ರಾರ್ಥಿಸುತ್ತಾನೆ. 'ನನ್ನ ಬದುಕಿಗಾಗಿ ನಿನ್ನ ಮೈಮೇಲೆ ಗೀರುಗಳನ್ನು ಮಾಡುತ್ತೇನೆ. ಅದಕ್ಕಾಗಿ ನನ್ನ ಹೆಂಡತಿ ಮಕ್ಕಳಿಗೆ ಶಾಪಹಾಕಬೇಡ' ಎಂದು ಉಳುವವನು ಬೇಡಿಕೊಳ್ಳುತ್ತಾನೆ. 'ಮರಮಟ್ಟುಗಳ ಮಧ್ಯದ ಬಂಜರು ಭೂಮಿಯಲ್ಲಿ ನನ್ನ ವಾಸ್ತವ್ಯಕ್ಕಾಗಿ ಮನೆಕಟ್ಟುತ್ತೇನೆ. ನನ್ನ ಅಪರಾಧ ಮನ್ನಿಸು ' ಎಂದು ತಾಯಿಗೆ ಭಿನ್ನವಿಸಿಕೊಳ್ಳುತ್ತಾನೆ. 'ನಿನ್ನಿಂದ ಅಗೆದು ತೆಗೆದ ಔಷಧಿಗಳು, ವೃಕ್ಷಗಳು ಪುನಃ ಹುಟ್ಟಲಿ. ನಮ್ಮನ್ನು ಪೊರೆಯುವ ತಾಯೇ, ನಿನ್ನ ಮರ್ಮ ಸ್ಥಾನಕ್ಕೆ, ನಿನ್ನ ಹೃದಯಕ್ಕೆ ನಾನು ಗಾಯವುಂಟು ಮಾಡದಂತೆ

ನನಗೆ ಬುದ್ಧಿ ಕೊಟ್ಟು ಕಾಪಾಡು' ಎಂದು ಕೇಳಿಕೊಳ್ಳುತ್ತಾನೆ. ಈ ಸಾಂಸ್ಕೃತಿಕ ಪರಂಪರೆಯಲ್ಲಿ ಏನು ವಿನಯ, ಎಂಥ ಸಮಗ್ರ ಪರಿಕಲ್ಪನೆ !

### ಪ್ರಾಚೀನರ ಅಖಂಡ ದೃಷ್ಟಿ

ನಂಬಿಕೆಗಳು, ಆಚರಣೆಗಳು ಹಾಗಿರಲಿ. ವಸ್ತುಸ್ಥಿತಿಯನ್ನೊಮ್ಮೆ ನಾವು ಅವಲೋಕಿಸುವ. ಹರಿವ ನದಿಗಳು ನಮ್ಮ ಬದುಕಿನ ಜೀವನಾಡಿಗಳು. ಬೆಟ್ಟ, ಬಯಲು, ಪರ್ವತಗಳು, ವಿಶಾಲ ಸಾಗರಗಳು. ಮರ-ಗಿಡ-ಬಳ್ಳಿಗಳು. ಈ ಗಿಡಗಳ ನಡುವೆ ಬೀಸುವ ನಸುಗಾಳಿ, ಪರಿಶುದ್ಧ ಮಣ್ಣು, ನಾನಾ ವಿಧದ ಕ್ರಿಮಿಕೀಟ, ಪಶು, ಪಕ್ಷಿ ಸಂಕುಲಗಳೆಲ್ಲ ನಮ್ಮನ್ನು ಪೊರೆಯುವ ಬಂಧುಗಳು. ಇವೆಲ್ಲವೂ ಅಂತರ್ ಸಂಬಂಧ ಹೊಂದಿವೆ, ಅಂತರ್ ಪ್ರಭಾವ ಬೀರುತ್ತಾ ಪರಸ್ಪರ ಹೆಣೆದುಕೊಂಡಿರುವ ಅಖಂಡ ನಿಸರ್ಗ ಜಾಲ. ಆದರೆ ಇಂದು ಮನುಷ್ಯ ಆಧುನಿಕ ವಿಜ್ಞಾನದ ಬಲದಿಂದ ವಿಶ್ವದ ಈ ಎಲ್ಲ ಸಂಗತಿಗಳನ್ನು ತನ್ನ ಉಪಯುಕ್ತತೆಯ (utility) ಮಾನದಂಡದಿಂದ ನೋಡುವ, ಅಳೆಯುವ ಪ್ರವೃತ್ತಿ ಬೆಳೆಸಿಕೊಂಡಿದ್ದಾನೆ. ಸಮಸ್ತ ಜೀವಜಾತಿಗಳ ಬದುಕಿನ ಉಸಿರಾದ ನಿಸರ್ಗವನ್ನು ತನ್ನ ಸುಖ-ಭೋಗಕ್ಕಾಗಿ ಇರುವಂಥದು ಎಂದು ತಿಳಿದಿದ್ದಾನೆ. ಆತನ ಈ ಸೊಕ್ಕು ಇಂದು ಸೃಷ್ಟಿಸಿರುವ ಈ ಭಯಾನಕ ಯಜ್ಞದಲ್ಲಿ ತನ್ನನ್ನು ತಾನೇ ಬಲಿಪಶುಮಾಡಿಕೊಳ್ಳುತ್ತಿದ್ದಾನೆ ಎಂಬ ಅರಿವೂ ಅವನಿಗಿದ್ದಂತಿಲ್ಲ. ಹಾಗಾಗಿಯೇ ನದಿಗಳನ್ನು ಛಿದ್ರಗೊಳಿಸುವ, ಬೆಟ್ಟ, ಬಯಲುಗಳನ್ನು ಅಗೆಯುವ, ಬಗೆಯುವ ಕೈಂಕರ್ಯಕ್ಕೆ ತೊಡಗಿ ಕ್ಷಣಕ್ಷಣಕ್ಕೂ ಈ ಭೂಮಿಯನ್ನು ಅಪವಿತ್ರಗೊಳಿಸುತ್ತಿದ್ದಾನೆ. ಜೀವ ಪಾವಿತ್ರ್ಯತೆಯ ಕಲ್ಪನೆಯೇ ಇಲ್ಲದೆ ಜೀವ ಹಿಂಸೆಯಲ್ಲಿ ತೊಡಗಿರುವ, ನಿಸರ್ಗವನ್ನು ಲೂಟಿ ಮಾಡಿ ಸರಕುಗಳಾಗಿ ಪರಿವರ್ತಿಸುವ, ಮನುಷ್ಯನ ಅಪವಿತ್ರ ಮನಸ್ಸಿನಲ್ಲಿ ನೈಜ ಧಾರ್ಮಿಕತೆ ಎಲ್ಲಿದೆ? ಆತ ಧರ್ಮದ ಬಗ್ಗೆ ಮಾತಾಡುವುದೇ ಡೋಂಗಿ ಯಲ್ಲವೇ?

### ನೆಲದ ವಿವೇಕ ಕಳಕೊಂಡ ಆಧುನಿಕ ಭಾರತೀಯ

ಪಶ್ಚಿಮದ ವಿದ್ಯಮಾನ ಒತ್ತಟ್ಟಿಗಿರಲಿ. ಜನಪದದ ಅನುಭವಜನ್ಯವಾದ ವಿಶಾಲ ಜ್ಞಾನ ಪರಂಪರೆಯಿರುವ ಭಾರತೀಯನೂ ಈ ನೆಲದ ವಿವೇಕವನ್ನು ಸಂಪೂರ್ಣ ಕಳಕೊಳ್ಳುತ್ತಿರುವುದು ಅತ್ಯಂತ ದುರಾದೃಷ್ಟಕರ. ಭಾರತೀಯನ ಆಧುನಿಕ ಮನಸ್ಸು ತನ್ನ ಸ್ವಾರ್ಥಕ್ಕಾಗಿ ಇಂದು ಸೃಷ್ಟಿಯಲ್ಲಿ ಅಂತರ್ಗತವಾಗಿರುವ ಸಾಮರಸ್ಯವನ್ನು ಅಲ್ಲೋಲ ಕಲ್ಲೋಲ ಮಾಡಿ ಭೂಮಿಯನ್ನೇ ಮೆಟ್ಟಿನಿಂತು ವಿಜೃಂಭಿಸಲು ಹವಣಿಸುತ್ತಿದೆ. ಜೀವ ಪರಿಸರದ ಪೂರ್ಣ ಒಡೆತನವಿರುವ ಸರ್ವಾಧಿಕಾರಿಯಂತೆ ವರ್ತಿಸುತ್ತಾ ತನ್ನ ಮೂಲಕ್ಕೇ ಕೊಡಲಿಯೇಟು ಹಾಕಿಕೊಳ್ಳುವ 'ಅಗೋಳಿ ಮಂಜಣ್ಣ'ನ ಮೂರ್ಖ ಸಾಹಸಕ್ಕಿಳಿದಿದೆ. ಇಲ್ಲದಿದ್ದರೆ, ತನ್ನ ಪ್ರಾಚೀನ ತಿಳುವಳಿಕೆಯನ್ನೇ ಅವೈಜ್ಞಾನಿಕವೆಂದು ಸಾರಾಸಗಟಾಗಿ ತಿರಸ್ಕರಿಸಿ ಜೀವಂತ ನದಿಗಳನ್ನು ಕಲುಷಿತಗೊಳಿಸುವ. ತಿರುಗಿಸುವ, ಜೋಡಿಸುವ, ಛಿದ್ರೀಕರಿಸುವ, ತುಂಡುತುಂಡಾಗಿ ಮಾಡಿ ಖಾಸಗೀ ಕಂಪನಿಗಳಿಗೆ ಮಾರುವ ವ್ಯಾಪಾರೀ ಕೆಲಸಕ್ಕೆ ಕೈಯಿಕ್ಕುತ್ತಿರಲಿಲ್ಲ. ಗಂಗೆಯನ್ನು ಕಾವೇರಿಯ ಜೊತೆ ದೈಹಿಕವಾಗಿ ಜೋಡಿಸಿ ನೀರನ್ನು 'ಗೂಡ್ಸ್' ನಂತೆ ಬಳಸಲು ಸನ್ನದ್ಧವಾಗುತ್ತಿರಲಿಲ್ಲ. ದೀರ್ಘಗಾಮೀ ಪರಿಣಾಮ ಬೀರಬಲ್ಲಂಥ ನದಿ ಜೋಡಣೆಯಂಥ 'ಕ್ರ್ಯಾಂಕಿ' (Cranky) 'ಐಡಿಯಾ'ವನ್ನು ಯಾವುದೇ ಅಧ್ಯಯನದ ಆಧಾರವಿಲ್ಲದೆ ಕೈಗೆತ್ತಿಕೊಳ್ಳುತ್ತಿರಲಿಲ್ಲ.

ಬೌದ್ಧಿಕವಾಗಿ ಭಾರತೀಯ ಸಂಪೂರ್ಣ ದಿವಾಳಿಯಾಗಿ, ತನ್ನ ಸೃಜನಶೀಲತೆಯನ್ನೇ ಕಳಕೊಂಡಿದ್ದರ ಪ್ರತೀಕವಿದು. ಈ ಕಥಾನಕ ತುಂಬಾ ರೋಚಕವಾಗಿದೆ.

## II

**ನದಿ ಜೋಡಿಸುವ ವೈಚಾರಿಕ ವಿಕಲ್ಪ :**

ಡಿಸೆಂಬರ್ ೨೦೦೨ ! ನಮ್ಮೀ ವಿಶಾಲ ಭಾರತದ ಪ್ರಮುಖ ನದಿಗಳನ್ನು ಜೋಡಿಸುವ ಮಹತ್ತ್ವದ ಸುದ್ದಿ! ಕೆಲವರಿಗೆ ಇದು ಬೆಚ್ಚಿಬೀಳಿಸುವ ಸುದ್ದಿಯಾದರೆ, ಇನ್ನು ಹಲವರಿಗೆ ತಾವು ಕನಸು ಕಂಡು ಕೈ ಬಿಟ್ಟ ನದೀ ಜೋಡಣೆಯ ಹಳೇ ಯೋಜನೆಗೆ ಮರುಜೀವ ತುಂಬುವ ಸಂತಸದ ಸುದ್ದಿ. ರಾಷ್ಟ್ರಪತಿಗಳಾದ ಮಾನ್ಯ ಅಬ್ದುಲ್ ಕಲಾಂರವರ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಸ್ತಾಪಿಸಲ್ಪಟ್ಟು, ನಿವೃತ್ತಿಯ ಹಂತದಲ್ಲಿದ್ದ ಸುಪ್ರೀಮ್ ಕೋರ್ಟಿನ ಮುಖ್ಯ ನ್ಯಾಯಾಧೀಶರಿಂದ ಆಜ್ಞಾಪಿಸಲ್ಪಟ್ಟು, ಪ್ರಧಾನಿಯಿಂದ ೨೦೧೬ನೆಯ ಇಸವಿಯೊಳಗೆ ಈ ನದೀ ಜೋಡಣೆ ಪೂರ್ಣಗೊಳ್ಳುವ ಆಶ್ವಾಸನೆ ಪಡೆದು, ವಿರೋಧಪಕ್ಷದ ನಾಯಕಿ ಶ್ರೀಮತಿ ಸೋನಿಯಾ ಗಾಂಧೀಯವರ ಸ್ವಾಗತ ಗೀತೆಯೊಂದಿಗೆ ಮರುಹುಟ್ಟು ಪಡೆದ ಬೃಹತ್ ಯೋಜನೆಯಿದು. ೧೦೫ ಕೋಟಿಗೂ ಮಿಕ್ಕಿ ಜನರಿಂದ ತುಂಬಿರುವ ಈ ರಾಷ್ಟ್ರದ ನೇತಾರರೆಲ್ಲರ ಒಮ್ಮತದ, ಒಮ್ಮುಖದ ನಿರ್ಧಾರ ! ಆದರೆ ನದಿಯೆಂದರೇನು? ಅದರ ವೈಯಕ್ತಿಕ ಬದುಕೆಂಥದು ? ನದೀ ಪಾತ್ರಗಳ ಅದಲು ಬದಲಿನಲ್ಲಿ, ಅಂತರ್ಗತವಾಗಿರುವ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ , ಪಾರಿಸರಿಕ ಪರಿಣಾಮಗಳೇನು? ಅವು ಒಡ್ಡುವ ಸಮಾಜಶಾಸ್ತ್ರೀಯ ಸವಾಲುಗಳೆಂಥವು ? ಎಂಬುದನ್ನು ತಿಳಿದುಕೊಳ್ಳುವ ವ್ಯವಧಾನ ಯಾರಿಗೂ ಇಲ್ಲ. ಹಿಂದೊಮ್ಮೆ ಕೂಲಂಕಷ ಅಧ್ಯಯನ ಮಾಡಿ ಕೈ ಬಿಟ್ಟ ಈ ಜಡಯೋಜನೆಯ ಬೆನ್ನು ಹತ್ತುವುದು ಕೇವಲ ಮರೀಚಿಕೆಯ ಬೆನ್ನು ಹತ್ತಿದಂತೆ ಎಂಬುದೂ ಇವರಿಗೆ ತಿಳಿದಿಲ್ಲ. ಇದೊಂದು ಬೌದ್ಧಿಕ ವಿಕಲ್ಪ.

ರಾಷ್ಟ್ರಪತಿಯವರು ಅಧ್ಯಯನದ ಆಧಾರದ ಮೇಲೆ ಈ ಯೋಜನೆಯನ್ನು ಪ್ರಸ್ತಾಪಿಸಿದಂತಿಲ್ಲ. ಹಾಗಾಗಿ ಇದು ವಿಜ್ಞಾನಿಯ ರಾಜಕೀಯ ಘೋಷಣೆಯೇ? ಅಥವಾ ರಾಜಕಾರಣಿಯ ವಿಜ್ಞಾನ ಸಂಬಂಧೀ ವಿಚಾರಧಾರೆಯೇ? ಎಂಬ ಸಂಶಯ ಬಾರದಿರದು. ನದೀ ಜೋಡಣೆಗೆ ಸುಪ್ರೀಮ್ ಕೋರ್ಟಿನ ನೇರ ಆದೇಶ ಇನ್ನೂ ಆಶ್ಚರ್ಯದ ಸಂಗತಿ. ಬೃಹತ್ ಅಣೆಕಟ್ಟುಗಳ ಬಗ್ಗೆ, ಎನ್ರಾನ್, ಕೊಜೆಂಟ್ರಿಕ್ಸ್‌ಗಳಂಥ ಬೃಹತ್ ಯೋಜನೆಗಳ ಬಗ್ಗೆ ಸುಪ್ರೀಮ್ ಕೋರ್ಟ್, 'ಅವು 'ಎಕ್ಸಿಕ್ಯೂಟಿವ್' (ಕಾರ್ಯಾಂಗ) ನಿರ್ಧಾರಗಳು, ಕೋರ್ಟಿನ ವ್ಯಾಪ್ತಿಗೆ ಮೀರಿದ್ದು ಎಂದು ಅಭಿಪ್ರಾಯ ಪಟ್ಟಿತ್ತು; ಮಾತ್ರವಲ್ಲದೆ, ಬೃಹತ್ ತಾಂತ್ರಿಕ ಪ್ರಾಜೆಕ್ಟ್‌ಗಳ ವಿಚಾರಣೆಯ ಸಂದರ್ಭದಲ್ಲಿ, ತಜ್ಞರ ಸಮಿತಿಯನ್ನು ನೇಮಿಸಿ, ಅವರಿಂದ ಸಲಹೆ ಪಡೆದು ತೀರ್ಪು ನೀಡಿದ ನಿದರ್ಶನಗಳು ಸಾಕಷ್ಟಿವೆ. (ಕೊಜೆಂಟ್ರಿಕ್ಸ್ ತೀರ್ಪು). ನದಿ ಜೋಡಣೆಯ ಬಗ್ಗೆ ತಜ್ಞರ ಸಮಿತಿಯನ್ನು ತಕ್ಷಣ ನೇಮಿಸಿ, ಇಂತಿಷ್ಟು ಅವಧಿಯೊಳಗೆ ಅಧ್ಯಯನ ನಡೆಸಿ, ನಿರ್ಧಾರ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಆದೇಶ ನೀಡಬಹುದಿತ್ತು. ಆದರೆ, ನದಿ ಜೋಡಣೆಗೆ ಕೋರ್ಟು ನೇರ ಆದೇಶ ನೀಡಿದೆ. ಇದು ಸಮಂಜಸವೇ ಎಂಬುದು ಚರ್ಚಾರ್ಹ

ವಿಷಯ. ಅದೂ ಅಲ್ಲದೆ ಈ ಕಾಲುವೆ ಹಾದು ಹೋಗುವ ರಾಜ್ಯಗಳ ಅಭಿಪ್ರಾಯವನ್ನು ಸುಪ್ರೀಂ ಕೋರ್ಟು ಕೇಳಿದಾಗ ತಮಿಳುನಾಡು ಬಿಟ್ಟು, ಬೇರೆ ಯಾವ ರಾಜ್ಯವೂ ಒಪ್ಪಿಗೆ ಕಳಿಸಲಿಲ್ಲ. ದೇಶದ ಜೀವನಾಡಿಯ ಭವಿಷ್ಯವನ್ನೇ ಅಲ್ಲಾಡಿಸಬಹುದಾದ ಮಹತ್ವದ ಇಂಥ ನಿರ್ಧಾರದ ಹಿಂದೆ, ವೈಜ್ಞಾನಿಕವಾಗಲಿ, ಪರಿಸರ ವಿಜ್ಞಾನೀಯವಾಗಲಿ ಅಥವಾ ಇನ್ನಾವುದೇ ಅಂಶಗಳನ್ನೊಳಗೊಂಡ ಸಮಗ್ರ ದೃಷ್ಟಿಯ ಅಧ್ಯಯನ ನಡೆದದ್ದು ಕಾಣುವುದಿಲ್ಲ. ಪ್ರಜಾಪ್ರಭುತ್ವದ ನೈಜ ಪರಂಪರೆಯಂತೆ ಇಂಥ ದೊಡ್ಡ ಬೃಹತ್ ಯೋಜನೆಯನ್ನು ರೂಪಿಸುವ ಮೊದಲು ಸಾರ್ವಜನಿಕ ಚರ್ಚೆ ನಡೆದದ್ದೂ ಕಾಣುವುದಿಲ್ಲ. ಜನರ ಮುಂದೆ ಈ ಯೋಜನೆಯ ವಿವರಗಳನ್ನಾಗಲೀ, ತಜ್ಞರ ಶಿಫಾರಸನ್ನಾಗಲೀ ಮಂಡಿಸಲಿಲ್ಲ. ಕೇವಲ ಕೆಲವು ರಾಜಕಾರಣಿಗಳು ಸೇರಿ, ನದಿ ಜೋಡಣೆಯಂಥ ಮಹತ್ವದ ತೀರ್ಮಾನ ತೆಗೆದುಕೊಂಡು, ಜನರ ಮೇಲೆ ಹೇರುವುದು ಸಂವಿಧಾನರೀತ್ಯಾ ಸರಿ ಕ್ರಮವೇ ಎಂದು ಪ್ರಶ್ನಿಸಬೇಕಾಗಿದೆ.

**ತಜ್ಞರು ಕೈ ಬಿಟ್ಟ ಯೋಜನೆ**

ನದಿ ಪಾತ್ರಗಳ ಸಮರ್ಥ ನಿರ್ವಹಣೆಯ ಬಗ್ಗೆ ಇಂದು ಜಗತ್ತಿನಾದ್ಯಂತ ಚರ್ಚೆಯಾಗುತ್ತಿದೆ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲೇ

೧. ಅಂದರೆ ಒಂದು ಶತಮಾನದ ಹಿಂದೆಯೇ ಸರ್ ಆರ್ಥರ್ ಕಾಟನ್ ಎಂಬವರು ನೆರೆ ಮತ್ತು ಬರಗಾಲಗಳ ಸಮಸ್ಯೆಯ ಪರಿಹಾರಕ್ಕಾಗಿ ನದೀ ಜೋಡಣೆಯ ಯೋಜನೆಯನ್ನು ಮುಂದಿಟ್ಟಿದ್ದರು. ಭಾರತದಲ್ಲಿ ಅಂದೇ ಈ ಪ್ರಸ್ತಾಪವು ತೀವ್ರ ಟೀಕೆಗೆ ಗುರಿಯಾಗಿತ್ತು.

೨. ಮುಂದೆ ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ೧೯೭೨ರಲ್ಲಿ ಸಚಿವರಾಗಿದ್ದ ಡಾ। ಕೆ. ಎಲ್. ರಾವ್‌ರವರು ಈ ಯೋಜನೆಯನ್ನು ಮತ್ತೊಮ್ಮೆ ಪುನರುಜ್ಜೀವನ ಗೊಳಿಸಿದರು.೧೯೭೪ರಲ್ಲಿ ಕ್ಯಾ। ದಸ್ತೂರರ ನದೀ ಜೋಡಣೆಯ ಗಾರ್ಲೆಂಡ್ ಕೆನಾಲ್ (garland canal) ಯೋಜನೆ ಮತ್ತೊಮ್ಮೆ ಕೈಗೆತ್ತಿಕೊಂಡು ಕೊನೆಗೆ ತಿರಸ್ಕರಿಸಲ್ಪಟ್ಟಿತ್ತು. ೧೯೯೦ರ ದಶಕದ ಆರಂಭದಲ್ಲಿ ಈ ಯೋಜನೆಯು ಮರು ಪ್ರಸ್ತಾಪಿಸಲ್ಪಟ್ಟಾಗ, ತಜ್ಞರಾದ ಡಾ। ಎಮ್. ಎಸ್. ರೆಡ್ಡಿ ಮತ್ತು ಡಾ। ರಾಮಸ್ವಾಮಿ ಅಯ್ಯರರ ರಿಪೋರ್ಟಿನ ಆಧಾರದ ಮೇಲೆ ಕೇಂದ್ರ ಸರಕಾರ ಮತ್ತೊಮ್ಮೆ ಈ ಯೋಜನೆಯನ್ನು ಕೈ ಬಿಡಬೇಕಾಯಿತು.

೩. ಈ ಯಾವ ಪ್ರಸ್ತಾವನೆಯ ಸಂದರ್ಭದಲ್ಲೂ, ಈ ಯೋಜನೆಯ ಆರ್ಥಿಕ ಭರಣಶಕ್ತಿ ಸಾಮರ್ಥ್ಯವಾಗಲೀ ತಾಂತ್ರಿಕ ಸಾಧ್ಯತೆಯಾಗಲೀ, ಪರಿಸರ ವಿಜ್ಞಾನೀಯ ಧಾರಣಾ ಶಕ್ತಿಯಾಗಲೀ, ಒಟ್ಟು ಜೀವ ಪರಿಸರದ ಮೇಲೆ ಆಗುವ ಪರಿಣಾಮದ ಬಗೆಗಾಗಲೀ ಒಂದೇ ಒಂದು ಅಧ್ಯಯನ ನಡೆಯಲಿಲ್ಲ. ತಜ್ಞರು ತಿರಸ್ಕರಿಸಿದ ಈ ಯೋಜನೆಯ ಬಗ್ಗೆ ಮತ್ತೆ ಮತ್ತೆ ಈ ಹಠ ಏಕೆ ? ನಮಗೆ ಯಾವ ಪರ್ಯಾಯ ಯೋಚನೆಗಳೂ ಹೊಳೆಯದಷ್ಟು ನಾವು ದಡ್ಡರಾಗಿದ್ದೇವೆಯೇ ?

**ವಿಜ್ಞಾನಿಗಳು, ಪರಿಸರ ತಜ್ಞರ, ಸಾಮಾಜಿಕ ಕಾರ್ಯಕರ್ತರು, ಪತ್ರಕರ್ತರು ಏನೆನ್ನುತ್ತಾರೆ ?**

ತಜ್ಞರ ಜೊತೆ ಅನೇಕ ಮೇಧಾವಿಗಳು ಏನು ಹೇಳುತ್ತಾರೆಂಬುದನ್ನೂ ಇಲ್ಲಿ

ಉಲ್ಲೇಖಿಸಲೇಬೇಕು. ನಿಜಕ್ಕೂ ಗಂಗೆಯಲ್ಲಿ ಸಮೃದ್ಧವಾಗಿ ನೀರಿದೆಯೇ? ಹಿಮಾಲಯದ ನದಿಗಳಿಗೆ ನೀರು ಒದಗಿಸುವ ನದೀ ಮೂಲಗಳು ಒಣಗಲಾರಂಭಿಸಿವೆ. ಹಾಗಾಗಿ ಹಿಮಾಲಯದ ನದಿಗಳೂ ವರ್ಷದಿಂದ ವರ್ಷಕ್ಕೆ ಬತ್ತುತ್ತಿವೆ. ಕಳೆದ ನೂರು ವರ್ಷಗಳಲ್ಲಿ ಗಂಗೆಗೆ ನೀರು ಒದಗಿಸುವ ಗಂಗೋತ್ರಿಯ ಹಿಮರಾಶಿ ಬತ್ತುತ್ತಾ ೧೪ ಕಿಲೋ ಮೀಟರುಗಳು ಹಿಂದೆ ಸರಿದಿದೆ. ಎರಡನೆಯದಾಗಿ, ಗಂಗೆಯ ನೀರನ್ನು ಇಂದು ಗರಿಷ್ಠ ಪ್ರಮಾಣದಲ್ಲಿ ನೀರಾವರಿಗೆ ಮತ್ತು ನಗರಗಳ ನೀರು ಸರಬರಾಜಿಗೆ ಬಳಸಲಾಗುತ್ತಿದೆ. ಮತ್ತು, ಮೂರನೆಯದಾಗಿ, ಪಾಟ್ನಾಕ್ಕೆ ಹರಿಯುವ ನೀರಿನ ಅರ್ಧದಷ್ಟು ಇಂದು ನೇಪಾಳದಿಂದ ಹರಿದುಬರುತ್ತಿದೆ. ನೇಪಾಳ ಇಂದು ಈ ನೀರಿನ ಬಳಕೆಗಾಗಿ ಅನೇಕ ಯೋಜನೆಗಳನ್ನು ಹಾಕಿಕೊಳ್ಳುತ್ತಿದೆ.... ಇದೇ ಪಾಡು ಬ್ರಹ್ಮಪುತ್ರಾ, ಮಹಾನದಿಗಳದ್ದು ಕೂಡ.

*.... ನದಿಯ ನೀರನ್ನು ಹಿಡಿಯುವುದು, ಅದರ ಸಹಜಗತಿಯನ್ನು ತಡೆಯುವುದು, ತಿರುಗಿಸುವುದು ಎಲ್ಲವೂ ಆ ನದಿಯನ್ನು ಕೊಲ್ಲುವ ಕ್ರಿಯೆ. ಹೀಗೆ ನದಿಗಳ ಜೊತೆ ಚೆಲ್ಲಾಟವಾಡಿದ ಚರಿತ್ರೆಯಿರುವ ದೇಶಗಳಿಂದು ಕಟ್ಟಿದ ಅಣೆಕಟ್ಟುಗಳನ್ನು, ನದೀ ದಂಡೆಗಳನ್ನು, ಕಟ್ಟೆಗಳನ್ನು ಬಿಲಿಯಗಟ್ಟಲೆ ಡಾಲರು ವೆಚ್ಚಮಾಡಿ ಒಡೆಯುವ ಯೋಜನೆಗಳನ್ನು ಹಾಕಿಕೊಂಡಿವೆ. ಅಮೇರಿಕಾ ಒಂದರಲ್ಲೇ ೧೯೯೯ರಿಂದ ೨೦೦೨ರ ಅವಧಿಯಲ್ಲಿ ೧೦೦ಕ್ಕೂ ಮಿಕ್ಕ ಅಣೆಕಟ್ಟುಗಳನ್ನು ಒಡೆದು ವಿಸ್ಕನ್‌ಸಿನ್ ರಾಜ್ಯದ ಬರಬೂನದಿಯನ್ನು ಮರಳಿ ಪಡೆಯಲಾಗಿದೆ. ಕ್ಯಾಲಿಫೋರ್ನಿಯಾದಲ್ಲಿ, ಕೆಲವು ನದಿಗಳನ್ನು ಮರಳಿ ಜೀವಂತಗೊಳಿಸಲು 8 ಬಿಲಿಯ ಡಾಲರಿನ ಯೋಜನೆ ಹಾಕಿಕೊಳ್ಳಲಾಗಿದೆ. ಸ್ಪೈನಿನಲ್ಲಿ ಐಬ್ರೊ ನದಿಯ ನೀರನ್ನು ದಕ್ಷಿಣಕ್ಕೆ ಕೊಂಡೊಯ್ಯುವ ಯೋಜನೆಯನ್ನು ಜನರ ತೀವ್ರ ಪ್ರತಿಭಟನೆಯಿಂದ ಕೈ ಬಿಡಲಾಗಿದೆ."*

**ಡಾ। ವಂದನಾ ಶಿವ, ವಿಜ್ಞಾನಿ, ನಿರ್ದೇಶಕಿ**

*"ಬರಗಾಲದ ಪ್ರದೇಶದಲ್ಲಿರುವ ಜನರಿಗೆ ತಕ್ಷಣಕ್ಕೆ ಆಕರ್ಷಕವಾಗಿ ಕಾಣುವ ಈ ನದೀ ಜೋಡಣೆ ಯೋಜನೆ ಅತ್ಯಂತ ವಿನಾಶಕಾರಿಯಾದುದು. ಇದು ಬರಗಾಲವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸ್ಥಳಾಂತರಿಸುತ್ತದಷ್ಟೇ...... ನಮ್ಮ ರಾಷ್ಟ್ರೀಯ ಹೆದ್ದಾರಿಗಳು ಮಾಲಿನ್ಯಕಾರಕ ಅನಿಲಗಳನ್ನು ಹಳ್ಳಿ ಹಳ್ಳಿಗೂ ರವಾನಿಸುವ 'ಕನ್ವೇಯರ್ ಬೆಲ್ಟ್' ಆಗಿರುವಂತೆ, ಈ ಅಗಾಧ ಪ್ರಮಾಣದ ಹಾರ ನದಿ ಜೋಡಣೆ (garland canal)ಯೂ ನಮ್ಮ ಹೊಲಸು ಚರಂಡಿಗಳ ಹಾರ ಯೋಜನೆಯಾದೀತಷ್ಟೇ.... ಇವು ನೆರೆ ನೀರನ್ನು ರವಾನಿಸುವ ಬದಲು, ಮಡ್ಡಿಯನ್ನಷ್ಟೇ ರವಾನಿಸೀತು. ಸಾವಿರಾರು ದೊಡ್ಡ, ಸಣ್ಣ ಅಣೆಕಟ್ಟುಗಳು, ಲಕ್ಷಾಂತರ ಎಕ್ರೆ ನಿಬಿಡಾರಣ್ಯ ನಾಶ, ಜೀವ ಪರಿಸರ ನಾಶ, ಹವಾಮಾನ ವೈಪರಿತ್ಯ, ನೀರಿನ ಪಾತ್ರೆಗಳ ಬರಿದಾಗುವಿಕೆ, ಮಿಲಿಯಾಂತರ ಜನರ ಸ್ಥಳಾಂತರ ಮುಂತಾದ ಊಹೆಗೂ ನಿಲುಕದ ಅನಾಹುತಗಳನ್ನು ತಂದೊಡ್ಡೀತು...... ಪ್ರಕೃತಿಯಲ್ಲಿ ಬರೇ ನದಿ ಜೋಡಣೆಯಿಲ್ಲ, ಇಡಿಯ ಜಗತ್ತಿನ ನೀರಿನ ಅಖಂಡ ಜೋಡಣೆಯಿದೆ. ಒಂದೆಡೆಯಿಂದ ಒಂದೆಡೆಗೆ ಭೂಮಿಯಡಿಯ ಕಾಲುವೆಗಳು, ಒಸರುಗಳು, ಮಳೆಗಳೇ ಮೊದಲಾದ ಜಲವರ್ತುಲ (hydrological cycle ) ದನ್ವಯ ಎಲ್ಲ ನೀರೂ ಏಕವಾಗಿ ಜೋಡಣೆಯಾಗಿವೆ. ಹಾಗಾಗಿ ನೀರಿನ ವಿಷಯದಲ್ಲಿ ನಾವು ಜಾಗ್ರತೆಯಿಂದ ನಡೆದುಕೊಳ್ಳದಿದ್ದರೆ, ಅದೊಂದು ಹೇಯ*

*ಪಾತಕ."*

**ಮೇಧಾ ಪಾಟ್ಕರ್, ಮ್ಯಾಗಸೆಸೆ ಪ್ರಶಸ್ತಿ ಪುರಸ್ಕೃತ ಪರಿಸರ ಕಾರ್ಯಕರ್ತೆ**

*ನದೀ ಜೋಡಣೆಯನ್ನು ಸಾವಿನ ಜೋಡಣೆಯೆಂದೇ ಕರೆಯುವ, ಬಿಟ್ಟು ಸೆಗಲ್, ಈ ಯೋಜನೆ ಬಗ್ಗೆ, "ಭಾರತದ ಉಪಖಂಡದ ನದಿಗಳ ಹರಿವಿನ ಪಾತ್ರೆಗಳ ಛಿದ್ರೀಕರಣ ಎಂಥ ಭಯಂಕರ ಪರಿಸರ ವಿನಾಶಕ್ಕೆ ಕಾರಣವಾದೀತೆನ್ನುವುದನ್ನು ಊಹಿಸಲೂ ಸಾಧ್ಯವಿಲ್ಲ. ನೇಪಾಳ, ಭಾರತ, ಬಾಂಗ್ಲಾದೇಶಗಳ ಆರ್ಥಿಕತೆಯನ್ನೇ ಸಂಪೂರ್ಣ ಬುಡಮೇಲು ಮಾಡೀತು... ವಿಶೇಷ ಸಲಹೆಗಾರರ (consultants), ಗುತ್ತಿಗೆದಾರರ (contractors), ಅಧಿಕಾರ ಶಾಹಿಗಳ (bureaucrats) ಮತ್ತು ರಾಜಕಾರಣಿಗಳ ಈ ಅಪವಿತ್ರ ಒಪ್ಪಂದ ತಕ್ಷಣಕ್ಕೆ ಈ ಯೋಜನೆಯಿಂದ ಅಗಾಧ ಲಾಭ ಮಾಡುತ್ತಾ, ದೀರ್ಘಾವಧಿಯಲ್ಲಿ ಈ ದೇಶಗಳನ್ನು ಕತ್ತಲೆಯ ಕಾಲಗರ್ಭಕ್ಕೆ ತಳ್ಳುತ್ತದೆ..... ನೀರಿಗೆ ದಿನದಿನವೂ ವಿಷ ಬೆರೆಸುವ ಮಾರುಕಟ್ಟೆ ದಲ್ಲಾಳಿಗಳು, ಭೂ ಸವೆತ ತಡೆಗಟ್ಟುವ ಮತ್ತು ಅಂತರ್ಜಲ ಪೂರಕ ಮಾಡುವ ಅರಣ್ಯನಾಶ ಮತ್ತು ನದಿಗಳ ಕೊಲೆ ನಿರಂತರವಾಗಿ ಮಾಡುವ ಮೂಲಕ ಜನರ ಅನ್ನದ ಬಟ್ಟಲಿಗೇ ಕೈ ಹಾಕುತ್ತಿದ್ದಾರೆ. ಕೆಲವರ ಭೋಗ ಜೀವನಕ್ಕಾಗಿ ಮಿಲಿಯಾಂತರ ಜನರ ಬದುಕಿನ ನಾಶವಾಗುತ್ತಿರುತ್ತದೆ."*

**ಬಿಟ್ಟು ಸೆಗಲ್, ಅಂತಾರಾಷ್ಟ್ರೀಯ ಪರಿಸರ ತಜ್ಞ**

*"ಹತ್ತು ವರ್ಷಗಳಲ್ಲಿ ದೇಶದ ಎಲ್ಲಾ ನದಿಗಳನ್ನು ಜೋಡಿಸಬೇಕು ಎಂದು ಆಜ್ಞಾಪಿಸಿದ ಸುಪ್ರೀಂ ಕೋರ್ಟಿನ ಉಮೇದನ್ನು ನಿಜಕ್ಕೂ ಪುಷ್ಟೀಕರಿಸಲು ಸಾಧ್ಯವಿಲ್ಲ. ಇಂಥ ಮಹತ್ವದ ತೀರ್ಪುಕೊಡುವ ಮೊದಲು, ಘನತವೆತ್ತ ನ್ಯಾಯಾಧೀಶರುಗಳು ಈ ಯೋಜನೆಯ ಅಧ್ಯಯನ ನಡೆಸುವಂತೆ ಆದೇಶಿಸಬೇಕಿತ್ತು."*

**ರಾಮಸ್ವಾಮಿ ಆರ್. ಅಯ್ಯರ್, ಭೂತಪೂರ್ವ ಕಾರ್ಯದರ್ಶಿ**
**ಜಲ ಸಂಪನ್ಮೂಲ ಸಚಿವಾಲಯ, ಭಾರತ ಸರಕಾರ**

*"ನೇಪಾಳ, ಭೂತಾನ, ಬಾಂಗ್ಲಾದೇಶಗಳ ಒಪ್ಪಿಗೆ ಈ ಯೋಜನೆಗೆ ಬೇಕು. ಅವು ನಮಗೆ ಸಹಕರಿಸಲಾರವು. ಅಲ್ಲಿ ನಾಲ್ಕೂವರೆ ಲಕ್ಷ ಜನ ಸ್ಥಳಾಂತರಗೊಳ್ಳುತ್ತಾರೆ. 79,292 ಹೆಕ್ಟೇರು ಅರಣ್ಯ ಮುಳುಗಡೆಯಾಗುತ್ತದೆ.*

**ಶಂಕರ್ ಅಯ್ಯರ್, ಪತ್ರಕರ್ತ**

*"ನೂರಾರು ಮೀಟರುಗಳಿಗಿಂತಲೂ ಎತ್ತರದಲ್ಲಿರುವ ದಕ್ಷಿಣ ಭಾರತಕ್ಕೆ, ಉತ್ತರದಿಂದ ನೀರನ್ನು ಮೇಲೆ ಹಾಯಿಸಲು ತಗಲುವ ಜಲಮೂಲ ವಿದ್ಯುತ್ ಶಕ್ತಿ ಅಗಾಧವಾದುದು?"*

**ಡೆರಿಲ್ ಡಿ' ಮಾಂಟೆ, ಪರಿಸರ ತಜ್ಞ**

**'ನೀರು ವಿಮೋಚನೆ' ಘೋಷಣೆ**

2001ನೆಯ ಇಸವಿ, ಡಿಸೆಂಬರ್ 16ರಂದು ಜಗತ್ತಿನ ಹೆಸರಾಂತ ಪರಿಸರ ಹಾಗೂ ಸಮಾಜ ಸೇವಾ ಕಾರ್ಯಕರ್ತರು ದೆಹಲಿಯ ನವಧಾನ್ಯ ಸಂಸ್ಥೆಯಲ್ಲಿ ಕಲೆತು ನೀರನ್ನು ಸಮಷ್ಟಿ ಸಾಮುದಾಯಿಕ ಸಾರ್ವಜನಿಕ ಸೊತ್ತು (ಕಲೆಕ್ಟಿವ್ ಕಮ್ಯುನಿಟಿ ಕಾಮನ್) ಎಂದು ರಕ್ಷಿಸುವ ಉಪಾಯವನ್ನು ಚಿಂತಿಸಿ ನೀರಿನ ಬಿಡುಗಡೆಯ ಘೋಷಣೆ (ವಾಟರ್ ಲಿಬರೇಶನ್ ಡಿಕ್ಲರೇಶನ್) ಈ ರೀತಿ ಘೋಷಿಸಿತು -

"ನೀರು ಜೀವನ. ಪ್ರಕೃತಿಯ ಉದಾರ ಕೊಡುಗೆ. ನೀರಿನ ಬಳಕೆಯ ಸ್ವಾತಂತ್ರ್ಯ ಮೂಲಭೂತ ಹಕ್ಕು. ಅದನ್ನು 'ಸರಕು' ಎಂದು ಪರಿಗಣಿಸಬಾರದು. ಲಾಭಕ್ಕಾಗಿ ನೀರಿನಲ್ಲಿ ವ್ಯಾಪಾರ ಮಾಡಬಾರದು. ಬಾಯಾರಿಕೆಯಿಂದ ಮುಕ್ತಿ ಪಡೆಯುವ 'ಹಕ್ಕು' ಜನರಿಗಿದೆ. ಹೀಗಾಗಿ ಅವರ ಬದುಕಿಗೆ ಅನಿವಾರ್ಯವಾಗಿರುವಷ್ಟು ಶುದ್ಧ ನೀರನ್ನು ಪಡೆಯುವ ಹಕ್ಕೂ ಅವರಿಗಿದೆ.

"ಜೀವನವೇ ಆದ ನೀರನ್ನು ಖಾಸಗೀಕರಣಗೊಳಿಸಿ, ಬೃಹತ್ 'ಕಾರ್ಪೊರೇಟ್' ನಿಯಂತ್ರಣಕ್ಕೊಳಪಡಿಸುವುದು ಜಗತ್ತಿನಾದ್ಯಂತ ಇಂದು ನಮ್ಮ ಅನುಭವಕ್ಕೆ ಬರುತ್ತಿದೆ. ಈ ಕೃತ್ಯವು ಬದುಕಿನ ಅವಶ್ಯಕತೆಯಾದ ನೀರು ಜನರಿಗೆ ದೊರೆಯದಂತೆ ತಡೆಯೊಡ್ಡುತ್ತದೆ. ಎಲ್ಲಾ ಜಲ ಸಂಪತ್ತಿನ ಒಡೆತನ, ನಿಯಂತ್ರಣ, ನಿರ್ವಹಣೆ, ಬಳಕೆ - ಎಲ್ಲವೂ ಆಯಾಯ ಸಹಜ ಪರಿಸರದಲ್ಲಿರುವ ಸ್ಥಳೀಯ ಸಮುದಾಯಗಳ ಕೈಯಲ್ಲೇ ಇರಬೇಕು.

"ಸಮಸ್ತ ಜಗತ್ತಿನ ಜನರಾದ ನಾವು ನೀರನ್ನು ಲಾಭಕ್ಕಾಗಿ 'ಗೂಡ್ಸ್'ನಂತೆ ಬಳಸುವುದನ್ನು ಬಿಡೆವು.

"ನಾವು ಸಾಮೂಹಿಕವಾಗಿ ನೀರನ್ನು 'ಕಾರ್ಪೊರೇಟ್' ಮತ್ತು ಖಾಸಗಿ ಏಜನ್ಸಿಗಳ ಹಿಡಿತದಿಂದ ಬಿಡುಗಡೆಗೊಳಿಸಿ, ಜನರಿಗೆ ನೀರಿನ ಒಡೆತನವನ್ನು ಸಮಷ್ಟಿ ಹಿತಕ್ಕಾಗಿ ಹಿಂತಿರುಗಿಸಲು ದುಡಿಯುತ್ತೇವೆ.

"ಜಗತ್ತಿನಾದ್ಯಂತ ಎಲ್ಲಾ ದೇಶಗಳು ತಮ್ಮ ತಮ್ಮ ನೆಲದಲ್ಲಿ ಸಾರ್ವಜನಿಕ ಹಿತಕ್ಕಾಗಿ, ನೀರನ್ನು ರಕ್ಷಿಸಲು ಪ್ರಬಲ ಕ್ರಮಗಳನ್ನು ಜಾರಿಗೊಳಿಸಬೇಕೆಂದು ಆಗ್ರಹಿಸುತ್ತೇವೆ."

**ಜೀವಂತ ನದಿಗಳ ಛಿದ್ರೀಕರಣ - ಅವೈಜ್ಞಾನಿಕ**

ಒಂದು ಜೀವಂತ ನದಿಯ ಬದುಕಿನ ಮಧ್ಯೆ ಮಾರಣಾಂತಿಕವಾಗಿ ಪ್ರವೇಶಿಸುವುದು ತೀರ ಅಸಂಗತ, ಅವೈಜ್ಞಾನಿಕ, ಮಾತ್ರವಲ್ಲ ಆತ್ಮಹತ್ಯಾಕಾರಕ. ನದಿಯ ಸಹಜಗತಿಯ ಬದಲಾವಣೆ ಜೀವಪರಿಸರಕ್ಕೆ ಒಡ್ಡಬಹುದಾದ ಆಪತ್ತು ಒಂದೆಡೆಯಾದರೆ, ಇನ್ನೊಂದೆಡೆ ಈ ನದಿಯ ಆಶ್ರಯದಿಂದ ತಮ್ಮ ಕಸುಬು ಉಪಕಸುಬುಗಳನ್ನು ಮಾಡುತ್ತ ಬದುಕುವ ಲಕ್ಷಾಂತರ ಜನ ಬೇಸಾಯಗಾರರ, ಗುಡಿಗಾರರ, ಬೆಸ್ತರ, ಗೋಸಾಯಿಗಳ, ಆರ್ಥಿಕ, ಸಮಾಜಶಾಸ್ತ್ರೀಯ, ಸಾಂಸ್ಕೃತಿಕ ಬದುಕಿಗೆ ಈ ಯೋಜನೆ ನೀಡಬಹುದಾದ ಆಘಾತ ನಮ್ಮ ಊಹೆಗೂ ನಿಲುಕದು. ಆಧುನಿಕ ಮನಸ್ಸಿನ ಆರ್ಥಿಕ ಲಾಭ-ನಷ್ಟಗಳ ಲೆಕ್ಕಾಚಾರಗಳೆಲ್ಲ ಇಲ್ಲಿ ತಲೆಕೆಳಗಾಗುತ್ತವೆ.

ಒಂದು ನದಿಗೆ ಮಿಲಿಯಾಂತರ ವರ್ಷಗಳ ಚರಿತ್ರೆಯಿದೆ. ಅದರದೇ ಆದ ಸ್ವತಂತ್ರವಾದ

ವೈಯಕ್ತಿಕ ಬದುಕಿದೆ, ನೆನಪುಗಳಿವೆ. ನೈಸರ್ಗಿಕ ನಿಯಮಕ್ಕನುಗುಣವಾಗಿ, ಆಯಾಯಾ ಸ್ಥಳೀಯ ಪರಿಸರದ ವಿಶಿಷ್ಟತೆಗಳೊಂದಿಗೆ ಮೇಳೈಸಿಕೊಂಡು ಪ್ರತಿ ನದಿಯೂ ಪ್ರತ್ಯಪ್ರತ್ಯೇಕ ಜೀವಕೋಶದಂತೆ ವಿಕಾಸವಾಗುತ್ತ ಬಂದಿದೆ; ಮಾತ್ರವಲ್ಲ, ತನ್ನ ಸುತ್ತಲಿರುವ ಸಮಸ್ತ ಜೀವ ಜಾತಿಗಳನ್ನು, ಮನುಷ್ಯನನ್ನೂ ಧಾರಣೆ ಮಾಡಿ ಪೊರೆದಿದೆ.

ಪ್ರತಿ ನದಿಯ ಬದುಕೂ, ಅವು ಹರಿಯುವ ಪ್ರದೇಶದ ಅಸಂಖ್ಯ ನೈಸರ್ಗಿಕ ವಿದ್ಯಮಾನಗಳ ಜೊತೆ ಅಗೋಚರವಾದ ಏನೇನೋ ಸಂಬಂಧಗಳನ್ನು ಹೊಂದಿರುತ್ತದೆ. ಪ್ರತಿ ನದಿಯೂ ಅದರ ಸುತ್ತಲಿನ ಪರಿಸರದ ಜೊತೆ ಪರಸ್ಪರ ಹೊಂದಿಕೊಳ್ಳುತ್ತಾ, ಪರಸ್ಪರ ಪ್ರಭಾವ ಬೀರುತ್ತಾ ವಿಕಾಸವಾದ ಒಂದು ಸಮಗ್ರ ಜೀವಜಾಲ. ಒಂದನ್ನು ಬಿಟ್ಟು ಒಂದಿಲ್ಲ. ಅವುಗಳ ನಡುವೆ ಹಾಸುಹೊಕ್ಕಾಗಿರುವ ಈ ಅಸಂಖ್ಯ ಅಗೋಚರ ಗೊಣಸು, ಒಳಗೊಣಸುಗಳ ಜಾಲವನ್ನು ನಾವು ಸೃಷ್ಟಿಸಿಲ್ಲ, ಹೆಣೆದಿಲ್ಲ. ಅವನ್ನು ನಮ್ಮ ದಡ್ಡತನ ದುರಹಂಕಾರಗಳಿಂದ ತುಂಡರಿಸಿದಲ್ಲಿ ಆಗುವ ದುಷ್ಪರಿಣಾಮದ ಅರಿವು ನಮಗಿದೆಯೇ ?

ಈ ಸೂಕ್ಷ್ಮಗಳನ್ನು ಗ್ರಹಿಸದೆ, ಈ ಬಗ್ಗೆ ಸಮಗ್ರ ಅಧ್ಯಯನವನ್ನೂ ನಡೆಸದೆ, ನದಿಗಳನ್ನು ಜೋಡಿಸಲು ಹವಣಿಸಿದರೆ ಖಂಡಿತವಾಗಿಯೂ ನಮ್ಮ ನದಿಗಳು ಸರಸ್ವತೀ ನದಿಯಂತೆ ಬತ್ತಿಹೋದಾವು. ಭೂಮಿಯಡಿ ಇಂಗಿ ಹೋದಾವು. ಅಥವಾ ಕಲ್ಪನೆಗೂ ಮೀರಿದ ಇನ್ನೇನೇನೋ ಅನಾಹುತಗಳು ಸಂಭವಿಸಿಯಾವು. ಜೀವಂತ ನದಿಗಳನ್ನು ವಿರೂಪಗೊಳಿಸುವುದೆಂದರೆ, ಆ ನದಿಗಳ ವೈಶಿಷ್ಟ್ಯಪೂರ್ಣ ಬದುಕನ್ನು ಛಿದ್ರಗೊಳಿಸಿದಂತೆ. ನದಿಗಳನ್ನು ಕೊಂದಂತೆ.

### "ವೇಸ್ಟ್" ಕಲ್ಪನೆ ಪ್ರಕೃತಿಯಲ್ಲಿಲ್ಲ

ನಿಸರ್ಗದ ಸಂಪತ್ತೆಲ್ಲಾ ತನ್ನ ಉಪಯೋಗಕ್ಕಾಗಿಯೇ ಇರುವಂಥದು ಎಂದು ಆಧುನಿಕ ಮನುಷ್ಯ ಭ್ರಮಿಸಿಕೊಂಡಿದ್ದಾನೆ. ತಾನು ಈ ಸಂಪತ್ತನ್ನು ಬಳಸಿಕೊಳ್ಳದಿದ್ದರೆ, ಇವೆಲ್ಲವೂ 'ವೇಸ್ಟ್' (ವ್ಯರ್ಥ) ಆಗುತ್ತದೆ ಎಂಬ ದಡ್ಡ ತರ್ಕ ಬೇರೆ ಮಾಡುತ್ತಾನೆ. ಆದರೆ ಈ ಸೃಷ್ಟಿಯಲ್ಲಿ ಆಧುನಿಕ ಮನುಷ್ಯ ಕಾಲಿಟ್ಟು, ಕೆಲವು ದಶ ಸಾವಿರ ವರ್ಷಗಳಾಯಿತಷ್ಟೆ. ಆದರೆ ನದಿಗಳು ಮಿಲಿಯಾಂತರ ವರ್ಷಗಳಿಂದ ಹರಿಯುತ್ತಿವೆ. ಮನುಷ್ಯ ಬರುವ ಮೊದಲೂ ಈ ನದಿಗಳು ಹರಿಯುತ್ತಿದ್ದುವು. ಮನುಷ್ಯನ ಹಂಗಿಲ್ಲದೆ ಸಮುದ್ರ ಸೇರುತ್ತಿದ್ದುವು, ಸಕಲ ಜೀವಿಗಳಿಗೂ ನೀರುಣಿಸುತ್ತಿದ್ದುವು, ಪೋಷಿಸುತ್ತಿದ್ದುವು.

ವೇಸ್ಟ್ ಎಂಬ ಕಲ್ಪನೆಯೇ ಪ್ರಕೃತಿಯಲ್ಲಿಲ್ಲ. ಅದರ ಪ್ರತಿಯೊಂದು ಕ್ರಿಯೆಗೂ ಅರ್ಥವಿದೆ. ಅದನ್ನು ಅರಿಯಲು ನಾವು ಅಸಮರ್ಥರಿರಬಹುದು. ಅರಿತುಕೊಳ್ಳಲು ಬೇಕಾದ ವ್ಯವಧಾನವೂ ಇಂದಿನ ವೇಗದ ಬದುಕಿನಲ್ಲಿ ನಮಗಿಲ್ಲದಿರಬಹುದು. ಉದಾಹರಣೆಗೆ, ಬೆಟ್ಟ-ಕಾಡುಗಳ ನಡುವೆ ಹುಟ್ಟಿ ಹರಿದು ಬರುವ ನೀರು ತನ್ನ ಜೊತೆ ಸತ್ತ ಮರ, ಪ್ರಾಣಿಗಳು, ಕಸ, ಕಡ್ಡಿ, ಎಲೆ ಮುಂತಾದ ಪೋಷಕಾಂಶಗಳನ್ನು ಹೊತ್ತು ತಂದು ಸಮುದ್ರಕ್ಕೆ ಹಾಕುತ್ತದೆ. ಇವು ಮೀನುಗಳ ಆಹಾರ. ಸಮುದ್ರಕ್ಕೆ ಈ ನೀರಿನ ಒಳಹರಿವನ್ನು ತಡೆದರೆ ಮೀನಿನ ಸಂತತಿ ನಾಶವಾಗಿ, ಲಕ್ಷಾಂತರ ಮಂದಿ ಮೀನುಗಾರರು ಬೀದಿ ಪಾಲಾದಾರು. ಮಾತ್ರವಲ್ಲದೆ. ಧರೆಗೆ, ಜೀವಿಗಳಿಗೆ ನೀರುಣಿಸಿ, ಸಮುದ್ರ ಸೇರಿದ ನೀರು

ಮತ್ತೆ ಆವಿಯಾಗಿ, ಮೋಡಗಳಾಗಿ, ಮಳೆಯಾಗಿ ಭೂಮಿಗೆ ಜೀವರಸವನ್ನೆರೆಯುವ ಈ ಸತತ ಕಾರ್ಯವರ್ತುಲ ನಿಸರ್ಗದ ವಿಸ್ಮಯಗಳಲ್ಲೊಂದು.

ನೀರು ಯಾರಿಗೂ ಸೇರಿದ್ದಲ್ಲ. ಅಂದರೆ ಸಕಲ ಜೀವಿಗಳಿಗೂ ಸೇರಿದ್ದು. ಕೇವಲ ಮನುಷ್ಯನಿಗಾಗಿ ಅಂತೂ ಅಲ್ಲವೇ ಅಲ್ಲ. ಈ ಪ್ರಕೃತಿ ನಿಯಮವನ್ನು ಅರಿಯದೆ, 'ವೇಸ್ಟ್'. ಎಂದು ಅಪಲಾಪ ಮಾಡುವುದು ಎಷ್ಟು ಅಸಂಬದ್ಧ !

**ಅಮೇರಿಕಾದ 'ಕಾರ್ಬನ್ ಕಾಪಿ'**

ನದಿ ತಿರುಗಿಸುವ ಈ ಯೋಚನೆ ನಮ್ಮ ಸ್ವಂತದ್ದಲ್ಲ. ನಾವು ಸ್ಥಳೀಯವಾಗಿ ಚಿಂತಿಸಿ ಕಂಡುಕೊಂಡ ಹಾದಿಯಲ್ಲ; ನಮ್ಮ ಕಲ್ಪನಾ ಸಾಮರ್ಥ್ಯ, ಸೃಜನಶೀಲತೆ ಬತ್ತಿದಂತೆ ಅನ್ಯರನ್ನು ಅನುಕರಿಸಿದ ಹಾದಿಯಿದು. ಇದಕ್ಕೆ ನಮಗೆ ಮಾದರಿ, ಅಮೇರಿಕಾ. ನೀರು ಮನುಷ್ಯನ ತೊತ್ತಿನ ಆಸ್ತಿ ಎಂಬ ಅಪಕಲ್ಪನೆಯಿಂದ ಅಮೇರಿಕಾ, ಕೊಲೆರಾಡೋ ಮಹಾನದಿಯ ನೀರು 'ವೇಸ್ಟ್' ಆಗದಂತೆ ಬೇರೆ ಕಡೆಗೆ ತಿರುಗಿಸಿತು. ಪರಿಣಾಮವಾಗಿ ಆ ನದಿ ಸಮುದ್ರವನ್ನೇ ಸೇರದೆ ಇಂದು ಅನೇಕ ಅನಾಹುತಗಳಾಗಿವೆ. ಈ ರೀತಿ ಒಂದು ಕಾಲದಲ್ಲಿ ಅಮೇರಿಕಾ ತನ್ನ ನದಿಗಳನ್ನೆಲ್ಲಾ ಸಿಕ್ಕಸಿಕ್ಕಂತೆ ತಿರುಗಿಸಿ, ಜೋಡಿಸಿ, ವಿರೂಪಗೊಳಿಸಲು ಆರಂಭಿಸಿತು. ಇಂದು ಅವುಗಳ ದುಷ್ಪರಿಣಾಮಗಳನ್ನು ಅನುಭವಿಸುತ್ತಿದೆ. ನದಿಗಳನ್ನು ಮರಳಿ ಜೀವಂತಗೊಳಿಸುವ ಬಹುದೊಡ್ಡ ಯೋಜನೆಯನ್ನೇ ಹಾಕಿಕೊಂಡಿದೆ. ಕಟ್ಟಿದ ಅನೇಕ ಬೃಹತ್ ಅಣೆಕಟ್ಟುಗಳನ್ನು ಒಡೆಯುತ್ತಿದೆ. ಮೊನ್ನೆ ತಾನೆ ಬೃಹತ್ ಅಣೆಕಟ್ಟೊಂದನ್ನು ಒಡೆದ ಸುದ್ದಿ ಪತ್ರಿಕೆಗಳಲ್ಲೆಲ್ಲಾ ಬಂದಿತ್ತು.

ಒಣಭೂಮಿಗೆ ನೀರು ಹಾಯಿಸುವ ಉದ್ದೇಶದಿಂದ ಆಸ್ಟ್ರೇಲಿಯಾ ದೇಶವು ತನ್ನ ಸ್ನೋವಿ, ಮರ್‍ರೆ, ಎನ್‌ಕಾಬೇಸ್ ಹಾಗೂ ಮೆರ್‍ರಾಂಬಿಡ್ಜಿ ನದಿಗಳನ್ನು ಜೋಡಿಸಿತು. ಅಲ್ಲಲ್ಲಿ ಭಾರೀ ಡ್ಯಾಮ್‌ಗಳನ್ನು ಕಟ್ಟಿ ನದಿಗಳನ್ನು ಎಲ್ಲೆಲ್ಲಿಗೋ ಹರಿಸಿತು. ಇಂದು ಈ ಡ್ಯಾಮ್‌ಗಳ ಮುಂದೆಯೂ ಹರಿಯಬೇಕಿದ್ದ ನದಿಗಳು ಬರಡಾಗಿ ಪ್ರಾಣಿ, ಪಕ್ಷಿ ಸಂಕುಲ, ಸಮಸ್ತ ಜಲಚರಗಳು, ಕಾಡು ಪರಿಸರ ಎಲ್ಲ ಮಾಯವಾಗುತ್ತ ಹೋದವು. ಇತ್ತ ಡ್ಯಾಮ್‌ನಲ್ಲಿದ್ದ ನೀರೂ ಕೂಡ ಕ್ಷಾರ ಭರಿತವಾಗಿ (saline) ತೇವ ಭರಿತ ಭೂಮಿಯೂ ಒಣಗಲಾರಂಭಿಸಿತು. ೩೫-೪೦ ವರ್ಷಗಳ ನಂತರ ಇತ್ತೀಚೆಗೆ ಜನರು "ನಮ್ಮ ನದಿಗಳನ್ನು ನಮಗೆ ಮರಳಿಕೊಡಿ" ಎಂದು ದೊಡ್ಡ ಚಳವಳಿ ಹೂಡಿದ್ದಾರೆ. ಪರಿಣಾಮವಾಗಿ, ೨೦೦೦ ಅಕ್ಟೋಬರ್ ೭ರಂದು ಸ್ನೋವಿ ನದಿಗೆ ನೀರು ಹರಿಸಿ ಮತ್ತೆ ನದಿಗಳಿಗೆ ಜೀವಕೊಡುವ ನಿರ್ಧಾರ ಆಸ್ಟ್ರೇಲಿಯಾ ಸರಕಾರ ಕೈಗೊಂಡಿದೆ. ಅವರು ಹಿಂದೆ ಮಾಡಿದ್ದ ತಪ್ಪನ್ನು ನಾವು ಇಂದು ಮಾಡಲು ಹೊರಟಿದ್ದೇವೆ ?

ಈ ದೂರದ ಕತೆ ಏಕೆ ? ನಮ್ಮ ಕರಾವಳಿ ಉಡುಪಿ ಜಿಲ್ಲೆಯ 'ಎಂದೂ ಬತ್ತದ ನದಿ' ಎಂದೇ ಹೆಸರಾದ ಚಕ್ರಾ ನದಿಗೆ ಎರಡುಕಡೆ ಡ್ಯಾಮ್ ಹಾಕಿ ಲಿಂಗನಮಕ್ಕಿಗೆ ನೀರು ಹರಿಸಲಾಯಿತು. ಇಂದು, ಈ ನದಿಯಲ್ಲಿ ಹೂಳು ತುಂಬಿ ನೀರಿನ ಒಳ ಹರಿವು ಕಡಿಮೆ ಆಗಿ ಮಳೆಗಾಲದಲ್ಲೂ ಒಂದು ಚಿಕ್ಕ ತೊರೆಯಂತೆ ಇಂದು ಹರಿಯುತ್ತಿದೆ. ಬೇಸಗೆಯಲ್ಲಂತೂ ಒಂದು ತೊಟ್ಟೂ ನೀರಿಲ್ಲದೆ, ಕೃಷಿಕರಿಗೆ ತೊಂದರೆಯಾಗಿದೆ. ರಶ್ಯಾ ದೇಶವೂ ಈ ದುರಂತದ ಪಟ್ಟಿಯಲ್ಲಿ ಸೇರಿದೆ.

ಹೀಗೆ ನೂರಾರು ನಿದರ್ಶನಗಳು ನಮ್ಮ ಕಣ್ಣ ಮುಂದೆ ಇರುವಾಗ, ಕೆಲವು ರಾಜಕಾರಣಿಗಳು ಸೇರಿ ನದೀ ಜೋಡಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡು ಮುಂದುವರಿಯುತ್ತಿರುವುದು, ನಿಜಕ್ಕೂ ದಿಗಿಲು ಹುಟ್ಟಿಸುವ ಸಂಗತಿ.

**ಆರ್ಥಿಕ ಅಸಂಗತತೆ**

ಈ ಬೃಹತ್ ಯೋಜನೆಯ ಸಾಧ್ಯತೆಯ ಬಗ್ಗೆ ೧೫೦ ಕೋಟಿ ರೂಪಾಯಿ ವೆಚ್ಚದಲ್ಲಿ ೨೦೦೮ರ ಒಳಗೆ ಕೂಲಂಕಷ ಅಧ್ಯಯನ ನಡೆಸುವ ತೀರ್ಮಾನವಾಗಿದೆ. ಆದರೆ ವಿಪರ್ಯಾಸವೆಂದರೆ, ಅದಕ್ಕೆ ಮೊದಲೇ ಈ ನದೀ ಜೋಡಣೆಯ ಅಂದಾಜು ವೆಚ್ಚ ಜನಸಾಮಾನ್ಯನ ಊಹೆಗೂ ನಿಲುಕದ ೫,೬೦,೦೦೦ ಕೋಟಿ ರೂಪಾಯಿಯೆಂದು ತೀರ್ಮಾನ ಮಾಡಲಾಗಿದೆ. ಹಾಗಾದರೆ ಈ ತಜ್ಞರ ಅಧ್ಯಯನದ ಬಗ್ಗೆ ನಮ್ಮ ಜನನಾಯಕರು 'ಸೀರಿಯಸ್' ಇದ್ದಾರೆಯೇ ?

ಈ ಅಪ್ರಾಯೋಗಿಕ ಯೋಜನೆಯ ಬದಲು, ನಮ್ಮ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಪರ್ಯಾಯ ಸಾಧ್ಯತೆಗಳ ಬಗ್ಗೆ ಗಂಭೀರವಾಗಿ ಯೋಚಿಸಿದ್ದೇವೆಯೇ ! ಭಾರತೀಯ ಕೃಷಿಕನ ಬದುಕು ಇದುವರೆಗೂ ಸ್ವಯಂ ಆಧಾರಿತ ಸ್ಥಿತಿಯಲ್ಲಿತ್ತು. ಆತನ ನೀರನ್ನು ಬಳಸುವ, ಉಳಿಸುವ ಅನುಭವ ಜನ್ಯ ದೇಸೀ ತಿಳುವಳಿಕೆಯನ್ನು ನಾವು ಗಂಭೀರವಾಗಿ ಪರಿಗಣಿಸಿದಂತಿಲ್ಲ. ಅದರ ಬದಲು ಇನ್ಯಾರದೋ 'ಐಡಿಯಾ'ದ ಆಧಾರದಲ್ಲಿ ಇಡಿಯ ಭಾರತವನ್ನೇ ಒಂದು ಪ್ರಯೋಗ ಶಾಲೆಯಾಗಿ ಪರಿವರ್ತಿಸಿ ವಿಪತ್ತಿನ ಸರಮಾಲೆಯನ್ನೇ ಆವಾಹಿಸಿಕೊಳ್ಳುತ್ತಿದ್ದೇವೆ.

ಈ ವಿಶಾಲ ಭಾರತದ ನೀರಿನ ಸಮಸ್ಯೆಯನ್ನು ಹಿಮಾಲಯದಿಂದ ಹರಿಯುವ ಕೆಲವು ನದಿಗಳಿಂದ ಪರಿಹರಿಸುತ್ತೇವೆ ಎಂಬ ಕಲ್ಪನೆಯೇ ಅಜ್ಞಾನ ಪ್ರೇರಿತವಾದದ್ದು, ಅಸಂಗತವಾದದ್ದು. ನೀರು ನಮ್ಮ ಬದುಕು. ಕಲ್ಲು ಸಿಮೆಂಟಿನಂತಲ್ಲ. ಕೋಟ್ಯಂತರ ಜನರ, ಜೀವಿಗಳ ಬದುಕಿನ ಆಸರೆಯಾದ ನೀರಿನ ಜೊತೆ ರಾಜಕಾರಣಿಗಳ ಚೆಲ್ಲಾಟ ಒಂದರ್ಥದಲ್ಲಿ ನಿಜಕ್ಕೂ ಘೋರಪಾತಕವೆನ್ನದೆ ವಿಧಿಯಿಲ್ಲ. ಏಕೆಂದರೆ, ೨೦೦೨ನೆಯ ಇಸವಿಯ ಏಪ್ರಿಲ್ ಒಂದರಂದು, ಭಾರತ ಸರಕಾರ 'ನ್ಯಾಶನಲ್ ವಾಟರ್ ಪಾಲಿಸಿ'ಯನ್ನು ಘೋಷಿಸಿದೆ. ಈ ಪಾಲಿಸಿಯು, ನೀರನ್ನು ಕೇವಲ ಆಸ್ತಿ. 'ಗೂಡ್ಸ್'ನಂತೆ ನೀರಿನಲ್ಲೂ ವ್ಯಾಪಾರ ಮಾಡಬಹುದೆಂದು ವ್ಯಾಖ್ಯಾನಿಸಿದೆ. ಈ ಕಾನೂನು ನೀರಿನ ವ್ಯಾಪಾರೀಕರಣ, ಖಾಸಗೀಕರಣಕ್ಕೆ ಇಂಬುಕೊಟ್ಟು, ಖಂಡಿತವಾಗಿಯೂ ಸಾಮುದಾಯಿಕ ನೀರಿನ ಹಕ್ಕನ್ನೇ ನಾಶಗೊಳಿಸುತ್ತದೆ. ಈಗಾಗಲೇ ಛತ್ತೀಸಗಢದಲ್ಲಿ ಶಿವನಾಥ ನದಿಯನ್ನು ಖಾಸಗೀಕರಣಗೊಳಿಸಿ, ಜನರ ಕುಡಿಯುವ ನೀರಿನ ಹಕ್ಕನ್ನೇ ಮೊಟಕುಗೊಳಿಸಿದ ಘಟನೆ ನಮ್ಮ ಮುಂದಿದೆ. ಹಾಗಾಗಿ, ಭಾರತದ ಪ್ರತೀ ಪ್ರಜೆಗೂ, ಈ ನದಿ ಜೋಡಣೆಯ ಪ್ರಸ್ತಾಪ, ಮತ್ತು ನೀರಿನ ಮೇಲೆ ಕೇಂದ್ರ ಸರಕಾರದ ಸ್ವಾಮ್ಯ, ಅಂತಿಮವಾಗಿ ಬಹುರಾಷ್ಟ್ರೀಯ ಕಂಪನಿಗಳ ಖಾಸಗೀ ಸೊತ್ತಾಗಿ ಪರಿವರ್ತನೆಯಾದೀತೇ ಎಂಬುದರ ಬಗ್ಗೆ ತಿಳಿದುಕೊಳ್ಳುವ ಹಕ್ಕಿದೆ.

**ದಕ್ಷಿಣ ಕನ್ನಡದ ನೇತ್ರಾವತಿ ನದಿ ತಿರುಗಿಸುವ ಕತೆ :**

ಇದರ ಜೊತೆ ನನ್ನ ಜಿಲ್ಲೆಯಲ್ಲಿ ನಡೆಯುತ್ತಿರುವ ಇನ್ನೊಂದು ಚರ್ಚೆಯನ್ನು ಸೂಕ್ಷ್ಮವಾಗಿ

ಉಲ್ಲೇಖಿಸಬೇಕು. ನಿವೃತ್ತಿ ಹೊಂದಿದ ಕೆಲವು ಇಂಜಿನಿಯರುಗಳು ಸೇರಿ, 'ಸ್ಯಾಟಲೈಟ್ ಸರ್ವೇ' ಮೂಲಕ ಮಾಡಿದ ಟೋಪೋ ಶೀಟ್ಸ್‌ಗಳನ್ನು ಮೇಜಿನ ಮೇಲೆ ಹರಡಿ ನೇತ್ರಾವತಿ ನದಿ ತಿರುಗಿಸುವ ಯೋಜನೆಯನ್ನು ತಯಾರಿಸಿದ ಸಂಗತಿ ನಿಜಕ್ಕೂ ದಿಗಿಲು ಹುಟ್ಟಿಸುವಂಥದು.

೧೨,೮೦೦ ಕೋಟಿ ರೂಪಾಯಿಗಳ ಈ ಬೃಹತ್ ಯೋಜನೆಯ ಬಗ್ಗೆ, ಸಾರ್ವಜನಿಕ ಚರ್ಚೆಯಾಗಲೀ ಕೂಲಂಕಷ ಅಧ್ಯಯನವಾಗಲೀ ನಡೆದಿಲ್ಲ. ಜನತಂತ್ರ ರೀತ್ಯಾ ಚರ್ಚೆಯೇ ಇಲ್ಲದೆ ಜನರ ಮೇಲೆ ಇಂಥ ಅಪಾಯಕಾರೀ ಯೋಜನೆಯನ್ನು ಹೇರುವುದು ದುರಾದೃಷ್ಟಕರ.

ನೇತ್ರಾವತಿ ನದಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಬೆಳ್ತಂಗಡಿ, ಪುತ್ತೂರು, ಬಂಟ್ವಾಳ, ಮಂಗಳೂರು ತಾಲೂಕುಗಳ ಲಕ್ಷಾಂತರ ಜನರ ಜೀವನಾಡಿ. ಸುಳ್ಯ ತಾಲೂಕಿನಲ್ಲಿ ಅಡಿಕೆ ಬೆಳೆಗಾರರು ನೇತ್ರಾವತಿಯನ್ನು ಆಧರಿಸಿ ಕೊಂಡಿದ್ದಾರೆ. ಬೆಳ್ತಂಗಡಿ, ಪುತ್ತೂರು, ಬಂಟ್ವಾಳದ ಕೃಷಿಕರು ಬೇಸಾಯಕ್ಕೆ ಇದನ್ನು ಅವಲಂಬಿಸಿದ್ದಾರೆ. ಮಂಗಳೂರು ನಗರದ ಕುಡಿಯುವ ನೀರಿನ ಆಶ್ರಯ ಈ ನದಿಯೇ. ಲಕ್ಷಾಂತರ ಮಂದಿ ಬೆಸ್ತರೂ ಸಮುದ್ರಕ್ಕೆ ಈ ನದಿ ನೀರಿನ ಒಳ ಹರಿವಿನ ಮೇಲೆ ತಮ್ಮ ಜೀವನ ರೂಪಿಸಿಕೊಂಡಿದ್ದಾರೆ. ನೇತ್ರಾವತಿ ನದಿಯಲ್ಲಿ ನೀರು ಹರಿದಷ್ಟು ದಿನ, ಈ ಪ್ರದೇಶದ ಅಂತರ್ಜಲ ಮಟ್ಟ ಕುಸಿಯದಂತೆ ತಡೆಯುತ್ತದೆ. ತುಂಬೆಯಲ್ಲಿ ಹಾಕಿದ ಅಣೆಕಟ್ಟಿನಿಂದ ಆ ಪ್ರದೇಶದ ಅಂತರ್ಜಲ ಮಟ್ಟ ಏರಿದ್ದೇ ಇದಕ್ಕೆ ಸಾಕ್ಷಿ.

ಇನ್ನೂ ಮುಖ್ಯವಾಗಿ, ಅಸಂಖ್ಯಾತ ತೊರೆ-ಕೆರೆ-ಹಳ್ಳ-ನದಿಗಳಿಗೆ ಆಗರವಾದ, ದಟ್ಟವಾದ ನಿತ್ಯಹರಿದ್ವರ್ಣ ಬೆಟ್ಟ-ಕಣಿವೆಗಳಿರುವ, ವೈವಿಧ್ಯಮಯ ಜೀವಜಾತಿಗಳನ್ನು ಹೊಂದಿದ್ದು, ಜಗತ್ತಿನಲ್ಲೇ ೨೫ ಅತ್ಯಂತ ಸೂಕ್ಷ್ಮ ಜೀವಪರಿಸರ 'ಹಾಟ್‌ಸ್ಪಾಟ್'ಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟ ಪಶ್ಚಿಮಘಟ್ಟದ ನಡುವೆ ಇದನ್ನು ಕಾರ್ಯಗತಗೊಳಿಸುವ ಬಗೆ ಹೇಗೆ ಎಂಬ ಬಗ್ಗೆ ಗಂಭೀರ ಚಿಂತನ ನಡೆದದ್ದೇ ಕಾಣುವುದಿಲ್ಲ. ಈ ಯೋಜನೆಯ ರೂವಾರಿಗಳಿಗೆ ಜನರ ದೈನಂದಿನ ಬದುಕು ಛಿದ್ರಗೊಂಡೀತು ಎಂಬ ಬಗ್ಗೆ ಕಲ್ಪನೆಯೂ ಇಲ್ಲ, ಕಾಳಜಿಯೂ ಇಲ್ಲ.

ಇಲ್ಲಿ ಇನ್ನೂ ಒಂದು ಅಂಶ ಗಮನಿಸಬೇಕು. ಹಿಂದೆ ವರ್ಷದ ಹನ್ನೆರಡೂ ತಿಂಗಳು ಹರಿಯುತ್ತಿದ್ದ ನೇತ್ರಾವತಿ ಇಂದು ಬೇಸಗೆಯಲ್ಲಿ ಸಂಪೂರ್ಣ ಬರಿದಾಗುತ್ತಿದೆ. ಹೀಗಿರುವಾಗ, ನೇತ್ರಾವತಿಯ ಗತಿಯನ್ನು ಅದರ ಮೂಲದಲ್ಲೇ ತಿರುಗಿಸಿ ನಂತರ ೭-೮ ಜಿಲ್ಲೆಗಳಿಗೆ ನೀರೊದಗಿಸಲು ಹೊರಟದ್ದು ಅತ್ಯಂತ ಅಪ್ರಾಯೋಗಿಕ ಹಾಗೂ ದುಡುಕಿನ ನಿರ್ಧಾರ ಎನ್ನದೆ ವಿಧಿಯಿಲ್ಲ. ಇದರಿಂದಾಗಿ, ದಕ್ಷಿಣ ಕನ್ನಡಕ್ಕೆ ದೊರೆಯುತ್ತಿದ್ದ ಅಲ್ಪಸ್ವಲ್ಪ ನೀರೂ ಇನ್ನು ಮುಂದೆ ಸಿಕ್ಕಲಾರವು, ಮಾತ್ರವಲ್ಲ ಕೋಲಾರದಂಥ ದೂರದ ಜಿಲ್ಲೆಗಳಿಗೆ ಒಂದು ತೊಟ್ಟು ನೀರೂ ದಕ್ಕಲಾರದು.

**ಕೇವಲ ರಾಜಕಾರಣಿಗಳು ಕಾರಣರಲ್ಲ**

ಆದರೆ ಈ ಸ್ಥಿತಿಗೆ ಕೇವಲ ರಾಜಕಾರಣಿಗಳನ್ನು ನಾವು ದೂರುವುದು ಸರಿಯಲ್ಲ. ಅವರಿಗೆ ಖಚಿತ ಮಾಹಿತಿಯ ಕೊರತೆ ಇರಬಹುದು, ಸಂಬಂಧಪಟ್ಟ ಅಧಿಕಾರಿಗಳು ಸರಿ ಮಾಹಿತಿ ಕೊಡದಿದ್ದಿರಬಹುದು. ಆದರೆ ಅಧಿಕಾರಿಗಳು ಈ ಸೂಕ್ಷ್ಮವನ್ನು ತಿಳಿಯದಷ್ಟು ದಡ್ಡರಲ್ಲ. ಪ್ರಾಯಃ

ಅವರಿಗೆ ಅವರದೇ ಆದ 'ಹಿಡನ್ ಎಜೆಂಡಾ' ಇರಬಹುದು. ಕಂಟ್ರಾಕ್ಟರುಗಳ ಜೊತೆ, ಉದ್ಯಮಿಗಳ ಜೊತೆ ಗುಪ್ತ ಒಪ್ಪಂದವಿರಬಹುದು. ಅಧಿಕಾರಿಗಳಿಗಿಂತಲೂ ಮುಖ್ಯವಾಗಿ, ನಾಗರಿಕರಾದ ನಾವೇ ಈ ಪರಿಸ್ಥಿತಿಗೆ ಮೂಲಕಾರಣರಾಗಿದ್ದೇವೆ. ಯಂತ್ರ ನಾಗರೀಕತೆಯು ಸೃಷ್ಟಿಸುತ್ತಿರುವ ಮಾಯಾಲೋಕದಲ್ಲಿ, ನಮಗೆ ದತ್ತವಾದ ಪಾರಂಪರಿಕ ವಾಸ್ತವ ತಿಳುವಳಿಕೆಯನ್ನೇ ಕಳಕೊಂಡಿದ್ದೇವೆ. ಸೃಜನಶೀಲತೆಯ ಒರತೆ ಬತ್ತಿದಾಗ ಮಾತ್ರ ಇಂಥ ಹುಚ್ಚುಚ್ಚು ಚಿಂತನೆ ಹುಟ್ಟಿಕೊಳ್ಳುತ್ತದೆ.

**ಪರಿಹಾರ ಸೂತ್ರ**

'ಮಾನವ ಜನಾಂಗದ ಮುಂದಿನ ಹೋರಾಟ ನೀರಿಗಾಗಿ' ಎಂದು ಹಲವಾರು ವರ್ಷಗಳ ಹಿಂದೆಯೇ ನಾನು ಬರೆದ ಮಾತು ಇಂದು ನಿಜವಾಗುತ್ತಿದೆ. ಅಂಥ ಬಿಕ್ಕಟ್ಟು, ಇಂದು ಎದುರಾಗುತ್ತಿದೆ. ಇಡೀ ದೇಶವೇ ಇಂದು ಜಲಕ್ಷಾಮದ ತೀವ್ರತೆಯನ್ನು ಅನುಭವಿಸುತ್ತಿದೆ. ಆಚ್ಚರಿಗಿ ಮಳೆಯೊಂದೇ ನೀರಿನ ಮೂಲ. ನಮ್ಮ ದೇಶದ ಉದ್ದಗಲಕ್ಕೆ ಸಾಕಷ್ಟು ಮಳೆ ಬೀಳುವುದು ನಿಜಕ್ಕೂ ಒಂದು ಅದೃಷ್ಟ. ಹಾಗೂ ಈ ದೇಶದ ಸಾಮಾನ್ಯ ಜನರು ತಮ್ಮ ಪರಂಪರಾಗತ ಅನುಭವದಿಂದ ಮಳೆ ನೀರನ್ನು ಇಂಗಿಸುವ, ಹಿಡಿದಿಟ್ಟುಕೊಳ್ಳುವ, ಇತರ ಸೃಜನಾತ್ಮಕ ರೀತಿಯಿಂದ ನೀರುಳಿಸಿಕೊಳ್ಳುವ, ಹೆಚ್ಚಿಸುವ ಕ್ರಮವನ್ನು ಅನುಭವದಿಂದ ಕಂಡುಕೊಂಡಿದ್ದರು. ನಮ್ಮ ಪರಂಪರೆಯಿಂದ ಬಂದ ಇಂಥ ಕ್ರಮಗಳನ್ನು ಮರು ವಿಮರ್ಶೆಗೊಡ್ಡಿ ಪ್ರಯೋಗಾತ್ಮಕವಾಗಿ ಪರ್ಯಾಯ ಸಾಧ್ಯತೆಗಳನ್ನು ಕಂಡುಕೊಳ್ಳಬೇಕು. ಅಂತೂ ಜನರ ಸಹಭಾಗಿತ್ವದೊಂದಿಗೆ ದೇಶಾದ್ಯಂತ ತುರ್ತಾಗಿ ನೀರಿಂಗಿಸುವ, ಅಂತರ್ಜಲ ಹೆಚ್ಚಿಸುವ, ಪರ್ಯಾಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದೇ ಜಲಕ್ಷಾಮಕ್ಕೆ ಶಾಶ್ವತ ಪರಿಹಾರ ಎಂದು ನನ್ನ ನಂಬಿಕೆ. ಜನಸಾಮಾನ್ಯರ ಪಾರಂಪರಿಕ ಜ್ಞಾನದ ಬಗ್ಗೆ ನನಗೆ ಗಾಢ ವಿಶ್ವಾಸವಿದೆ. ನದೀ ಜೋಡಣೆ, ನದಿ ತಿರುಗಿಸುವಿಕೆ ಮುಂತಾದ ತಕ್ಷಣದ ತೋರಿಕೆಯ ಪರಿಹಾರಗಳು ದೀರ್ಘಾವಧಿಯಲ್ಲಿ ವಿನಾಶವನ್ನೇ ತಂದೀತು.

❐

# ಹೆಣ್ಣಿನ ಪಾಲನೆ ಪೋಷಣೆಯ ವಾತ್ಸಲ್ಯದಿಂದ 'ಗಂಡುದರ್ಪ' ಗೆದ್ದ ಶತಮಾನದ ಸಂತ ಗಾಂಧಿ

"ಇಪ್ಪತ್ತನೆಯ ಶತಮಾನದ ಅಂತ್ಯದಲ್ಲಿ ಈ ಜಗತ್ತು ಎರಡು ಪ್ರಮುಖ" ಪೊಲಿಟಿಕಲ್ ಏಜೆಂಡಾ"ಗಳಿಗೆ ಮುಖಾಮುಖಿಯಾಗ ಬೇಕಾಗುತ್ತದೆ. ಒಂದು 'ಗಾಂಧಿ' ಮತ್ತೊಂದು 'ಅಣುಬಾಂಬು' ಈ ಎರಡರಲ್ಲಿ ಯಾವುದನ್ನು ಮನುಷ್ಯ ಆಯ್ಕೆ ಮಾಡುತ್ತಾನೆ ಎಂಬುದರ ಮೇಲೆ ಮುಂದಿನ ಶತಮಾನದಲ್ಲಿ ಮಾನವನ ಭವಿಷ್ಯನಿಂತಿದೆ" ಎಂದು ಜಾರ್ಜ್ ಬರ್ನಾಡ್ ಶಾ ಕೆಲವು ದಶಕಗಳ ಹಿಂದೆಯೇ ನುಡಿದಿದ್ದರು. "ಜಗತ್ತು ಎದುರಿಸುತ್ತಿರುವ ಬಿಕ್ಕಟ್ಟಿಗೆ ಅಹಿಂಸೆಯೇ ಸರಿಯಾದ ಉತ್ತರ. ಇಂದಿನ ಅಣುಬಾಂಬು ಯುಗದಲ್ಲಿ ಪರಿಶುದ್ಧವಾದ ಅಹಿಂಸೆಯ ಶಕ್ತಿ ಮಾತ್ರ ಹಿಂಸೆಯ ಎಲ್ಲ ಜಟಿಲ ಸ್ವರೂಪಗಳನ್ನೂ ವಿಫಲಗೊಳಿಸುವ ಶಕ್ತಿ ಪಡೆದಿದೆ" ಎಂದು ಗಾಂಧಿ ಹಿರೋಶಿಮಾ -ನಾಗಸಾಕಿಗಳ ಮೇಲೆ ಬಾಂಬು ಹಾಕಿದಾಗ ವಿಷಾದದಿಂದ ನುಡಿದಿದ್ದರು. ಹಿಂಸೆ ಮತ್ತು ಬಲಗಳನ್ನೇ ಅತಿಯಾಗಿ ನಂಬಿದ ರೋಮ್‌ನಂಥ ಮಹಾಸಾಮ್ರಾಜ್ಯಗಳೂ ಇತಿಹಾಸದ ಕಸದಬುಟ್ಟಿ ಸೇರಿವೆ. ಮನುಷ್ಯನ ಇಂಥ ಪ್ರವೃತ್ತಿಯನ್ನು ಅರಿತೇ ಎಲ್ಲ ಧರ್ಮಗಳೂ ತಮ್ಮ ಸಾರರೂಪದಲ್ಲಿ ಪ್ರೀತಿ, ಅಹಿಂಸೆ, ಪರಸ್ಪರ ಸಹಬಾಳ್ವೆಯನ್ನೇ ಸಾರುತ್ತವೆ. ಆದರೆ 'ಹೈಟೆಕ್' ಯುಗದಲ್ಲಿ ಬದುಕುತ್ತಿರುವ ನಾವು ಇಂದು ಹಿಂಸೆಯ ಅತ್ಯಂತ ಕ್ರೂರ ಅಗೋಚರ

---

**ಉದಯವಾಣಿ, ಜನವರಿ ೧, ೨೦೦೦ ಈ ಲೇಖನದ ಜೊತೆ ಉದಯವಾಣಿ ಸಾಪ್ತಾಹಿಕ ಸಂಪದ (ಜನವರಿ ೨೭, ೨೦೦೨) ದಲ್ಲಿ ಪ್ರಕಟವಾದ "ನಿನ್ನ ಹೆಜ್ಜೆಯ ಹಾದಿ ಹಸಿರಾಗಿರಲಿ" ಎಂಬ ಲೇಖನವನ್ನು ಆಯ್ದ ಭಾಗವನ್ನೂ ಜೋಡಿಸಲಾಗಿದೆ.**

ಮುಖಗಳ ಅಟ್ಟಹಾಸದ ಮಧ್ಯೆ ಕ್ಷಣಕ್ಷಣಕ್ಕೂ ದಿಗಿಲು ತಲ್ಲಣಗಳಲ್ಲೇ ಬದುಕುವಂತಾಗಿದೆ. ನಮ್ಮೆದುರಿಗೇ ಕಾಣುವ ಹಿಮಾಲಯದಂತಹ ನಿಚ್ಚಳ ಸತ್ಯಗಳು ಕಾಣದಷ್ಟು ನಮ್ಮ ಕಣ್ಣು ಮಂಜಾಗಿದೆ; ಪ್ರಜ್ಞೆಗೆ ಮಬ್ಬು ಕವಿದಿದೆ. ಜಗತ್ತಿನ ಇತಿಹಾಸದಲ್ಲೇ ಅತ್ಯಂತ ಭೀಕರ ಹಿಂಸೆಗಳನ್ನು ಕಂಡ ೨೦ನೆಯ ಶತಮಾನದ ಅಂತ್ಯದಲ್ಲಿರುವ ನಮಗೆ ಶಾ ಅವರು ಹೇಳಿದ ಆ ಆಯ್ಕೆಯ ಕಾಲ ನಿಜಕ್ಕೂ ಸನ್ನಿಹಿತಾಗಿದೆಯೆಂದೆನ್ನಿಸದೇ ?

ಮಾನವನ ದುರಾಸೆಯ ಅತಿಯನ್ನು ಅನುಭವಿಸಿದ ಅನುಬೋಗಶೀಲ ಪಾಶ್ಚಾತ್ಯ ಜಗತ್ತು ಅದಕ್ಕೇ ಗಾಂಧಿಯನ್ನು ಈ ಶತಮಾನದ ಒಬ್ಬ ಅತ್ಯಂತ ಶ್ರೇಷ್ಠ ವ್ಯಕ್ತಿಯೆಂದು ಗುರುತಿಸುವ ಮೂಲಕ ಗಾಂಧಿಯ ಸಿದ್ಧಾಂತ ಮತ್ತು ಜೀವನದ ಮಹತ್ವವನ್ನು ಅಪ್ಪಿಕೊಳ್ಳುತ್ತಿದೆ.

೨೧ನೆಯ ಶತಮಾನದಲ್ಲಿ ಈ ಭೂಮಿಯ ಅಸಂಖ್ಯ ಜೀವಜಾಲದ ಅಳಿವು-ಉಳಿವು ಗಾಂಧಿಯ ಹಾದಿಯಲ್ಲಿ ಮನುಷ್ಯ ಎಷ್ಟು ಸಾಗುತ್ತಾನೆ ಎಂಬುದರ ಮೇಲೆ ನಿಂತಿದೆ. ನಮ್ಮ ಭೋಗ ಪೀಡಿತ ಮನಸ್ಸಿಗೆ ಗಾಂಧಿ ಇಂದು ಹಾಸ್ಯಾಸ್ಪದ ವ್ಯಕ್ತಿಯಂತೆ ಕಾಣಬಹುದು. ನಮ್ಮ ಅತಿಬುದ್ಧಿವಂತಿಕೆಯ ತರ್ಕಗಳಿಂದ ಗಾಂಧೀತತ್ತ್ವಗಳ ವಿರುದ್ಧ ವಾದ ಹೂಡಬಹುದು. ಅವೆಲ್ಲವೂ ನಾವು ಪೂರ್ವಾಗ್ರಹಗಳಿಂದ ಹೂಡುವ ವಾದಗಳಷ್ಟೆ. ನಮ್ಮ ಯಾವ ವಾದಗಳೂ ಆತನ ಪ್ರಸ್ತುತತೆಯನ್ನು ಕಡಿಮೆ ಮಾಡಲಾರದು. ಕಾರಣ, ಅವು ಆತ ತನ್ನೊಳ ಬಗೆಯಲ್ಲಿ ಸಾಕ್ಷಾತ್ಕರಿಸಿಕೊಂಡು ನಡೆದ ತತ್ತ್ವ. ಸೃಷ್ಟಿಯ ಅಖಂಡತೆಯ ಅಂತರ್ಲಯದ ಸತ್ಯ. ಇರುವ ಒಂದೇ ಭೂಮಿಯ ಜೀವಂತಿಕೆಗೆ ಪೂರಕವಾಗಿರುವ ಸತ್ಯ.

ಪ್ರಕೃತಿಯ ಮಡಿಲಲ್ಲೇ ಬದುಕಿರುವ ನಮ್ಮ ಪೂರ್ವಸೂರಿಗಳು "ಈ ಜಗತ್ತಿನ ಸಂಪತ್ತು ಯಾರಿಗೂ ಸೇರಿದ್ದಲ್ಲ. ನಿನ್ನ ಅವಶ್ಯಕತೆಗೆ ತಕ್ಕಷ್ಟೇ ಭೋಗಿಸಿ, ತ್ಯಾಗದಿಂದ ಬದುಕನ್ನು ಕಾಪಾಡಿಕೊ. ಪರರಿಗೆ ಸಲ್ಲಬೇಕಾದ ಸಂಪತ್ತನ್ನು ಕಸಿದುಕೊಳ್ಳಬೇಡ. ಇಷ್ಟಕ್ಕೂ ಇದು ಯಾರ ಸಂಪತ್ತು?" ಎಂಬ ಸರಳ ಸೂತ್ರವನ್ನು ಕಂಡುಕೊಂಡು ಬದುಕಿದ ಸತ್ಯ, ಗಾಂಧೀಜಿಯ ಅತಿಪ್ರಿಯವಾದ ಮೌಲ್ಯವಾಗಿತ್ತು. ಅಂಕೆತಪ್ಪಿದ ಸರಕು ಸಂಸ್ಕೃತಿಯು ಸೃಷ್ಟಿಸುತ್ತಿರುವ ಸುಖದ ರಾವು ಹಿಡಿಸಿಕೊಂಡ ಇಂದಿನ ಮನುಷ್ಯನಿಗೆ ಗಾಂಧಿಯ ಸಂಯಮದ ಬದುಕು ತಮಾಷೆಯಾಗಿ ತೋರೀತು. ಆದರೆ ನಮ್ಮೆಲ್ಲ ಕಲುಷಿತ ಮನಸ್ಸಿನ ಕಲ್ಪನೆಗಳು, ಪ್ರತ್ಯಾವಾದಗಳು, ಸತ್ಯದ ಮೋರೆ ಮುಚ್ಚಲು ಸಾಧ್ಯವಿಲ್ಲವಲ್ಲಾ. ಸತ್ಯ ನಮ್ಮ ಕಲ್ಪನೆ ಅಲ್ಲ, ನಮ್ಮ ಸಿದ್ಧಾಂತಗಳಲ್ಲ, ನಮ್ಮ ಅನಿಸಿಕೆ ಅಲ್ಲ. ಅದು ಇರುವ ವಾಸ್ತವ ಸ್ಥಿತಿ.

ಸಮಾಜದ ಒಟ್ಟು ಆರ್ಥಿಕ ಬದುಕನ್ನು ಮಾನವೀಯ ನೆಲೆಯಲ್ಲಿ ರೂಪಿಸಬೇಕಾಗಿರುವ ಅರ್ಥಶಾಸ್ತ್ರ, ೧೭-೧೮ನೆಯ ಶತಮಾನಗಳಲ್ಲಿ 'ಸಾಯನ್ಸ್'ನ 'ಮೆಥಡ್'ನಿಂದ ಪ್ರಭಾವಿತವಾಗಿ ತನ್ನೊಳಗೆ ಅಂತರ್ಗತವಾಗಿ ಇರಲೇಬೇಕಾಗಿರುವ ಸಮಷ್ಟಿ ಹಿತವನ್ನು ಪೋಷಿಸುವ ನೈತಿಕ ಸಂಯಮವನ್ನು ಪೂರಾ ಕೈಬಿಟ್ಟು, ರಾಷ್ಟ್ರದ ಕೇವಲ ಭೌತಿಕ ಸಂಪತ್ತನ್ನು ಹೆಚ್ಚಿಸುವ ಸಪುಕಳ ಪ್ರಗತಿ ಕಲ್ಪನೆಗಷ್ಟೇ ಸೀಮಿತಗೊಂಡಿತು. ಸ್ವಯಂ- ಆಧಾರಿತವಲ್ಲದ (self-sustained) ಉಸುಕಿನ ನೆಲೆಗಟ್ಟಿನ ಮೇಲೆ ನಿಂತ ಅರ್ಥಶಾಸ್ತ್ರದ ಅನಿರ್ಬಂಧಿತ ಪ್ರಗತಿ ಸಿದ್ಧಾಂತ ಆತ್ಯಂತಿಕವಾಗಿ ಲೋಕಹಿತ ಮಾರಕವಾದುದು. "ಮನುಷ್ಯನ ಬಯಕೆಗಳು ಅನಂತವಾಗಿವೆ. ಆ ಬಯಕೆಗಳನ್ನು ತೀರಿಸಲು ಇರುವ

ಸಾಧನೆಗಳಿಗೆ ಬಹಳಷ್ಟು ಮಿತಿಯಿದೆ. ಈ ಅನಂತ ಬಯಕೆಗಳನ್ನು ಗರಿಷ್ಠ ಪ್ರಮಾಣದಲ್ಲಿ ತೃಪ್ತಿಪಡಿಸಲು ನಮಗೆ ಲಭ್ಯವಿರುವ ಸಂಪನ್ಮೂಲಗಳನ್ನು ಅತ್ಯಂತ ಸಮರ್ಪಕವಾಗಿ ಬಳಸಿಕೊಂಡು, ಮನುಷ್ಯನ ಸುಖವನ್ನು ಹೆಚ್ಚಿಸುವ ವಿಧಾನವನ್ನು ಕಲಿಸುವುದೇ ಅರ್ಥಶಾಸ್ತ್ರದ ಪ್ರಮುಖ ಕಾಳಜಿ." ಎಂಬ ಪ್ರಧಾನ ವ್ಯಾಖ್ಯೆಯ ಮೇಲೆ ನಿಂತಿರುವ ಈ ಸಿದ್ಧಾಂತ, ಬಯಕೆ-ಪೂರೈಕೆಗಳ ನಡುವೆ ಇರಲೇಬೇಕಾದ ಒಂದು ಹೊಂದಾಣಿಕೆಯನ್ನು ಕಡೆಗಣಿಸಿ ಬಿಟ್ಟಿತು; ಮಾತ್ರವಲ್ಲ ಮನುಷ್ಯನನ್ನು ತನ್ನೆಲ್ಲ ಆಸೆಗಳನ್ನು ತೃಪ್ತಿಪಡಿಸಿಕೊಳ್ಳುವ ಸಲುವಾಗಿ ಈ ಭೂಮಿಯ ಸಕಲ ಸಂಗತಿಗಳನ್ನೂ ಮುಕ್ಕಲು ತವಕಿಸುವ ರಾಕ್ಷಸಗ್ರಾಹಕನನ್ನಾಗಿ ಪರಿವರ್ತಿಸಿ ಬಿಟ್ಟಿತು.

**ವಿಶ್ವಾಸಕ್ಕೆ ವಿದಾಯ....**

ಕೈಗಾರೀಕರಣ ಪೂರ್ವದ ಮಾನವ ನಾಗರಿಕತೆಯಲ್ಲಿ ಹಿತ-ಉಪಯುಕ್ತ-ಸೌಂದರ್ಯ ತತ್ತ್ವಗಳ ಮಧ್ಯೆ ಒಂದು ಹದವಾದ ಬಂಧವಿರಬೇಕೆಂಬ ಕಲ್ಪನೆಯಿತ್ತು. ಆದರೆ ದುರದೃಷ್ಟವಶಾತ್ ಇಂದಿನ ಆರ್ಥಿಕ ಪ್ರಗತಿ ಕೇವಲ ಭೋಗವಾದಕ್ಕಷ್ಟೇ ಒತ್ತುಕೊಟ್ಟು, ಎಲ್ಲ ರಾಷ್ಟ್ರಗಳೂ ತಮ್ಮ ನೆಲದ ಸತ್ತ್ವ ಮರೆತು ಪೈಪೋಟಿ, ಹಿಂಸೆ, ಕ್ರೌರ್ಯಗಳನ್ನೇ ತಮ್ಮ ತಮ್ಮ ರಾಷ್ಟ್ರೀಯ ಆದರ್ಶಗಳೆನ್ನುವಂತೆ ನೆಚ್ಚಿಕೊಂಡಿವೆ. ಮನುಷ್ಯನ ಸ್ವಭಾವ ಸಿದ್ಧ ನೈಸರ್ಗಿಕ ಬದುಕು ಮತ್ತು ಆಧುನಿಕ ತಂತ್ರಜ್ಞಾನ ಹೊರಿಸುತ್ತಿರುವ ಕೃತಕ ಜೀವನಶೈಲಿ - ಇವುಗಳ ಮಧ್ಯೆ ಹೊಂದಾಣಿಕೆ ತಪ್ಪಿಹೋಗಿ, ಇಡೀ ಜಗತ್ತೇ ಪ್ರತ್ಯಪ್ರತ್ಯೇಕ ನಾಗರಿಕತೆಗಳಾಗಿ ಹೋಳಾಗುತ್ತಿದೆ. ಎಲ್ಲ ದೇಶಗಳಲ್ಲೂ ಇಂದು ಹೆಚ್ಚುತ್ತಿರುವ ಹಿಂಸೆ, ಅಭದ್ರತೆಗಳು ಹೋಳಾಗುತ್ತಿರುವ ಸಮಾಜಗಳ ಪ್ರಕಟರೂಪವಷ್ಟೇ. ಆಧುನಿಕ ತಂತ್ರಜ್ಞಾನದ ವಿಚಾರರಹಿತ ಆಲಿಂಗನ ಮತ್ತು ಅದರ ಪ್ರಸರಣಕ್ಕಾಗಿಯೇ ಇರುವ ಜಾಗತೀಕರಣ, ಸಾವಿರಾರು ವರ್ಷಗಳಿಂದ ಬಾಳಿ ಬದುಕಿ ಬಂದ ದೇಶೀ ಸಮುದಾಯಗಳ ಸ್ಥಳೀಯ ನೆಲದ ವಿವೇಕವನ್ನೆಲ್ಲ ಭಗ್ನಗೊಳಿಸುತ್ತಿದೆ. ಇಡಿಯಾ ನಾಗರಿಕತೆಯನ್ನೇ ಕೊಳ್ಳುಬಾಕ ಸಂಸ್ಕೃತಿ, ಸಮುದಾಯ-ಸಮುದಾಯಗಳ ನಡುವೆ ಜನಾಂಗೀಯ ಕಲಹ, ಧಾರ್ಮಿಕ, ಮತಾಂಧತೆ, ಸಂಘರ್ಷಗಳ ಅಂಚಿಗೆ ತಂದು ನಿಲ್ಲಿಸಿದೆ. ಬಾಹ್ಯ ಜಗತ್ತಿನ ಅತಿಮೋಹ, ಭೋಗವಸ್ತುಗಳ ತೀರದ ದಾವು, ಪರಸ್ಪರ ಅಪನಂಬಿಕೆ ಮತ್ತು ವೈರವನ್ನು ಸಾರ್ವತ್ರೀಕರಿಸಿದೆ.

ಮನುಷ್ಯನ ಇತಿಹಾಸವನ್ನು ನಾವೊಮ್ಮೆ ಅವಲೋಕಿಸಿದರೆ, ಪ್ರಗತಿ-ಬಿಡುಗಡೆಗಳ ಹೆಸರಲ್ಲಿ ಈ ಭೂಮಿ ೨೦ನೇ ಶತಮಾನದಲ್ಲಿ ಕಂಡಷ್ಟು ಹಿಂಸೆಯನ್ನು ಎಂದೂ ಕಾಣಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇಡೀ ಜಗತ್ತನ್ನು ನಡುಗಿಸಿದ ಎರಡು ಜಾಗತಿಕ ಯುದ್ಧಗಳು, ಮುಂದೆ ಬೃಹತ್ ರಾಷ್ಟ್ರಗಳಾದ ರಶ್ಯಾ-ಅಮೇರಿಕಾಗಳು ತಮ್ಮ ಶೀತಲ ಸಮರದಲ್ಲಿ ಜಗತ್ತನ್ನೇ ಇಬ್ಭಾಗ ಮಾಡಿ ನಡೆಸಿದ ಪರಸ್ಪರ ಮೇಲಾಟ, ವಿಯೆಟ್ನಾಂ ಯುದ್ಧ, ನಾಜಿಸಂ-ಫ್ಯಾಸಿಸಂ ಹೆಸರಲ್ಲಿ ಹಿಟ್ಲರ್, ಮುಸ್ಸಲೋನಿಗಳು ಜಗತ್ತಿಗೆ ತಂದೊಡ್ಡಿದ ಸಾಮೂಹಿಕ ಜನಾಂಗೀಯ ಹತ್ಯೆಗಳು ಮತ್ತು ಕಳೆದ ೪೦-೫೦ ವರುಷಗಳಲ್ಲಿ ಕ್ಯಾಂಬೋಡಿಯಾ, ಲಾವೋಸ್, ಪ್ಯಾಲೆಸ್ತೀನ್ ಬಾಸ್ನೀಯಾ ಇರಾಕ್, ಯುಗೊಸ್ಲಾವಿಯಾ, ರ್‍ವಾಂಡಾ, ಸೊಮಾಲಿಯಾ, ನಿಕರಾಗುವಾ ಮುಂತಾದ ಹೆಚ್ಚಿನ ಪ್ರದೇಶಗಳಲ್ಲಿ ಅಮೇರಿಕದ ದುಸ್ಸಾಹಸದಿಂದ ನಡೆದ ೧೫ ಮಿಲಿಯಕ್ಕೂ ಹೆಚ್ಚು ಅಮಾಯಕ ಜನರ ನಾಶ; ಇವುಗಳ

ಜತೆ ಅಭಿವೃದ್ಧಿ, ಪ್ರಗತಿಗಳ ಹೆಸರಲ್ಲಿ, ಧರ್ಮ-ರಾಷ್ಟ್ರೀಯತೆ ಮುಂತಾದ ಸಿದ್ಧಾಂತಗಳ ಹೆಸರಲ್ಲಿ ನ್ಯಾಯ ಸಮ್ಮತವೆಂದೇ ಕಾಣುವಂತೆ ನಡೆಯುತ್ತಿರುವ ಹಿಂಸೆ -ಕೊಲೆಗಳು- ಇವೆಲ್ಲವೂ ಮನುಷ್ಯ ನಾಗರಿಕನಾಗಿ ಮುಂದುವರಿದಂತೆ ಆತನೊಳಗೆ ಹುದುಗಿರುವ ಕ್ರೌರ್ಯದ ಅನಂತ ಮುಖಗಳನ್ನು ಅನಾವರಣಗೊಳಿಸುತ್ತವೆ.

ಈ ಕ್ರೌರ್ಯದ ಅತ್ಯಂತ ಆಧುನಿಕ ಮುಖವೇ ಸೆಪ್ಟೆಂಬರ್ ೧೧ರಂದು ಅಮೇರಿಕದ ಆರ್ಥಿಕ ಅಹಂಕಾರದ ಸಂಕೇತವಾದ ವಿಶ್ವವ್ಯಾಪಾರ ಕೇಂದ್ರ ಮತ್ತು ಮಿಲಿಟರಿ ದರ್ಪದ ಸಂಕೇತವಾದ ಪೆಂಟಗನ್ ಕಟ್ಟಡಗಳ ಮೇಲೆ ನಡೆದ ಭಯೋತ್ಪಾದಕರ ದಾಳಿ ಮತ್ತು ಅದಕ್ಕೆ ಪ್ರತೀಕಾರವಾಗಿ ಅಮೇರಿಕ ಭಯೋತ್ಪಾದಕ ರಾಷ್ಟ್ರದ ಸಹಯೋಗದೊಂದಿಗೆ ತಾಲಿಬಾನಿಗಳ ಮೇಲೆ ನಡೆಸಿದ ಅವ್ಯಾಹತ ಬಾಂಬು ದಾಳಿಯೆನ್ನಬಹುದು. ಇವುಗಳ ಜತೆ ಜತೆಗೇ ಭಾರತ - ಪಾಕಿಸ್ತಾನಗಳ ಇಂದಿನ ಕದನ ಕುತೂಹಲ. 'ಪಿಸ್ತೂಲು-ಸ್ಪೆನ್‌ಗನ್ನು'ಗಳನ್ನು ಮಕ್ಕಳಿಗೆ ಆಟಿಕೆಯಾಗಿ ಹೆಮ್ಮೆಯಿಂದ ನೀಡುವ ಹೆತ್ತವರ ಮನಸ್ಸುಗಳು, ಹೆಣ್ಣು ಶಿಶು ಭ್ರೂಣ ಹತ್ಯೆಗೈಯ್ಯುವ ಅಮಾನುಷ ಕ್ರೌರ್ಯ, ಜಾಗತೀಕರಣವು ತಂದೊಡ್ಡುತ್ತಿರುವ ವೈವಿಧ್ಯತೆಯ ವಿರುದ್ಧ ಏಕ ಸಂಸ್ಕೃತಿ, ಸಣ್ಣದರ ವಿರುದ್ಧ ಬೃಹತ್, ನಿಸರ್ಗದ ವಿರುದ್ಧ ತಾಂತ್ರಿಕತೆಯನ್ನು ಎತ್ತಿ ನಿಲ್ಲಿಸುವ ಹಿಂಸೆ, ಪ್ರಗತಿಯ ಹೆಸರಲ್ಲಿ ಆದಿವಾಸಿಗಳ ಬದುಕಿನ ಕನಿಷ್ಠ ಹಕ್ಕುಗಳ ಮೇಲೆ ನಡೆಯುತ್ತಿರುವ ನಿರಂತರ ಹಲ್ಲೆ - ಇವೆಲ್ಲವೂ ಒಂದಕ್ಕೊಂದು ಅನ್ಯೋನ್ಯ ಸಂಬಂಧವುಳ್ಳವುಗಳು; ಅಂತರ್ ಪ್ರಭಾವ ಬೀರುವಂಥವುಗಳು ಮತ್ತು ಮನುಷ್ಯನ ಮನಸ್ಸಿನಾಳದಲ್ಲಿ ಹುದುಗಿರುವ ಕ್ರೌರ್ಯದ ವಿಭಿನ್ನ ಮುಖಗಳು. ಈ ಎಲ್ಲ ಹಿಂಸೆಗಳ ಮೂಲಸ್ವರೂಪದ ವಿರಾಟ್‌ದರ್ಶನ ಆಗದವರೆಗೆ ಮನುಷ್ಯನಿಗೆ ಶಾಂತಿ-ನೆಮ್ಮದಿಗಳಿಲ್ಲ . ಆದರೆ ಮನುಷ್ಯನ ಮನಸ್ಸು ಇಂದು ಛಿದ್ರಛಿದ್ರಗೊಂಡು, ಬಾಳಿನ ಅಖಂಡತೆಯನ್ನು ಸಮಗ್ರವಾಗಿ ಗ್ರಹಿಸುವ ಶಕ್ತಿಯನ್ನು ಕಳಕೊಂಡಿದೆ. ಇದು ಮಾನವನ ನೈತಿಕ ಅಧಃಪತನವನ್ನಷ್ಟೇ ಸೂಚಿಸುತ್ತದೆ.

ಆದರೆ, ಈ ಭೂಮಿ ಎಲ್ಲರ ಎಲ್ಲ ರೀತಿಯ ರುಚಿಯನ್ನೂ ತೃಪ್ತಿಗೊಳಿಸುವಷ್ಟು ಫಲವತ್ತೇನಲ್ಲ. ಒಂದೇ ಉದಾಹರಣೆ ಕೊಡುವುದಾದರೆ, ಅಮೇರಿಕಾವು ಇಂದು ನಮ್ಮಿಂದ ಐಂಪಟ್ಟು ಹೆಚ್ಚು ಭೂಮಿಯ ಸಂಪತ್ತನ್ನು ಭೋಗಿಸುತ್ತಿದೆಯಂತೆ. ಜಗತ್ತಿನ ೩೯ ಶೇಕಡಾ ಜನಸಂಖ್ಯೆಯಿರುವ ಭಾರತ -ಚೀನಾಗಳೆರಡೂ ಅಮೇರಿಕಾದಂತೆ ಭೋಗದ ರಕ್ಕಸ ರುಚಿ ಬೆಳೆಸಿಕೊಂಡರೆ, ಈ ಭೂಮಿ ೪೫ ದಿನವೂ ಉಳಿಯಲಾರದು ಅಥವಾ ಈ ಭೂಮಿಯಂಥ ೧೨ ಭೂಮಿಗಳ ಸಂಪತ್ತೂ ಸಾಲದೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ಇಂದು ಜಾಗತೀಕರಣ ಸೃಷ್ಟಿಸುತ್ತಿರುವ ಆಸೆಗಳ ಜ್ವಾಲೆಯಲ್ಲಿ ಇಂಥ ನೂರು ಭೂಮಿಗಳೂ ಉರಿದು ಹೋದಾವು.

ಇರುವ ಒಂದೇ ಭೂಮಿಯನ್ನು ತನಗೆ ಕೊಳ್ಳೆ ಹೊಡೆಯಲು ಇರುವ ನಿರ್ಜೀವ ಆಸ್ತಿಯಂತೆ ಕಾಣುವ ಮನುಷ್ಯನ ದುರಾಸೆಯನ್ನು ಕಂಡ ಗಾಂಧಿ, ನಮ್ಮ ಬಯಕೆಗಳನ್ನು ಪೂರೈಸಲು ಇರುವ ಸೀಮಿತ ಸಂಪತ್ತನ್ನು ಒಟ್ಟಾರೆ ಕೊಳ್ಳೆ ಹೊಡೆಯುವುದು ವೈಜ್ಞಾನಿಕ ವಿವೇಕವಲ್ಲ. ಇದರ ಬದಲು ನಮ್ಮ ಆಸೆಗಳಿಗೆ ಕಡಿವಾಣ ಹಾಕಿ, ಇರುವ ಸ್ವಲ್ಪ ಸಂಪನ್ಮೂಲಗಳನ್ನು ನಮ್ಮ ಮೂಲಭೂತ ಆವಶ್ಯಕತೆಗಳಿಗೆ ತಕ್ಕಷ್ಟೇ ಬಳಸಿಕೊಳ್ಳುವುದು ಈ ನೆಲದ ವಿವೇಕ ಎಂದು ಎಚ್ಚರಿಸಿದರು. ಚಾಪೆ

ಇದ್ದಷ್ಟೇ ಕಾಲು ಚಾಚುವ ಸಂಯಮ ಬೇಕು. ನಮ್ಮ ಬಯಕೆಗಳನ್ನು ಸಂಪತ್ತಿಗೆ ತಕ್ಕಂತೆ ಮಿತಿಗೊಳಿಸುವುದು ನಿಜಕ್ಕೂ ಜೀವಪೋಷಕ ತಪಸ್ಸು ಎನ್ನುವ ಗಾಂಧಿ ಅರ್ಥಶಾಸ್ತ್ರದ ವ್ಯಾಖ್ಯೆಯನ್ನೇ ತಿರುವು ಮುರುವು ಮಾಡಿದರು; ಮಾತ್ರವಲ್ಲ, ಸರಳತೆ, ಅಸ್ವಾದ (ಅತಿಯಾದ ಇಂದ್ರಿಯ ಲಂಪಟತನ ಬೆಳೆಸಿಕೊಳ್ಳದಿರುವಿಕೆ), ಋತಶೀಲತೆ ಮುಂತಾದ ಸಕಲ ಜೀವಪ್ರೀತಿಯ ಮೌಲ್ಯಗಳನ್ನು ತಾನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾ ಜಗತ್ತಿಗೆ ಮಾರ್ಗದರ್ಶಕರಾದರು. ವೈಜ್ಞಾನಿಕ ದೃಷ್ಟಿಯಿರುವ ಬಾಳಿನ ಈ 'ಪ್ರಾಕ್ಟಿಕಲ್' ಸಿದ್ಧಾಂತವನ್ನು ಮನಗಂಡೇ ಅಮೇರಿಕಾದ 'ಟಾಯಮ್' ವಾರಪತ್ರಿಕೆಯು ೧೯೬೮ರಲ್ಲೇ ಗಾಂಧಿಯ ಜನ್ಮ ಶತಾಬ್ಧಿಯ ಸಮಯದಲ್ಲಿ ಬರೆದ ತನ್ನ ವಿಶೇಷ ಲೇಖನದಲ್ಲಿ, ಗಾಂಧಿ ೨೧ನೆಯ ಶತಮಾನದಲ್ಲಿ ಇನ್ನೂ ಶಕ್ತಿಶಾಲಿಯಾಗುತ್ತಾರೆ. ಮಾತ್ರವಲ್ಲ, ಇಡಿಯ ಜಗತ್ತೇ ಗಾಂಧಿಯ ತತ್ತ್ವಗಳನ್ನು ಅನುಸರಿಸುವುದು ಮನುಷ್ಯನ ಉಳಿವಿಗೆ ಅನಿವಾರ್ಯವಾಗುತ್ತದೆ" ಎಂದು ಉಲ್ಲೇಖಿಸಿತ್ತು.

ಹಾಗೆ ನೋಡಿದರೆ ಗಾಂಧಿಯ ತತ್ವಗಳು ಮನುಷ್ಯನಿಗೆ ಗೊತ್ತಿಲ್ಲದ ಹೊಸತತ್ವಗಳೇನೂ ಅಲ್ಲ. ಎಲ್ಲ ಧರ್ಮಗಳ, ಎಲ್ಲ ಆಧ್ಯಾತ್ಮ ಅನುಭಾವಿಗಳ ದರ್ಶನದ ತಿರುಳನ್ನೇ ಗಾಂಧೀತತ್ವ ಪ್ರತಿಬಿಂಬಿಸುತ್ತದೆ. "ಈ ಇಡಿಯ ವಿಶ್ವ ಒಂದಕ್ಕೊಂದು ಪರಸ್ಪರ ಹೆಣೆದುಕೊಂಡಿರುವ ಅಖಂಡ ಜಾಲ. ಮನುಷ್ಯ ಈ ಅಖಂಡದ ಒಂದು ಎಳೆ ಮಾತ್ರ. ಹಾಗಾಗಿ, ಆತ ಈ ಅಂತರ್ಗತ ಅಖಂಡತ್ವಕ್ಕೆ ಪೂರಕವಾಗಿ ತನ್ನ ಬದುಕನ್ನು ಶಾಂತಿ-ಸಹಕಾರ ಭಾವದಿಂದ ಮೆತ್ತಮೆತ್ತಗೆಯಾಗಿ ರೂಪಿಸಿಕೊಳ್ಳಬೇಕು." ಎಂಬ ಉಪನಿಷತ್ ಋಷಿಗಳ ದೃಷ್ಟಿ, ಬುದ್ಧನ ಅನುಕಂಪ - ಆಸೆಯ ಸಂಯಮ, ಮಹಾವೀರನ ಅಹಿಂಸೆ-ಸಹನೆ, ಏಸುಕ್ರಿಸ್ತನ ಜೀವಪ್ರೀತಿ ಮತ್ತು ಕ್ಷಮೆ ಇವೆಲ್ಲವೂ ಗಾಂಧಿಯ ತತ್ತ್ವಗಳಲ್ಲಿ ಅಡಕವಾಗಿವೆ. ಆದರೆ ಈ ಎಲ್ಲ ಸಾತ್ವಿಕ ಸಂಹಿತೆಗಳನ್ನು, ಆಧ್ಯಾತ್ಮಿಕತೆಯ ಅಮೂರ್ತ ತತ್ತ್ವಗಳನ್ನು ಏಕಸೂತ್ರದಲ್ಲಿ ಹೆಣೆದು ತನ್ನ ರಾಜಕೀಯ, ಆರ್ಥಿಕ, ನೈತಿಕ ಹಾಗೂ ಧಾರ್ಮಿಕ ಬದುಕಿನಲ್ಲಿ ಮೂರ್ತವಾಗಿ ರೂಪಿಸಿಕೊಂಡರಲ್ಲಾ, ಅಲ್ಲಿ ಗಾಂಧಿಯ 'ಜೀನಿಯಸ್' ಪ್ರಕಟವಾಗುತ್ತದೆ. ಅವರ ಇಂಥ ಬದುಕಿನ ರೀತಿಯಲ್ಲೇ ಭವಿಷ್ಯದ ಭರವಸೆ ಅಡಗಿದೆ.

ಗಾಂಧಿ ಸಂಪೂರ್ಣವಾಗಿ ಯಂತ್ರ ವಿರೋಧಿಯಾಗಿರಲಿಲ್ಲ. ನಮ್ಮ ನಿಯಂತ್ರಣದಲ್ಲಿರುವ ಯಂತ್ರಗಳನ್ನು ಬಳಸೋಣ. ಆದರೆ ಅವು ನಮ್ಮ ಮಾಲಿಕರಾಗಬಾರದು, ಮನುಷ್ಯನ ವ್ಯಕ್ತಿತ್ವಕ್ಕೆ ಅಡ್ಡಿಬರುವ, ನೆರವಾಗುವ ನೆಪದಲ್ಲಿ ಆತನ ಜತೆ ಸೆಣಸಾಡುವ ಯಂತ್ರ ನಿಜಕ್ಕೂ ಅಪಾಯಕಾರಿ ಎನ್ನುತ್ತಿದ್ದರು.

ಜಗತ್ತಿನೆಲ್ಲೆಡೆ ಏರುತ್ತಿರುವ ಜನಾಂಗೀಯ ಹತ್ಯೆಗಳು ಧಾರ್ಮಿಕ ಮೂಲಭೂತವಾದದ ವಿಷ, ಸಾಮಾಜಿಕ ಅಸಮಾನತೆ, ಮುಂತಾದ ಜಾಗತಿಕ ಬಿಕ್ಕಟ್ಟುಗಳಿಗೆಲ್ಲ ಗಾಂಧಿ ನಂಬಿದ್ದ ಹಿಂಸೆಯ ಎಲ್ಲ ಸ್ವರೂಪಗಳ ಸಂಪೂರ್ಣ ವಿಸರ್ಜನೆಯೇ ಬಹುಮುಖ್ಯ ಮಾರ್ಗವೆನ್ನಬಹುದು.

ಪ್ರಕೃತಿಯೆನ್ನುವುದು ಅಕ್ಷಯಪಾತ್ರೆ ಅಲ್ಲ. ಅದರ ಶಕ್ತಿ-ಸಹನೆಗಳಿಗೆ ಮಿತಿಯಿದೆ ಎಂಬ ಗಾಂಧಿಯ ಅರಿವು ನಮ್ಮ ಮುಂದಿನ ಇತಿಹಾಸದ ಪ್ರಮುಖ ಕಾಳಜಿಯಾಗಬಹುದು. ನಮ್ಮ ಮುಂಬರುವ ನಾಗರೀಕತೆಯ ಘಟ್ಟಗಳಲ್ಲಿ ಪರಿಸರ ಸಂರಕ್ಷಣೆ ಬಹುಮುಖ್ಯ ಕಾಳಜಿಯಾಗುವುದಂತೂ

ಖಂಡಿತ. ಆದರೆ ಈ ಕಾಳಜಿಯು ಮೂರ್ತವಾಗಿ ಸಾಧ್ಯವಾಗುವುದು ಗಾಂಧೀಜಿಯು ನುಡಿದಂತೆ ನಡೆದ ಅವರ ಸಂಯಮ, ಸರಳತೆ-ಅಸ್ವಾದಗಳ ಮೂಲಕ ಮಾತ್ರ . ಏಕೆಂದರೆ ಅತಿ ಸ್ವಾದದ ಮೂಲದಲ್ಲೇ ದುರಾಸೆ, ಹಿಂಸೆಗಳು ಮನೆ ಮಾಡಿರುತ್ತದೆ. ಆಡಂಬರದ ಬದುಕಿನ ಶೈಲಿಯಲ್ಲೇ ಪರಿಸರ ವಿನಾಶದ ವಿಷ ಬೀಜಗಳಿವೆ ಎಂಬ ಸತ್ಯವನ್ನು ಗಾಂಧಿ ಕೆಲವು ದಶಕಗಳ ಹಿಂದೆಯೇ ಮನಗಂಡಿದ್ದರು.

ಗಾಂಧಿ ಅಹಮಿಕೆ, ಬಲವನ್ನು ಸಂಪೂರ್ಣ ನಿರಾಕರಿಸುತ್ತಾರೆ. ೨೦ನೆಯ ಶತಮಾನದಲ್ಲಿ ಎಲ್ಲರೂ ಬಲದ ಆರಾಧಕರಾಗಿರುವಾಗ, ಇಡಿಯ ತಾಂತ್ರಿಕ ಜಗತ್ತೇ ಪ್ರಭುತ್ವದ ಕೇಂದ್ರೀಕರಣ ಮತ್ತು ನಾಗರೀಕತೆಗಳ ಸಂಘರ್ಷಗಳನ್ನು ಪೋಷಿಸುತ್ತಿರುವಾಗ ಗಾಂಧಿ ನಿರ್ಬಲತೆಯನ್ನು ಆರಾಧಿಸುತ್ತಾರೆ. ಗ್ರಾಮ ಸ್ವರಾಜ್ಯ ಕಲ್ಪನೆ, ಉತ್ಪಾದನೆಯ ವಿಕೇಂದ್ರೀಕರಣ, ಸ್ಥಳೀಯತೆಗೆ ಮಹತ್ವ, ಜನಪರ ತಂತ್ರಜ್ಞಾನದ ಬಳಕೆ ಮುಂತಾದುವುದನ್ನು ಮುಖಾಮುಖಿಯಾಗಿ ನಿಲ್ಲಿಸುತ್ತಾರೆ. ಈ ಬಲದ ನಿರಾಕರಣೆಯೇ ೨೧ನೆಯ ಶತಮಾನದಲ್ಲಿ ಪ್ರಾಯಃ ಮನುಷ್ಯನನ್ನು ದುರಂತದಿಂದ ರಕ್ಷಿಸಬಲ್ಲ ಉಪಾಯವಾಗಿದೆ.

ಗಾಂಧಿಯ ಲೋಕ ನಿಶ್ಶಕ್ತರ, ದುರ್ಬಲರ ಲೋಕ. ಸ್ಟಾಲಿನ್ ಲೋಕದಲ್ಲಿ, ಫ್ಯಾಸಿಸ್ಟ್ ಲೋಕದಲ್ಲಿ ಬಲ ಇದ್ದವನಿಗೆ ಮಾತ್ರ ಪ್ರವೇಶ. ಗಾಂಧಿ ದುರ್ಬಲರನ್ನು ಬಲಗೊಳಿಸುವ ಕ್ರಿಯೆಯಲ್ಲಿ ಆಸಕ್ತರು. ಹಾಗಾಗಿ ಅವರಿಗೆ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾರತವು ರಾಷ್ಟ್ರವಾಗಿ ರಾಜಕೀಯ ಸ್ವಾತಂತ್ರ್ಯ ಪಡೆಯುವಷ್ಟೇ, ಭಾರತವು ಒಂದು ಸಮಾಜವಾಗಿ ಅಸಮಾನತೆ, ಬಡತನ, ಅಸ್ಪೃಶ್ಯತೆಗಳಿಂದೆಲ್ಲ ಬಿಡುಗಡೆಯಾಗುವುದೂ ಮುಖ್ಯವಾಗುತ್ತದೆ. ಗಾಂಧಿ ಬ್ರಿಟಿಷರನ್ನು ವೈರಿಗಳೆಂದು ಭಾವಿಸಿರಲಿಲ್ಲ. ತಮ್ಮ ಅಪಾರ ಸಂಪತ್ತಿನ ಗರ್ಭದಲ್ಲೇ ಅಸಹ್ಯವಾಗಿ ದರಿದ್ರರಾಗಿರುವ ಬ್ರಿಟಿಷರನ್ನು ಕೂಡ ನಮ್ಮ ಜತೆ ಬಂಧನದಿಂದ ಬಿಡುಗಡೆಗೊಳಿಸಬೇಕಾಗಿದೆ. ' ಎಂದು ಒಬ್ಬ ಸಂತನಂತೆ ಗಾಂಧಿ ಬ್ರಿಟಿಷರ ಬಗ್ಗೆ ಅನುಕಂಪದಿಂದ ನುಡಿಯುತ್ತಿದ್ದರು.

ಗಾಂಧಿಯಲ್ಲಿ ಹೆಣ್ತನದ ಲಾಲನೆ- ಪಾಲನೆಯ ಅಂಶವಿತ್ತು. ಈ ದೇಹ ಮತ್ತು ದೇಹಕ್ಕೆ ಸಂಬಂಧಿಸಿದ ವಿಷಯಗಳಿಗೆ ಗಾಂಧಿ ಬಹಳ ಮಹತ್ವ ಕೊಡುತ್ತಿದ್ದರು. ದೇಹದ ಶುಚಿ, ಲಾಲನೆ-ಪಾಲನೆ, ಆಹಾರ ಮುಂತಾದ ದೈನಂದಿನ ಸಾಮಾನ್ಯ ವಿಷಯಗಳು ಗಾಂಧಿ ಸದಾ ಹಚ್ಚಿಕೊಂಡ ಕಾಳಜಿಗಳಾಗಿದ್ದು, ಒಬ್ಬ ನೇತಾರನಿಗೆ ಕ್ಷುಲ್ಲಕವೆನಿಸಬಹುದಾದ ತಿನ್ನುವುದರಿಂದ ಹಿಡಿದು ಮಲವಿಸರ್ಜನೆಯವರೆಗಿನ ದೈನಂದಿನ ಕ್ರಿಯೆಗಳಿಗೆ ಗಾಂಧಿ ಬಹಳ ಮಹತ್ವಕೊಡುತ್ತಿದ್ದರು. ಕ್ವಿಟ್ ಇಂಡಿಯಾ ಚಳುವಳಿ, ಉಪ್ಪಿನ ಸತ್ಯಾಗ್ರಹಗಳಂತಹ ದೇಶವ್ಯಾಪೀ ಚಳವಳಿಗಳ ಜತೆಜತೆಯೇ ಗಾಂಧಿ, ಯಾವ ಆಹಾರ ತಿಂದರೆ ಸುಲಭದಲ್ಲಿ ಮಲವಿಸರ್ಜನೆ ಆಗುತ್ತದೆ, ಚೆನ್ನಾಗಿ ಜೀರ್ಣ, ಹಸಿವು ಆಗುತ್ತದೆ, ಯಾವ ಆಹಾರ ಬೇಯಿಸಿದಾಗ ಅದು ಬಡವನಿಗೆ ಅಗ್ಗದಲ್ಲಿ ಹೊಟ್ಟೆ ತುಂಬುತ್ತದೆ, ಅಕ್ಕಿ ತೌಡಿನಿಂದ ಗಂಜಿ-ಪಾನಕ ಮಾಡುವುದು ಹೇಗೆ ಎಂದೆಲ್ಲ ಪ್ರಯೋಗ ನಡೆಸುತ್ತಿದ್ದರು. ಹಸಿವಿಲ್ಲದವನಿಗೆ ಇದೆಲ್ಲ ತಲೆತಿರುಕತನ (cranky idea) ಎಂದೆನಿಸಬಹುದು. ಹಸಿವಿನಲ್ಲೇ ಬದುಕುವ ಅಸಂಖ್ಯ ಜನರಿಗೆ ಈ ಯೋಜನೆಗಳು ಬಹಳ ಪ್ರಸ್ತುತವಾಗಿ ಬಿಡುತ್ತವೆ.

ಆಹಾರದ ಜತೆ ಆರೋಗ್ಯದ ಬಗ್ಗೆ ಗಾಂಧಿಗೆ ಕಾಳಜಿಯಿತ್ತು. ನೀರಿನ ಚಿಕಿತ್ಸೆ, ಮಣ್ಣಿನ ಚಿಕಿತ್ಸೆ, ಇತರ ನೈಸರ್ಗಿಕ ಚಿಕಿತ್ಸೆ ಮೊದಲಾದ ಬಡವನಿಗೆ ಎಟಕಬಹುದಾದ ಅಗ್ಗದ ಚಿಕಿತ್ಸಾಕ್ರಮಗಳ ಬಗ್ಗೆ ಗಾಂಧಿ ಪ್ರಯೋಗಗಳನ್ನು ಮಾಡುತ್ತಿದ್ದರು. ಚರಕದಿಂದ ನೂಲು ತೆಗೆಯುವ ಅವರ ಕ್ರಿಯೆಯೂ ಸಾಮಾನ್ಯ ಮನುಷ್ಯನ ಕಾಯಕದ ಘನತೆಯನ್ನೇ ಬಗ್ಗು ಬಡಿಯುವ ರಾಕ್ಷಸಯಂತ್ರಗಳ ಬಲದ ನಿರಾಕರಣೆಯ ಸಂಕೇತವೇ ಆಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ದಿನ ಗಾಂಧಿ ಬಲ -ಅಧಿಕಾರಿಗಳ ಕೇಂದ್ರವಾದ ದೆಲ್ಲಿಯಲ್ಲಿರಲಿಲ್ಲ. ಇದನ್ನು, ಅವರ ಹುಚ್ಚು ಹುಚ್ಚೆಂದೆಣಿಸಬಹುದಾದ ಚಟುವಟಿಕೆಗಳ ಜತೆ ಇಟ್ಟು ಗ್ರಹಿಸಿದಾಗ, ಇವೆಲ್ಲವೂ ಬಲದ ಒಟ್ಟು ನಿರಾಕರಣೆಯ ಸೂತ್ರದಲ್ಲಿ ಒಂದಕ್ಕೊಂದು ಹೆಣೆದುಕೊಂಡಿರುವುದು ಸ್ಪಷ್ಟವಾಗುತ್ತದೆ. ಈ ಮೌಲ್ಯಗಳೆಲ್ಲವೂ ಮನುಷ್ಯನನ್ನು ಭವಿಷ್ಯದಲ್ಲಿ ಪೊರೆಯುವ ಅಂಶಗಳಾಗಬಹುದು.

**ಹೆಣ್ತನದ ಸಾಂತ್ವನ**

೨೦ನೆಯ ಶತಮಾನದ ಹೈಟೆಕ್‌ಯಂತ್ರ ನಾಗರಿಕತೆ ಗಂಡು ನಾಗರೀಕತೆ. ಆಕ್ರಮಣಶೀಲತೆ, ಪ್ರಭುತ್ವ, ರಾಕ್ಷಸ ಬಲದ ಉಪಾಸನೆ, ಹಿಂಸೆ, ಯುದ್ಧಗಳು ಈ ನಾಗರೀಕತೆಯ ಲಕ್ಷಣಗಳಾಗಿವೆ. ಇಲ್ಲಿ ಭೂಮಿಗೆ, ಹೆಣ್ತನಕ್ಕೆ ಸ್ಥಾನವೇ ಇಲ್ಲ. ನಮ್ಮ ಬೆಳವಣಿಗೆಯ ರೀತಿ, ಬಹುಜನರನ್ನು ಸಮಾಜದ ಅಂಚಿಗೆ ತಳ್ಳಿ. ಕೆಲವೇ ಗುಂಪುಗಳ ಸುಖ ಭೋಗಗಳನ್ನು ನೂರ್ಮಡಿಗೊಳಿಸುವಂಥದು; ತನ್ನ ಮೂಲ ಸ್ವರೂಪದಲ್ಲೇ ವಿಭಜನೆಯ ಗುಣ ಹೊಂದಿರುವಂಥದು 'ಅಹಮಿಕೆ -ಮೇಲಾಟ- ಹಿಂಸೆಗಳೇ ಇದರ ವ್ಯಕ್ತರೂಪ. ಹಾಗಾಗಿಯೇ ಈ ಪ್ರಗತಿ ವ್ಯಾಖ್ಯೆಯಲ್ಲಿ ಹಿಂಸೆ ಕೇವಲ ಹಿಂಸೆಯಂತೆ ಕಾಣದೆ, ಬೆಳವಣಿಗೆಯ ಅನಿವಾರ್ಯ ಅಂಗವೆಂಬ ಭ್ರಮೆ ಹುಟ್ಟಿಸುತ್ತದೆ. ಆದರೆ ಈ ಜೀವನ ಶೈಲಿಯ ವಿಕಟದರ್ಶನ, ಗಾಂಧೀಜಿಗೆ ೬-೭ದಶಕಗಳ ಹಿಂದೆಯೇ ಆಗಿತ್ತು. ಇದನ್ನು ವಿವರಿಸುತ್ತಾ ಗಾಂಧೀಜಿ, "ಮನುಷ್ಯ ತನ್ನ ಆಕ್ರಮಣಕಾರೀ ದುರಾಸೆಗಳನ್ನು ಸಿದ್ಧಿಸಿಕೊಳ್ಳಲು, ಈ ಭೂಮಿಯ ಅಂಚಿನವರೆಗೂ ಅಪಾಯಕಾರಿಯಾಗಿ ಮುನ್ನುಗ್ಗುವುದನ್ನು ನಾವಿಂದು ಕಾಣುತ್ತಿದ್ದೇವೆ. ಈ ನಾಗರಿಕತೆಯನ್ನು ನಾನು ಪೈಶಾಚಿಕ ನಾಗರಿಕತೆಯೆಂದು ಕರೆಯುತ್ತೇನೆ" ಎಂದು ಹತಾಶೆಯಿಂದ ನುಡಿದಿದ್ದರು. ಈ ಆಕ್ರಮಣಶೀಲ ನಾಗರೀಕತೆಯ ಭೂಮಿ, ನೆಲ, ಜಲ, ಆಕಾಶಗಳನ್ನು, ಪಶು, ಪಕ್ಷಿ, ಪ್ರಾಣಿಗಳನ್ನು, ದುರ್ಬಲ ಜನಾಂಗಗಳನ್ನು ಮುಖ್ಯವಾಗಿ ಹೆಣ್ತನವನ್ನು ತನ್ನ ಭೋಗದ ಆಕ್ರಮಿತ ಪ್ರದೇಶವಾಗಿ ನೋಡುತ್ತಿದೆ. ಜಾಗತೀಕರಣದ ಹೆಸರಲ್ಲಂತೂ ಈ ನಾಗರೀಕತೆ ಜಗತ್ತನ್ನೇ ಒಂದು ರಾಷ್ಟ್ರ, ಒಂದು ಸಂಸ್ಕೃತಿ, ಒಂದು ಜನಾಂಗವನ್ನಾಗಿ ಪರಿವರ್ತಿಸಲು ಹೊರಟಿದೆ. ಈ ಅತ್ಯಂತ ಸಂಕೀರ್ಣ ಜಾಗತಿಕ ಪ್ರಕ್ರಿಯೆಯಲ್ಲಿ ಸತ್ಪುರುಷರೂ ಸಹ ಬಂಧಿಯಾಗಿರುವುದು ದುರದೃಷ್ಟದ ಸಂಗತಿ.

ಇದಕ್ಕೆ ಪರಿಹಾರ ಒಂದೇ - ಹೆಣ್ತನದ, ನಿರ್ಬಲತೆಯ ಉಪಾಸಕರಾದ ಗಾಂಧಿ. ಗಾಂಧಿ ಪ್ರತಿನಿಧಿಸುವ ಲಾಲನೆ-ಪಾಲನೆ, ಶುಶ್ರೂಶೆ, ಆರೈಕೆ, ಜೀವ ಪ್ರೀತಿ, ಸಹನೆ, ಅಹಿಂಸೆಗಳು ಮಾತ್ರ ಆಧುನಿಕ ನಾಗರೀಕತೆಯ ಗಂಡುದರ್ಪವನ್ನು ಮಣಿಸಬಲ್ಲುದು; ಭೂಮಿಯ ಗಾಯಗಳನ್ನು ಮಾಯಿಸಬಹುದು; ಭೂಮಿಯನ್ನು ಮತ್ತೊಮ್ಮೆ ಪ್ರೀತಿಯಿಂದ ನೇಯ ಬಲ್ಲುದು.

ಗಾಂಧೀಜಿ ಅಹಮಿಕೆ - ಬಲವನ್ನು ಸಂಪೂರ್ಣ ನಿರಾಕರಿಸುತ್ತಾರೆ. ಇಂದು ಎಲ್ಲೆಲ್ಲೂ ಬಲದ

ಉಪಾಸನೆಯೇ ವಿಜೃಂಭಿಸುತ್ತಿರುವಾಗ, ಇಡಿಯ ತಾಂತ್ರಿಕ ಜಗತ್ತು ಪ್ರಭುತ್ವದ ಕೇಂದ್ರೀಕರಣ ಮತ್ತು ನಾಗರಿಕತೆಗಳ ಸಂಘರ್ಷಗಳನ್ನು ಪೋಷಿಸುತ್ತಿರುವಾಗ, ನಿರ್ಬಲತೆ, ವಿಕೇಂದ್ರೀಕರಣಗಳನ್ನು ಪ್ರತಿನಿಧಿಸುವ ಗಾಂಧಿ ಜಗತ್ತಿಗೆ ಬಹಳ ಪ್ರಸ್ತುತರಾಗುತ್ತಾರೆ. ಗ್ರಾಮ ಸ್ವರಾಜ್ಯ ಕಲ್ಪನೆ, ಉತ್ಪಾದನೆಯ ವಿಕೇಂದ್ರೀಕರಣ, ಸ್ಥಳೀಯತೆಗೆ ಮಹತ್ವ, ಜನಪರ ಸೂಕ್ತ ತಂತ್ರ ಜ್ಞಾನದ ಬಳಕೆ ಮುಂತಾದುವನ್ನು, ಕೇಂದ್ರೀಕೃತ ಪ್ರಭುಶಕ್ತಿಯ ಅಪಾಯಕ್ಕೆ ಪರ್ಯಾಯವಾಗಿ ನಿಲ್ಲಿಸುತ್ತಾರೆ.

ಗಾಂಧೀಜಿಯ ಲೋಕ ನಿಶ್ಯಕ್ತರ ಲೋಕ. ಸಂಯಮ, ಅಹಿಂಸೆ, ಜೀವಪ್ರೀತಿ, ಸರಳತೆ, ಸಹಬಾಳ್ವೆ ಮುಂತಾದ ಜೀವಪೋಷಕ ಮೌಲ್ಯಗಳ ಲೋಕ. ಹೆಣ್ತನದ ಪ್ರತೀಕವಾದ ಶುಶ್ರೂಷೆ, ಲಾಲನೆ-ಪಾಲನೆ, ಪೋಷಣೆ, ಸ್ಮರಣೆಗಳು ಗಾಂಧೀಜಿ ಬದುಕಿ ಬಾಳಿದ ಮೌಲ್ಯಗಳು. ಹೆಣ್ತನದ, ನಿರ್ಬಲತೆಯ ಉಪಾಸಕರಾದ ಗಾಂಧೀಜಿ ಮಾತ್ರ ಈ ಶತಮಾನದಲ್ಲಿ ಗಂಡುದರ್ಪದ ಆಕ್ರಮಣಕಾರೀ ನಾಗರಿಕತೆಯ ಅಪಾಯದಿಂದ ಪಾರು ಮಾಡಬಲ್ಲ ಸಂತ.

ಹೊಸ ಶತಮಾನದಲ್ಲಿ ನಿರ್ಬಲಗಾಂಧಿಯ ಈ ನೀತಿ ಸಂಹಿತೆ ಇಡಿಯ ಮಾನವ ಜನಾಂಗದ ಬೀಜಮಂತ್ರವಾಗುವ ಸ್ಪಷ್ಟ ಸೂಚನೆಗಳು ಈಗಾಗಲೇ ಕಾಣುತ್ತಿರುವುದು ಸಂತೋಷದ ವಿಷಯ. ವಿಕೇಂದ್ರೀಕರಣದ ತುಡಿತ, ಪರಿಸರ ಸಮತೋಲನದ ಕಾಳಜಿ, ವಿವಿಧ ಜನಾಂಗೀಯ ಚಳುವಳಿಗಳು, ಭೂಮಿಯ ಸಂವಾದಿಯಾದ ಸ್ತ್ರೀತ್ವದ ವಿಶಿಷ್ಟತೆಯನ್ನು ಪೊರೆಯುವ ಚಳುವಳಿಗಳು, ಸರಳತೆ, ಅಸ್ವಾದ, ಅಹಿಂಸೆ ಮುಂತಾದ ನೈತಿಕ ಮೌಲ್ಯಗಳ ಮರುವ್ಯಾಖ್ಯೆ ಹೆಚ್ಚುತ್ತಿರುವ ಆಧ್ಯಾತ್ಮದ ಹಸಿವು ಮುಂತಾದ ಜೀವಪೋಷಕ ಅಂಶಗಳತ್ತ ಈಗಾಗಲೇ ಜಗತ್ತಿನ ಗಮನ ಹರಿಯಲಾರಂಭಿಸಿದೆ. ದೂರದ ಅಮೇರಿಕಾ ಆಫ್ರಿಕಾಗಳಲ್ಲಿ ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾ ಅಂಥವರು ತಮ್ಮ ನಿರ್ಬಲ ಕಪ್ಪು ಜನರ ಚಳುವಳಿಗೆ ಗಾಂಧಿಯಿಂದ ಸ್ಫೂರ್ತಿ ಪಡೆದಿದ್ದಾರೆ. ನೆರೆ ರಾಷ್ಟ್ರವಾದ ಚೀನಾದ ಮಾವೋತ್ಸೆ ತುಂಗ್, " ತನ್ನೆಲ್ಲ ಗ್ರಾಮೀಣ ಯೋಜನೆಗಳಿಗೆ ಗಾಂಧಿ ಸ್ಫೂರ್ತಿ. ಗಾಂಧಿ ಭಾರತದಲ್ಲಿ ಜನಿಸಿರಬಹುದು. ಅವರ ಆರ್ಥಿಕ ತತ್ತ್ವವನ್ನು ಅನುಷ್ಠಾನ ಮಾಡಿದವನು ನಾನು" ಎನ್ನುತ್ತಿದ್ದರು. ಆದರೆ ಜಾಗತೀಕರಣದ ಉಪಕ್ರಮದಲ್ಲಿ ತೊಡಗಿರುವ ಭಾರತ, ಗಾಂಧಿಯನ್ನು ೨೧ನೆಯ ಶತಮಾನದಲ್ಲಿ ತನ್ನ ಶಕ್ತಿಯ ಮೂಲವನ್ನಾಗಿ ಪರಿಗಣಿಸುವ ಸೂಚನೆಯೇನಾದರೂ ಇದೆಯೇ ?

**ಗಾಂಧೀ ವಿಸ್ಮೃತಿ**

ಆದರೆ ದುರಾದೃಷ್ಟವಶಾತ್, ಗಾಂಧೀಜಿಯನ್ನು ಜಗತ್ತಿಗೆ ಕೊಟ್ಟ, ನಾಡಿಗೆ ಇಂದು ಗಾಂಧೀ ವಿಸ್ಮೃತಿ ಕವಿದಿದೆ. ಅಹಿಂಸೆಯನ್ನು ಪರಮಮೌಲ್ಯವೆಂದು ಕಂಡ ಬುದ್ಧ, ಮಹಾವೀರ, ಗಾಂಧಿ ಹುಟ್ಟಿದ ನೆಲದಲ್ಲೇ, 'ಬುದ್ಧ ಸ್ಮೈಲ್' ಅಣುಬಾಂಬು ಯೋಜನೆ ಅವತಾರ ತಾಳಿದ್ದು ಈ ದೇಶದ ಕ್ರೂರ ವ್ಯಂಗ್ಯವೆನ್ನದೆ ವಿಧಿಯಿಲ್ಲ. ಗಾಂಧಿ ಇಂದು ಇದ್ದಿದ್ದರೆ, "ಜಗತ್ತಿನ ಎಲ್ಲ ರಾಷ್ಟ್ರಗಳು ಅಣುಬಾಂಬು ತಯಾರಿಸುತ್ತಿದ್ದರೂ, ತನ್ನ ದೇಶ ಅಣುಬಾಂಬು ತಯಾರಿಸುವ ಸಾಹಸಕ್ಕೆ ಕೈಹಾಕಬಾರದು" ಎಂದೇ ಹಠ ಹಿಡಿಯುತ್ತಿದ್ದರು. ಇಂಥ ನಿಲುವಿನಿಂದ ಭಾರತಕ್ಕೆ ಒದಗಿ ಬರುವ ನೈತಿಕ ಶಕ್ತಿ ನೂರಾರು ಆಟಂಬಾಂಬುಗಳನ್ನೂ ಮೀರಿದ್ದು. ಭಾರತ ಬಹಳ ದೊಡ್ಡ ದೇಶವಾಗುತ್ತಿತ್ತು. ಇದು ತುಂಬ 'ಪ್ರಾಕ್ಟಿಕಲ್' ನಿಲುವೂ ಆಗುತ್ತಿತ್ತು. ಅಣುಬಾಂಬು ಯುದ್ಧದಲ್ಲಿ ಯಾರೂ

ಗೆಲ್ಲುವುದಿಲ್ಲ, ಎಲ್ಲರೂ ಸೋಲುವವರೇ; ಮಾತ್ರವಲ್ಲ, ಬಾಂಬುಗಳ ಕೇವಲ ದಾಸ್ತಾನವೇ ನಮ್ಮ ಅಭದ್ರತೆಯನ್ನು ಹೆಚ್ಚಿಸುತ್ತದೆ. ಅಣುಬಾಂಬಿನ ಶಕ್ತಿಯ ಎದುರು ಗಾಂಧೀಜಿಯ ನಿರ್ಬಲತೆ, ಅಹಿಂಸೆಗಳ ನೈತಿಕ ಶಕ್ತಿ ಮಾತ್ರ ಗೆಲ್ಲಬಲ್ಲುದು.

ಸೆಪ್ಟೆಂಬರ್ ೧೧ರ ಅಮೇರಿಕದ ಮೇಲೆ ದಾಳಿ, ಡಿಸೆಂಬರ್ ೧೩ರಂದು ನಮ್ಮ ಪಾರ್ಲಿಮೆಂಟ್ ಭವನದ ಮೇಲೆ ಎದೆ ನಡುಗಿಸುವ ದಾಳಿ ನಡೆದಾಗ "ಇದು ಯಾಕೆ ಹೀಗೆ?" ಎಂದು ಈ ಎಲ್ಲ ಹಿಂಸೆಗಳ ಮೂಲಕ ತಳಸ್ಪರ್ಶಿ ವಿಶ್ಲೇಷಣೆ ಮಾಡುವ ಸಮಾಧಾನದ ಚಿಂತನಾ ವಿವೇಕವನ್ನು ಉಪನಿಷತ್ ಋಷಿಗಳ, ಬುದ್ಧ-ಮಹಾವೀರರ ಅಧ್ಯಾತ್ಮ ಪರಂಪರೆಯಿರುವ ನಮ್ಮೀ ದೇಶವೂ ತೋರಲಿಲ್ಲ. ಗಾಂಧೀಜಿಯನ್ನು ಒಬ್ಬನೇ ಒಬ್ಬ ನೇತಾರನಾಗಲೀ, ರಾಜಕೀಯ ಮುತ್ಸದ್ದಿಯಾಗಲೀ ಚಿಂತಕನಾಗಲೀ ಪತ್ರಿಕೆಯಾಗಲಿ ಸ್ಮರಿಸಿಕೊಂಡಂತಿಲ್ಲ. ಬದಲಾಗಿ; ಭಾರತದ ಒಟ್ಟು ಮನಸ್ಸು ಇಂದು ರಣಕಹಳೆ ಊದುತ್ತಾಸಮರಕ್ಕೆ ಸಜ್ಜಾಗುತ್ತಿದೆ. ನಮ್ಮ ಚಿಂತನ ಪರಂಪರೆಗೇ ವಿಸ್ಮೃತಿ ಕವಿದಂತೆ ಕಾಣುತ್ತದೆ.

ಆದರೆ, ೨೧ನೆಯ ಶತಮಾನದಲ್ಲಿ ಮಾನವ ಜನಾಂಗದ ಭವಿಷ್ಯ ಗಾಂಧೀಜಿಯ ತತ್ತ್ವಗಳ ಅಂತರಂಗೀಕರಣದ ಮೇಲೆ ನಿಂತಿದೆ. ಮರಳಿ ಗಾಂಧಿ ತೀರಾ ಹಚ್ಚಿಕೊಂಡಿದ್ದ ಕಾಳಜಿಗಳನ್ನು ಪುನರ್ವಿಮರ್ಶಿಸುತ್ತಾ, ನೈಜ ಧಾರ್ಮಿಕ ಪರಂಪರೆಯ ಜೀವಪೋಷಕ ಅಂಶಗಳನ್ನು ಶುಭ್ರ ಕಣ್ಣುಗಳಿಂದ ನೋಡಿ, ಅನುಸರಿಸುವ ಧೈರ್ಯ ಮಾಡುವುದು ಅನಿವಾರ್ಯವಾಗಿದೆ.

□

# ಮತಾಂತರದ ಪ್ರಶ್ನೆ

"ಮತಾಂತರದ ಬಗ್ಗೆ ಚರ್ಚೆಯಾಗಲಿ" ಎಂಬ ಮಾತೇ ಅಸಂಗತ. ಇದು ರಾಜಕೀಯ ಉದ್ದೇಶದಿಂದ ಹುಟ್ಟುಹಾಕಿದ ಚರ್ಚೆಯೇ ವಿನಾ ಸಹಜ ಅಲ್ಲ. ಸಹಜವಾಗಿ ಇಂದು ಆಗಬೇಕಾದ್ದು ಈ ದೇಶವನ್ನು ಕಿತ್ತು ತಿನ್ನುವ ಬಡತನ - ನಿರುದ್ಯೋಗಗಳ ಬಗ್ಗೆ ಚರ್ಚೆ, ಬಡವರಿಗೆ ಇನ್ನೂ ದಕ್ಕದ ಕನಿಷ್ಠ ಆರೋಗ್ಯ, ಶಿಕ್ಷಣ ಸೌಲಭ್ಯಗಳ ಬಗ್ಗೆ ಚರ್ಚೆ, ಹೆಣ್ಣುಗಳನ್ನು ಜೀವಂತ ಸುಡುವ ಬಗ್ಗೆ ಚರ್ಚೆ, ಇಂದಿನ ಉದಾರೀಕರಣ - ಖಾಸಗೀಕರಣಗಳ ಬಗ್ಗೆ ಚರ್ಚೆ, ಉದಾರೀಕರಣವು ತನ್ನದೇ ರೀತಿಯಲ್ಲಿ ವಿಭಿನ್ನ ಜನಾಂಗಗಳಲ್ಲಿ 'ಐಡೆಂಟಿಟಿ'ಯ ಬಿಕ್ಕಟ್ಟನ್ನು ಸೃಷ್ಟಿಸುತ್ತಿರುವ ಬಗ್ಗೆ ಚರ್ಚೆ. ಇದು ಲೋಕಸಭೆಯಲ್ಲಿ ಚರ್ಚೆಯ ವಿಷಯವಾಗಬೇಕು. ಈ ವಿಷಯಗಳ ಬಗ್ಗೆ ತಮ್ಮ ನಿಲುವುಗಳನ್ನು ಸ್ಪಷ್ಟ ಪಡಿಸುವ ನಿಟ್ಟಿನಲ್ಲಿ ಚರ್ಚೆ ನಡೆಯಬೇಕು. ಅದು ಬಿಟ್ಟು, ಅಯೋಧ್ಯೆಯಲ್ಲಿ ಮಂದಿರ ಅಥವಾ ಮಸೀದಿ ಕಟ್ಟಬೇಕೋ ಬೇಡವೋ, ಹಿಂದೆ ಅಲ್ಲಿ ಚಾರಿತ್ರಿಕವಾಗಿ ಮಸೀದಿ-ಮಂದಿರ ಇತ್ತೋ ಇಲ್ಲವೋ, ಮತಾಂತರ ಮಾಡುವುದು ಸರಿಯೇ ತಪ್ಪೇ-ಮುಂತಾದ ಚರ್ಚೆಗಳೇ ಲೋಕಸಭೆಯ ಚರ್ಚೆಯ ಬಹುಪಾಲು ಅಂಶವನ್ನು ಆವರಿಸಿಕೊಳ್ಳುವುದು. ಒಂದು ಸಭ್ಯ ನಾಗರಿಕತೆಯ ಲಕ್ಷಣವಲ್ಲ. ಪ್ರಜೆಗಳ ಬದೆಷ್ಟೋ ಜ್ವಲಂತ ಮೂಲಭೂತ ಸಮಸ್ಯೆಗಳು ಇರುವಾಗ ಇದೊಂದು ಅಸಂಗತ ಪ್ರಶ್ನೆ.

ಸಾರ್ವಕಾಲಿಕ ಮೌಲ್ಯಗಳಾದ ಸತ್ಯ, ಅಹಿಂಸೆ, ಪ್ರೀತಿ ಅನುಕಂಪಗಳಂತೆ, ನಂಬಿಕೆ ಎಂಬುದು ಒಂದು ಸಾರ್ವಕಾಲಿಕ ಮೌಲ್ಯ ಅಲ್ಲ. ಹಾಗಾಗಿಯೇ ಬುದ್ಧ ಒಂದು ನಿಶ್ಚಿತ ಧಾರ್ಮಿಕ ನಂಬಿಕೆಗಿಂತ ಹೆಚ್ಚಾಗಿ ನ್ಯಾಯ, ಸಮಾನತೆ, ಅಹಿಂಸೆ ಪ್ರೀತಿ ಮುಂತಾದ ಸಾರ್ವಕಾಲಿಕ ಮೌಲ್ಯಗಳನ್ನು ಬೋಧಿಸಿದ. ಉಪನಿಷತ್ ಋಷಿಗಳೂ ಇದನ್ನೇ ಮಾಡಿದರು.

**ನಂಬಿಕೆಯ ಸ್ವಾತಂತ್ರ್ಯ**

ನಂಬಿಕೆಯ ಸ್ವಾತಂತ್ರ್ಯವೆಂಬುದು ಎಲ್ಲಾ ವಿಧದ ಸ್ವಾತಂತ್ರ್ಯಗಳ ಮೂಲ. ನಂಬಿಕೆಯ ಸ್ವಾತಂತ್ರ್ಯವಿಲ್ಲದೆ ಯಾವ ರೀತಿಯ ಸ್ವಾತಂತ್ರ್ಯವೂ ಇರಲಿಕ್ಕೆ ಸಾಧ್ಯವಿಲ್ಲ. ಪ್ರತಿ ಧರ್ಮಕ್ಕೂ ಧರ್ಮ ಪ್ರಚಾರದ ಸ್ವಾತಂತ್ರ್ಯವಿದೆ. ಹಾಗೆಯೇ ಪ್ರತಿ ಮನುಷ್ಯನಿಗೂ ತನ್ನ ಧರ್ಮ, ನಂಬಿಕೆಯನ್ನು ಬದಲಿಸುವ ಅಥವಾ ಯಾವ ನಂಬಿಕೆಯೂ ಇಲ್ಲದೆ ನಾಸ್ತಿಕನಾಗುವ ಸ್ವತಂತ್ರ್ಯವೂ ಇದೆ.

ಮತಪ್ರಚಾರದಲ್ಲಿ ಮತಾಂತರಕ್ಕೆ ಪುಸಲಾಯಿಸುವ ಕಾರ್ಯಕ್ರಮವೂ ಇದೆ. ಈ ಪುಸಲಾಯಿಸುವಿಕೆಯೆಂಬುದು ತನ್ನ ಮತದ ಶ್ರೇಷ್ಠತೆಯ ಬಗ್ಗೆ ಅನ್ಯ ಮತೀಯರಿಗೆ ಮನದಟ್ಟು ಮಾಡಲು ಪ್ರಯತ್ನಿಸುವುದು. ಈ ಪುಸಲಾಯಿಸುವಿಕೆ ತಪ್ಪಲ್ಲ. ಚುನಾವಣೆಯಲ್ಲಿ ಮತ ಕೇಳುವಾಗಲೂ ತನ್ನ ಪಾರ್ಟಿಯ ಶ್ರೇಷ್ಠತೆಯ ಬಗ್ಗೆ ಪ್ರತಿ ಪಾರ್ಟಿಯೂ ಹೇಳಿಕೊಂಡು ಮತದಾರರನ್ನು ಪುಸಲಾಯಿಸುತ್ತವೆ. ಆದರೆ ಮತ ಚಲಾಯಿಸುವ ಹಕ್ಕು ಮಾತ್ರ ಸಂಪೂರ್ಣ ಪ್ರಜೆಯದ್ದು. ಹಾಗಾಗಿ ಈ ಮತಾಂತರ ಪ್ರಕ್ರಿಯೆ ಎಲ್ಲ ಕಾಲದಲ್ಲೂ ಎಲ್ಲ ಧರ್ಮಗಳಲ್ಲೂ ನಡೆದದ್ದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಹಿಂದೂ ಧರ್ಮದೊಳಗೇ, ಸ್ಮಾರ್ತ, ವೈಷ್ಣವರ ನಡುವೆ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಾಕ್ತರ ನಡುವೆ, ವೈದಿಕ, ಶ್ರಮಣ ನಡುವೆ ಅಂದರೆ ಹಿಂದೂ, ಜೈನ, ಬೌದ್ಧರ ನಡುವೆ ಇಂಥ ಮತಾಂತರಗಳು ನಡೆಯುತ್ತಲೇ ಬಂದಿವೆ; ಮಾತ್ರವಲ್ಲ ಆ ಸಂಧರ್ಭಗಳಲ್ಲಿ ಸಾಕಷ್ಟು ಬಲಾತ್ಕಾರ, ಸಂಘರ್ಷಗಳೂ ನಡೆದ ಇತಿಹಾಸಗಳಿವೆ. ಆದರೆ ಮತಾಂತರದಲ್ಲಿ ಇಂಥ ಬಲಾತ್ಕಾರ, ಹಿಂಸೆ ಮಾಡುವುದು ತಪ್ಪು. ದಂಡಸಂಹಿತೆಯ ಪ್ರಕಾರ ಈ ಕ್ರಿಯೆ ಅಪರಾಧವಾಗುತ್ತದೆ.

**ಪರಸ್ಪರ ಗೌರವ - ಸ್ವಾತಂತ್ರ್ಯ**

ಒಂದು ಸಭ್ಯ ನಾಗರಿಕ ಸಮಾಜವನ್ನು ಕಟ್ಟಬೇಕಾದರೆ, ಒಂದು ಸಮುದಾಯದಲ್ಲಿ ಸಾಂಸ್ಕೃತಿಕ ಘನತೆ-ಗೌರವಗಳಿರಬೇಕಾದರೆ, ಒಬ್ಬ ವ್ಯಕ್ತಿ ಅಥವಾ ಗುಂಪು ಅಥವಾ ಸಮುದಾಯವು ಇನ್ನೊಬ್ಬ ವ್ಯಕ್ತಿ, ಗುಂಪು ಅಥವಾ ಸಮುದಾಯವನ್ನು ಅದು ಇದ್ದ ಕ್ರಮದಲ್ಲೇ ಸ್ವೀಕರಿಸಬೇಕು. 'ಅನ್ಯ'ನನ್ನು ಆತ ಇದ್ದಂತೇ ಒಪ್ಪಬೇಕು; ಮತ್ತು ಆತನ ಅಭಿವ್ಯಕ್ತಿಯ, ಆಯ್ಕೆಯ ಸ್ವಾತಂತ್ರ್ಯವನ್ನು ಗೌರವಿಸಬೇಕು. ಅಮೇರಿಕಾದಲ್ಲಿ ಕರಿಯರ ವಿರುದ್ಧ ಬಿಳಿಯರ ಒಂದು ಉಗ್ರ ಮೂಲಭೂತವಾದೀ ಸಂಘಟನೆ ಇದೆ. ಆ ಸಂಘಟನೆಯನ್ನು ನಿಷೇಧಿಸಲು ಸರಕಾರ ಮುಂದಾದಾಗ, ಆ ದೇಶದ ಶ್ರೇಷ್ಠ ಬುದ್ಧಿಜೀವಿ ನೋಮ್ ಚೋಂಸ್ಕಿ (Noam Chomsky) ಅದನ್ನು ವಿರೋಧಿಸಿದ. ಹಾಗೆಯೇ ಇತ್ತೀಚೆಗೆ ಒಬ್ಬ ಲೇಖಕ, "ಹಿಟ್ಲರ್ ಗ್ಯಾಸ್ ಚೇಂಬರ್‌ನಲ್ಲಿ ಹಾಕಿ ಮಿಲಿಯಾಂತರ ಯೆಹೂದಿಗಳನ್ನು ಕೊಂದಿದ್ದಾನೆ ಎಂಬುದು ಬರೇ ಸುಳ್ಳು, ಆತ ಕೊಲ್ಲಲೇ ಇಲ್ಲ. ಯೆಹೂದಿ ಜನಾಂಗದ ಹತ್ಯೆ ನಡೆದೇ ಇಲ್ಲ" ಎಂದು ತನ್ನ ವಾದವನ್ನು ಮಂಡಿಸುವ ಒಂದು ಪುಸ್ತಕ ಬರೆದ. ಯುರೋಪಿನಲ್ಲಿ ಆ ಪುಸ್ತಕದ ವಿರುದ್ಧ ಪ್ರತಿಭಟನೆಯದ್ದಿತು; ಮಾತ್ರವಲ್ಲ, ಆ ಪುಸ್ತಕವನ್ನು ನಿಷೇಧಿಸಬೇಕೆಂದು ಗುಲ್ಲೆದ್ದಿತು. ಆಗಲೂ ಚೋಮ್‌ಸ್ಕಿ ಅದನ್ನು ವಿರೋಧಿಸಿದ. ಚೋಮ್‌ಸ್ಕಿಯ ಈ ನಿಲುವಿನ ಬಗ್ಗೆ ಅನೇಕರು ಆಕ್ರೋಶ ವ್ಯಕ್ತಪಡಿಸಿದ್ದರು. ಆದರೆ ಆ ಆಕ್ಷೇಪಗಾರರಿಗೆ ಚೋಮ್‌ಸ್ಕಿಯೂ ಒಬ್ಬ

ಯೆಹೂದಿ, ಮತ್ತು ಆತ ಜರ್ಮನಿಯಿಂದ ಆ ಸಮಯದಲ್ಲಿ ಬಂದವ ಎಂಬ ಸತ್ಯ ಗೊತ್ತಿರಲಿಲ್ಲ. ಚೋಮ್‌ಸ್ಕಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವುದನ್ನು ಎಲ್ಲಾ ಸಂದರ್ಭಗಳಲ್ಲೂ ವಿರೋಧಿಸುತ್ತಲೇ ಬಂದನು.

**ಸರಿನಿಲುವು**

ಮತಾಂತರದ ಪ್ರಶ್ನೆ ಬಂದಾಗ ಆ ಬಗ್ಗೆ ತೀರ ಸರಳೀಕೃತ ನಿಲುವಿನಿಂದ ಏನೂ ಪ್ರಯೋಜನವಿಲ್ಲ. ಬದಲಾಗಿ ಅದನ್ನು ಈ ದೇಶದ ಆರ್ಥಿಕ- ಸಾಮಾಜಿಕ ಸಂದರ್ಭಗಳ ಕನ್ನಡಿಯಲ್ಲಿ ನೋಡಿ ಆ ಬಗ್ಗೆ ನಾವು ಸರಿ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು, ಮತ್ತು ಸರಿ ನಿಲುವನ್ನು ತೆಗೆದುಕೊಳ್ಳಬೇಕು.

"ಉದಾಹರಣೆಗೆ, ಗುಜರಾತಿನಲ್ಲಿ ಮತಾಂತರ ಮಾಡುವ ಕೆಲವೊಂದು ಸಂಘಟನೆಗಳು ಅಲ್ಲಿನ ಬುಡಕಟ್ಟು ಜನಾಂಗದವರನ್ನು ಸಾಮಾಜಿಕವಾಗಿ ಸಂಘಟಿಸುತ್ತಿವೆ. ಈ ಸಂಘಟನೆಯಿಂದಾಗಿ ಕ್ರಮೇಣ ಅವರು ತಮ್ಮ ಮೂಲಭೂತ ಹಕ್ಕುಗಳ ಬಗ್ಗೆ ಎಚ್ಚರಗೊಳ್ಳುತ್ತಿದ್ದಾರೆ. ಅವರನ್ನು ಅಜ್ಞಾನದಲ್ಲೇ ಇಟ್ಟು ಅವರನ್ನು ಈ ವರೆಗೆ ಶೋಷಿಸುತ್ತ ಬದುಕುತ್ತಿದ್ದ ಭೂಮಾಲಕರು, ಸಾಲಕೊಡುವ ವರ್ಗ ಇದರಿಂದಾಗಿ ಗಾಬರಿಗೊಂಡು, ಈ ಅಮಾಯಕರ ನಡುವೆ ಕೋಮು ವಿಷಬೀಜ ಬಿತ್ತಿ ಭಾವನಾತ್ಮಕವಾಗಿ ಅವರನ್ನು ಸಂಘಟಿಸಿ ಹಿಂಸಾತ್ಮಕ ಪ್ರಚೋದನೆ ನಡೆಸುತ್ತಿದ್ದಾರೆ" ಎಂದು ಮಾನವ ಹಕ್ಕುಗಳ ಆಯೋಗ ಅಭಿಪ್ರಾಯಪಟ್ಟಿದೆ.

ಮತಾಂತರವು ಕಾನೂನಿನ ಕಣ್ಣಿನಲ್ಲಿ ಅಪರಾಧ ಅಲ್ಲ. ಹಾಗಾದರೆ, ಅದನ್ನು ಅಪರಾಧ ಎಂದು ಘೋಷಿಸುವ, ಆ ಬಗ್ಗೆ ಹುಕುಂ ನೀಡುವ ಗುಂಪು ಯಾವುದು ? ಆ ಗುಂಪು ಮುಸಲ್ಮಾನರಾಗಿರಬಹುದು, ಕ್ರಿಶ್ಚನರಾಗಿರಬಹುದು, ಹಿಂದುಗಳಾಗಿರಬಹುದು ಅಥವಾ ನಾಸ್ತಿಕವಾದೀ ವೈಚಾರಿನಿರಬಹುದು. ಇಂಥ ಗುಂಪುಗಳು ಅಸಹನೆಯಿಂದ ಫ್ಯಾಸಿಸ್ಟ್ ಗುಂಪುಗಳಾಗಿ ಸುಲಭವಾಗಿ ಪರಿವರ್ತನೆಗೊಂಡು ಬಿಡುತ್ತವೆ. ಎರಡನೆಯ ಮಹಾಯುದ್ಧದ ನಂತರ ಆದದ್ದು ಇದೇನೆ. ಜರ್ಮನರು ಶ್ರೇಷ್ಠ ಆರ್ಯಜನಾಂಗದವರು ಎಂದು ಪ್ರಚಾರಮಾಡುತ್ತಾ ಆರು ಮಿಲಿಯ ಯೆಹೂದಿಗಳನ್ನು ಗ್ಯಾಸ್ ಚೇಂಬರಿನಲ್ಲಿ ಹಾಕಿ ಹಿಟ್ಲರ್ ಕೊಂದ.

**ಕಾರಣಗಳು**

೧. ಈ ಶ್ರೇಣೀಕೃತ ವರ್ಗವ್ಯವಸ್ಥೆಯಲ್ಲಿ ಆರ್ಥಿಕ ಸ್ಥಿತಿಗತಿ ಮತ್ತು ಸಾಮಾಜಿಕ ಸ್ಥಾನಮಾನಗಳಿಗೆ, ಕಾಯಕದ ಬದುಕಿನ ಸಾಮಾನ್ಯ ಮನುಷ್ಯನ ಮೂಲಭೂತ ಕಾಳಜಿಗಳ ಧಕ್ಕೆ ಬಂದಾಗ ಆತ ಇನ್ನೊಂದು ಧರ್ಮದತ್ತ ಮುಖ ಮಾಡುವುದು ಮನುಷ್ಯ ಸಹಜವಾಗಿದೆ.

ನನಗಿನ್ನೂ ನೆನಪಿದೆ. ನಾನು ಚಿಕ್ಕವನಾಗಿದ್ದಾಗ ನನ್ನ ತಂದೆ ಉಡುಪಿಯ ಅದಮಾರು ಮಠದ ಮಣಿಪುರ ಗ್ರಾಮದ ಶಾಖಾಮಠದ ಮ್ಯಾನೇಜರ್ ಆಗಿದ್ದರು. ಅವರಿಗೆ ಶುಕ್ರ ಪೂಜಾರಿ ಎಂಬ ಒಬ್ಬ ಪೇದೆ ಸಹಾಯಕನಾಗಿದ್ದ. ಆತ ಒಬ್ಬ ಪೂಜಾರಿಯಾದ್ದರಿಂದ ಆತನಿಗೆ ಮಠ ಸಂಪ್ರದಾಯದಂತೆ ಆ ಕಾಲದಲ್ಲಿ ಒಳಗೆ ಪ್ರವೇಶವಿರಲಿಲ್ಲ. ಒಂದು ದಿನ ಆತ ಪೀಟರ್ ಡಿ ಸೋಜ ಆಗಿ ಬಂದ. ಪೀಟರ್ ಡಿ ಸೋಜಾನಿಗೆ ಮಠದ ಒಳಗೆ ಬರಲು ನಿಷೇಧವಿರಲಿಲ್ಲ.

ಆತ ಸರಾಗವಾಗಿ ಮಠದೊಳಗೆ ಬರಬಹುದಿತ್ತು. ನಮ್ಮದೇ ಧರ್ಮದಲ್ಲಿ ಇಲ್ಲದ ಸಾಮಾಜಿಕ ಸ್ಥಾನಮಾನ, ಮತಾಂತರವಾದಾಗ ದೊರೆತರೆ ಆತ ಇನ್ನೊಂದು ಮತಕ್ಕೆ ಮತಾಂತರವಾಗುವುದು ಸಹಜ ಪ್ರಕ್ರಿಯೆ ಆಗಿ ಬಿಡುವುದಿಲ್ಲವೇ ? ಬದುಕಿನ ಕನಿಷ್ಠ ಸೌಲಭ್ಯಗಳಿಂದ ವಂಚಿತನಾದವನಿಗೆ ಅವನ್ನು ಒದಗಿಸುವ ಆಶ್ವಾಸನೆ ಕೊಡುವುದು ನಿಜವಾದ ಮಾನವೀಯ ಸ್ಪಂದನವಾಗಿದೆ. ಇಂಥ ಪುಸಲಾಯಿಸುವಿಕೆ ಆಕ್ಷೇಪಾರ್ಹವಲ್ಲ. ಇಲ್ಲಿ ಬಲವಂತಿಕೆಯ ಪ್ರಶ್ನೆ ಎಲ್ಲಿಂದ ಬಂತು ?

ಇನ್ನು ಬುಡಕಟ್ಟು ಜನಾಂಗದ ಸಂಸ್ಕೃತಿ, ಬದುಕಿನ ಆಕೃತಿ ಸಂಸ್ಕೃತ- ಹಿಂದೂ ಸಾಂಸ್ಕೃತಿಕ ಆಕೃತಿಗಿಂತ ತೀರ ಭಿನ್ನವಾಗಿದೆ. ಅವರಿಗೆ ಅವರದೇ ಆದ ಆರ್ಥಿಕ, ಸಾಮಾಜಿಕ ಕಾಳಜಿಗಳಿವೆ, ಜೀವನ ಕ್ರಮವಿದೆ, ಪರಂಪರೆಯಿದೆ. ಆದರೂ ಸಾಮಾಜಿಕ ಸ್ಥಾನಮಾನ, ಆರ್ಥಿಕ ಸ್ಥಿತಿಗತಿ ಉತ್ತಮವಾಗಲು ಶಿಕ್ಷಣ ಅಗತ್ಯ ಎಂಬುದು ಇತ್ತೀಚೆಗೆ ಅವರಿಗೆ ಮನವರಿಕೆಯಾಗುತ್ತಿದೆ. ಅದನ್ನು ಪಡೆಯಲು ಮಾತ್ರ ತಮ್ಮ ಮಾತೃ ಧರ್ಮದಲ್ಲಿ ಅವಕಾಶವೇ ಇಲ್ಲ. ದಲಿತರು ಇತ್ತೀಚಿನ ವರೆಗೆ ಸ್ವಂತ ಭೂಮಿ ಮಾಡಿಕೊಳ್ಳವಂತಿರಲಿಲ್ಲ. ಶಿವರಾಮ ಕಾರಂತರ "ಚೋಮನ ದುಡಿ"ಯ ಚೋಮನಿಗೆ ಒಂದು ತುಂಡು ಭೂಮಿಯನ್ನು ಮಾಡಿಕೊಳ್ಳುವ ಆಸೆ ಕೊನೆಯವರೆಗೂ ಈಡೇರಲಿಲ್ಲ. ಇದರಿಂದ ರೋಸಿಹೋಗಿ ಆತ ತನಗೆ ಸಮಾನ ಸಾಮಾಜಿಕ - ಆರ್ಥಿಕ ಅವಕಾಶ ನೀಡಲು ತಯಾರಿರುವ ಕ್ರಿಶ್ಚಿಯನ್ ಧರ್ಮಕ್ಕೆ ಸೇರುವ ಬಗ್ಗೂ ಚಿಂತಿಸುತ್ತಾನೆ. ಅಂದರೆ, ವರ್ಗ ಕನಿಷ್ಠರು ತಮ್ಮ ಆಸೆಯನ್ನು ಕೊಂಚಮಟ್ಟಿಗಾದರೂ ಈಡೇರಿಸಲು ಅವಕಾಶ ಕೊಡುವ ಧರ್ಮಕ್ಕೆ ವಲಸೆ ಹೋಗುತ್ತಾರೆ. ಹಸಿದ ಹೊಟ್ಟೆಗೆ ತನ್ನ ಮನೆಯಲ್ಲೇ ಊಟ ದೊರೆಯದಾಗ ಇನ್ನೊಂದು ಮನೆಯವರು ಊಟ ನೀಡಿದರೆ ಖಂಡಿತವಗಿಯೂ ಈ ಸ್ಥಿತಿಯಲ್ಲಿ ಯಾವನಾದರೂ ಅನ್ಯ ಧರ್ಮದತ್ತ ಹೋಗುವ ಯೋಚನೆ ಮಾಡುವುದು ಸಹಜ. ಆದರೆ, ಬುಡಕಟ್ಟು ಜನಾಂಗದವರು ಮತಾಂತರ ಹೊಂದಿದರೂ ತಮ್ಮ ಜೀವನಕ್ರಮವನ್ನೇನೂ ಬದಲಾಯಿಸುವುದಿಲ್ಲ. ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಧರ್ಮದ ಒಂದು ಲಾಂಛನ ಮಾತ್ರ ಮುಖ್ಯವಾಗುತ್ತದೆ.

ನಾವು ಚರಿತ್ರೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಈ ಪ್ರಕ್ರಿಯೆ ಹಿಂದಿನಿಂದಲೂ ನಡೆದುಕೊಂಡು ಬಂದಿರುವುದು ವ್ಯಕ್ತವಾಗದಿರದು. ಹಿಂದಿನ ಕಾಲದಲ್ಲಿ, ಬಲಿಷ್ಠವಾದ ಉಚ್ಚ ಜಾತಿಯ ಜನ ತಾವು ಆಳುವ ರಾಜ ಮಹಾರಾಜರುಗಳ ಪ್ರತಿಷ್ಠಿತ ಸಮಾಜದಲ್ಲಿ ಸಲ್ಲುವವರಾಗಿ ಅಲ್ಲಿ ಸಿಗುವ ಉನ್ನತ ಸ್ಥಾನಮಾನ, ವೈಭವದ ವಿಲಾಸೀ ಜೀವನವನ್ನು ದಕ್ಕಿಸಿಕೊಳ್ಳಲು ಮತ್ತು ಅಧಿಕಾರ, ಪ್ರಭುತ್ವವನ್ನುಗಿಟ್ಟಿಸಿಕೊಳ್ಳಲು ಆಳುವವರ ಧರ್ಮವನ್ನು ಸ್ವೀಕರಿಸಿದ ನಿದರ್ಶನಗಳು ಹೇರಳವಾಗಿವೆ.

ಇಲ್ಲಿ ಇನ್ನೂ ಒಂದು ಅಂಶವನ್ನು ಗಮನಿಸಬಹುದು. ಆಳುವ ವರ್ಗ ತನ್ನ ಧರ್ಮಕ್ಕೆ ಇಡೀ ರಾಜ್ಯದ ಪ್ರಜೆಗಳನ್ನು ಪರಿವರ್ತಿಸಿದ ನಿದರ್ಶನಗಳೂ ಇವೆ. ಇದರ ಜೊತೆಗೆ, ಒಂದು ಪಂಥದವರು ಇನ್ನೊಂದು ಪಂಥದವರನ್ನು ಬಲಾತ್ಕಾರದಿಂದ ಪಂಥಾಂತರ ಮಾಡಿದ್ದೂ ಸಾಕಷ್ಟು ನಡೆದಿವೆ. ಉದಾಹರಣೆಗೆ, ಮಣಿಪುರ ರಾಜ್ಯದಲ್ಲಿ ಹಿಂದೆ ಶೈವ ಧರ್ಮವಿತ್ತು. ಸುಮಾರು

೧೫೦-೨೦೦ ವರ್ಷಗಳ ಹಿಂದೆ ಇಡೀ ಮಣಿಪುರ ರಾಜ್ಯವನ್ನೇ ಬಲಾತ್ಕಾರ, ಹಿಂಸೆಗಳಿಂದ ವೈಷ್ಣವ ಪಂಥಕ್ಕೆ ಮತಾಂತರಗೊಳಿಸಲಾಯಿತು. ಜೈನ, ಬೌದ್ಧ, ಹಿಂದೂ ಧರ್ಮಗಳೊಳಗೆ ಇಂಥ ಮತಾಂತರ ಸಂಘರ್ಷಗಳು ನಡೆದ ನೂರಾರು ಘಟನೆಗಳು ಇತಿಹಾಸದಲ್ಲಿ ದಾಖಲಾಗಿವೆ.

೪. ಚರಿತ್ರೆಯಲ್ಲಿ ಒಂದು ಅಂಶವನ್ನು ನಾವು ಗಮನಿಸಬೇಕು. ಕಾಯಕ ವೃತ್ತಿಮಾಡುವ ಕರಕುಶಲಗಾರರನ್ನು, ದೈಹಿಕವಾಗಿ ದುಡಿಯುವ ಶ್ರಮಿಕರನ್ನು ಬೌದ್ಧಿಕ ಕೆಲಸ ಮಾಡುವವರಿಗಿಂತ ಕೀಳು ಎಂದು ನಮ್ಮ ಈ ಶ್ರೇಣಿಕೃತ ವರ್ಗವ್ಯವಸ್ಥೆ ಹಿಂದಿನಿಂದಲೂ ಪರಿಗಣಿಸಿಕೊಂಡು ಬಂದಿದೆ; ಮಾತ್ರವಲ್ಲ, ಈ ಸಾಮಾಜಿಕ ಮೌಲ್ಯವು, ವರ್ಗ ವಿಷಮತೆಯನ್ನು ಇನ್ನಷ್ಟು ಭದ್ರಗೊಳಿಸುತ್ತ ಬಂದಿದೆ. ಈ ದೇಶದ ಆರ್ಥಿಕ ಬದುಕನ್ನು ಶತಮಾನಗಳಿಂದ ಧಾರಣೆಮಾಡಿಕೊಂಡು ಬಂದ ಅತ್ಯಂತ ನಿಪುಣರಾದ ಬಡಗಿಗಳು, ಶಿಲ್ಪಿಗಳು, ಲೋಹಕಾರರು, ಹಿತ್ತಾಳೆ-ತಾಮ್ರ-ಕಂಚಿನ ಕೆಲಸಗಾರರು, ಲೋಕಪ್ರಸಿದ್ಧ ನೇಕಾರರು, ಕುಂಬಾರರೇ ಮೊದಲಾದ ಅಗಾಧ ಕರಕುಶಲಗಾರರ ವರ್ಗ ಕೀಳು ಜಾತಿಯವರೆನಿಸಿಕೊಂಡು ಹಿಂದಿನಿಂದಲೂ ಸಾಮಾಜದ ಅಂಚಿನಲ್ಲಿ ಬದುಕಬೇಕಾದ ಪರಿಸ್ಥಿತಿಯಿತ್ತು. ಹಾಗಾಗಿಯೇ ಮೊಘಲರು ಮತ್ತು ಇತರ ಅನ್ಯರ ಆಳ್ವಿಕೆಯ ಕಾಲದಲ್ಲಿ ಮುಖ್ಯವಾಗಿ ಉತ್ತರ ಭಾರತದಲ್ಲಿ ಈ ಕರಕುಶಲಗಾರರು ಸಾಮಾಜಿಕ ಘನತೆ, ಗೌರವಗಳಿಂದ ಬಾಳಲು ಇಸ್ಲಾಮ್ ಧರ್ಮ ಸ್ವೀಕರಿಸಿದರು. ಇಂದು ಕೈಗಳಿಂದ ಕೆಲಸಮಾಡುವ ಕರಕುಶಲಗಾರರಲ್ಲಿ ಬಹುತೇಕ ಜನರು ಹಾಗಾಗಿಯೇ ಮುಸ್ಲಿಮರಾಗಿದ್ದಾರೆ. ಅಲ್ಪಸಂಖ್ಯಾತರ ತುಷ್ಟೀಕರಣದ ಬಗ್ಗೆ ಗುಲ್ಲೆಬ್ಬಿಸುವ ಈ ದೇಶದಲ್ಲಿ, ಅವರಿಗೆ ಔಪಚಾರಿಕ ಕ್ಷೇತ್ರದಲ್ಲಿ (formal sector) ಕೆಲಸ ಸಿಗುವುದು ಕನಸಿನ ಗಂಟಾಗಿದೆ. ಹಾಗಾಗಿ ಅವರು ತಮ್ಮ ಬದುಕಿಗೆ ಸ್ವಂತ ಕೈಗಳನ್ನೇ ಅವಲಂಬಿಸಿರುವುದು ಅನಿವಾರ್ಯವಾಗಿದೆ. ನಿರಂತರವಾಗಿ ಅವಜ್ಞೆಗೊಳಗಾದ ಈ ಶ್ರಮಿಕ ವರ್ಗನಿಜಕ್ಕೂ ಈ ದೇಶದ ಆರ್ಥಿಕ ಬೆನ್ನೆಲುಬಾಗಿದ್ದಾರೆ. ಉದಾಹರಣೆಗೆ, ಮೇಲಿನಿಂದ ಪ್ರಕಾಶಮಾನವಾಗಿ ಕಾಣುವ ಮುಂಬಯಿಯ ಔಪಚಾರಿಕ ಅರ್ಥವ್ಯವಸ್ಥೆಯ ತಳಗಟ್ಟು, ಒಟ್ಟು ಜೀವಾಳವೇ ಮುಸ್ಲಿಮರಾಗಿದ್ದಾರೆ. ಆ ದುಡಿಯುವ ವರ್ಗವಿಲ್ಲದಿದ್ದರೆ ಇಡಿಯ ಮುಂಬಯಿಯ ಅರ್ಥ ವ್ಯವಸ್ಥೆ ಕುಸಿದು ಬೀಳುತ್ತದೆ. ಆದರೆ ವಿಪರ್ಯಾಸವೆಂದರೆ ಈ ವರ್ಗದ ಸಾಮಾಜಿಕ ಸ್ಥಿತಿಗತಿ ಇಂದೂ ಕೂಡ ದುಃಸ್ಥಿತಿಯಲ್ಲೇ ಇದೆ.

೫. ಇಂದೂ ಕೂಡ ಕೆಲವು ಮೇಲ್ವರ್ಗದ ಶ್ರೀಮಂತರ ಮನೆ ನೋಡಿ. ನಾಯಿಗೆ ಅವರ ಮನೆಯಲ್ಲಿ ಪ್ರವೇಶವಿದೆ. ಹಲವರು, ನಾಯಿಯನ್ನು ಮಗುವಿನಂತೆ ತಮ್ಮ ಹಾಸಿಗೆಯಲ್ಲೇ ಮಲಗಿಸಿಕೊಳ್ಳುತ್ತಾರೆ. ಆದರೆ ಒಬ್ಬ ಮನುಷ್ಯನಿಗೆ, ಕೀಳು ಜಾತಿಯವ ಎಂದು ಹಣೆಪಟ್ಟಿ ಕಟ್ಟಿ, ಪ್ರವೇಶ ನಿರಾಕರಿಸುತ್ತಾರೆ; ಮಾತ್ರವಲ್ಲ, ಆತ ಒಳಗೆ ಬಂದರೆ, ಮನೆಯನ್ನು ಗೋಮಯ(ದನದ ಸೆಗಣಿಯನ್ನು ಶುದ್ಧಕ್ಕಾಗಿ ಬಳಸುವಿಕೆ) ಹಾಕಿ ಸಾರಿಸುತ್ತಾರೆ. ಪಂಚಗವ್ಯ ಹಾಕಿ ಶುದ್ಧೀಕರಿಸುತ್ತಾರೆ. ಇಂಥ ಅಸಮಾನತೆಯ ವಿರುದ್ಧ ಉಸಿರೆತ್ತಲೂ ಅವಕಾಶವಿಲ್ಲದ ತನ್ನ ಧರ್ಮದೊಳಗಿನ ವಾತಾವರಣವನ್ನು ಆತ ಮೌನವಾಗಿ ಎಷ್ಟು ಕಾಲ ಸಹಿಸಿಕೊಂಡಿದ್ದಾನು? ಅದಕ್ಕಾಗಿಯೇ ಆತ ಇಂಥ ಅಮಾನವೀಯತೆಯ ವಿರುದ್ಧ ತನ್ನ

ಬಹಿರಂಗ ಕೋಪ ಪ್ರದರ್ಶನವನ್ನು ತನ್ನ ಮಾತ್ರ ಧರ್ಮವನ್ನೇ ತ್ಯಜಿಸುವ ಮೂಲಕ ವ್ಯಕ್ತಪಡಿಸುತ್ತಾನೆ. ತನ್ನ ಧರ್ಮದೊಳಗಿನ ಸಾಮಾಜಿಕ ಅಸಮಾನತೆಯನ್ನು ಧರ್ಮವನ್ನೇ ಧಿಕ್ಕರಿಸಿ ಮತಾಂತರಗೊಳ್ಳುವ ಮೂಲಕ ತೋರಿಸುತ್ತಾನೆ. ನಿಜಕ್ಕೂ ಈ ಮತಾಂತರವು ಆಂತರಂಗಿಕವಾಗಿ ನಡೆಯುವ ಧಾರ್ಮಿಕ ಪರಿವರ್ತನೆಗಿಂತ ಹೆಚ್ಚು ಬಹಿರಂಗವಾಗಿ ಜಾತಿ ಪದ್ಧತಿಯ ಅನಿಷ್ಟಗಳ ವಿರುದ್ಧ ವರ್ಗ ಕನಿಷ್ಠರು ಮಾಡುವ ಸತ್ತ್ವಶಾಲೀ ರಾಜಕೀಯ ಹಾಗೂ ಸಾಮಾಜಿಕ ಘೋಷಣೆ. ನಿಜಕ್ಕೂ ಆ ಮೂಲಕ ದಲಿತರು, ಕರಕುಶಲಗಾರರು, ಹಿಂದುಳಿದವರು ಹಿಂದೂ ಧರ್ಮದ ಮರುವ್ಯಾಖ್ಯೆ ಮಾಡುತ್ತಿದ್ದಾರೆ ಎಂದು ನನ್ನ ಅನ್ನಿಸಿಕೆ.

**ಪರಿಹಾರದ ದಾರಿ**

ಇದಕ್ಕೆ ಪರಿಹಾರ ಅನ್ಯ ಮತದವರ ಮೇಲೆ ದಬ್ಬಾಳಿಕೆ ಅಲ್ಲ, ಮತಾಂತರದ ವಿರುದ್ಧ ಆವೇಶಭರಿತ ಬೆದರಿಕೆ, ಹಿಂಸೆ ಅಲ್ಲ. ಅಥವಾ ಮಾತ್ರ ಧರ್ಮಕ್ಕೆ ಮರುಮತಾಂತರವೂ ಅಲ. ಬದಲಿಗೆ, ಹಿಂದೂ ಧರ್ಮದ ವರ್ಗವ್ಯವಸ್ಥೆಯ ಬಗ್ಗೆ ಮರುವಿಮರ್ಶೆ, ದೋಷ, ತೊಡಕು ಸಾಮಾಜಿಕ ಅನಿಷ್ಟಗಳ ಬಗ್ಗೆ ಮುಕ್ತವಾದ ಪುನರಾವಲೋಕನ, ಮೇಲ್ವರ್ಗದವರಿಂದ ಆತ್ಮ ನಿರೀಕ್ಷಣೆ, ತಮ್ಮ ನಡವಳಿಕೆಗಳ ಬಗ್ಗೇ ವಿಮರ್ಶಾತ್ಮಕ ವಿಶ್ಲೇಷಣೆ. ಮತಾಂತರ ಮಾಡುವವರನ್ನು ಮತ್ತು ಮತಾಂತರವಾಗುವವರನ್ನು ಹೆದರಿಸಿ ಬೆದರಿಸಿ ಮತಾಂತರ ತಡೆಯುವ ಬದಲು ಅವರು ಏಕೆ ಮತಾಂತರವಾಗುತ್ತಾರೆ ಎಂಬುದನ್ನು ಮುಕ್ತವಾಗಿ ವಿಚಾರ ಮಾಡಬೇಕು.

"ಹಿಂದೂ ಎಲ್ಲ ಒಂದು" ಎಂದು ಹೇಳುವ ಮೊದಲು ಆರ್ಥಿಕ, ಸಾಮಾಜಿಕ ದಬ್ಬಾಳಿಕೆಯ ಕಾರಣಗಳಿಗಾಗಿ ದುರ್ಬಲರು ಮತಾಂತರವಾಗುತ್ತಿದ್ದರೆ, ಆ ಅನಿಷ್ಟಗಳನ್ನು ಮೊದಲು ಪರಿಹರಿಸಬೇಕು, ಜಾತಿ ಪದ್ಧತಿಯು ಉಂಟುಮಾಡಿರುವ ಗಂಭೀರ ಸಾಮಾಜಿಕ ಬಿಕ್ಕಟ್ಟನ್ನು ಪರಿಹರಿಸಬೇಕು. ಎಲ್ಲರಿಗೂ ಸಮಾನವಾಗಿ ಆರ್ಥಿಕ ಅವಕಾಶ, ಸಾಮಾಜಿಕ ಮನ್ನಣೆ ನೀಡಿ ಎಲ್ಲರೂ ವರ್ಗ ಭೇದವಿಲ್ಲದೆ ಆತ್ಮಗೌರವದಿಂದ ಬದುಕುವಂತಾದರೆ, ಯಾರೂ ಇನ್ನೊಂದು ಧರ್ಮಕ್ಕೆ ಮತಾಂತರನಾಗಲಾರ. ನಿಜಕ್ಕೂ ಹೃದಯ ಪರಿವರ್ತನೆಗೊಂಡು ಧರ್ಮ ಪರಿವರ್ತನೆಗೊಳ್ಳುವವರು ಎಲ್ಲಿದ್ದಾರೆ ? ಇದು ತೀರ ವಿರಳ. ಇಂದಿನ ಮತಾಂತರ ನಿಜಕ್ಕೂ ಆರ್ಥಿಕ, ಸಾಮಾಜಿಕ ರಾಜಕೀಯ ಸಬಲೀಕರಣದ ಪ್ರಕ್ರಿಯೆಯಷ್ಟೆ. ಇದನ್ನು ನಾವು ಅರ್ಥೈಸಿಕೊಳ್ಳಬೇಕು.

ಧಾರ್ಮಿಕತೆಯೆಂಬುದು ಶಾಶ್ವತ ಮೌಲ್ಯಗಳಾದ ಸತ್ಯ, ಅಹಿಂಸೆ, ಶಾಂತಿ, ಜೀವಪ್ರೀತಿ, ಮುಂತಾದವುಗಳಿಗೆ ಸಂಬಂಧಪಟ್ಟದ್ದು; ಸಮಷ್ಟಿ ಹಿತ, ಸಹಬಾಳ್ವೆ, ಸಾಮರಸ್ಯಗಳಿಗೆ ಪೂರಕವಾದುದು. ನಿಜ ಧಾರ್ಮಿಕ ಜೀವನಕ್ಕೆ ಸ್ವಾಮಿ, ಮುಲ್ಲಾ, ಪಾದ್ರಿ, ಲಾಂಛನಗಳೆಲ್ಲ ಗೌಣ. ಆದರೆ ಇಂದು ಈ ಧಾರ್ಮಿಕ ತತ್ತ್ವಸಾರ ಮಾಯವಾಗಿ, "ನನ್ನ-ನಿನ್ನ" ಮತಗಳಾಗಿ ಛಿದ್ರೀಕರಣಗೊಂಡು, ಆಯಾಯಾ ಗುಂಪಿನ ಮೇಲ್ಮೆ - ಹಿರಿಮೆ ಸಾರುವ ಕೇವಲ ಪೈಪೋಟಿ, ಅಸಹನೆ, ಹಿಂಸೆ ದಬ್ಬಾಳಿಕೆಯ ಮಟ್ಟಕ್ಕೆ ಇಳಿದಿದೆ. ಇದು ಅಧರ್ಮ. ಇಂಥ ಮತಾಚಾರದಲ್ಲಿ ಮತಾಂತರ ಎಂಬುದು ಧರ್ಮರಾಜಕಾರಣಕ್ಕೆ ಒಂದು ಅಸ್ತ್ರವಾಗಿದೆಯಷ್ಟೆ.

❐

# ಮತ; ಮತ ನಿರಪೇಕ್ಷತೆ

ಧರ್ಮ ಮತ್ತು ರಾಜಕೀಯಗಳ ಬೆರಕೆ ಜಗತ್ತಿನ ಇತಿಹಾಸದುದ್ದಕ್ಕೂ ಸಾಮಾನ್ಯ ಜನರ ಬದುಕಿನಲ್ಲಿ ಗೊಂದಲ ಮತ್ತು ತಲ್ಲಣ ಉಂಟುಮಾಡುತ್ತಲೇ ಬಂದಿದೆ. ಹಾಗಾಗಿ ಈ ವಿದ್ಯಮಾನದ ಚರ್ಚೆ, ಧರ್ಮದ ಅಥವಾ ಆಧ್ಯಾತ್ಮಿಕ ಅನುಭಾವದ ಬಗೆಗೆ ಸುಲಭ ಹಾಗೂ ಲಘು ವಿವರಣೆಗಳನ್ನು ನೀಡುವ ಉದ್ದೇಶ ಹೊಂದಿದೆ ಎಂದು ಭಾವಿಸಬಾರದು ಬದಲು ಗಂಭೀರವಾದ ಚರ್ಚೆ ಮಾಡುವುದು ಸೂಕ್ತವಾಗಿದೆ. ಧರ್ಮ ನಿರಪೇಕ್ಷ ಅಂಶಗಳ ಸ್ವರೂಪವನ್ನು ಆಳವಾಗಿ ವ್ಯಾಖ್ಯಾನಿಸಲು ಯತ್ನಿಸದೆ ಧರ್ಮ ನಿರಪೇಕ್ಷತೆಯ ಬಗ್ಗೆ ಮಾತನಾಡುವುದಾಗಲೀ, ಸರಳರೇಖಾತ್ಮಕವಾಗಿ ಧರ್ಮ ನಿರಪೇಕ್ಷ ನಿಲುವುಗಳನ್ನು ಸ್ವೀಕರಿಸುವುದಾಗಲೀ ಆಗಬಾರದು. ಧರ್ಮ ಮತ್ತು ಧರ್ಮ ನಿರಪೇಕ್ಷತೆಯ ಮಧ್ಯೆ ಸುಮ್ಮ ಸುಮ್ಮನೆ ಸರಳೀಕೃತ ವೈರುಧ್ಯಗಳನ್ನು ಸೃಷ್ಟಿಸುವುದಾಗಲೀ, ಅಥವಾ ಬಲಪಂಥೀಯ ಮತ್ತು ಎಡಪಂಥೀಯ ನಿಲುವುಗಳ ಬಗ್ಗೆ ಹಾರಿಕೆಯ ಮಾತುಗಳನ್ನಾಗಲೀ ಆಡುವುದು ಸರಿಯಲ್ಲ.

೧೯೯೨ರಲ್ಲಿ ಬಾಬ್ರಿ ಮಸೀದಿ ಕೆಡವಿದ ಘಟನೆಯ ಬಳಿಕ ಧರ್ಮ ಮತ್ತು ಧರ್ಮ ನಿರಪೇಕ್ಷತೆಗಳ ಬಗ್ಗೆ ನಡೆಯುತ್ತಿರುವ ನಿಷ್ಪ್ರಯೋಜಕವಾದ ವಿವಾದಗಳು ಬರೇ 'ಒಣಹಟೆ ಮತ್ತು ಬರಡು ಗಾಳಿ'ಯನ್ನು ಸೃಷ್ಟಿಮಾಡುತ್ತಿರುವುದು ಪ್ರಸ್ತುತ ಭಾರತದ ದುರಂತವಾಗಿದೆ. ಧರ್ಮನಿರಪೇಕ್ಷತಾವಾದಿಗಳ ಪ್ರಾಮಾಣಿಕತೆಯನ್ನು ನಾನು ಪ್ರಶ್ನಿಸದಿದ್ದರೂ, ಅವರಲ್ಲಿ ಅನೇಕರು ಧರ್ಮ ಮತ್ತು ಧಾರ್ಮಿಕ ಅನುಭವಗಳ ಬಗ್ಗೆ ನೈಜ ಅಂತರ್ಮುಖತೆಯನ್ನಾಗಲೀ ಅಥವಾ ಅದರ ಖಚಿತ ನೈತಿಕ ಮುಖದ ತಿಳುವಳಿಕೆಯನ್ನಾಗಲೀ ವ್ಯಕ್ತಪಡಿಸದಿರುವುದರ ಬಗ್ಗೆ ನಾನು ತೀವ್ರ ಆತಂಕಿತನಾಗಿದ್ದೇನೆ. ಬರೇ ಇಂಥ ಅನೇಕ ಕಥಾ ಕಥಿತ ಶುಷ್ಕ ಧರ್ಮನಿರಪೇಕ್ಷತಾವಾದಿಗಳ ನಿಲುವುಗಳು ಅಪ್ರಬುದ್ಧವಾಗಿರುತ್ತವೆ,

ಲಘುವಾಗಿರುತ್ತದೆ. ಈ ಅನುಸಂಧಾನ ನಿಜವಾದ ಆಂತರಿಕ ಯಾತನೆಯಿಂದ ಬಂದಿರುವುದಿಲ್ಲ. 'ದೇವರು ಇದ್ದಾನೆ' ಅಥವ 'ದೇವರು ಇಲ್ಲ' - ಈ ಎರಡೂ ಪ್ರಶ್ನೆಗಳು, ನಮ್ಮ ಒಳಗಿನ ತೀವ್ರ ಕ್ಷೋಭೆ, ತಳಮಳ, ಬೇಗುದಿಗಳಿಂದ ಗಂಭೀರವಾಗಿ ಉದ್ಭವಿಸಿರಬೇಕು. ಆಗ ಈ ಎರಡೂ ನಿಲುವುಗಳು ಆಧ್ಯಾತ್ಮಿಕವಾಗಿ ಬಿಡುತ್ತದೆ.

ಧರ್ಮ ನಿರಪೇಕ್ಷತಾವಾದದ ನಿಲುವಿನ ಬಗೆಗಿರುವ ಅತ್ಯಂತ ವ್ಯಥೆಯ ವಿಚಾರವೆಂದರೆ, ಇದು ಮತೀಯ ಮೂಲಭೂತವಾದೀ ಪಡೆ ಪ್ರಚಾರ ಮಾಡುವ ಅಮಾನವೀಯ ಮತ್ತು ಪೊಳ್ಳು ಧಾರ್ಮಿಕತೆಗೆ ಮುಖಾಮುಖಿಯಾಗಿ ಗಾಢವಾದ ಚಿಂತನೆಯಿಂದ ಉದ್ಭವಿಸಿದ ತತ್ತ್ವಗಳನ್ನು ಇಡುವುದಿಲ್ಲ. ಧಾರ್ಮಿಕ ಶ್ರದ್ಧೆ, ನಂಬಿಕೆ ಮತ್ತು ಸಾಂಪ್ರದಾಯಿಕ ಸಾಂಸ್ಕೃತಿಕ, ಬದುಕಿನ ಸ್ಪರ್ಶವಿಲ್ಲದಿದ್ದರೂ, ಕೊನೆಯ ಪಕ್ಷ ಬೌದ್ಧಿಕ ಮಟ್ಟದಲ್ಲಾದರೂ ಧಾರ್ಮಿಕ ತಿಳುವಳಿಕೆಯನ್ನು ಅಧ್ಯಯನ ಮೂಲಕ ಅಂತರಂಗೀಕರಿಸಿಕೊಳ್ಳಬೇಕು; ಮತ್ತು ಇಂಥ ಅಂತಃಕರಣ ಪೂರ್ವಕ ಗ್ರಹಿಕೆಯ ಬಲದಿಂದ ವಿಜ್ಞಾನ, ಧರ್ಮ ಮತ್ತು ಸಂಸ್ಕೃತಿಗಳನ್ನು ಸೃಜನಾತ್ಮಕವಾಗಿ ವ್ಯಾಖ್ಯಾನಿಸುತ್ತಾ ಪೊಳ್ಳು ಧಾರ್ಮಿಕತೆಯಿಂದ ಉದ್ಭವಿಸುವ ಮತೀಯ ವಾದಗಳನ್ನು ಎದುರಿಸಬೇಕು. ಧರ್ಮಕ್ಕೆ ಸೃಜನಾತ್ಮಕ ವಿವರಣೆ ನೀಡುವ ಪ್ರಯತ್ನಕ್ಕೆ ಒಂದು ಉತ್ತಮ ಉದಾಹರಣೆಯಾಗಿ ಜೋಸೆಫ್ ನೀಡ್ಹಾಮ್‌ರವರ 'ದಿ ಗ್ರಾಂಡ್ ಟೈಟ್ರೇಶನ್' (The Grand Titration) ಕೃತಿಯನ್ನು ಉದಾಹರಿಸಬಹುದು. ಈ ಕೃತಿಯಲ್ಲಿ ಅವರು ಕ್ರೈಸ್ತಮತ ಮತ್ತು ಮಾರ್ಕ್ಸ್‌ವಾದದ ನಡುವಿನ ಸಂಬಂಧವನ್ನು ಅಧ್ಯಯನ ಮಾಡಿದ್ದಾರೆ. ಇಂಥ ಪ್ರಯತ್ನ ಭಾರತದಲ್ಲೂ ತುರ್ತಾಗಿ ನಡೆಯದಿದ್ದರೆ, ಭಾರತೀಯ ಧರ್ಮ, ಸಂಸ್ಕೃತಿ, ಪರಂಪರೆಯನ್ನು ಈ ಮೂಲಭೂತವಾದಿಗಳು ತಮ್ಮದಾಗಿ ಎತ್ತಿಕೊಂಡು ದುರ್ಬಳಕೆ ಮಾಡುವುದರಲ್ಲಿ ಯಾವ ಅನುಮಾನವೂ ಇಲ್ಲ. ಈ ವಿದ್ಯಮಾನವನ್ನು ನಾವು ಸ್ಪಷ್ಟವಾಗಿ ನಮ್ಮ ಕಣ್ಣಮುಂದೇ ಕಾಣುತ್ತಿದ್ದೇವೆ.

ಧಾರ್ಮಿಕ ಮತ್ತು ಸಾಂಸ್ಕೃತಿಕ ತತ್ತ್ವಸಾರಗಳ ಚರ್ಚೆಗಳ ಮೂಲಕ ಈ ಶಕ್ತಿಗಳನ್ನು ಎದುರಿಸುವ ಪ್ರಯತ್ನ ಮಾಡಿದ ಮಂದಿ ಹೆಚ್ಚೇನೂ ಇಲ್ಲ. ದುರಾದೃಷ್ಟವಶಾತ್, ನೈಜ ಧಾರ್ಮಿಕ ಮತ್ತು ಸಾಂಸ್ಕೃತಿಕ ತತ್ತ್ವಗಳ ಮೂಲಕ ಪುನಾರೂಪಿಸಲು ಪ್ರಯತ್ನಿಸುವವರನ್ನು 'ಪುನರುತ್ಥಾನವಾದಿಗಳು'', 'ಪ್ರತಿಗಾಮಿಗಳು' ಎಂದೆಲ್ಲಾ ಹಣೆ ಪಟ್ಟಿಕಟ್ಟಿ, ಕೆಲವು ಸ್ವಯಂಘೋಷಿತ ಸಂಕುಚಿತ (reductionist) ಧರ್ಮ ನಿರಪೇಕ್ಷತಾ ವಾದಿಗಳು ಅಸಹನೆಯಿಂದ ಬಣ್ಣಿಸುತ್ತಾರೆ. ೯೫ ಶೇಕಡಕ್ಕೂ ಹೆಚ್ಚು ಧಾರ್ಮಿಕ ನಂಬಿಕೆಯಿರುವ ಅಮಾಯಕರನ್ನು ಅಸಹನೆಯಿಂದ, ತಿರಸ್ಕಾರ ಭಾವದಿಂದ ನೋಡುವುದು ಮತಾಂಧತೆಗೆ ಪರಿಹಾರವಾಗಲಾರದು; ಮಾತ್ರವಲ್ಲ ಇಂಥ ಅಲ್ಪ ಸಂಖ್ಯಾತ ವರ್ಗ ಧಾರ್ಮಿಕತೆಗೆ 'ಅನ್ಯ'ರಾಗಿ ಬಿಟ್ಟು, ಅಮಾಯಕ ಧಾರ್ಮಿಕರ ಮೇಲೆ ಪರಿಣಾಮ ಬೀರುವಲ್ಲಿ ಸೋಲುತ್ತಾರೆ. ಈ ಅಸಹನೆ, ಒಂದೇ ವಿಷಯದ ಮೇಲೆ ಈ ಅತಿರೇಕ ತತ್ಪರತೆ (obsersion) ಯು ಒಂದು ಮಾನಸಿಕ ಸ್ಥಿತಿ. ಇದು ನಮ್ಮನ್ನು ಪೂರ್ವಾಗ್ರಹ ಪೀಡಿತರನ್ನಾಗಿ ಮಾಡಿ, ಒಂದು ಸಮಸ್ಯೆಯನ್ನು, ಇದ್ದದ್ದು ಇದ್ದಂತೆಯೇ ಗ್ರಹಿಸುವ ಮೂಲಕ ವಾಸ್ತವದ ದರ್ಶನಕ್ಕೆ ಮಾಡಲು ಪ್ರತಿಬಂಧಕವಾಗುತ್ತದೆ. ಅತಿ ಸೈದ್ಧಾಂತಿಕ ಬದ್ಧತೆಯ ಮೂಲಕ ಈ ಮಾನಸಿಕ ಸ್ಥಿತಿ ಉದ್ಭವಿಸುತ್ತದೆ. ಈ ಸೈದ್ಧಾಂತಿಕ ಬದ್ಧತೆಯ ಅತಿರೇಕ ತತ್ಪರತೆ, ಆವೇಶ, ಅಸಹನೆ, ದಬ್ಬಾಳಿಕೆ, ಕ್ರೌರ್ಯಗಳಿಗೆ ವಿವೇಚನಾ ಶೂನ್ಯತೆಗೆ ನಮಗೆ

ತಿಳಿಯದಂತೆಯೇ ಎಡೆಮಾಡಿಕೊಡುತ್ತದೆ. ಈ ಅತಿರೇಕ ತತ್ಪರತೆಯ ಸ್ಥಿತಿ ಅತೀ ಬಲಪಂಥೀಯ ಕೋಮುವಾದಿಗಳಲ್ಲಿರಬಹುದು, ಅಥವಾ ಇದಕ್ಕೆ ತದ್ವಿರುದ್ಧವಾದ ದಿಕ್ಕಿನಲ್ಲಿ ಅತಿ ಎಡದ ಶುಷ್ಕ ವಿಚಾರವಾದಿಗಳಲ್ಲೂ ಇರಬಹುದು. ಈ ಎರಡೂ ಗುಂಪುಗಳಲ್ಲಿ ಅಸಹನೆ ಕಾಣುತ್ತದೆ. ಇಂಥ, ಅತಿರೇಕತೆಯಲ್ಲಿ ತಿಳುವಳಿಕೆ, ಸಂವಾದ , ಸಂಧಾನ ಸಾಧ್ಯವಾಗದು. ಇವೆರಡೂ ಅತಿರೇಕತೆಗಳ, ನಡುವಿನ "ಮಧ್ಯಮ ಮಾರ್ಗ"ದಲ್ಲಿ, ನಿಜವಾದ ಧಾರ್ಮಿಕರು, ನಿಜವಾದ ಮುಕ್ತ ಚಿಂತನ ಶೀಲ ವಿಚಾರವಾದಿಗಳು ತಮ್ಮ ತಮ್ಮ ಅಂತರಂಗಿಕ ಪಯಣದಲ್ಲಿ ನಿರತರಾಗಿರುತ್ತಾ, ಆಧ್ಯಾತ್ಮದ ಉದಾರವಾದೀಸ್ಪೇಸ್‌ನ್ನು ವಿಸ್ತರಿಸಿಕೊಳ್ಳುತ್ತಾ, ಪರಸ್ಪರ ತಿಳುವಳಿಕೆಯುಳ್ಳವಾಗಿರುತ್ತಾರೆ.

ಇಂಥ ಉದಾರವಾದೀ 'ಧಾರ್ಮಿಕ ಸೆಕ್ಯೂಲರ್' ಮಂದಿ ನಿಜಕ್ಕೂ ಉಗ್ರವಾದೀ ಹಿಂದುತ್ವವನ್ನು ಎದುರಿಸುವ ಶಕ್ತಿ ಪಡೆದಿರುತ್ತಾರೆ. ಹಿಂದುತ್ವವನ್ನು ಎದುರಿಸುವ ಸಲುವಾಗಿ ಸಂಸ್ಕೃತಿ, ಧರ್ಮಗಳನ್ನು ಬಹುಪ್ರಯಾಸದಿಂದ ಮರುವ್ಯಾಖ್ಯೆ ಮಾಡಲು ಪ್ರಯತ್ನಿಸುವ ಇಂಥವರ ಮೇಲೆ ಆಕ್ರಮಣ ಮಾಡುವ ಧರ್ಮ ನಿರಪೇಕ್ಷತಾವಾದಿಗಳು ವ್ಯಂಗ್ಯವೆಂಬಂತೆ ಕೋಮು ಶಕ್ತಿಗಳ ಕೆಲಸವನ್ನು ತಾವೇ ಮಾಡುತ್ತಿರುತ್ತಾರೆ. ಇದರಿಂದ ಮೂಲಭೂತವಾದೀ ಶಕ್ತಿಗಳು, ಖುಷಿಯಿಂದ ವಿಜೃಂಭಿಸುತ್ತಿರುತ್ತವೆ. ಅಂದರೆ, ಸಂಸ್ಕೃತಿಯ ಪುನರ್ ವ್ಯಾಖ್ಯಾನ ಮಾಡಲು ಪ್ರಯತ್ನಿಸುವವರನ್ನು 'ಸೆಕ್ಯೂಲರಿಸ್ಟ್'ಗಳು ತಿರಸ್ಕರಿಸಿದಾಗ, ಅದು ಮತೀಯವಾದಿಗಳ ಪರೋಕ್ಷ ವಿಜಯವಾಗಿರುತ್ತದೆ.

ಈಗಾಗಲೇ ಕೋಮುಶಕ್ತಿಗಳು ನಡೆಸುತ್ತಿರುವ ಅವಾಂತರಗಳ ಹಿನ್ನಲೆಯಲ್ಲಿ, ಕೊನೆಯ ಪಕ್ಷ ಮುಂದೆಯಾದರೂ ಇಂಥ ಕುಸಿತವನ್ನು ತಡೆಗಟ್ಟಬೇಕಾದರೆ ನಾಗರಿಕ ಸಮಾಜವು ತನ್ನದೇ ಆದ ನಿರ್ದಿಷ್ಟ 'ಲಿಬರಲ್ ಸ್ಪೇಸ್'ನ್ನು ಸೃಷ್ಟಿಸಿಕೊಳ್ಳಬೇಕು. ನಾಗರಿಕ ಸಮಾಜದ ಬಹುಮುಖ್ಯ ಆವರಣ, ಉದಾರವಾದ ನೈತಿಕ ತಳಗಟ್ಟಿರುವ ಧಾರ್ಮಿಕ, ಸಾಂಸ್ಕೃತಿಕ ಆವರಣವೇ ಆಗಿದೆ. ಈ ಆವರಣವನ್ನು ನಾವು ವೈಚಾರಿಕ 'ಅನ್ಯ'ರಾಗಿ ನಿಂತು ಮತೀಯ ಮೂಲಭೂತವಾದಿಗಳಿಗೆ ಬಿಟ್ಟು ಕೊಡಬಾರದು.

ಮತಾಂತರದ ಬಗ್ಗೂ ಅಷ್ಟೇ. ಈ ರಾಜಕೀಯ ಪ್ರಶ್ನೆಯನ್ನು ವಿಶ್ಲೇಷಾತ್ಮಕವಾಗಿ ಅಧ್ಯಯನ ಮಾಡಬೇಕು. ಮತಾಂತರ ಮತ್ತು ಮತಾಂತರ ವಿರೋಧವೆನ್ನುವುದು, ಸೈದ್ಧಾಂತಿಕ ನೆಲೆಯಿಲ್ಲದ ಪರಸ್ಪರ ರಾಜಕೀಯ ಮೇಲಾಟವಾದರೆ ಅದರ ಪ್ರತಿಫಲ ಕೇವಲ ಸಂಘರ್ಷ-ಹಿಂಸೆಗಳಷ್ಟೇ. ಇದು ಎಲ್ಲ ಮಾನವೀಯತೆಯನ್ನು ಕಳಕೊಂಡಿರುತ್ತದೆ. ಧರ್ಮ ಅತ್ಯಂತ ಭಾವನಾತ್ಮಕವಾದ ವಿಚಾರ. ಇದನ್ನು ನಿಭಾಯಿಸಲು ಅತ್ಯಂತ ಸಂಯಮ , ತಾಳ್ಮೆ, ಪ್ರಾಮಾಣಿಕತೆಗಳಿರಬೇಕು. ಇಲ್ಲದಿದ್ದರೆ ಈ ಆಧುನಿಕ ಯುಗದಲ್ಲಿ, ಧಾರ್ಮಿಕ ಮತಾಂಧತೆಯ ಅತಿವಾದಗಳಿಗೆ ವಿಜ್ಞಾನ ಕೊಟ್ಟ ಎಲ್ಲಾ ಸವಲತ್ತುಗಳು ಪೂರಕವಾಗಿ ಹಿಂದೆಂದೂ ಈ ದೇಶ ಕಂಡಿರದ ಸ್ವರೂಪದ ಜೀವ ವಿರೋಧೀ ಹಿಂಸೆಗೆ ಕಾರಣವಾಗಬಹುದು.

❒

# ಹಿಂಸೆಯ ಸ್ವರೂಪಗಳು:
# ಬಲಿ - ಬಲಿದಾನ

ನಮ್ಮ ಸಮಾಜ ಮೂಲಭೂತವಾಗಿ ಹೃದಯಹೀನ ಸಮಾಜ. ೫೦೦ ವರ್ಷಗಳ ಹಿಂದೆ ಗಂಡ ಸತ್ತಾಗ ಆತನ ಚಿತೆಯಲ್ಲೇ ಹೆಂಡತಿ ಆತ್ಮಹತ್ಯೆ ಮಾಡಿಕೊಳ್ಳಲೇಬೇಕಾದ ಸತಿಸಹಗಮನದ ದಾಖಲೆಗಳು ಇದ್ದರೆ, ಇಂದು ವಧುವನ್ನೇ ಜೀವಂತ ಸುಡುವ ಪರಂಪರೆ ಆರಂಭವಾಗಿದೆ. ಹಿಂದೆ ಹೆಣ್ಣು ಮಗುವನ್ನು ಹುಟ್ಟಿದ ಕೂಡಲೇ ಅಮಾನುಷವಾಗಿ ಕೊಲ್ಲುವ ಪದ್ಧತಿಯ ದಾಖಲೆಗಳಿದ್ದರೆ, ಇಂದು ಗರ್ಭದಲ್ಲೇ ಹೆಣ್ಣು ಮಗುವಿನ ಭ್ರೂಣವನ್ನು ಹೊಸಕಿ ಹಾಕುವ ಸುಲಭ ಉಪಾಯವನ್ನು ವಿಜ್ಞಾನ ನಮಗೆ ತಿಳಿಸಿಕೊಟ್ಟಿದೆ. ಹಿಂದೆ ಶಕ್ತಿಹೀನರ ಶೋಷಣೆಯು ಅಲ್ಲಲ್ಲಿನ ಸ್ಥಳೀಯ ಭೂಮಾಲಿಕರಿಂದ, ಪ್ರಭುಗಳಿಂದ, ಆಳುವ ತುಂಡರಸರಿಂದ ನೇರವಾಗಿ ನಡೆಯುತ್ತಿದ್ದರೆ, ಇಂದು ಶೋಷಣೆಯ ಕೊಂಡಿಗಳು ಆಳ ಮತ್ತು ವಿಶಾಲವಾಗಿ ಹಬ್ಬಿ, ಬಹುರಾಷ್ಟ್ರೀಯ ಕಂಪೆನಿಗಳ ಬೋರ್ಡ್ ರೂಮುಗಳಲ್ಲಿ, ಕೇಂದ್ರೀಕೃತ ಸ್ವರೂಪವುಳ್ಳ ಅಭಿವೃದ್ಧಿ ಮಂಡಳಿಗಳ ಚರ್ಚಾಕೂಟಗಳಲ್ಲಿ, ಮಂತ್ರಿ ಮಂಡಲಗಳ ಬೈಠಕ್‌ಗಳು ತೆಗೆದುಕೊಳ್ಳುವ ನಿರ್ಧಾರಗಳಲ್ಲಿ, ಹೀಗೆ ಎಲ್ಲೋ ಬಹುದೂರದಿಂದ ಅಗೋಚರವಾಗಿ ಕ್ರೌರ್ಯ ನಡೆಯುತ್ತಿರುತ್ತದೆ.

ಇವೆಲ್ಲವುದರ ಜತೆ ಇನ್ನೊಂದೆಡೆ, ವಿವಿಧ ಆಧುನಿಕ ಜ್ಞಾನ ಶಾಖೆಗಳಿಂದ ಅತಿಸೂಕ್ಷ್ಮವಾಗಿ, ಭೂಮಿಯ ಜತೆ ಬದುಕುವ ಅಸಂಖ್ಯ ಕರಕುಶಲಗಾರರ ಅನುಭವಜನ್ಯ ಜ್ಞಾನಸಂಪನ್ಮೂಲಗಳ ಮೇಲೆ ಹಿಂಸೆ ನಡೆಯುತ್ತಿದೆ. ಆಧುನಿಕ ಬೌದ್ಧಿಕ ಜ್ಞಾನ ಶಾಖೆಗಳ ಆಕ್ರಮಣಕಾರೀ ಔಪಚಾರಿಕ ನೀತಿಗಳು, ಗುಡ್ಡಗಾಡು ಜನಾಂಗಗಳ, ಗ್ರಾಮೀಣ

---

ಲಂಕೇಶ್ ಪತ್ರಿಕೆ (ವಿಶೇಷ ಲೇಖನ), ಮಾರ್ಚ್ ೬, ೨೦೦೧

ಮಹಿಳೆಯರ, ಕೃಷಿಕರ, ಕರಕುಶಲಗಾರರ ಸಾಮುದಾಯಿಕ ಹಾಗೂ ಅನೌಪಚಾರಿಕ ಜ್ಞಾನ ಪರಂಪರೆಯನ್ನೇ ಸಾರಾಸಗಟಾಗಿ ಅವೈಜ್ಞಾನಿಕವೆಂದು ತಿರಸ್ಕರಿಸಿ, ಬುಡಮೇಲು ಮಾಡುವುದರಿಂದ ಅವನ್ನು ಅವಲಂಬಿಸಿ ಬದುಕುವ ಅಸಂಖ್ಯ ಕರಕುಶಲಗಾರರು ಮತ್ತು ಅವರ "ಲೋಕವಿದ್ಯೆ" ಒಮ್ಮೆಲೇ ಅಪ್ರಸ್ತುತವಾಗಿ, ಅವರು ವೃತ್ತಿ-ಅನಕ್ಷರಸ್ಥರೆನಿಸಿಕೊಂಡು, ಶಕ್ತಿಹೀನರಾಗಿ ಬಿಡುತ್ತಿದ್ದಾರೆ. ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಜನಪದದಿಂದ ಮೂಡಿಬಂದ ತಂತ್ರಜ್ಞಾನದ ಆವಿಷ್ಕಾರ ಹಾಗೂ ವಿನ್ಯಾಸಗಳ ಒಟ್ಟು ಮೊತ್ತವಾದ ಈ ದೇಶದ ಮುಕ್ಕಾಲು ಪಾಲು ಜನರ ಪಾರಂಪರಿಕ ಜ್ಞಾನವನ್ನು ನಮ್ಮ ಔಪಚಾರಿಕ (formal) ಶಿಕ್ಷಣ ವ್ಯವಸ್ಥೆ ಮತ್ತು ಯೋಜನಾ ನಿರ್ಮಿತಿಗಳಿಂದಲ್ಲಾ ಹೊರಗಿಡುವುದೆಂದರೆ, ಈ ದೇಶದ ಮುಕ್ಕಾಲು ಪಾಲು ಜನರ ದೇಶೀ ಜ್ಞಾನ ಸಂಪತ್ತನ್ನೇ ಅವಮಾನಿಸಿದಂತೆ; ಮಾತ್ರವಲ್ಲ, ಈ ಬಹುಸಂಖ್ಯಾಕರನ್ನು "ಅನ್ಯ"ರೆಂದು ತಿರಸ್ಕರಿಸಿ ದೇಶದ ಅಭಿವೃದ್ಧಿ ವರ್ತುಲದ ಕೇಂದ್ರ ಬಿಂದುವಿನಿಂದ ಪರಿಧಿಗೆ ತಳ್ಳಿದಂತೆ. ಜನಸಾಮಾನ್ಯರ ದುಡಿಮೆ, ಮತ್ತು ವೈವಿಧ್ಯಮಯ ವೃತ್ತಿಕೌಶಲ್ಯಗಳ ನೆಲೆಗಟ್ಟಿನ ಮೇಲೆಯೇ ನಿಂತಿರುವ ಆಧುನಿಕ ಸಮಾಜವು, ಈ ಬಹುಸಂಖ್ಯಾಕರನ್ನು ಅನಕ್ಷರಸ್ಥರೂ, ಪೆದ್ದರೂ ಎಂದು ಕರೆದು, ಬದುಕಿಗೆ ಅವಶ್ಯವಾದ ಕನಿಷ್ಠ ಸೌಲಭ್ಯಗಳನ್ನೂ ಒದಗಿಸುವಲ್ಲಿ ಮುತುವರ್ಜಿ ತೋರಿಸದೆ ವಂಚಿಸುವುದು ಇಂದಿನ ಅಭಿವೃದ್ಧಿ ನೀತಿಯ ಅತ್ಯಂತ ಹೀನ ಕ್ರೌರ್ಯವಾಗಿದೆ.

ಹಿಂಸೆಯ ಇತಿಹಾಸವನ್ನು ನಾವೊಮ್ಮೆ ಕೆದಕಿದರೆ, ನಮ್ಮ ಮುಂದೆ ಚಾಚಿ ನಿಂತ ಈ ಭೂಮಿ ೨೦ನೆಯ ಶತಮಾನದಲ್ಲಿ ಕಂಡಷ್ಟು ಹಿಂಸೆಯನ್ನು ಎಂದೂ ಕಾಣಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇಡೀ ಜಗತ್ತನ್ನು ನಡುಗಿಸಿದ ಎರಡು ಜಾಗತಿಕ ಯುದ್ಧಗಳು, ಮುಂದೆ ಬೃಹತ್ ರಾಷ್ಟ್ರಗಳಾದ ರಶ್ಯಾ- ಅಮೇರಿಕಾಗಳು ತಮ್ಮ ಶೀತಲ ಸಮರದಲ್ಲಿ ಇಡೀ ಜಗತ್ತನ್ನೇ ಇಬ್ಭಾಗ ಮಾಡಿ ನಡೆಸಿದ ಪರಸ್ಪರ ಮೇಲಾಟಗಳು, ಮಿಲಿಟರಿ ಪ್ರಭುತ್ವದ ಪೈಪೋಟಿ, ಬಂಡವಾಳಶಾಹೀ ವ್ಯವಸ್ಥೆಯ ಹೆಸರಲ್ಲಿ ವಿಯಟ್ನಾಂನಲ್ಲಿ ಆದ ಹಿಂಸೆ, ನಾಜಿಸಂ, ಫ್ಯಾಸಿಸಂ ಹೆಸರಲ್ಲಿ ಹಿಟ್ಲರ್ ಮುಸ್ಸಲೋನಿಗಳು ಜಗತ್ತಿಗೆ ತಂದೊಡ್ಡಿದ ಸಾಮೂಹಿಕ ಜನಾಂಗೀಯ ಸಂಘರ್ಷಗಳು, ಕಮ್ಯೂನಿಸಂ ಹೆಸರಲ್ಲಿ ಸ್ಟಾಲಿನ್ ಕೈಗೊಂಡ ಹಿಂಸೆ ಮತ್ತು ಅಣುಬಾಂಬುಗಳ ನೆನಪುಗಳು ಮತ್ತು ಇವುಗಳ ಜತೆ, ಧರ್ಮದ ಹೆಸರಲ್ಲಿ, ಜನಾಂಗದ ಹೆಸರಲ್ಲಿ, ಸಿದ್ಧಾಂತದ ಹೆಸರಲ್ಲಿ, ರಾಷ್ಟ್ರೀಯವಾದದ ಹೆಸರಲ್ಲಿ, ಸ್ವಾತಂತ್ರ್ಯದ ಹೆಸರಲ್ಲಿ, ಅಭಿವೃದ್ಧಿ - ಪ್ರಗತಿಗಳ ಹೆಸರಲ್ಲಿ ನ್ಯಾಯಸಮ್ಮತವೆಂದೇ ಕಾಣುವಂತೆ ನಡೆಯುತ್ತಿರುವ ಹಿಂಸೆ-ಕೊಲೆಗಳು, ಮನುಷ್ಯ ನಾಗರಿಕನಾಗಿ ಮುಂದುವರಿದಂತೆ ಆತನೊಳಗೆ ಹುದುಗಿರುವ ಕ್ರೌರ್ಯದ ಅನಂತ ಮುಖಗಳನ್ನು ಅನಾವರಣಗೊಳಿಸುತ್ತಿದೆ.

**ಹಿಂಸೆಯ ಸ್ವರೂಪಗಳು**

ಹಿಂಸೆಯ ಮೂಲಗಳು ಹಲವಾರು. ಆದರೆ, ಹಲವು ಮೂಲಗಳಿಂದ ಪ್ರಕಟಗೊಳ್ಳುವ ಹಿಂಸೆಯ ಎಲ್ಲ ರೂಪಗಳಲ್ಲೂ "ಬಲಿ-ಬಲಿದಾನ"ಗಳು ಅನಿವಾರ್ಯವಾಗಿ ಸಂಭವಿಸುತ್ತಿರುತ್ತದೆ. ಈ ಬಲಿ, ಬಲಿದಾನ ಪರಿಕಲ್ಪನೆಗಳು ಹಿಂಸೆಯ ಎಲ್ಲ ಅಮಾನವೀಯ ಸ್ವರೂಪಗಳಿಗೂ ಪಾವಿತ್ರ್ಯದ ಕವಚ ತೊಡಿಸಿ, ಕ್ರೌರ್ಯವನ್ನೊಂದು ಪೂಜೆಗೊಳ್ಳಬೇಕಾದ ಆದರ್ಶದ ಪೀಠಕ್ಕೇರಿಸಿ, ಹಿಂಸೆಯ ಮೌಲ್ಯವನ್ನು ಕೊಂಡಾಡುವಂತೆ ಸಮಾಜವನ್ನು ಪ್ರೇರೇಪಿಸುತ್ತದೆ.

ಆಧುನಿಕ ಸಮಾಜದಲ್ಲಿ ಮೂರು ಪ್ರಧಾನ ಸ್ವರೂಪಗಳಲ್ಲಿ ಹಿಂಸೆಯ ಅನಂತ ಮುಖಗಳು, ಪ್ರಕಟಗೊಳ್ಳುವುದನ್ನು ನಾವು ಗುರುತಿಸಬಹುದು. ಈ ಹಿಂದೆ ಇದು ಇರಲಿಲ್ಲವೆಂದೇನೂ ಅಲ್ಲ. ಆದರೆ, ಇಂದಿನ ಮಾರುಕಟ್ಟೆ ಪ್ರಭಾವಿತ ಬದುಕಿನ ಶೈಲಿಯಲ್ಲಿ ಕ್ರೌರ್ಯದ ಸಾಧ್ಯತೆಗಳು ಹೊಸ ರೆಕ್ಕೆಪುಕ್ಕಗಳನ್ನು ಪಡೆದುಕೊಂಡು ಶಕ್ತಿಶಾಲಿಯಾಗುತ್ತ ಬೆಳೆಯುತ್ತಿವೆ.

**(i) ಆಸೆ-ಆಕಾಂಕ್ಷೆ**

ವೈಯಕ್ತಿಕ ಸ್ವಾರ್ಥ ಸಾಧನೆಗಾಗಿ ಅಥವಾ ಹಣ, ಹೆಣ್ಣು, ಅಧಿಕಾರ ಮುಂತಾದ ಸುಖಭೋಗಗಳನ್ನು ಪಡೆಯುವ ದುರಾಸೆಯಿಂದ ನಡೆಯುವ ಹಿಂಸೆಯು ಮೊದಲ ಸ್ವರೂಪದ್ದು, ಇಂಥ ಸಂದರ್ಭಗಳಲ್ಲಿ, ತನ್ನ ಆಸೆ ಆಕಾಂಕ್ಷೆಗಳಿಗೆ ಧಕ್ಕೆ ಬಂದಾಗ ಮಾತ್ರ ದಬ್ಬಾಳಿಕೆ, ಹಿಂಸೆ, ಹಲ್ಲೆಗಳು ನಡೆದು ವ್ಯಕ್ತಿಬಲಿಯಾಗಬಹುದೇ ವಿನಾ, ಹಿಂಸೆಯೇ ಇಲ್ಲಿ ಪ್ರಥಮ "ಏಜೆಂಡಾ" ವಾಗಿರುವುದಿಲ್ಲ. ಕೊಲೆ ಪೌರುಷವಾಗುವುದಿಲ್ಲ. ಪಾವಿತ್ರ್ಯತೆಯ ಸ್ಥಾನ ಪಡೆದುಕೊಳ್ಳುವುದಿಲ್ಲ. ವೈಯಕ್ತಿಕ ಸ್ವಾರ್ಥಾಕಾಂಕ್ಷೆಯ ಸಾಧನೆಗಾಗಿ ನಡೆಯಬಹುದಾದ ಕೊಲೆ, ಕೊಲೆಯಂತೆಯೇ ಕಾಣುತ್ತದೆ. ದುಷ್ಕೃತ್ಯಗಳು, ಕಾನೂನು ರೀತ್ಯಾ ಅಪರಾಧವಾಗಿರುತ್ತವೆ. ಸಮಾಜ ಇಂಥ ದುಷ್ಟನನ್ನು ಅಪರಾಧಿಯೆಂದೇ ಪರಿಗಣಿಸುತ್ತದೆ. ಹಾಗಾಗಿ ಕೊಲೆಗಡುಕನಿಗೆ ಇಲ್ಲಿ ಪಾಪಪ್ರಜ್ಞೆಯಿರುತ್ತದೆ.

**(ii) ಧರ್ಮ-ರಾಷ್ಟ್ರೀಯತೆ**

ಇನ್ನೊಂದು ಸ್ವರೂಪದ ಹಿಂಸೆಯು, ಧರ್ಮ, ಜನಾಂಗ, ಜಾತಿ, ಕುಲ, ಭಾಷೆ, ರಾಷ್ಟ್ರ ಮುಂತಾದ ಪ್ರತ್ಯೇಕಪ್ರತ್ಯೇಕ "ಐಡೆಂಟಿಟಿ"ಗಳ ಕಲ್ಪಿತ ಆದರ್ಶಗಳಿಗಾಗಿ, ಒಂದು ನಿಶ್ಚಿತ "ಐಡಿಯಾಲಜಿ"ಯ ಚೌಕಟ್ಟಿನಲ್ಲಿ ನಡೆಯುತ್ತದೆ. ರಾಷ್ಟ್ರೀಯತೆ, ಕುಲ-ಧರ್ಮ-ಭಾಷಾ ಶ್ರೇಷ್ಠತೆ, "ಮಣ್ಣಿನ ಮಕ್ಕಳು" ಎಂಬ ಕಲ್ಪನೆ - ಇವೆಲ್ಲವೂ ಸಮಾಜವನ್ನು "ನಾವು" "ಅವರು" ಎಂದು ವಿಭಜಿಸಿ, "ಅವರ" ವಿರುದ್ಧ ನಮ್ಮದರ ಶ್ರೇಷ್ಠತೆಯನ್ನು, ಪಾವಿತ್ರ್ಯತೆಯನ್ನು ಮೆರೆಯಿಸಲು ತವಕಿಸುತ್ತಾ, ಅದಕ್ಕಾಗಿ ಯಾವ ಜೀವವಿರೋಧೀ ಚಟುವಟಿಕೆಯನ್ನೂ ಮಾಡಲು ಹೇಸುವುದಿಲ್ಲ. ಈ ಆವೇಶಭರಿತ ವಿಜೃಂಭಣೆಗಾಗಿ ನಡೆಯುವ ಬಲಿ ಬಲಿದಾನಗಳೆಲ್ಲವೂ ನ್ಯಾಯ ಸಮ್ಮತವಾಗಿ ಬಿಡುತ್ತವೆ. ರಾಷ್ಟ್ರಕ್ಕಾಗಿ, ಧರ್ಮಕ್ಕಾಗಿ ಅಥವಾ ಭಾಷೆಗಾಗಿ ಹೋರಾಡುವುದು, ಮಡಿಯುವುದು, ಕೊಲ್ಲುವುದು ಮಹಾಪುಣ್ಯಕಾರ್ಯವಾಗುತ್ತದೆ, ಧಾರ್ಮಿಕ ವಿಧಿಯಾಗಿ ಬಿಡುತ್ತದೆ. ರಕ್ತಚೆಲ್ಲುವುದು ದೇಶ, ಧರ್ಮಗಳಿಗೆ ಕೊಡುವ ರಕ್ತತರ್ಪಣವಾಗುತ್ತದೆ. ಕೊಲ್ಲುವುದು, ಬಲಿಕೊಡುವುದು ಅಥವಾ ತಾನೇ ಬಲಿದಾನಮಾಡುವುದು ಮಹಾಪೂಜೆಯಾಗುತ್ತದೆ, ಇದರಿಂದ ವೀರ ಸ್ವರ್ಗ ಪ್ರಾಪ್ತಿಯಾಗುತ್ತದೆ. ಹಿಂಸೆಗೆ ಕೊಡುವ ಕರೆ, ಧರ್ಮರಕ್ಷಣೆ, ರಾಷ್ಟ್ರರಕ್ಷಣೆಗಳಿಗೆ ಕೊಡುವ ಪವಿತ್ರ ಕರೆಯಾಗುತ್ತದೆ. ಹಾಗಾಗಿ ಈ ಯಾವ ಕೆಲಸದಲ್ಲೂ ಪಾಪಪ್ರಜ್ಞೆಯ ಲವಲೇಶವೂ ಇರುವುದಿಲ್ಲ ಮಾತ್ರವಲ್ಲ, ಇದಕ್ಕೆ ವಿರುದ್ಧವಾದ ಕಲ್ಪಿತ ಶತ್ರುವನ್ನು ಸೃಷ್ಟಿಸಿಕೊಳ್ಳುವುದೂ ಅನಿವಾರ್ಯವಾಗಿ ಬಿಡುತ್ತದೆ. ಪ್ರಭುಶಕ್ತಿಯ ಉಪಾಸನೆ, ಕ್ಷಾತ್ರದ ಉಪಾಸನೆ, ಶ್ರೇಷ್ಠತೆಯ ಉಪಾಸನೆ ಮುಂತಾದವು ಪರಮ ಮೌಲ್ಯಗಳಾಗಿ

ಬಿಡುತ್ತವೆ. ನಮಗಿಂತ ದುರ್ಬಲವಾದದ್ದನ್ನೂ ನಮ್ಮ ತೋಳತೆಕ್ಕೆಯಲ್ಲಿಟ್ಟುಕೊಂಡು ಮುಂದುವರಿಯುವುದು ಮಾನವ ಧರ್ಮ ಎಂಬ ಮೂಲಭೂತ ಆಧಾತ್ಮ ಮೌಲ್ಯಕ್ಕೇ ಇಂಥ ಸಮಾಜದಲ್ಲಿ ವಿಸ್ಮೃತಿ ಕವಿದಿರುತ್ತದೆ. ಭೌತಿಕ ಘಟನೆಯನ್ನು ಅಧಿಭೌತಿಕ ನೆಲೆಗೆ ಕೊಂಡೊಯ್ದಾಗ ಹಿಂಸೆಯಂಥ ನಿಷೇಧಾತ್ಮಕ ಮೌಲ್ಯವೂ ತನ್ನ ನಿಷೇಧಾತ್ಮಕ ಸ್ವರೂಪವನ್ನು ಕಳೆದುಕೊಂಡು ಮಹಾ ಪವಿತ್ರಮೌಲ್ಯವಾಗಿ ಬಿಡುವ ಇಂಥ ಹಿಂಸೆಯ ಸ್ವರೂಪವು ಮೊದಲ ರೀತಿಯ ಹಿಂಸೆಗಿಂತ ಭೀಕರವಾದದ್ದು.

**(iii) ಆಧುನಿಕ ಅಭಿವೃದ್ಧಿಯ ಹಿಂಸೆ**

ಮೂರನೆಯ ಬಗೆಯ ಹಿಂಸೆಯು ಆಧುನಿಕ ಪ್ರಗತಿ ಸಿದ್ಧಾಂತದಿಂದ ಉದ್ಭವಿಸುವಂಥದು. ಇಂದಿನ ಮಾರುಕಟ್ಟೆ ಪ್ರೇರಿತ ಪ್ರಗತಿ ವ್ಯಾಖ್ಯೆಯು ಹಿಂಸೆಯ ಹೊಸ ಹೊಸ ಸ್ವರೂಪಗಳನ್ನೇ ಸೃಷ್ಟಿಸುತ್ತಿದೆ. ಇಲ್ಲಿ ನಡೆಯುವುದು ಬಲಹೀನ ಸಮುದಾಯದ ಬಲಿ ಮಾತ್ರ. ಪ್ರಗತಿಗಾಗಿ ಬಲಿದಾನ (ಇನ್ನೊಬ್ಬ) ಮಾಡಬೇಕೆನ್ನುವ ಧೋರಣೆ. ಸ್ವಯಂ ಬಲಿದಾನದ ಪ್ರಶ್ನೆಯೇ ಇಲ್ಲಿಲ್ಲ. ರಾಷ್ಟ್ರದ ಅಭಿವೃದ್ಧಿಗಾಗಿ, ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಗಟ್ಟಿಯ ಸ್ಥಾನಮಾನಗಳಿಸಲಿಕ್ಕಾಗಿ, ಇಂಥ ಬಲಿದಾನ-ತ್ಯಾಗಗಳು ಅನಿವಾರ್ಯ; ದೇಶದ ಹಿತದೃಷ್ಟಿಯಿಂದ ಕೆಲವು ಪ್ರದೇಶ, ಕೆಲವೊಂದು ವರ್ಗಗಳು ಬಲಿದಾನಕ್ಕೆ ಸಿದ್ಧರಾಗುವುದು ಅಗತ್ಯ ಎಂದೆಲ್ಲ ಸಂಬಿಸಲಾಗುತ್ತದೆ. ಇಂಥ ಅಭಿವೃದ್ಧಿಪ್ರೇರಿತ ಕ್ರೌರ್ಯ ಅದರದೇ ಆದ ಅಭಿವೃದ್ಧಿ ತರ್ಕಗಳನ್ನು ಸೃಷ್ಟಿಸಿ, ಅವನ್ನು ವೈಜ್ಞಾನಿಕವಾಗಿಯೂ, ಭಾವನಾಶೂನ್ಯವಾಗಿಯೂ, ತಟಸ್ಥವಾಗಿಯೂ, ವಿಚಾರಬದ್ಧವಾಗಿಯೂ ಮುಂದಿಡುತ್ತದೆ. ಈ ಅಭಿವೃದ್ಧಿ ವ್ಯಾಖ್ಯೆಗಳು ಎಷ್ಟು ತರ್ಕಯುಕ್ತವಾಗಿರುತ್ತವೆಯೆಂದರೆ, ಅವು ಎಂಥ ಹಿಂಸೆಯನ್ನೂ ನ್ಯಾಯಸಮ್ಮತ ಮಾಡಿ ಬಿಡುತ್ತದೆ. ಅವೈಜ್ಞಾನಿಕವಾದ ಈ ಮಾರುಕಟ್ಟೆ ಆಧಾರಿತ ಆರ್ಥಿಕ ಸಿದ್ಧಾಂತವು, ಅನೈತಿಕ ವ್ಯಾಪಾರ ಲಾಭ ಪೈಪೋಟಿಯ ಆರ್ಥಿಕ ನೀತಿ, ಅವೈಜ್ಞಾನಿಕ ಜಾಹೀರಾತು ಪ್ರೇರಿತ ಮಾರುಕಟ್ಟೆಯ ಯುದ್ಧ, ನಿಸರ್ಗದ ಅಸಹ್ಯ ಲೂಟಿ, ರಾವಿನ ಸರಕು ಸಂಸ್ಕೃತಿ ಮುಂತಾದ ಸ್ವಯಂ ಹಿಂಸೆಯನ್ನು ಪೋಷಿಸುವ ಮೌಲ್ಯಗಳನ್ನು ಸಮಾಜದಲ್ಲಿ ಬಲವಾಗಿ ನೆಲೆಗೊಳಿಸಿಬಿಡುತ್ತದೆ. ಈ ಮೌಲ್ಯಗಳ ವಿರುದ್ಧ ಸೊಲ್ಲೆತ್ತುವ ಸತ್ವವಂತರನ್ನು ಪ್ರಗತಿ ವಿರೋಧಿಗಳು, ಯಥಾಸ್ಥಿತಿವಾದಿಗಳು, ಪ್ರತಿಗಾಮಿಗಳು, ಅಭಿವೃದ್ಧಿ ಪಥದ ಗಾಲಿಯನ್ನು ಮುಗ್ಗರಿಸಲು ಪ್ರಯತ್ನಿಸುವವರು, ತಲೆಹಿಡುಕರು ಎಂದೆಲ್ಲ ಬಣ್ಣಿಸಿ, ಅವರನ್ನು ಹಾಸ್ಯಾಸ್ಪದ ವ್ಯಕ್ತಿಗಳನ್ನಾಗಿ ಮಾಡಲಾಗುತ್ತದೆ. ಆದರೆ, ಈ ಅಭಿವೃದ್ಧಿ ಮಾಡೆಲ್‌ನಿಂದ ಸಮಷ್ಟಿಹಿತ ಸಾಧ್ಯವೇ? ಇಲ್ಲವಾದರೆ ಇದು ಯಾವ ವರ್ಗದ ಹಿತ ರಕ್ಷಣೆಗಾಗಿ? ಇದರ ಸ್ವರೂಪವೇನು? ಕೇಂದ್ರೀಕೃತವೇ? ವಿಕೇಂದ್ರೀಕೃತವೇ?, ಇಲ್ಲಿ ಪ್ರಯೋಜನ ಪಡೆಯುವವರು ಯಾರು? ಸಂಕಷ್ಟಕ್ಕೊಳಗಾಗುವವರು ಯಾರು? ಬಲಿ ಹಾಕುವವರು ಯಾರು? ಬಲಿಯಾಗುವವರು ಯಾರು ? ಎಂಬೆಲ್ಲ ನೈತಿಕ ಪ್ರಶ್ನೆಗಳಿಗೆ ಮಾತ್ರ ನೇರ ಮುಖಾಮುಖಿಯಾಗದೆ ಅವನ್ನು ಹಿಂದಕ್ಕೆ ತಳ್ಳಿ ಮುಚ್ಚಿಹಾಕಲು ಪ್ರಯತ್ನಿಸಲಾಗುತ್ತದೆ.

ನಾವಿಂದು ಒಪ್ಪಿದ ಈ ಪ್ರಗತಿ ಸಿದ್ಧಾಂತದ ಕೇಂದ್ರೀಕೃತ ಶಕ್ತಿ, ಅಗಾಧ ದುರ್ಬಲರ ಶಕ್ತಿಹರಣ ಮಾಡಿ ಇನ್ನಷ್ಟು ಶಕ್ತಿಹೀನ (disempowered) ಸ್ಥಿತಿಗೆ ತಳ್ಳುವ ಹಿಂದಿರುವ ಭಾವನಾಶೂನ್ಯ ಕ್ರೌರ್ಯ, ಹಿಂದೆಂದಿಗಿಂತಲೂ ಅಮಾನುಷವಾದುದು. ಇದರ ತರ್ಕಗಳು ಮನುಷ್ಯ ಜನಾಂಗದ ಜತೆ, ಸಮಸ್ತ ಜೀವಜಾಲದ ಮೇಲೆಯೂ ಕ್ರೌರ್ಯವನ್ನು ತಂದೊಡ್ಡುತ್ತಿವೆ. ಹಿಂಸೆಯ ಅದೃಶ್ಯ ಕೊಂಡಿಗಳು, ತಾನು ಹಿಂದೆ ಉಲ್ಲೇಖಿಸಿದಂತೆ, ಸೂಕ್ಷ್ಮಾತಿಸೂಕ್ಷ್ಮವಾಗಿ ಜಗತ್ತಿನೆಲ್ಲೆಡೆ ಇಂದು ವ್ಯಾಪಿಸಿದೆ. ಇದು ಕಣ್ಣಿಗೆ ಕಾಣುವ ನೇರ ರೇಖೆಯಲ್ಲಿ ನಡೆಯುವುದೇ ಇಲ್ಲ. ಹಿಂಸೆಗೊಡ್ಡುವ ಕೈಗಳು, ಅಮೂರ್ತಶಕ್ತಿಗಳಂತೆ ದೂರದ ಅದೃಶ್ಯಲೋಕದಲ್ಲೆಲ್ಲೋ ಇರುತ್ತವೆ.ಇವಕ್ಕೆ ಮೂರ್ತವಾದ ಕಣ್ಣು, ಕಿವಿ, ಮುಖಗಳಿರುವುದೇ ಇಲ್ಲ. ಇದೊಂದು ವ್ಯವಸ್ಥೆ, ಸಿದ್ಧಾಂತ, ಪೂರ್ವಗ್ರಹಪೀಡಿತ ವ್ಯಾಖ್ಯೆ. ಇದು ತನ್ನದೇ ಆದ ಶಿಕ್ಷಣಾವಸ್ಥೆಯನ್ನೂ ಹುಟ್ಟುಹಾಕುವುದರಿಂದ ಎಲ್ಲ ಜನರೂ ಇದರ ಮಾಟ -ಮೋಡಿಗಳಿಗೆ ಒಳಗಾಗಿ ಬಿಡುತ್ತಾರೆ. ಇಲ್ಲಿ ಹಿಂಸೆ ಮಾಡುವವರು ಮತ್ತು ಹಿಂಸೆಗೊಳಗಾಗುವವರ ನಡುವಿನ ಗಡಿಯೇ ಮಾರೆಮಾಚಿರುತ್ತದೆ. ಇಂದು ನರ್ಮದಾ ಕೊಳ್ಳದಲ್ಲಿ ಆಧುನಿಕ ಅಭಿವೃದ್ಧಿ ವ್ಯಾಖ್ಯೆಯ ಸಂಕೇತವಾದ ಬೃಹತ್ ಅಣೆಕಟ್ಟು ಯೋಜನೆಯು ೨೦೦ಕ್ಕೂ ಮಿಕ್ಕಿಹಳ್ಳಿಗಳಲ್ಲಿ ವಾಸವಾಗಿರುವ ಲಕ್ಷಾಂತರ ಶಕ್ತಿಹೀನ ಬುಡಕಟ್ಟು ಜನಾಂಗದವರನ್ನು ಮುಳುಗಿಸಲು ಹೊರಟಿದೆಯಲ್ಲಾ ಇದರ ಬಗ್ಗೆ ಈ ದೇಶದ ಆಧುನಿಕರಲ್ಲಿ "ಸೆನ್ಸ್ ಆಫ್ ಶೇಮ್" ಇಲ್ಲ, ಯಾವ ಭಾವನಾತ್ಮಕ ಸ್ಪಂದನ ಕೂಡ ಇಲ್ಲ. ನರ್ಮದಾಕೊಳ್ಳದ ಗುಡ್ಡುಗಾಡು ಜನರ ಹೋರಾಟ ಕೇವಲ ಪರಿಸರ ಹೋರಾಟವಲ್ಲ. ಅದು ಈ ಪ್ರಜಾಪ್ರಭುತ್ವವಾದೀ ವ್ಯವಸ್ಥೆಯಲ್ಲಿ ಸಭ್ಯ ನಾಗರಿಕನಾಗಿ ಬದುಕುವ ಹಕ್ಕಿಗಾಗಿ ಹೋರಾಟ (right of livelihood). ಬದುಕುವ ಮೂಲಭೂತ ಹಕ್ಕಿಗಾಗಿ ನಡೆಯುವ ಇಂಥ ಜನಪರ ಹೋರಾಟಗಳು ಇಂದು ಅಸಂಬದ್ಧವಾಗಿ ಲೇವಡಿಯ ಸಂಗತಿಗಳಾಗುತ್ತಿರುವುದು ದಿಗಿಲುಗೊಳ್ಳುವ ಸಂಗತಿ.

ಮೊದಲು ಉಲ್ಲೇಖಿಸಿದ ಹಿಂಸೆಯ ಸ್ವರೂಪಗಳಲ್ಲಿ, ಸಿಟ್ಟು, ಸೆಡುವು, ದ್ವೇಷ ಮುಂತಾದ ಮಾನವಸಹಜ ಭಾವತೀವ್ರತೆಗಳಾದರೂ ವ್ಯಕ್ತವಾದರೆ ಇಲ್ಲಿ ಭಾವನೆಗಳೇ ಸತ್ತುಹೋಗಿರುತ್ತದೆ. ಎಲ್ಲವೂ ಸಂಪೂರ್ಣ "ಇಂಪರ್ಸನಲ್" ಆಗಿ ತರ್ಕಬದ್ಧವಾಗಿ ಹಾಗೂ ತಾಂತ್ರಿಕ ಲೆಕ್ಕಾಚಾರಗಳಂತೆ ನಡೆಯುತ್ತಿರುತ್ತದೆ. ಇನ್ನೊಬ್ಬನ ಬಲಿಯ ಬಗ್ಗೆ ಆಘಾತವೂ ಇಲ್ಲಿಲ್ಲ. ಬದಲಾಗಿ, ದಿವ್ಯ ನಿರ್ಲಕ್ಷ್ಯ ಇದೆ. ಇದು ಭಾವನೆಗಳ ವಿಜೃಂಭಣೆಗಿಂತಲೂ ಅಪಾಯಕಾರಿ. ಭಾವನೆಗಳ ಅತಿರೇಕಗಳನ್ನು ಹತೋಟಿಗೆ ತರಲು ಸಾಧ್ಯ. ಭಾವನಾಶೂನ್ಯ ಕ್ರೌರ್ಯ ಮಾಯಾವಿಯಂತೆ ಹಿಡಿಯಲಿಕ್ಕೇ ಸಿಗುವುದಿಲ್ಲ. ಇದು ಇಂದಿನ ವಸ್ತುಸ್ಥಿತಿ.

❐

# ತೊಗಾಡಿಯಾ: ಹಿಂದೂಧರ್ಮದ ವಿಕಾರ

ಧರ್ಮದ ನಿಜರೂಪದ ಬಗ್ಗೆ ಪ್ರೀತಿ - ಗೌರವಗಳುಳ್ಳ ಧಾರ್ಮಿಕ ನಾನು. ನನ್ನ ಬದುಕಿನ ಮೂಲಸೆಲೆ ಆಧ್ಯಾತ್ಮ. ಆಧ್ಯಾತ್ಮದ ತುಡಿತವೇ ನನ್ನ ಪರಿಸರ ವಿಜ್ಞಾನೀಯ ಆಸಕ್ತಿಗೂ ಕಾರಣ. ಉಪನಿಷತ್ತುಗಳ ಅಧ್ಯಯನ ಕಳೆದ ೩೦ ವರ್ಷಗಳಿಂದ ನಾನು ಹಚ್ಚಿಕೊಂಡ ಅನೇಕ ಕಾಳಜಿಗಳಲ್ಲೊಂದು.

ಸತ್ಯದರ್ಶನದ ಸಂತೋಷದ ಸವಿಯನ್ನು ನಮಗೂ ಉಣಬಡಿಸಿದ ಯಾಜ್ಞವಲ್ಕ್ಯ, ವಸಿಷ್ಠ, ಆಂಗೀರಸ, ಉದ್ದಾಲಕ, ಗೌತಮ, ಪಿಪ್ಪಲಾದ, ಪರಾಶರ, ಭಾರದ್ವಾಜರೇ ಮೊದಲಾದ ಋಷಿ-ಮುನಿಗಳ ಪರಂಪರೆ ಹಿಂದೂಧರ್ಮಕ್ಕಿದೆ. ಬ್ರಹ್ಮಸೂತ್ರ ಬರೆದ ವ್ಯಾಸ, ಅದಕ್ಕೆ ಭಾಷ್ಯ ಬರೆದ ಶಂಕರ, ರಾಮಾನುಜ, ಮಧ್ವರು, ಹಾಗೂ ಕುಮಾರಿಲ ಭಟ್ಟರಂಥ ಮಹಾಜ್ಞಾನಿಗಳನ್ನು ಕಂಡ ಧರ್ಮವಿದು. ಮುಂದೆ ಧರ್ಮದ ಮೂಲಸತ್ತ್ವಕ್ಕೆ ತುಕ್ಕು ಹಿಡಿದಾಗ, ಅದನ್ನು ನ್ಯಾಯ - ಸಮಾನತೆಗಳ ಚೌಕಟ್ಟಿನಲ್ಲಿ ಸಾಮಾನ್ಯ ಜನರ ಪರವಾಗಿ ಪ್ರಸ್ತುತ ಪಡಿಸಿದ ಬಸವಣ್ಣ, ಅಕ್ಕ, ಅಲ್ಲಮರ ನಾಡಿದು. ಭಕ್ತಿಪಂಥವಾಹಿನಿಯಲ್ಲಿ ಬಂದ ಕನಕ, ಪುರಂದರ, ಚೈತನ್ಯ, ಮೀರಾ, ಕಬೀರ, ನಾನಕ, ಜ್ಞಾನೇಶ್ವರ, ನಾಮದೇವ, ರಾಮದಾಸ, ಮೊದಲಾದ ನೂರಾರು ಭಗವದ್ಭಕ್ತರು, ಸಂತರು, ಈ ನೆಲದ ಧಾರ್ಮಿಕ ಸತ್ತ್ವವನ್ನು ಕೊಂಡಾಡಿ, ಹಾಡಿ, ಕುಣಿದ ಪರಂಪರೆ ನಮ್ಮದು. ೨೦ನೆಯ ಶತಮಾನದ ವಿಜ್ಞಾನಯುಗದ ಮನೋಧರ್ಮಕ್ಕನುಗುಣವಾಗಿ ಸರ್ವಧರ್ಮ ಸಮಭಾವ, ಪರಸ್ಪರ ಪ್ರೀತಿ -ಸಹಕಾರ, ಅಹಿಂಸೆ, ಶಾಂತಿ, ಸಾಮರಸ್ಯ ಮುಂತಾದ ಹಿಂದೂಧರ್ಮದ ಜೀವಪೋಷಕ ಮೌಲ್ಯಗಳನ್ನು

---

ಲಂಕೇಶ್ ಪತ್ರಿಕೆ, ಡಿಸೆಂಬರ್ ೩, ೨೦೦೩

ಮರುಬೆಳಗಿಸಿ ಶ್ರೀಮಂತಗೊಳಿಸಿದ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರಬಿಂದೋ, ರಮಣ, ನಾರಾಯಣ ಗುರು, ಗಾಂಧಿಯಂಥ ಮಹಾಮಹಿಮರು ಉದಿಸಿಬಂದ ನಾಡಿದು.

"ಒಂದು ನಾಯಿ ಈ ದೇಶದಲ್ಲಿ ಹಸಿದಿರುವವರೆಗೆ ಧರ್ಮದ ಬಗ್ಗೆ ಅನಗತ್ಯ ಮಾತಾಡುವವನನ್ನು ನಾನು ದೇಶದ್ರೋಹಿ ಎಂದು ಕರೆಯುತ್ತೇನೆ" ಎಂದು ಸಾರಿದ ವಿವೇಕಾನಂದರ ಕ್ರಾಂತಿಕಾರಿ ಮಾತಿಗೂ ಅವಕಾಶಕೊಟ್ಟ ಧರ್ಮವಿದು. ಋಷಿ ಚಾರ್ವಾಕರ ಲೋಕಾಯತ (ನಾಸ್ತಿಕವಾದ) ದರ್ಶನವನ್ನೂ ಗೌರವದಿಂದ ಕಂಡ ಪರಂಪರೆ ಹಿಂದೂ ಧರ್ಮಕ್ಕಿದೆ. ಷಡ್ ದರ್ಶನಗಳಲ್ಲಿ ವೇದಾಂತ ದರ್ಶನವೊಂದನ್ನು ಬಿಟ್ಟು, ದೇವರ ಅಸ್ತಿತ್ವದ ಬಗ್ಗೆ ತಟಸ್ಥವಿರುವ ಉಳಿದ ಐದು ದರ್ಶನಗಳಾದ ಕಣಾದರ ನ್ಯಾಯವೈಶೇಷಿಕ, ಕಪಿಲರ ಸಾಂಖ್ಯ, ಪತಂಜಲಿಯ ಯೋಗ , ಜೈಮಿನಿಯ ಪೂರ್ವಮೀಮಾಂಸೆ, ಬಾದರಾಯಣರ ಉತ್ತರಮೀಮಾಂಸೆ ದರ್ಶನಗಳು ಹಿಂದೂಧರ್ಮದ ಕವಲುಗಳು. ಜೊತೆಗೆಯೇ ನೂರಾರು ರೀತಿಯ ಜನಪದೀಯ ಆಚರಣೆಗಳಾಗಿ, ನಂಬಿಕೆಗಳಾಗಿ, ವಿವಿಧತೆಯ ಸೆಲೆಯಾಗಿ, ಸಾಮಾನ್ಯ ಜನರು ತಮ್ಮ ನಿತ್ಯಜೀವನದ ಕಾಯಕದ ಬದುಕಿನ ಕ್ರಮದಲ್ಲೇ ಈ ಸಂಸ್ಕೃತಿಗೆ ರಕ್ತ - ಮಾಂಸ ತುಂಬಿ ಜೀವಂತವಾಗಿ ಬೆಳೆಸಿದ ದೀರ್ಘ ಇತಿಹಾಸವೂ ಹಿಂದೂ ಧರ್ಮಕ್ಕಿದೆ. ಇವು ಯಾವುವೂ ಒಂದನ್ನೊಂದು ಸಂಪೂರ್ಣ ಅಳಿಸಿಹಾಕದೆ, ಆರೋಗ್ಯಪೂರ್ಣ ವಾಗ್ವಾದಗಳ ಮೂಲಕ ಪರಸ್ಪರ ಪ್ರಭಾವ ಬೀರುತ್ತಾ ಸಮಸಮವಾಗಿ ಬೆಳೆದು ಶ್ರೀಮಂತಗೊಂಡಿವೆ.

**ಧರ್ಮದ ಅಪಸರ್ಪಿಣಿಯ ಫಲ : ತೊಗಾಡಿಯಾ**

ಇಂಥ ಉದಾರವಾದ ವೈವಿಧ್ಯಮಯ ಪರಂಪರೆಯಿರುವ ಧರ್ಮದ ನೇತಾರರಾಗಿ ಇಂದು ಸಾಂಸ್ಕೃತಿಕ ವೈವಿಧ್ಯತೆಯ ಶ್ರೀಮಂತಿಕೆಯನ್ನೇ ಹೊಸಕಿ ಹಾಕುವ ತೊಗಾಡಿಯಾ, ಮೋದಿ ಯಂಥವರು ಶೋಭಿಸುವುದು ಹಿಂದೂ ಧರ್ಮದ ವಿಕಾರ. ಇದು ಹಿಂದೂ ಧರ್ಮದ ಆಧ್ಯಾತ್ಮಿಕ ಅವನತಿಯ ಸಂಕೇತ. ಹಿಂದೂಧರ್ಮ ಇಂದು ಎಂಥ ತೀವ್ರ ಬಿಕ್ಕಟ್ಟಿನಲ್ಲಿ ಸಿಲುಕಿದೆ ಎಂಬುದನ್ನು ಯೋಚಿಸಿದರೇ ದಿಗಿಲಾಗುತ್ತದೆ. ವೇದಾಂತದ ಮೂಲಸಾರಕ್ಕೆ ಕೊಡಲಿಯೇಟು ಬೀಳುತ್ತಿದೆ. ಎಲ್ಲದನ್ನು ಒಳಗೊಳ್ಳುವ (all encompassing) ಗುಣವಿರುವ ಧರ್ಮ ಇಂದು ಕೆಲವೇ ಮತಾಂಧ ಗುಂಪುಗಳಿಂದ "ಹೈಜಾಕ್" ಆಗಿ, ಉದಾರವಾದೀ ಧಾರ್ಮಿಕರನ್ನೂ ಕೂಡಾ "ಅನ್ಯ" (the other) ರೆಂದು ತಿರಸ್ಕರಿಸಿ ಹೊರಗಿಡುವ ಸಂಕುಚಿತಮಟ್ಟಕ್ಕೆ ಇಳಿಯುತ್ತಿದೆ. ಕೆಳವರ್ಗದವರಿಗೆ ಧರ್ಮದ ಕಳ್ಳು ಕುಡಿಸಿ, ಭೂ ಸುಧಾರಣೆಯಲ್ಲಿ ತಾವು ಕಳಕೊಂಡ ಊಳಿಗಮಾನ್ಯ ಯಜಮಾನಿಕೆಯನ್ನು ಮತ್ತೊಮ್ಮೆ ಹಿಂಬಾಗಿಲಿನಿಂದ ತರುವ ಪ್ರಯತ್ನ ಕಾಣುತ್ತಿದೆ.

ಯಾವುದೂ ಅತಿಯಾದಾಗ ಅದರೊಳಗಿಂದಲೇ ಅದರ ವಿನಾಶದ ವಿಷಬೀಜಗಳು ಹುಟ್ಟಿಕೊಳ್ಳುವುದು ಪ್ರಕೃತಿ ನಿಯಮ. ವಿಶ್ವನಿಯತಿಯು (ಋತ) ಅತಿರೇಕವನ್ನು ಸಹಿಸುವುದಿಲ್ಲ. ಹಿಂಸೆ, ದಬ್ಬಾಳಿಕೆ, ಆಕ್ರಮಣವೇ ಪ್ರಮುಖ ಲಕ್ಷಣಗಳಾಗಿರುವ ಎಲ್ಲಾ ಮತಪಂಥ, ಧರ್ಮ, ರಾಜಕೀಯ ಸಿದ್ಧಾಂತಗಳು ಕಟ್ಟಕಡೆಯಲ್ಲಿ ಇತಿಹಾಸದ ಕಸದ ಬುಟ್ಟಿ ಸೇರಿವೆ. ಇದನ್ನು ಚೆನ್ನಾಗಿ ಅರಿತಿದ್ದ ನಮ್ಮ ಪೂರ್ವಸೂರಿಗಳು, ಸಾತ್ವಿಕ ಸಂತರು, ಹಿಂದೂ ಧರ್ಮವನ್ನು ಯಾವುದೇ ಸೈದ್ಧಾಂತಿಕ ಅತಿರೇಕಗಳಿಲ್ಲದೆ ಮಾನವೀಯ ನೆಲೆಯಲ್ಲಿ ಸಮರಸದ ಹದದೊಂದಿಗೆ ಬೆಳೆಸಲು ಪ್ರಯತ್ನಿಸಿದ್ದಾರೆ.

ಹಾಗಾಗಿಯೇ ಅದು ತನ್ನೆಲ್ಲ ಏಳುಬೀಳುಗಳ ನಡುವೆಯೂ ಹಲವು ಕಾಲದಿಂದ ಬಾಳಿಕೊಂಡು ಬಂದಿದೆ.

**ಆದರೆ.....**

ಆದರೆ, ಇಂದು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅಸಹ್ಯ ಬಾಹ್ಯ ಪ್ರದರ್ಶನ, ಅತೀ ಡಂಭಾಚಾರ, ನಗು, ಕೇಕೆ, ಗದ್ದಲ, ಹಿಂಸೆಗಳ ಅತಿರೇಕತೆಯ ನಡುವೆ ನೈಜ ಧಾರ್ಮಿಕ ಮನಸ್ಸು ಮುದುಡಿಹೋಗಿದೆ, ಧಾರ್ಮಿಕತೆ ಮಾಯವಾಗಿದೆ. ಧರ್ಮವೆಂದರೆ ಪರಿಶುದ್ಧವಾದ ನೈತಿಕ ಬದುಕು ಎಂದು ಸಾರಿದ ಋಷಿ - ಮುನಿ- ಸಂತರ ಮಾತುಗಳು ಹಾಸ್ಯಾಸ್ಪದವಾಗಿದೆ. ಇದು ಧರ್ಮಗ್ಲಾನಿಯ ಲಕ್ಷಣವಲ್ಲದೆ ಮತ್ತೇನು ?

**ಸದ್ಯದ ಬಿಕ್ಕಟ್ಟು**

ಇವನ್ನೆಲ್ಲ ಗಮನಿಸುವಾಗ ನನಗೆ ೨೫೦೦ ವರ್ಷಗಳ ಹಿಂದೆ ಹಿಂದೂ ಧರ್ಮ ಎದುರಿಸಿದ ಇಂಥದೇ ಬಿಕ್ಕಟ್ಟಿನ ಸ್ಥಿತಿ ನೆನಪಾಗುತ್ತದೆ. ಅಂದು ಶುದ್ಧ ಜ್ಞಾನ ಪರಂಪರೆ, ಸತ್ಯಪರತೆ, ಶಾಂತಿ, ಅಂತರಂಗ ಶುದ್ಧಿ, ಅಹಿಂಸೆ, ಸಂಯಮಗಳ ಸಾರ್ವಕಾಲಿಕ ಧಾರ್ಮಿಕ ಮೌಲ್ಯಗಳಿಗೆ ಮಬ್ಬು ಕವಿದು, ಕರ್ಮಕಾಂಡವೇ ಅತಿಯಾಗಿ, ಧರ್ಮಾಚರಣೆ ಎಂದರೆ ನೈತಿಕತೆಯ ಸ್ಪರ್ಶವಿಲ್ಲದ ಪ್ರದರ್ಶನರತಿಯ ಅಬ್ಬರ, ತಾಂತ್ರಿಕ ವಿಷಯಲೋಲುಪತೆ, ಮಜಾಪ್ರವೃತ್ತಿ, ಹಿಂಸೆ, ದಬ್ಬಾಳಿಕೆಗಳೇ ಪ್ರಧಾನವಾಗಿಬಿಟ್ಟಾಗ, ಇದಕ್ಕೆ ಪ್ರತಿಯಾಗಿ ಅಹಿಂಸೆ, ದಯೆ, ಜೀವ ಪ್ರೀತಿ, ಕ್ಷಮೆಗೆ ಒತ್ತುಕೊಟ್ಟ ಬೌದ್ಧ, ಜೈನ ಧರ್ಮಗಳು ಹುಟ್ಟಿಕೊಂಡವು ಎಂದು ಇತಿಹಾಸಕಾರರು ಉಲ್ಲೇಖಿಸುತ್ತಾರೆ. ೨೫೦೦ ವರ್ಷಗಳ ಬಳಿಕ ಇಂದು ಹಿಂದೂ ಧರ್ಮ ಅಂಥದೇ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂದು ನನ್ನ ಅನ್ನಿಸಿಕೆ.

ಹಿಂದೂ ಧರ್ಮದ ಇಂದಿನ ಉಗ್ರವಾದೀ ಮುಖ, ಸಾವಿರಾರು ವರ್ಷಗಳ ಪರಂಪರೆಯಿರುವ ಧರ್ಮದೊಳಗೆ ಉಸಿರುಕಟ್ಟಿಸುವ ವಾತಾವರಣವನ್ನು ನಿರ್ಮಿಸುತ್ತಿದ್ದು, ದೀರ್ಘಾವಧಿಯಲ್ಲಿ ಇದು ಧರ್ಮದ ನಾಶಕ್ಕೆ ಕಾರಣವಾದೀತು. ಈ ಪ್ರವೃತ್ತಿ ಧರ್ಮದೊಳಗಿನಿಂದಲೇ ಧರ್ಮಕ್ಕೆ ನಾವು ಮಾಡುವ ಅಪಚಾರ. ಇಂದಿನ ತೋರಿಕೆಯ ಜೀವನದ ಆಕರ್ಷಣೆಯಿಂದ, ನಾವು ಸ್ಥಳೀಯ ಸಾಂಸ್ಕೃತಿಕ ಬೇರುಗಳನ್ನು ಕಳಕೊಂಡಿರುವುದರಿಂದ ನಿಜ ಧಾರ್ಮಿಕ ತಿಳುವಳಿಕೆ ಹಿಂದೆ ಸರಿದಿದೆ. ಐಶಾರಾಮ ಬದುಕಿನ ಅತಿರಾಪಿನಿಂದ ಸಾಂಸ್ಕೃತಿಕವಾಗಿ ಪಾಶ್ಚಾತ್ಯರ ಪಡಿಯಚ್ಚಾಗಿ ಅನಾಥರಾಗುತ್ತಾ, ಮಾನಸಿಕವಾಗಿ ತಬ್ಬಲಿಗಳಾಗಿ ನರಳುತ್ತಾ ನಾವು ಕೇವಲ ಆಲಂಬನೆಗಾಗಿ ಧರ್ಮಕ್ಕೆ ಜೋತುಬಿದ್ದು ಆವೇಶಭರಿತ ಉಗ್ರಗಾಮಿಗಳಾಗುತ್ತಿದ್ದೇವೆಯೇ ವಿನಾ ನಿಜ ಧಾರ್ಮಿಕ ಬದುಕಿನ ತುಡಿತದಿಂದಲ್ಲ. ಧರ್ಮದ ತಿರುಳನ್ನು ತಿಳಿದುಕೊಳ್ಳುವ ಗೊಡವೆಗೇ ಹೋಗದೆ ಅದರ ಹೊರ ಸಿಪ್ಪೆಗೇ ಹೆದರಿಕೆಯಿಂದ ಜೋತುಬೀಳುತ್ತಿದ್ದೇವೆ. ಹಾಗಾಗಿ ಎಲ್ಲರನ್ನೂ ಒಳಗೊಳ್ಳುವ ಧರ್ಮದೊಳಗಿನ ವಿಶಾಲ ಜಾಗ ಕುಸಿಯುತ್ತಾ ದಿನೇದಿನೇ ಅಗಲಕಿರಿದಾಗುತ್ತಾ, ಅಲ್ಲಿ ಸಾತ್ವಿಕ ಧರ್ಮವಂತರಿಗೂ ಜಾಗವಿಲ್ಲದಂತಾಗಿ, ಅವರು ತಮ್ಮ ಧರ್ಮಕ್ಕೇ ಪರಕೀಯರಾಗುತ್ತಿದ್ದಾರೆ. ಈ ಧಾರ್ಮಿಕ ಬಿಕ್ಕಟ್ಟನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳಲು ಧರ್ಮವನ್ನು ಒಂದು ಮಾರುವ ಸರಕಾಗಿ ಪರಿವರ್ತಿಸಿ ಅಂತಾರಾಷ್ಟ್ರೀಯ

ಮಾರುಕಟ್ಟೆಗಳಲ್ಲಿ ಮಾರುವ "ಸ್ಪಿರಿಚುವಲ್ ಎಂ. ಎನ್. ಸಿ." (Spiritual MNC's) ಗಳು ಧಾರ್ಮಿಕ ಆಯುಕಟ್ಟಿನ ಜಾಗದಲ್ಲಿ ರಾರಾಜಿಸುತ್ತಿದ್ದಾರೆ. ಧರ್ಮ ಒಳಗಿನಿಂದಲೇ ಆಕ್ರಮಣಕ್ಕೊಳಗಾಗಿದೆ. ಧರ್ಮದ ಈ ಮುಖ ನಿಜಕ್ಕೂ ಯುರೋಪು- ಕೇಂದ್ರಿತ 'ಡೊಗ್ಮ್ಯಾಟಿಕ್' ಧರ್ಮಗಳ ಅನುಕರಣೆಯಿಂದ ಬಂದಂಥದು.

**ಚರಮ ವಾಕ್ಯ**

ಧರ್ಮ ಇಟ್ಟಿಗೆಯ ಕೋಟೆಯಲ್ಲ. ಬಯಲು. ಧರ್ಮದ ಪರಮ ಗುರಿ ಅಭಯ. ಇನ್ನೊಬ್ಬರಲ್ಲಿ ಭೀತಿ ಹುಟ್ಟಿಸುವವ ಸ್ವತಃ ಕೀಳರಿಮೆಯಿಂದ ಬಳಲುವ ಪುಕ್ಕ. ಶಕ್ತಿ ಪ್ರದರ್ಶನ ಧರ್ಮವಲ್ಲ. ಧರ್ಮದ ವೇಷಭೂಷಣ ಧರ್ಮವಲ್ಲ. ಆಡಂಬರ -ಗದ್ದಲಗಳು ಧರ್ಮವಲ್ಲ. ಧರ್ಮವೆಂದರೆ ಬದುಕು. ಯಮ - ನಿಯಮಗಳ ಪರಿಶುದ್ಧ ನೈತಿಕ ಜೀವನ. ಆ ಹಾದಿ ಸಂಯಮದ ಹಾದಿ. ಭೀಷ್ಮರು ತನ್ನ ಕೊನೇ ಕಾಲದಲ್ಲಿ ಧರ್ಮರಾಯನಿಗೆ ಉಪದೇಶಿಸಿದ ಸಮಷ್ಟಿಹಿತದ ಹಾದಿ. ಅದು ಒಂದುಗೂಡಿಸುವ ನೆಲೆ, ವಿಘಟಿಸುವ ನೆಲೆಯಲ್ಲ. ಪ್ರೀತಿ, ದಯೆ, ಅನುಕಂಪಗಳು, ಧರ್ಮದ ಆಭರಣಗಳು. ಸರಳವಾದ ನಮ್ಮ ದಿಯ ಧಾರ್ಮಿಕ ಜೀವನ ಒಂದು ತಪಸ್ಸು; ಋತ. ಅದು ಧೀರರ ಮಾರ್ಗ. ನನಗೆ ಸಂಪೂರ್ಣವಾಗಿ ಹೀಗಿರಲು ಸಾಧ್ಯವಾಗುತ್ತಿಲ್ಲವಲ್ಲಾ ಎಂಬ ದ್ವಂದ್ವ, ವಿಷಾದಗಳಿಂದಲೇ ನನ್ನ ಈ ಅಭಿಪ್ರಾಯಗಳನ್ನು ಮಂಡಿಸುತ್ತಿದ್ದೇನೆ.

**ಪರಿಹಾರ ಸಾಧ್ಯವೇ ?**

ಇಂದಿನ ಗಂಭೀರ ಪರಿಸ್ಥಿತಿಯಲ್ಲಿ, ಧಾರ್ಮಿಕ ಸುಮನಸ್ಸುಗಳು, ನಿಜವಾಗಿ ಧಾರ್ಮಿಕತೆ ಯೆಂದರೇನು ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು. ಧರ್ಮಗಳ ಒಳ ತಿರುಳನ್ನು ಪ್ರಕಾಶಕ್ಕೆ ತಂದು ಅವನ್ನು ನಮ್ಮ ಯುವಜನಾಂಗಕ್ಕೆ ತಿಳಿಸಲು ಪ್ರಯತ್ನಿಸಬೇಕು. ಅಂತರ್‌ಧರ್ಮೀಯ ಸಂವಾದಗಳನ್ನು ಆಗಗೊಡಬೇಕು. ಆ ಸಂವಾದಗಳ ಪ್ರಧಾನ ಭೂಮಿಕೆಯಲ್ಲಿ ಮತಾತೀತ ಆಧ್ಯಾತ್ಮಿಕತೆಯ ಬಗ್ಗೆ ಚರ್ಚೆಯಾಗಬೇಕು.

ಧರ್ಮರಾಜಕಾರಣದ ಸಂಕಷ್ಟಕ್ಕೊಳಗಾದ ಇಂದಿನ ಧಾರ್ಮಿಕ ಬದುಕಿಗೆ ಈ ಕೆಳಗಿನ ಕೆಲವು ಸಂತರ ಉಲ್ಲೇಖಗಳು ಜೀವಪ್ರೀತಿ, ಶಾಂತಿ, ಸಾಮರಸ್ಯಗಳ ನೆಲೆಗಳಾದವು :

"ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ
ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ"

ಬಸವಣ್ಣ

ಗಾಂಧೀಜಿಯ ಪರಮ ಪ್ರೀತಿಯ ಈಶಾವಾಸ್ಯ ಉಪನಿಷತ್ತಿನ ಈ ಮಂತ್ರ :

"ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿ
ಸರ್ವಭೂತೇಷು ಚ ಆತ್ಮಾನಾಂ ತತೋ ನ ವಿಜುಗುಪ್ಸತೇ ll೬ll

ಯಸ್ಮಿನ್ ಸರ್ವಾಣಿ ಭೂತಾನ್ಯಾತ್ಮೈವಾಭೂತ್ ವಿಜಾನತ:
ತತ್ರ ಕೋ ಮೋಹಃ ಕಃ ಶೋಕಃ ಏಕತ್ವಂ ಅನುಪಶ್ಯತಃ" ||೭||

ಯಾರು ಸದಾಕಾಲ ತನ್ನೊಳಗೆ ಎಲ್ಲವನ್ನು, ಎಲ್ಲದರೊಳಗೆ ತನ್ನನ್ನು ಕಾಣುತ್ತಾನೋ, ಯಾರು ಈ ಸಮಗ್ರ ವಿಶ್ವದ ಸಕಲ ಜೀವಜಾತಿಗಳಲ್ಲಿ ಒಂದೇ ಚೈತನ್ಯವನ್ನು ಕಾಣುತ್ತಾನೋ, ಅವನು ಯಾವುದನ್ನೂ 'ಅನ್ಯ' (ಬೇರೆ) ವೆಂದು ಜುಗುಪ್ಸೆಯಿಂದ ತಿರಸ್ಕರಿಸುವುದಿಲ್ಲ.

ಯಾರಿಗೆ 'ನಾನು' (me) - 'ಅದು' (ಅನ್ಯ, other) ಎಂದು ಎರಡಾಗಿ ಬೇರೆ ಬೇರೆಯಾಗಿ ಕಾಣುವುದಿಲ್ಲವೋ ಅವನಿಗೆ ಮೋಹವೆಲ್ಲಿ ? ಶೋಕವೆಲ್ಲಿ ? ಎಲ್ಲ ವಿವಿಧತೆಯಲ್ಲೂ ಸದಾಕಾಲ ಅವನು ಏಕತೆಯನ್ನೇ ಕಾಣುತ್ತಾನೆ.

**ಈಶಾವಾಸ್ಯೋಪನಿಷತ್**

"ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ"

**ಸರ್ವಜ್ಞ**

ದಯವಿಲ್ಲದ ಧರ್ಮವದ್ಯಾವುದಯ್ಯಾ ?
ದಯವೇ ಬೇಕು ಸರ್ವ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ

**ಬಸವಣ್ಣ**

"ಉತ್ತಮ ಪ್ರಭುತ್ವಲೊಳಲೊಟ್ಟೆ....."

**ಪುರಂದರದಾಸ**

"ಸರ್ವಭೂತಗಳಲ್ಲೂ ತನ್ನನ್ನು ಕಾಣುತ್ತಾ ಎಲ್ಲವನ್ನೂ ಪ್ರೀತಿಸುವವನು ಸದಾ ನನ್ನಲ್ಲೇ ಇರುತ್ತಾನೆ... ವಿವಿಧತೆಯಲ್ಲಿ ಸಾಮರಸ್ಯದ ಏಕತೆಯ ದೃಷ್ಟಿ ಪ್ರೀತಿಯ ವಾತಾವರಣವನ್ನು ನಿರ್ಮಿಸಿ ವಿರಸವನ್ನು ನಾಶಮಾಡುತ್ತದೆ; ಸರ್ವಭೂತ ಹಿತಕರವಾಗಿರುತ್ತದೆ. ಹಾಗಾಗಿ, ಯಾರು ಎಲ್ಲೆಲ್ಲೂ ಏಕತೆಯನ್ನೇ ಕಾಣುತ್ತಾನೋ ಅವನೇ ಪರಮಯೋಗಿ. ಇಂಥ ಸಮನ್ವಯ ದೃಷ್ಟಿಯೇ ಧಾರ್ಮಿಕತೆ."

**ಭಗವದ್ಗೀತೆ**

❑

## ಹಿಂಸೆಯ ಸ್ವರೂಪಗಳು :

# ತಾಲಿಬಾನ್ ಕೃತಿಯನ್ನೂ ಮೀರಿಸಿದ ೨೦೦೨ರ ಗುಜರಾತ್ ವಿಕೃತಿ

ಅಫಘಾನಿಸ್ತಾನದಲ್ಲಿ ತಾಲಿಬಾನಿಗಳ ಹಿಂಸೆಗಿಂತಲೂ ಭೀಕರ ರೂಪದಲ್ಲಿ ಗುಜರಾತಿನಲ್ಲಿ ೨೦೦೨ರಲ್ಲಿ ನಡೆದ ಭೀಕರ ಜನಾಂಗೀಯ ಹಿಂಸೆಯು ಧರ್ಮದಲ್ಲಿ ನಂಬಿಕೆಯಿರುವ ನಮ್ಮಂಥ ಹಿಂದೂಗಳೆಲ್ಲರನ್ನೂ ತಲೆತಗ್ಗಿಸುವಂತೆ ಮಾಡಿದೆ.

"ಕೌಸರ್ ಬಾನು ಎಂಬ ೯ ತಿಂಗಳು ತುಂಬಿದ ತುಂಬು ಗರ್ಭಿಣಿಯನ್ನು ಸಾವಿರಾರು ಮಂದಿಯ ಎದುರಲ್ಲೇ ಶ್ರೀರಾಮನ ಹೆಸರಲ್ಲಿ ಅಟ್ಟಿಸಿಕೊಂಡು ಹೋಗಿ ಆಕೆಯ ಗರ್ಭ ಸೀಳಿದ್ದಾರೆ. ಶಿಶುವಿನ ಭ್ರೂಣವನ್ನು ಖಡ್ಗದಿಂದ ಚುಚ್ಚಿ ಹೊರಗೆಳೆದು, ಆ ಖಡ್ಗವನ್ನು ಹಿಡಿದುಕೊಂಡು 'ಜೈ ಶ್ರೀರಾಮ್', 'ಜೈ ಶ್ರೀರಾಮ್' ಎಂದು ಅಟ್ಟಹಾಸದಿಂದ ನರ್ತಿಸುತ್ತಾ, ಬಳಿಕ ಆ ಭ್ರೂಣವನ್ನು ನಿಗಿ ನಿಗಿ ಬೆಂಕಿಯಲ್ಲಿ ಸುಟ್ಟಿದ್ದಾರೆ, ತಾಯಿಯನ್ನೂ ಅಮಾನುಷವಾಗಿ ಸುಟ್ಟು ಹಾಕಿದ್ದಾರೆ." - (ಸಿದ್ಧಾರ್ಥ ವರದರಾಜನ್ : "**ದಿ ಮೇಕಿಂಗ್ ಆಫ್ ಆಫ್ ಟ್ರಾಜಡಿ**" (ಪೆಂಗ್ವಿನ್ ಬುಕ್ಸ್, ೨೦೦೨), ಪು. ೧೪೯.

"ಗೀತಾ ಬೆನ್ ಎಂಬ ೨೮ ವರ್ಷ ಪ್ರಾಯದ ಹಿಂದೂ ಮಹಿಳೆ ತನ್ನ ಸಂಗಾತಿಯಾದ ಮುನ್ನಾ ಭಾಯ್ ಸಲೀಂ ಶೇಕ್ ಎಂಬ ಗಂಡಸಿನ ಜೊತೆ ಅಹಮದಾಬಾದಿನ (ಗುಪ್ತನಗರ) ಬೀದಿಯಲ್ಲಿ ಸ್ಕೂಟರಿನಲ್ಲಿ

---

**ಲಂಕೇಶ್ ಪತ್ರಿಕೆ, ಮಾರ್ಚ್ ೧೦, ೨೦೦೪.**

ಹೋಗುತ್ತಿರುವಾಗ, ಸ್ಕೂಟರ್ ಚಲಿಸುತ್ತಿರುವಂತೆಯೇ ಆತನ ರುಂಡ ಕತ್ತರಿಸಿದ್ದಾರೆ. ಅಷ್ಟು ದೂರ ಹೋಗಿ ಸ್ಕೂಟರ್ ಬಿದ್ದಿದೆ. ಬಿದ್ದ ಸ್ಕೂಟರಿನಿಂದ ಎದ್ದು ಆ ಹೆಣ್ಮಗಳು ಹೆದರಿ ಓಡಲು ಆರಂಭಿಸಿದಾಗ, ಆಕೆಯನ್ನು ಬೆನ್ನಟ್ಟಿಸಿಕೊಂಡು ಆ ಗುಂಪು ಹೋಗಿದೆ. ಅದರಲ್ಲೊಬ್ಬಾತ ಕೂಗಿ, "ಆಕೆ ಹಿಂದೂ, ಆಕೆಯನ್ನು ಬಿಟ್ಟು ಬಿಡಿ" ಎನ್ನುತ್ತಾನೆ. ಆಗ ಇನ್ನೊಬ್ಬಾತ "ಆಕೆ ಹಿಂದೂವಾದರೇನಂತೆ? ಮುಸ್ಲಿಮನ ಜೊತೆಗಿಲ್ಲವೇ?" ಎಂದು ಹೊಟ್ಟೆಗೆ ತಿವಿಯುತ್ತಾನೆ. ಧರೆಗುರುಳಿದ ಆಕೆಯನ್ನು ಮತ್ತೂ ಬಿಡದೆ ಬೆತ್ತಲೆ ಮಾಡಿ, 'ಗ್ಯಾಂಗ್ ರೇಪ್' ಮಾಡಿದ್ದಾರೆ." (ಅದೇ ಪುಸ್ತಕ ಪುಟ. ೧೭೪-೭೫)

ಈ ಮಹಾದುರಂತ ಕಥನದ ಭಾಗವಾದ ಇಂಥ ಕಥಾನಕಗಳು ಒಂದಲ್ಲ, ಎರಡಲ್ಲ. ಮಕ್ಕಳ ಎದುರೇ ಪ್ರಾಯಕ್ಕೇ ಬರದ ಎಳವೆ ಅಕ್ಕನನ್ನು, ತಾಯಿಯನ್ನು, ಅಜ್ಜಿಯನ್ನೂ ಬಿಡದೆ, ರೇಪ್ ಮಾಡಿದ, ಕೊಂದ, ಸುಟ್ಟ ನೂರಾರು ಘಟನೆಗಳು ದಾಖಲೆಯಾಗಿವೆ. ದೆಹಲಿಯಲ್ಲಿ ಪ್ರಧಾನಿಯನ್ನು ಕಂಡು ತಮ್ಮ ಅಳಲನ್ನು ಹೇಳಿಕೊಳ್ಳಲು ಬಂದ ನಿರ್ಗತಿಕ ಮಕ್ಕಳು, ತಮ್ಮ ದುಗುಡ - ತಲ್ಲಣಗಳನ್ನು ಪತ್ರಿಕೆಗಳಿಗೆ ಹೇಳಿಕೊಂಡಿದ್ದಾರೆ. ಈ ನೊಂದ ಹೃದಯಗಳಿಗೆ ನ್ಯಾಯ - ಭದ್ರತೆಗಳು ದೊರಕದೆ, ಕೇವಲ ಅಹಿಂಸೆಯ ಭಜನೆ ಫಲಕಾರಿಯಾದೀತೆ ? ಇಂಥ ಕ್ರೌರ್ಯವನ್ನು ಪತ್ರಿಕೆಗಳಲ್ಲಷ್ಟೇ ಖಂಡಿಸಿದರೆ ಹಿಂಸೆ ನಿಲ್ಲುವುದಿಲ್ಲ. 'ಅದರ ಬಗ್ಗೆ ಮಾತಾಡಲೇ ಬಾರದು,' 'ಅದನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬಾರದು', 'ವಿಶ್ಲೇಷಿಸಬಾರದು', ಎಂದರೆ, ಆ ದುಃಖ - ದುಮ್ಮಾನಗಳನ್ನು ತಾತ್ಕಾಲಿಕವಾಗಿ ಬಲಾತ್ಕಾರದಿಂದ ಅದುಮಿಹಿಡಿದಂತೆ.... ಇದರಿಂದ ಹಿಂಸೆ ಕೊನೆಗೊಳ್ಳುವುದಿಲ್ಲ. ಅದು ಮತ್ತೆ ಮತ್ತೆ ವಿಕಾರರೂಪದಲ್ಲಿ ಭುಗಿಲೇಳುತ್ತಲೇ ಇರುತ್ತದೆ. ಹಿಂಸೆಯ ಮೂಲವನ್ನೇ ತೀವ್ರವಾಗಿ ಶೋಧಿಸಿ, ಅದಕ್ಕೆ ಪರಿಹಾರ ಕಂಡುಕೊಳ್ಳದ ಹೊರತು ಹಿಂಸೆ ನಿಲ್ಲುವುದಿಲ್ಲ. ರಕ್ತ ಚೆಲ್ಲಿದಾಗ, 'ರಕ್ತ - ರಕ್ತ' ಎಂದು ಹೆದರಿ, ಓಡುವುದರಿಂದ ಹಿಂಸೆಯನ್ನು ನಿಲ್ಲಿಸಲು ಸಾಧ್ಯವಿಲ್ಲ. ರಕ್ತ ಚೆಲ್ಲುವ ಮೂಲಕ್ಕೇ ನೇರ ಕೈ ಹಾಕಿದಾಗ ಮಾತ್ರ ರಕ್ತ ಹರಿಯುವುದನ್ನು ತಡೆಯಬಹುದು. ಹಿಂಸೆಗೆ ನೇರ ಮುಖಾಮುಖಿಯಾಗುವುದು ಅತ್ಯಂತ ಅವಶ್ಯಕ.

* * *

ತಾಲಿಬಾನಿಗಳೂ ಹೆಂಗಸರನ್ನು ಗುಂಡಿಕ್ಕಿ ಕೊಂದಿದ್ದಾರೆ. ಆದರೆ ಆ ಕೊಲೆಗಳು " ಹೆಂಗಸರು ಬುರ್ಖಾ ಹಾಕುತ್ತಿಲ್ಲ", "ಧರ್ಮದ ನೀತಿ-ನಿಯಮಗಳನ್ನು ಸರಿಯಾಗಿ ಪರಿಪಾಲಿಸುತ್ತಿಲ್ಲ" ಎಂಬೆಲ್ಲ ಧಾರ್ಮಿಕ ಕಾರಣಗಳಿಗಾಗಿ ನಡೆದಿವೆ. ತಾಲಿಬಾನಿಗಳು ಹೆಣ್ಣುಗಳ ಜೊತೆ ವಿಕೃತ ಕಾಮಿಗಳಾಗಿ ವರ್ತಿಸಿದ ನಿದರ್ಶನಗಳು ಕಡಿಮೆ. ಆದರೆ ಗುಜರಾತಿನಲ್ಲಿ ಧಾರ್ಮಿಕ ಕಾರಣಕ್ಕೂ ಮೀರಿ ಕಾಮ ಪ್ರೇರಿತ ವಿಕೃತ ಹಿಂಸಾರತಿ ವಿಜೃಂಭಿಸಿದೆ! ಇಂಥಲ್ಲಿ ಧಾರ್ಮಿಕತೆಯ ಲವಲೇಶವಾದರೂ ಇರಲು ಸಾಧ್ಯವೇ ?

* * *

ಈ ಜನಾಂಗೀಯ ಹತ್ಯೆ, ಋಷಿಗಳ, ಸಂತರ ಉದಾರ ಪರಂಪರೆಯ ಬಗ್ಗೆ ಅಭಿಮಾನ

ಪಡುವ ಕೋಟ್ಯಂತರ ಹಿಂದೂ ಧಾರ್ಮಿಕರ ಎದೆ ನಡುಗಿಸಿದೆ, ಗರ್ಭಕ್ಕೆ ಆಘಾತ ನೀಡಿದೆ; ಮಾತ್ರವಲ್ಲ, ಮರ್ಯಾದಾ ಪುರುಷೋತ್ತಮ ಶ್ರೀರಾಮ ಈ ಕ್ರೌರ್ಯ ಕಂಡು ಎಂದೋ ಈ ದೇಶದ ನೆಲವನ್ನೇ ತ್ಯಜಿಸಿರಬಹುದು ಎಂಬ ಆತಂಕ ಕಾಡುತ್ತದೆ.

**ಕೋದಂಡ, ಆಭರಣ ಶ್ರೀರಾಮನಿಗೆ**

ಶ್ರೀ ರಾಮದೇವರ ಯಾವುದೇ ಪರಂಪರಾಗತ ಫೋಟೋ ನೋಡಿ. ಅದರಲ್ಲಿ ಶ್ರೀರಾಮ ಯಾವಾಗಲೂ ಸೀತಾಸಹಿತ ಸೀತಾರಾಮನಾಗಿಯೇ ಹೆಚ್ಚಾಗಿ ಕಾಣಸಿಕೊಳ್ಳುತ್ತಾನೆ. ಕೊರಳಲ್ಲಿರುವ ಹಾರಗಳಂತೆ, ಭುಜದಲ್ಲಿರುವ ಕೋದಂಡವೂ ಕೇವಲ ಆಭರಣದಂತೆ ಆತನ ಮೈಯ್ಯಲ್ಲಿ ಶೋಭಿಸುತ್ತಿರುತ್ತದೆ. ಸೌಮ್ಯ ಸ್ವರೂಪಿಯಾದ ಶ್ರೀರಾಮ, ಎಂದೂ ತೋಳುಬ್ಬಿಸಿದ ಕ್ರುದ್ಧ ರಾಮನಾಗಿ ಕೋದಂಡ ಕೈಯಲ್ಲಿ ಹಿಡಿದು ಯುದ್ಧಕ್ಕೆ ಹೊರಟವನಂತೆ ಯಾವ ಚಿತ್ರದಲ್ಲೂ ಪ್ರತಿಬಿಂಬಿತವಾಗಿಲ್ಲ. ಕ್ಯಾಂಡೋ ರಾಮ ಹಿಂದೂ ಧಾರ್ಮಿಕರು ಉಪಾಸಿಸುವ ಶ್ರೀ ರಾಮಚಂದ್ರ ಪ್ರಭುವಲ್ಲ. ಶ್ರೀರಾಮನ ಸಂಕೇತವೂ ಮಲಿನಗೊಂಡಿದೆ.

ದೇವರ ಮುಂದೆ ಜ್ಯೋತಿ ಹಚ್ಚುವ ಕೈ, ಜೀವಿಗಳಿಗೆ ಬೆಂಕಿಯಿಡಲು ಆರಂಭಿಸಿದರೆ, ರಕ್ತ ಚೆಲ್ಲುವುದೇ ದೇವರಿಗೆ ಬಿಡುವ ರಕ್ತ ತರ್ಪಣವೆಂದಾದರೆ, "ಮನೆಮನೆಗಳಲ್ಲಿ ಖಡ್ಗ ಉಪಾಸನೆ ಮಾಡಿ ಮತ್ತು ಆ ಖಡ್ಗದಿಂದ ದಿನಾಲೂ ಇನ್ನೊಂದು ಕೋಮಿನವನ ರಕ್ತ ಹರಿಸಿ ಅದನ್ನು ಹಣೆಯಲ್ಲಿ ತಿಲಕ ಇಟ್ಟುಕೊಳ್ಳಿ", "ಚರ್ಚುಗಳನ್ನು ಸುಟ್ಟುಹಾಕಿ", "ರಾಮ ಪಟ್ಟಕ್ಕೆ ಅನ್ಯ ಕೋಮಿನ ದೇವರು ಚಟ್ಟಕ್ಕೆ", "ನರಹಂತಕ ದಾರಾಸಿಂಗ್‌ನ ಫೋಟೋ ಮನೆಮನೆಯಲ್ಲಿಟ್ಟು ಪೂಜೆ ಮಾಡಿ" ಎಂಬುದೆಲ್ಲಾ ಹಿಂದೂ ಸಮಾಜೋತ್ಸವಗಳ (ಉಡುಪಿ) ಘೋಷಣೆಗಳಾದರೆ, ಹಿಂದೂ ಧರ್ಮದ ನಾಶಕ್ಕೆ 'ಅನ್ಯ'ರು ಬೇಕೆ ? ಜೀವ ಪಾವಿತ್ರ್ಯತೆಯ ಕಲ್ಪನೆಯೇ ಇಲ್ಲದ ಮಂದಿ ಧಾರ್ಮಿಕರಾದಾರೇ ? ತಮ್ಮ ತಮ್ಮ ಧರ್ಮಕ್ಕೆ ಇಂಥ ಮಂದಿ ಕಳಂಕ ಪ್ರಾಯರಾಗಲಾರರೇ? ಪಾವಿತ್ರ್ಯತೆಯ ಭಾವನೆ ಎಲ್ಲ ಧರ್ಮಗಳ ಅಡಿಪಾಯ. ಈ ದೃಷ್ಟಿಯಲ್ಲಿ ಜೀವ ಹಿಂಸೆಯನ್ನು ಪ್ರಚೋದಿಸುವ ಮೂಲ ಭೂತವಾದಿಯು ಧರ್ಮ ವಿರೋಧಿ ನಾಸ್ತಿಕನಾದಾನು. ಧರ್ಮವನ್ನೇ ಬದುಕಿನ ಉಸಿರನ್ನಾಗಿ ಮಾಡಿಕೊಂಡ ಅಸಂಖ್ಯ ಅಮಾಯಕ ಹಿಂದೂಗಳ ಬುದ್ಧಿಗೆ, ಈ ಘೋರ ಪಾತಕಗಳ ಧರ್ಮಾಂಧತೆ ನಿಲುಕುವುದಿಲ್ಲ.

**ನನ್ನ ಅಮ್ಮನ ಧರ್ಮ**

ಬಾಬ್ರಿ ಮಸೀದಿ ಕೆಡವಿದನ್ನು ಕೇಳಿ "ಇನ್ನೊಬ್ಬರ ದೇವ ಮಂದಿರವನ್ನು ಹಾಳು ಮಾಡುವುದು ಸರಿಯೇ ? ನಮ್ಮಂತೆಯೇ ಅದು ಅವರ ಪವಿತ್ರ ಸ್ಥಳವಲ್ಲವೇ ? ಇದು ದೇವರು ಮೆಚ್ಚುವ ಕೆಲಸವೇ? ಇಂಥವರು ಧಾರ್ಮಿಕರು ಹೇಗೆ ಆದಾರು ? ಈ ದೇಶಕ್ಕೆ ಏನೋ ಕೇಡು ಕಾದಿದೆ" ಎಂದು ನೊಂದು ನುಡಿದ ನನ್ನ ಸಂಪ್ರದಾಯಸ್ಥ ಅಮ್ಮನ ಧರ್ಮ ನನ್ನದು. "ಮಸೀದಿಯ ಗುಮ್ಮಟಗಳು ಉರುಳಿದಾಗ, ವೇದಾಂತದ (ಉಪನಿಷತ್) ಗುಮ್ಮಟಗಳೇ ಕಳಗುರುಳಿದಂತೆ ನನಗನ್ನಿಸಿತು" ಎಂದು ದುಃಖದಿಂದ ಪತ್ರ ಬರೆದ ನನ್ನ ಆಧುನಿಕ ವಿದ್ಯಾವಂತ ತಮ್ಮನ ಧರ್ಮ ನನ್ನದು. "ಹಿಂದುತ್ವ"ದ ಧರ್ಮ ನನಗೆ ತಿಳಿಯುವುದಿಲ್ಲ. ಯಾವುದೇ ಧರ್ಮಕ್ಕೆ ಇನ್ನೊಂದು

ಧರ್ಮ, ದೇವರುಗಳ ಮೇಲೆ ಗೌರವ ಭಾವನೆಯಿಲ್ಲದಿದ್ದರೆ ಯಾವುದೇ ಧರ್ಮದಲ್ಲಿ ರಾಮಕೃಷ್ಣ ಪರಮಹಂಸರಂತೆ ಅಂತಧರ್ಮೀಯವಾಗಿ ಎಲ್ಲ ಧರ್ಮಗಳ ಸಾರವನ್ನೂ ತಿಳಿದುಕೊಳಲಿಕ್ಕೆ ಅವಕಾಶವಿಲ್ಲದಿದ್ದರೆ, ಅಂಥ ಧರ್ಮ ದೀರ್ಘಾವಧಿಯಲ್ಲಿ ಮುಂದುವರಿಯಲಾರದು.

ಕಳೆದ ವರ್ಷ ಉಡುಪಿಯಲ್ಲಿ 'ರಥಬೀದಿ ಗೆಳೆಯರು' ಸಂಘಟನೆ ಸಂಘಟಿಸಿದ "ಅಹಿಂಸೆಯಿಂದ ಶಾಂತಿ ಸಾಮರಸ್ಯಗಳೆಡೆಗೆ" ಎಂಬ ರಾಷ್ಟ್ರೀಯ ಸಂವಾದವನ್ನು ಉದ್ಘಾಟಿಸುತ್ತಾ, ಟಿಬೆಟಿಯನ್ ಶ್ರೇಷ್ಠ ಬೌದ್ಧ ಸಂತ ಹಾಗೂ ಭಾರತದಲ್ಲಿರುವ ಟಿಬೆಟ್ ಸರಕಾರದ ಪ್ರಧಾನ ಮಂತ್ರಿ ಪ್ರೊ। ಸ್ಯಾಮ್‌ಧೊಂಗ್ ರಿಂಪೊಚೆ, "ಎಲ್ಲಿದೆ ನಿಜಧರ್ಮ ಜಗತ್ತಿನಲ್ಲಿ? ಎಲ್ಲ ಧರ್ಮಗಳೂ ಸತ್ತಿವೆ. ಧರ್ಮದ ಹೆಸರಿನಲ್ಲಿ ಎಲ್ಲೆಲ್ಲೂ ಸದ್ದುಗದ್ದಲ, ಆಡಂಬರಗಳನ್ನು ನಾವು ಕಾಣುತ್ತೇವೆ. ಆದರೆ ಧಾರ್ಮಿಕ ಜೀವನ ಮಾಯವಾಗಿದೆ, ಧಾರ್ಮಿಕ ಮನಸ್ಸು ಮುದುಡಿಕೊಂಡಿದೆ, ಧಾರ್ಮಿಕತೆ ನಶಿಸಿಹೋಗಿದೆ" ಎಂದು ವಿಷಾದ ವ್ಯಕ್ತಪಡಿಸಿದ್ದರು. ಧಾರ್ಮಿಕರೆಲ್ಲರೂ ನಾವು ನಾವೇ ಈ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗಿದೆ.

❐

# ಭೂಮಿ ಬೇಜಾರು ಬರಿಸುವುದಿಲ್ಲ

ನೋಡಿ ನೋಡಿದಷ್ಟು ಕ್ಷಣಕ್ಷಣಕ್ಕೂ ಬೆರಗುಗೊಳಿಸುವ ನಮ್ಮೀ ಭೂಮಿ ಬೇಜಾರು ಬರಿಸುವುದಿಲ್ಲ. ಕೊನೆಯಿರದ ಉಬ್ಬುತಗ್ಗಿನ ಬಳಕು ರೇಖೆಗಳು, ಮೌನವೇ ಮಡುಗಟ್ಟಿರುವ ಕಾಡು-ಮೇಡು-ಕಣಿವೆಗಳು, ಪರಿಶುದ್ಧ ಮಣ್ಣು, ಭೋರ್ಗರೆವ ಸಾಗರ, ಕಲಕಲರವದೊಡನೆ ಹರಿಯುವ ನದಿಗಳು, ಧುಮ್ಮಿಕ್ಕುವ ಜಲಪಾತಗಳು, ಕೆರೆ-ಹಳ್ಳ-ಮದಗಗಳು, ಅಮೂಲ್ಯ ಮರ-ಗಿಡ-ಬಳ್ಳಿಗಳ ಹಸಿರಿನ ರಾಶಿ ರಾಶಿ, ಮತ್ತು ಅವುಗಳ ನಡುವೆ ಸುಂಯ್‌ಗುಡುವ ನಸುಗಾಳಿ, ವಿಧವಿಧದ ಪಶುಪಕ್ಷಿ ಸಂಕುಲಗಳು, ನಾನಾ ಜಾತಿಯ ಉರಗಗಳು, ಅಪೂರ್ವ ಕ್ರಿಮಿಕೀಟ ಮತ್ತು ಅವುಗಳ ನಾದ-ನಿನಾದಗಳು - ಇವೆಲ್ಲವೂ ಭೂಮಿಯ ಜೀವಂತಿಕೆಯನ್ನು ಸಾರುವ ಅದ್ಭುತ ಅಭಿವ್ಯಕ್ತಿಗಳು. ಸಕಲ ಜೀವರಾಶಿಗಳನ್ನು ಒಂದುಗೂಡಿಸುವ ಈ ಭೂಮಿ ಸದಾ ಕಂಪಿಸುತ್ತಿರುವುದರಿಂದಲೇ ನಾವು, ನೀವು ಇದ್ದೇವೆ; ಭೂಮಿಯ ಮೇಲಿನ ಎಲ್ಲವೂ ಇವೆ. ಹಾಗಾಗಿ ಈ ಭೂಮಿಗೆ ಏನು ಸಂಭವಿಸಲಿದೆಯೋ ಅದು ನಮಗೂ ಸಂಭವಿಸಲಿದೆ.

ಭೂಮಿಯಲ್ಲಿ ಇರುವ ಎಲ್ಲವೂ ನಮ್ಮ ಬದುಕಿನ ಉಲ್ಲಾಸ-ಸಂಭ್ರಮಗಳನ್ನು ಹೆಚ್ಚಿಸಿ ನಮ್ಮನ್ನು ಪೊರೆಯುವ ಬಂಧುಗಳು. ಈ ಸಂಭ್ರಮಗಳಿಗೆ ಕುರುಡಾಗಿ ಏಕಾಕಿಯಾಗಿ ಬದುಕುವ ಮನುಷ್ಯನ ಬಾಳು ಬರಡು. ಅಜ್ಞಾನ - ಬಿಂಕಗಳಿಂದ ನಮ್ಮ ಬಂಧುಗಳ ಮೇಲೆ ಆಕ್ರಮಣ ನಡೆಸಿದರೆ, ಈ ಭೂಮಿಯಲ್ಲಿ ನಾವು ಒಂಟಿತನದಿಂದ ನಿರ್ಜೀವರಾಗ ಬೇಕಾದೀತು.

ಬದುಕೆಂಬುದು ಸಂಬಂಧಗಳ ಸರಮಾಲೆ. ಪರಸ್ಪರ ಪೂರಕ ಸಂಬಂಧಗಳಿಂದಲೇ ಸೃಷ್ಟಿಯಲ್ಲಿ ನಮಗೆ ಸ್ಥಾನವೇ ವಿನಾ ಸ್ವತಂತ್ರವಾಗಿ

---

ಲಂಕೇಶ್ ಪತ್ರಿಕೆ, (ಸಾಪ್ತಾಹಿಕ), ಬೆಂಗಳೂರು, ಜುಲೈ ೫, ೨೦೦೦

ಅಲ್ಲ. ಸೃಷ್ಟಿಯಲ್ಲಿ ಸಂಪೂರ್ಣ ಸ್ವಾತಂತ್ರ್ಯವೆಂಬುದೇ ಇಲ್ಲ. ಹಾಗಾಗಿ ಸಂಬಂಧಗಳು ಪವಿತ್ರ. ನಮ್ಮ ಸುತ್ತಮುತ್ತಲಿರುವ ಸಕಲ ಸಂಗತಿಗಳ ಜತೆಗಿರುವ ಪರಸ್ಪರ ಸಂಬಂಧಗಳನ್ನು ಅರಿತು ಎಲ್ಲದರ ಜತೆ ಸಾಮರಸ್ಯದಿಂದ ಬಾಳುವುದೇ ಜೀವನದ ಆತ್ಯಂತಿಕ ಮೌಲ್ಯ, ಬದುಕುವ ಕಲೆ. ಆದರೆ ಈ ಅರಿಯುವಿಕೆಗೆ ಮನುಷ್ಯನಿಗೆ ಸಾಕಷ್ಟು ಬಿಡುವು, ನೆಮ್ಮದಿ, ಸಮಾಧಾನಗಳು ಬೇಕು. ಯಾವೊಂದು ಠಾಕು ಠೀಕೂ ಇಲ್ಲದೆ ಹಗುರಹಗುರವಾಗಿ ಇರಲು ಕಲಿಯಬೇಕು. ಒರಟು ಒರಟಾದ ಮರದ ಗಂಭೀರ ನಾದವನ್ನು ಕೇಳುವ, ಹೂ ಅರಳುವ ನಿಶ್ಶಬ್ದದಲ್ಲಿರುವ ಶಬ್ದವನ್ನು ಆಲಿಸುವ, ಬೀಜ ಮೊಳೆಯುವ ಧ್ವನಿಗೆ ಕಿವಿಗೊಡುವ, ಭೂಮಿಯ ಉಸಿರಾಟದ ಲಯವನ್ನು ಅನುಭವಿಸುವ ಕಟ್ಟೆಚ್ಚರದ ಶಾಂತ ಸಂವೇದನಾಶೀಲ ಮನಸ್ಸುಬೇಕು, ಹೆಪ್ಪುಗಟ್ಟುವ ಮೌನಬೇಕು. ಭೂಮಿ ಗರ್ಭದ ಧ್ವನಿ ತರಂಗಗಳಿಗೆ ತನ್ನ ಜೀವನದ 'ಗತಿ'ಯನ್ನು ಮೇಳೈಸಿ ಬಾಳುವ ವ್ಯವಧಾನ ಬೇಕು.

ಭೂಮಿಯಲ್ಲೆಲ್ಲೂ ಅವಸರವಿಲ್ಲ. ಎಲ್ಲವೂ ಲಯಬದ್ಧವಾಗಿದೆ. ಮೌನವೇ ಮಡುಗಟ್ಟಿದೆ. ಆಧುನಿಕ ಮನುಷ್ಯ ಮಾತ್ರ ವೇಗಕ್ಕೊಳಪಟ್ಟಿದ್ದಾನೆ, ತಲ್ಲಣಗೊಂಡಿದ್ದಾನೆ, ಎಲ್ಲವನ್ನೂ ಗದ್ದಲಮಯ ಮಾಡಿದ್ದಾನೆ. ಧ್ಯಾನದ ಎಚ್ಚರದಿಂದ ಮನಸ್ಸನ್ನು ತಂಗಿಸುವ ಕಲೆಯನ್ನೇ ಮರೆತ ಮನುಷ್ಯ, ಎಂದಾದರೂ ತನ್ನ ಮೂಲಕ್ಕಿಳಿಯಲು ಸಾಧ್ಯವೇ ?

ಅವಸರದ ಅಪಾಯ

ಮಿಲಿಯಾಂತರ ವರ್ಷಗಳ ಹಿಂದೆ ಸೂರ್ಯನಿಂದ ಸಿಡಿದು ಬಂದ ಉರಿಗೋಲವಾದ ಈ ಭೂಮಿ ಕಾಲಕ್ರಮದಲ್ಲಿ ತಣ್ಣಗಾಗುತ್ತ ಬಂದು ಜೀವಿಗಳು ಉದಯವಾದುವೆಂದು ವಿಜ್ಞಾನಿಗಳು ಹೇಳುತ್ತಾರೆ. ಉರಿಗೋಲವಾಗಿದ್ದ ಆರಂಭದ ಹಂತದಲ್ಲಿ ಭೂಮಿಯ ವಾತಾವರಣದಲ್ಲಿ ಕಾರ್ಬನ್ ಡೈಆಕ್ಸೈಡ್ ಅನಿಲವೇ ತುಂಬಿದ್ದು ಜೀವಿಗಳ ಬದುಕಿಗೆ ಬೇಕಾದಷ್ಟು ಪ್ರಮಾಣದಲ್ಲಿ ಆಮ್ಲಜನಕವಿರಲಿಲ್ಲ. ಹಾಗಾಗಿ ಭೂಗೋಳದಲ್ಲಿ, ಇಂದು ನಾವು ಕರೆಯುತ್ತಿರುವ, 'ಗ್ರೀನ್‌ಹೌಸ್' ಸ್ಥಿತಿಯಿತ್ತು. ಇಂಥ ಸ್ಥಿತಿಯಲ್ಲಿ, ಸಂಕೀರ್ಣವಾದ ಶ್ರೇಷ್ಠ ಜಾತಿಯ ಜೀವಿ (higher forms of life)ಗಳ ವಿಕಾಸ ಸಾಧ್ಯವಿರಲಿಲ್ಲ.

ಸೃಷ್ಟಿಯ ವಿಕಾಸ ಮುಂದುವರಿದಂತೆ ತನ್ನ ಸೃಷ್ಟಿಯಾಟದಲ್ಲಿ ಭೂತಾಯಿ ಶ್ರೇಷ್ಠ ಜೀವಿಗಳನ್ನು ಹೆರಲು ಬಯಸಿದಳೋ ಏನೊ. ತನ್ನ ಸೃಷ್ಟಿಯ ಅನಂತ ಸಾಧ್ಯತೆಗಳನ್ನು ತಾನೇ ನೋಡಿಕೊಂಡು ರಮಿಸುವ ಆಕೆ, ಅದಕ್ಕೊಂದು ಉಪಾಯ ಕಂಡುಕೊಂಡಳು. ವಾತಾವರಣದಲ್ಲಿ ಹೆಚ್ಚಿರುವ ಕಾರ್ಬನ್‌ನ ಅಂಶವನ್ನು ತನ್ನ ಗರ್ಭದೊಳಗೆ ಸೇರಿಸಿಕೊಂಡು ವಾತಾವರಣವನ್ನು ಪರಿಶುದ್ಧಗೊಳಿಸುತ್ತ ಶ್ರೇಷ್ಠ ಜೀವಜಾಲದ ಆಗಮನಕ್ಕೆ ಭೂಮಿಕೆ ಅಣಿಗೊಳಿಸುವ ಕಾಯಕಕ್ಕೆ ಆರಂಭಿಸಿದಳು. ಆ ಹಂತದಲ್ಲಿ ಮೊದಲಿಗೆ ಕಡಿಮೆ ಬೆಳಕು, ಕಡಿಮೆ ಆಮ್ಲಜನಕವಿರುವ ಪರಿಸರದಲ್ಲೂ ಬೆಳೆಯುವ 'ಫರ್ನ್'ನಂತಹ ಸಸ್ಯಗಳು ಹುಟ್ಟಿ ಭೂಮಿಯಿಡೀ ಹಬ್ಬಿಕೊಂಡವು. ಅವು ಕಾರ್ಬನ್ ಡೈ ಆಕ್ಸೈಡನ್ನು ತಮ್ಮೊಳಗೆ ಹೀರಿ, ಆಮ್ಲಜನಕವನ್ನು ಹೊರಬಿಡುತ್ತಾ, ಹುಟ್ಟಿದ ಕೆಲವೇ ದಿನಗಳಲ್ಲಿ ದೈತ್ಯಾಕಾರವಾಗಿ ಬೆಳೆಯುತ್ತ, ಕಾಲವಶವಾಗುತ್ತ ಭೂಗರ್ಭ ಸೇರಲು ಆರಂಭಿಸಿದುವು. ಇದರ ಜತೆ, ಭೂಮಿ ಕ್ರಮೇಣ ತಣ್ಣಗಾಗುತ್ತಿದ್ದಂತೆ ಒಂದು ಅನುಕೂಲ ಕಾಲಘಟ್ಟದಲ್ಲಿ ಮಳೆ ಬರಲು ಆರಂಭವಾಯಿತು.

ಸಾವಿರಾರು ವರ್ಷ ಒಂದೇ ಸವನೆ ಸುರಿಯುತ್ತಿದ್ದ ಜಡಿಮಳೆಯಿಂದ, ಮತ್ತು ಭೂಕಂಪ ಮೊದಲಾದ ನೈಸರ್ಗಿಕ ವಿಪ್ಲವಗಳಿಂದ, ಈ ಅಖಂಡಸಸ್ಯರಾಶಿಗಳು ಮಣ್ಣು ಪಾಲಾಗುತ್ತಿದ್ದಂತೆ ವಾತಾವರಣದಲ್ಲಿದ್ದ ಹೆಚ್ಚಿನ ಕಾರ್ಬನ್ ಡೈ ಆಕ್ಸೈಡ್ ಭೂ ಗರ್ಭ ಸೇರಿ, ಕಾಲಾಂತರದಲ್ಲಿ ಕಲ್ಲಿದ್ದಲು, ಪೆಟ್ರೋಲು ಮುಂತಾದ ಇಂಧನಗಳಾಗಿ ಮಾರ್ಪಾಟಾಗಿ ಶೇಖರವಾಯಿತು. ಊಹಿಸಲೂ ನಿಲುಕದ ರೀತಿಯಲ್ಲಿ ಮಿಲಿಯಾಂತರ ವರ್ಷ ನಡೆದ ಈ ಅಖಂಡ ಸೃಷ್ಟಿ ಯಜ್ಞದಲ್ಲಿ ಕಾರ್ಬನ್ ಆಹುತಿ ಗೊಳ್ಳುತ್ತಾ ವಾತಾವರಣ ನಿರ್ಮಲವಾಗುತ್ತಿದ್ದಂತೆ ಈ ಅನುಕೂಲ ಪರಿಸರದಲ್ಲಿ ಸಸ್ಯ ಪಶು, ಪಕ್ಷಿ ಜೀವಿಗಳು ಅಸಂಖ್ಯ ವೈವಿಧ್ಯತೆಗಳಿಂದ ಮೂಡಿಬರಲು ಆರಂಭವಾದುವು. ಮೊನ್ನೆ ಮೊನ್ನೆ ತಾನೇ ಮನುಷ್ಯನೂ ಮೂಡಿ ಬಂದ.

ಆದರೆ ದುರಾದೃಷ್ಟವಶಾತ್, ಕೋಟ್ಯಂತರ ವರುಷದಿಂದ ಕಾರ್ಬನ್ ಡೈ ಆಕ್ಸೈಡ್ ಸಾವಧಾನವಾಗಿ ಭೂಗರ್ಭ ಸೇರಿ ರೂಪಾಂತರಗೊಂಡು ಶೇಖರವಾಗಿರುವ ಕಲ್ಲಿದ್ದಲು, ಪೆಟ್ರೋಲ್ ದಾಸ್ತಾನನ್ನು, ಮನುಷ್ಯ ತನ್ನ ಅತಿರೇಕ ದಾಹದಿಂದ ಭೂಗರ್ಭ ಸೀಳಿ ಕಳೆದ ಕೇವಲ ನೂರು ವರ್ಷಗಳಲ್ಲಿ ಅವಸರವಸರವಾಗಿ ಹೊರಹಾಕುತ್ತ ವಾತಾವರಣದಲ್ಲಿ ಮತ್ತೊಮ್ಮೆ ಕಾರ್ಬನ್ ಡೈ ಆಕ್ಸೈಡ್ ಅಂಶವನ್ನು ಹೆಚ್ಚಿಸುತ್ತ 'ಗ್ರೀನ್ ಹೌಸ್' ಸ್ಥಿತಿಗೆ ಕಾರಣನಾಗುತ್ತಿದ್ದಾನೆ. ಈ ಅಜ್ಞಾನ ಪ್ರೇರಿತ 'ಅಸಹ್ಯ' (unsustainable) ಹೊಟ್ಟೆ ಬಾಕ (consumerist) ಜೀವನ ಶೈಲಿಯಿಂದ ಮನುಷ್ಯ ಉಳಿಯುವುದಾದರೂ ಹೇಗೆ ? ಇದು ಇಂದು ನಮ್ಮೆದುರು ಇರುವ ಮೂಲಭೂತ ಪ್ರಶ್ನೆ.

**ಸ್ವಾತಂತ್ರ್ಯದಿಂದ ಸ್ವಚ್ಛಂಧತೆಯೆಡೆಗೆ**

ಮಣ್ಣು, ನೀರು, ಗಾಳಿ ಈ ಭೂಮಿಯ ಮೂಲದ ಆಸ್ತಿ. ಭೂಮಿಯಲ್ಲಿರುವ ಸಮಸ್ತ ಜೀವಿಗಳು ನಿರ್ಮಿಸುವ ಕೊಳೆಯನ್ನು ಮಣ್ಣು ನಿರಂತರವಾಗಿ ಶುದ್ಧೀಕರಿಸುತ್ತಲೇ ಇರುತ್ತದೆ. ಇವಿಲ್ಲದೆ ಮನುಷ್ಯ ಈ ಭೂಮಿಯಲ್ಲಿ ಬಾಳಲಾರ. ಈ ಮೂರೂ ಪರಿಶುದ್ಧವಾಗಿರಬೇಕು. ಆದರೆ ಭೋಗ ಜೀವನವನ್ನು ಮೈಮೇಲೇ ಆವಾಹಿಸಿಕೊಂಡ ಮನುಷ್ಯ ಪ್ರಕೃತಿದತ್ತವಾಗಿ ತನ್ನ ಅಂತರ್ಯದಲ್ಲಿ ಹುದುಗಿರುವ ಈ ನೆಲದ ವಿವೇಕವನ್ನು ಸಂಪೂರ್ಣ ಕೈಬಿಟ್ಟು, ಗಾಳಿ, ನೀರು, ಮಣ್ಣು, ತನಗೆ ಬೇಕುಬೇಕಾದಂತೆ ಚೆಲ್ಲಾಟವಾಡಬಹುದಾದ ತನ್ನ ಸ್ವಂತದ ನಿರ್ಜೀವ ಆಸ್ತಿಯೆಂಬಂತೆ ಬಳಸುತ್ತಿದ್ದಾನೆ.

ಪರಿಶುದ್ಧ ಮಣ್ಣು, ನೀರು, ಗಾಳಿಗಳ ಲಭ್ಯತೆಯಲ್ಲಿ ನಾವು ಕೊನೆತನಕ ಸ್ವತಂತ್ರರಾಗಿರಬೇಕಾದರೆ ಇವುಗಳ ಬಳಕೆಯಲ್ಲಿ ಸ್ವಚ್ಛಂದತೆ ಶೋಭಿಸುವುದಿಲ್ಲ. ಸ್ವಾತಂತ್ರ್ಯವೆಂದರೆ ಸ್ವಚ್ಛಂದತೆಯಲ್ಲ, ಲಭ್ಯವಿರುವ ಮೂಲಭೂತ ಅವಶ್ಯಕತೆಗಳನ್ನು ವಿವೇಚನೆಯಿಂದ ಬಳಸುವ ಜವಾಬ್ದಾರಿ. ಸ್ವಚ್ಛಂದತೆ ಆತ್ಯಂತಿಕವಾಗಿ ನಮ್ಮನ್ನು ಪರಾವಲಂಬಿಗಳನ್ನಾಗಿ ಮಾಡುತ್ತದೆಯೇ ವಿನಾ ಸ್ವಾತಂತ್ರ್ಯದತ್ತ ಒಯ್ಯುವುದಿಲ್ಲ. ಉದಾಹರಣೆಗೆ, ಗುಜರಾತು, ಸೌರಾಷ್ಟ್ರಗಳಲ್ಲಿ ಇಂದು ನಮ್ಮ ಕಣ್ಣೆದುರಿರುವ ದೃಶ್ಯ ಸಾಕು. ಕುಡಿಯಲೂ ನೀರಿಲ್ಲದೆ, ಕಲುಷಿತಗೊಂಡ ನೀರನ್ನೇ ಕುಡಿಯಬೇಕಾದ ಪರಿಸ್ಥಿತಿ ಬಂದಾಗ, ಮನುಷ್ಯ, ತನ್ನ ಜೀವನದಲ್ಲಿ ಕಟ್ಟಿಕೊಂಡ ಎಲ್ಲ ಉನ್ನತ ಮೌಲ್ಯಗಳೂ,

ಭಿಂಕ, ಪ್ರತಿಷ್ಠೆಗಳೂ ಕುಸಿದುಬಿದ್ದು, ನೀರನ್ನು ಪಡೆಯುವುದೊಂದೇ ಪರಮಮೌಲ್ಯವಾಗಿ ಆತನ ಮೈಮನಗಳನ್ನೆಲ್ಲಾ ವ್ಯಾಪಿಸಿಬಿಡುತ್ತದೆ. ಅನಾವಶ್ಯಕ ಆಡಂಬರದ ಆಧುನಿಕ ಸರಕುಗಳು ಸಿಗದಾಗ ಮನುಷ್ಯ ಪಶುವಾಗಲಿಕ್ಕಿಲ್ಲ. ತನ್ನನ್ನು ಸಲಹುವ ಮಣ್ಣು ಬರಡಾದರೆ, ನೀರ ಬತ್ತಿ ಹೋದರೆ ಮಾತ್ರ ಬೆಳಗಿನಿಂದ ಸಂಜೆಯವರೆಗೆ ಆಹಾರಕ್ಕಾಗಿ, ನೀರಿಗಾಗಿ ಪರದಾಡುತ್ತಾ ಆತ ರಾಕ್ಷಸನಾಗಿ ಬಿಡುತ್ತಾನೆ. ಆದರೆ ತನ್ನ ರಭಸದ ಬದುಕಲ್ಲಿ ಆತ ಈ ಸೂಕ್ಷ್ಮಗಳ ಬಗ್ಗೆ ಎಚ್ಚರ ತಪ್ಪಿದ್ದಾನೆ. ವಿವೇಕಯುತ ನಡವಳಿಕೆಗೆ ಬೇಕಾದ ತಾಳ್ಮೆ ಆತನ ಪೈಪೋಟೀ ಬದುಕಲ್ಲಿ ಮಾಯವಾಗಿದೆ. ಇದು ಯಾಕೆ ಹೀಗೆ ?

ಈ ಭೂಮಿಯಲ್ಲಿ ಮಿಲಿಯಾಂತರ ವರುಷದಿಂದ ಜೀವಿಸುತ್ತಿರುವ ಎಲ್ಲಾ ಜೀವಿಗಳು ಕೋಟಿ-ಕೋಟಿ ವರುಷದಿಂದ ಮಲ, ಮೂತ್ರ, ಕೊಳೆ, ತ್ಯಾಜ್ಯಗಳನ್ನು ನಿರ್ಮಿಸುತ್ತಲೇ ಇವೆ. ಬದುಕುವುದೆಂದರೇ, ಈ ದೇಹ ವಿಷವೇರದಂತೆ ನಿರಂತರವಾಗಿ ದೇಹದಿಂದ ಕೊಳೆ ಹೊರಹಾಕಿ ಶುದ್ಧೀಕರಿಸುತ್ತಿರುವುದಲ್ಲದೆ ಮತ್ತೇನು ?

ಈ ಅಸಂಖ್ಯ ಜೀವಿಗಳಿಂದ ನಿರ್ಮಾಣವಾಗುತ್ತಿರುವ ಜೈವಿಕ ಕೊಳೆಯ ಶುದ್ಧೀಕರಣ ಇದುವರೆಗೂ ಭೂಮಿಗೆ ಸಮಸ್ಯೆಯಾಗಲೇ ಇಲ್ಲ. ಆದರೆ ಕಳೆದ ಕೆಲವೇ ದಶಕಗಳಲ್ಲಿ ಮನುಷ್ಯ ನಿರ್ಮಿಸಿದ ಕೊಳೆಯ ರಾಶಿ ರಾಶಿ ಇಂದು ಆತನನ್ನೇ ನುಂಗುತ್ತಾ ಈ ಭೂಮಿಗೇ ಸಮಸ್ಯೆಯೊಡ್ಡುತ್ತಿದೆಯಲ್ಲಾ, ಇದು ಯಾಕೆಂದು ನಾವು ಸಾವಧಾನದಿಂದ ಯೋಚಿಸಿದ್ದೇವೆಯೇ?

### ನಿತ್ಯ 'ವರ್ತಮಾನ'ದ ಭೂಮಿ

ನಿಸರ್ಗವನ್ನು ನಾವು ಸೂಕ್ಷ್ಮವಾಗಿ, ಸಂವೇದನಾಶೀಲರಾಗಿ ಗಮನಿಸಿದರೆ ಈ ಪ್ರಶ್ನೆಗೆ ಉತ್ತರ ಅಲ್ಲೇ ದೊರೆಯುತ್ತದೆ; ಬದುಕುವ ಕಲೆಯೂ ತಿಳಿಯುತ್ತದೆ. ಸಕಲ ಜೀವ ಜಾತಿಗಳೂ ಈ ಭೂಮಿಯಲ್ಲಿ 'ಇಲ್ಲಿ', 'ಈಗ' ವರ್ತಮಾನದಲ್ಲಿ ಮಿತುಶೀಲತೆಯಿಂದ (austerity) ಬದುಕುತ್ತಿವೆ. ಹಾಗಾಗಿ, ಅವಕ್ಕೆ ನಿನ್ನೆಯ ಚಿಂತೆಯಿಲ್ಲ, ನಾಳೆಯ ಕಾತರವಿಲ್ಲ. ಯಾವ ದುರಾಸೆ, ಮಹತ್ವಾಕಾಂಕ್ಷೆಗಳೂ ಇಲ್ಲದೆ, ಬದುಕು ಹಗುರವಾದ ಆಟವಾಗಿ ಮಿತುಶೀಲತೆ, ಬದುಕುವ ಕ್ರಿಯೆಯಲ್ಲಿ ತಂತಾನೇ ಅಡಕವಾಗಿದೆ.

ಪ್ರಕೃತಿಯಲ್ಲಿ ಎಲ್ಲೂ ಸ್ವಚ್ಛಂದತೆ ಕಾಣುವುದಿಲ್ಲ. ಸಸ್ಯ, ಪ್ರಾಣಿ ಜಗತ್ತಿನಲ್ಲೆಲ್ಲೂ ಸ್ವಚ್ಛಂಧತೆ, ಎಲ್ಲವನ್ನೂ ಗಬಗಬನೆ ಮುಕ್ಕುವ, ಭೋಗಿಸುವ ಅತಿ ಇಂದ್ರಿಯ ಲೋಲುಪತೆ, ಕೂಡಿಡುವ ದಾಹ, ಅತಿಯಾದ ಹಿಂಸೆ ಕಾಣುವುದಿಲ್ಲ. ತಮತಮಗೆ ಅವಶ್ಯವಿದ್ದಷ್ಟು ಮಾತ್ರ ಪ್ರಕೃತಿಯಿಂದ ಪಡೆಯುತ್ತಾ ಜಗತ್ತನ್ನು ಅಪವಿತ್ರಗೊಳಿಸದೆ ಪರಸ್ಪರ ಸಹಕಾರ ಭಾವದಿಂದ ತಾವು ಬಾಳುತ್ತಿವೆ. ಹಾಗಾಗಿ ಅವುಗಳ ಬದುಕಿಂದ ಪ್ರಕೃತಿಗೆ ಯಾವ ಶ್ರಮವೂ ಆಗಲಿಲ್ಲ. ತಾಯಿಗೆ ಮಗು ಮೊಲೆ ಹಾಲು ಚೀಪುವಾಗ ಶೋಷಣೆಯಾಗುತ್ತದೆಯೇ ? ಮನುಷ್ಯನೂ ಸಾಮಾನ್ಯವಾಗಿ ಈ ರೀತಿಯಲ್ಲೇ ನೆಲದ ಜತೆ ಹೊಕ್ಕಳ ಬಳ್ಳಿ ಸಂಬಂಧವಿಟ್ಟುಕೊಂಡೇ ಭೂಮಿಯನ್ನು ಗೌರವಿಸುತ್ತ ಬದುಕುತ್ತ ಬಂದ. ಅಲ್ಲೊಮ್ಮೆ ಇಲ್ಲೊಮ್ಮೆ ಅತಿ ಮಾಡಿದಾಗ ಭೂತಾಯಿಂದ ದಂಡಿಸಿಕೊಂಡು ತಿದ್ದಿಕೊಳ್ಳುತ್ತಿದ್ದ.

### ನಿನ್ನೆ - ನಾಳೆಗಳಲ್ಲೇ ಬದುಕುವ ಮನುಷ್ಯ

ಆದರೆ ಎಂದು ವಿಜ್ಞಾನವನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾ ಸೊಕ್ಕಿನಿಂದ ತಾನು ಈ ಭೂಮಿಯ ಒಡೆಯನೆಂದು ಭ್ರಮಿಸಿ, ಇಲ್ಲಿರುವ ಸಕಲ-ಸಂಗತಿಗಳೂ ತನ್ನ ಸುಖ-ಭೋಗಗಳನ್ನು ತಣಿಸಲು ಇರುವ ಸರಕೆನ್ನುವಂತೆ ಕೊಳ್ಳೆ ಹೊಡೆಯಲು ಆರಂಭಿಸಿದನೋ ಅಲ್ಲಿಂದ ಆರಂಭವಾಯಿತು ಸಮಸ್ಯೆ. ಈ ಭೂಮಿಯನ್ನು ಅವ್ಯಾಹತವಾಗಿ ಅಗಿಯಲು, ಬಗಿಯಲು, ಸಿಗಿಯಲು, ಒಡೆಯಲು, ಸೀಳಲು, ಹೀರಲು ಆರಂಭಿಸಿದ. ಮೊಲೆ ಹಾಲ ಜೊತೆ ತಾಯಿಯ ರಕ್ತವನ್ನೆ ಹೀರಲು ಆರಂಭಿಸಿದ. ಕಾಡುಗಳು ತಾನು ನಿರ್ಮಿಸಿದ ಕೊಳೆ ಕಳೆಯುವ ಯಂತ್ರಾಗಾರವೆಂದು ಪರಿಗಣಿಸಿದ. ತನ್ನ ಕಣ್ಣಿಗೆ ಮಬ್ಬು ಹಿಡಿಸಿಕೊಂಡು, ಭೂತಾಯಿಯ ಮೈಯನ್ನು ಸತತವಾಗಿ ಮಲಿನಗೊಳಿಸುತ್ತ ಮುನ್ನಡೆದ(?)

ಇದರ ಜತೆಯೇ, ವಿಜ್ಞಾನದ 'ಮೆಥೆಡ್'ನಿಂದ ಪ್ರಭಾವಿತನಾದ ಮನುಷ್ಯ ಅರ್ಥಶಾಸ್ತ್ರದ ಗುರಿಯನ್ನು ಬದಲಿಸಿದ. "ಮನುಷ್ಯನ ಬಯಕೆಗಳು ಅನಂತ. ಆ ಬಯಕೆಗಳನ್ನು ತೀರಿಸಲು ಇರುವ ಸಾಧನಗಳು ಸಾಂತ (limited). ಹಾಗಾಗಿ ಅನಂತ ಬಯಕೆಗಳನ್ನು ಗರಿಷ್ಠ ಪ್ರಮಾಣದಲ್ಲಿ ತೃಪ್ತಿ ಪಡಿಸಲು ನಮಗೆ ಲಭ್ಯವಿರುವ ಸಂಪನ್ಮೂಲವನ್ನು ಅತ್ಯಂತ ಸಮರ್ಪಕವಾಗಿ ಬಳಸಿ ಮನುಷ್ಯನ ಸುಖ ಹೆಚ್ಚಿಸುವುದೊಂದೇ ಅರ್ಥಶಾಸ್ತ್ರದ ಪ್ರಮುಖ ಕಾಳಜಿ" ಎಂದು ಆಧುನಿಕ ಅಭಿವೃದ್ಧಿ ಅರ್ಥಶಾಸ್ತ್ರಕ್ಕೆ ವ್ಯಾಖ್ಯೆ ಬರೆದ. ಹಾಗಾಗಿ, ಅರ್ಥಶಾಸ್ತ್ರದೊಳಗೆ ಅಂತರ್ಗತವಾಗಿ ಇರಲೇಬೇಕಾದ ಸಮಷ್ಟಿಹಿತ ಪೋಷಿಸುವ ಆತ್ಮ ಸಂಯಮದ ನೈತಿಕ ಚೌಕಟ್ಟನ್ನು ಮಾಯವಾಗಿ, ಕೇವಲ ಸಂಪತ್ತನ್ನು ಹೆಚ್ಚಿಸುವುದೊಂದೇ ಅರ್ಥಶಾಸ್ತ್ರದ ಗುರಿಯೆಂಬಂತೆ ಸ್ವಯಂ ಆಧಾರಿತವಲ್ಲದ (unsustainable) ಅನಿರ್ಬಂಧಿತ ಪ್ರಗತಿ ಸಿದ್ಧಾಂತ ಚಾಲ್ತಿಗೆ ಬಂತು.

**ಗಾಂಧೀಜಿಯ - ಈ ನೆಲದ ವಿವೇಕ**

ಈ ನೆಲದ ತತ್ತ್ವವನ್ನು ತಿಳಿದಿದ್ದ ಗಾಂಧೀಜಿ ಇರುವ ಒಂದೇ ಭೂಮಿಯನ್ನು ಬಳಸುವ ಇಂಥ ಆತ್ಮಘಾತಕ ಪ್ರಗತಿ ಕಲ್ಪನೆಯನ್ನು ತೀವ್ರವಾಗಿ ಪ್ರಶ್ನಿಸುತ್ತಾ, ಪ್ರಗತಿಯ ವ್ಯಾಖ್ಯೆಯನ್ನೇ ತಿರುವುಮುರುವು ಮಾಡಿ ಮಾನವೀಯ ಆಯಾಮವನ್ನು ಒದಗಿಸಿದರು. ಈ ಸತ್ಯವನ್ನು ನಮ್ಮ ಹಿಂದಿನ ಸಂತರು, ಬುದ್ಧ, ಯಾಜ್ಞವಲ್ಕ್ಯರು ತಿಳಿದಿದ್ದರು, ಪ್ರಕೃತಿಯ ಮಡಿಲಲ್ಲೆ ಜೀವಿಸುವ ಗುಡ್ಡಗಾಡು ಜನಾಂಗದವರೂ ಕಂಡುಕೊಂಡಿದ್ದರು. ಆದರೆ, ಗಾಂಧೀಜಿ ಈ ಅಮೂರ್ತ ಚಿಂತನೆಗೊಂದು ಮೂರ್ತ ಭಾಷ್ಯ ಬರೆದರು. "ಇರುವ ಒಂದೇ ಭೂಮಿಯ ಸಾಂತ ಸಂಪತ್ತನ್ನು ಮನುಷ್ಯ ತನ್ನ ತೀರದ ಬಯಕೆಗಳನ್ನು ತೀರಿಸಲು ಸೂರೆಗಯ್ಯುವುದು ವೈಜ್ಞಾನಿಕ ವಿವೇಕವಲ್ಲ. ಇದರ ಬದಲಾಗಿ ತನ್ನ ತೀರದ ಬಯಕೆಗಳಿಗೇ ಕಡಿವಾಣ ಹಾಕಿ, ಇರುವ ಸಂಪನ್ಮೂಲಗಳನ್ನು ಮೂಲಭೂತ ಅವಶ್ಯಕತೆಗೆ ತಕ್ಕಷ್ಟೇ ಎಚ್ಚರದಿಂದ ಬಳಸಿಕೊಳ್ಳುವುದು ಈ ನೆಲದ ವಿವೇಕ. ನಮ್ಮ ಬಯಕೆಗಳನ್ನು ಸಂಪತ್ತಿಗೆ ತಕ್ಕಂತೆ ಮಿತಿಗೊಳಿಸುವುದು ಜೀವಪೋಷಕ ತಪಸ್ಸು ಎನ್ನುತ್ತಾ ಗಾಂಧೀಜಿ ಅರ್ಥಶಾಸ್ತ್ರಕ್ಕೆ ತನ್ನದೇ ಭಾಷ್ಯ ಬರೆದು; ತಾನೇ ಸ್ವತಃ ಸರಳತೆ, ಋತಶೀಲತೆಯ ಬದುಕನ್ನು ನಡೆಸಿದರು.

ಗಾಂಧೀಜಿಯ ಈ ಮಾರ್ಗವೇ, ಎಲ್ಲ ಅತಿಗಳನ್ನು ವರ್ಜಿಸುವ ಬುದ್ಧನ ಮಧ್ಯಮಮಾರ್ಗ. ಮಹಾವೀರನ ಸಂಯಮದ ಬದುಕು. "ಜಗತ್ತಿನ ಸಂಪತ್ತು ಯಾರಿಗೂ ಸೇರಿದ್ದಲ್ಲ. ನಿನ್ನ ಅವಶ್ಯಕತೆಗೆ

ತಕ್ಕಷ್ಟೇ ಬಳಸಿಕೊಂಡು ತ್ಯಾಗದಿಂದ ಬದುಕನ್ನು ಕಾಪಾಡಿಕೊ. ಪರರಿಗೆ ಸಲ್ಲಬೇಕಾದ ಸಂಪತ್ತನ್ನು ಕಸಿದುಕೊಳ್ಳಬೇಡ. ಇಷ್ಟಕ್ಕೂ ಇದು ಯಾರ ಸಂಪತ್ತು ?" ಎಂದು ಪ್ರಶ್ನಿಸುವ ಉಪನಿಷತ್ ಋಷಿ ಯಾಜ್ಞವಲ್ಕ್ಯರ ದರ್ಶನ. "ಈಗ ತಾನೇ ಹುಟ್ಟಿದ ಕೂಸು ತನ್ನ ತಾಯ ಹೃದಯ ಬಡಿತವನ್ನು ಪ್ರೀತಿಸುವಂತೆ ಈ ಭೂಮಿಯನ್ನು ಪ್ರೀತಿಸಿ" ಎಂದು ದುರಾಕ್ರಮಣಶೀಲರಾಗಿ ತಮ್ಮ ಜನಾಂಗವನ್ನು ನಾಶಮಾಡಲು ಹೊರಟ ಅಮೇರಿಕನ್ನರ ಬಗ್ಗೆ ಜಾರ್ಜ್‌ವಾಷಿಂಗ್ಟನ್‌ಗೆ ರೆಡ್ ಇಂಡಿಯನ್ ಬುಡಕಟ್ಟು ಜನಾಂಗದ ನಾಯಕ ನಿಯೋಟಲ್ ೧೫೦ ವರುಷಗಳ ಹಿಂದೆ ದಾರ್ಶನಿಕನಂತೆ ಬರೆದ ಭೂಮಿ ವಿವೇಕ. ಗಾಂಧೀಜಿ ಅಂತೆಯೇ ನುಡಿದರು. ನಡೆದರು. ಬುದ್ಧ, ಯಾಜ್ಞವಲ್ಕ್ಯರ ನಾಡಿನ ಜನರನ್ನು ಮುನ್ನಡೆಸಲು ಪ್ರಯತ್ನಿಸಿದರು. ಆದರೆ ನಾವು ಗಾಂಧಿಯನ್ನು ಕೈ ಬಿಟ್ಟು ಅಣುಬಾಂಬು ಹಿಡಿದೆವು. ಇದು ನಮ್ಮ ಆತ್ಮಘಾತಕ ಪ್ರಗತಿ ಪರಿಕಲ್ಪನೆ.

❒

# ಕುರುಡರ ರಾಜ್ಯದಲ್ಲಿ ಕುರುಡನೇ ನೇತಾರ !

ನಮ್ಮ ಬದುಕು ಸ್ವತಂತ್ರವಲ್ಲ. ಅಸಂಖ್ಯ ಸಂಬಂಧಗಳ ಸರಮಾಲೆಯಲ್ಲಿ ಕೇವಲ ಒಂದು ಗೊಣಸು. ಪರಸ್ಪರ ಪೂರಕ ಸಂಬಂಧವಿರುವ, ಪ್ರಭಾವ ಬೀರುವ ಈ ಜೀವಂತ ಜಗತ್ತಿನ ಸಮಸ್ತ ಜೀವ ಚೈತನ್ಯ, ಮತ್ತು ಜಡವೆಂದು ಪರಿಗಣಿಸುವ ಮಣ್ಣು, ನೀರು, ಗಾಳಿ ಎಲ್ಲವೂ ಕೂಡಿ ಇದೊಂದು ಅಖಂಡ ಸೃಷ್ಟಿ. ಈ ಸೃಷ್ಟಿ ಜಾಲದ ವಿಶಾಲ "ಕ್ಯಾನ್ವಾಸ್"ನಲ್ಲಿ ಮನುಷ್ಯನ ಆಗಮನ ತೀರ ಇತ್ತೀಚೆ. ಆತ ತನ್ನನ್ನು ಪೋಷಿಸುತ್ತಿರುವ ತನ್ನ ಸುತ್ತಲಿನ ಪ್ರತಿಯೊಂದು ಸಂಗತಿಯನ್ನೂ, ಅಂದರೆ ಮಣ್ಣು, ನೀರು, ಗಾಳಿ, ಸಸ್ಯರಾಶಿಯನ್ನು ಸಂಪೂರ್ಣ ಅವಲಂಬಿಸಿದ್ದಾನೆ.

ಭೂಮಿ ಒಂದು ಜೀವಂತ ಗೋಲ. ಮನುಷ್ಯನನ್ನೂ ಒಳಗೊಂಡು ಈ ವೈವಿಧ್ಯಮಯ ಸೃಷ್ಟಿಯ ಸಮಸ್ತ ವೈಭವ, ಭೂಮಿಯ ಜೀವಂತಿಕೆಗೆ ಸಾಕ್ಷಿ ಮಾತ್ರ. ಒಂದರೆಕ್ಷಣವೂ ಮನುಷ್ಯ ಗಾಳಿ, ನೀರು, ಆಹಾರ ಕೊಡುತ್ತಿರುವ ಸಸ್ಯ ಮತ್ತು ಅದನ್ನು ಪೋಷಿಸುವ ಮಣ್ಣು - ಇವನ್ನು ಬಿಟ್ಟು ಬದುಕಲಾರ. ಆದರೂ ಆತ ಈ ಎಲ್ಲ ಜೀವನೆಲೆಗಳ ಜೊತೆಯೇ ಚೆಲ್ಲಾಟವಾಡುತ್ತಿದ್ದಾನೆ.

**ಅರಣ್ಯ- ಹಸಿರು ಮಂದಿರ :**

ಈ ಪ್ರಪಂಚದ ಸಸ್ಯರಾಶಿಯನ್ನೇ ಅವಲೋಕಿಸೋಣ. ಒಂದು ಅತಿ ದಟ್ಟ ಅರಣ್ಯವನ್ನು ನೀವು ಪ್ರವೇಶಿಸುವಾಗ ೧೭ ಮಹಡಿಗಳ ಒಂದು ಭವ್ಯವಾದ ಹಸಿರು ಮಂದಿರವನ್ನು ಪ್ರವೇಶಿಸಿದ ಅನುಭವ ! ಆ ಹಸಿರು ರಾಶಿಯ ಅಗಾಧತೆಯ ನಡುವೆ ಒಮ್ಮೆಲೇ ನಾವು ಕುಬ್ಜರಾಗಿ ಬಿಟ್ಟು,

---

ಉದಯವಾಣಿ, (ದೈನಿಕ), ಸಪ್ಟೆಂಬರ್, ೨೨, ೨೦೦೩

ನಮ್ಮ ನಿಜ ಎತ್ತರವನ್ನು ನಾವು ಕಂಡುಕೊಳ್ಳುತ್ತೇವೆ, ವಿನಯಶೀಲರಾಗುತ್ತೇವೆ. ಹಗಲಿನಲ್ಲೂ ಆ ಕಾಡಿನೊಳಗೆ ರಾತ್ರಿಯ ನಕ್ಷತ್ರ ಬೆಳಕಿನಷ್ಟೇ ನಸು ಬೆಳಕು. ಆ ದಟ್ಟತೆಗೆ ಕಣ್ಣು ಒಮ್ಮೆಲೇ ಹೊಂದಿಕೊಳ್ಳಲಾರದೆ ಕತ್ತಲಿನ ಲೋಕಕ್ಕೆ ಹೊಕ್ಕ ಅನುಭವ. ಸೂರ್ಯನಿಗೆ ಸಮ್ಮುಖವಾಗಿ ಎತ್ತೆತ್ತರಕ್ಕೆ ಚಾಚಿ ರಾರಾಜಿಸುತ್ತಿರುವ ಹೆಮ್ಮರಗಳು. ಅವುಗಳಡಿಯಲ್ಲಿ, ಚಿಕ್ಕ ಮರಗಳ ಹಾಸು, ಮತ್ತೂ ಚಿಕ್ಕವು, ಮತ್ತೂ ಚಿಕ್ಕವು. ಕೊನೆಗೆ ಭೂಮಿಯ ಜೊತೆ ಪಿಸು ಮಾತಾಡುವ ಕುರುಚಲು ಗಿಡ, ಹುಲ್ಲು, ಪೊದೆಗಳು - ಹೀಗೆ ಆರೇಳು ಹಂತಗಳಲ್ಲಿ ಆವರಿಸಿಕೊಂಡಿರುವ ದಟ್ಟ ಹಸಿರಿನ ಪದರು, ಪದರು. ಅಸಂಖ್ಯ ಜೀವಿಗಳ ಬದುಕಿನ ಪರಿಮಳ, ಮತು ಅದರ ಒಡನಾಡಿಯೇ ಆಗಿರುವ ಸಾವಿನ ತೀಕ್ಷ್ಣ ಘಾಟಿನ, ದಪ್ಪ ವಾಸನೆ. ಈ ಮಿಶ್ರ ಘಾಟಿನ, ತೀವ್ರ ಕಂಪನ ನಮ್ಮ ಕಿವಿಗೆ ಕೇಳಿಸುವಷ್ಟು, ಅದು ನಮ್ಮನ್ನು ಮತ್ತು ಬರಿಸುವ ರೀತಿ. ಸುತ್ತಲೆಲ್ಲ ಹಸುರಿನ ರಾಶಿ ರಾಶಿ ! ಕಣ್ಣಿಗೆ ಕಣ್ಣಿಟ್ಟು ಕಂಡಾಗ ಆ ಹಸಿರಲ್ಲೂ ಇರುವ ನಾನಾ ಬಗೆಗಳು. ಕಾಡಿನಲ್ಲಿ ಸನ್ನಿಹಿತವಾದ ಚಿಟ್ಟೆ, ಜೀರುಂಡೆ, ಕ್ರಿಮಿ, ಕೀಟ, ಹಕ್ಕಿ, ಪ್ರಾಣಿಕೂಟಗಳ ಸಮಗ್ರ ಸಂಸ್ಕೃತಿ ! ಎಲ್ಲವೂ ಒಂದರೊಳಗೊಂದು ಒಂದಕ್ಕೊಂದು ಪೂರಕ. ತಾವು ಬದುಕುತ್ತವೆ, ಇನ್ನೊಂದನ್ನು ಬದುಕಲೂ ಬಿಡುತ್ತವೆ. ಸಮರಸದ ಬಾಳು. ಮನುಷ್ಯನಿದ್ದೂ ಕೂಡ ಹೊಂದಿಕೆಯ ಬದುಕು. ಎಲ್ಲವನ್ನೂ ಬಾಳಲು ಬಿಟ್ಟು ತಾನು ಸಾವಿರಾರು ವರ್ಷ ವ್ಯವಧಾನದಿಂದ ಬಾಳಿ ಬದುಕಿದ. ಇದೇ ಜೀವನ ಕೌಶಲ. ನಮ್ಮೆಲ್ಲ ನರನಾಡಿಗಳು, ಇಂದ್ರಿಯಗಳು ಶಾಂತಗೊಳ್ಳುವ ನೆಲೆ ಇದು. ಹಾಗಾಗಿ ಈ ತಾಣ ಪವಿತ್ರ.

ಆದರೆ, ಎಂದು ಆಕರ್ಷಕ ಬದುಕಿಗಾಗಿ ಮನುಷ್ಯ, ವಿಕಾಸದ ಒಂದು ಹಂತದಲ್ಲಿ ಕಾಡಿನಿಂದ ಹೊರಬಂದನೋ ಅಂದ ಆತನ ಮೋಹಿತ ಮನಸ್ಸು ಭ್ರಷ್ಟಗೊಂಡು ಆತನ ಆಸೆಯು ದುರಾಸೆಯಾಗಿ ಬೆಳೆಯಿತು. ಭೂಮಿಯೊಂದು ಜೀವಂತ ಗೋಲ ಎಂಬ ಆತನ ಒಳನೋಟಕ್ಕೆ ಮಬ್ಬು ಕವಿಯಿತು. ಆತನ ಪೂರ್ವಾಗ್ರಹಪೀಡಿತ ಕಣ್ಣಿಗೆ ಈ ಭೂಮಿಯು ಕೇವಲ ತನ್ನ ಭೋಗಕ್ಕಾಗಿ ಇರುವ ತೊತ್ತಿನ ನಿರ್ಜೀವ ಆಸ್ತಿಯೆಂದು ಕಾಣಿಸಲಾರಂಭಿಸಿತು. ಈ ಆಸ್ತಿಯ ಅನಿರ್ಬಂಧಿತ ಬಳಕೆಗಾಗಿ, ವಿಜ್ಞಾನ, ತಂತ್ರಜ್ಞಾನ, ಬುದ್ಧಿಶಕ್ತಿಯನ್ನೆಲ್ಲ ದುರ್ಬಳಸಿಕೊಳ್ಳಲಾರಂಭಿಸಿದ. ಕೈಗಾರಿಕೆಯ ನಾಗರಿಕತೆಯನ್ನೇ ಹುಟ್ಟು ಹಾಕಿದ. ತನ್ನ ಸುತ್ತ ಕೃತಕ ಬದುಕನ್ನು ಹೆಣೆದ. ನಿಸರ್ಗದ ಸಹಜ ಸಂಸ್ಕೃತಿಯಿಂದ ದೂರ ಸರಿದ. ಕಾಡನ್ನು ಒಂದೇ ಸವನೆ ಸವರಿ ನಾಡು ಮಾಡಲಾರಂಭಿಸಿದ. ಜೀವ ಪ್ರೀತಿಯ ಚಿಂತನೆಯೇ ಇಲ್ಲದ ಈ ವಿಕೃತಿ ಕಾರ್ಯ ಅನವರತ ನಡೆಯಿತು. ದಿನಕಳೆದಂತೆ ಈ ನಡಿಗೆಗೆ ವೇಗ ಬಂತು. ಈ ವೇಗದಿಂದ ಇಂದು ಆತ ಆತ್ಮಹತ್ಯೆಯ ಹಂತ ತಲುಪಿದ್ದಾನೆ.

**ನಿಸರ್ಗ ಮಂಡಲದ ಜೊತೆ ಚೆಲ್ಲಾಟ :**

ಕೆಲವು ಶತಮಾನಗಳ ಹಿಂದೆ ಭೂಮಿಯ ಮೇಲೆ ಶೇಕಡಾ ೮೦ರಷ್ಟು ಕಾಡೇ ಇತ್ತು. ಇಂದು ಇದು ಶೇಕಡಾ ೨೦ಕ್ಕೂ ಕೆಳಗೆ ಇಳಿದಿದೆ. ಇದ್ದ ೮೦ ಶೇಕಡಾ ಕಾಡು ಪ್ರದೇಶದಲ್ಲಿ ನಿರ್ಭೀತಿಯಿಂದ ಬಾಳುತ್ತಿದ್ದ ಪ್ರಾಣಿಗಳು, ಗುಡ್ಡಗಾಡು ಜನಾಂಗವು ಇಂದು ಇರುವ ಚೂರು ಚೂರು ಕಾಡಿನ ಇಕ್ಕಟ್ಟಿನಲ್ಲಿ ಬದುಕುವಂತಾಗಿದೆ. ಹಸಿವು-ಭೀತಿಗಳ ಹಿಂಸೆಯ ವಾತಾವರಣದಿಂದ ತಲ್ಲಣಗೊಂಡಿವೆ. ಕಾಡಲ್ಲಿ ಆಹಾರ ಏನೂ ದೊರೆಯದಾಗ ಹಸಿವಿನಿಂದ ಹಲವೊಮ್ಮೆ ಅನಿವಾರ್ಯವಾಗಿ ಅವು

ಾಡಿಗೆ ಬರುತ್ತವೆ. ಈ ಸಂದರ್ಭದಲ್ಲಿ ಅವು ನಿಸ್ಸಂಶಯವಾಗಿಯೂ ಮನುಷ್ಯನಿಗೆ ಬಲಿ. ಅವುಗಳ ಸ್ಥಳವನ್ನು ತಾನು ಆಕ್ರಮಿಸಿಕೊಂಡಿರುವ ಮನುಷ್ಯನ ಕ್ರೌರ್ಯ, ಇಷ್ಟಕ್ಕೆ ನಿಲ್ಲುವುದಿಲ್ಲ. ಆ ಪ್ರಾಣಿಗಳ ಚರ್ಮ, ಮಾಂಸ, ಮೂಳೆ. ಹಲ್ಲು, ರೋಮ, ಎಲ್ಲವೂ ಲಾಭಕೋರ ಮನುಷ್ಯನ ಬಕಾಸುರ ಹೊಟ್ಟೆಗೆ ಆಹಾರ. ಇದರ ಜೊತೆಗೇ ಶತಮಾನಗಳಿಂದಲೂ ತಾಯಿ-ಮಗು ಸಂಬಂಧದಂತೆ ಕಾಡಿನಲ್ಲೇ ಬದುಕುತ್ತಿರುವ ಗುಡ್ಡಗಾಡು ಜನರ ಬದುಕೂ ಬುಡಮೇಲು. ಕ್ರಮೇಣ ಈ ಸಂತತಿಯೇ ಮಾಯವಾಗುವ ಸಂಭವ. ಸಸ್ಯ ಪ್ರಾಣಿಗಳ ಸಂತತಿಯಂತೂ ಅವು ಇರಲೇಬೇಕಾದ ಕನಿಷ್ಠ ಸಂಖ್ಯೆಗಿಂತಲೂ ಇಳಿಮುಖವಾಗಿ, ಕ್ರಮೇಣ ಸಂಪೂರ್ಣ ನಾಶದ ಹಂತಕ್ಕೆ ಮುಟ್ಟಿದೆ.

ಕಾಡಿನಿಂದ ಹೊರ ಬಂದ ಮನುಷ್ಯ ಇಂದು ಕಾಡಿಗೆ ಎಷ್ಟು ವಿಮುಖನಾಗಿ, ಹಸಿರಿಗೆ ಪರಕೀಯನಾಗಿದ್ದಾನೆಂದರೆ ಇಂದು ಆತ ಕಾಡಿಗೆ ಹೊಕ್ಕ ಕೂಡಲೇ ಈ ಆಗಂತುಕನ ಪ್ರವೇಶಕ್ಕೆ ಇಡಿಯ ಕಾಡು ಮುದುಡಿಕೊಂಡು, ನಿಶ್ಶಬ್ದವಾಗಿ ಬಿಡುತ್ತದೆ. ಕಾಡಿನ ಸಮಸ್ತ ಜೀವಿಗಳೂ ತಮ್ಮ ಚಟುವಟಿಕೆಯನ್ನು ಗಾಬರಿಯಿಂದ ಒಂದರೆಕ್ಷಣ ನಿಲ್ಲಿಸಿ ಬಿಡುತ್ತವೆ. ಒಂದೆರೆಡು ಗಂಟೆ ಆತ ಕಾಡಿನೊಳಗೆ ಮತ್ತಮತ್ತಗೆ ನಡೆಯುತ್ತಾ ಮೌನವಾಗಿದ್ದಲ್ಲಿ, ಸಾವಧಾನವಾಗಿ ಕ್ರಿಮಿಕೀಟಗಳು ತಮ್ಮ ತಮ್ಮ ಚಟುವಟಿಕೆಗಳ ಮೂಲಕ ಬಿಚ್ಚಿಕೊಳ್ಳುತ್ತವೆ. ಕ್ರಮೇಣ ಜೀವಿಗಳ ಧ್ವನಿ ಕೇಳಲು ತೊಡಗುತ್ತದೆ. ಹೀಗೆ ಇಡಿಯ ಜೀವ ಸಂಕುಲಕ್ಕೆ ಇಂದು ಮನುಷ್ಯ ಶತ್ರು. ಆತನನ್ನು ಅವು ಶಪಿಸುತ್ತವೆ. ಆತನಿಗೆ ಅವು ತಿರುಗಿ ಬಿದ್ದಿವೆ. ಆತ ನಿಜಕ್ಕೂ ತನ್ನ ಬದುಕಿನಲ್ಲಿ ಒಬ್ಬಂಟಿ. ಆದರೂ ನಿಸರ್ಗ ಮಂಡಲದ ಜೊತೆ ಆತನ ಚೆಲ್ಲಾಟ ಹೆಚ್ಚುತ್ತಲೇ ಇದೆ.

**ಅಳಿಯುತ್ತಿರುವ ಜೀವ ಸಂಕುಲ :**

ಜಗತ್ತಿನ ಒಟ್ಟು ಭೂ ವಿಸ್ತಾರದಲ್ಲಿ ಕೇವಲ ಆರರಷ್ಟು ಮಾತ್ರ ತುಂಬಿಕೊಂಡಿರುವ ಉಷ್ಣವಲಯದ ಕಾಡು ಸುಮಾರು ೩೦ ಮಿಲಿಯ ಜಾತಿ ಜೀವಿಗಳಿಗೆ ತವರು ಮನೆಯಂತೆ. ಈ ಜಗತ್ತು, ಈ ಜೀವಕೋಟಿಯಿಂದ ಸಮೃದ್ಧವಾಗಿದೆಯೇ ಹೊರತು ಕೇವಲ ಮನುಷ್ಯನಿಂದಲ್ಲ. ಆದರೆ ದುರಂತವೆಂದರೆ, ಕೈಗಾರಿಕಾ ದೇಶಗಳ ಕಚ್ಚಾ ವಸ್ತುಗಳ ಬೇಡಿಕೆಯ ಪೂರೈಕೆಗಾಗಿ ಪ್ರತೀ ನಿಮಿಷಕ್ಕೆ ೫೭ ಎಕ್ರೆಯಷ್ಟು ಉಷ್ಣವಲಯದ ದಟ್ಟಕಾಡುಗಳು ಆಹುತಿಯಾಗುತ್ತಿವೆ. ಪ್ರತೀ ವರ್ಷ ನೇಪಾಳದಷ್ಟು ವಿಸ್ತಾರದ ಭೂಪ್ರದೇಶದ ಅಂದರೆ, ಸುಮಾರು ೪೬,೫೦೦ ಸಾವಿರ ಚದರ ಮೈಲು ಅಥವಾ ೧,೨೦,೪೨೫ ಚದರ ಕಿಲೋ ಮೀಟರಿನಷ್ಟು ಕಾಡು ನಾಶವಾಗುತ್ತಿದೆ. ಈ ವಿನಾಶದ ಅಗಾಧತೆಯನ್ನು ಇನ್ನೂ ಸ್ಪಷ್ಟ ಪಡಿಸುವುದಾದರೆ, ೧೯ ಮಿಲಿಯ ಮರಗಳು ಪ್ರತೀ ದಿನ ಬಲಿಯಾಗುತ್ತಿವೆ. ಕಳೆದ ೫ ದಶಕಗಳಲ್ಲಿ, ಸುಮಾರು ಶೇಕಡಾ ೪೦ರಷ್ಟು ಉಷ್ಣವಲಯ ದಂಡಕಾರಣ್ಯವು ನಾಶವಾಗಿದೆ. ಈ ಗತಿಯಲ್ಲೇ ಸಾಗಿದರೆ, ಇನ್ನು ೩-೪ ದಶಕಗಳಲ್ಲೇ ಇವು ಸಂಪೂರ್ಣ ನಾಶವಾಗುವ ಸಂಭವವಿದೆ.

ಇಂದಿನ ಅಂದಾಜು ಪ್ರಕಾರ, ಕೇವಲ ಉಷ್ಣವಲಯ ಕಾಡೊಂದರಲ್ಲೇ ಪ್ರತೀ ದಿನ ೫ ಸಸ್ಯ ಜಾತಿಗಳು ಅಥವಾ ೫ ಪ್ರಾಣಿ ಪ್ರಬೇಧಗಳು ಅಳಿದು ಹೋಗುತ್ತಿವೆಯಂತೆ. ಇದೇ ದಾಮಾಶಯದಲ್ಲಿ ಲೆಕ್ಕ ಹಾಕಿದರೆ, ಇನ್ನು ಕೆಲವೇ ವರ್ಷಗಳಲ್ಲಿ ಪ್ರತೀ ಗಂಟೆಗೆ ಒಂದು ಸಸ್ಯ, ಪ್ರಾಣಿ ಪೀಳಿಗೆ

ನಾಶವಾಗುವ ಮಟ್ಟ, ತಲುಪುವುದಂತೂ ಖಂಡಿತ. ಅಂತೂ ಒಂದೆರೆಡು ದಶಕಗಳಲ್ಲಿ ಸುಮಾರು ಒಂದು ಮಿಲಿಯ ಪ್ರಾಣಿ ಸಸ್ಯ ಪ್ರಬೇಧಗಳು ನಾಶವಾಗಿ ಜೀವ ಜಾಲದ ಆಧಾರಸ್ತಂಭವೇ ಮುರಿದು ಬಿದ್ದೀತಂತೆ. ಗುಡ್ಡಗಾಡು ಜನಾಂಗಗಳ ಕೊನೆಯ ಪೀಳಿಗೆಯೂ ಈ ರಭಸದ ಬೆಳವಣಿಗೆಯಿಂದ ಈ ಭೂಮಿಯ ಭೂಪಟದಿಂದಲೇ ಅಳಿಸಿ ಹೋಗುವ ಭೀತಿಯಲ್ಲಿದೆ. ಇವೆಲ್ಲ ಬೆಳವಣಿಗೆಗಳಿಗೂ, ಮನುಷ್ಯನ ಬದುಕಿಗೂ ಸೂಕ್ಷ್ಮರೀತಿಯ ಸಂಬಂಧವಿದೆ. ಹಾಗಾಗಿ, ಆತನ ಪೀಳಿಗೆಯೂ ಅನಿಶ್ಚಿತತೆಯಲ್ಲಿದೆ.

**ಮಹಾವಿನಾಶದ ಸೂಚನೆ :**

ಈ ಮಹಾ ವಿನಾಶದ ಸ್ಪಷ್ಟ ಸೂಚನೆಗಳು ಈಗಾಗಲೇ ಕಂಡು ಬರುತ್ತವೆ. ಅವ್ಯಾಹತ ಕಾಡು ನಾಶ ಮತ್ತು ಭೂಗರ್ಭ ಇಂಧನಗಳ ಸತತ ಅತಿ ಬಳಕೆಯಿಂದಾಗಿ ವಾತಾವರಣದಲ್ಲಿ ಒಂದೇ ಸವನೆ ಕಾರ್ಬನ್ ಡೈಆಕ್ಸೈಡ್ ಮತ್ತು ಕಾರ್ಬನ್ ಮೊನೋಕ್ಸೈಡ್ ಪ್ರಮಾಣವು ಏರುತ್ತಿದ್ದು ಇದು ಹಸಿರು ಮನೆ ಪರಿಣಾಮಕ್ಕೆ (ಗ್ರೀನ್ ಹೌಸ್ ಎಫೆಕ್ಟ್) ಕಾರಣವಾಗಿದೆ. ಭೂಮಿಯ ಶಾಖ ಏರುತ್ತಿದೆ. ಇದರ ಪರಿಣಾಮವಾಗಿ, ಬರಗಾಲ, ಅತಿವೃಷ್ಟಿ, ಮರಳು ಬಿರುಗಾಳಿ, ಮರುಭೂಮಿಯ ವಿಸ್ತರಣ, ಕೃಷಿ ಉತ್ಪನ್ನಗಳ ಇಳಿತ, ಕಡಲು ಕೊರೆತ ಮುಂತಾದವು ತೀವ್ರ ಗತಿಯಲ್ಲಿ ಹೆಚ್ಚುತ್ತಿದೆಯೆಂಬುದನ್ನು ಸಂಯುಕ್ತ ರಾಷ್ಟ್ರ ಸಂಘ ಆಗಲೇ ಗುರುತಿಸಿದೆ.

ಜಗತ್ತಿನ ಇತಿಹಾಸದಲ್ಲಿ ಯಾವ ಬಿಕ್ಕಟ್ಟೂ ಇಂಥ ಗಂಭೀರ ಸ್ವರೂಪ ತಳೆದಿಲ್ಲ. ಬಳಸಿ ಬಿಸಾಡುವ, 'ತ್ರೋ -ಎವೇ' ಸಂಸ್ಕೃತಿಯೇ ಪ್ರಮುಖ ಲಕ್ಷಣವಾಗಿರುವ ಇಂದಿನ ಜಾಗತಿಕ ನಾಗರಿಕತೆಯು ಏನನ್ನು ತಾನೇ ಉಳಿಸೀತು ? ಜಗತ್ತನ್ನೇ ಒಂದು ಫೈಸಲು (disposable) ಮಾಡಿ ಮುಗಿಸಬಹುದಾದ ಗ್ರಹ ಎಂದು ಪರಿಭಾವಿಸಿದಂತಿದೆ. ಆದರೆ ದುರಾದೃಷ್ಟವಶಾತ್, ಈ ಬಿಕ್ಕಟ್ಟಿಗೆ ಒಟ್ಟು ರಾಜಕೀಯ ಪ್ರತಿಸ್ಪಂದನವು ತೀರಾ ನಿರಾಶಾದಾಯಕ; ಮಾತ್ರವಲ್ಲ ನಾವು ಇಂದು ಸಾಮುದಾಯಿಕವಾಗಿಯೂ ಈ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿಲ್ಲ. ಬದಲಿಗೆ, ಈ ಬೃಹತ್ ಬಿಕ್ಕಟ್ಟಿನ ಜ್ವಾಲಾಮುಖಿಯ ಸಿಡಿತಲೆಯಲ್ಲೇ ನಿದ್ರಿಸುತ್ತಿದ್ದೇವೆ. ಇಂಥ ಆಧುನಿಕ ರೀತಿ, ನೀತಿ ಬದುಕಿನ ನಡೆ, ತಿಳುವಳಿಕೆಯ ಲಕ್ಷಣವಲ್ಲ. ಈ ವಾಸ್ತವವೇ ಗೋಚರವಾಗದಷ್ಟು ನಮ್ಮ ಕಣ್ಣು ಮಂಜಾಗಿದೆ. ಸಂವೇದನೆ ಮೊಂಡಾಗಿವೆ. ಹಾಗಾಗಿ ಭಸ್ಮಾಸುರನಂತೆ ನಮ್ಮನ್ನೇ ನಾವು ಭಸ್ಮಗೊಳಿಸಿಕೊಳ್ಳುವ ಪ್ರಕ್ರಿಯೆ ರಭಸದಿಂದ ಸಾಗಿದೆ.

**"ಅಂಧೇನೈವ ನೀಯಮಾನಾ ಯಥಾಂಧಾ:"**

ವಿಶ್ವದೆಲ್ಲೆಡೆ ಪ್ರಜ್ಞಾವಂತರು, ಪರಿಸರ ಪ್ರೇಮಿಗಳು, ಮಾನವತಾ ವಾದಿಗಳು, ವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು ಮತ್ತು ಸಾಮಾನ್ಯ ಜನರೂ ಕೂಡ ೧೨ ಸಾವಿರ ವರ್ಷದ ಹಿಂದೆ ಹಿಮಯುಗದ ಮಹಾ ಉತ್ಪಾತದ ನಂತರ ಸಂಭವಿಸಬಹುದಾದ ಇನ್ನೊಂದು ಘೋರ ಮಾನವ ನಿರ್ಮಿತ ಅನಾಹುತದ ಸಂಕೇತ ಇದು ಎಂದು ಇಂದಿನ ವಿನಾಶದ ರಭಸದ ಬಗ್ಗೆ ಎಚ್ಚರಿಸುತ್ತಿದ್ದಾರೆ. ಆದರೆ ಜಗತ್ತನ್ನು ಮುನ್ನಡೆಸುವ ಮಾರುಕಟ್ಟೆ ಪ್ರೇರಿತ ಗ್ರಾಹಕ ಸಂಸ್ಕೃತಿಯ ಪ್ರಭುಶಕ್ತಿ ಇದನ್ನು

ತಿಳಿಯುತ್ತಿಲ್ಲ. "ಅವಿದ್ಯೆಯಲ್ಲಿ ನೆಲೆಸಿದವರಾಗಿ ಧೀರರೆಂದು, ಪಂಡಿತರೆಂದು ತಿಳಿದುಕೊಂಡು ವಕ್ರವಕ್ರವಾಗಿ ನಡೆಯುತ್ತಿರುವ ಕುರುಡರೇ, ಕುರುಡರಾದ ನಮ್ಮನ್ನು ಮುನ್ನಡೆಸುವ ನೇತಾರರಾದರೆ ಮನುಷ್ಯಕುಲ ವಿನಾಶದ ಕತ್ತಲಕೂಪವನ್ನೇ ಕಾಣಬೇಕಲ್ಲವೇ ?" ಎಂದು ಕಠೋಪನಿಷತ್ತಿನಲ್ಲಿ ಯಮ, ನಚಿಕೇತನಿಗೆ ಮಾಡಿದ ಉಪದೇಶ ನೆನಪಾಗುತ್ತದೆ :

ಅವಿದ್ಯಯಾಮಂತರೇ ವರ್ತಮಾನಾಃ
ಸ್ವಯಂ ಧೀರಾಃ ಪಂಡಿತಂ ಮನ್ಯಮಾನಾಃ ।

ದಂದ್ರಮ್ಯಮಾಣಾಃ ಪರಿಯಂತಿ ಮೂಢಾ
ಅಂಧೇನೈವ ನೀಯಮಾನಾ ಯಥಾಂಧಾಃ ॥

**ಕಠೋಪನಿಷತ್** (೨ನೇ ವಲ್ಲಿ, ಖಂಡ ೫)

❒

# ಧರ್ಮದ ಹೆಸರಿನಲ್ಲಿ ಅಧಾರ್ಮಿಕ ಕೋಮುವಾದ

ನಾನೊಬ್ಬ ಸನಾತನಿ ಹಿಂದೂ. ಉಪನಿಷತ್ ಋಷಿಗಳು ಕಂಡು ಕೊಂಡ ಆಧ್ಯಾತ್ಮ ಮಾರ್ಗದಲ್ಲಿ ನನಗೆ ವಿಶ್ವಾಸವಿದೆ. ಈ ಕಾರಣ ದಿಂದಲೇ ನಾನು, ಧರ್ಮದ ಹೆಸರಲ್ಲಿ ದುರ್ಬಲರ ಮೇಲೆ, ಅಲ್ಪಸಂಖ್ಯಾತ ಅನ್ಯಮತೀಯರ ಮೇಲೆ ಹೆಚ್ಚುತ್ತಿರುವ ಹಲ್ಲೆಗಳನ್ನು ಖಂಡಿಸುತ್ತೇನೆ. ಗುಜರಾತ್, ಮಧ್ಯಪ್ರದೇಶ, ಉತ್ತರ ಪ್ರದೇಶ, ಒರಿಸ್ಸಾ ನಮ್ಮ ಊರಾದ ಸುರತ್ಕಲ್ - ಮೊದಲಾದ ಪ್ರದೇಶಗಳಲ್ಲಿ ಅನ್ಯಮತೀಯರ ಮೇಲೆ ನಡೆದ ದಾಳಿಯು, ಭಾರತದ ಪ್ರಾಚೀನ ಧಾರ್ಮಿಕ ಪರಂಪರೆಯ ಮೇಲೆಯೇ ನಡೆದ ದಾಳಿ ಎನ್ನದೆ ವಿಧಿಯಿಲ್ಲ. ಭಾರತದ ಉದಾತ್ತ ಆಧ್ಯಾತ್ಮ ಪರಂಪರೆಗೆ ಬಂದೆರಗುತ್ತಿರುವ ಇಂಥ ಆಘಾತಗಳನ್ನು ಪ್ರಾಯಃ ಈ ಭೂಖಂಡವು ಹಿಂದೆಂದೂ ಕಂಡಿರಲಿಕ್ಕಿಲ್ಲ. ಬದುಕಿನ ಪಾವಿತ್ರ್ಯತೆಯನ್ನೇ ಮಲಿನಗೊಳಿಸುವ ಈ ಮತಿಹೀನ ನಡವಳಿಕೆಗಳಿಂದಾಗಿ, ನಾವು ಇಂದು ದೇವರ ಕಣ್ಣಲ್ಲಿ ಕೂಡ ತಲೆತಗ್ಗಿಸುವಂತಾಗಿದೆ. ಈ ನೆಲದ ಸಂಸ್ಕೃತಿಯಲ್ಲಿ ಅಂತರ್ಗತವಾಗಿರುವ ಔದಾರ್ಯ- ಘನತೆ - ಗೌರವಗಳೇ ಈ ಅಮಾನುಷ ಕ್ರೌರ್ಯಕ್ಕೆ ಈಡಾಗಿ ಬಿಟ್ಟಿವೆ.

ಅಂದು ಬಾಬ್ರಿ ಮಸೀದಿಯ ಗುಮ್ಮಟಗಳು ಉರುಳಿದ ದಿನ ಭಾರತೀಯ ವೇದಾಂತದ ಸತ್ತ್ವವೇ ನಾಶವಾಯಿತೆಂದು ನಾನು ದುಃಖಿಸಿದ್ದೆ. ಈ ವಿಶ್ವದ, ಈ ದಿವ್ಯದ ಅಂತರ್ಗತ ಅಖಂಡತೆಯ ವಿರಾಟ್ ಸ್ವರೂಪವನ್ನು ವರ್ಣಿಸುವ ಪುರುಷ ಸೂಕ್ತವನ್ನು ಪಠಿಸುವಾಗ ಆ ಸೂಕ್ತದ

---

ಜನವಾಹಿನಿ, (ದೈನಿಕ) ಮಂಗಳೂರು, ಫೆಬ್ರವರಿ ೧೧, ೧೯೯೯

ಸಾಲುಗಳು ಮೊತ್ತ ಮೊದಲ ಬಾರಿಗೆ ನನ್ನನ್ನು ಅಣಕಿಸುವ ಅನುಭವ ಅಂದು ನನಗಾಗಿತ್ತು. ಅಂದಿನಿಂದ ಇಂದಿನ ವರೆಗೆ ಎಂಥ ಪತನ ನಮ್ಮದು !

ಈ ದೇಶದಲ್ಲಿ ಸತ್ಯಕ್ಕೆ ಮಬ್ಬು ಕವಿಯುತ್ತಿದೆ. ಸಾಮೂಹಿಕ ಮನಸ್ಸಿಗೆ ಸಾಂಸ್ಕೃತಿಕ ವಿಸ್ಮೃತಿ ಆವರಿಸಿ ಬಿಟ್ಟಿದೆ. ಮತಾಂಧತೆ ಎಲ್ಲೆಲ್ಲೂ ನಾಟ್ಯವಾಡುತ್ತಿದೆ. ನಿಜಕ್ಕೂ ಧರ್ಮ ಗ್ಲಾನಿಯಾಗಿದೆ. ದುರಾದೃಷ್ಟವಶಾತ್, ಆಧುನಿಕ ಶಿಕ್ಷಣವನ್ನು ಪಡೆದ ಮಂದಿಯೇ ಹೆಚ್ಚಾಗಿ ಇಂದು ಧರ್ಮದ ಮೂಲದ್ರವ್ಯದ ಜತೆಗಿನ ಹೊಕ್ಕಳ ಬಳ್ಳಿ ಸಂಬಂಧ ಕಡಿದುಕೊಂಡು ಅನಾಥಪ್ರಜ್ಞೆಯಿಂದ ಧಾರ್ಮಿಕ ಕಂದಾಚಾರಗಳ ಹೊರ ಕವಚಕ್ಕೆ ಜೋತು ಬಿದ್ದು ಆವೇಶಭರಿತರಾಗಿ ಕೋಮು ದಾಂಧಲೆ ಮಾಡುತ್ತಿದ್ದಾರೆ. ತಮ್ಮ ಸಂಸ್ಕೃತಿಯ ನಿಜ ಸ್ವರೂಪವನ್ನೇ ಮರೆತ ಈ ಕಠಿಣ ಹೃದಯಿಗಳು, ತಾವು ಮಾಡುವ ಈ ಹೇಯಕೃತ್ಯವನ್ನು ಮಹಾಪವಿತ್ರ ಕಾರ್ಯವೆಂದೇ ನಂಬಿಕೊಂಡಂತಿದೆ.

ಧರ್ಮದ ಅತಿರೇಕ ಸಾಂಸ್ಥೀಕರಣ ಮತ್ತು ಸಾರ್ವಜನಿಕೀಕರಣ, ತನ್ನ ನೆಲೆ ಭದ್ರಗೊಳಿಸಿಕೊಳ್ಳಲಿಕ್ಕಾಗಿ ಅನಿವಾರ್ಯವಾಗಿ ಕೇಂದ್ರಿಕೃತ ಪ್ರಭುತ್ವದ ಸ್ವರೂಪ ಪಡೆಯುತ್ತದೆ. ಅದಕ್ಕಾಗಿಯೇ ತನ್ನ ಸುತ್ತ ಬಲಿಷ್ಠ ಸಂಘಟನೆಗಳನ್ನು ಕಟ್ಟಿಕೊಳ್ಳುತ್ತದೆ; ಮತ್ತು ತನ್ನ ಮೇಲ್ಮೆಗಾಗಿ ಸತತವಾಗಿ ರಾಜಕೀಯ ಮಾಡುತ್ತಿರುತ್ತದೆ.

ಆದರೆ ಭಾರತೀಯ ಸಂಸ್ಕೃತೀಯ ಶಕ್ತಿಯಿರುವುದು, ಎಲ್ಲ ವಿಭಿನ್ನತೆಗಳನ್ನು ನಿರೀಶ್ವರವಾದವನ್ನೂ ಕೂಡ - ಒಳಗೊಳ್ಳಲು ಸಾಧ್ಯವಿರುವ ಅದರ ಮುಕ್ತ ಚಿಂತನೆಯಲ್ಲಿ, ವ್ಯಕ್ತಿಗತ ಧಾರ್ಮಿಕ ನೈತಿಕತೆ - ಸಾಧನೆಗಳಿಗೆ ಕೊಟ್ಟ ಮಹತ್ವದಲ್ಲಿ, ಮತ್ತು ಅದರ ಅಸಂಘಟಿತ ಸ್ವರೂಪ ಹಾಗೂ ಮುಕ್ತ ಅರಾಜಕತೆಯಲ್ಲಿ. ಈ ಉದಾರ ಸ್ವರೂಪದಿಂದಾಗಿಯೇ ಪ್ರಾಯಃ ಹಿಂದೂಧರ್ಮ ಎಂಟನೆಯ ಶತಮಾನದಿಂದ ಇಂದಿನವರೆಗೆ ಹೊರಗಿನಿಂದ ಬಂದ ಧಾರ್ಮಿಕ ವಿಚಾರಧಾರೆಗಳ ಜತೆ ಕ್ರಿಯಾತ್ಮಕ ವಾಗ್ವಾದದ ಮೂಲಕ ಅವುಗಳ ಉತ್ತಮಾಂಶಗಳನ್ನು ತನ್ನಲ್ಲಿ ಅರಗಿಸಿಕೊಂಡು, ತನ್ನ ಜತೆ ಅವು ಸಹಬಾಳ್ವೆ ನಡೆಸಲು ಅವಕಾಶ ಕಲ್ಪಿಸಿತು.

ಅದರ ಬದಲು ಏಕರೂಪೀ ಸಂಘಟನೆಯಾಗಿ ರೂಪುಗೊಂಡು ಸಂಘರ್ಷದ ನಕಾರಾತ್ಮಕ ಹಾದಿ ಹಿಡಿದಿದ್ದರೆ, ಈ ನೆಲದ ಧರ್ಮ ಎಂದೋ ನಾಶವಾಗಿ ಬಿಡುತ್ತಿತ್ತು. ಸವಾಲುಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿಕೊಂಡು ಬೆಳೆಯುವ ಧರ್ಮ ಮಾತ್ರ ಸತ್ತ್ವಶಾಲಿಯಾಗಿರುತ್ತದೆ. ಈ ನೆಲದ ಬಹುರೂಪೀ ಸ್ವರೂಪವನ್ನು ಮರೆತು ಏಕ ಪಠ್ಯದೊಂದಿಗೆ ಏಕರೂಪೀ ಸಂಘಟನೆಯಾಗಿ ಕಟ್ಟುವ ಮೂಲಕ, ದೀರ್ಘಾವಧಿಯಲ್ಲಿ ಈ ನೆಲದ ಧರ್ಮವನ್ನು ಇನ್ನಷ್ಟು ದುರ್ಬಲಗೊಳಿಸುವ ಅಪಾಯವಿದೆ.

ಇಂಥ ಅಪಾಯದಿಂದ ಪಾರಾಗಬೇಕಾದರೆ, ಇಂದು ತೀವ್ರ ಸಾರ್ವಜನಿಕೀಕರಣಕ್ಕೊಳಪಟ್ಟ ಹಿಂದೂಧರ್ಮವು ಮತ್ತೊಮ್ಮೆ ಗೃಹಸ್ಥನ ಮನೆಗೆ ಮರಳಿ ಪ್ರತಿಯೊಬ್ಬನ ಖಾಸಗೀ ಬದುಕಿನಲ್ಲಿ ಸರಳತೆ, ಋಜುಮಾರ್ಗ, ನೈತಿಕ ನಡವಳಿಕೆಗಳಾಗಿ ಅಂತರಂಗೀಕರಣಗೊಂಡು, ಮರುಹುಟ್ಟು ಪಡೆಯುವ ಅಗತ್ಯವಿದೆ. ಇಂಥ ಸ್ವೈಜ ಧಾರ್ಮಿಕತೆಯು ನಿಜಕ್ಕೂ ಅನಿರ್ಬಂಧಿತ ಅನುಭೋಗ

ಶೀಲತೆಯ ರಾಪಿನಿಂದ ಪೀಡಿತನಾದ ಆಧುನಿಕ ಮನುಷ್ಯನ ಬಿಡುಗಡೆಯ ಮಾರ್ಗವೂ ಆಗಿ ಆತನನ್ನು ರಕ್ಷಿಸೀತು.

ಮನುಷ್ಯನ ಅನಂತ ಆಸೆಗಳಿಗೆ ಕಡಿವಾಣ ಹಾಕಬೇಕೆನ್ನುವ ಬುದ್ಧಧರ್ಮ, ಅಹಿಂಸೆಯನ್ನು ಬೋಧಿಸುವ ಜೈನಧರ್ಮ, ಸತ್ಯ-ಜ್ಞಾನಗಳ ಋಜು ಮಾರ್ಗದಲ್ಲಿ ನಡೆಯಲು ಬೋಧಿಸುವ ವೇದಾಂತ, ಪ್ರೀತಿಯಿಂದ ಬದುಕಲು ಕಲಿಸುವ ಕ್ರೈಸ್ತಧರ್ಮ, ಋತುಶೀಲ ಬದುಕಿಗೆ ಒತ್ತುಕೊಡುವ ಇಸ್ಲಾಂ- ಇವೆಲ್ಲವೂ ಅವುಗಳ ನಿಜರೂಪದಲ್ಲಿ ಇಂದಿನ 'ಕನ್ಸ್ಯೂಮರ್' ಸಂಸ್ಕೃತಿಯ ರೋಗದಿಂದ ಬಳಲುತ್ತಿರುವ ಮನುಷ್ಯನನ್ನು ಮತ್ತು ಆತನ ಜತೆ ಭೂಮಿಯನ್ನು ಉಳಿಸಬಹುದಾದ ಉಪಾಯಗಳಾಗಿ ಬಿಡಬಹುದು. ಎಲ್ಲಾ ಧರ್ಮಗಳ ಮೂಲ ಉದ್ದೇಶವು ಇದೇ ಅಲ್ಲವೇ ?

ವೈಯಕ್ತಿಕವಾಗಿ ಧರ್ಮ ಪ್ರತಿಯೊಬ್ಬ ಮನುಷ್ಯನ ಅಂತರಂಗಕ್ಕೆ ಸಂಬಂಧಪಟ್ಟದ್ದು. ಒಳಗಿನ ಅರಳುವಿಕೆಗೆ ಸಹಾಯ ಮಾಡುವಂಥದು. ಭಾವನೆಗಳನ್ನು ಪರಿಶುದ್ಧಗೊಳಿಸಿ ಮುಕ್ತ ಚಿಂತನೆ - ಮೌನ - ನೈತಿಕತೆಗೆ ಮಹತ್ತ್ವಕೊಡುವಂಥದು. ಸಾಮಾಜಿಕವಾಗಿ ಧರ್ಮವು, ಮಹಾಭಾರತದಲ್ಲಿ ಭೀಷ್ಮ ಹೇಳುವಂತೆ, ಸಮಷ್ಟಿ ಹಿತವನ್ನು ಸಾಧಿಸುವಂಥದು. ವಿಭಿನ್ನ ವರ್ಗಗಳನ್ನು ಒಂದುಗೂಡಿಸುವಂಥದು. ವರ್ಗ ವೈಷಮ್ಯವನ್ನು ಹೋಗಲಾಡಿಸಿ ಎಲ್ಲರನ್ನೂ ಸಮಾನವಾಗಿ ಪೊರೆಯುವಂಥದು. ಸಮಾಜದ ಎಲ್ಲ ಸ್ತರಗಳಲ್ಲೂ ಸಮರಸವನ್ನು ಕಾಯುವಂಥದು. ಯಾವ ಯಾವ ಕ್ರಿಯೆಗಳು ದ್ವೇಷ ವಿಘಟನೆಗಳಿಗೆ ಕಾರಣವಾಗುವವೋ ಅವೆಲ್ಲವೂ ಅಧಾರ್ಮಿಕ ನಡವಳಿಕೆಗಳು ಎಂದು ಭೀಷ್ಮರು ಸಾರುತ್ತಾರೆ.

ನಾವು ನಮ್ಮ ನಮ್ಮ ನೈಜ ಧಾರ್ಮಿಕ ಬದುಕಿಗೆ ತಿಲಾಂಜಲಿ ಕೊಟ್ಟು, ಸ್ವಾಮಿ, ಮುಲ್ಲಾ, ಪಾದ್ರಿ, ಪುರೋಹಿತರುಗಳ ಕೈಗೆ ನಮ್ಮ ಧಾರ್ಮಿಕ ಜವಾಬ್ದಾರಿ ವಹಿಸಿಕೊಟ್ಟು ಪಲಾಯನ ವಾದಿಗಳಾಗಿದ್ದೇವೆ. ಹಾಗಾಗಿ ಧರ್ಮ ಎಂಬುದು ಹಿಂದೂ ಸಮಾಜದಲ್ಲಿ ಕೇವಲ ಅಬ್ಬರದ ಪ್ರಚಾರ ಸರಕಾಗಿದೆ, ಬೂಟಾಟಿಕೆಯ ಪ್ರದರ್ಶನ ವಸ್ತುವಾಗಿದೆ; ಮತ್ತು ಇದರಿಂದಾಗಿ, ಧರ್ಮ-ಧರ್ಮಗಳ ನಡುವೆ ಪೈಪೋಟಿ - ಪ್ರಭುತ್ವ - ದಮನ ಪ್ರವೃತ್ತಿಗಳು ಸಾರ್ವತ್ರಿಕವಾಗಿದೆ. ಅಂತೂ ಧರ್ಮದ ಆತ್ಮ ನಾಶವಾಗಿದೆ; ಬದುಕು ಪಾವಿತ್ರ್ಯತೆ ಕಳೆಕೊಂಡಿದೆ.

ಜಗತ್ತಿನ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಎಲ್ಲೆಲ್ಲಿ ಪುರೋಹಿತಶಾಹೀ ವ್ಯಾಪಾರಿ ಧರ್ಮ ಮೇಲ್ಮೆ ಪಡೆಯಲು ಆರಂಭಿಸಿದೆಯೋ ಅಲ್ಲೆಲ್ಲಾ ಧರ್ಮ ಕಂದಾಚಾರ ವಿಧಿನಿಯಮಗಳ ಉಸಿರುಕಟ್ಟುವ ವಾತಾವರಣದಿಂದಾಗಿ ಧಾರ್ಮಿಕತೆಯು ಅವನತಿಯ ಹಾದಿ ಹಿಡಿದದ್ದು ವ್ಯಕ್ತವಾಗುತ್ತದೆ. ಅಂಥೆಲ್ಲ ಸಂದರ್ಭಗಳಲ್ಲಿ ಧಾರ್ಮಿಕ ಸಂಘಟನೆ ಪಂಥಗಳ ಹೊರಗಿನಿಂದ ಒಬ್ಬೊಬ್ಬ ಮಹಾವ್ಯಕ್ತಿ ಧರ್ಮದ ಪುನರ್ವ್ಯಾಖ್ಯಾನ ಮಾಡಿ ಧರ್ಮಕ್ಕೆ ಹೊಸ ಚೈತನ್ಯ ನೀಡಿದ ನಿದರ್ಶನಗಳನ್ನೂ ನಾವು ಕಾಣುತ್ತೇವೆ. ಬುದ್ಧ, ಬಸವ, ಕಬೀರ, ಪರಮಹಂಸ, ಜೆ.ಕೆ. ಮುಂತಾದವರು ಇಂಥ ಅನುಭಾವಿಗಳು.

ಇಂದಿನ ಯಂತ್ರ ನಾಗರೀಕತೆಯು ಹುಟ್ಟು ಹಾಕುತ್ತಿರುವ ಉಪಭೋಗ ಸಂಸ್ಕೃತಿಯು ತನ್ನ ಲಾಭಕ್ಕಾಗಿ ಮನುಷ್ಯನನ್ನು ಅತೃಪ್ತನಾದ ಉಪಭೋಗ ಮನುಷ್ಯನನ್ನಾಗಿ ಪರಿವರ್ತಿಸಿ ಆತ

ಯಾವಾಗಲೂ ಒಂಟಿತನದ ಅಭದ್ರ ಮಾನಸಿಕ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುತ್ತದೆ. ಅಂಥವ ತನ್ನ ಕಲ್ಪಿತ ಅಭದ್ರತೆಯಿಂದ ರಕ್ಷಣೆ ಪಡೆಯಲು ಧಾರ್ಮಿಕ ಸಂಘಟನೆಗಳಿಗೆ ಹೆಚ್ಚು ಹೆಚ್ಚು ಮೊರೆ ಹೋಗುತ್ತಾನೆ. ಇಂದು ಇಡಿಯ ಜಗತ್ತಲ್ಲೇ ಮತಾಂಧತೆ, ಜನಾಂಗೀಯ ಕಲಹ ಕೋಮು ಸಂಘರ್ಷಗಳು ಹೆಚ್ಚುತ್ತಿರುವುದಕ್ಕೆ ಇದೂ ಬಹಳ ಮುಖ್ಯ ಕಾರಣವಾಗಿದೆ. ನೂರು ಕೋಟಿ ಜನರು ಒಟ್ಟಿಗೆ ಇಕ್ಕಟ್ಟಿನಲ್ಲಿ ಬದುಕಬೇಕಾದ ಅನಿವಾರ್ಯವಿರುವ ಭಾರತದಲ್ಲಂತೂ, ಬಡತನ, ನಿರಕ್ಷರತೆ, ಆರ್ಥಿಕ, ಸಾಮಾಜಿಕ ಅಸಮಾನತೆಗಳೆಲ್ಲವೂ ಮನುಷ್ಯನ ಮನಸ್ಸನ್ನು ಒಂದು ಸ್ಫೋಟಕ ಸ್ಥಿತಿಗೆ ತಂದು ನಿಲ್ಲಿಸಿಬಿಟ್ಟಿದೆ. ಇಂಥ ತಲ್ಲಣದ ಶ್ರೇಣಿಕೃತ ಸಮಾಜ ವ್ಯವಸ್ಥೆಯಲ್ಲಿ ಆರ್ಥಿಕ -ಸಾಮಾಜಿಕ - ಸಾಂಸ್ಕೃತಿಕ ವಿಷಮತೆಗಳು ಭಾವನಾತ್ಮಕ ಸ್ವರೂಪ ಪಡೆದು ಭವಿಷ್ಯದಲ್ಲಿ ಮತೀಯ ಸಂಘರ್ಷ, ಹಲ್ಲೆಗಳು ಇನ್ನಷ್ಟು ಉಲ್ಬಣಗೊಳ್ಳುವ ಸಂಭವವಿದೆ.

ಇದಕ್ಕೆ ಪರಿಹಾರ ಮಾರ್ಗವೇನು ? ಕೇವಲ ಶುಷ್ಕ ವೈಚಾರಿಕ ನೆಲೆಯಲ್ಲಿ ಈ ನೆಲದ ಸಂಸ್ಕೃತಿಗೇ ಹೊರಗಿನವನಂತೆ ಧರ್ಮವನ್ನೇ ತಿರಸ್ಕಾರ ಮಾಡುವ ಮಾರ್ಗ ಈ ಪ್ರಸ್ತುತ ಪರಿಸ್ಥಿತಿಯಲ್ಲಿ ಏನೇನೂ ಪರಿಣಾಮ ಬೀರಲಾರದು. ಮನುಷ್ಯ ಸ್ವಭಾವತಃ ಭಾವನಾಜೀವಿ. ಭಾರತದಲ್ಲಂತೂ ೯೫ ಶೇಕಡಾ ಜನ ಸಾಮಾನ್ಯರು ಧರ್ಮದಲ್ಲಿ ನಂಬಿಕೆಯಿಟ್ಟವರು. ಅಂಥವರ ನಡುವೆ, ಅಂತರ್ಯದಲ್ಲಿ ಆಧ್ಯಾತ್ಮಿಕ ಯಾತನೆಯೇ ಇಲ್ಲದ ವೈಚಾರಿಕ ಪರಕೀಯನೊಬ್ಬನು ಧರ್ಮ ವಿರೋಧೀ ಅಪ್ಪಣೆ ಕೊಡಿಸುವುದು ಮೂರ್ಖತನವಾಗುತ್ತದೆ. ನಿಜಕ್ಕೂ ಇಂಥ ಶುಷ್ಕ ವೈಚಾರಿಕರೂ ಮತಾಂಧರ ಜತೆ ಕೋಮುವಾದದ ಹೆಚ್ಚಳಕ್ಕೆ ಕಾರಣವಾಗುತ್ತಾರೆ ಎಂದು ನನ್ನ ಅನಿಸಿಕೆ. ಭಾರತದಲ್ಲಿ ಉದಾರೀ ಧಾರ್ಮಿಕರು ಗಾಂಧಿಯಂತೆ, ಜಾತ್ಯತೀತರಾಗಿದ್ದಾರೆ. ಅಂತೆಯೇ ನಿರೀಶ್ವರವಾದಿಗಳು ಕೋಮುವಾದಿಗಳಾಗಿರುವ ನಿದರ್ಶನಗಳು ಬೇಕಾದಷ್ಟಿವೆ. ಧರ್ಮದ ಒಟ್ಟಾರೆ ತಿರಸ್ಕಾರ ಕೋಮುವಾದಕ್ಕೆ ಪರಿಹಾರವಾಗಲಾರದು. ಧರ್ಮದ ಅಬ್ಬರದ ವೈಭವೀಕರಣ ಮತ್ತು ಧರ್ಮವನ್ನೇ ತಿರಸ್ಕರಿಸುವ ಶುಷ್ಕ ವೈಚಾರಿಕತೆ ಈ ಎರಡು ಅತಿರೇಕ ಮಾರ್ಗಗಳನ್ನು ತೊರೆದು, ಎಲ್ಲ ಧರ್ಮಗಳ ಅನುಭಾವೀ ಚಿಂತನೆಯ ಮೂಲಸೆಲೆಯನ್ನು ಜನಸಾಮಾನ್ಯರಿಗೆ ತಿಳಿಸುವ ಪ್ರಯತ್ನ ನಡೆಯಬೇಕು. ಜನಸಾಮಾನ್ಯರಿಗೆ ನೈಜ ಧರ್ಮದ ತತ್ತ್ವ ದರ್ಶನ ಮಾಡಿಸುವ ಮಧ್ಯಮ ಮಾರ್ಗವನ್ನು ಅನುಸರಿಸುವ ಮೂಲಕ ಮಾತ್ರ, ಮೂಲಭೂತವಾದಿಗಳ ಆಕ್ರಮಣಕಾರೀ ಧಾರ್ಮಿಕತೆಯ ಪೊಳ್ಳುತನವನ್ನು ಬಯಲಿಗೆಳೆಯಲು ಸಾಧ್ಯ. ❐

# ಬುಡಕಟ್ಟು ಅಭಿವೃದ್ಧಿ ಪರಿಕಲ್ಪನೆ ಮತ್ತು ಮೀಮಾಂಸೆ

ನಾನೊಬ್ಬ ಅಕಾಡೆಮಿಕ್ ಶಿಸ್ತಿನ ವಿದ್ವಾಂಸ ಅಲ್ಲ. ಆ ರೀತಿಯ ಶಾಸ್ತ್ರೀಯ ಅಧ್ಯಯನ ಮಾಡಿಲ್ಲ ಕೂಡ. ಆದರೂ ನನ್ನನ್ನು ವಿಶ್ವವಿದ್ಯಾಲಯ ಮಟ್ಟದ ಈ ವಿಚಾರ ಸಂಕೀರ್ಣಕ್ಕೆ ಆಹ್ವಾನಿಸಿ, ಒಂದು ಗೋಷ್ಠಿಯ ಅಧ್ಯಕ್ಷನನ್ನಾಗಿ ಮಾಡಿರುವುದು, ನನಗೆ ಸಂದ ಗೌರವವೆಂದೇ ಭಾವಿಸುತ್ತೇನೆ. ಅನೇಕ ಹಿರಿಯ ಸಾಹಿತಿಗಳು ಇಲ್ಲಿ ನೆರೆದಿದ್ದಾರೆ. ಬುಡಗಟ್ಟು ಜನಾಂಗದ ಅಧ್ಯಯನ ನಡೆಸಿದ ವಿದ್ವಾಂಸರು ಇಲ್ಲಿದ್ದಾರೆ. ನಾನಾಡುವ ಸರಳ ಮಾತುಗಳು ಈ ವಿದ್ವತ್ ಗೋಷ್ಠಿಯಲ್ಲಿ ಎಷ್ಟು ಔಚಿತ್ಯಪೂರ್ಣವಾದೀತು ಎಂಬ ಅನುಮಾನವಿಟ್ಟುಕೊಂಡೇ ನಾನು ನನ್ನ 'ಆ್ಯಕ್ಟಿವಿಸ್ಟ್' (activist) ಬದುಕಿನ ಅನುಭವದಿಂದ ಕಂಡುಕೊಂಡ ಕೆಲವು ಸತ್ಯಗಳನ್ನು ನಿಮ್ಮ ಮುಂದಿಡಲು ಪ್ರಯತ್ನಿಸುತ್ತೇನೆ.

ನಾವು ಏನೊಂದೂ ಪೂರ್ವಾಗ್ರಹವಾಗಲೀ, ಖಂಡಿತ ಅಭಿಪ್ರಾಯಗಳಾಗಲೀ ಇಲ್ಲದೆ ತಟಸ್ಥವಾಗಿ ಅವಲೋಕಿಸಿದರೆ, ಕೆಲವೊಂದು ಸತ್ಯಗಳು ನಮಗೆ ಗೋಚರವಾಗುತ್ತವೆ. ಕೆಲವು ಶತಮಾನಗಳ ಹಿಂದೆ ಭಾರತದಲ್ಲಿ ಶೇಕಡಾ ೮೦ ರಷ್ಟು ಭೂಭಾಗವು ಕಾಡು ಪ್ರದೇಶವೇ ಆಗಿತ್ತು. ಗ್ರಾಮೀಣ ನಾಗರೀಕತೆಯೇ ನಮ್ಮ ಬದುಕಿನ ಪ್ರಧಾನ ಲಕ್ಷಣವಾಗಿದ್ದು, ಒಂದು ದೃಷ್ಟಿಯಲ್ಲಿ ಸಮಸ್ತ ಸಮಾಜದ ಜನರೂ ಬುಡಗಟ್ಟು ಜನಾಂಗೀಯ ಬದುಕಿನ ಶೈಲಿಯಲ್ಲೇ ಜೀವಿಸುತ್ತಿದ್ದರು. ಹಳ್ಳಿ-

---

ಹಂಪಿ ವಿಶ್ವವಿದ್ಯಾಲಯ ೨೦೦೨ರಲ್ಲಿ ಸಾಗರದಲ್ಲಿ, ನಡೆಸಿದ ಬುಡಕಟ್ಟು ಅಭಿವೃದ್ಧಿ ಕಲ್ಪನೆ ಮತ್ತು ಮಿಮಾಂಸೆ' ಕುರಿತ ಎರಡು ದಿನದ ವಿಚಾರ ಸಂಕಿರಣದ ಒಂದು ಗೋಷ್ಠಿಯಲ್ಲಿ ಮಾಡಿದ ಅಧ್ಯಕ್ಷ ಭಾಷಣ.

ಪೇಟೆಯ ಸಮಾಜಗಳ ನಡುವೆ ಈಗ ಕಾಣುವಷ್ಟು ದೊಡ್ಡ ಕಂದಕವಿರಲಿಲ್ಲ. ಆದರೆ, ಕೈಗಾರಿಕಾ ನಾಗರಿಕತೆಯು ಆರಂಭವಾದಂದಿನಿಂದ, ಕೈಗಾರಿಕಾ ಅಭಿವೃದ್ಧಿ ಪೂರಕ ಲೋಕದೃಷ್ಟಿ, ಇಡಿಯ ದೇಶವನ್ನೇ ವ್ಯಾಪಿಸಿ, ಇತರ ಸಮಾಜಗಳ ಮೇಲೆ ಕೈಗಾರಿಕಾ ಸಮಾಜ ಮತ್ತು ಅದರ ಮೌಲ್ಯಗಳ ಆಕ್ರಮಣ ಆರಂಭವಾಯಿತು. ಕೈಗಾರಿಕಾ ಸಮಾಜದ ಪ್ರಮುಖ ಲಕ್ಷಣಗಳಾದ ವ್ಯಾಪಾರ, ಲಾಭ, ದಕ್ಷತೆ, ದುರಾಸೆ, ಉಪಯೋಗ, 'ವೇಸ್ಟ್' ಮುಂತಾದವುಗಳು ಸಾರ್ವತ್ರೀಕರಣಗೊಂಡು, ಅಭಿವೃದ್ಧಿಯ ಹೆಸರಲ್ಲಿ, ಸ್ಪರ್ಧೆ ಪ್ರೇರಿತ ಆಕ್ರಮಣಕಾರೀ ಹಿಂಸೆ ನಾಗರೀಕತೆಯ ಪ್ರಮುಖ ಲಕ್ಷಣವಾಯಿತು. ಹಿಂಸೆಯು ತನ್ನ ಸಾವಿರಾರು ಮುಖಗಳೊಂದಿಗೆ ಸೂಕ್ಷ್ಮವಾಗಿಯೂ, ಅಪಾಯಕಾರಿಯಾಗಿಯೂ ಮುನ್ನಡೆಯಿತು; ಮಾತ್ರವಲ್ಲ, ಈ ಹಿಂಸಾ ಸ್ವರೂಪಗಳು ತಮ್ಮದೇ ಆದ ಅಭಿವೃದ್ಧಿ ವ್ಯಾಖ್ಯಾನವನ್ನು ಸೃಷ್ಟಿಸಿಕೊಂಡು, ಅದನ್ನು ಅನಿವಾರ್ಯವೆಂಬಂತೆ ತರ್ಕಬದ್ಧವಾಗಿಯೂ, ವೈಜ್ಞಾನಿಕವಾಗಿಯೂ, ಭಾವನಾರಹಿತವಾಗಿಯೂ ಮುಂದಿಡಲು ಆರಂಭಿಸಿತು.

ಇದರ ಪರಿಣಾಮವಾಗಿ, ನಾಗರಿಕನೆನಿಸಿಕೊಂಡ ಮನುಷ್ಯ, ಗುಡ್ಡಗಾಡು ಜನಾಂಗಗಳ ಮತ್ತು ವನ್ಯಜೀವಿಗಳ ಭೂಮಿಯನ್ನು ಆಕ್ರಮಿಸಲು ಆರಂಭಿಸಿ, ಅವನ್ನು ತೀವ್ರ ಇಕ್ಕಟ್ಟಿನ ಪ್ರದೇಶಕ್ಕೆ ಸೀಮಿತಗೊಳಿಸಲು ಆರಂಭಿಸಿದ. ಶೇಕಡಾ ೮೦ಕ್ಕೂ ಹೆಚ್ಚು ಇದ್ದ ಅರಣ್ಯ ಪ್ರದೇಶ ಶೇಕಡಾ 20ಕ್ಕೂ ಕೆಳಗೆ ಇಳಿಯಿತು. ಹಿಂದೆ ಶೇಕಡಾ ೮೦ ರಷ್ಟು ಹಬ್ಬಿಕೊಂಡಿದ್ದ ಕಾಡು ಪ್ರದೇಶದಲ್ಲಿ ವಾಸಿಸಿಕೊಂಡಿದ್ದ ಬುಡಕಟ್ಟು ಮತ್ತು ವನ್ಯಜೀವಿಗಳು, ಇಂದು ಶೇಕಡಾ ೨೦ ರಷ್ಟೂ ಇಲ್ಲದ ತಮ್ಮ ವಾರಿಸುದಾರಿಕೆಯ ಕಾಡುಪ್ರದೇಶದ ಇಕ್ಕಟ್ಟಿನಲ್ಲಿ ಬದುಕುವಂತಾಯಿತು. ಬುಡಕಟ್ಟು ಮನುಷ್ಯನ ಜೀವನ ನಿರ್ವಹಣೆಗೆ ಅಗತ್ಯವಾದ ಕನಿಷ್ಠ ಕಾಡುಪ್ರದೇಶವೂ ಇಲ್ಲದೆ, ಆತ ಅನಿವಾರ್ಯವಾಗಿ ಕಾಡಿನಿಂದ ಹೊರಬಂದು ನಿರ್ಗತಿಕನಾಗುವ ಪರಿಸ್ಥಿತಿ ನಿರ್ಮಾಣವಾಯಿತು.

ಇದರ ಜೊತೆಗೆ, ಗುಡ್ಡಗಾಡು ಜನರ ನಿಜ ಬದುಕಿನ ಕ್ರಮದ ಕಾಡುಪ್ರದೇಶವನ್ನು ನಾಗರಿಕ ಮನುಷ್ಯರೆನಿಸಿಕೊಂಡ ನಾವು ಎಗ್ಗಿಲ್ಲದೆ ಆಕ್ರಮಿಸಿಕೊಳ್ಳುತ್ತಾ, ನಾಶಮಾಡುತ್ತಾ ಬರುತ್ತಿದ್ದಂತೆ, ಒಂದು ಹಂತದಲ್ಲಿ ಭೂಮಿಯ ಜೀವಂತಿಕೆಗೆ ಇರಲೇಬೇಕಾದ ಕನಿಷ್ಠ ಕಾಡು ಪ್ರದೇಶವನ್ನೂ ನಾವು ಕಳೆದುಕೊಳ್ಳುವ ಮಟ್ಟಕ್ಕೆ ತಲುಪಿದ್ದೇವೆ ಎಂದು ಒಮ್ಮೆಲೇ ಜ್ಞಾನೋದಯವಾಯಿತು. ಇದರ ಪರಿಣಾಮವಾಗಿ, ಕಾಡಿನ ಬದುಕಿನ ಪರಿಚಯವೇ ಇಲ್ಲದ, ಕಾಡಿನ ನಾಶಕ್ಕೆ ಕಾರಣರಾದ ಜನರೇ ಸೇರಿ, ಕಾಡನ್ನು ರಕ್ಷಿಸಲಿಕ್ಕಾಗಿ ಹೊಸ ಹೊಸ ಕಾನೂನುಗಳನ್ನು ಜ್ಯಾರಿಗೊಳಿಸಲು ಆರಂಭಿಸಿದರು; ಮಾತ್ರವಲ್ಲ, ಈ ಕಾನೂನುಗಳನ್ನು, ಕಾಡಿನ ಜೊತೆ ಇದುವರೆಗೆ ಹೊಕ್ಕಳಬಳ್ಳಿಯ ಸಂಬಂಧವಿಟ್ಟುಕೊಂಡು ಬದುಕಿದ ಬುಡಕಟ್ಟು ಜನರ ಮೇಲೆ ಹೇರಿ ಅವರನ್ನು ಕಾಡಿನಿಂದ ಒಕ್ಕಲೆಬ್ಬಿಸುವ ಕೈಂಕರ್ಯವನ್ನೂ ಆರಂಭಿಸಿದರು. ತಲೆತಲಾಂತರದಿಂದ, ಕಾಡಿನಲ್ಲಿ ಹುಟ್ಟಿ, ಅಲ್ಲೇ ಬೆಳೆದು, ಕಾಡನ್ನು ನಾಶಮಾಡದೆ ಪೋಷಿಸಿ, ತಮ್ಮ ತಾಯಿಯಂತೆ ರಕ್ಷಿಸಿಕೊಂಡು ಕಾಡಿನ ಬದುಕನ್ನು ತಮ್ಮ ಜೀವನ ಕ್ರಮವನ್ನಾಗಿ ಮಾಡಿಕೊಂಡ ಕಾಡಿನ ವಾರಿಸುದಾರ ಜನರ ಮೇಲೆ, ಹೊರಗಿನವರು ಈ ಹೊಸ ಕಾನೂನು ಜ್ಯಾರಿಗೊಳಿಸಿ, ಅವರನ್ನು ಹೊರಗೆ ಹಾಕಲು ಆರಂಭಿಸಿದರು. ಇದು ನಿಜಕ್ಕೂ ನಮ್ಮ ನಾಗರಿಕತೆಯ ಅಮಾನುಷ ಮುಖವೆನ್ನದೆ ವಿಧಿಯಿಲ್ಲ. ಯಾರ ಮೇಲೆ ಈ ಕಾನೂನು ಜ್ಯಾರಿಗೊಳಿಸುತ್ತಿದ್ದೇವೋ ಅವರಿಗೆ ಆ ಕಾನೂನಿನ ರಚನೆಯಲ್ಲಿ ಸಹಭಾಗಿತ್ವ ಇಲ್ಲದಿರುವುದು

ನಿಜಕ್ಕೂ ನಾಗರಿಕತೆಯ ಲಕ್ಷಣವಲ್ಲ. ಅವರ ಬದುಕಿನ ಕ್ರಮವನ್ನು ಅವರೇ ರೂಪಿಸಿಕೊಳ್ಳಲೂ ಹಕ್ಕು ಇಲ್ಲದಿರುವುದು ಒಂದು ಜನತಂತ್ರ ಸಮಾಜಕ್ಕೆ ಭೂಷಣವಲ್ಲ.

ಇದು ಇಷ್ಟಕ್ಕೇ ನಿಲ್ಲುವುದಿಲ್ಲ. ತೋರಿಕೆಗೆ ಅವರಿಗೆ ಕಾಡಿನಿಂದ ಹೊರಗೆ ಜೀವನ ನಿರ್ವಹಣೆಗಾಗಿ ಬೇರೆ ಸ್ಥಳವನ್ನು ತೋರಿಸಲಾಗುತ್ತದೆ; ಮುಂದೆ ಅವರನ್ನು ಅಲ್ಲಿಗೆ ತೀರ ಯಾಂತ್ರಿಕವಾಗಿ ಸ್ಥಳಾಂತರಿಸಲಾಗುತ್ತದೆ. ಬುಡಗಟ್ಟು ಜನಾಂಗಗಳಲ್ಲಿ ಪರಂಪರಾಗತವಾಗಿ ಹರಿದು ಬಂದ ಅವರದೇ ಆದ ಅರಣ್ಯ ಆಧಾರಿತ ಅನುಭವ ಜನ್ಯ ಜ್ಞಾನ ಸಂಪತ್ತಿದೆ. ನಾಗರಿಕ ಸಮಾಜಕ್ಕೆ ತಾನೇ ಹುಟ್ಟುಹಾಕಿದ ಪ್ರಭುತ್ವದ ಹಂಗಿಲ್ಲದೆ ಸ್ವಾವಲಂಬಿಗಳಾಗಿ ಬದುಕಲು ಒಂದರೆಕ್ಷಣವೂ ಸಾಧ್ಯವಾಗದು. ಇಂದು ನಾವು ಸ್ಟೇಟ್‌ನ ಮೇಲೆ ಅಷ್ಟು ಪರಾವಲಂಬಿಗಳಾಗಿದ್ದೇವೆ. ಆದರೆ ಬುಡಗಟ್ಟು ಜನಾಂಗ, ಆಧುನಿಕ ಪ್ರಭುತ್ವ ಅಥವಾ ಯಾವುದೇ ಹೊರಗಿನ ಅವಲಂಬನವಿಲ್ಲದೆ ಬದುಕಬಲ್ಲಷ್ಟು ಅವರ ಅನುಭವಜನ್ಯ ಜ್ಞಾನ ಸಂಪತ್ತು ವಿಪುಲವಾಗಿದೆ. ಅವರು ತಮ್ಮಷ್ಟಕ್ಕೇ ತಾವು ಬದುಕನ್ನು ನಿಭಾಯಿಸಲು ಸಮರ್ಥರು. ಅರಣ್ಯದಲ್ಲಿ ಆಧುನಿಕ ಅಭಿವೃದ್ಧಿಯ ಸೌಕರ್ಯಗಳಿಲ್ಲದೆ ಅವರು ಬದುಕಲು  ಸಶಕ್ತರು. ಅವರನ್ನು ಅವರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಕಾಡು ಆಧಾರಿತ ಬದುಕಿನ ನೆಲೆಯಿಂದ ತಪ್ಪಿಸಿ, ಯಾಂತ್ರಿಕವಾಗಿ ಸ್ಥಳಾಂತರಿಸಿ, ಕೃಷಿ ಅಥವಾ ಇತರ ಅವರಿಗೆ ಒಗ್ಗದ ಆರ್ಥಿಕ ಕಸುಬನ್ನು ನೀಡಿದರೆ, ಅವರು ಆರ್ಥಿಕವಾಗಿ ಸಂಪೂರ್ಣ ಸೊರಗಿ ದಿವಾಳಿಯಾಗುತ್ತಾರೆ. ಕೃಷಿ ಅವರ ಬದುಕಿನ ಶೈಲಿಯಲ್ಲ. ಹಣದಲ್ಲಿ ವ್ಯವಹರಿಸಲಿಕ್ಕೇ ಅಸಮರ್ಥರಾದ, ಅವರಿಗೆ ಹಣ, ಹೊಲ, ಮುಂತಾದ ನಮ್ಮ ಕಲ್ಪನೆಯ ಸಂಪತ್ತು ಸಂಪತ್ತಲ್ಲ. ಅವರ ಬದುಕಿನ ಶೈಲಿಯಿಂದಲೇ ಅವರನ್ನು ಬುಡಮೇಲು ಮಾಡಿ, ಬಳಿಕ ನಮ್ಮ ಲೆಕ್ಕಾಚಾರದ ಲಕ್ಷಾಂತರ ಹಣ ಕೊಟ್ಟರೆ ಅವರು ಅದನ್ನು ಬಳಸಲಾರರು. ಅದರಲ್ಲಿ ಅವರು ವ್ಯವಹರಿಸಲಾರರು ಹಾಗಾಗಿ ಅವರು ಒಮ್ಮಿಂದೊಮ್ಮೆಲೇ ದುರ್ಬಲೀಕರಣಕ್ಕೊಳಪಡುತ್ತಾರೆ, ದರಿದ್ರರಾಗುತ್ತಾರೆ.

ಉದಾಹರಣೆಗೆ, ಸ್ವಾತಂತ್ರ್ಯಾನಂತರ ಈ ದೇಶ ತನ್ನ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಹಾಕಿಕೊಂಡ ಕೆಲವು ಬೃಹತ್ ಅಣೆಕಟ್ಟು ಯೋಜನೆಯ ಪರಿಣಾಮವಾಗಿ, ಇದುವರೆಗೆ ೨೫ ಮಿಲಿಯಕ್ಕೂ ಅಧಿಕ ಬುಡಗಟ್ಟು ಜನಾಂಗದ ಜನರು ಯಾಂತ್ರಿಕವಾಗಿ ಸ್ಥಳಾಂತರಗೊಂಡು, ನಿರಾಶ್ರಿತರಾಗಿದ್ದಾರೆ. ಅನೇಕರು ನಿರ್ಗತಿಕರಾಗಿದ್ದಾರೆ, ಇನ್ನೂ ಅನೇಕ ಜನರ ಸಂತತಿ ಹೇಳ ಹೆಸರಿಲ್ಲದೆ ನಶಿಸಿ ಹೋಗಿದೆ. ನಮ್ಮ ಅಭಿವೃದ್ಧಿ ವ್ಯಾಖ್ಯೆಗಳಲ್ಲಿ, ಈ ನಿರಾಶ್ರಿತರ 'ಏಜೆಂಡಾ' ಕೂಡಾ ಇಲ್ಲ.

ಆಧುನಿಕ ಮನುಷ್ಯನ ಅಭಿವೃದ್ಧಿ ಪರಿಕಲ್ಪನೆಯೆಂದರೇ, ಬಹುಜನರ ನಿರ್ಗತೀಕರಣವೆಂದೇ ಹೇಳಬಹುದು. ಕಡಿಮೆ ಕಡಿಮೆ ಜನರಿಗೆ ಹೆಚ್ಚು ಹೆಚ್ಚು ಅಭಿವೃದ್ಧಿಯ ಲಾಭ ಹರಿಯುತ್ತಾ, ಹೆಚ್ಚು ಹೆಚ್ಚು ಮಂದಿ ಈ ಅಭಿವೃದ್ಧಿ ವರ್ತುಲದ ಕೇಂದ್ರದಿಂದ ಪರಿಧಿಗೆ ತಳ್ಳಲ್ಪಡುತ್ತಿರುವ ಈ ಅಭಿವೃದ್ಧಿ 'ಮಾಡೆಲ್'. ಕೋಮುವಾದ ಮತ್ತು ಇತರ ಅನಿಷ್ಟಗಳಂತೆಯೇ ಬಹುಜನರ ಮೇಲೆ ಎಸಗುವ ದಾರುಣ ಹಿಂಸೆ-ಕ್ರೌರ್ಯಗಳೆನ್ನದೆ ವಿಧಿಯಿಲ್ಲ.

ಆಧುನಿಕ ನಾಗರಿಕತೆಯ ಅಭಿವೃದ್ಧಿಗೆ ಅನಿವಾರ್ಯವಾದ ಗಣಿಗಾರಿಕೆಯ ಇತಿಹಾಸವಂತೂ, ಬುಡಗಟ್ಟು ಜನಾಂಗದವರ ದುರಂತದ ಇತಿಹಾಸವೇ ಆಗಿದೆ. ಎಲ್ಲೆಲ್ಲಿ ಭೂಗರ್ಭದಲ್ಲಿ ಖನಿಜ

ಸಂಪತ್ತು ನಿಕ್ಷೇಪಗಳಿವೆಯೋ, ಅಲ್ಲಲ್ಲಿನ ಭೂಮಿಯ ಮೇಲ್ಪದರು ಬಹಳ ಫಲವತ್ತಾಗಿದ್ದು, ದುರ್ಗಮ ಕಾಡುಗಳಿರುವುದನ್ನು ಸಾಮಾನ್ಯವಾಗಿ ನಾವು ಕಾಣಬಹುದು. ಇದೊಂದು ಪ್ರಕೃತಿಯ ನಿಗೂಢ ರಹಸ್ಯ. ಅಂಥ ಪ್ರದೇಶದಲ್ಲೇ ಬುಡಗಟ್ಟು ಜನಾಂಗದವರೂ ಹೆಚ್ಚಾಗಿ ಬದುಕುತ್ತಿರುತ್ತಾರೆ. ಹಾಗೂ ಗಣಿಗಾರಿಕೆಯೆಂದರೆ, ಬುಡಗಟ್ಟು ಜನಾಂಗದ ನಿರ್ವಸತೀಕರಣವೆಂದೇ ಸಮೀಕರಿಸಬಹುದು. ೨೦೦ ವರುಷಗಳ ಹಿಂದೆ ಬ್ರಿಟಿಷರು ಭಾರತಕ್ಕೆ ಬಂದಾಗ ಬಿಹಾರದಲ್ಲಿ ಭೂಮಿಯನ್ನು ಮೇಲಿಂದ ಕೆರೆದರೆ ಖನಿಜಗಳು ದೊರೆಯುತ್ತಿತ್ತು. ಅಂಥ ಪ್ರಕೃತಿ ಸಂಪತ್ತಿನಿಂದ ತುಂಬಿತ್ತು ಬಿಹಾರ. ಆದರೆ ಬ್ರಿಟಿಷರು ನೂರು ವರುಷದಲ್ಲಿ ಈ ಭೂಮಿಯನ್ನು ಗದ್ದೆಯಂತೆ ಉತ್ತು ಕೆರೆದು, ಅಗೆದು ಬಗೆದು ಇಡಿಯ ಬಿಹಾರದ ಆರ್ಥಿಕತೆಯನ್ನೇ ಧ್ವಂಸ ಮಾಡಿದರು. ಅದರ ಜೊತೆ ಅಲ್ಲಿನ ಬುಡಗಟ್ಟು ಸಂತತಿಗಳನ್ನೂ ನಾಶ ಮಾಡಿದರು. ಭೂಮಿಯನ್ನು ಸಂಪೂರ್ಣ ಬರಡುಗೊಳಿಸಿದರು. ಪರಿಣಾಮವಾಗಿ, ಭಾರತದ ಇತಿಹಾಸದುದ್ದಕ್ಕೂ ಶ್ರೀಮಂತ ರಾಜ್ಯವಾಗಿ ಮೆರೆದ ಬಿಹಾರವು ಇಂದು ಅತ್ಯಂತ ಹಿಂದುಳಿದ ಬರಗಾಲ ಪೀಡಿತ ಪ್ರದೇಶವಾಗಿದೆ.

ಅಭಿವೃದ್ಧಿಯ ಸಂಕೀರ್ತನಕಾರರು ಅನೈತಿಕ ವಿಧಾನದಲ್ಲಾದರೂ ಒಟ್ಟಾರೆಯಾಗಿ ಅಭಿವೃದ್ಧಿಯನ್ನು ಸಮರ್ಥಿಸುತ್ತಾ, 'ದೇಶ ಅಭಿವೃದ್ಧಿಪಥದಲ್ಲಿ ಸಾಗಬೇಕಾದರೆ ಯಾರಾದರೂ ಸ್ವಲ್ಪ ತ್ಯಾಗ ಮಾಡಬೇಕು' ಎನ್ನುತ್ತಾರೆ. ಯಾರು ತ್ಯಾಗ ಮಾಡಬೇಕು ? ಯಾರು ಅಭಿವೃದ್ಧಿಗೆ ಬಲಿಯಾಗಬೇಕು ? ಬುಡಗಟ್ಟು ಜನಾಂಗದವರಾಗಲೀ ಕಡು ಬಡವರಾಗಲೀ ಅವರಿಗೆ ಎಂದೂ ತಲುಪದ ಈ ಅಭಿವೃದ್ಧಿಗೆ ಬಲಿಯಾಗಬೇಕು ? ಪ್ರತಿಯೊಬ್ಬರಿಗೂ ತಮ್ಮ ತಮ್ಮ ಜೀವ ಪವಿತ್ರ. ಇನ್ನೊಬ್ಬರ ಆಡಂಬರದ ಜೀವನಕ್ಕೆ ಇವರು ನಿರಂತರ ಏಕೆ ಬಲಿಯಾಗಬೇಕು ? ಅಭಿವೃದ್ಧಿಯ ಪ್ರಯೋಜನ ಪಡೆಯುವ ವರ್ಗ ತಾನೇ ಯಾಕೆ ಬಲಿದಾನ ಮಾಡಬಾರದು ? ಈ ರೀತಿಯ ಪ್ರಶ್ನೆಯನ್ನು ನಮಗೆ ನಾವು ಒಮ್ಮೆಯಾದರೂ ಕೇಳಿಕೊಳ್ಳುವ ಒಂದು 'ಮಾಡೆಸ್ಟಿ' ಅಥವಾ ನೈತಿಕ ಸಂವೇದನೆ ಕೂಡ ಇಲ್ಲದಷ್ಟು ಮೊಂಡಾಗಿದೆ ನಮ್ಮ ಬರ್ಬರ ಜನಾಂಗದ ಸಂವೇದನೆಗಳು. ಇನ್ನೊಬ್ಬರ ಬಲಿಯ ಅನಿವಾರ್ಯತೆಯ ಬಗ್ಗೆ ಹೇಳುವ ನಮ್ಮೀ ಜನಾಂಗಕ್ಕೆ ನಾಚಿಕೆ ಕೂಡಾ ಇಲ್ಲ.

ಯಾವ ವರ್ಗ ನಿಜಕ್ಕೂ ಬುಡಗಟ್ಟು ಜನಾಂಗ ಎಂಬ ಚರ್ಚೆ ನಮ್ಮ ದೇಶದಲ್ಲಿ ನೆಹರೂ ಕಾಲದಿಂದಲೂ ನಿರಂತರವಾಗಿ ನಡೆಯುತ್ತಿದೆ. ಇಂದು ಬುಡಗಟ್ಟು ಜನಾಂಗವೆಂದು ಪರಿಗಣಿಸಲ್ಪಟ್ಟ ಅನೇಕ ವರ್ಗಗಳು, ನಿಜವಾಗಿ ಅರಣ್ಯವನ್ನು ಅವಲಂಬಿಸಿ ಜೀವನ ನಡೆಸುತ್ತಿಲ್ಲ. ಅನೇಕ ಇತರ ವರ್ಗದವರೂ ಬುಡಗಟ್ಟು ಹಣೆಪಟ್ಟಿಯಡಿ ಎಕ್ರೆಗಟ್ಟಲೆ ಕಾಡನ್ನು ಆಕ್ರಮಿಸಿಕೊಂಡು, ಕಾಡು ಕಡಿದು, ಕಾಡಿನೊಳಗೇ ಕೃಷಿ ಮಾಡುತ್ತಿದ್ದಾರೆ. ಜಾನುವಾರು ಸಾಕಣೆ ಮಾಡುತ್ತಿದ್ದಾರೆ. ನಿಜವಾದ ರೈತರೂ, ಮೇಲ್ವರ್ಗದ ಬಲಿಷ್ಠರೂ ಕೃಷಿಗಾಗಿ ಅಥವಾ ಇತರ ಲಾಭದಾಯಕ ಕಸುಬಿನಿಂದ ಲಾಭಗಳಿಸಲಿಕ್ಕಾಗಿ ಕಾಡು ಸೇರಿದವರಿದ್ದಾರೆ. ಬುಡಗಟ್ಟು ಜನಾಂಗದವರಿಗೆ ಲಭ್ಯವಿರುವ ಚೂರು ಚೂರು ಸವಲತ್ತುಗಳನ್ನು ಈ ಬಲಿಷ್ಠರೇ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಬುಡಗಟ್ಟು ಜನಾಂಗದವರು ಹಿಂದಿನಿಂದಲೂ ಭೂಮಿ ಉತ್ತು ಕೃಷಿ ಮಾಡುವವರಲ್ಲ. ಆದರೆ ಇಂದು ಕಾಡು ಸೇರಿದ ಅನೇಕರು ಬೇಸಾಯ ಮಾಡುತ್ತಾರೆ, ಮಾತ್ರವಲ್ಲ, ಈ ಮಂದಿ ತಮ್ಮ ಲಾಭಕ್ಕಾಗಿ ಆದಿವಾಸಿಗಳನ್ನು

ಶೋಷಿಸುವುವವರೇ. ಆದರೆ ಕಾಡಿನಲ್ಲಿ ತಮ್ಮ ಇರುವಿಕೆಗೆ ತೊಂದರೆ ಬಂದಾಗ, ಮಾತ್ರ, ತಮ್ಮ ರಕ್ಷಣೆಗಾಗಿ ಅಮಾಯಕರಾದ ನಿಜ ಬುಡಗಟ್ಟು ಜನಾಂಗದವರನ್ನು ಎತ್ತಿಕಟ್ಟಿ ತಮ್ಮ ಸ್ವಂತ ರಕ್ಷಣೆಗಾಗಿ, ಅವರನ್ನು ಮಾನವ ಗುರಾಣಿಗಳಂತೆ ಬಳಸಿಕೊಳ್ಳುತ್ತಾರೆ. ಬುಡಗಟ್ಟು ಜನರ ಆಸಕ್ತಿಯನ್ನು  ಪೊರೆಯುವ ವೇಷ ತೊಟ್ಟ ಇಂಥ ನಕಲಿಗಳನ್ನು ಪ್ರತ್ಯೇಕಿಸಿ, ಅವರನ್ನು ಮಾತ್ರ ಕಾಡಿನಿಂದ ಹೊರಹಾಕುವುದು ಹೇಗೆ ? ಮತ್ತು ನಿಜಬುಡಗಟ್ಟು ಜನಾಂಗವು, ತನ್ನ ಅರಣ್ಯಾಧಾರಿತ, ಜೀವನವನ್ನು ಕಾಡಿನಲ್ಲಿ ನಡೆಸುತ್ತಿರುವವರೆಗೆ, ಕಾಡಿನಲ್ಲಿ ಅವರ ಬದುಕುವ ಹಕ್ಕನ್ನು ರಕ್ಷಿಸುವುದು ಹೇಗೆ ? ಇದು ನಿಜಕ್ಕೂ ಬಹುದೊಡ್ಡ ಸವಾಲು.

ಈ ಸಂದರ್ಭದಲ್ಲಿ ನನ್ನ ಪರಿಸರಾತ್ಮಕ 'ಆ್ಯಕ್ಟಿವಿಸ್ಟ್' ಬದುಕಿನ ಅನುಭವದ ಹಿನ್ನೆಲೆಯಲ್ಲಿ ನಾನು ಕಂಡುಕೊಂಡ ಕೆಲವು ಸಂಗತಿಗಳನ್ನು ಉಲ್ಲೇಖಿಸಲು ಇಚ್ಛಿಸುತ್ತೇನೆ. ಕಾಡು ಉತ್ಪತ್ತಿಯಾಧಾರಿತ ವ್ಯಾಪಾರಿ ವರ್ಗಗಳು, ಕಾಡು ಕೊಳ್ಳೆ ಹೊಡೆಯುವ ಲಾಭಿಗಳು ಅಥವಾ ಇತರ ಲಾಭದ ದಂಧೆಗಳನ್ನು ನಡೆಸುವ ಮಾರುಕಟ್ಟೆ ಶಕ್ತಿಗಳು, ಕಾಡಿನ ಉತ್ಪತ್ತಿಯ ಕಳ್ಳಸಾಗಣೆಗಾಗಿ ಈ ಬುಡಗಟ್ಟು ಜನಾಂಗದವರನ್ನು ಬಳಸಿಕೊಳ್ಳುವ ನಿದರ್ಶನವು ನಮಗೆ ವಿಪುಲವಾಗಿ ದೊರೆಯುತ್ತದೆ. ಇಂಥ ಸಂದರ್ಭದಲ್ಲಿ ನಮ್ಮ ನಿಲುವು ಏನು ಎಂಬುದು ಬಹಳ ಮುಖ್ಯವಾಗುತ್ತದೆ. ಇದನ್ನು ಕೇವಲ 'ಸೆರೆಬ್ರಲ್' ಆಗಿ ಸೈದ್ಧಾಂತಿಕ ನೆಲೆಯಲ್ಲಿ ನಿರ್ಧರಿಸಲಾಗದು.

ಇಲ್ಲಿ ಇನ್ನೊಂದು ಮಹತ್ತ್ವದ ಸಂಗತಿಯನ್ನು ಗಮನಿಸಬೇಕು. ಅರಣ್ಯ ರಕ್ಷಣೆಯ ಕಾಯಿದೆಗಳು ಬೇಕೋ ಬೇಡವೋ ಎಂಬ ಚರ್ಚೆ ಈಗ ಇಡೀ ದೇಶಾದ್ಯಂತ ನಡೆಯುತ್ತಿದೆ. ಇಲ್ಲಿ ಮೂರು ರೀತಿಯ ಮುಖ್ಯ ವ್ಯಾಖ್ಯಾನಗಳನ್ನು ನಾವು ಗಮನಿಸಬಹುದು.

ಮೊದಲನೆಯದು, ಅರಣ್ಯ ಕಾಯಿದೆಗಳೇ ಬಂಡವಾಳಶಾಹೀ ನೀತಿಯ ಕರಾಳ ಮುಖ. ನಿಜ ವಾರಿಸುದಾರರಾದ ಬುಡಗಟ್ಟು ಜನಾಂಗದವರನ್ನು ಬಲಾತ್ಕಾರವಾಗಿ ವನ್ಯಜೀವಿ ಸಂರಕ್ಷಣೆಯ ಈ ಕಾಯಿದೆಯ ನೆಪದಲ್ಲಿ ಕಾಡಿನಿಂದ ಎಬ್ಬಿಸಿ, ಮುಂದೆ ಬೇರೆ ಬೇರೆ ಸಂಶೋಧನಾ ಕಾರ್ಯಕ್ರಮಗಳಿಗೆ, ಪ್ರವಾಸೋದ್ಯಮ ಅಭಿವೃದ್ಧಿಯ ನೆಪದಲ್ಲಿ ಬಲಿಷ್ಠ ಮಾರುಕಟ್ಟೆ ಶಕ್ತಿಗಳಿಗೆ, ಕಾಡನ್ನು ತೆರೆದಿಟ್ಟು ಸೂರೆ ಮಾಡಲು ಬಿಡುವ ಹುನ್ನಾರವಿದು. ಹಾಗಾಗಿ ಕಾಯಿದೆಗಳಿಂದ ಅರಣ್ಯ ರಕ್ಷಣೆ ಸಾಧ್ಯವಿಲ್ಲ. ಗುಡ್ಡಗಾಡು ಜನಾಂಗದವರೇ ಕಾಡಿನ ನಿಜ ಕಾವಲುಗಾರರು, ಅವರೇ ಹಿಂದಕ್ಕೂ ಕಾಡನ್ನು ರಕ್ಷಿಸಿ, ಪೋಷಣೆ ಮಾಡುತ್ತ ಬಂದವರು. ಅವರ ಕೈಗೆ ಅರಣ್ಯ ರಕ್ಷಣೆಯ ಕೆಲಸವನ್ನು ಬಿಟ್ಟುಕೊಡಬೇಕು ಎಂಬುದು ಈ ವರ್ಗದ ವಾದ.

ಎರಡನೆಯ ಪಂಥ ವನ್ಯಜೀವಿ ಸಂರಕ್ಷಣಾವಾದಿಗಳದು. ಇಂದು ವನ್ಯಜೀವಿಗಳು ಬದುಕಲು ಸಾಧುವಾಗುವಂಥ ಅಭಯಾರಣ್ಯಗಳ ಪ್ರಮಾಣ, ಈ ದೇಶದ ಒಟ್ಟು ಭೂಪ್ರದೇಶದ ಶೇಕಡಾ ಒಂದಕ್ಕಿಂತಲೂ ಕೆಳಗಿಳಿದಿದೆ. ದೇಶದ ಅಮೂಲ್ಯ ಸಂಪತ್ತಾದ ವನ್ಯಜೀವಿಗಳ ಮತ್ತು ಇತರ ಜೀವಜಾಲ ವಿಕಾಸಕ್ಕಾಗಿ ಹಾಗೂ ನಮ್ಮ ಜೀವ ಪರಿಸರದ ಆರೋಗ್ಯ ಕಾಪಾಡಲಿಕ್ಕಾಗಿ ಶೇಕಡಾ ಒಂದರಷ್ಟು ಕಾಡನ್ನಾದರೂ ನಿರ್ಜನ ಅಭಯಾರಣ್ಯಗಳಾಗಿ ಸಂರಕ್ಷಿಸಬೇಡವೇ ? ಇಷ್ಟು ಉದಾರತೆಯಾದರೂ ಮಾನವರಿಗಿರಬೇಡವೇ ? ಈ ದೃಷ್ಟಿಯಿಂದ ಕಾನೂನು ಮತ್ತು ಅದರ

ಕಟ್ಟುನಿಟ್ಟಿನ ಪಾಲನೆ ಅತೀ ಅಗತ್ಯ. ಹಾಗಾಗಿ ಬುಡಗಟ್ಟು ಜನರನ್ನು ಈ ಕಾಡುಗಳಿಂದ ಸೂಕ್ತವಾಗಿ ಸ್ಥಳಾಂತರಿಸಿ, ಮರುವಸತಿ ನಿರ್ಮಾಣ ಮಾಡಬೇಕು ಎಂಬುದು ಇವರ ವಾದ.

ಮೂರನೆಯ ವರ್ಗದವರನ್ನು ಮಧ್ಯಮ ಮಾರ್ಗಿಗಳೆನ್ನಬಹುದು. ನಾವು ಇತಿಹಾಸವನ್ನು ಅವಲೋಕಿಸಿದರೆ, ವಿಸ್ತಾರವಾದ ದೊಡ್ಡ ದೊಡ್ಡ ವನಗಳ ರಕ್ಷಣೆಯನ್ನು ಪರಂಪರಾಗತವಾಗಿಯೂ ರಾಜರು ಅಥವಾ ಸರಕಾರಗಳೇ ಮಾಡಿಕೊಂಡು ಬಂದಿರುವುದು ಕಂಡು ಬರುತ್ತದೆ. ಒಂದು ದೃಷ್ಟಿಯಲ್ಲಿ ನೋಡಿದರೆ, ಕಾಡು ಯಾವ ಕಾನೂನೂ ಇಲ್ಲದೆ, 'ಫ್ರಿ ಫಾರ್ ಆಲ್' ಸ್ಥಿತಿಯಲ್ಲಿದ್ದಾಗ ಈ ಬುಡಗಟ್ಟು ಜನಾಂಗದವರನ್ನು ಲಾಭಬಡುಕ ಖಾಸಗೀ ಬಂಡವಾಳ ಶಾಹಿಗಳು, ಪ್ರವಾಸೋದ್ಯಮಿಗಳು, 'ಜಂಟಲ್‌ಮ್ಯಾನ್' ಕೃಷಿಕರು, ಬೃಹತ್ ಕಂಪೆನಿಗಳು ಮುಂತಾದವರು ಕ್ರೂರ ರೀತಿಯಲ್ಲಿ ದಬ್ಬಾಳಿಕೆ, ಶೋಷಣೆಗೆ ಒಳಪಡಿಸುವ ಸಾಧ್ಯತೆ ಅತ್ಯಂತ ಸ್ಪಷ್ಟವಾಗಿದೆ. ಹಾಗಾಗಿ ಈ ವರ್ಗ ಕಾನೂನು ಬೇಡ ಎನ್ನುವುದಿಲ್ಲ. ಕಾನೂನು ವನ ಸಂರಕ್ಷಣೆಗೆ ಹಿತವಾಗುವುದಾದರೆ ಅದು ಇದ್ದುಕೊಳ್ಳಲಿ. ಆದರೆ ಅವು ಸ್ಪಷ್ಟವಾಗಿ ಗುಡ್ಡಗಾಡು ಜನಾಂಗದವರ ಹಾಗೂ ಕಾಡು ವೃತ್ತಿಯಿಂದಲೇ ಜೀವನ ಸಾಗಿಸುವ ವರ್ಗದ ಪರವಾಗಿರಬೇಕು. ಎಂದೆಂದೂ, ಅಲ್ಲಿನ ಮೂಲನಿವಾಸಿಗಳನ್ನು ಕಾಡು ಸಂರಕ್ಷಣೆಯ ನೆಪದಲ್ಲಿ ಒಕ್ಕಲೆಬ್ಬಿಸಿ ಕಾಡಿನ ಉತ್ಪತ್ತಿ ಮೂಲದಿಂದಲೇ ಕಾಡಿನಲ್ಲಿ ಬದುಕುವ ಅವರ ಹಕ್ಕನ್ನು ಅವರಿಂದ ಕಸಿದುಕೊಳ್ಳಬಾರದು. ಅರಣ್ಯ ಸಂರಕ್ಷಣಾ ಕಾನೂನಿನಲ್ಲಿ ಈಗ ಏನಾದರೂ ದೋಷವಿದ್ದರೆ, ಅದು ಹೆಚ್ಚು ಹೆಚ್ಚು ಮೂಲನಿವಾಸಿಗಳ ಬದುಕಿನ ಪಕ್ಕನತ್ತ ಮಾನವೀಯಗೊಳ್ಳುವಂತೆ ಸೂಕ್ತ ತಿದ್ದುಪಡಿಗಳ ಮೂಲಕ ಬದಲಾವಣೆ ಮಾಡಬೇಕು. ಇದಕ್ಕಾಗಿ ಈ ಜನತಂತ್ರ ವ್ಯವಸ್ಥೆಯಲ್ಲಿ ಜನಾಂದೋಳನ ರೂಪಿಸಿಕೊಂಡು ಕಾನೂನು ಸರಿಪಡಿಸಿಕೊಳ್ಳುವಂತೆ ಸರಕಾರಗಳನ್ನು ಒತ್ತಾಯಿಸಬಹುದು. ಜನರ ಹಿತಾಸಕ್ತಿಯ ನೆಪದಲ್ಲಿ ಯಾವ ಕಾನೂನು ಬೇಡ, ಕಾಡುಜನರಿಂದಲೇ ಕಾಡು ರಕ್ಷಿಸಲ್ಪಡುತ್ತದೆ ಎಂಬ 'ಅನಾರ್ಕಿಸ್ಟ್' ನಿಲುವೂ ಅಷ್ಟು ಸಮಂಜಸವಲ್ಲ ಎಂಬುದು ಇವರ ಅಭಿಪ್ರಾಯವಾಗಿದೆ. ಏಕೆಂದರೆ ಯಾವ ಕಾನೂನೂ ಇಲ್ಲದ್ದಲ್ಲಿ, ಬಲಿಷ್ಠರಾದ ದಬ್ಬಾಳಿಕೋರರು, ಬಂಡವಾಳ ಶಾಹಿಗಳು, ಇತರ ನಾನಾ ರೀತಿಯ ಖಾಸಗೀ ಮಾರುಕಟ್ಟೆ ಲಾಬಿಗಳು, ಈ ಅಮಾಯಕ ಗುಡ್ಡಗಾಡು ಜನಾಂಗವನ್ನು ನೆಮ್ಮದಿಯಿಂದ ಬದುಕಲು ಬಿಡುತ್ತಾರೆಯೇ ಎಂಬ ವಾಸ್ತವವನ್ನೂ ನಾವು ಮನಗಾಣಬೇಕಾಗಿದೆ. ಕಾನೂನೇ ಇಲ್ಲದ ಸ್ಥಿತಿ ಒಂದು ಆದರ್ಶ ಮಾತ್ರ. ಕೇವಲ ಆದರ್ಶ, ಸಿದ್ಧಾಂತಗಳ ಮೇಲೆ ಜನಸಾಮಾನ್ಯರ ಬದುಕು ನಿಲ್ಲಲಿಲ್ಲ. ನಮ್ಮ ಆದರ್ಶ ಜನರ ಮೇಲೆ ಹೇರಲಿಕ್ಕೆ ಆಗದು. ಏನಿದ್ದರೂ ನಾವು ಸತ್ಯವನ್ನು ನೇರವಾಗಿ ಅವಲೋಕಿಸಬೇಕು. ಸೈದ್ಧಾಂತಿಕ ಭ್ರಮೆಯ ಆಧಾರದ ಮೇಲಲ್ಲ. ಈ ಆದರ್ಶಗಳು ಹೇಗೆ ಪಾಲನೆಗೊಳ್ಳುತ್ತವೆ ಎಂಬುದನ್ನು ದುರ್ಬಲ ಜನಾಂಗದವರ ಸಂಗಡವೇ ಕೇಳಬೇಕು. ಅಂತೂ ಮಧ್ಯಮ ಮಾರ್ಗಿಗಳ ವಾದದಲ್ಲಿ, ಕಾನೂನು ಮುಖ್ಯವೂ ಅಲ್ಲ, ಅನಿವಾರ್ಯವೂ ಅಲ್ಲ. ಆದರೆ ಇಲ್ಲಿನ ಮೂಲನಿವಾಸಿಗಳ ಬದುಕುವ ಹಕ್ಕಿಗೆ ಸಂಪೂರ್ಣ ಮನ್ನಣೆ ಕೊಡಬೇಕೆಂಬುದೇ ಇವರ ವಾದ.

ಆದರೆ ಇದಕ್ಕೆ ಮೂಲನಿವಾಸಿಗಳ ಬದುಕಿನ ನಿರ್ವಹಣೆಯ ಅರಣ್ಯಾಧಾರಿತವಾಗಿರುವುದು ಮಾತ್ರ ಬಹಳ ಮುಖ್ಯ. ಆದರೆ ತಾವೇ ಆಧುನಿಕ ರೀತಿಯ ಬದುಕುವ ಹಂಬಲದಿಂದ ಕಾಡಿನಿಂದ

ಹೊರಬರುವ ಅಪೇಕ್ಷೆ ತೋರಿಸಿದಲ್ಲಿ ಅವರಿಗೆ ಆ ಆಯ್ಕೆಯ ಸ್ವಾತಂತ್ರ್ಯವೂ ಬೇಕು.

ಇನ್ನೂ ಒಂದು ಅಂಶವೇನೆಂದರೆ, ರಕ್ಷಿತಾರಣ್ಯದಲ್ಲಿರುವ ಗುಡ್ಡಗಾಡು ಜನಾಂಗದವರು ತಮ್ಮ ಬದುಕಿನ ಶೈಲಿಯನ್ನು ಅರಣ್ಯಾಧಾರಿತವಾಗಿಯೇ ಇಟ್ಟುಕೊಳ್ಳುವುದು ಮಾತ್ರ ಕಾಡಿನ ಸಂರಕ್ಷಣೆಯ ದೃಷ್ಟಿಯಿಂದ ಬಹುಮುಖ್ಯ. ಅವರು ಕೃಷಿ ಕಸುಬು, ಹೈನುಗಾರಿಕೆ ಅಥವಾ ಇನ್ನಿತರ ಕಸುಬಿಗೆ ತಾವು ತಮ್ಮ ಬದುಕನ್ನು ಪರಿವರ್ತಿಸಿಕೊಳ್ಳುವ ಸಂದರ್ಭದಲ್ಲಿ ಅವರು ಕಾಡಿನಿಂದ ಸ್ಥಳಾಂತರಗೊಳ್ಳುವುದು ತಪ್ಪೇನಿಲ್ಲ. ಇಲ್ಲದಲ್ಲಿ ಬೇರೆ ಬೇರೆ ದಂಧೆ ಮಾಡುವ ಇತರರು ಗುಡ್ಡಗಾಡು ಜನರಂಬ ಸೋಗಿನಲ್ಲಿ ಕಾಡನ್ನು ಬೋಳಿಸಿ ಕೃಷಿ, ತೋಟಗಾರಿಕೆ ಅಥವಾ ಇನ್ನಿತರ ಲಾಭದಾಯಕ ಅರಣ್ಯೇತರ ಆರ್ಥಿಕ ಕಸುಬನ್ನು ಮಾಡಿಕೊಂಡಾರು. ಆದರೆ ಕಾಡಿನಲ್ಲೇ ನಾಡಿನ ಎಲ್ಲಾ ವ್ಯವಸ್ಥೆಗಳನ್ನು ತಮಗೆ ಕಲ್ಪಿಸಿಕೊಡಬೇಕೆನ್ನುವ ವಾದ ಅಷ್ಟೊಂದು ಸಮಂಜಸವಲ್ಲ ಎಂಬುದು ಇವರ ಮತ.

ಇದರರ್ಥ ಬುಡಗಟ್ಟು ಜನಾಂಗವು ಈಗಿದ್ದ ರೀತಿಯಲ್ಲೇ ತಮ್ಮ ಬದುಕು ಸಾಗಿಸಬೇಕೇ ? ಅವರು ಅಭಿವೃದ್ಧಿಯ ಪಥದಲ್ಲಿ ಸಾಗಿ ಆಧುನಿಕ ಪ್ರಗತಿಯ ಫಲಕ್ಕೆ ಭಾಗಿಗಳಾಗುವುದು ಬೇಡವೇ? ಈ ಚರ್ಚೆಯೂ ಇನ್ನೊಂದೆಡೆ ಇದೆ.

ಹಾಗಾಗಿ ಬುಡಗಟ್ಟು ಜನಾಂಗದವರ ಸ್ಥಳಾಂತರದ ಪ್ರಶ್ನೆ ಬಹಳ ಸಂಕೀರ್ಣವಾದದ್ದು. ಇದನ್ನು ಅತ್ಯಂತ ಎಚ್ಚರಿಕೆಯಿಂದ, ಅವರ ಮೇಲೆ ಉತ್ಕಟ ಕಾಳಜಿಯಿಂದ, ಅವರ ಒಟ್ಟು ಹಿತದೃಷ್ಟಿಯಿಂದ, ಅದರ ಜೊತೆಗೆ ಅರಣ್ಯ ಸಂರಕ್ಷಣೆಯ ದೃಷ್ಟಿಯನ್ನೂ ಇಟ್ಟುಕೊಂಡು ನೋಡಬೇಕಾಗಿದೆ.

ಒಟ್ಟಿನಲ್ಲಿ, ಆಧುನಿಕ ಪ್ರಗತಿ ವ್ಯಾಖ್ಯಾನಗಳು, ಮುಖ್ಯವಾಗಿ ಆಧುನಿಕ ಜಾಗತಿಕ ಪ್ರಕ್ರಿಯೆಗಳು ಅತ್ಯಂತಿಕವಾಗಿ ಬಲಿಷ್ಠಪರವಾದ ಮಾರುಕಟ್ಟೆ ಅರ್ಥವ್ಯವಸ್ಥೆಯನ್ನೇ ಸ್ಪಷ್ಟವಾಗಿ ಎತ್ತಿ ಹಿಡಿಯುತ್ತವೆ. ನಿಜಕ್ಕೂ ಈ ಅರ್ಥವ್ಯವಸ್ಥೆ ಮಾರುಕಟ್ಟೆ ಶಕ್ತಿಗಳನ್ನು ಛೂ ಬಿಟ್ಟು ಬಿಟ್ಟಿದೆ. ದುರಾದೃಷ್ಟವಶಾತ್ ಈ ಲಾಭಾಧಾರಿತ ಮಾರುಕಟ್ಟೆ ಅರ್ಥವ್ಯವಸ್ಥೆಗೆ ಒಂದು ಸಾಮಾಜಿಕ ದರ್ಶನವಿಲ್ಲ. ಸಾಮಾಜಿಕ ದರ್ಶನವನ್ನು ಅಳವಡಿಸಿಕೊಳ್ಳುವ ಸೌಲಭ್ಯಗಳೂ ಇದರೊಳಗಿನ ನೀತಿಯಲ್ಲಿಲ್ಲ. ಹಾಗಾಗಿ ಈ ಅರ್ಥವ್ಯವಸ್ಥೆ, ಅತ್ಯಂತ ಅಮಾನವೀಯ ರೀತಿಯಲ್ಲಿ ವಿಭಜನಕಾರಿಯಾದದ್ದು, ಕಲ್ಪಿತ ಪ್ರಗತಿಯ ದುರಾಸೆಯನ್ನು ದ್ವಿಗುಣಗೊಳಿಸುವಂಥದು, ಮತ್ತು ಗ್ರಾಹಕ ಸಂಸ್ಕೃತಿಯನ್ನು ವಿಜೃಂಭಿಸುವಂಥದು. ಇಂಥ ಆರ್ಥಿಕ ಪ್ರಗತಿಯ 'ಮಾಡೆಲ್' ನಲ್ಲಿ, ದುರ್ಬಲೀಕೃತ ವರ್ಗಗಳಿಗೆ ಸ್ಥಾನವೆಲ್ಲಿಯದು ? ಅವರಲ್ಲೂ ಬುಡಗಟ್ಟು ಜನಾಂಗದ ಜನರು, ದಲಿತರು, ಅತ್ಯಂತ ಗಂಭೀರ ಬಿಕ್ಕಟ್ಟನ್ನು ಎದುರಿಸಬೇಕಾಗಿದೆ. ಇಡಿಯ ಅಭಿವೃದ್ಧಿ ಪ್ರಕ್ರಿಯೆಯ ಟಿಪ್ಪಣಿಗಳಲ್ಲೇ ಇಂದು ದಲಿತರು, ಬುಡಗಟ್ಟು ಜನರು, ಬಡವರು, ನಿರ್ಗತಿಕರು, ಗ್ರಾಮೀಣ ಮಹಿಳೆಯರು ಕಾಣಸಿಕೊಳ್ಳುವುದೇ ಇಲ್ಲ. ಮಾತ್ರವಲ್ಲ, ೭೦ರ ದಶಕದಲ್ಲಿ ಈ ಜನಾಂಗದ ಮೇಲಿದ್ದ ಚೂರು ಚೂರು ಕಾಳಜಿಯೂ ಇಂದು ಮಾಯವಾಗಿದೆ.

ಆದರೆ ವಿಪರ್ಯಾಸವೆಂದರೆ, ಈ ಬುಡಗಟ್ಟು ಜನಾಂಗದ ದೇಶೀ ತಿಳುವಳಿಕೆಯ ಭಂಡಾರದಿಂದಲೇ, ಈ ಬಲಿಷ್ಠಪರ ಜಾಗತೀಕರಣ ಪ್ರಕ್ರಿಯೆಗೆ ಮೂಲಭೂತವಾದ ಸವಾಲೊಡ್ಡಲು

ಸಾಧ್ಯ. ಏಕೆಂದರೆ ಈ ಬದುಕಿನ ಕ್ರಮ ಆಧುನಿಕ ಪ್ರಗತಿ ವ್ಯಾಖ್ಯಾನಗಳಿಗಿಂತ ಸಂಪೂರ್ಣ ಭಿನ್ನವಾಗಿದ್ದು, ಸಂಪೂರ್ಣ ಅಪರಿಚಿತವಾದದ್ದು ಮತ್ತು ಸ್ವತಂತ್ರವಾದದ್ದು. ಹಾಗಾಗಿ ಈ ಅಪರಿಚಿತ ಆರ್ಥಿಕ ವಿನ್ಯಾಸಗಳು, ಆಧುನಿಕ ಪ್ರಗತಿ ವ್ಯಾಖ್ಯೆಯನ್ನು ದಂಗುಪಡಿಸುವಂಥದು. ಇದು ಸ್ವಯಂ ಆಧಾರಿತ, ಸ್ವಯಂ ತೃಪ್ತಿಯ ಜೀವನ ವಿಧಾನ. 'ಹೊರಗಿಡುವ ' 'ಅನ್ಯ'ರನ್ನಾಗಿ ಮಾಡುವ ಜಾಗತೀಕರಣದ ಅಭಿವೃದ್ಧಿ ಸಿದ್ಧಾಂತವು ೧೫ ರಿಂದ ೨೦ ಶೇಕಡಾ ಮಂದಿಯನ್ನೇ ಈ ಜಗತ್ತಿನ ಭೂಪಟದಿಂದ ಅಳಿ ಹಾಕುವ ಸಾಧ್ಯತೆಯಿದೆ. ಹಾಗಾಗಿ ಸಾಮುದಾಯಿಕ ಸಂಘರ್ಷ ಅನಿವಾರ್ಯವಾಗಿದೆ.

# ಮತಾತೀತ ಆಧ್ಯಾತ್ಮಿಕತೆ, ಧರ್ಮದ ವಿಕೇಂದ್ರೀಕರಣ : ಇಂದಿನ ಮೂಲಭೂತ ಆವಶ್ಯಕತೆ

"ಕೇಡುಕು ಮನುಷ್ಯನ ಅತಿ ಬುದ್ಧಿವಂತಿಕೆಯಿಂದ ಉದ್ಭವಿಸುತ್ತದೆ; ಮತ್ತು ಅದರ ಮೂಲ, ಪ್ರಕೃತಿಯಿಂದ ತನ್ನನ್ನು ಸಂಪೂರ್ಣ ಬೇರ್ಪಡಿಸಿಕೊಳ್ಳುವ ಶುಷ್ಕ ವೈಚಾರಿಕ ಮನುಷ್ಯನಲ್ಲಿ ಹುದುಗಿದೆ. ಆದ್ದರಿಂದ ಮಾನವ ಕುಲವೇ ನಿಜವಾದ ಕೇಡಿನ ಮೂಲವಲ್ಲವೇ ?"

\- ಗಾಂಧಿ

'ರಿಲಿಜನ್' ಪದವು ಒಂದು ಪ್ರದೇಶದ ಅಥವಾ ಸಮುದಾಯದ ಜನರು" 'ಅಲೌಕಿಕದ ಬಗ್ಗೆ ಹೊಂದಿರುವ ಒಟ್ಟು ನಂಬಿಕೆ ಮತ್ತು ಅದಕ್ಕೆ ಸಂಬಂಧಪಟ್ಟ ಆಚರಣೆಗಳು" ಎಂಬ ಅರ್ಥದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬಳಕೆಗೆ ಬಂತು. ಈ ಅಖಂಡ ನಂಬಿಕೆ, ಪರಂಪರಾಗತ ಕಟ್ಟುಕಟ್ಟಳೆಗಳಾಗಿ ಅಥವಾ ಆ ಮತದ ಪ್ರವಾದಿಯ ಶಾಸನಗಳ ರೂಪದಲ್ಲಿ ಹರಿದು ಬಂದಿರುವುದರಿಂದ ಅದು ಪ್ರಶ್ನಾತೀತವಾಯಿತು; ಮತ್ತು ಅಲ್ಲಿ ಯಾವುದೇ ಅರ್ಥ ವಿವರಣೆಗೆ, ವ್ಯಾಖ್ಯೆಗೆ, ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲವಾಯಿತು. ಆ ನಂಬಿಕೆಯ ವಿಮರ್ಶೆ ಅಥವಾ ಆ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸುವುದೂ ಕೂಡ ಧರ್ಮವಿರೋಧಿ ಕೆಲಸ (heresy), ಪಾಪದ ಕೆಲಸ; ಮಾತ್ರವಲ್ಲ, ಅದು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಲ್ಪಟ್ಟಿತು.

---

ಶೂದ್ರ (ಮಾಸಿಕ), ನವೆಂಬರ್ -ಡಿಸೆಂಬರ್ ೧೯೯೩ - ಫೆಬ್ರವರಿ ೧೯೯೩ 'ಶೂದ್ರ'ದ 'ಬೋಧಿವೃಕ್ಷ'ದ ಉದ್ಘಾಟನೆಯ ಸಂದರ್ಭದಲ್ಲಿ ಬೆಂಗಳೂರಲ್ಲಿ ನಡೆದ ಎರಡು ದಿನಗಳ 'ಧರ್ಮ ಸಂವಾದ'ದಲ್ಲಿ ಮಂಡಿಸಿದ ಪ್ರಬಂಧ.

ಪೌರಸ್ತ್ಯ ರಾಷ್ಟ್ರಗಳ 'ರಿಲಿಜನ್' ಕಲ್ಪನೆಯು ಇದಕ್ಕಿಂತ ಭಿನ್ನವಾಗಿದೆ. 'ಅಲೌಕಿಕ'ದ ಬಗ್ಗೆ ಈ ದೇಶಗಳಲ್ಲಿ ಹರಿದು ಬಂದ ಚಿಂತನೆಯನ್ನು 'ರಿಲಿಜನ್' ಎಂಬ ಸೀಮಿತ ಇಂಗ್ಲೀಷ್ ಪದದಲ್ಲಿ ಹಿಡಿದಿಡುವುದು ಸ್ವಲ್ಪ ಕಷ್ಟ. ಹಾಗಾಗಿ, ಅವಕ್ಕೆ ಅವವುಗಳದೇ ಆದ ವಿಶಿಷ್ಟ ದೇಸೀ ಪದಗಳನ್ನೇ ಬಳಸುವುದು ಸೂಕ್ತ. ಪೂರ್ವದ ಚಿಂತನೆಯಲ್ಲಿ 'ಧರ್ಮ' ಎಂದರೆ ಪರಂಪರಾಗತವಾಗಿ ಹರಿದುಬಂದ ಜನರ ನಂಬಿಕೆ ಮತ್ತು ಅದರ ಏಕರೂಪೀ ಆಚರಣೆಗಳ ಮೊತ್ತ ಮಾತ್ರವಲ್ಲ; ಅಥವಾ ಕೇವಲ ಒಬ್ಬ ಪ್ರವಾದಿಯ ಅನುಶಾಸನಗಳಲ್ಲ. ಬದಲಿಗೆ, ಧರ್ಮವು ಚಿಂತಕರಿಂದ, ಅನುಭಾವಿಗಳಿಂದ ಸತತವಾಗಿ ಪ್ರಶ್ನೆಗೆ, ಪುನರ್ವಿಮರ್ಶೆಗೆ, ವಿಭಿನ್ನ ವ್ಯಾಖ್ಯೆಗಳಿಗೆ ಒಳಪಟ್ಟಿದೆ. ಪರಸ್ಪರ ವಿರೋಧವಿರುವ, ಒಂದಕ್ಕೊಂದು ಸವಾಲಾಗಿರುವ, ಪೂರ್ವಪಕ್ಷ - ಉತ್ತರಪಕ್ಷಗಳಿಗೂ ಅವಕಾಶವಿರುವ ಅನೇಕ ವಿಚಾರಧಾರೆಗಳು ಇಲ್ಲಿ ಜತೆ ಜತೆಗೇ ಹರಿದುಬಂದಿವೆ. 'ದಿವ್ಯದ' ಕಲ್ಪನೆಯಲ್ಲಿ ಏಕಮತವಿಲ್ಲ. ದಿವ್ಯದ ಸಾಕ್ಷಾತ್ಕಾರಕ್ಕೆ ಒಂದೇ ರಾಜಮಾರ್ಗ ಇಲ್ಲ; ಮಾತ್ರವಲ್ಲ, ಕೆಲವು ವಿಚಾರ ಧಾರೆಗಳೂ ದೇವರ ಬಗ್ಗೆಯೇ ತಟಸ್ಥ - ಉದಾಸೀನ ಧೋರಣೆಯನ್ನು ತಳೆಯುತ್ತವೆ. ಪತಂಜಲಿಯ ಯೋಗಸೂತ್ರದಲ್ಲಿ 'ಈಶ್ವರ ಪ್ರಣಿಧಾನ' ಅನಿವಾರ್ಯ ಅಲ್ಲ. ಸಾಂಖ್ಯರಲ್ಲಿ -ಮೀಮಾಂಸಕಾರರಲ್ಲೂ ಅಷ್ಟೆ. ಆಸ್ತಿಕವಾದ, ನಾಸ್ತಿಕವಾದ, ನಿರೀಶ್ವರವಾದ, ಏಕದೇವತಾವಾದ, ಬಹುದೇವತಾವಾದ, ಸಮಾನದೇವತಾವಾದ - ಇವೆಲ್ಲವೂ ಭಾರತದ ಧಾರ್ಮಿಕ ಚಿಂತನೆಯಲ್ಲಿ ಅಡಕವಾಗಿರುವ ಒಂದಕ್ಕೊಂದು ಹೊಂದಾಣಿಕೆಯಿರದಂತೆ ತೋರುವ ಸಂಗತಿಗಳು. ಈ ವಿಭಿನ್ನ ವಿಚಾರಧಾರೆಗಳ ಸಂಕೀರ್ಣ ಮೊತ್ತವೇ ಧರ್ಮ.

ಪೂರ್ವದ ಧರ್ಮದ ಕಲ್ಪನೆಯನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಒಂದು ಸ್ವಭಾವಾತ್ಮಕ (naturalistic)ವಾದುದು. ಇನ್ನೊಂದು ನಿಯಮಾತ್ಮಕ (normative) ವಾದುದು. ಮೊದಲ ವಿಭಾಗವನ್ನು ಉಪನಿಷತ್ಕಾರರು, 'ಋತ' ಎಂದು ಕರೆದರು. ಈ ಅರ್ಥದಲ್ಲಿ ಧರ್ಮ, ಸಮಗ್ರ ವಿಶ್ವವನ್ನು ಆಧರಿಸಿರುವ ಮೂಲಭೂತ ವಿಶ್ವತತ್ತ್ವ (cosmic principle). ಈ ಸುವ್ಯವಸ್ಥಿತ ವಿಶ್ವತತ್ತ್ವದ ವಿಭಿನ್ನ ಗುಣವಿಶೇಷಗಳನ್ನು, ಇಂದ್ರ, ವರುಣ, ಅಗ್ನಿ ಮುಂತಾದ ಆಯಾಯಾ ಗುಣ ವಿಶೇಷಗಳನ್ನು ಸೂಚಿಸುವ ಹೆಸರಿನಿಂದ ಕರೆದರು. ಪ್ರತಿಯೊಂದು ಭೌತ ವಸ್ತುವಿನ ಸ್ವಭಾವವೇ ಆಯಾಯ ವಸ್ತುವಿನ ಗುಣಧರ್ಮ. ಈ ಎಲ್ಲ ಅಸಂಖ್ಯ ಭೌತ ವಸ್ತುಗಳು ಒಂದು ಸುವ್ಯವಸ್ಥಿತ ವಿಶ್ವಸೂತ್ರದಿಂದ ಸಂಯೋಜಿಸಲ್ಪಟ್ಟಿದೆ. ಇದನ್ನು 'ಲೋಕ ಸಂಗ್ರಹ' ಎಂದು ಕರೆದರು. ಇಲ್ಲಿ ಸಾಮಾನ್ಯ ಮತಾಚಾರದ ಕಟ್ಟುಕಟ್ಟಳೆಗಳನ್ನು ಮೀರಿದ ಮತಾತೀತ ಆಧ್ಯಾತ್ಮಿಕತೆಯನ್ನು ನಾವು ಗಮನಿಸಬಹುದು.

ಧರ್ಮದ ಎರಡನೆಯ ಆಯಾಮ ನಿಯಮಾತ್ಮಕವಾದುದು (normative). ಇದು ನಮ್ಮ ಬದುಕಿನ ಮೂಲಭೂತ ತಾತ್ವಿಕತೆ, ಒಳಿತು ಕೆಡುಕುಗಳು, ಕರ್ತವ್ಯಗಳು, ಪ್ರಕೃತಿ ಸಹಜವಾಗಿ ಸಮರಸದಿಂದ ಬದುಕುವ ಕಲೆಯ ಬಗ್ಗೆ ಚಿಂತಿಸುತ್ತದೆ. ಇಲ್ಲೂ ಕೂಡ, ಮತದ ಚೌಕಟ್ಟಿನಲ್ಲಿ ಆದೇಶ - ಅನುಶಾಸನಗಳಿಲ್ಲ. ಧರ್ಮದ ಈ ಮುಖ, ಧರ್ಮದ ಪರಿಕಲ್ಪನೆಯ ಬಗ್ಗೆ ನಿರಂತರವಾಗಿ ನಡೆಯುತ್ತಲೇ ಇರಬೇಕಾದ ಧರ್ಮ ಸಂವಾದದ ಬಾಗಿಲು ತೆರೆಯಿತು. ಉಪನಿಷತ್ತು, ಮಹಾಭಾರತ ಮತ್ತು ಇತರ ಪೌರಸ್ತ್ಯ ಕ್ಲಾಸಿಕಲ್ ತತ್ವಶಾಸ್ತ್ರಗಳಲ್ಲಿ ಮತ್ತೆ ಮತ್ತೆ ಈ ಧರ್ಮ ಜಿಜ್ಞಾಸೆ

ಮುಂದುವರಿದದ್ದು ಕಾಣುತ್ತದೆ. ಇದಕ್ಕೆ ಮುಗಿತಾಯ ಇಲ್ಲ. ಹೀಗೆಯೇ ಎಂಬ ತೀರ್ಮಾನದ ಹಂತಕ್ಕೆ ಈ ಜಿಜ್ಞಾಸೆ ತಲುಪುವುದಿಲ್ಲ; ಇಂದೂ ತಲುಪುವುದಿಲ್ಲ. ಮುಂದೆಯೂ ಈ ಸಂವಾದ ಮುಂದುವರಿಯಬೇಕೆಂಬ ಆಶಯ ಅದರೊಳಗಿನಿಂದಲೇ ಇರುವುದು ವ್ಯಕ್ತವಾಗುತ್ತದೆ.

ಧರ್ಮದ ಈ ನಿಯಾಮಾತ್ಮಕ ಆಯಾಮವು ಭಾರತದಲ್ಲಿ ನಿತ್ಯಾನುಷ್ಠಾನದಲ್ಲಿ ಆಚರಿಸಬೇಕಾದ ಗೃಹ್ಯಸೂತ್ರಗಳ ರೂಪದಲ್ಲಿ ಮೂಡಿ ಬಂದುವು. ದೈನಂದಿನ ಬದುಕಿನಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಕಾಲದೇಶಕ್ಕನುಗುಣವಾಗಿ ಮೂರ್ತ ರೂಪದಲ್ಲಿ ಈ ನಿಯಮಗಳು ವಿವರಿಸುತ್ತವೆ. ಇವು ಸಾರ್ವಕಾಲಿಕ ಶಾಶ್ವತ ಮೌಲ್ಯಗಳೆಂಬ ಕಲ್ಪನೆಯೇನೂ ಇರಲಿಲ್ಲ, ಮಾತ್ರವಲ್ಲ ಒಂದೇ ನಿಯಮಗಳು ಎಲ್ಲ ವರ್ಗಕ್ಕೂ, ಎಲ್ಲ ಕಾಲಕ್ಕೂ, ಎಲ್ಲ ಸಂದರ್ಭಗಳಲ್ಲೂ, ಎಲ್ಲ ಪ್ರದೇಶಗಳಿಗೂ (context free) ಅನ್ವಯವಾಗುತ್ತಿರಲಿಲ್ಲ. ವಿಭಿನ್ನ ಜೀವನ ಶೈಲಿಗೆ , ವಿಭಿನ್ನ ಕಾಲಾಚಾರಕ್ಕೆ ಸರಿಯಾಗಿ ಬದಲಿಸಬಹುದಾದ flexible ಶಾಸನ (context - sensitive)ಗಳಾಗಿದ್ದುವು. ಸಂವಾದದ ಮೂಲಕವೇ ಇವೂ ಕೂಡ ನಿರ್ಧರಿಸಲ್ಪಡುವಂಥವುಗಳು. ಇದನ್ನು ಕಾಲ-ದೇಶ ಧರ್ಮ ಎಂದು ಕರೆದರು.

* * *

ಆದರೆ ದುರದೃಷ್ಟವಶಾತ್, ಮುಂದೆ ಶತಮಾನಗಳು ಸರಿದಂತೆ ಧರ್ಮದ ದ್ರವ ಸ್ವರೂಪವು (fluidity) ಕ್ರಮೇಣ ಮಾಯವಾಗಿ, ಧರ್ಮವು ಗಡಸಾದ (rigid), ಜಡ್ಡಾದ, ಒರಟಾದ ಪಂಥಗಳಾಗಿ, ನಿಯಮಗಳಾಗಿ ತನ್ನ ಜೀವಂತಿಕೆಯನ್ನು ಕಳಕೊಳ್ಳುತ್ತ ಬಂತು. ಬಿಡಿಬಿಡಿಯಾಗಿ ಪ್ರತ್ಯಪ್ರತ್ಯೇಕವಾಗಿ, ಹೆಪ್ಪುಗಟ್ಟಿ ವಿವಿಧ ಪಂಥಗಳಾದವು. ವಿಚಾರ ಮಂಥನ, ವೈಚಾರಿಕ ವಾಗ್ವಾದಗಳ ಪರಂಪರೆ ಹಿಂದಕ್ಕೆ ಸರಿಯಿತು. ಧರ್ಮಗಳ ಗತಿಶೀಲತೆ ಸ್ಥಗಿತಗೊಂಡಿತು. ಪ್ರಾಚೀನ ಧರ್ಮವು ಸಮಷ್ಟಿಹಿತವನ್ನು ರಕ್ಷಿಸುವ, ಎಲ್ಲ ವರ್ಗಗಳನ್ನೂ ಒಂದುಗೂಡಿಸುವ ಆಧ್ಯಾತ್ಮಿಕ ಗುಣ ಹೊಂದಿದ್ದರೆ, ಮತ್ತೆ ಬಂದ ಮತಗಳು ಸಮಾಜದ ವಿಭಜನೆಗೆ ವರ್ಗ ಬೇಧಕ್ಕೆ ಕಾರಣವಾದುವು. ಪಂಥ-ಪಂಗಡಗಳೊಳಗೆ ಪೈಪೋಟಿ ಆರಂಭವಾಯಿತು. ಒಂದು ಮತ, ಸಮುದಾಯ, ಗುಂಪು ತನ್ನ ನಂಬಿಕೆ-ನಡವಳಿಕೆಗಳನ್ನು - ಉದಾಹರಣೆಗೆ ಸಾರ್ವಜನಿಕ ಗಣೇಶ ಉತ್ಸವ, ಮಹಾರತಿ ಮುಂತಾದ ಆಚರಣೆಗಳನ್ನು - ಇನ್ನೊಂದರ ಮೇಲೆ ಹೇರಲು ಆರಂಭಿಸಿತು. ಇದು ಒಂದು ರೀತಿಯಲ್ಲಿ ವಿವಿಧ ಪಂಥಗಳ ಅಧಿಕಾರದ ಬಲಪ್ರದರ್ಶನವನ್ನಷ್ಟೆ ತೋರಿಸುತ್ತದೆಯೇ ವಿನಾ ನೈಜ ಧಾರ್ಮಿಕತೆಯನ್ನಲ್ಲ. ಚರ್ಚು-ಮಠ-ಮಸೀದಿ, ಸ್ವಾಮಿ-ಮುಲ್ಲಾ-ಪಾದ್ರಿಗಳ ಪರಿಕಲ್ಪನೆಗಳು ಈ ರೀತಿಯ ಮತೀಯ ವಿಭಜನಕಾರಕ ಸ್ವರೂಪದ ಅಂಶಗಳು. ಇವುಗಳಿಗೆ ಧರ್ಮದ ನಿಜಸ್ವರೂಪ ಪವಿತ್ರವಲ್ಲ; ಧರ್ಮದ ಬಗ್ಗೆ ತಮ್ಮ ತಮ್ಮ ವ್ಯಾಖ್ಯೆ ಅಭಿಪ್ರಾಯಗಳು ಮಾತ್ರ ಪವಿತ್ರವಾಗಿವೆ.

ಧರ್ಮದ ಸಂಕೋಚಗೊಂಡ ಈ ಸ್ವರೂಪವು **'ಸೆಮೆಟಿಕ್'** (semetic) ಧರ್ಮಗಳ ಲಕ್ಷಣಗಳನ್ನು ಹೋಲುತ್ತದೆ. ಸೆಮೆಟಿಕ್ ಧರ್ಮಗಳು ಶಾಸನ-ಅನುಶಾಸನಗಳ ಮೇಲೆ, ಕಟ್ಟುಪಾಡುಗಳ ಮೇಲೆ, ಸಂಘಟನೆ-ಸಾಂಸ್ಥೀಕರಣದ ಆಧಾರದ ಮೇಲೆಯೇ ನಿಂತಿದ್ದು, ಸ್ವಭಾವದಲ್ಲಿಯೇ ಇವು 'ದಿವ್ಯಾನುಶಾಸನ'ದ (theocratic) ಗುಣವನ್ನು ಪಡೆದುಬಂದವುಗಳು.

ಥಿಯೋಕ್ರಸಿ'ಯಲ್ಲಿ ಧರ್ಮವು ರಾಜಕೀಯ ಪ್ರಭುತ್ವದ ಸ್ಥಾನವನ್ನು ಆಕ್ರಮಿಸುತ್ತದೆ. ಪೋಪ್ ಇನ್ನೋಸೆಂಟ್ - ೪ರವರು ೧೨೫೨ರಲ್ಲಿ ಧಾರ್ಮಿಕ ಭಿನ್ನಾಭಿಪ್ರಾಯಗಳನ್ನು ತೊಡೆದುಹಾಕಲು ಅನುಸರಿಸಿದ ಕ್ರೂರ ನೀತಿ, ೧೪೮೧ರಲ್ಲಿ ಪೋಪರ ಸಮ್ಮತಿ ಪಡೆದೇ ಸ್ಪೇನಿನಲ್ಲಿ ಧಾರ್ಮಿಕ ಚರ್ಚೆ-ಭಿನ್ನಮತಗಳನ್ನು ಅಡಗಿಸಲು ನಿಯಮಿಸಿದ ಧಾರ್ಮಿಕ ವಿಚಾರಣಾ ನ್ಯಾಯಸ್ಥಾನ (inquisition), ಈ ಶತಮಾನದಲ್ಲಿ ನಡೆದ ಯಹೂದಿ ಜನಾಂಗದ ಸಾಮೂಹಿಕ ಹತ್ಯೆ, ಇರಾನಿನ ಧರ್ಮ ದೊರೆ ಖೊಮೇನಿಯು ಪ್ರಸಿದ್ಧ ಲೇಖಕ ಸಲ್ಮಾನ್ ರಶ್ದಿಯ ಕೊಲೆಗೆ ಹೊರಡಿಸಿದ 'ಫತ್ವಾ', ಯುಗೋಸ್ಲಾವಿಯಾ, ಐರ್ಲ್ಯಾಂಡ್, ಇರಾನ್, ಇಸ್ರಾಯಿಲ್, ಇರಾಕ್, ಸೂಡಾನ್, ಸೊಮಾಲಿಯಾ, ಪಾಕಿಸ್ತಾನ ಮುಂತಾದ ದೇಶಗಳಲ್ಲಿ ಇಂದು ಕೂಡಾ ನಡೆಯುತ್ತಿರುವ ಜನಾಂಗೀಯ ಹತ್ಯೆಗಳು, ಧರ್ಮವು ರಾಜಕೀಯ ಪ್ರಭುತ್ವ ಪಡೆಯಲು ನಡೆಸುವ ಪ್ರಯತ್ನವೇ ಅಲ್ಲವೇ ? ಅಧಿಕಾರಕ್ಕಾಗಿ ಯುರೋಪಿನಲ್ಲಿ ಚರ್ಚ್ ಮತ್ತು ಸರಕಾರಗಳ ನಡುವೆ ನಡೆದ ತೀವ್ರ ಪೈಪೋಟಿ-ಮೇಲಾಟಗಳ ವಿಸ್ತಾರ ಇತಿಹಾಸವನ್ನು ಇಲ್ಲಿ ಮತ್ತೆ ಉಲ್ಲೇಖಿಸುವ ಅಗತ್ಯವಿಲ್ಲ. ರಾಜಕೀಯದಲ್ಲಿ ಧರ್ಮಸಂಸ್ಥೆಗಳ ಈ ಅತಿರೇಕ ಹಸ್ತಕ್ಷೇಪಕ್ಕೆ ವಿರುದ್ಧವಾಗಿಯೇ ರಾಜಕಾರಣವು ಧರ್ಮ ನಿರಪೇಕ್ಷವಾಗಿರಬೇಕು, ರಾಜಕೀಯವನ್ನು ಧರ್ಮದಿಂದ ಬೇರ್ಪಡಿಸಬೇಕು ಎಂಬ 'ಸೆಕ್ಯೂಲರಿಸಂ'ನ ಮ್ಯಾಕಿವೆಲ್ಲಿಯನ್ ಪರಿಕಲ್ಪನೆ ಮೂಡಿ ಬಂತು.

ಆದರೆ ಪೌರಸ್ತ್ಯ ದೇಶಗಳ ಸನಾತನ, ತಾವೋ, ಬೌದ್ಧ, ಶಿಂತೋ, ಜೈನ, ಝೆನ್ ಮುಂತಾದ ಧರ್ಮಗಳಲ್ಲಿ ಈ ರಾಜಕೀಯ ಅಧಿಕಾರದ ಅಂಶಗಳು ಅಷ್ಟಾಗಿ ಕಂಡುಬರುವುದಿಲ್ಲ. ಭಾರತದಲ್ಲಿ ಧರ್ಮ, ಮನುಷ್ಯನ ವೈಯಕ್ತಿಕ ಸಾಧನೆಗೆ, ದೈಹಿಕ -ಮಾನಸಿಕ ಶೌಚ-ಸ್ವಾಸ್ಥ್ಯಗಳಿಗೆ, ಅಂತರಂಗದ ಅರಳುವಿಕೆಗೆ ಹೆಚ್ಚು ಮಹತ್ವ ಕೊಟ್ಟುದರಿಂದ ಧರ್ಮವು ವಿಕೇಂದ್ರೀಕೃತ ನೆಲೆಯಲ್ಲೇ ಹೆಚ್ಚು ಆಚರಣೆಯಲ್ಲಿತ್ತು. ಆದರ ಹೆಚ್ಚಿನ ವಿಧಿ-ನಿಯಮಗಳು ಗೃಹಸ್ಥನ ಮನೆಗೇ ಸೀಮಿತವಾಗಿತ್ತು. ಧರ್ಮವು ಪರಿಸರದ ಜತೆ ಸಾಮರಸ್ಯದಿಂದ ಬದುಕಲು ಕಲಿಸುವ ಒಟ್ಟು ಜೀವನಕ್ರಮ ಆಗಿತ್ತು. ಆದ್ದರಿಂದಲೇ ಅದು ಗೃಹಸ್ಥಾಶ್ರಮಕ್ಕೆ ಅತ್ಯಂತ ಹೆಚ್ಚು ಪ್ರಾಶಸ್ತ್ಯ ಕೊಟ್ಟಿತ್ತು. ಮನುಷ್ಯ ತಾನು ಹುಟ್ಟಿನಿಂದ ಪಡೆಕೊಂಡು ಬಂದಿರುವ ಋಣ ಸಂದಾಯವೇ ಗೃಹಸ್ಥಾಶ್ರಮಿಯ ಧರ್ಮವಾಗಿದೆ. ದಿವ್ಯದ, ಜ್ಞಾನ ನೀಡಿದ ಗುರುಗಳ, ಕುಟುಂಬದ, ಸಮಾಜದ ಮತ್ತು ತನ್ನನ್ನು ಪೊರೆಯುತ್ತಿರುವ ಸಮಗ್ರ ಪರಿಸರದ ಎಲ್ಲ ಜೈವಿಕ ವರ್ಗಗಳ ಋಣ ತೀರಿಸುವ (ಪಂಚ ಋಣ) ಕರ್ತವ್ಯವೇ ಗೃಹಸ್ಥಾಶ್ರಮದ ಮೂಲ ಸೂತ್ರ (ಪಂಚಯಜ್ಞ) ವಾಗಿದೆ. ಈ ಅರ್ಥದಲ್ಲಿ ಧರ್ಮವು ವಿಶ್ವದ ಪ್ರತಿಯೊಂದು ಸಂಗತಿಯೂ ಕೊಡು-ಕೊಳೆಯ ಸಹಬಾಳ್ವೆಯ ನಿಯಮವನ್ನು ಒತ್ತಿ ಹೇಳುತ್ತದೆ.

* * *

ಭಾರತವು ಪ್ರಜಾಪ್ರಭುತ್ವ ರಾಷ್ಟ್ರವೆಂದು ಘೋಷಿಸಲ್ಪಟ್ಟಾಗ, ಬಹುಸಂಖ್ಯಾತ ಕಲ್ಪನೆ ಮತ್ತು ಪರಂಪರಾಗತ ಮೌಲ್ಯಗಳು ಪರಸ್ಪರ ಮಿಶ್ರಗೊಂಡು, ಧರ್ಮದಲ್ಲೂ ಇದು ಅಪಾಯಕಾರಿಯಾಗಿ ತಲೆಹಾಕಿತು ಎಂದು ನನ್ನ ಅನಿಸಿಕೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಬಹುಸಂಖ್ಯಾತ ಸರಕಾರವಿದ್ದ ಹಾಗೆ, ಧರ್ಮದಲ್ಲೂ ದೇಶದ ಬಹುಸಂಖ್ಯಾತ ಪ್ರಜೆಗಳ ಧರ್ಮವೇ ಸಾರ್ವತ್ರಿಕ ಧರ್ಮವಾಗಿ

ಅಗ್ರಸ್ಥಾನದಲ್ಲಿರಬೇಕೆಂಬ ಭ್ರಮೆಗೆ ಇದು ಕಾರಣವಾಯಿತು. ಈ ಭ್ರಮೆಯೇ ಇಂದು ನಮ್ಮ ದೇಶದಲ್ಲಿ ಧರ್ಮದ ಹೆಸರಲ್ಲಿ 'ರೇಸಿಸ್ಟ್' (racist) ಮನೋಭಾವ ಬೆಳೆಯಲು ಒಂದು ಪ್ರಬಲ ಕಾರಣವೆನ್ನಬಹುದು. ಹಿಟ್ಲರ್, ಮುಸ್ಸಲೋನಿಗಳಿಗಿಂತ 'ಹಿಂದೂ ರಾಷ್ಟ್ರ'ದ ಕಲ್ಪನೆಯ ಮೂಲಕ ಇಂದು ನಡೆಯುತ್ತಿರುವ ಧರ್ಮದ ಕೇಂದ್ರೀಕರಣದ ಪ್ರಯತ್ನದಲ್ಲಿ ಹೆಚ್ಚು 'ರೇಸಿಸ್ಟ್' ಅಪಾಯವಿದೆ. ಹಿಟ್ಲರ್ -ಮುಸ್ಸಲೋನಿಗಳ ಅಸಹನೆ ಮೂರ್ತ ಗುರಿಯ ವಿರುದ್ಧ ಬಹಿರಂಗವಾಗಿ ಪ್ರದರ್ಶಿಸಲ್ಪಟ್ಟರೆ ಈ ಮೂಲಭೂತವಾದಿಗಳ ಹೋರಾಟ ಅಮೂರ್ತ ಗುರಿಯ ವಿರುದ್ಧ ಗುಪ್ತವಾಗಿ ಹರಿಯುತ್ತಿರುತ್ತದೆ.

ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಈ ಕೇಂದ್ರೀಕರಣದ ಪ್ರಯತ್ನ ಹಿಂದೂ ಧರ್ಮದ ಮೂಲಭೂತ ವಿಕೇಂದ್ರೀಕೃತ ಸ್ವರೂಪವನ್ನು ಹಿಂದಕ್ಕೆ ಸರಿಸಿ, ಧರ್ಮವನ್ನು ಪ್ರವಾದಿಗಳ ಅನುಶಾಸನಗಳ ಮೇಲೆ ನಿಂತ ಇನ್ನೊಂದು ಸೆಮೆಟಿಕ್ ಧರ್ಮದ ಮಟ್ಟಕ್ಕೆ ಇಳಿಸುತ್ತದೆ. ಆಗ, ಇಡೀ ದೇಶಕ್ಕೆ ಒಬ್ಬ ಧರ್ಮಗುರು ಉದ್ಭವಿಸುತ್ತಾನೆ. ಆತ ಅಪಾರ ಕೇಂದ್ರೀಕೃತ ಶಕ್ತಿಯನ್ನು ಪಡೆದಿರುತ್ತಾನೆ. ಆಧುನಿಕ ಸಮೂಹ ಮಾಧ್ಯಮಗಳಂತೂ ಆತನ ಅಧಿಕಾರ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಆತ ಅಪ್ಪಣೆ ಕೊಡಿಸಿದ್ದೇ ಧರ್ಮದ ಅಚ್ಚರು ತೀರ್ಮಾನವಾಗುತ್ತದೆ. ಆತನ ಆದೇಶಗಳು ಧರ್ಮದ ವಿಧಿ-ನಿಯಮಗಳಾಗುತ್ತವೆ. ಸಂವಾದ ರೂಪದಲ್ಲೇ ಬೆಳೆದು ಬಂದ ಧರ್ಮದ ಮೂಲಸ್ವರೂಪ ಹಿಂದಕ್ಕೆ ಸರಿದು ಧರ್ಮ ಮಿಲಿಟರಿ ಶಿಸ್ತಿಗೆ ಒಳಪಡುತ್ತದೆ. ತನ್ನೆಲ್ಲ ಸೃಜನಶೀಲತೆಯನ್ನು ಕಳಕೊಳ್ಳುತ್ತದೆ. ಇಂಥ ಉಸಿರುಕಟ್ಟುವ ವಾತಾವರಣದಲ್ಲಿ ಧರ್ಮವನ್ನು ರಕ್ಷಿಸಲು ಸಾಧ್ಯವೇ ಎಂಬುದನ್ನು ನಾವು ಗಂಭೀರವಾಗಿ ಯೋಚಿಸಬೇಕು. ಯಾಕೆಂದರೆ ಹಿಂದೂ ಧರ್ಮದ ಕೇಂದ್ರೀಕೃತ ಸಂಘಟನಾ ಪ್ರಯತ್ನವೇ ಹಿಂದೂ ಧರ್ಮವನ್ನು ದೀರ್ಘಾವಧಿಯಲ್ಲಿ ದುರ್ಬಲಗೊಳಿಸುವ ಸಾಧ್ಯತೆಯಿದೆ.

'ಹಿಂದೂ ಬಹುಸಂಖ್ಯಾತರು ಕೋಮುವಾದಿಗಳಾದರೆ ಹಿಂದೂ ಧರ್ಮವು ಇತರ ಸೆಮೆಟಿಕ್ ಧರ್ಮಗಳಿಗಿಂತ ಹೆಚ್ಚು ಅಪಾಯಕಾರಿಯಾಗುವ ಸಾಧ್ಯತೆಯಿದೆ' ಎಂಬ ಹೆದರಿಕೆ ನೆಹರೂರವರಿಗಿತ್ತು. ಆದಕ್ಕಾಗಿಯೇ ಅವರು ನಮ್ಮ ಸಂವಿಧಾನದಲ್ಲಿ 'ಸೆಕ್ಯೂಲರಿಸಂ' ತತ್ತ್ವಕ್ಕೆ ಅಷ್ಟು ಮಹತ್ವ ಕೊಟ್ಟರು. ಶೂದ್ರರು, ಹರಿಜನರು, ಆದಿವಾಸಿಗಳು ನೆಹರೂ ಯುಗದ ಉದಾರವಾದೀ ಸೆಕ್ಯೂಲರಿಸಂನಿಂದ ಖಂಡಿತವಾಗಿಯೂ ಪ್ರಯೋಜನಹೊಂದಿದ್ದಾರೆ.

ಅನ್ಯ ಮತಗಳಲ್ಲಿದೆಯನ್ನಲಾದ ಮೂಲಭೂತವಾದಕ್ಕೆ ಪ್ರತಿಕ್ರಿಯೆಯಾಗಿ ಉದ್ಭವಿಸಿದ ಹಿಂದೂ ಮೂಲಭೂತವಾದವು, ಹಿಂದೂಗಳ ಅದುಮಿಟ್ಟ ಭಾವನೆಗಳಿಗೆ ಒಂದು ದಾರಿ ಮಾಡಿಕೊಡುವ ಮೂಲಕ ತತ್ಕಾಲ ಗೆಲ್ಲಬಹುದು. ಆದರೆ ಈ ಗೆಲುವು ದೀರ್ಘಾವಧಿಯಲ್ಲಿ ಹಿಂದೂ ಧರ್ಮದ ಅವನತಿಗೇ ಕಾರಣವಾಗುವ ಸಂಭವವಿದೆ. ಬೇರೆ ಬೇರೆ ಧರ್ಮಗಳ ಉತ್ತಮಾಂಶಗಳನ್ನು ತನ್ನಲ್ಲಿ ಅರಗಿಸಿಕೊಳ್ಳುತ್ತ ಒಂದು ರೀತಿಯ ಮುಕ್ತ ಅರಾಜಕತೆ (anarchy) ಯಲ್ಲೇ ಸೃಜನಾತ್ಮಕವಾಗಿ ಬೆಳದು ಬಂದ ಸನಾತನ ಧರ್ಮದ ಆಯ್ಕೆಯ ಸ್ವಾತಂತ್ರ್ಯ ಈ ಅಸಹನೆಯಿಂದಾಗಿ ಹೊರಟು ಹೋಗುತ್ತದೆ.

ಯಾಕೆಂದರೆ, ಹಿಂದೂ ಮೂಲಭೂತವಾದಿ ಸಂಘಟನೆಗಳ ಜಗಳ ಅನ್ಯಮತೀಯರ ಜತೆಗಿಂತ ಹೆಚ್ಚು ಸನಾತನ ಧರ್ಮದ ಪ್ರಧಾನವಾಹಿನಿಯಾದ ಉದಾರತೆಯ ವಿರುದ್ಧವೇ ಇದೆ. ಆದರೆ, ಈ ದೇಶದ ಬೇರುಗಳು ಸತತ ಜ್ಞಾನ ಸಂಗ್ರಹ-ಮುಕ್ತ ಚಿಂತನೆಗೆ ಪ್ರಾಶಸ್ತ್ಯ ಕೊಟ್ಟ ವೇದ-ಉಪನಿಷತ್ತುಗಳಲ್ಲಿವೆಯೇ ವಿನಾ ಈ ಸಂಘಟನೆಗಳು ಪ್ರಚಾರ ಮಾಡುವ 'ಹಿಂದುತ್ವ'ದಲ್ಲಿಲ್ಲ. ಆದ್ದರಿಂದಲೇ, ಈ ಹಿಂದೂ ಮೂಲಭೂತವಾದಿಗಳ ಹೋರಾಟ ಹಿಂದೂ ಧರ್ಮದ ವಿರುದ್ಧವೇ ಆಗಿದೆ - ಪಂಜಾಬಿನಲ್ಲಿ ಸಿಖ್ ಮತಾಂಧರ ಹೋರಾಟ ಸಿಖ್ ಧರ್ಮದ ವಿರುದ್ಧ, ಮುಸ್ಲಿಮ್ ಮತಾಂಧರ ಹೋರಾಟ ಮುಸ್ಲಿಮ್ ಧರ್ಮದ ವಿರುದ್ಧವಿದ್ದಂತೆ. ಎಲ್ಲಾ ಕಡೆಯಲ್ಲೂ ಈ ಮತಾಂಧರು, ಧರ್ಮದ ನೈಜ ಸಾಂಪ್ರದಾಯಿಕ ಪ್ರತಿಪಾದಕರಿಂದ ಧರ್ಮದ ವೇದಿಕೆಯನ್ನು ತಮ್ಮ ಸ್ವಾರ್ಥ ರಾಜಕೀಯಕ್ಕಾಗಿ ಕಸಿದುಕೊಳ್ಳುತ್ತಿದ್ದಾರೆ.

* * *

ಹಿಂದೂಗಳಲ್ಲಿ ಮೂಲಭೂತವಾದ ಪ್ರಬಲವಾಗುತ್ತಿರುವುದಕ್ಕೆ ಅಲ್ಪಸಂಖ್ಯಾತರ ತುಷ್ಟೀಕರಣದ ಕಾರಣವನ್ನು ತೋರಿಕೆಗಾಗಿ ಎದುರು ಹಾಕಿದರೂ ಕೂಡ, ಬೇರೆ ಹಲವಾರು ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಪ್ರಬಲ ಕಾರಣಗಳಿವೆ. ಆಧುನಿಕತೆ ತಂದೊಡ್ಡಿದ ಜೀವನದ ಯಾಂತ್ರೀಕರಣದಿಂದ ಮನುಷ್ಯನ ಆತ್ಮದ ಹಸಿವಾದ ಆಧ್ಯಾತ್ಮಿಕತೆಗೆಯೇ ಮಬ್ಬು ಕವಿದು, ಅಂತರಂಗದಲ್ಲಿ ಜನರು 'ತಬ್ಬಲಿತನ'ವನ್ನು ಅನುಭವಿಸುತ್ತಿರುವುದಕ್ಕೆ ಪ್ರತಿಕ್ರಿಯೆ ಆಗಿ ಪ್ರಪಂಚದುದ್ದಗಲಕ್ಕೂ ಇಂದು ಮೂಲಭೂತವಾದ ಪ್ರಬಲವಾಗುತ್ತಿದೆ ಎಂದು ಹಲವು ಸಮಾಜ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಭಾರತದಲ್ಲೂ ಇದನ್ನು ನಾವು ಗಮನಿಸುತ್ತೇವೆ. ಏಕಮಾದರಿಯ ಆಧುನಿಕ ಶಿಕ್ಷಣ ಪಡೆದು. ಪೇಟೆಯ ಏಕತಾನತೆಯ ಸಪ್ಪೆ ಬದುಕಿಗೆ ಬಲಿಬಿದ್ದ, ಪಾಶ್ಚಾತ್ಯ ಶೈಲಿಯ ನಡೆ-ನುಡಿಗಳನ್ನು ಯಾವೊಂದು ವಿವೇಚನೆಯೂ ಇಲ್ಲದೆ ತಮ್ಮ ಮನೆಯಲ್ಲಿ ಆವಾಹನೆ ಮಾಡಿಕೊಂಡ, ವಿಜ್ಞಾನದ ಬಳುವಳಿಯಾದ ಗ್ರಾಹಕ ಸಂಸ್ಕೃತಿಯ ಸುಖ-ಭೋಗಗಳ ಚಟ ಹಿಡಿಸಿಕೊಂಡ ಆಧುನಿಕರೇ ಇಂದು ಹೆಚ್ಚು ಹೆಚ್ಚು ಕೋಮುವಾದಿಗಳಾಗುತ್ತಿದ್ದಾರೆ. ತಮ್ಮ ಬದುಕಿನ ಸಂಭ್ರಮವನ್ನು ಹೆಚ್ಚಿಸುವ ಸಾಂಸ್ಕೃತಿಕ ಅಂಶಗಳನ್ನೆಲ್ಲ ಕಳಕೊಂಡು, ಜಾಳು-ಜಾಳಾದ ತೋರಿಕೆಯ ಹೊಳಪಿನ ಜೀವನ ನಡೆಸುವುದೇ ಇದಕ್ಕೆ ಮುಖ್ಯ ಕಾರಣವೆನ್ನಬಹುದು. ಸಾಂಸ್ಕೃತಿಕ ಬೇರುಗಳನ್ನು ಕಳಕೊಂಡ ಈ ಮಂದಿಯಲ್ಲಿ ಅನೇಕರು ಅಂತರ್ಯದಲ್ಲಿ ಸೊರಗಿ ಹೋಗಿದ್ದಾರೆ. ಪಾಪಪ್ರಜ್ಞೆಯಿಂದ ಬಳಲುತ್ತಿದ್ದಾರೆ. ಈ ಮಾನಸಿಕ ಅನಾಥರಿಗೆ ಆಸರೆಗಾಗಿ ಏನಾದರೊಂದು ಆಲಂಬನ ಬೇಕು; ಜನಾಂಗೀಯ ಪ್ರಜ್ಞೆ ಅಥವಾ ಧರ್ಮದ ಅಂಧಾನುಕರಣೆ ಇಂಥ ಮಂದಿಗೆ ತಮ್ಮ ಪಾಪಪ್ರಜ್ಞೆಯನ್ನು 'ತೊಳೆದು'ಕೊಳ್ಳಲು ಸುಲಭದ ಊರುಗೋಲಾಗಿ ಬಿಡುತ್ತವೆ. ಯಾಕೆಂದರೆ ತಮ್ಮ ಏಕರೂಪೀ ಜೀವನ ಕ್ರಮದಲ್ಲಿ ಧರ್ಮದ ಮೂಲಸತ್ತ್ವವನ್ನು ತಿಳಿದುಕೊಳ್ಳುವ ಅವಕಾಶ-ಸೌಕರ್ಯಗಳಿಂದಲೇ ವಂಚಿತರಾದ ಈ ಮಂದಿ ಧರ್ಮದ ಡಾಂಭಿಕ ಪ್ರದರ್ಶನಕ್ಕೆ ಮಾತ್ರ ಒತ್ತು ಕೊಡುವ ಆವೇಶಭರಿತ ಧಾರ್ಮಿಕರಾಗಿ ಬಿಡುತ್ತಿದ್ದಾರೆ. ಮಂದಿರಕ್ಕೆ ಕಾಣಿಕೆ ಸಲ್ಲಿಸಿ ಪಾಪ ವಿಮೋಚನೆ ಮಾಡಿಕೊಳ್ಳಲು ಬಯಸುವ ಭ್ರಷ್ಟಾಚಾರಿಗಳಿಗೂ, ಈ ನಮ್ಮ ಆಧುನಿಕರಿಗೂ ವ್ಯತ್ಯಾಸವಿಲ್ಲ.

ಆಧ್ಯಾತ್ಮಿಕತೆಯ ಮೂಲ ತತ್ತ್ವದ ಮರೆವೇ ಇದಕ್ಕೆ ಕಾರಣ. ಕೋಮು ಮೂಲಭೂತವಾದಿಗಳು ಇಂಥವರ ಮಧ್ಯೆ ಬಹಳ ಸುಲಭವಾಗಿ ಬೇರು ಬಿಡುತ್ತಾರೆ. ಇಂದು ಬ್ಯಾಂಕಿನ, ಇನ್ಶೂರೆನ್ಸ್ ಕಂಪೆನಿಯ ನೌಕರರು, ಶಿಕ್ಷಕರು, ವೈದ್ಯರು, ಇಂಜಿನಿಯರುಗಳು, ಪೋಲೀಸರು, ಸೈನಿಕರು, ಅನಿವಾಸಿ ಭಾರತೀಯರು. ಬ್ಯೂರೋಕ್ರಾಟ್‌ಗಳು ಗುಂಪುಗುಂಪಾಗಿ ಮತೀಯವಾದದಿಂದ ಆಕರ್ಷಿತರಾಗುವುದು ಈ ಕಾರಣಕ್ಕಾಗಿ. ಗುಂಪಾಗಿಯೇ ಏಕ ರೀತಿಯ ವಿದ್ಯೆ ಪಡೆದು. ಗುಂಪು-ಗುಂಪಾಗಿ ಒಂದೇ ಕಡೆಯಲ್ಲಿ ಕೆಲಸ ಮಾಡುತ್ತಾ ಒಂದೇ ಪಡಿಯಚ್ಚಿನಂತೆ ಬದುಕುವ ಈ ಮಂದಿ ಸ್ವಭಾವತಃ 'ಮಂದೆ ಮನೋಭಾವ' (herd instinct)ವುಳ್ಳವರಾಗಿ, ಏಕ ರೀತಿಯಲ್ಲಿ ಯೋಚಿಸುತ್ತಾರೆ, ಏಕ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ ಎಂದು ಹೇಳದೆ ವಿಧಿಯಿಲ್ಲ.

ಇವರ ಜತೆ, ಈ ದೇಶದ ಚಿಂತನೆ - ಸಂಸ್ಕೃತಿಗಳ ಸಮಗ್ರ ಪರಂಪರೆಯನ್ನೇ 'ಪ್ರತಿಗಾಮೀ' ಎಂದು ಸಾರಸಗಟಾಗಿ ಅವಹೇಳನ ಮಾಡುತ್ತ ಈ ನೆಲಕ್ಕೇ ಪರಕೀಯರಾಗಿ ಬದುಕುವ ಆಧುನಿಕ ಶುಷ್ಕ ವೈಚಾರಿಕರೂ ಕೂಡ ಈ ಮೂಲಭೂತವಾದಿಗಳ ಆಕ್ರಮಣಕಾರೀ ಪ್ರವೃತ್ತಿಯನ್ನು ಬಲಗೊಳಿಸಲು ಬಹುಮಟ್ಟಿಗೆ ಕಾರಣವೆನ್ನಬಹುದು.

-2-

'ಸೆಕ್ಯೂಲರಿಸಂ' ಪರಿಕಲ್ಪನೆಯು ವಿಜ್ಞಾನದ ಹಾಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವದ ಸ್ಥಾನ ಪಡೆದಿದೆ. ಆದರೆ, 'ಸೆಕ್ಯೂಲರಿಸಂ'ನ್ನು ನಮ್ಮ ನೆಲಕ್ಕೆ ಒಗ್ಗುವಂತೆ ಅಳವಡಿಸಿಕೊಳ್ಳುವ ರೀತಿಯಲ್ಲಿ ಸಾಕಷ್ಟು ಗೊಂದಲಗಳಿವೆ. ಉದಾಹರಣೆಗೆ, ಹೊರಗಿನ ತಾಂತ್ರಿಕತೆಯನ್ನು ನಾವು ಸ್ವೀಕರಿಸುವಾಗ ನಮ್ಮ ಜನರ ಬದುಕಿನ ಉಸಿರಾದ ದೇಸೀ ತಾಂತ್ರಿಕತೆಗೆ ಪೂರಕವಾಗುವ, ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೆ ಪೋಷಕವಾಗುವ ತಾಂತ್ರಿಕತೆಯನ್ನೇ ಎಚ್ಚರದಿಂದ ಆಯ್ಕೆ ಮಾಡುತ್ತೇವೆ. ಅರ್ಥಶಾಸ್ತ್ರದಲ್ಲಿ ಸೂಕ್ತ ತಾಂತ್ರಿಕತೆಯ ಆಯ್ಕೆ (choice of technology) ಯ ಬಗ್ಗೆ ಬಹಳಷ್ಟು ಸಿದ್ಧಾಂತಗಳೇ ಇವೆ. ಯಾಕೆಂದರೆ, ಯಾವುದೇ 'ತಾಂತ್ರಿಕತೆ' ಅಥವಾ ಪರಕೀಯ ಸರಕು, ಸಾಂಸ್ಕೃತಿಕವಾಗಿ ತಟಸ್ಥವಾಗಿರುವುದಿಲ್ಲ. ಅದು ತನ್ನ ಜತೆ ತನ್ನ ಸಂಸ್ಕೃತಿಯನ್ನು ಹೊತ್ತು ತಂದಿರುತ್ತವೆ. ಆದ್ದರಿಂದ ಅವುಗಳ ಆಯ್ಕೆಯಲ್ಲಿ ಸಾಕಷ್ಟು ವಿವೇಚನೆ, ಎಚ್ಚರ ಅಗತ್ಯ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ 'ಸೆಕ್ಯೂಲರಿಸಂ', ಪರಿಕಲ್ಪನೆಯು ಯಾವ ಸಂದರ್ಭಕ್ಕೆ ಪ್ರತಿಕ್ರಿಯೆ ಆಗಿ ಹುಟ್ಟಿಕೊಂಡಿತು ಎಂಬುದನ್ನು ಗಮನಿಸಬೇಕು. ಚರ್ಚಿನ 'ಅಹಂಕಾರ', 'ಅಸಹನೆ', ರಾಜಕೀಯ ಮೇಲಾಟದ ವಿರುದ್ಧವಾಗಿ ಅಲ್ಲಿನ ಸವಾಲಿಗೆ ಪ್ರತಿಯಾಗಿ 'ಸೆಕ್ಯೂಲರಿಸಂ' ಪರಿಕಲ್ಪನೆ ವಿಕಾಸವಾಗುತ್ತ ಬಂತು. ಇದು ಧರ್ಮದ ಬಗ್ಗೆ ತಟಸ್ಥ ಧೋರಣೆಯನ್ನು ಸೂಚಿಸುವ ಮೂಲಕ ಸಹಬಾಳ್ವೆ-ಸಮಷ್ಟಿಹಿತಗಳಿಗೆ ಒತ್ತು ಕೊಡುತ್ತದೆಯೇ ವಿನಾ ಆಧ್ಯಾತ್ಮಿಕತೆ ಅಥವಾ ಧಾರ್ಮಿಕ ಮನೋಭಾವವನ್ನು ವಿರೋಧಿಸುವುದಿಲ್ಲ. ಆದರೆ ಪಾಶ್ಚಾತ್ಯರಿಂದ ಬಂದ ಈ 'ಸೆಕ್ಯೂಲರಿಸಂ' ಪರಿಕಲ್ಪನೆಯನ್ನು ನಾವು ಅಳವಡಿಸಿಕೊಳ್ಳುವಾಗ ಮಾತ್ರ ನಮ್ಮ ಆಧ್ಯಾತ್ಮಿಕ ಇತಿಹಾಸದ ಹಿನ್ನೆಲೆಯಲ್ಲಿ ಪುನರ್ವಿಮರ್ಶಿಸಿಕೊಂಡು ಪ್ರಸ್ತುತ ಸಂದರ್ಭಕ್ಕೆ ಒಗ್ಗುವ ರೀತಿಯಲ್ಲಿ ಪರಿಷ್ಕರಿಸಿಕೊಳ್ಳಬೇಕಾಗುತ್ತದೆ. ಯಾಕೆಂದರೆ ಪರಕೀಯರಿಂದ ಬಂದ 'ಸೆಕ್ಯೂಲರಿಸಂ'ನ್ನು ಹಾಗಾಗೇ ಸ್ವೀಕರಿಸಿ ಸರಕಾರ ತನ್ನ ಅಧಿಕಾರದ

ಮೂಲಕ ಜ್ಯಾರಿಗೊಳಿಸುವುದರಿಂದ ಇದಕ್ಕೆ ಪ್ರತಿಭಟನೆಯಾಗಿ ಕೋಮು ಮೂಲಭೂತವಾದಿ ಶಕ್ತಿಗಳು ಮತ್ತಷ್ಟು ಪ್ರಬಲವಾಗುವ ಸಂಭವವಿದೆ. ಇದನ್ನು ನಾವು ಇಂದು ಭಾರತದಲ್ಲಿ ಕಣ್ಣಾರೆ ನೋಡುತ್ತಿದ್ದೇವೆ ಕೂಡ.

ಭಾರತದ ಬಹುಸಂಖ್ಯಾತ ಜನಕ್ಕೆ ಇಂದು 'ಸೆಕ್ಯೂಲರಿಸಂ'ನ ಬಗ್ಗೆ ಬಹಳಷ್ಟು ಅಪಕಲ್ಪನೆಯಿದೆ. ಅದಕ್ಕೆ ಸ್ವಲ್ಪ ಮಟ್ಟಿಗೆ ಅದರ ಇತಿಹಾಸವೂ ಕಾರಣವೆನ್ನಬಹುದು. ಸಮಾಜವಾದೀ ಕಮ್ಯೂನಿಸ್ಟ್ ರಾಷ್ಟ್ರಗಳು 'ಸೆಕ್ಯೂಲರಿಸಂ'ನ್ನು ಧರ್ಮವಿರೋಧಿ ಎಂಬ ರೀತಿಯಲ್ಲಿ ಬಳಸಿಕೊಂಡವು. ರಷ್ಯಾದಲ್ಲಿ ಸ್ಟಾಲಿನ್ ಧರ್ಮವಿರೋಧಿಯಾಗಿದ್ದ "ವಿಜ್ಞಾನದ ಪ್ರಗತಿ, ಆಧುನಿಕ ತಂತ್ರಜ್ಞಾನದ ಬಳಕೆ ಮತ್ತು ಏಕಮುಖದ ನೇರ ಆರ್ಥಿಕ ಬೆಳವಣಿಗೆಯ ಮೂಲಕ ಮಾತ್ರ ಮಾನವ ಕಲ್ಯಾಣ ಸಾಧ್ಯ; ಮತ್ತು ಈ 'ಮಾಡೆಲ್' ಪ್ರಶ್ನಾತೀತ" ಎಂಬ ಅಭಿಪ್ರಾಯ ಸ್ಟಾಲಿನ್‌ಗಿತ್ತು. ಹಾಗಾಗಿ, ಕಾರ್ಖಾನೆ, ಅಣೆಕಟ್ಟುಗಳು ಧಾರ್ಮಿಕ ಮಂದಿರಗಳ ಸ್ಥಾನವನ್ನು ಪಡೆದವು. ಇವೇ 'ಸೆಕ್ಯೂಲರಿಸಂ' ಪ್ರತಿಪಾದಿಸುವ ಮೌಲ್ಯಗಳು ಎಂಬ ಭ್ರಮೆ ಆವರಿಸಿತು. ನಮ್ಮ 'ವಿದ್ಯಾವಂತ' ಮಧ್ಯಮ ವರ್ಗವಂತೂ 'ಸೆಕ್ಯೂಲರಿಸಂ' ಅಂದರೆ 'ಕಮ್ಯೂನಿಸಂ' ಅಥವಾ 'ಸ್ಟಾಲಿನಿಸಮ್' ಅಥವಾ 'ನಾಸ್ತಿಕವಾದ'ವೆಂದೂ, 'ಸೆಕ್ಯೂಲರಿಸಂ'ನ್ನು ಪ್ರತಿಪಾದಿಸುವ ಬುದ್ಧಿಜೀವಿಗಳು ನಾಸ್ತಿಕರೆಂದೂ ಭಾವಿಸಿದಂತಿದೆ. ಕುರುಡು ಭೌತವಾದ, ಸರಕು ಸಂಸ್ಕೃತಿ, ನಿರೀಶ್ವರವಾದ ಮತ್ತು ಇಂದಿನ ರೋಗಗ್ರಸ್ತ ಯುರೋಪಿಗೆ 'ಸೆಕ್ಯೂಲರಿಸಂ' ಹೊಣೆ ಮತ್ತು ಇದು ಭಾರತದ ಒಟ್ಟು ಚಿಂತನ ಪರಂಪರೆಯನ್ನೇ ಅಲ್ಲಗಳೆಯುತ್ತದೆ ಎಂಬ ಅಭಿಪ್ರಾಯ ಈ ಮಂದಿಗಿದ್ದಂತಿದೆ. ಈ ಗಂಭೀರ ತಪ್ಪುಕಲ್ಪನೆಗಳನ್ನೇ ಕೋಮು ಮೂಲಭೂತವಾದಿಗಳು, ಮತ್ತಷ್ಟು ಪ್ರಚೋದಿಸುತ್ತಾ, 'ಅವುಗಳ 'ವಿರುದ್ಧ' ನಮ್ಮದನ್ನು', 'ನಮ್ಮ ಸಂಸ್ಕೃತಿಯನ್ನು' ರಕ್ಷಿಸಬೇಕಾಗಿದೆ ಎಂಬುದನ್ನು ಅಮಾಯಕ ಜನರ ತಲೆಯೊಳಗೆ ತುರುಕಿ, ಒಂದು ಕೋಮಿನ ಎದುರು ಇನ್ನೊಂದನ್ನು ಎತ್ತಿ ಕಟ್ಟುತ್ತಿದ್ದಾರೆ.

* * *

ಆದರೆ ಯುರೋಪಿನ 'ಸೆಕ್ಯೂಲರಿಸಂ'ನ ಮಾನದಂಡದಲ್ಲೂ ಕೂಡ, ರಾಮಕೃಷ್ಣ ಪರಮಹಂಸ-ಬಸವಣ್ಣನವರಂಥವರು ಹೆಗೆಲ್, ಕಾಂಟ್ ಮುಂತಾದವರಂತೆ, ತತ್ತ್ವಜ್ಞಾನಿ ಸುಧಾರಕರಾಗಿ 'ಸೆಕ್ಯೂಲರ್' ಆಗಿ ಬಿಡುತ್ತಾರೆ. ಪೌರಸ್ತ್ಯ ಅನುಭಾವಿಗಳು, ಭಾರತದ ಭಕ್ತಿಪಂಥದ ಚಳುವಳಿಯಲ್ಲಿ ಹೊರಹೊಮ್ಮುವ ಅಸಂಖ್ಯ ಸಂತರು 'ಸೆಕ್ಯೂಲರ್' ಆಗಿದ್ದರು. 'ಭಕ್ತಿಪಂಥ', ಮುಸ್ಲಿಮರ ಆಳ್ವಿಕೆಗೆ ಪ್ರತಿಕ್ರಿಯೆಯಾಗಿ ಬಂತು ಎಂಬುದಕ್ಕೆ ಚಾರಿತ್ರಿಕ ಆಧಾರಗಳಿಲ್ಲ. ಭಕ್ತಿಪಂಥದ ಕಾಲವು ೭ರಿಂದ ೧೯ನೇ ಶತಮಾನದವರೆಗೆ ಚಾಚಿಕೊಳ್ಳುತ್ತದೆ. ಭಕ್ತಿಪಂಥದ ಮೂಲಸತ್ವ ಇರುವುದು ಪ್ರಭುತ್ವದ, ಅಧಿಕಾರದಾಹದ, ಸಾಮಾಜಿಕ ಶೋಷಣೆಯ ಕುರುಡು ಶಕ್ತಿಯ ವಿರುದ್ಧ ಎತ್ತಿದ ಸೊಲ್ಲುಗಳಲ್ಲಿ. "ಉತ್ತಮ ಪ್ರಭುತ್ವ ಲೊಳಲೊಟ್ಟೆ," ಎಂದು ಹಾಡಿದ ಪುರಂದರರು ಧಿಕ್ಕರಿಸಿದ್ದು ಪ್ರಭುತ್ವವನ್ನು. ಈ ಅರ್ಥದಲ್ಲಿ, ಭಕ್ತಿ ಚಳುವಳಿಯನ್ನು ಮೇಲ್ಜಾತಿಯ ಅಧಿಪತ್ಯದ ವಿರುದ್ಧ, ಅವರ ಭಾಷೆಯಾದ ಸಂಸ್ಕೃತದ ಪ್ರಭುತ್ವದ ವಿರುದ್ಧ ಕೆಳಜಾತಿಯ, ಶೋಷಿತರ, ದೇಸೀ ಭಾಷೆಯ ಹೋರಾಟವೆಂದೂ ಗುರುತಿಸಬಹುದು.

ಮೀರಾ ರಜಪೂತರ ವಿರುದ್ಧ ಸೊಲ್ಲೆತ್ತಿದಳು. ಬಸವಣ್ಣ ಹಿಂದೂ ಕಟ್ಟಾ ಸಂಪ್ರದಾಯಕತೆ ಮತ್ತು ಅದನ್ನು ಪೋಷಿಸುತ್ತಿದ್ದ ದೊರೆಗಳ ವಿರುದ್ಧ ಹೋರಾಡಿದ. ಪುರಂದರ - ಕನಕರು ಸಮಾಜದ ಅಂಕು-ಡೊಂಕು-ವಿಷಮತೆಗಳನ್ನು ಬೊಟ್ಟು ಮಾಡಿ ತೋರಿಸುತ್ತಾ ದುರ್ಬಲರ ಪರ ಹೋರಾಡುವಾಗ, ಆಗಿನ ವಿಜಯನಗರ ದೊರೆಗಳ ಧರ್ಮವನ್ನು ನೋಡಲಿಲ್ಲ. ತುಕಾರಾಮ್ ಮಹಾರಾಷ್ಟ್ರದ ಕ್ರೂರ ಜಾತಿ ವ್ಯವಸ್ಥೆ ಮತ್ತು ಬ್ರಾಹ್ಮಣರ ಮೇಲಾಟವನ್ನು ಟೀಕಿಸಿದ. ಕಬೀರ, ನಾನಕ, ಸೂಫೀ ಸಂತರು ಸರ್ವಧರ್ಮ ಸಮನ್ವಯಕ್ಕಾಗಿ ತಮ್ಮ ಜೀವನದುದ್ದಕ್ಕೂ ಪ್ರಯತ್ನಿಸಿದರು. ತಮ್ಮ ತಮ್ಮ ದೊರೆಗಳ ಧರ್ಮವನ್ನೂ ಯೋಚಿಸದೆ, ಕೇವಲ ಸತ್ಯ-ನ್ಯಾಯ ಮತ್ತು ಸಮಾನತೆಯ ಪರ ನಿಂತ ಈ ಎಲ್ಲ ಸಂತರು ನಿಜಕ್ಕೂ ಸೆಕ್ಯೂಲರ್ ಅಲ್ಲವೇ ? ಚಂದ್ರಗುಪ್ತ ಮೌರ್ಯನ ಜತೆ ಉತ್ತರದಿಂದ ಶ್ರವಣಬೆಳಗೊಳದ ಕರಿಕಲ್ಲ ಗುಡ್ಡೆಗೆ ಬಂದ ನೂರಾರು ಜೈನ ಮುನಿಗಳು ತಮ್ಮ ಧಾರ್ಮಿಕ ಅನುಭೂತಿಯ ಪರಾಕಾಷ್ಠೆಯಲ್ಲಿ ಎಲ್ಲವನ್ನೂ ನಿರಾಕರಿಸುತ್ತಾ ಸ್ವ-ಇಚ್ಛೆಯಿಂದ ಪ್ರಾಯೋಪವೇಶದ ಮೂಲಕ ದೇಹ ತ್ಯಾಗ ಮಾಡುತ್ತಿದ್ದರು. ಈ ಮುನಿಗಳಿಗೆ ಜಗತ್ತಿನಲ್ಲಿ ಸ್ಥಾನ ಕಲ್ಪಿಸಿಕೊಳ್ಳುವ ಯೋಚನೆ ಕೂಡ ಇರಲಿಲ್ಲ. ಬಸವಣ್ಣನ ಮಹಾಮನೆ 'ಅನಾರ್ಕಿಸ್ಟ್' ಆಗಿತ್ತೇ ವಿನಾ ಪ್ರಭುತ್ವದ ಕಲ್ಪನೆಯಿಂದ ಆರಂಭವಾಗಲಿಲ್ಲ. ಆದ್ದರಿಂದಲೇ ಅಲ್ಲಿ ಅಕ್ಕ-ಅಲ್ಲಮ ಇರುವುದು ಸಾಧ್ಯವಾಯಿತು.

ಕಾಂಚಿಯ ಒಬ್ಬ ಬ್ರಾಹ್ಮಣ ಕಾಶಿಗೆ ಹೋದಾಗ ಅಲ್ಲಿ ತನ್ನ ವಾಸ್ತವ್ಯಕ್ಕೆ ದಕ್ಷಿಣ ಭಾರತದ, ಸಾಧ್ಯವಾದರೆ ಮದರಾಸಿನ ಕಾಂಚಿಯ, ಸಿಗುವುದಾದರೆ ತನ್ನ ಮತದ ಬ್ರಾಹ್ಮಣನ ಮನೆಯನ್ನೇ ಹುಡುಕಿಕೊಂಡು ಹೋಗುತ್ತಾನೆ. ಅದು ಆತನ ಸಾಂಸ್ಕೃತಿಕ ಆಯ್ಕೆ. ಆ ಆಯ್ಕೆ ರಾಜಕೀಯ ಆಯ್ಕೆ ಆದಾಗ ಮಾತ್ರ ಜಾತಿ ವೈಷಮ್ಯಗಳು ಮೊನಚಾಗುತ್ತವೆ. ಪ್ರೊ। ಸುದೀಪ್ತಾ ಕವಿರಾಜ್ ಇದನ್ನು ಗುರುತಿಸುತ್ತಾ 'ಭಾರತದಲ್ಲಿ ಜನಗಣತಿ ಆರಂಭವಾದ ಮೇಲೆ ಜಾತಿ ಭೇದಕ್ಕೆ ರಾಜಕೀಯ ಆಯಾಮ ಬಂದು, ಜಾತಿ ವೈಷಮ್ಯ ತೀವ್ರವಾಯಿತು. ಮತ್ತು ಇದು ಮುಖ್ಯವಾಗಿ ಕೈಗಾರಿಕೀಕರಣದ ನಂತರದ ಬೆಳವಣಿಗೆ' ಎನ್ನುತ್ತಾರೆ.

* * *

ಇದರ ಜತೆಗೆಯೇ ೧೯ನೇ ಶತಮಾನದ ಕೊನೆಯಲ್ಲಿ, ವಸಾಹತುಶಾಹೀ ಸಾಮ್ರಾಜ್ಯಶಾಹೀ ಪಾಶ್ಚಾತ್ಯ ಸಂಸ್ಕೃತಿಯ ದಬ್ಬಾಳಿಕೆಗೂ ಹಿಂದೂಗಳ ಸಂಘಟನೆಯು ಉತ್ತರವಾಗಿದೆ ಎಂಬ ಕಲ್ಪನೆ ಬೆಳೆಯಿತು. ಆದ್ದರಿಂದ, ಹಿಂದೂ ಧರ್ಮವನ್ನು ಬಲಪಡಿಸಬೇಕಾದರೆ ಧರ್ಮವು ಪ್ರಭುತ್ವವನ್ನು ಪಡೆಯಬೇಕೆಂಬ ಅಭಿಪ್ರಾಯ ಬಲವಾಯಿತು. ಈ ಅಭಿಪ್ರಾಯಕ್ಕೆ ಪ್ರಬಲವಾದ ಚಾಲನೆ ಕೊಟ್ಟ ಸಂಘ ಪರಿವಾರ, ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತರ ನಡುವೆ ಭೇದ ಸೃಷ್ಟಿಸಿ ಒಂದೇ ಭಾರತೀಯರಲ್ಲಿ 'ನಾವು' ಮತ್ತು 'ಅವರು' ಎಂಬ ಪ್ರಭೇದ ಹುಟ್ಟುಹಾಕಿತು. ಆದರೆ ಈ ಹಿಂದೂತ್ವದ 'ಅವರು' ಕಲ್ಪನೆಯು ಪರಿಸ್ಥಿಗೆ ತಕ್ಕಂತೆ ಬದಲಾಗುತ್ತಿರುತ್ತದೆ. ಹಿಂದೂತ್ವದ ಹೋರಾಟದಲ್ಲಿ ಮುಸ್ಲಿಮರು ' ಅವರು' ಆದರೆ, ಮಂಡಲ ವರದಿಯ ವಿರುದ್ಧ ಹೋರಾಟದಲ್ಲಿ ಹಿಂದೂ ಕೆಳಜಾತಿಗಳು, ವರ್ಗನಿಷ್ಠ ದಲಿತರು 'ಅವರು' ಆಗುತ್ತಾರೆ. ಹಿಂದೂತ್ವ ಜನಾಂಗಕ್ಕೆ ಒತ್ತು ಕೊಡುತ್ತದೆಯೇ ವಿನಾ ಹಿಂದೂ ಪ್ರಾಚೀನ ಚಿಂತನಕ್ರಮಕ್ಕಲ್ಲ. ರಾಮನ ಮಕ್ಕಳಾದ ನಮಗೆ ಹಿಂದ

ಆಗಿದೆಯನ್ನಲಾದ ಅವಮಾನದ ವಿರುದ್ಧ ಸೇಡು ತೀರಿಸಿಕೊಳ್ಳಲು ಕರೆ ನೀಡುತ್ತದೆ. ಅದಕ್ಕೆ ನಮ್ಮ ರಾಮನನ್ನೇ 'ರಾಣಾ ರಾಮ'ನನ್ನಾಗಿ ಪ್ರತಿಬಿಂಬಿಸುತ್ತೇವೆ. ತಾವು ನಂಬುವ ಸರ್ವಶಕ್ತ, ಸರ್ವನಿಯಾಮಕ, ಸರ್ವಜ್ಞ, ಸರ್ವವ್ಯಾಪ್ತನಾದ ಭಗವಂತನಿಗೆ ಭಾರತೀಯರು ರಾಮನೆಂದು ಹೆಸರಿಟ್ಟು ಪೂಜಿಸುತ್ತಾರೆಯೇ ವಿನಾ ಎಲ್ಲೋ ಒಂದು ಕಡೆ ಒಂದು ಜಾತಿ ಅಥವಾ ಒಂದು ಪಂಗಡದಲ್ಲಿ ಹುಟ್ಟಿದ ಎಂಬ ಕಾರಣಕ್ಕಾಗಿ ಅಲ್ಲ. ಅವನ ಚಾರಿತ್ರಿಕ ಹುಟ್ಟಿನ ಸ್ಥಳ ಅಮುಖ್ಯ ಕೂಡ. ಅದು ಅವನ ದೇವತ್ವವನ್ನೇ ಹರಣ ಮಾಡುತ್ತದೆ.

ಈ ದೃಷ್ಟಿಯಲ್ಲಿ ಇಂದಿನ ಹಿಂದುತ್ವದ ಹೋರಾಟ ರಾಜಕೀಯ ಪ್ರಭುತ್ವವನ್ನು ಗಿಟ್ಟಿಸಿಕೊಳ್ಳಲು ನೆರವಾಗುವ ಧಾರ್ಮಿಕ ಹೋರಾಟವಾದರೆ, ಭಕ್ತಿಪಂಥದ ಅನುಭಾವಿಗಳ ಹೋರಾಟ ಧರ್ಮವನ್ನು ಪ್ರಭುತ್ವದಿಂದ ರಕ್ಷಿಸಿ ಮುಕ್ತಗೊಳಿಸುವ 'ಸೆಕ್ಯೂಲರ್' ಹೋರಾಟ ಎಂದು ನನ್ನ ನಂಬಿಕೆ.

ಹಿಂದುತ್ವದ ಕಲ್ಪನೆ ಕೇಂದ್ರೀಕರಣದ ದಾಹದಿಂದ ಕೂಡಿದ್ದು, ಅಧಿಕಾರ ಲಾಲಸೆ ಮೂಲವಾದದ್ದು, ರಾಜಕೀಯ ಪ್ರೇರಿತವಾದದ್ದು. ಧರ್ಮದ ಈ ಕೇಂದ್ರೀಕೃತ ಸಾಂಸ್ಥೀಕರಣ ಇಡೀ ದೇಶದುದ್ದಗಲಕ್ಕೆ ಏಕರೂಪೀ ಧರ್ಮವನ್ನು ಹೇರಲು ಪ್ರಯತ್ನಿಸುವ ಮೂಲಕ ಭಾರತದ ಆಧ್ಯಾತ್ಮ ಪರಂಪರೆಯ ಸತ್ತ್ವವನ್ನು ಕುಗ್ಗಿಸುತ್ತದೆ; ಧರ್ಮದ ವೈವಿಧ್ಯಮಯ ಸಂಭ್ರಮಗಳನ್ನು ನಾಶ ಮಾಡುತ್ತದೆ; ಮತ್ತು ಧರ್ಮದ ಸೃಜನಶೀಲ ಬೆಳವಣಿಗೆಗೆ ಅಡ್ಡಿ ಮಾಡುತ್ತದೆ. ವೈವಿಧ್ಯಮಯ ಜನಪದ ಸಾಂಸ್ಕೃತಿಕ ನಂಬಿಕೆ -ಆಚರಣೆ-ಪದ್ಧತಿಗಳನ್ನು ಈ ಕೇಂದ್ರೀಕೃತ ಪ್ರಭುತ್ವ ನಿರ್ನಾಮ ಮಾಡುತ್ತದೆ.

ನಮ್ಮ ದೇಶದ ಪ್ರಜಾಪ್ರಭುತ್ವ ಸರಕಾರ ಆಳ್ವಿಕೆಯಲ್ಲಿ ಅನೇಕ ಲೋಪದೋಷಗಳಿದ್ದರೂ ಕೂಡಾ, ರಶ್ಯಾ, ಚೀನಾ, ವಿಯಟ್ನಾಮ್‌ಗಳಂತೆ ವೈಜ್ಞಾನಿಕ ಚಿಂತನೆ ತಾತ್ತ್ವಿಕತೆಗಳನ್ನು ಜನರ ಮೇಲೆ ಬಲಾತ್ಕಾರವಾಗಿ ಹೇರಲಿಲ್ಲ. ಎಲ್ಲ ರೀತಿಯ ಧಾರ್ಮಿಕ ನಡವಳಿಕೆಗಳಿಗೆ ಸ್ವಾತಂತ್ರ್ಯ ಕೊಟ್ಟಿದೆ. ಆದರೆ ೧೯೯೨ರ ಡಿಸೆಂಬರ್ ಆರರಂದು ನಡೆದ ಘಟನೆಯು ಭಾರತೀಯ ಆಧ್ಯಾತ್ಮ ಪರಂಪರೆಯ ಮೇಲೆ, ಭಾರತೀಯ ಮೌಲ್ಯಗಳ ಮೇಲೆ ನಡೆದ ಧಾಳಿಯಾಗಿದೆ. ಈ ಘಟನೆಯು ನಿಜಕ್ಕೂ ನಮ್ಮ ದೇಶವು ಸಭ್ಯ ಸಮಾಜ ಹೌದೇ? ಎಂಬ ಅನುಮಾನ ಹುಟ್ಟಿಸುತ್ತದೆ. ನಾಗರಿಕ ಸಮಾಜದಲ್ಲಿ ಅನ್ಯಾಯ-ಬರ್ಬರತೆಗಳಿಂದ ಪ್ರಜೆಗಳನ್ನು ರಕ್ಷಿಸಲು ಕಾನೂನು ಕಟ್ಟಳೆಗಳಿರುತ್ತವೆ. ಕಾನೂನಿನ ಮುಂದೆ ಎಲ್ಲರೂ ಸಮಾನರಾಗಿರುತ್ತಾರೆ; ಮತ್ತು ಒಬ್ಬ ಪ್ರಜೆ ತಪ್ಪು ಮಾಡಿದರೆ ಆತ ಅದಕ್ಕೆ ವೈಯಕ್ತಿಕ ಜವಾಬ್ದಾರನಾಗುತ್ತಾನೆಯೇ ವಿನಾ ಆತನ ಅಪ್ಪ-ಅಮ್ಮ, ಹೆಂಡತಿ-ಮಕ್ಕಳನ್ನು ಕಾನೂನು ಜವಾಬ್ದಾರ ಮಾಡುವುದಿಲ್ಲ. ಹಿಂದೆ ಯಾರೋ ಮಾಡಿದ ತಪ್ಪಿಗೆ ಇಡೀ ಜನಾಂಗವನ್ನೇ ದೂಷಿಸುವುದಿಲ್ಲ. ಇಂಥ ಕಾನೂನು ವ್ಯವಸ್ಥೆಯನ್ನು ಮುರಿದರೆ ಮಂದೆ ನ್ಯಾಯವಾಗುವುದಿಲ್ಲವೇ? ದುರದೃಷ್ಟವಶಾತ್ ಡಿಸೆಂಬರ್ ಆರರಂದು ನಡೆದದ್ದು ಇದೇ. ಇದು 'ಕಾಂಗಾರೂ ನ್ಯಾಯ' ಅಥವಾ ಅಮೇರಿಕಾದ 'ಲಿಂಚಿಂಗ್' ಕಾನೂನು ಕ್ರಮವನ್ನು ಹೋಲುತ್ತದೆ.

ಭಾರತದ ಪ್ರಾಚೀನ ಮೌಲ್ಯಗಳಲ್ಲಿ ಸೆಕ್ಯೂಲರ್ ಅಂಶಗಳು ಸಾಕಷ್ಟು ಇವೆ ಎಂದು ಒಪ್ಪಿದರೂ

ಕೂಡ, ನಮಗೆ ಈಗ ಮುಖ್ಯವಾಗುವುದು ಇಂದು ಅನುಷ್ಠಾನದಲ್ಲಿರುವ ಧಾರ್ಮಿಕ ನಡವಳಿಕೆಯೇ ವಿನಾ ಧರ್ಮದ ಮೂಲ ಆಶಯ ಆದರ್ಶಗಳಲ್ಲ. ಹಾಗೆಯೇ ಸೆಕ್ಯೂಲರಿಸಂನ ಸ್ವರೂಪದಲ್ಲಿ ಕೂಡ, ಅದರ ಆದರ್ಶಕ್ಕಿಂತ ಅನುಷ್ಠಾನ ಮುಖ್ಯವಾಗುತ್ತದೆ. ಇವೆರಡರಲ್ಲೂ ಇಂದು ನಾವು ಆತಂಕಕಾರಿಯಾದ ಬೆಳವಣಿಗೆಯನ್ನು ಕಾಣುತ್ತಿದ್ದೇವೆ. ಒಂದೆಡೆ ಮಸೀದಿಯನ್ನು ಉರುಳಿಸಿದ ಧರ್ಮದ ಆಕ್ರಮಣಕಾರೀ ಅನುಷ್ಠಾನ, ಇದು ಧರ್ಮದ 'ಪ್ರಾಕ್ಸಿಸ್' (praxis) ಆದರೆ, ಇನ್ನೊಂದೆಡೆ ರಾಜಕೀಯ ಪ್ರೇರಿತ ಸರಕಾರೀ 'ಸೆಕ್ಯೂಲರಿಸಂ', ಇದು ಸೆಕ್ಯೂಲರಿಸಂನ 'ಪ್ರಾಕ್ಸಿಸ್'. ಇವೆರಡನ್ನೂ ಧಿಕ್ಕರಿಸಿ ನಾವು ನಮ್ಮ ಸಾಂಸ್ಕೃತಿಕ ಬೇರುಗಳ ಮೂಲಕ್ಕಿಳಿದು, ಅಲ್ಲಿಯ ಆಧ್ಯಾತ್ಮಿಕತೆಯಲ್ಲಿರುವ 'ಸೆಕ್ಯೂಲರಿಸಂ' ಅಂಶವನ್ನು ಜನರಿಗೆ ಪರಿಚಯಿಸುವುದರ ಮೂಲಕ ಮೂಲಭೂತವಾದಿಗಳನ್ನು ಎದುರಿಸುವುದೊಂದೇ ನಮಗಿರುವ ದಾರಿ.

ಮತ್ತು 'ಸೆಕ್ಯೂಲರಿಸಂ'ನ ವ್ಯಾಪ್ತಿಯನ್ನು ವಿಶ್ವಹಿಂದೂ ಪರಿಷತ್ತಿನ ಛಾಪು ಇಲ್ಲದ ಒಬ್ಬ ಪ್ರಾಮಾಣಿಕ ಧಾರ್ಮಿಕ ಹಿಂದೂ, ಒಬ್ಬ ನಾಸ್ತಿಕ ಮತ್ತು ಒಬ್ಬ ಮುಕ್ತ ಚಿಂತಕ- ಇವರೆಲ್ಲರನ್ನೂ ಒಳಗೊಳ್ಳುವಂತೆ ವಿಸ್ತರಿಸುವುದು ಇಂದಿನ ಮೂಲಭೂತ ಅವಶ್ಯಕತೆ ಎಂದು ನನ್ನ ನಂಬಿಕೆ. ಈ ವಿಭಿನ್ನ ವರ್ಗಗಳಲ್ಲಿ ವೈಚಾರಿಕ ಭಿನ್ನತೆಯಿದ್ದರೂ ಕೂಡ, ಮಾನವೀಯ ಮೌಲ್ಯಗಳ ರಕ್ಷಣೆಗಾಗಿ ಇವರೆಲ್ಲರೂ ಒಂದೇ ವೇದಿಕೆಯಲ್ಲಿ ಒಂದುಗೂಡುವ ಅವಶ್ಯಕತೆಯ ಬಗ್ಗೆ ಎಚ್ಚರ ಮೂಡಿಸುವುದು 'ಸೆಕ್ಯೂಲರಿಸಂ'ನ ತುರ್ತು ಕೆಲಸವಾಗಿದೆ. ಹಿಂದುತ್ವದ ಶಕ್ತಿಗೆ ಇಂಥ ವಿಶಾಲ ವ್ಯಾಪ್ತಿಯುಳ್ಳ ವೇದಿಕೆಯ ಸಾಧ್ಯತೆಯ ಬಗ್ಗೆ ಹೆದರಿಕೆಯಿರುವುದರಿಂದಲೇ ಕೋಮು ಸಾಮರಸ್ಯದ ಚಟುವಟಿಕೆಗಳನ್ನು 'ಹಿಂದೂ ವಿರೋಧಿ', 'ಧರ್ಮ ವಿರೋಧಿ', 'ನಾಸ್ತಿಕವಾದ' ಎಂದೆಲ್ಲ ಅಪಪ್ರಚಾರ ಮಾಡುತ್ತಲೇ ಬಂದಿದೆ. ಆದರೆ ಯುರೋಪಿನ ಇತಿಹಾಸವನ್ನು ನೋಡಿದರೆ ೨೦೦ ವರುಷಗಳ ಹಿಂದೆ ನಡೆದ ಧರ್ಮ ಯುದ್ಧಗಳ ವಿರುದ್ಧ ಸೊಲ್ಲೆತ್ತಿದ್ದವರು ಮತ್ತು ಚರ್ಚು ಮತ್ತು ರಾಜಕೀಯವನ್ನು ಪ್ರತ್ಯೇಕಿಸಬೇಕೆಂದು ಒತ್ತಾಯಿಸುತ್ತಿದ್ದವರು ಧರ್ಮದ ಪ್ರಾಮಾಣಿಕ ಆಚರಣೆಗೆ ಮಹತ್ವ ಕೊಡುತ್ತಿದ್ದ 'ಅನಾಬಾಪ್ಟಿಸ್ಟ್' ಪಂಥದವರು. ಇವರು ಧರ್ಮದ ಹೆಸರಿನಲ್ಲಿ; ರಾಜಕೀಯ ಪ್ರಭುತ್ವದ ಪ್ರಯತ್ನವು ಧರ್ಮ ವಿರೋಧಿ ಎಂತ ನಂಬಿದ್ದರು. ಭಾರತದಲ್ಲಿಯೂ, ಈ ನೆಲದ ಸಂಸ್ಕೃತಿಯ ಒಳಗಿನವರಾಗಿದ್ದುಕೊಂಡು ವಿಮರ್ಶಕರಾಗಿ ಧರ್ಮದ ಮೂಲ ಸ್ವರೂಪದ ಹುಡುಕಾಟವಾಗಬೇಕಾಗಿದೆ. ನಮ್ಮ ನೆಲದ ಸತ್ವವನ್ನು ಅರಿಯದ ಮತಾಂಧರನ್ನೂ ಮತ್ತು ಪರಕೀಯ ಪ್ರಜ್ಞೆ ಬೆಳೆಸಿಕೊಂಡು ನಮ್ಮ ಸಂಸ್ಕೃತಿಗೇ ಹೊರಗಿನವರಾದ ಶುಷ್ಕ ವೈಚಾರಿಕರನ್ನೂ ಒಟ್ಟೊಟ್ಟಿಗೇ ತಿರಸ್ಕರಿಸಿ, ನಾವು ಬುದ್ಧನ 'ಮಧ್ಯಮ ಮಾರ್ಗದ' ಬಗ್ಗೆ ಗಂಭೀರವಾಗಿ ಚಿಂತಿಸುವುದು ಒಳ್ಳೆಯದು. ಇಲ್ಲವಾದರೆ ಪ್ರತಿಯೊಂದು ಕ್ಷುಲ್ಲಕ ಕಾರಣಕ್ಕೆ ಕೋಮು ಗಲಭೆ ನಡೆದು, ಪ್ರಜೆಗಳಿಗೆ ನ್ಯಾಯ ಸಮಾನತೆ ದೊರಕುವುದೇ ಕಷ್ಟವಾಗುತ್ತದೆ. ಈ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ, ಕೋಮು ಘರ್ಷಣೆಯಿಂದಾಗಿ ಮತ್ತು ಧರ್ಮದ ಏಕರೂಪೀ ಬಲಪ್ರದರ್ಶನದಿಂದಾಗಿ ದುರ್ಬಲ ವರ್ಗ ಆರ್ಥಿಕವಾಗಿ, ಸಾಮಾಜಿಕವಾಗಿ ಸೊರಗುತ್ತದೆ. ವರ್ಗ ಬಹಿಷ್ಕಾರ ಶೋಷಣೆಯ ಕಬಂಧ ಬಾಹುಗಳು ಬಲವಾಗುತ್ತದೆ. ಬಡ ವರ್ಗದ ಆರ್ಥಿಕ ಚಟುವಟಿಕೆ ಸೊರಗಿ ಬೀಳುತ್ತದೆ. ಶೋಷಣೆಯ ವಿರುದ್ಧ ಹೋರಾಡುವ ಕಾರ್ಮಿಕ ಸಂಘಟನೆಗಳು ಹೋಳಾಗಿ ದುರ್ಬಲವಾಗುತ್ತವೆ.

ನಮ್ಮ ಕೆಳವರ್ಗದ ಜನರು ೧೯೭೦ರಿಂದೀಚೆಗೆ ಸಾಮಾಜಿಕವಾಗಿ ಜಾಗೃತರಾಗುತ್ತಿರುವುದನ್ನು ಗಮನಿಸಬಹುದು. ಅನ್ಯಾಯ-ಶೋಷಣೆಗಳ ವಿರುದ್ಧ ಪ್ರತಿಭಟಿಸಲು ಇವರು ಆರಂಭಿಸಿದ್ದಾರೆ. ಇದರಿಂದಾಗಿ ಹಳ್ಳಿಗಳ ಮೇಲ್ವರ್ಗದ ಭೂಮಾಲೀಕರು ತಮ್ಮ ಹಿಂದಿನ ಪ್ರಭಾವವನ್ನು ಕಳೆದುಕೊಂಡಿದ್ದಾರೆ, ರಾಜಕೀಯ ಶಕ್ತಿ ವಲಯದ ಕೇಂದ್ರ ಬಿಂದುವಿನಿಂದ ಪರಿಧಿಗೆ ತಳ್ಳಲ್ಪಟ್ಟು ಗಾಬರಿಗೊಂಡಿದ್ದಾರೆ. ಸಾಂಪ್ರದಾಯಿಕ ಪ್ರತಿಷ್ಠೆ, ಗೌರವ, ವಿಶೇಷ ಸವಲತ್ತುಗಳನ್ನು ಇದುವರೆಗೆ ಹೊಂದಿದ್ದ ಈ ಮಂದಿಗೆ ಸಮಾನತೆಯನ್ನು ಬೋಧಿಸುವ ಪ್ರಜಾಪ್ರಭುತ್ವ ರುಚಿಸುವುದಿಲ್ಲ. ಬ್ರಾಹ್ಮಣರು ವಿದ್ಯೆಯ ಮೂಲಕ, ಕ್ಷತ್ರಿಯರು ರಾಜಕೀಯ ನಾಯಕತ್ವದ ಮೂಲಕ, ವೈಶ್ಯರು ತಮ್ಮ ವ್ಯಾಪಾರೀ ಧನಶಕ್ತಿಯ ಮೂಲಕ ಅಸಂಖ್ಯ ದುರ್ಬಲರನ್ನು ಸುಲಭವಾಗಿ ಶೋಷಿಸಲು ಸಾಧ್ಯವಾಗುವ ತಮ್ಮ 'ಹಿರಿ' ಪಟ್ಟವನ್ನು ಕಳೆದುಕೊಳ್ಳುವ ಹೆದರಿಕೆ ಇವರೆಲ್ಲರನ್ನೂ ರಾಮನ ಹೆಸರಲ್ಲಿ ಒಂದುಗೂಡಿಸಿದೆ. ಹಿಂದೂತ್ವದ ಚಳವಳಿಯ ಮುಂಚೂಣಿಯಲ್ಲಿ ಅಧಿಕಾರ ಸ್ಥಾನದಲ್ಲಿರುವ ಈ ಮಂದಿಗೆ ಪುನಃ ತಮ್ಮ ಯಜಮಾನ ಸ್ಥಾನವನ್ನು ಯಾವ ರೀತಿಯಲ್ಲಾದರೂ ಗಳಿಸಿಕೊಳ್ಳಬೇಕಾಗಿದೆ. ಇಂದಿನ ಹಿಂದುತ್ವದ ಹೋರಾಟ ಇವರಿಗೆ ಧಾರ್ಮಿಕ ನಾಯಕತ್ವದ ಅವಕಾಶವನ್ನು ಕಲ್ಪಿಸುವ ಮೂಲಕ ಧರ್ಮದ ಹೆಸರಲ್ಲಿ ಪುನಃ ಅವರ ಕೈಗಳನ್ನು ಬಲಪಡಿಸಿ, ದುರ್ಬಲವರ್ಗವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಲು ಸಹಾಯ ಮಾಡುತ್ತದೆ. ಧರ್ಮ ಇವರಿಗೆ ಕಳೆದುಕೊಂಡ ತಮ್ಮ ಅಧಿಕಾರವನ್ನು ಮರಳಿ ಪಡೆಯುವ ಒಂದು ತಂತ್ರ ಮಾತ್ರವಾಗಿದೆ. (ಹಾಗೆಯೇ ಅಧಿಕಾರ ಕೇಂದ್ರೀಕೃತ ಸ್ವರೂಪವುಳ್ಳ ಕೈಗಾರಿಕೀಕರಣ ಕೂಡ. ಆದರೆ ಆ ಚರ್ಚೆ ಇನ್ನೊಂದೇ ಆಯಾಮ ಪಡೆಯುವುದರಿಂದ ಅದನ್ನು ಇಲ್ಲಿ ಚರ್ಚಿಸುವುದಿಲ್ಲ.) ಇದು ಹಿಂದು-ಹಿಂದುಗಳೊಳಗೆ, ಆರ್ಥಿಕ ಬಲಿಷ್ಠ-ಕನಿಷ್ಠರ ನಡುವೆ, ಉದಾರವಾದಿ -ಕೋಮುವಾದಿಗಳ ನಡುವಿನ ಪ್ರಭುತ್ವದ ಹೋರಾಟವಲ್ಲಿ ಪರ್ಯವಸಾನವಾಗಿ ದೇಶದಲ್ಲಿ ಅಸಮಾನತೆ ಹೆಚ್ಚುತ್ತದೆ, ಶೋಷಣೆ ಪ್ರಬಲವಾಗುತ್ತದೆ. ಈ ಸವಾಲನ್ನು ಎದುರಿಸಬೇಕಾದರೆ 'ಸೆಕ್ಯುಲರಿಸಂ'ನ್ನು ವೇದಾಂತವು ಪ್ರತಿಪಾದಿಸುವ ತತ್ವದ ವಿಶಾಲ ನೆಲಗಟ್ಟಿನಲ್ಲಿ ಮರು ವ್ಯಾಖ್ಯಾನಿಸಬೇಕು. ಬುದ್ಧ-ಗಾಂಧಿ-ಬಸವ-ರಾಮಕೃಷ್ಣ ಪರಮಹಂಸ ಮುಂತಾದ ಅನುಭಾವಿಗಳ ಉದಾರ ಧಾರ್ಮಿಕ ಪ್ರಜ್ಞೆಯನ್ನು 'ಸೆಕ್ಯುಲರಿಸಂ' ಒಳಗೊಳ್ಳುತ್ತ ಈ ನೆಲದಲ್ಲೇ ಅದು ಮರುಹುಟ್ಟು ಪಡೆದು, ಎಲ್ಲ ಸಮಾನ ಹಿತಾಸಕ್ತಿವುಳ್ಳ ಮಾನವತಾವಾದಿಗಳೂ ಒಂದೇ ವೇದಿಕೆಯಲ್ಲಿ ಒಗ್ಗೂಡುವಂತಾಗಬೇಕು.

ಇದರ ಜತೆ, ಈ ದೇಶದ ಜನರ ಮನೋಭಾವಕ್ಕೆ ಸರಿಯಾಗಿ, ಧರ್ಮದ ವಿಕೇಂದ್ರೀಕರಣ ಪ್ರಯತ್ನಗಳೂ ನಡೆದರೆ ಒಳ್ಳೆಯದು. ಧರ್ಮದ ರಾಜಕೀಯ ಪ್ರಭಾವಿತ ಸಾರ್ವಜನಿಕೀಕರಣ, ಡಾಂಭಿಕ ಆಚರಣೆಗಳು, ಧರ್ಮದ ಹೆಸರಲ್ಲಿ ಇಂದು ನಡೆಯುತ್ತಿರುವ ಸದ್ದು -ಗದ್ದಲದ ವ್ಯಾಪಾರ - ಹಿಂದೆ ಸರಿದು, ಮೌನಕ್ಕೆ - ಚಿಂತನೆಗೆ ಅಂತಃಶುದ್ಧಿಗೆ ಹೆಚ್ಚು ಮಹತ್ವ ಬರಬೇಕಾದರೆ, ಧರ್ಮವು ಮಠ-ಮಂದಿರಗಳಿಂದ ಭಾರತದ ಪ್ರಾಚೀನ ಪರಂಪರೆಗೆ ಅನುಗುಣವಾಗಿ ಗೃಹಧರ್ಮವಾಗಿ ಗೃಹಸ್ಥನ ಮನೆಗೆ ಮತ್ತೆ ಮರಳಬೇಕಾಗಿದೆ. ಮನೆ-ಮನೆಗಳಲ್ಲಿ ವೈಯಕ್ತಿಕ ನೆಲೆಯಲ್ಲಿ ಧಾರ್ಮಿಕತೆಯನ್ನು ಬೆಳೆಸಿಕೊಂಡವರಿಂದ ಇದು ಪಡೆಯಬೇಕಾಗಿದೆ.

ದೂರದ ಅಯೋಧ್ಯಾ ಮಂದಿರವು ಜನರಿಗೆ ಧಾರ್ಮಿಕ ಕೇಂದ್ರವಾಗುವ ಬದಲು, ಸ್ಥಳೀಯ ದೇವಾಲಯಗಳು ವಿಕೇಂದ್ರೀಕೃತ ನೆಲೆಯಲ್ಲಿ ಆಯಾ ಹಳ್ಳಿಯ ಸಾಂಸ್ಕೃತಿಕ, ಭಾವನಾತ್ಮಕ, ಶೈಕ್ಷಣಿಕ, ಧಾರ್ಮಿಕ ಅವಶ್ಯಕತೆಗಳನ್ನು ಪೂರೈಸುವಂತಾಗಬೇಕು. ದೇವಾಲಯಗಳು ಆಯಾಯ ಹಳ್ಳಿಗಳ ಗಡಿ ಮೀರಿ ಬೆಳೆಯದಂತೆ ಎಚ್ಚರ ವಹಿಸಬೇಕು. ಆಗ ಧರ್ಮದ ಅಧಿಕಾರಶಾಹೀ ಪ್ರವೃತ್ತಿ ತಪ್ಪುತ್ತದೆ. ಗಡಿ ಮೀರಿ ಬೆಳೆದ ದೇವಾಲಯಗಳು ಕೇಂದ್ರೀಕೃತ ಆರ್ಥಿಕ, ಸಾಮಾಜಿಕ, ರಾಜಕೀಯ ಶಕ್ತಿ ಸ್ಥಳವಾಗಿ ಬೆಳೆಯುತ್ತಾ, ಪರಿಸರದ ಜನರನ್ನು ಅಲಕ್ಷಿಸುತ್ತದೆ.

ನಮ್ಮ ಸಾಂಸ್ಕೃತಿಕ ಅನೇಕತೆ ಮತ್ತು ಜನಾಂಗೀಯ ವೈವಿಧ್ಯತೆಗಳು, ಪ್ರಸ್ತುತ ಏಕಮುಖಿ ಆರ್ಥಿಕ ಅಭಿವೃದ್ಧಿ ಪಥದಲ್ಲಿ ಸಿಕ್ಕಿಹಾಕಿಕೊಂಡಿರುವ, ಮತ್ತು ಜತೆಗೆ ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಲ್ಲಿ ನಮ್ಮ ಸಂಸ್ಕೃತಿಯನ್ನು ಏಕಮಾದರಿಗೆ ಇಳಿಸುವ ಹಿಂದುತ್ವದ ರಾಜಕೀಯ ಪ್ರಯತ್ನವು ರಭಸದಿಂದ ನಡೆಯುತ್ತಿರುವ ಈ ಇಕ್ಕಟ್ಟಿನ ಸಂದರ್ಭದಲ್ಲಿ, ನಾವು ಯಾವ ರೀತಿ ಇವಕ್ಕೆಲ್ಲಾ ಪ್ರಾಕ್ಟಿಕಲ್ ಆಗಿ ಸ್ಪಂದಿಸುತ್ತೇವೆ ಎಂಬುದರ ಮೇಲೆ ನಮ್ಮ ದೇಶದ ಸಾಂಸ್ಕೃತಿಕ -ರಾಜಕೀಯ-ಸಾಮಾಜಿಕ ಅಳಿವು-ಉಳಿವುಗಳು ನಿಂತಿದೆ. ಹಾಗಾಗಿ ಪ್ರಸ್ತುತ ಸಂದರ್ಭದಲ್ಲಿ ಪ್ರಜ್ಞಾವಂತರಿಗೆ ಬಹು ದೊಡ್ಡ ಜವಾಬ್ದಾರಿಯಿದೆ. ಯಾಕೆಂದರೆ ಅನೇಕ ಶುಷ್ಕ ವಿಚಾರವಾದಿಗಳು ಇಂದು ಮಾಡುವಂತೆ, ಈ ಸಂಸ್ಕೃತಿಯಿಂದಲೇ ಹೊರ ನಿಂತು, 'ಧರ್ಮವೇ ಬೇಡ' ಎಂಬ ರೀತಿಯಲ್ಲಿ ವಾದ ಮಾಡಿದರೆ, ಅದು ಈ ನೆಲದ ಸತ್ಯವನ್ನು ಮರೆ ಮಾಚುವ ಇನ್ನೊಂದು ಅತಿರೇಕಕ್ಕೆ ಹೋಗಿ, ಇದಕ್ಕೆ ಪ್ರತಿಕ್ರಿಯಾತ್ಮಕವಾಗಿ ಮೂಲಭೂತವಾದಿಗಳು ಮತ್ತಷ್ಟು ಪ್ರಬಲವಾಗುತ್ತ ರಾಜಕೀಯ ಪ್ರಭುತ್ವವನ್ನು ಗಿಟ್ಟಿಸಿಕೊಳ್ಳುವ ಎಲ್ಲ ಸಾಧ್ಯತೆಗಳೂ ಇವೆ.

❒

# ಛಿದ್ರಗೊಳುತ್ತಿರುವ ಭಾಷಾ ಸಮುದಾಯ

ಮುಂಬಯಿಯ ಕರ್ನಾಟಕ ಸಂಘವು ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಜೊತೆ ಹಮ್ಮಿಕೊಂಡ ಎರಡು ದಿನಗಳ "ಪುಸ್ತಕೋತ್ಸವ - ಪುಸ್ತಕ ಬಿಡುಗಡೆ, ಸಂವಾದ ಮತ್ತು ಗೋಷ್ಠಿ" ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿದ್ದಕ್ಕೆ ಮುಂಬಯಿಯ ಕನ್ನಡಿಗರೆಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ನಾನೊಬ್ಬ ಲೇಖಕನಾಗಿ, ಓದುಗನೂ ಆಗಿ 'ಲೇಖಕ, ಪ್ರಕಾಶಕ, ಓದುಗ' ಇವರ ನಡುವಿನ ಅಂತರ್ ಸಂಬಂಧ, ಅಂತರ್ ಪ್ರಭಾವದ ಬಗ್ಗೆ ನನ್ನ ಅಭಿಪ್ರಾಯಗಳನ್ನು ನಿಮ್ಮ ಜೊತೆ ಹಂಚಿಕೊಳ್ಳಲು ಬಯಸುತ್ತೇನೆ.

**ಛಿದ್ರೀಕರಣಗೊಂಡ ಭಾಷಾ ಸಮುದಾಯ**

ಭಾಷೆ ಹಾಗೂ ಸಾಹಿತ್ಯ - ಎರಡೂ ತನ್ನ ಸಾವಯವ ಸಮುದಾಯದ ಜೊತೆ ಅನುಭವವನ್ನು ಹಂಚಿಕೊಳಲಿಕ್ಕೆ ಇರುವಂಥವು. ಪ್ರತೀ ಭಾಷೆಗೂ ತನ್ನದೇ ಆದ ಸಾಂಸ್ಕೃತಿಕ - ಸಾಮಾಜಿಕ ಜೈವಿಕ ಸಮಾಜವಿದೆ. ಇಲ್ಲವಾದರೆ ಅದು ಜೀವಂತವಾಗಿರಲಾರದು. ಭಾಷೆ ಹಣದ ಹಾಗೆ - ಚಲಾವಣೆಯಲ್ಲೇ ಅದಕ್ಕೆ ಮೌಲ್ಯ. ಶಬ್ದಗಳು ಕೂಡ ಹಾಗೆ - ತನ್ನನ್ನು ತಾನು ಹಂಚಿಕೊಳ್ಳುವ ಮೂಲಕ ಜೀವಂತಿಕೆಯನ್ನು, ಅರ್ಥವಂತಿಕೆಯನ್ನು ಪಡೆಯುತ್ತದೆ. ಸಾಹಿತ್ಯ

---

ಕನ್ನಡ ಪುಸ್ತಕ ಪ್ರಾಧಿಕಾರ, ಮತ್ತು ಮುಂಬಯಿ ಕನ್ನಡ ಸಂಘ ಮುಂಬಯಿಯಲ್ಲಿ ಮಾರ್ಚ್ ೨೦೦೨ರಲ್ಲಿ ಸಂಯೋಜಿಸಿದ ೨ ದಿನಗಳ ಹೊರನಾಡ ಪುಸ್ತಕೋತ್ಸವದಲ್ಲಿ "ಲೇಖಕ- ಪ್ರಕಾಶಕ-ಓದುಗ" ಸಂವಾದ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ.

ಎನ್ನುವಾಗಲೇ ಅದು, ಭಾಷೆ ಮತ್ತು ಅನುಭವಗಳ ಹಂಚಿಕೆಯನ್ನು ಮೊದಲೇ ಪರಿಭಾವಿಸಿರುತ್ತದೆ (literature presupposes shared language and experiences). ಸಾಹಿತ್ಯದೊಳಗೇ ಇದು ಪೂರ್ವ ಸೂಚಿತವಾಗಿರುತ್ತದೆ.

ಆದರೆ ಇಂದಿನ ಸಂಕೀರ್ಣ ಸಮಾಜದ ರಾಜಕೀಯ ವಾಗ್ವಾದ, ತತ್ತ್ವಮಿಮಾಂಸೆಗಳು, ಈ ಜೈವಿಕ ಸಂಬಂಧವನ್ನು ಪುಡಿಪುಡಿ ಮಾಡಿದೆ. ಮುಸಲ್ಮಾನ-ಹಿಂದೂ, ಹೆಣ್ಣು-ಗಂಡು, ಪಟ್ಟಣಿಗ-ಕೃಷಿಕ - ಹೀಗೆ ಒಂದೇ ಸಮಾಜದ ಈ ಛಿದ್ರೀಕರಣವು ಭಾಷೆ, ಸಾಹಿತ್ಯ ಭಾಷಾ ಸಮುದಾಯಗಳನ್ನೂ ಛಿದ್ರಗೊಳಿಸಿದೆ. ಒಬ್ಬ ಮುಸಲ್ಮಾನನಿಗೆ ನೋವಾದರೆ, ಒಬ್ಬ ದಲಿತ ಶೋಷಣೆಗೆ ಒಳಪಟ್ಟರೆ - ಈ ಅನುಭವಗಳು ಸಮಾಜದ ಇನ್ನೊಂದು ತುದಿಯಲ್ಲಿರುವವರಿಗೆ ಅದೇ ಅನುಭವದ ಸ್ಪಂದನ ಕೊಡುವುದಿಲ್ಲ. ಒಂದೇ ಭಾಷೆ ಮಾತಾಡುವ ಸಮುದಾಯದಲ್ಲಿ ಹೆಣ್ಣುಗಳ ದುಃಖದ ನೆನಪುಗಳ ಹಂಚಿಕೆಗೆ ಸಮಾನ ಭಾಷೆಯಿಲ್ಲ. ಹಿಂದೂಗಳೊಳಗೇ ಜಾತಿಗಳ ನಡುವೆ, ಲಿಂಗಗಳ ನಡುವೆ ಸುಖ-ದುಃಖಗಳನ್ನು ಹಂಚಿಕೊಳ್ಳಬಹುದಾದ ಸಮಾನ ಭಾಷೆ ಇಲ್ಲ. ಈ ದೃಷ್ಟಿಯಲ್ಲಿ ಸಮುದಾಯವು ಎಲ್ಲ ಹಂತಗಳಲ್ಲೂ ತುಂಡುತುಂಡಾಗಿದೆ. ಕುಟುಂಬದ ಒಳಗೇ ಈ ಛಿದ್ರೀಕರಣವನ್ನು ಸ್ಪಷ್ಟವಾಗಿ ಗಮನಿಸಬಹುದು. ಹಾಗಾಗಿ ಒಂದೇ ಭಾಷಾ ಸಮುದಾಯದ ಏಕತೆಯ ಕಲ್ಪನೆಯೇ ಇಂದು ಹುಸಿಯೆನಿಸುತ್ತದೆ.

ಕುಮಾರ ವ್ಯಾಸನಿಗೆ, ವಚನಕಾರರಿಗೆ ಅಂದಿನ ಕ್ಲಾಸಿಕಲ್ ಕಥನಕಾರರಿಗೆ, ಭಾಷ್ಯಕಾರರಿಗೆ, ಲೇಖಕರಿಗೆ ಅವರವರದೇ ಆದ ಶ್ರೋತೃವೃಂದವಿತ್ತು. ಆ ಲೇಖಕರಿಗೂ, ಅವರ ಶ್ರೋತೃವೃಂದಕ್ಕೂ ಸುಸಂಬದ್ಧವಾದ ಅವಿನಾಭಾವ ಸಂಬಂಧವಿತ್ತು. ಪಂಪ, ರನ್ನ, ರಾಘವಾಂಕ, ವಚನಕಾರರು ಮೊದಲಾದವರ ಮತ್ತು ಅವರ ಶ್ರೋತೃಗಳ ನಡುವಿನ ಸಂಬಂಧ, ಸಾಮುದಾಯಿಕ ಜೈವಿಕ ಸಂಬಂಧ(organic relationship)ವಾಗಿತ್ತು. ಬೈಬಲ್, ಕುರಾನ್, ರಾಮಾಯಣ, ಮಹಾಭಾರತಗಳಿಗೂ ಈ ರೀತಿಯ ಸುಸಂಗತವಾದ ಸಂಬಂಧವಿದ್ದು, ಭಾಷೆಯ ಮೂಲಕ ಅನುಭವವನ್ನು ಹಂಚಿಕೊಳ್ಳಬಹುದಾದ ಸಾಧ್ಯತೆಯಿತ್ತು. ಹಾಗಾಗಿಯೇ ಮುದ್ರಣ ಮಾಧ್ಯಮವಿಲ್ಲದೆಯೇ ಮೌಖಿಕ ಪರಂಪರೆಯ ಮೂಲಕವೇ ಇವರೆಲ್ಲರೂ ಶತಮಾನಗಳ ಕಾಲ ಉಳಿದುಕೊಂಡು ಬಂದರು.

ವಿಪರ್ಯಾಸವೆಂದರೆ ಇಂದು ಆಧುನಿಕ ಸಂವಹನ ಮಾಧ್ಯಮ ಕ್ರಾಂತಿಯಿಂದಾಗಿ, ಭಾಷೆ - ಸಾಹಿತ್ಯ- ಸಮುದಾಯಗಳ ನಡುವೆ ಸಂವಹನದ ಸಾಧ್ಯತೆ ಹೆಚ್ಚಾಗಿದೆ ಎಂಬ ಕಲ್ಪನೆಯೇ ಹುಸಿಯಾಗುತ್ತಿದೆ. ನಿಜವಾದ ಸಂವಹನವೇ ಇಂದು ಸಾಧ್ಯವಾಗುತ್ತಿಲ್ಲ. ಸಂವಹನ ಮಾಧ್ಯಮಗಳು, ಭಾಷೆ, ಸಾಹಿತ್ಯ ಮತ್ತು ಅದರ ಸಮುದಾಯದ ನಡುವಿನ ಸೇತುವೆಯಾಗಿದೆ ಎಂಬುದು ಮಿಥ್ಯೆ ಮಾತ್ರವಲ್ಲದೆ, ಈ ಸೇತುವೆ ಅತ್ಯಂತ ಶಿಥಿಲವಾದ. ಯಾವ ಕ್ಷಣದಲ್ಲೂ ಮುರಿದು ಬೀಳಬಹುದಾದ ಸೇತುವೆಯಾಗಿದೆ. ಈ ಕಲ್ಪನೆಯೇ ನಾವು ಒಪ್ಪಿಕೊಂಡ ಆಧುನಿಕತೆ ಮತ್ತು ಮಾಧ್ಯಮಗಳು ಸೃಷ್ಟಿಮಾಡಿದ ಸುಳ್ಳು ಎಂದೇ ನನಗನ್ನಿಸುತ್ತದೆ. ಹಾಗಾಗಿ ಈ ಮಿಥ್ಯೆಯ ಸೌಧವನ್ನೇ ಕೆಡವ ಬೇಕಾಗಿದೆ.

**ಲೇಖಕ - ಪ್ರಕಾಶಕ- ಓದುಗರ ರಕ್ತ ಸ್ಥಿತಿ**

೧. **ಲೇಖಕ :** ನಿಜಕ್ಕೂ ಲೇಖಕ, ಪ್ರಕಾಶಕ, ಓದುಗ - ಈ ಮೂರೂ ವರ್ಗಗಳು ಬೇರೆ ಬೇರೆ ಅರ್ಥದಲ್ಲಿ ಇಂದು ರಿಕ್ತಸ್ಥಿತಿಗಳಲ್ಲಿವೆ, ದರಿದ್ರಾವಸ್ಥೆಯಲ್ಲಿವೆ. ನವೋದಯಕಾಲದ ಮಾಸ್ತಿ, ಕುವೆಂಪು, ಕಾರಂತ, ಬೇಂದ್ರೆ ಮುಂತಾದವರಿಗಿದ್ದ ಅಸ್ಮಿತೆ, ಬರವಣಿಗೆಯ ಸಂಪನ್ನತೆ ಈಗ ಕಂಡುಬರುವುದಿಲ್ಲ. ತಮ್ಮ ಬರಹ ಕೌಶಲ್ಯದ ಬಗ್ಗೆ (crafts) ಕುವೆಂಪು ಮುಂತಾದವರಿಗಿದ್ದ ಶ್ರದ್ಧೆ, ಆತ್ಮವಿಶ್ವಾಸಗಳು ಇಂದು ಅಷ್ಟಾಗಿ ಕಾಣುತ್ತಿಲ್ಲ. ಸಾಹಿತಿಗೆ 'ತಾನು ಸಾಹಿತಿ' ಎಂಬ ಆತ್ಮವಿಶ್ವಾಸದ ಕೊರತೆ ಕಾಣುತ್ತದೆ. ಆದರೆ ಅದಕ್ಕೆ ಅವರೇ ಪೂರ್ತಿ ಜವಾಬ್ದಾರರು ಎಂದು ಹೇಳಲಾಗದು. ಇಂದಿನ ಆಧುನಿಕ ಸಮಾಜದ ಸಂಕೀರ್ಣ ಸನ್ನಿವೇಶವೇ ಅಂಥ ಸ್ಥಿತಿಯನ್ನು ಇರಗೊಡಲಿಕ್ಕೆ ಬಿಡುವುದಿಲ್ಲ.

ಸಾಹಿತಿಗೆ ಇಂದು ಗಟ್ಟಿತನವಿಲ್ಲ, ನಿಷ್ಠುರತೆಯಿಲ್ಲ ಎಂದು ಹೇಳುವುದೂ ಹಾಗಾಗಿ ಅಷ್ಟೇನೂ ಸರಿಯೆನಿಸಲಾರದು, ಹಾಗೆ ನೋಡಿದರೆ ಸಾಹಿತಿಗೆ ಸಮಾಜದ ಮೇಲೆ ಆ ರೀತಿಯ ಪ್ರಭಾವವೇ ಇಲ್ಲ ಇಂದಿನ ಛಿದ್ರಗೊಂಡ ಸಮಾಜದಲ್ಲಿ ಸಾಹಿತಿಯೂ ಛಿದ್ರೀಕರಣಗೊಳಗಾಗಿದ್ದಾನೆ.

ಈ ಅರ್ಥದಲ್ಲಿ ಸಾಹಿತಿ ಅಥವಾ ಕಲಗಾರನ ಸ್ಥಿತಿ ಇಂದು ಭಗ್ನ ಸ್ಥಿತಿಯಾಗಿದೆ. ತಮ್ಮ ಸಾಹಿತ್ಯ, ಕಲೆಗಳಿಂದಲೇ ತಾವು ಬದುಕುತ್ತೇವೆ ಎಂಬ ಆತ್ಮವಿಶ್ವಾಸವನ್ನು ಇಂದು ಹೆಚ್ಚಿನ ಸಾಹಿತಿಗಳು ಕಲಾಗಾರರು ಕಳಕೊಂಡಿದ್ದಾರೆ. ಈ ಆತ್ಮವಿಶ್ವಾಸ ಬೆಳೆಯಬೇಕಾದದ್ದು ನಿಜಕ್ಕೂ ವೃತ್ತಿನಿರತ ಬರಹಗಾರರಿಂದ. ಬರವಣಿಗೆ ಪೂರ್ಣಾವಧಿಯದ್ದಾದಾಗ, ಸಾಹಿತಿ ತನ್ನ ಮೈಗಂಟಿದ ಜೀವನ ಕ್ರಮವಾದಾಗ, ತನ್ನೊಳಗಿನಿಂದಲೇ ಅದು ಆತ್ಮವಿಶ್ವಾಸವನ್ನು ಸಾಹಿತಿಯಲ್ಲಿ ತುಂಬುತ್ತದೆ. ಆದರೆ ಈ ದೃಷ್ಟಿಯಲ್ಲಿ, ಹಿಂದಿನ ಪೂರ್ಣಕಾಲಿಕ ಬರಹಗಾರರಾದ ಅನಕೃ, ನಿರಂಜನ್, ಕಾರಂತರಂಥ, ಲೇಖಕರಾಗಲೀ ಪಶ್ಚಿಮದ ಎಡ್ವರ್ಡ್ ಸೈದ್‌ನಂತಹ ವೃತ್ತಿನಿರತ ಬುದ್ಧಿಜೀವಿಗಳಾಗಲೀ ಇಂದು ಅಪರೂಪವಾಗಿದ್ದಾರೆ ?

೨. **ಪ್ರಕಾಶಕ:** ಇದೇ ಮಾತು ಪ್ರಕಾಶಕನಿಗೂ ಅನ್ವಯಿಸುತ್ತದೆ. ಜಗತ್ತಿನಲ್ಲಿ ಇಂದು ವ್ಯಾಪಾರ - ವಾಣಿಜ್ಯಗಳು ಗಜಗಾತ್ರದಲ್ಲಿ ಸರ್ವವ್ಯಾಪಿಯಾಗಿ ಬೆಳೆದುಬಿಟ್ಟಿದೆ. ಆದರೆ ಕನ್ನಡದ ಮಟ್ಟಿಗೆ ಹೇಳುವುದಾದರೆ, ಪುಸ್ತಕ ಪ್ರಕಟಣೆಯೆಂಬುದು ಲಾಭದಾಯಕ ವಾಣಿಜ್ಯ ಚಟುವಟಿಕೆ ಎಂದು ನೋಡುವವರೇ ಕಡಿಮೆ. ಗಾತ್ರನೋಡಿ ಪುಸ್ತಕ ತೆಗೆದುಕೊಳ್ಳುವ ನಮ್ಮ ಜನಕ್ಕೆ ಸರಕಾರ, ವಿಶ್ವವಿದ್ಯಾಲಯಗಳು, ದಪ್ಪದಪ್ಪದ ಪುಸ್ತಕಗಳನ್ನು ಅತ್ಯಂತ ಕಡಿಮೆ ಬೆಲೆಗೆ ಕೊಡುತ್ತವೆ. ಅದು ತಪ್ಪೇನಲ್ಲ ಆದರೆ ಇಂಥ ಕಾರ್ಯಯೋಜನೆಗಳು ಪ್ರಕಾಶಕನ ಸಮಸ್ಯೆಗೆ ಪರಿಹಾರ ಆಗಲಾರದು. ಬದಲಿಗೆ, ಅದು ಪ್ರಕಾಶಕನ ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸುವ ಸಂಭವವಿದೆ.

ಇದರೊಂದಿಗೇ ಜಾಗತೀಕರಣ, ಪ್ರಾದೇಶಿಕ ಭಾಷೆಗಳ ಪರಂಪರೆಯನ್ನು ಮುಸುಕು ಗೊಳಿಸುತ್ತಿದೆ. ಇಂದಿನ ಮಾರುಕಟ್ಟೆ ಪ್ರೇರಿತ ಜಾಗತಿಕ ಅರ್ಥವ್ಯವಸ್ಥೆಯಲ್ಲಿ , ಈ ವ್ಯವಸ್ಥೆಯ ಪ್ರಭುತ್ವದ ಅಬ್ಬರದ ಭಾಷೆಯಾದ ಇಂಗ್ಲೀಷಿನ ಎದುರು ನಮ್ಮ ಪ್ರಾದೇಶಿಕ ಭಾಷೆ ಹೇಗೆ ಉಳಿಯಬಲ್ಲುದೆಂಬುದೇ ಬಹುದೊಡ್ಡ ಸಮಸ್ಯೆಯಾಗಿದೆ. ಆರ್ಥಿಕ ಬಲಿಷ್ಠೀಕರಣಕ್ಕೂ ಇಂಗ್ಲೀಷು ಭಾಷೆಗೂ ನೇರ ಸಂಬಂಧವಿರುವಾಗ, ಪ್ರಾದೇಶಿಕ ಭಾಷೆ ಹೇಗ [illegible] ಷು ಭಾಷೆಯ ಜೊತೆ

ಅನುಸಂಧಾನ (negotiate) ಮಾಡಿಕೊಳ್ಳಬೇಕು. ಇಂಗ್ಲೀಷು ಸಾಹಿತ್ಯದ ಸ್ಪರ್ಶವೇ ಇಲ್ಲದ ಕೇವಲ ವಾಣಿಜ್ಯ ಭಾಷೆಯಾಗಿ ಮಾತ್ರ ಇಂಗ್ಲೀಷಿನಲ್ಲಿ ವ್ಯವಹರಿಸುವ ನಮ್ಮ ಕಂಪ್ಯೂಟರ್, ಮೆಡಿಕಲ್, ಇಂಜಿನಿಯರಿಂಗ್ ಮುಂತಾದ ಪ್ರತಿಷ್ಠಿತ ವೃತ್ತಿನಿರತರು ಒಳ್ಳೆಯದ್ಯಾವುದಕ್ಕೂ ಸ್ಪಂದಿಸದ, ಸ್ವೀಕರಿಸದ, ಸತ್ತ್ವಯುತವಾದ್ಯಾವುದಕ್ಕೂ ತಮ್ಮನ್ನು ತಾವು ತೆರೆದುಕೊಳ್ಳದಷ್ಟು ತೆಳುವಾಗಿದ್ದಾರೆ. ಗಂಭೀರವಾದ್ದ್ಯಾವುದನ್ನೂ ಸ್ವೀಕರಿಸದಂಥ ಮನಃಸ್ಥಿತಿಯಲ್ಲಿ ನಾವಿಂದಿದ್ದೇವೆ.

ಇತ್ತೀಚೆಗಿನ ಒಂದು ಸಮಾಜ ಶಾಸ್ತ್ರೀಯ ಸಮೀಕ್ಷೆಯ ತಿಳಿಸುವಂತೆ, ನಮ್ಮ ಭಾರತರ ಇಂಗ್ಲೀಷು ಕಲಿತು ಸಶಕ್ತರಾದ ಪೇಟೆಯ ಮಂದಿಯಲ್ಲಿ ಕೇವಲ ಮೂರು ಶೇಕಡಾ ಜನರು ಮಾತ್ರ ನಮ್ಮ ಸಂಕೀರ್ಣ ಸಮಾಜದ ಬಹುಮುಖೀ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬಲ್ಲರಂತೆ. ಅದಕ್ಕೇ, ಈ ಮಂದಿ ಜಾಗತೀಕರಣದ ಅನಿಷ್ಟಗಳನ್ನಾಗಲೀ ದೇಶವನ್ನೇ ಛಿದ್ರೀಕರಿಸಬಲ್ಲ ಮತೀಯ ಮೂಲಭೂತವಾದ ಆಳವಾದ ಘಾತಕ ಶಕ್ತಿಯನ್ನಾಗಲೀ ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗುತ್ತಾರೆ; ಮಾತ್ರವಲ್ಲ, ತಾವೇ ತಮಗೆ ಕವಿದ ಸಾಂಸ್ಕೃತಿಕ ವಿಸ್ಮೃತಿಯಿಂದಾಗಿ ಇವೆಲ್ಲ ಅನಿಷ್ಟಗಳ ಆಕರ್ಷಣೆಗೊಳಗಾಗುತ್ತಾರೆ.

ಇನ್ನು ನಮ್ಮ ದೃಶ್ಯಮಾಧ್ಯಮಗಳಂತೂ, ಲಘುವಾದುದ್ದನ್ನು ಜಾಳು ಜಾಳಾದ್ದನ್ನು ಕೀಳು ಅಭಿರುಚಿಯುಳ್ಳದ್ದನ್ನೇ ನಮಗೆ ಸತತವಾಗಿ ನೀಡುತ್ತಾ ನಮ್ಮ ಮೇಲು ಮೇಲು ಮನಸ್ಸನ್ನು ತತ್‌ಕ್ಷಣಕ್ಕೆ ಉದ್ರೇಕಿಸಿ ಸಂತೋಷಪಡುವುದನ್ನೇ ಕಲಿಸಿ, ಕಲಿಸಿ, ನಮಗೆ ಬದುಕಿನ ನಿಜ ಅನುಭವಗಳಾದ ದುಃಖ, ಪ್ರೀತಿ, ಆತಂಕ, ಸಂಕಟ, ಸೌಂದರ್ಯ ಸಂತೋಷಗಳಿಗೆ ಮುಖಾಮುಖಿಯಾಗುವ ಧೈರ್ಯವನ್ನೇ ಕಳಕೊಳ್ಳುವಂತೆ ಮಾಡಿದೆ. ಬದುಕಿನ ನಿಜವಾದ ಸಂಘರ್ಷ, ಪ್ರತ್ಯಾಘಾತ ಅನುಭವಗಳಿಗೆ ತೆರೆದುಕೊಳ್ಳಲೂ ಹೆದರುವಷ್ಟು ನಾವು ದುರ್ಬಲರಾಗುತ್ತಿದ್ದೇವೆ. ಹಿಂಸೆ, ಕ್ರೌರ್ಯಗಳಿಂದ ರಕ್ತ ಚೆಲ್ಲಿದಾಗ ಹೆದರಿ, ರಕ್ತಚೆಲುವ ಉಗಮದ ಶೋಧನೆ ಮಾಡಿ ರಕ್ತವನ್ನು ತಡೆಯುವ, ಹಿಂಸೆಯ ಮೂಲವನ್ನೇ ಸ್ತಬ್ಧಗೊಳಿಸುವ ಧೈರ್ಯಕಳಕೊಳ್ಳುತ್ತಿದ್ದೇವೆ.

ದೂರದರ್ಶನವಂತೂ ನಮ್ಮ ಜೀವನದ ಜೀವಂತ ಅನುಭವಗಳಿಗೆ ಪರ್ಯಾಯವಾದ್ದನ್ನು ಕೊಡುತ್ತಾ ನಮ್ಮನ್ನು ಸೌಜನ್ಯದ, ದಾಕ್ಷಿಣ್ಯದ ದುರ್ಬಲ ನಾಗರಿಕರನ್ನಾಗಿ ಮಾಡಿ ಬಿಡುತ್ತಿದೆ. virtual citizensಗಳನ್ನಾಗಿ ಪರಿವರ್ತಿಸುತ್ತಿದೆ. ನಮಗೆ ದುಃಖ - ಪ್ರೀತಿ- ಸಂಕಷ್ಟ-ಕ್ರೌರ್ಯ ಮುಂತಾದ ಅನುಭವಗಳನ್ನೂ ತಿದ್ದಿ, ಸಂಪಾದಿಸಿ, ಪರಿಷ್ಕರಿಸಿ, ನಮಗೆ ಸಹ್ಯವಾಗುವ ರೀತಿಯಲ್ಲಿ ಮೃದುವಾಗಿ ದೃಶ್ಯಮಾಧ್ಯಮ ನೀಡುತ್ತಿರುತ್ತದೆ. ಇದರ ಫಲವಾಗಿ ನಿಜವಾದ ಮನುಷ್ಯ ಮತ್ತು ಆತನ ಕಲ್ಪನಾ ಮಾದರಿ, ಪ್ರತಿಮೆ (image) ಯ ನಡುವೆ ಇರುವ ಅಂತರವೇ ಹೊರಟುಹೋಗಿದೆ. ದೂರದರ್ಶನದಂತೆ ಸಿನೇಮಾವೂ ಸ್ವಲ್ಪಮಟ್ಟಿಗೆ ಈ ಕೆಲಸ ಮಾಡಿದೆ. 'ಸಂಸ್ಕಾರ'ದ ಪ್ರಾಣೇಶಾಚಾರ್ಯ, ನಮ್ಮ ನಿಮ್ಮೆಲ್ಲರ ಕಲ್ಪನೆಯ, ಅನುಭವಕ್ಕೆ ದಕ್ಕುವ ಅನಂತ ಮುಖಗಳಿರುವ ನಮ್ಮ ನಮ್ಮ ಪ್ರತ್ಯ ಪ್ರತ್ಯೇಕ ಪ್ರಾಣೇಶಾಚಾರ್ಯ ಆಗುತ್ತಾನೆ. ಸಂಸ್ಕಾರ ಸಿನೆಮಾ ಬಂದನಂತರ ಈ ಸಾಧ್ಯತೆಗಳು ಮಾಯವಾಗಿ ಆ ನಟನೇ ಪ್ರಾಣೇಶಾಚಾರ್ಯನಾಗಿ ಏಕರೂಪೀ ಆಗಿ ಬಿಡುತ್ತಾನೆ.

ಆದರೆ ಸಾಹಿತ್ಯದಲ್ಲಿ ಮುಖ್ಯವಾಗಿ ನೈಜಜೀವನದ ವಿಶಿಷ್ಟ, ವೈಯಕ್ತಿಕ ಅನುಭವಗಳೇ

ಇರುವುದರಿಂದ ಅಪ್ಪರಮಟ್ಟಿಗೆ ಅದು ಓದುಗನ ಸ್ವಜ ಜೀವನಾನುಭವಕ್ಕೆ ಪರ್ಯಾಯವಾಗುವ ಕೆಟ್ಟ ಕೆಲಸಕ್ಕೆ ಕೈ ಹಾಕುವುದಿಲ್ಲ.

೩. ಓದುಗ : ಸಾಹಿತ್ಯಾಸಕ್ತರ, ಓದುಗರ ಧೋರಣೆಯೂ ಬದಲಾಗಬೇಕು. ಸಾಹಿತ್ಯ ಕೇವಲ ಕಾಂತಾ ಸಂಹಿತೆಯಾಗಿರಬೇಕೆಂದು ಬಯಸುವ ಇಂದಿನ ಓದುಗನ ಪ್ರವೃತ್ತಿಯಿಂದ ಯಾವುದೇ ಗಂಭೀರವಾದ ಸಾಹಿತ್ಯ ಸೃಷ್ಟಿಯಾಗದು. "ಕುಸುಂಬ್ರಿ, ಉಪ್ಪಿನಕಾಯಿ, ಚಹಾದ ಜೊತೆ ಚೂಡದ್ಹಾಂಗೆ" ಸಾಹಿತ್ಯವನ್ನು ಬಯಸುವ ಪ್ರವೃತ್ತಿ ಇಂದಿನ ಓದುಗರಲ್ಲಿ ಬೆಳೆಯುತ್ತಿದೆ. ಇದು ಅತ್ಯಂತ ದುರಾದೃಷ್ಟದ ವಿಷಯ. ಇಂಥ ಸಾಹಿತ್ಯದ ಬೇಡಿಕೆಯಿಂದಾಗಿ ಕೇವಲ ಸುಂದರವಾಗಿ, ಆಕರ್ಷಕವಾಗಿ, ಜನಪ್ರಿಯವಾಗಿ ಬರೆಯುವವರು ಹುಟ್ಟಿಕೊಳ್ಳುತ್ತಾರೆ. ಇಂದು ಪ್ರಕಟಣಾ ತಂತ್ರಜ್ಞಾನ ಕ್ರಾಂತಿಯಿಂದಾಗಿ ಪ್ರಕಟಣೆಯು ಸಲೀಸಾದ ಮೇಲಂತೂ ಯಾರು ಏನನ್ನೂ ಬರೆದು ಪ್ರಕಟಿಸಬಹುದು. ಹಾಗಾಗಿ ಇಂದು ಸಾಹಿತ್ಯದ ಹೆಸರಿನಲ್ಲಿ ಪ್ರಕಟಗೊಳ್ಳುವ ಸಾವಿರಾರು ಪುಸ್ತಕಗಳು ತೀರ ಜೊಳ್ಳಾಗಿಯೂ ಜಾಳು ಜಾಳಾಗಿಯೂ ಹಗುರವಾದ್ದನ್ನು, ಕೀಳು ಅಭಿರುಚಿಯನ್ನು ಪ್ರಚೋದಿಸುವಂಥದ್ದಾಗಿ ಬಿಟ್ಟಿವೆ. ಇಂಥ ಪ್ರವೃತ್ತಿಗೆ ಪತ್ರಿಕೆಗಳೂ ಸಾಕಷ್ಟು ಕಾರಣವಾಗಿವೆ. ಯಾವ್ರ ಯಾವುದೋ ಕಾರಣಕ್ಕೆ ಉದ್ರೇಕಕಾರಿ (exciting)ಯದ್ದನ್ನು, ತೀವ್ರ ಭಾವುಕವಾದ್ದನ್ನು ಹಗುರವಾದ್ದನ್ನು ಯಾವ ವಿವೇಚನೆಯೂ ಇಲ್ಲದೆ ಪ್ರಕಟಿಸುವುದು ಸಾಮಾನ್ಯವಾಗಿದೆ. ಓದುಗರಿಗೆ ಇಂಥ ಉಪ್ಪು ನೀರಿನ ಕಡಲಲ್ಲಿ ಕುಡಿಯಲು ಒಂದು ತೊಟ್ಟು ನೀರೂ ಸಿಗದಿರುವ ಸಂಭವವೇ ಹೆಚ್ಚು.

ಸುಂದರವಾಗಿ ಬರೆಯುವ ಸಾವಿರಾರು ಲೇಖಕರು ಹುಟ್ಟಿಕೊಳ್ಳಬಹುದು. ಆದರೆ ಗಂಭೀರವಾದ್ದನ್ನು, ಓದುಗನ ಬುದ್ಧಿಯ ಎಲ್ಲೆಯನ್ನು ವಿಸ್ತರಿಸುವ ಯೋಗ್ಯತೆಯ ಬರಹಗಾರರ, ಗಾಢ ಅನುಭವದಿಂದ ಬರೆಯುವವರ ಸಂಖ್ಯೆ ಅತ್ಯಂತ ವಿರಳವೆನ್ನಬಹುದು. ಬರೆಯುವವರೆಲ್ಲ ಲೇಖಕರಲ್ಲ. ಆಳವಾದ ಅಧ್ಯಯನವಾಗಲೀ ಅನುಭವವಾಗಲೀ ಇಲ್ಲದೆ, ಹೂತ ಧ್ಯಾನ ಮೌನಗಳಿಲ್ಲದೆ, ಬರೆಯುವ ಒಳಗಿನ ಆವಶ್ಯಕತೆಯಿಲ್ಲದೆ ಕೇವಲ ಜನಪ್ರಿಯತೆಗಾಗಿ ಬರೆಯುವುದರಿಂದ ಏನೂ ಆಗದು.

ಚಿಕ್ಕವರಿರುವಾಗ ನಮ್ಮಲ್ಲಿ ಹೆಚ್ಚಿನವರಿಗೆ ಕವನ, ಲೇಖನ, ಕತೆ ಬರೆಯುವ ಹವ್ಯಾಸ, ಹುಚ್ಚುಗಳಿರುತ್ತವೆ. ಆದರೆ ದೊಡ್ಡವರಾದಂತೆ ತಾನು ಹೇಳಲೇ ಬೇಕು ಎನ್ನುವ ಆಂತರಿಕ ಆವಶ್ಯಕತೆ ಬಂದಾಗ, ಹೇಳದಿರಲು ಸಾಧ್ಯವಿಲ್ಲ ಎಂಬ ಒಳಗಿನ ಒತ್ತಡವಿದ್ದಾಗ ಮಾತ್ರ ಬರೆದರೆ ಅದು ಓದುವ ಬರಹವಾದೀತು. ಲೇಖಕನಿಗೆ [illegible] ಬರುವ ಜ್ವರ ಕಾಡಬೇಕು. ಒಬ್ಬ ಲೇಖಕ ತನ್ನ ಬರಹದಲ್ಲಿ ತೀವ್ರನಾಗುವುದೊಂದೇ ಇದಕ್ಕೆ ಉತ್ತರವಾಗಬಲ್ಲುದು.

ಇಂದಿನ 'ತಂತ್ರಜ್ಞಾನ' ಯುಗದಲ್ಲಿ, ಬರಹವೂ ಮಾರುಕಟ್ಟೆಯಲ್ಲಿ ಕೇವಲ ಮಾರಬಲ್ಲ ಸರಕಾಗಿ ಬಿಟ್ಟಿದೆ. ಮಾರುಕಟ್ಟೆ, ಉತ್ಪಾದಕರು, ನಿರ್ದೇಶಕರು ಬರಹಗಾರರನ್ನು ಕೊಂಡುಕೊಳ್ಳಲು ಆತನ ಬರಹವನ್ನು ಮಾರುಕಟ್ಟೆ, ಬೇಡಿಕೆಯಂತೆ ಹೀಗೆಯೇ ಇರಬೇಕೆಂದು ನಿರ್ದೇಶಿಸುವ ಹಂತ ತಲುಪಿದೆ. ಆಗ ಸೃಜನಶೀಲತೆಯೆಂಬುದು ಸುಳ್ಳಾಗಿ, ಮಾರುಕಟ್ಟೆ, ಬೇಡಿಕೆಗನುಗುಣವಾಗಿ ಬರೆಯುವ

ಕೇವಲ ಜಾಣತನದ ಕೌಶಲ್ಯವಾಗಿ ಬಿಡುತ್ತದೆ. ಇಂಥ ಪರಿಸ್ಥಿತಿಯಲ್ಲಿ, ಹೈಟೆಕ್ ಬರಹಗಾರರು ಹುಟ್ಟಿಕೊಳ್ಳುತ್ತಾರೆ. ಮಾರುಕಟ್ಟೆ ಪ್ರಚಾರ, ಪುಸ್ತಕದ 'ಪ್ರಮೋಟರ್ಸ್'ಗಳಿಂದಲೇ ಜಗತ್ತಿನ ಯಾವ ಉನ್ನತ ಪ್ರಶಸ್ತಿ ಬೇಕಾದರೂ ಪಡೆಯುವ ಮಟ್ಟಕ್ಕೆ ಬಂದಿದೆ.

**ಸಂಕೀರ್ಣತೆ ಕಳಕೊಳ್ಳುತ್ತಿರುವ ಬರಹಗಳು**

ಇಂಥ ಸಂದರ್ಭದಲ್ಲಿ ಓದುಗ ಉತ್ತಮವಾದ್ದನ್ನು ಪಡೆಯುವುದು ಹೇಗೆ ? ಕಳೆದ ಐದು ದಶಕಗಳಲ್ಲಿ ಬಂದ ಅನೇಕ ಲೇಖಕರ ಬರಹಗಳನ್ನು ಒಮ್ಮೆ ಓದಿದರೆ ಮತ್ತೊಮ್ಮೆ ಓದಬೇಕೆಂದು ಪ್ರಜ್ಞಾವಂತ ಓದುಗನಿಗೆ ಅನ್ನಿಸುವುದಿಲ್ಲ. ಒಬ್ಬ ಲೇಖಕನ ಬರಹವನ್ನು ಒಮ್ಮೆ ಓದಿದ ಮೇಲೆ ಮತ್ತೊಮ್ಮೆ ಓದಬೇಕೆಂದು ಅನ್ನಿಸದಿದ್ದರೆ ಆ ಸಾಹಿತ್ಯಕೃತಿ ಗಮನ ಸೆಳೆಯುವ ಕೃತಿ ಆಗಲಾರದು. ಅನೇಕ ಲೇಖಕರು ಉತ್ತಮವಾದದ್ದನ್ನು ಕೊಟ್ಟಿದ್ದಾರೆ, ಕೊಡುವ ಶಕ್ತಿಯುಳ್ಳವರಾಗಿದ್ದಾರೆ. ಆದರೆ ಅವೆಲ್ಲವನ್ನೂ ಸಾಹಿತ್ಯ ಕೃತಿ ಎಂದು ಪರಿಗಣಿಸಬಹುದೇ ? ಎಂಬುದನ್ನು ಯೋಚಿಸಬೇಕು. ವಕಾಲತ್ತು ವಹಿಸಿ ಮಾತಾಡುವಂತೆ ತಮ್ಮ ವಾದವನ್ನು ಘೋಷಿಸುವ ಕೆಲಸಗಳನ್ನು ಕರಪತ್ರಗಳೂ ಮಾಡುತ್ತವೆ. "ಪಾಂಪ್ಲೆಟ್" ಗಳನ್ನು ಸಾಹಿತ್ಯ ಕೃತಿ ಎಂದು ಓದಬಹುದೇ ? ಒಬ್ಬ ಶ್ರೀಮಂತ ವಿಷಯ ವಿದ್ವಾಂಸ ತನ್ನ ಆಡಂಬರದ ಸಭ್ಯ ಜೀವನದಲ್ಲಿ ಕುಡಿದುಬಂದು ತನ್ನ ಹೆಂಡತಿಯನ್ನು ಹೊಡೆಯುವುದನ್ನು ಅದರಿಂದ ಮಕ್ಕಳಿಗಾಗುವ ದಿಗಿಲು-ತಲ್ಲಣಗಳನ್ನು ಸೃಜನಾತ್ಮಕವಾಗಿ ಹೆಣೆದು ಪ್ರತಿಬಿಂಬಿಸಲು ಪ್ರತಿಭೆ ಬೇಕು. ಆದರೆ 'ಸ್ತ್ರೀ ಸ್ವಾತಂತ್ರ್ಯದ ಪ್ರಶ್ನೆ " ಎಂಬ ದೀರ್ಘ ಪ್ರಬಂಧ ತಯಾರಿಸಲಿಕ್ಕೆ ಮಾಹಿತಿ ಸಾಕು. ನಮ್ಮಲ್ಲಿ ಅನೇಕ ಲೇಖಕರು ಮಾಹಿತಿ ಕೊಡುವಂಥ ಲೇಖಕರು. ಅನೇಕ ಬಾರಿ ಸರಿಯಾದ ನಿಲುವು ಇದ್ದ ಸಾಹಿತಿಗಳೂ ಅತಿ ಸಾಮಾನ್ಯವಾದ ಸಾಹಿತ್ಯ ಬರೆಯುತ್ತಾರೆ. ಹಾಗಾಗಿ ನಾವು ಸಾಹಿತ್ಯಕ್ಕೂ, ಹೇಳಿಕೆಗಳಿಗೂ, ವಾದಕ್ಕೂ ಇರುವ ಭೇದವನ್ನು ಎಚ್ಚರದಿಂದ ಗಮನಿಸಬೇಕು. ಅಲ್ಲೊಬ್ಬ, ಇಲ್ಲೊಬ್ಬ ಪ್ರತಿಭಾವಂತ ಲೇಖಕರನ್ನು ಹೊರತುಪಡಿಸಿ, ಇತ್ತೀಚೆ ಬಂದ ಅನೇಕ ವಾದಗಳು ಅನುಭವದ ಕೊರತೆಯಿಂದಾಗಿ ಮತ್ತು ಸರಳರೇಖಾತ್ಮಕ (linear)ತೀರ್ಮಾನಗಳಿಂದಾಗಿ, ಆಕರ್ಷಕವಾಗಿ ಬರೆಯಬೇಕೆನ್ನುವ ಪ್ರಚಾರಾತುರದಿಂದಾಗಿ ಸರಳೀಕೃತ ಹೇಳಿಕೆಗಳಂತೆ ಕಾಣುತ್ತದೆ.

ಅದರೂ ಆಧುನಿಕೋತ್ತರ ಜಗತ್ತಿನ ಬದುಕು ಬಹಳ ಸಂಕೀರ್ಣಗೊಂಡಿದ್ದು, ಅನೇಕ ಸುಳಿ-ಒಳಸುಳಿಗಳಿಂದ ಕೂಡಿದೆ. ವಿಶ್ವಪ್ರಭುತ್ವದ ಸಮೀಕರಣದಲ್ಲಿ ಸಮತೋಲನಕ್ಕೆ ಪೂರಕವಾಗಿದ್ದ ಸೋವಿಯತ್ ರಶ್ಯಾ ಛಿದ್ರಗೊಂಡು, ತೃತೀಯ ಜಗತ್ತಿನ ಸಮಾನತೆಯ ಹಸಿವನ್ನು ತಣಿಸಲು ಪೂರಕವಾದ ಚಳುವಳಿಗಳೆಲ್ಲ ಹಿಂಜರಿಯುವಂತಾಗಿದೆ. ಏಕಮೇವ ದೊಡ್ಡಣ್ಣನಾದ ಅಮೇರಿಕಾ, ತನ್ನೆಲ್ಲ ಬಂಡವಾಳಶಾಹೀ ದಬ್ಬಾಳಿಕೆಯ ಕ್ರೂರ ಮುಖ ತೋರಿಸುತ್ತಿದೆ. ಭಯೋತ್ಪಾದಕತೆ ಧಾರ್ಮಿಕ ಮತಾಂಧತೆ, ಹಿಂಸೆ-ಕ್ರೌರ್ಯಗಳು ದೈನಂದಿನ ಕಾಯಕವಾಗಿ ಬಿಟ್ಟಿದೆ. ಸಾಮಾಜಿಕ ನ್ಯಾಯ ಸಮಷ್ಟಿಹಿತ ಇವೆಲ್ಲ ಇಂದು ಜಾಗತೀಕರಣ - ಉದಾರೀಕರಣದ ಮುಖವಾಡದ ಮಾರುಕಟ್ಟೆ ಅರ್ಥವ್ಯವಸ್ಥೆಯ ಕಾಲಿನಡಿ ನುಚ್ಚು ನೂರಾಗುತ್ತಿದೆ. ಜಾಗತಿಕ ಮಾರುಕಟ್ಟೆಯ ಗುರ್ಕಾರರಾದ ಬಹುರಾಷ್ಟ್ರೀಯ ಕಂಪೆನಿಗಳು ಜಗತ್ತಿನ ಮೂಲೆ ಮೂಲೆಯ ಹಳ್ಳಿಗಳಿಗೂ ರಹದಾರಿಯನ್ನು ಕೊರೆದು ಅಲ್ಲಿಂದ ನಮ್ಮ ಬೇಸಾಯಗಾರರ ಕರಕುಶಲಗಾರರ, ಗ್ರಾಮೀಣ ಪ್ರದೇಶದ ಅಸಂಖ್ಯ ಕಸುಬು-

ಉಪಕಸುಬುದಾರರ ಅನುಭವ ಮೂಲ ದೇಶೀಯ ಜ್ಞಾನ ಕೌಶಲ್ಯವನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅತಿರೇಕ ಲಾಭ ಹೊಡೆಯಲಿಕ್ಕಾಗಿ ಕದಿಯಲು ಆರಂಭಿಸಿವೆ. ಇವುಗಳ ಪರಿಣಾಮ, ಬಹುಮುಖೀ ಆಯ್ಕೆಗಳ ಅವಸಾನ ಮತ್ತು ಸಾಂಸ್ಕೃತಿಕ ಶೂನ್ಯತೆ ಇವನ್ನೆಲ್ಲ ಅರ್ಥೈಸಿ, ಜೀರ್ಣಿಸಿಕೊಂಡು ಸೃಜನಾತ್ಮಕವಾಗಿ ಬಳಸಿಕೊಂಡು ಬರೆಯಲು ಸಾಕಷ್ಟು ಮಾನಸಿಕ ಸಿದ್ಧತೆ ಬೇಕು. ಆದರೆ ಸಾಹಿತ್ಯ - ಸಂಸ್ಕೃತಿ ವಲಯಗಳಲ್ಲಿ ಇಂಥ ಮಾನಸಿಕ ಸಿದ್ಧತೆ ಕಾಣುವುದಿಲ್ಲ. ನಮ್ಮ ಕನ್ನಡದ ಕೃತಿಯೂ ಅಷ್ಟೇನೂ ಆಶಾದಾಯಕವಾಗಿಲ್ಲ.

❑

# ಕಾಲೇಜು ಶಿಕ್ಷಣದಲ್ಲಿ ಶಿಕ್ಷಕನ ಪಾತ್ರ

ಕಾಲೇಜು ಅಥವಾ ವಿಶ್ವವಿದ್ಯಾಲಯ ಶಿಕ್ಷಣ ಕ್ರಮವು ಪ್ರೌಢಶಾಲಾ ಕ್ರಮಕ್ಕಿಂತ ಗುಣಾತ್ಮಕವಾಗಿ ಭಿನ್ನವಾಗಿದೆ. ಶಾಲೆಯಲ್ಲಿ ಶಿಕ್ಷಕ-ವಿದ್ಯಾರ್ಥಿ ಸಂಬಂಧವು 'ಪ್ರಬುದ್ಧ-ಮಗು' ಸಂಬಂಧವಾಗಿದ್ದರೆ, ಕಾಲೇಜಿನಲ್ಲಿ ಈ ಸಂಬಂಧವು ಎರಡು ಪ್ರಬುದ್ಧರ ನಡುವಿನ ಸಂಬಂಧವಾಗಿ ಪರಿವರ್ತನೆಗೊಳ್ಳುತ್ತದೆ. ಶಾಲೆಯಲ್ಲಿ ಕಲಿಸುವುದೇ ಅಗತ್ಯ ಆದರ್ಶವಾದ್ದರಿಂದ ಸ್ಪಷ್ಟವಾದ ಶಿಕ್ಷಕ -ವಿದ್ಯಾರ್ಥಿ ಸಂಬಂಧ ಇಲ್ಲಿ ಅವಶ್ಯವಾಗಿದೆ. ಹೊರಜಗತ್ತಿನೊಡನೆ ಮಗು ವ್ಯವಹರಿಸಲು ಬೇಕಾಗುವಷ್ಟು ಸಾಮಾನ್ಯ ಜ್ಞಾನ, ಓದುವ, ಬರೆಯುವ, ಲೆಕ್ಕ ಮಾಡುವ ಮೂಲ ಭೂತ ವ್ಯವಹಾರ ಕುಶಲತೆ, ಸಂವಹನ ಕೌಶಲ್ಯ ದೈನಂದಿನ ಬಾಳಿನ ಚಟುವಟಿಕೆಗಳನ್ನು ಸಲೀಸಾಗಿ ನಿಭಾಯಿಸುತ್ತ ಸಭ್ಯ ನಾಗರಿಕವಾಗಿ ಬಾಳಲು ಬೇಕಾದ ಸಾಮಾನ್ಯ ರಾಜಕೀಯ ಜ್ಞಾನ, ಕಾನೂನು ಮಾಹಿತಿ, ಪೌರನೀತಿ ಮೂಲಭೂತ ಹಕ್ಕುಗಳ ಬಗ್ಗೆ ಎಚ್ಚರ, ಜನತಂತ್ರ, ಚುನಾವಣೆ, ಸಾಮಾಜಿಕ ನ್ಯಾಯ, ಸಮತೆ ಮುಂತಾದುವುಗಳ ಪರಿಜ್ಞಾನ, ಬದುಕಿಗೆ ಪೂರಕವಾಗುವ ವಿಜ್ಞಾನ ಮತ್ತು ತಂತ್ರಜ್ಞಾನದ ಪರಿಚಯ ಇವೆಲ್ಲವುಗಳನ್ನು ಮಕ್ಕಳಿಗೆ ನೀಡುವುದು ಶಾಲೆಯ ಪ್ರಮುಖ ಜವಾಬ್ದಾರಿಯಾಗಿದೆ. ಇದರೊಂದಿಗೆ, ಎಳೆಯ ಮಕ್ಕಳು ಸಹಜವಾಗಿ ಅರಳಿಕೊಳ್ಳಲು ಸಹಕಾರಿಯಾಗುವ ಆಟದ ಅವಕಾಶ, ನಿಸರ್ಗದ ಒಡನಾಟ, ಚಿತ್ರಕಲೆ, ಸಂಗೀತ ಮುಂತಾದ ಮಗು ತನ್ನ ಮನೆಯ ಸುತ್ತಮುತ್ತ ಇರುವಾಗ ಮೈಮರೆಯುವ ಸಂಗತಿಗಳೂ ಶಾಲೆಯ ವಾತಾವರಣದಲ್ಲಿ ಸಿಗಬೇಕು. ಏಕೆಂದರೆ, ಸಹಜವಾದ ಪರಿಸರದಲ್ಲಿ ತಾವಾಗಿಯೇ ಕಲಿಯುವ ಇಂಥ ಅನೇಕ ಸಂಗತಿಗಳಿಂದ ನಾವು ಮಕ್ಕಳನ್ನು ಬೇರ್ಪಡಿಸಿ ಶಾಲೆಗೆ ಸೇರಿಸುವುದರಿಂದ, ಅವರು ವಂಚಿತರಾಗಬಹುದಾದ ಈ ಎಲ್ಲ ಸಂಗತಿಗಳನ್ನೂ ಮಗುವಿನ ಸಮಗ್ರ ಬೆಳವಣಿಗೆಗೆ ಪುಷ್ಟಿಕೊಡುವ ಶಾಲೆಯಲ್ಲೇ ಒದಗಿಸಬೇಕು. ಅಂದರೆ, ಕನಿಷ್ಠ 'ಫಂಕ್ಷನಲ್' ಜ್ಞಾನ

ಮಾಹಿತಿಗಳನ್ನು ಪ್ಯಾಕೇಜ್ ರೂಪದಲ್ಲಿ ಶಾಲೆಯಲ್ಲಿ ಮಕ್ಕಳಿಗೆ ಉಪಾಧ್ಯಾಯರ ಮೂಲಕ ಒದಗಿಸುತ್ತದೆ. ಹಾಗಾಗಿ ಶಿಕ್ಷಕ ಶಾಲೆಯ ಕೇಂದ್ರಬಿಂದವಾಗುರುತ್ತಾನೆ. ಆತನಿಗೆ ಮಕ್ಕಳ ಮೇಲೆ ಸಹಜವಾದ ಅಧಿಕಾರ, ನಿಯಂತ್ರಣವಿರುತ್ತದೆ. ಈ ನಿಯಂತ್ರಣ ಹಿಡಿತ ಅನಿವಾರ್ಯ ಕೂಡ. ಮಕ್ಕಳಿಗೆ ಏನು ಕಲಿಸಬೇಕು, ಎಷ್ಟು ಕಲಿಸಬೇಕು, ಹೇಗೆ ಕಲಿಸಬೇಕು ಎಂಬುದನ್ನು ಆತನೇ ನಿರ್ಧರಿಸುತ್ತಾನೆ.

* * *

ಶಾಲಾ ಶಿಕ್ಷಣ ಮುಗಿಸಿದ ಮಕ್ಕಳು ಕಾಲೇಜು ಸೇರುವ ಹಂತದಲ್ಲಿ ಕನಿಷ್ಠ ಸಾಮಾನ್ಯ ಜ್ಞಾನ ಕೌಶಲ್ಯಗಳನ್ನು ಅವರು ಪಡೆದಿರುತ್ತಾರೆ. ಹಾಗಾಗಿ ಕ್ಲಾಸುರೂಮ್, ಬೋಧನಾ ಕ್ರಮದಲ್ಲಿ ಜ್ಞಾನ ಮಾಹಿತಿಯನ್ನು ದಾಟಿಸದಿದ್ದರೂ, ಅವರ ಬೆಳವಣಿಗೆ ಕುಂಠಿತವಾಗುವುದಿಲ್ಲ. ಶಾಲೆಯಲ್ಲಿ ದೊರೆತ ಸಾಮಾನ್ಯ ತಿಳುವಳಿಕೆಯಿಂದ ಆತ ಬೇಸಾಯಗಾರನೋ ಅಥವಾ ಅಂಗಡಿ ವ್ಯಾಪಾರಿ, ಲೇಖಕ, ಕಲಾಗಾರ, ನಾಟಕಕಾರ, ಬಡಗಿ, ದರ್ಜಿ, ಕುಂಬಾರ, ತೋಟಗಾರ, ಸಂಗೀತಗಾರ, ಹೋಟೇಲು ಉದ್ಯಮಿ, ಮೈಕಾನಿಕ್, ವಾಹನ ಚಾಲಕ, ಮುಂತಾದ ವೃತ್ತಿ ನಿರತನಾಗಲು ಆತ ಸಮರ್ಥ. ತನಗೆ ಅನುಕೂಲವಿರುವಂತೆ, ತನ್ನದೇ ಗತಿಯಲ್ಲಿ, ತನ್ನ ಕ್ರಮದಲ್ಲಿ, ಅವಕಾಶ ದೊರೆತಂತೆ ಈ ಕೌಶಲ್ಯಗಳನ್ನು ಇನ್ನಷ್ಟು ಗಟ್ಟಿಪಡಿಸಿಕೊಳ್ಳಲೂ ಆತ ಸಮರ್ಥ. ಅವಶ್ಯ ಕಂಡರೆ ತನ್ನ ಗುರುವನ್ನು ತಾನೇ ಕಂಡುಕೊಳ್ಳುತ್ತಾನೆ ಅಥವಾ ಯಾರಾದರೂ ಅನುಭವಿಗಳ ಜೊತೆ ತರಬೇತಿ ಪಡೆದುಕೊಳ್ಳುತ್ತಾನೆ ಅಥವಾ ಸ್ವಂತ ಪ್ರಯತ್ನದಿಂದ ಕಲಿತುಕೊಳ್ಳುತ್ತಾನೆ. ಆ ಹಂತದಲ್ಲಿ ಬೋಧನ ಕ್ರಮದ 'ಔಪಚಾರಿಕ' ಶಿಕ್ಷಣದ ಆತನಿಗೆ ಅಗತ್ಯವಿರುವುದಿಲ್ಲ.

ಆದರೆ ಒಬ್ಬ ವಿದ್ಯಾರ್ಥಿ ಉನ್ನತ ವ್ಯಾಸಂಗಕ್ಕಾಗಿ ಕಾಲೇಜು ಸೇರಲು ನಿರ್ಧರಿಸಿದಾಗ ಕೆಲವೊಂದು ಸಂಗತಿಗಳು ಅನಿವಾರ್ಯವಾಗುತ್ತವೆ. ಅವುಗಳಲ್ಲಿ ಎರಡು ಪ್ರಮುಖವಾದವುಗಳು. ವೃತ್ತಿಪರ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ವಿಷಯ ತಜ್ಞರಿಂದ ವಿಶೇಷ ತಾಂತ್ರಿಕ ಜ್ಞಾನವನ್ನು (professional texts) ಕಲಿಯುತ್ತಾರೆ. ಏಕೆಂದರೆ ಈ ವಿಶೇಷ ವಿಷಯ ಜ್ಞಾನವು ಮಾರುಕಟ್ಟೆಯಲ್ಲಿ ಸುಲಭವಾಗಿ ಟ್ಯುಟೋರಿಯಲ್ ಸಂಸ್ಥೆಗಳಲ್ಲಿ ದೊರೆಯುವಂಥದಲ್ಲ; ಮಾತ್ರವಲ್ಲ, ವೈದ್ಯಕೀಯ ಇಂಜನಿಯರಿಂಗ್, ಡೆಂಟಲ್ ಮುಂತಾದ ವಿಶೇಷ ಜ್ಞಾನ ಶಾಖೆಗಳಲ್ಲಿ ಅನೌಪಚಾರಿಕ ವ್ಯವಸ್ಥೆಯಿಂದ ಪದವಿ ಪಡೆಯುವುದನ್ನು ಕಾನೂನು ಕೂಡ ನಿಷೇಧಿಸುತ್ತದೆ.

* * *

ಆದರೆ ಲಿಬರಲ್ ಜ್ಞಾನ ಶಾಖೆಗಳ ಕಾಲೇಜು ವ್ಯಾಸಂಗ ಹಾಗಲ್ಲ. ಮುಖ್ಯವಾಗಿ, ಲಿಬರಲ್ ಶಿಕ್ಷಣವು ವಿದ್ಯಾರ್ಥಿಯ ಅರಿವಿನ ಪರಿಧಿಯನ್ನು ವಿಸ್ತರಿಸುತ್ತದೆ. ಮತ್ತು ಜೊತೆಗೇ ಆತ ಬದುಕಿನ ಗುಣಮಟ್ಟವನ್ನು ಸ್ವಪ್ರಯತ್ನದಿಂದ ವಿಸ್ತರಿಸಿಕೊಳ್ಳಲು ಸಾಧನವಾಗುವ ಮೂಲಕ ತನ್ನ ಅರ್ಹತೆಯನ್ನು ಹೆಚ್ಚಿಸಿಕೊಳ್ಳುವ ಸಾಮರ್ಥ್ಯವನ್ನು ಒದಗಿಸುತ್ತದೆ. ಹಾಗಾಗಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಲಿಬರಲ್ ಶಿಕ್ಷಣವು ಬೋಧನೆ /ತರಬೇತಿ (teaching/training) ಕ್ರಮದಿಂದ,

ತಿಳಿಯುವ/ಅರಿಯುವ (learning) ಕ್ರಮಕ್ಕೆ ರೂಪಾಂತರಗೊಳ್ಳುತ್ತದೆ. ಏಕೆಂದರೆ ಒಬ್ಬ ವಿದ್ಯಾರ್ಥಿ ಕಾಲೇಜು ಮಟ್ಟಕ್ಕೆ ಬರುವಾಗ ಹರೆಯದ ಪ್ರಬುದ್ಧನಾಗಿರುತ್ತಾನೆ. ಆತ ಶಾಲೆಯ ಬೋಧನೆಯಲ್ಲಿ ಹತ್ತು ಹಲವು ರೀತಿಯ ಬದುಕಿನ ಕೌಶಲ್ಯಪರ ಶಿಕ್ಷಣವನ್ನು ಈಗಾಗಲೇ ಸಾಕಷ್ಟು ಪಡೆದುಕೊಂಡಿರುತ್ತಾನೆ. ಆತನ ಕಲಿಯುವ ಸಾಮರ್ಥ್ಯ ಸಾಕಷ್ಟು ವೃದ್ಧಿಯಾಗಿರುತ್ತದೆ. ಹಾಗಾಗಿ ಬರೀ ಬೋಧನೆಯ ಕ್ರಮವನ್ನು ಕಾಲೇಜಿನಲ್ಲೂ ಮುಂದುವರಿಸುವುದು ಅಷ್ಟೇನೂ ಸಮರ್ಪಕವಾಗಲಾರದು. ಬದಲಿಗೆ, ಶಿಕ್ಷಕ, ಜ್ಞಾನ ಸಂಪಾದನೆಗೆ ಸರಿಯಾದ ಮಾರ್ಗದರ್ಶನ ನೀಡುವ, ಅನುಕೂಲ ಮಾಡಿಕೊಡುವ ಸಹಾಯಕರ, ಉತ್ತೇಜಕರ ಪಾತ್ರ ನಿರ್ವಹಿಸಬೇಕು. ಕೊಠಡಿಗಳಲ್ಲಿ ಬೋಧನೆಯ ಶಿಕ್ಷಣ ಪದ್ಧತಿಯ ಪ್ರಾಶಸ್ತ್ಯವನ್ನು ಕೊಂಚ ಕಡಿಮೆ ಮಾಡಿ ಗ್ರಂಥಾಲಯ, ಪ್ರಯೋಗಶಾಲೆ, ಚರ್ಚಾಕೂಟ, ಸೆಮಿನಾರ್, ಸಂವಾದ, ಸಾಮುದಾಯಿಕ ಚಟುವಟಿಕೆ, ಶೈಕ್ಷಣಿಕ ಪ್ರವಾಸ, ಕ್ರೀಡೆ, ರಂಗಭೂಮಿ, ಚಿತ್ರಕಲೆ, ಮುಂತಾದ ಪಠ್ಯೇತರ ಕಲಾ ಚಟುವಟಿಕೆ, ಸಮಾಜ - ವಿದ್ಯಾರ್ಥಿ ನಡುವೆ ಪರಸ್ಪರ ಅಂತರ್‌ಕ್ರಿಯೆ, ಸಾಮಾಜಿಕ ಕಾರ್ಯ ಮುಂತಾದವುಗಳಿಗೆ ಹೆಚ್ಚು ಮಹತ್ತ್ವ ನೀಡಬೇಕು. ಪ್ರಬುದ್ಧರು ಪ್ರಬುದ್ಧರಿಗೆ ತಕ್ಕಂತೆ ವಿದ್ಯಾ ಸಂಬಂಧೀ ಸೃಜನಾತ್ಮಕ ಚಟುವಟಿಕೆಗಳಲ್ಲಿ ನಿರತರಾಗಬೇಕೇ ಹೊರತು ಕೇವಲ ಎಳೆಯ ಮಕ್ಕಳ ಚಟುವಟಿಕೆಯಲ್ಲಲ್ಲ. ಕಾಲೇಜು ಶಿಕ್ಷಣ ಇದಕ್ಕೆ ಸಹಾಯ ಮಾಡಬೇಕು. ಇಲ್ಲದಿದ್ದರೆ, ಕಾಲೇಜ್ ಎಂಬುದು ಕಿರುಕುಳದ, ದಾಂಧಲೆಯ, ತಂಟೆಯ, ಫಜೀತಿಯ ಕೇಂದ್ರವಷ್ಟೇ ಆಗುತ್ತವೆ.

ಕಾಲೇಜುಗಳು ಈ ರೀತಿಯ ಸೃಜನಾತ್ಮಕ ಕೇಂದ್ರಗಳಾಗದೆ ಕೇವಲ ವಿದ್ಯಾರ್ಥಿಗಳ ಮೇಲೆ ಉಪನ್ಯಾಸ, ಉಪನ್ಯಾಸಗಳಿಗೆ ಹಾಜರಾಗುವುದನ್ನು ಬಲವಂತವಾಗಿ ಹೇರುವುದಕ್ಕಷ್ಟೇ ಸೀಮಿತವಾದರೆ, ಈ ವಿದ್ಯಾಮಂದಿರಗಳು, ಕೇವಲ ಬೋಧನೆಯ ಅಂಗಡಿ (teach shops) ಗಳಾಗುತ್ತವೆ. ಇದು ನಿಜಕ್ಕೂ ಅಸಮರ್ಪಕ, ಅಪ್ರಯೋಜಕ ಶ್ರಮವಾಗುತ್ತದೆ. ಇಂಥ ಶೈಕ್ಷಣಿಕ ಚಟುವಟಿಕೆ, ಈ ಬಡರಾಷ್ಟ್ರದ ಅಮೂಲ್ಯವಾದ ಸಂಪತ್ತಿನ ಅಪವ್ಯಯವಷ್ಟೆ. ಏಕೆಂದರೆ ಟ್ಯುಟೋರಿಯಲ್ ಕಾಲೇಜುಗಳು ತಮ್ಮ ಪ್ಯಾಕೇಜ್ ಕೋರ್ಸುಗಳ ಮೂಲಕ ಈ ಕೆಲಸವನ್ನು ಕಾಲೇಜುಗಳಿಗಿಂತ ಸಮರ್ಪಕವಾಗಿ ನಿರ್ವಹಿಸಲಬಲ್ಲವು. ೪೦ ಗಂಟೆ ಚರಿತ್ರೆ ಪಾಠದ ಪ್ಯಾಕೇಜು ೨೦ ಸಾವಿರ ರೂಪಾಯಿ; 'ನೆಟ್‌ಸರ್ಫಿಂಗ್' ೨೦ ಗಂಟೆ -ಮೂರು ಸಾವಿರ ; ಭೌತಶಾಸ್ತ್ರ ೪೦ ಗಂಟೆ - ೧೮ ಸಾವಿರ ರೂಪಾಯಿ ಹೀಗೆ ಆಕರ್ಷಕ ಪ್ಯಾಕೇಜುಗಳಲ್ಲಿ ಯಶಸ್ವಿಯಾಗಿ ಟ್ಯುಟೋರಿಯಲ್‌ಗಳು ಬೋಧನ ಪಠ್ಯ ಶಿಕ್ಷಣವನ್ನು ನೀಡಬಲ್ಲವು. ಹಾಗಾಗಿ, ಇಂಥ ಸನ್ನಿವೇಶಗಳಲ್ಲಿ ಸರಕಾರ, ಕಾಲೇಜುಗಳಿಗೆ ಪ್ರೋತ್ಸಾಹ ಕೊಡುವುದನ್ನು ಕಡಿಮೆ ಮಾಡುವ ತೀರ್ಮಾನ ಕೈಕೊಂಡರೆ ಅದು ಅಷ್ಟೇನೂ ಅಸಮಂಜಸವಾಗಲಾರದು. ತೆರಿಗೆ ಹಣವನ್ನು ಈ ರೀತಿ ಅಪ್ರಯೋಜಕ ಚಟುವಟಿಕೆಗಳಿಗೆ ವ್ಯಯಿಸುವುದು ಸರಿಯಲ್ಲ.

* * *

ನಿಜಕ್ಕೂ ಕಾಲೇಜುಗಳು ಸೃಜನಶೀಲ ವ್ಯಕ್ತಿತ್ವ ನಿರ್ಮಾಣದ ತಾಣಗಳಾಗಿ, ಅಲ್ಲಿ ವಿದ್ಯಾರ್ಥಿಗಳು ದೇಶದ ಸಮಷ್ಟಿಹಿತ ಬಯಸುವ ಸವಧರ್ಮ ಪ್ರಜ್ಞಾವಂತ ನಾಗರಿಕರಾಗಿ ವಿದ್ಯಾರ್ಥಿಗಳು

ಅರಳಿಕೊಳ್ಳುವ ಕೇಂದ್ರಗಳಾಗಬೇಕಾದರೆ, ಅವು ನಿಜಕ್ಕೂ ತಮ್ಮ ಪಾತ್ರವನ್ನು ತಾವು ಮರು ವ್ಯಾಖ್ಯಾನಿಸಿಕೊಳ್ಳಬೇಕು; ಮಾತ್ರವಲ್ಲದೆ ಸಮಾಜ ಮತ್ತು ಕಾಲೇಜುಗಳ ನಡುವಿನ ಅಂತರ್ ಸಂಬಂಧ, ಅಂತರ್ ಪ್ರಕ್ರಿಯೆಗಳು ಅರ್ಥಪೂರ್ಣವಾಗಬೇಕು. ಪ್ರಬುದ್ಧ ವಿದ್ಯಾರ್ಥಿಗಳನ್ನು ಸಮಾಜ ಮುಖಿಯಾಗಿ ಹೊರಳಿಸಿ ಸಕ್ರಿಯಾತ್ಮಕವಾಗಿ ತೊಡಗಿಸುವ ಪ್ರಯತ್ನ ಇಲ್ಲಿ ನಡೆಯಬೇಕು.

ಇಂಥ ವಾತಾವರಣ ನಿರ್ಮಾಣಕ್ಕೆ ಮೂಲಭೂತವಾಗಿ ಕಾಲೇಜು ಶಿಕ್ಷಕನ ಪಾತ್ರ ಮರುವಿಮರ್ಶೆ, ಮರುವ್ಯಾಖ್ಯೆಗೊಳಪಡಬೇಕು. ಶಿಕ್ಷಕ ಸಮರ್ಥ ನೇತಾರನ ಗುಣಧರ್ಮವಿರುವ ವಿದ್ವಾಂಸನಾಗಿದ್ದು ಸೃಜನಶೀಲನಾದ ಸ್ಪಂದನಶೀಲನಾದ, ಮನುಷ್ಯನಾಗಿರಬೇಕಾಗುತ್ತದೆ. ತಾರುಣ್ಯದ ಹೊಸ್ತಿಲಲ್ಲಿರುವ ವಿದ್ಯಾರ್ಥಿಗಳ ಮನಸ್ಸಿನ ವಿಕಾಸದ ಬಗ್ಗೆ ತೀವ್ರ ಕಾಳಜಿಯುಳ್ಳವನಾಗಿರಬೇಕಾಗುತ್ತದೆ. ಇದರ ಜೊತೆಗೇ ಆತನಿಗೆ ಸಾಮುದಾಯಿಕ ದೃಷ್ಟಿಯಿದ್ದು ತುಸು ಸಾಮಾಜಿಕ ಜವಾಬ್ದಾರಿಯನ್ನು ಹೊರುವ ಆಸಕ್ತಿಯುಳ್ಳವವನಾಗಿರಬೇಕಾಗುತ್ತದೆ.

ಕಾಲೇಜು ಶಿಕ್ಷಕನಿಗೆ ವಿದ್ಯಾರ್ಥಿಗಳ ಮೇಲೆ ನಿಯಂತ್ರಣಾಧಿಕಾರ, ಕೇವಲ ತನ್ನ ಗುರುಪಟ್ಟದಿಂದಲೇ ಹಾಗಾಗೇ ದತ್ತವಾಗಿ ಬರುವುದಿಲ್ಲ. ವಿದ್ಯಾರ್ಥಿ - ಶಿಕ್ಷಕನ ನಡುವಿನ ಸಂಬಂಧ ಇಲ್ಲಿ ಇಬ್ಬರು ಪ್ರಬುದ್ಧರ ನಡುವಿನ ಸಂಬಂಧವಾದ್ದರಿಂದ ಶಿಕ್ಷಕನ ಮೇಲೆ ವಿದ್ಯಾರ್ಥಿಗೆ ಗೌರವ ಮೂಡುವಂತೆ ಶಿಕ್ಷಕ ತನ್ನ ಪಾತ್ರವನ್ನು ನಿರ್ವಹಿಸಬೇಕಾಗುತದೆ. ಈ ಗೌರವ ಭಾವನೆಯೂ ನಿಯೋಜಿತವಾಗಿರುವುದಿಲ್ಲ. ಸುಲಭದಲ್ಲಿ ಬಂದಿರುವುದಿಲ್ಲ. ತನ್ನ ವಿದ್ಯಾ ಯೋಗ್ಯತೆ, ವಿದ್ವತ್ತು, ವೃತ್ತಿ ನಿಪುಣತೆ, ವ್ಯಕ್ತಿತ್ವದ ಘನತೆ, ಪ್ರಬುದ್ಧ ನಡವಳಿಕೆಗಳಿಂದ ಗೌರವವನ್ನು ಗಳಿಸಬೇಕಾಗುತ್ತದೆ. ಯೌವನಕ್ಕೆ ಕಾಲಿಡುತ್ತಿರುವ ತರುಣ-ತರುಣಿಯರ ಆಂತರಿಕ ತುಮುಲ -ತಲ್ಲಣಗಳಲ್ಲಿ ಅವರೊಡನೆ ಸೌಹಾರ್ದಯುತ ಸಂವಾದದಲ್ಲಿ ತೊಡಗುವ ಮೂಲಕ ಅವರಿಗೆ ನೆರವಾಗುವ ಕಾಳಜಿಯಿಂದ, ಗೌರವ ಭಾವನೆ ಮೂಡುವಂತಾಗಬೇಕಾಗುತ್ತದೆ. ಅಂತರ್ ಜ್ಞಾನೀಯ ಶಿಸ್ತುಗಳಿಗೆ ಶಿಕ್ಷಕರು ಕಿಟಿಕಿಯಾಗಿ ವಿದ್ಯಾರ್ಥಿಗಳ ಆದರ್ಶಗಳನ್ನು ವಿಸ್ತರಿಸಿಕೊಳ್ಳಲು ಸಹಾಯಕನಾಗುವ, ತನ್ನ ಸ್ವಂತ ಯೋಗ್ಯತೆಯಿಂದ ಜ್ಞಾನಾರ್ಜನೆಗೆ ತೊಡಗುವ ಆತ್ಮ ವಿಶ್ವಾಸವನ್ನು ಅವರಲ್ಲಿ ತುಂಬುವ ಮೂಲಕ ತನ್ನ ವಿದ್ಯಾರ್ಥಿಗಳಿಂದ ಗೌರವ ಪಡೆಯಬೇಕಾಗುತ್ತದೆ. ಹರೆಯದ ಮಕ್ಕಳಲ್ಲಿ ಸಹಜವಾಗಿರುವ ಉತ್ಸಾಹ, ಕುತೂಹಲ, ಸಂಘಟನಾ ಚತುರತೆಗಳಿಗೆ ಸೂಕ್ತದಾರಿ ತೋರಿಸುವಲ್ಲಿ ಶಿಕ್ಷಕ ಸಫಲನಾಗಬೇಕಾಗುತ್ತದೆ. ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ಹುಟ್ಟಿಸಿ ಅವರನ್ನು ಸಾಮಾಜಿಕವಾಗಿ ಸ್ಪಂದಿಸುವ ಸದಭಿರುಚಿಯ ವ್ಯಕ್ತಿಯನ್ನಾಗಿ ಪರಿವರ್ತಿಸುವ ಯೋಗ್ಯತೆ ಶಿಕ್ಷಕನಿಗಿರಬೇಕಾಗುತ್ತದೆ. ವಿದ್ಯಾರ್ಥಿಗಳ ಸಹಾಯಕ್ಕಾಗಿ, ಹಿತಕ್ಕಾಗಿ ಕ್ಲಾಸುಗಳ ಹೊರಗೂ ಶಿಕ್ಷಕ ತನ್ನ ಸಮಯವನ್ನು ಮೀಸಲಿಡಲು ತಯಾರಿರಬೇಕಾಗುತ್ತದೆ. ಮಕ್ಕಳು ತಮ್ಮ ಸಮಸ್ಯೆಗಳನ್ನು ಚರ್ಚಿಸಲು, ಸಮಾಲೋಚಿಸಲು, ಸುಲಭವಾಗಿ ಶಿಕ್ಷಕ ಒದಗಬೇಕಾಗುತ್ತದೆ. ಇಂಥ ಶಿಕ್ಷಕನಿಗೆ ಎಲ್ಲೆಲ್ಲೂ ಗೌರವವಿದೆ.

* * *

ಆದರೆ ಈ ಆದರ್ಶಗಳು ನಿಜವಾಗಬೇಕಾದರೆ. ಹೆತ್ತವರ ಪಾತ್ರವೇನು ? ಸಮಾಜದ ಸಾಮಾಜಿಕ ಸ್ಪಂದನವೇನು ? ಮತ್ತು ಸರಕಾರದ ಜವಾಬ್ದಾರಿಗಳೇನು ? ಎಂಬುದನ್ನು ನಿರ್ವಚಿಸಬೇಕಾಗುತ್ತದೆ. ಸರಕಾರ ಶಿಕ್ಷಕರನ್ನು ಬಾಡಿಗೆಗೆ ಪಡಕೊಂಡ ಒತ್ತೆಯಾಳುಗಳಂತೆ ನಡೆಸಿಕೊಳ್ಳುತ್ತಿರುವಾಗ, ಮಾರುಕಟ್ಟೆ ಪ್ರಭಾವಿತ ಸಮಾಜಕ್ಕೆ ಯುವ ಪೀಳಿಗೆಯನ್ನು ಸೃಜನಾತ್ಮಕವಾಗಿ ಬಳಸಿಕೊಳ್ಳಬೇಕೆಂಬ ಸಾಮಾಜಿಕ ದರ್ಶನವಿಲ್ಲದಿರುವಾಗ, ಹೆತ್ತವರಿಗೆ ಇಂದಿನ ಅಭದ್ರ ಸ್ಥಿತಿಯಲ್ಲಿ ಮಕ್ಕಳ ಆರ್ಥಿಕ ಭದ್ರತೆಯ ಕಾಳಜಿಯೊಂದೇ ಅತಿ ಮುಖ್ಯವಾಗಿ ಆತ ಜ್ಞಾನಿಯೂ, ಸಜ್ಜನನೂ ಆಗಬೇಕೆಂಬ ಆಶಯವೇ ಇಲ್ಲದಿರುವಾಗ, ಶಿಕ್ಷಣದ ಎಲ್ಲ ಆದರ್ಶ ಕನಸುಗಳೂ ಭಗ್ನಗೊಳ್ಳುತ್ತವೆ. ಹಾಗಾಗಿ ವಿದ್ಯಾಕ್ಷೇತ್ರದ ಇಂದಿನ ದುಃಸ್ಥಿತಿಗೆ ಶಿಕ್ಷಕರನ್ನು ಸಂಪೂರ್ಣ ಜವಾಬ್ದಾರಿ ಮಾಡುವುದು ಸರಿಯಲ್ಲ. ಆತನೂ ಈ ಸಮಾಜ ಪ್ರತಿಬಿಂಬಿಸುವ ಮೌಲ್ಯಗಳ ಮೊತ್ತವೇ ಅಲ್ಲವೇ ?

ಆದರೂ ಈ ಪರಿಸ್ಥಿತಿ ನಿರ್ಮಾಣದ ಘನ ಹೊರೆಯನ್ನು ಶಿಕ್ಷಕರೇ ಹೊರಬೇಕಾಗುತ್ತದೆ. ಇಂದೂ ಕೂಡ ಸಮಾಜದಲ್ಲಿ ಶಿಕ್ಷಕರಿಗೆ ಅನ್ಯಕ್ಷೇತ್ರಗಳಿಗಿಂತ ಹೆಚ್ಚಿನ ಗೌರವದ ಸ್ಥಾನ ಇದೆ. ಅನ್ಯ ಕ್ಷೇತ್ರದಲ್ಲಿ ದುಡಿಯುವ ಮಂದಿ ಶಿಕ್ಷಕರ ಆದರ್ಶವನ್ನು ಗೌರವಿಸುತ್ತಾರೆ. ಆದರೆ ಅನೇಕ ಶಿಕ್ಷಕರೇ ಇಂದು ದುರದೃಷ್ಟವಶಾತ್ ವಿದ್ಯಾ ಪಕ್ಷಪಾತವನ್ನು ಸಂಪೂರ್ಣ ಕಡೆಗಣಿಸಿ, ಸಂಕುಚಿತ ಮನೋಭಾವವುಳ್ಳವರಾಗಿದ್ದಾರೆ, ಜ್ಞಾನಾರ್ಜನೆಯ ಬಗ್ಗೆ ನಿರಾಸಕ್ತರಾಗಿ ತಮ್ಮ ಉನ್ನತ ಆದರ್ಶಗಳನ್ನು ಕಳಕೊಂಡಿದ್ದಾರೆ, ಸಿನಿಕರಾಗಿದ್ದಾರೆ. ಹಾಗಾಗಿ ನೈತಿಕ ಸ್ಥೈರ್ಯವನ್ನೆ ಕಳಕೊಂಡಿದ್ದಾರೆ. ಸಾಮಾಜಿಕ ಹಿತದ ಬಗ್ಗೆ ಸ್ಪಸಂವೇದನಾರಹಿತವಾಗುತ್ತಿದ್ದಾರೆ. ಸಾಮಾಜಿಕ ಬದ್ಧತೆಯ ಕೊರತೆ ಶಿಕ್ಷಕ ಸಮುದಾಯದಲ್ಲಿ ಎದ್ದು ಕಾಣುತ್ತಿದೆ. ಕೃಷಿಕರ ಆತ್ಮಹತ್ಯೆ, ದಲಿತರ, ವರ್ಗ ಕನಿಷ್ಠ ಶ್ರಮಿಕರ, ಕರಕುಶಲಗಾರರ, ಕಾರ್ಮಿಕರ, ಗ್ರಾಮೀಣ ಮಹಿಳೆಯರ ವರ್ಗಗಳ ಸಾಮಾಜಿಕ ಕೆಳ ಪಯಣದ ಬಗ್ಗೆ ಶಿಕ್ಷಕ ಸಮುದಾಯದ ಪ್ರತಿ ಸ್ಪಂದನ ಇಂದು ತೀರಾ ಕಡಿಮೆಯಾಗಿದೆ ನಿಜಕ್ಕೂ ಒಂದು ಕಾಲದಲ್ಲಿ ಇಂಥ ಸಾಮಾಜಿಕ ವಿಷಮತೆಗಳ ಬಗ್ಗೆ ಸಮಾಜದಲ್ಲಿ ಎಚ್ಚರ ಮೂಡಿಸುವ ನೇತಾರರ ಕೆಲಸವನ್ನು ಶಿಕ್ಷಕ ಸಮುದಾಯ ನಿರ್ವಹಿಸುತ್ತಿತ್ತು.

ಈ ಎಲ್ಲ ವಿದ್ಯಮಾನಗಳನ್ನೂ ನಾವು ಸಂವೇದನಾಶೀಲ ಪ್ರಜೆಗಳಾಗಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಶಿಕ್ಷಣ ಕ್ಷೇತ್ರಕ್ಕೆ ಎರಗಿದ ಬಿಕ್ಕಟ್ಟನ್ನು ಹೆತ್ತವರು, ಶಿಕ್ಷಕರು, ಸಮಾಜ, ಸರಕಾರ ಕೂಡಿ ಮುಕ್ತ ಮನಸ್ಸಿನಿಂದ, ವಸ್ತುನಿಷ್ಠವಾಗಿ, ಸಾವಧಾನದಿಂದ ಗಮನಿಸಬೇಕು, ವಿಶ್ಲೇಷಿಸಬೇಕು. ಬಿಕ್ಕಟ್ಟನ್ನು ಇದ್ದದ್ದು ಇದ್ದಂತೆಯೇ ಸಹಜವಾಗಿ ಗ್ರಹಿಸುವುದರಲ್ಲಿಯೇ ಅದಕ್ಕೆ ಪರಿಹಾರವೂ ಇದೆ.

❒

# ಭಗ್ನಗೊಳ್ಳುತ್ತಿರುವ ಗ್ರಾಮೀಣ ಭಾರತದ ಕನಸುಗಳು

# ಕುದುರೆಮುಖ ಗಣಿಗಾರಿಕೆ: ಕಾಲ್ಪನಿಕ ಕಥನ ಮತ್ತು ನಿಜಸ್ಥಿತಿ

ಗಾಂಧೀಜಿಯವರು ೧೯೨೦ರ ದಶಕದಲ್ಲೇ ನುಡಿದ ಈ ಮೂರು ಮಾತುಗಳು ಇಲ್ಲಿ ಉಲ್ಲೇಖನೀಯ.

"ಪಾಶ್ಚಾತ್ಯ ರಾಷ್ಟ್ರಗಳ ರೀತಿಯಲ್ಲಿ ಭಾರತವು ಒಟ್ಟಾರೆ ಬೃಹತ್ ಉದ್ಯಮೀಕರಣದ ಮೋಹಕ್ಕೆ ಒಳಗಾಗದಂತೆ ಭಾರತವನ್ನು ದೇವರು ಸಂರಕ್ಷಿಸಲಿ. ಒಂದು ಸಣ್ಣ ದೇಶವಾದ ಇಂಗ್ಲೆಂಡಿನ ಆರ್ಥಿಕ ಸಾಮ್ರಾಜ್ಯಶಾಹಿ ಪ್ರವೃತ್ತಿ, ಇಂದು (೧೯೨೦ರ ದಶಕ) ಇಡೀ ಜಗತ್ತನ್ನೇ ಒತ್ತೆಯಿಟ್ಟುಕೊಂಡಿದೆ. ೩೦೦ ಮಿಲಿಯ ಜನರಿರುವ ಭಾರತವು ಇದೇ ರೀತಿಯ ಸಾಮ್ರಾಜ್ಯಶಾಹಿ ಆರ್ಥಿಕ ಶೋಷಣೆ ಆರಂಭಿಸಿದರೆ, ಇದು ಜಗತ್ತನ್ನು ಸಂಪೂರ್ಣ ಸುಲಿದು ನಗ್ನಗೊಳಿಸೀತು."

"ಬಯಕೆಗಳನ್ನು ಅವಶ್ಯಕತೆಗೆ ತಕ್ಕಷ್ಟೇ ಮಿತಿಗೊಳಿಸುವುದು ಕೈಗಾರಿಕಾ ಪೂರ್ವಸಮಾಜದ ಮೌಲ್ಯವಾಗಿತ್ತು. ಆದರೆ ಇದಕ್ಕೆ ವಿರುದ್ಧವಾಗಿ ಬಯಕೆಗಳನ್ನು ಒಟ್ಟಾರೆಯಾಗಿ ಪ್ರಚೋದಿಸಿ ಬೆಳೆಸುವುದೇ ಆಧುನಿಕ ನಾಗರಿಕತೆಯ ಪ್ರಮುಖ ಲಕ್ಷಣವಾಗಿದೆ".

"ಮನುಷ್ಯ ತನ್ನ ಆಕ್ರಮಣಕಾರೀ ದುರಾಸೆಗಳನ್ನು ಸಿದ್ಧಿಸಿಕೊಳ್ಳಲು,

---

"ಹಾರದೋ ಮುಖ... ಹಾರದೋ ದೇಹ : ಕುದುರೆಮುಖ" ಗುರುನಾರಾಯಣಕೆರೆ, ನಾಗರಿಕ ಸೇವಾಟ್ರಸ್ಟ್, ೨೦೦೨); ಮತ್ತು ಉದಯವಾಣಿ, (ದೈನಿಕ) ಮಣಿಪಾಲ, ಸೆಪ್ಟೆಂಬರ್ ೧೭, ೨೦೦೧ ರಲ್ಲಿ ಪ್ರಕಟ.

ತನ್ನ ಪಾಶವೀ ಹಸಿವನ್ನು ತಣಿಸಿಕೊಳ್ಳಲು, ಕಾಲದೇಶಗಳನ್ನೇ ನಾಶಗೊಳಿಸಿ ಈ ಭೂಮಿಯ ಅಂಚಿನವರೆಗೂ ಅಪಾಯಕಾರಿಯಾಗಿ ಮುನ್ನುಗ್ಗುವುದನ್ನು ನಾವಿಂದು ಕಾಣುತ್ತಿದ್ದೇವೆ. ನಾನು ಅರ್ಥೈಸಿಕೊಂಡಂತೆ ಇದೇ ಇಂದಿನ ನಾಗರಿಕತೆಯ ಉದ್ದೇಶವಾಗಿದ್ದರೆ, ನಾನು ಈ ನಾಗರಿಕತೆಯನ್ನು ಪೈಶಾಚಿಕ ನಾಗರಿಕತೆ ಎಂದು ಕರೆಯುತ್ತೇನೆ" ಎಂದು ಹತಾಶೆಯಿಂದ ಗಾಂಧೀಜಿ ನುಡಿದಿದ್ದರು. ಅಂದು, ಇಂದಿನ ಆಕ್ರಮಣಕಾರೀ ಅಭಿವೃದ್ಧಿ ಪ್ರವೃತ್ತಿ, ಪರಿಸರನಾಶ ಕಲ್ಪನೆಗಳು ಸಾಮೂಹಿಕವಾಗಿ ನೆಲೆಗೊಂಡಿರಲಿಲ್ಲ. ಆದರೂ ಸಂವೇದನಾಶೀಲ ಗಾಂಧೀಜಿಗೆ ತಂತ್ರಜ್ಞಾನಪ್ರೇರಿತ ಮನುಷ್ಯನ ಮನೋಭಾವದಲ್ಲೇ ಬಲವಾಗಿ ನೆಲೆಗೊಂಡ ಕೊಳ್ಳುಬಾಕ ಸಂಸ್ಕೃತಿಯ (Consumerism) ವಿನಾಶಕಾರೀ ಮುಖದ ದರ್ಶನ ಆಗಿತ್ತು. ಕಲ್ಪಿತಪ್ರಗತಿಯ ನೆಪದಲ್ಲಿ ನಾವು ನಮ್ಮ ಸುತ್ತಲೂ ಇಂದು ಸೃಷ್ಟಿಸುತ್ತಿರುವ ನರಕಕ್ಕೆ ಆದರದೇ ಆದ ಮೋಡಿ ಮಾಡುವ ಅಭಿವೃದ್ಧಿ ತರ್ಕಗಳಿವೆ, ಸಿದ್ಧಾಂತಗಳಿವೆ. ಇಂದು ಕುದುರೆಮುಖ ಗಣಿಗಾರಿಕೆಯ ಪರ-ವಿರೋಧ ಮಂಡನೆಯಾಗುತ್ತಿರುವ ವಾದ-ಪ್ರತಿವಾದಗಳು ಈ ಮೋಡಿ ಮಾಡುವ ಪ್ರಗತಿ ವ್ಯಾಖ್ಯೆ ಸೃಷ್ಟಿಸುತ್ತಿರುವ ಗೊಂದಲವನ್ನು ಸಂಕೇತಿಸುತ್ತವೆ. ಈ ತರ್ಕಗಳು ಎರಡು ಬಣಗಳನ್ನೇ ಸೃಷ್ಟಿಸಿವೆ.

ಬೃಹತ್ ಉದ್ದಿಮೆದಾರರು, ರಾಜಕಾರಣಿಗಳು ಒಂದೆಡೆ - ರೈತ ವರ್ಗ, ಸಣ್ಣ ಕೈಗಾರಿಕೆ ಮತ್ತು ಗ್ರಾಮೀಣ ಕಸುಬು ಉಪಕಸುಬುಗಳ ವರ್ಗ, ಚಿಂತಕರು, ಸಾಹಿತಿಗಳು, ಪರಿಸರ ಕಾರ್ಯಕರ್ತರು, ಬುಡಕಟ್ಟು ಜನಾಂಗದವರು,ಮಾನವ ಹಕ್ಕು ಪ್ರತಿಪಾದಿಗಳು ಇನ್ನೊಂದೆಡೆ; ಕೈಗಾರಿಕಾ ಸಮಾಜ ಒಂದೆಡೆ- ವಿಶಾಲ ಗ್ರಾಮೀಣ ಭಾರತ ಇನ್ನೊಂದೆಡೆ; ಅಲ್ಪ ಸಂಖ್ಯಾತ ಸಂಘಟಿತ ಕಾರ್ಮಿಕ ಸಂಘಟನೆಗಳು ಒಂದೆಡೆ - ಬಹುಸಂಖ್ಯಾತ ಅಸಂಘಟಿತ ಮೂಕ ಕಾರ್ಮಿಕರು ಇನ್ನೊಂದೆಡೆ: ಎರಡು ವರ್ಗಗಳ ನಡುವೆ ಸ್ಪಷ್ಟವಾದ ಹಾಗೂ ಆಳವಾದ ಬಿರುಕು ಕಾಣುತ್ತಿದೆ. ಆದರೂ ಈ ವಾದ ಪ್ರತಿವಾದಗಳ ಅಮೃತ ಮಂಥನವು, ಪ್ರಜೆಗಳನ್ನು ಸಾಕಷ್ಟು ಜಾಗೃತಗೊಳಿಸುತ್ತಿದೆ ಎಂಬುದು ಸಂತಸದ ವಿಷಯ. ಈ ಗಣಿಗಾರಿಕೆಯ ವಾದಪ್ರತಿವಾದಗಳ ನಡುವಿನ ಸತ್ಯ-ಮಿಥ್ಯೆಗಳೇನು ಎಂಬುದನ್ನು ಧ್ಯಾನ ಮೌನದ ಸಮಾಧಾನ ಮನಃಸ್ಥಿತಿಯಲ್ಲಿ ಅಂತರಂಗಿಕವಾಗಿ ಸಾಕ್ಷಾತ್ಕರಿಸಿ ಕೊಳ್ಳಬೇಕಾಗಿದೆ.

**೧. ಕಾನೂನು ಉಲ್ಲಂಘನೆ :**

- ಅತ್ಯಮೂಲ್ಯ ಜೈವಿಕ ವೈವಿಧ್ಯವನ್ನು ಹೊಂದಿರುವ 'ಅತ್ಯಂತ ಸೂಕ್ಷ್ಮ ಪರಿಸರ' ಪ್ರದೇಶಗಳೆಂದು ವಿಜ್ಞಾನಿಗಳು ಘೋಷಿಸಿದ ಪ್ರಪಂಚದ ಹದಿನೆಂಟು ವಲಯಗಳಲ್ಲಿ ಪಶ್ಚಿಮಘಟ್ಟ ಪ್ರದೇಶವೂ ಒಂದು. ಪಶ್ಚಿಮ ಘಟ್ಟವು 'ರಿಸರ್ವಾಯರ್'ನಂತೆ ಮಳೆ ನೀರನ್ನು ತನ್ನ ಗರ್ಭದಲ್ಲಿ ಹಿಡಿದಿಟ್ಟುಕೊಂಡು ನರ್ಮದಾದಿಂದ ಕಾವೇರೀ ವರೆಗಿನ ಹತ್ತಾರು ನದಿಗಳಲ್ಲಿ ವರ್ಷದ ಹನ್ನೆರಡು ತಿಂಗಳೂ ಹರಿಸಿ ಮಿಲಿಯಾಂತರ ವರ್ಷಗಳಿಂದ ದಕ್ಷಿಣ ಭಾರತದ ನಾಲ್ಕೂ ರಾಜ್ಯಗಳಲ್ಲಿ ಜೀವಜಾಲದ ವಿಕಾಸಕ್ಕೆ ಕಾರಣವಾಗಿದೆ. ನಮ್ಮ ಆಧುನಿಕ ತರ್ಕಗಳಿಂದ, ನಮ್ಮ ಲಾಭ-ನಷ್ಟಗಳ ಸವಕಲು ಲೆಕ್ಕಾಚಾರಗಳಿಂದ ಬದುಕಿನ ಜೀವನಾಡಿಯಾದ ಪಶ್ಚಿಮ ಘಟ್ಟದ ಸಂಪತ್ತನ್ನು ಅಳೆಯಲು ಪ್ರಯತ್ನಿಸುವುದು, ಆಕಾಶಕ್ಕೆ ಏಣಿ ಇಡಲು ಪ್ರಯತ್ನಿಸುವಷ್ಟೇ

ಮೂರ್ಖತನದ ಕೆಲಸವಾದೀತು. ಈ ನಿಸರ್ಗ ಸಂಪತ್ತಿನ ಬೆಲೆ, ಕುದುರೆಮುಖ ಅದಿರು ಕಂಪೆನಿಯಂತಹ ಸಾವಿರಾರು ಕಂಪೆನಿಗಳಿಗಿಂತ ಹೆಚ್ಚು; ಮಾತ್ರವಲ್ಲ - ಅಮೂಲ್ಯವಾದುದು. ಈ ಕಾರಣಕ್ಕೆ ಬೆಂಗಳೂರಿನ ಪ್ರಸಿದ್ಧವಾದ ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ಎಸ್.ಟಿ.ಎ.ಕೆ. ಸಮಿತಿಗಳು ಇಲ್ಲಿ ಗಣಿಗಾರಿಕೆ ಮಾಡುವುದರ ವಿರುದ್ಧ ವರದಿ ನೀಡಿವೆ. ಹಾಗಾಗಿ, ಇದನ್ನು ಅತ್ಯಂತ ಮುತುವರ್ಜಿಯಿಂದ ರಕ್ಷಿಸುವ ವಿಶೇಷ ಜವಾಬ್ದಾರಿ ಸರಕಾರದ ಮೇಲಿದೆ. ಆದರೆ ಕುದುರೆಮುಖ ಅದಿರು ಕಂಪೆನಿಯು ಈ ಪ್ರದೇಶದಲ್ಲಿ ಕಳೆದ ಮೂವತ್ತೆರಡು ವರ್ಷಗಳಿಂದಲೂ ನಮ್ಮ ಭಾರತೀಯ ಸಂವಿಧಾನದ ನಿರೀಕ್ಷೆಗಳು, ನಮ್ಮ ದೇಶ ಮತ್ತು ರಾಜ್ಯದ ಕಾನೂನುಗಳು, ನಮ್ಮ ಸರ್ವೋಚ್ಚ ನ್ಯಾಯಾಲಯದ ತೀರ್ಮಾನಗಳು, ಸರಕಾರವೇ ನೇಮಿಸಿದ ಹಲವಾರು ಸಮಿತಿಗಳ ಶಿಫಾರಸುಗಳು - ಇವೆಲ್ಲವನ್ನೂ ನಿರ್ಲಕ್ಷಿಸಿ ಇದುವರೆಗೆ ಗಣಿಗಾರಿಕೆ ಮಾಡುತ್ತ ಬಂದಿದೆ.

ಈ ಕಂಪೆನಿಯು, ಭಾರತದ ೧) ಅರಣ್ಯ (ಸಂರಕ್ಷಣೆ) ಕಾಯಿದೆ ೧೯೮೦; ೨) ವನ್ಯಜೀವಿ (ಸಂರಕ್ಷಣೆ) ಕಾಯಿದೆ, ೧೯೭೨; ೩) ಪರಿಸರ (ಸಂರಕ್ಷಣೆ) ಕಾಯಿದೆ, ೧೯೮೬; ೪) ನೀರು (ಮಾಲಿನ್ಯತೆ ಮತ್ತು ನಿಯಂತ್ರಣ) ಕಾಯಿದೆ (೧೯೭೪; ೫) ಸ್ಫೋಟಕಗಳ ಕಾಯಿದೆ, ೧೮೭೨ ಮತ್ತು ೬) ಕರ್ನಾಟಕ ನೀರಾವರಿ ಕಾಯಿದೆ, ೧೯೬೫ - ಮುಂತಾದ ಕಾನೂನುಗಳನ್ನು ನಿರಂತರವಾಗಿ ಮುರಿಯುತ್ತಲೇ ಬಂದಿದೆ. ಆದರೆ ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಯಾವೊಂದೂ ಕ್ರಮವನ್ನೂ ತೆಗೆದುಕೊಂಡಿಲ್ಲ. ಸರಕಾರಗಳು ಕೊನೆಯ ಪಕ್ಷ ತಾವೇ ನಿರ್ಮಿಸಿಕೊಂಡಿರುವ ಕಾನೂನುಗಳು ಜ್ಯಾರಿಯಾಗುವಂತೆ ಆದರೂ ಎಚ್ಚರವಹಿಸ ಬೇಡವೇ?

- ಕುದುರೆಮುಖ ಕಂಪೆನಿಯು ತಾನು ಅನುಭವಿಸುತ್ತ ಬಂದ ವಿವಿಧ ಸೌಲಭ್ಯಗಳಿಗಾಗಿ ಹಾಗೂ ತಾನು ಮುರಿಯುತ್ತ ಬಂದಿರುವ ಕಾನೂನು ರೀತ್ಯಾ ನೀಡಬೇಕಾಗಿರುವ ಕೋಟ್ಯಂತರ ರೂಪಾಯಿಗಳ ಹಣವನ್ನು ಕೂಡಾ ಇದುವರೆಗೆ ಪಾವತಿ ಮಾಡಲಿಲ್ಲ. ಉದಾಹರಣೆಗೆ ಈ ಕಂಪೆನಿಯ ೨೩ನೆಯ ವಾರ್ಷಿಕ ವರದಿಯಂತೆ, ಈ ಕಂಪೆನಿಯು ಕರ್ನಾಟಕ ವಿದ್ಯುಚ್ಛಕ್ತಿ ನಿಗಮವೊಂದಕ್ಕೆ ಕೊಡಬೇಕಾದ ಬಾಕಿ ಹಣ ರೂ. ೧೯೭ಕೋಟಿ ರೂಪಾಯಿ ಮುಟ್ಟಿದೆ. ಈ ವಿದ್ಯುಚ್ಛಕ್ತಿಯನ್ನು ಸಣ್ಣ ಉದ್ದಿಮೆದಾರರಿಗೆ ವಿತರಿಸುತ್ತಿದ್ದರೆ ಈ ಹಣ ವಿದ್ಯುಚ್ಛಕ್ತಿ ನಿಗಮಕ್ಕಾದರೂ ಸಿಗುತ್ತಿತ್ತು. ಇದೊಂದು ನಿದರ್ಶನ ಮಾತ್ರ. ಇಂಥ ಬಾಕಿಗಳ ಪಟ್ಟಿ ಹಲವಿವೆ. ಇಂಥ ಕಂಪೆನಿಯ ಪರವಾಗಿ ನಮ್ಮ ಜನಪ್ರತಿನಿಧಿಗಳೂ ಮಾತಾಡುತ್ತಿರುವುದು ಅತ್ಯಂತ ಕಳವಳಕಾರಿಯಾಗಿದೆ.

೨. ಕೈಗಾರಿಕಾ ಸಮಾಜದ ಅಬ್ಬರ / ಗ್ರಾಮೀಣ ಭಾರತದ ಸೋಲು :

- ತುಂಗಾಭದ್ರಾ ನದಿಗಳನ್ನು ಅವಲಂಬಿಸಿ ಏಳು ಜಿಲ್ಲೆಗಳಲ್ಲಿ ಲಕ್ಷಾಂತರ ಮಂದಿ ರೈತರು, ಕೃಷಿ ಕೂಲಿಗಾರರು, ಗ್ರಾಮೀಣ ಕರಕುಶಲಗಾರರು, ಗಿರಿಜನರು, ದಲಿತರು ಬದುಕುತ್ತಿದ್ದಾರೆ. ಕೇವಲ ಭದ್ರಾ ದಂಡೆಯ ಮೇಲೆಯೇ ಇರುವ ೨ಲಕ್ಷಕ್ಕೂ ಮಿಕ್ಕಿ ರೈತರ, ಕೃಷಿ ಕಾರ್ಮಿಕರ ೮,೩೦೦ ಹೆಕ್ಟೇರ್ ಕೃಷಿ ಜಮೀನಿಗೆ ಇಂದು ಭದ್ರಾ ನದಿಯಲ್ಲಿ ಕುದುರೆಮುಖ ಕಂಪೆನಿಯ ಅದಿರಿನ

ಹೂಳು ತುಂಬಿ ತೊಂದರೆ ಆಗಿದೆ. ಈ ಕೃಷಿ ಭೂಮಿಯಲ್ಲಿ ಆಗುವ ಉತ್ಪಾದನಾ ಆದಾಯ ರೂ. ೭೦೦ ಕೋಟಿ ರೂಪಾಯಿಗೂ ಮಿಕ್ಕಿ ಇದೆ. ಇದು ಕುದುರೆಮುಖ ಕಂಪೆನಿಯ ವಾರ್ಷಿಕ ಲಾಭಕ್ಕಿಂತ ಅನೇಕ ಪಟ್ಟು ಹೆಚ್ಚಾಗಿದೆ. ಗಣಿಗಾರಿಕೆಯಿಂದಾಗಿ ಈ ಲಕ್ಷಾಂತರ ರೈತರ ಬದುಕು ಬುಡಮೇಲಾಗುವ ಸಾಧ್ಯತೆಯ ಬಗ್ಗೆ, ಅವರ ನ್ಯಾಯಬದ್ಧ ಹಾಗೂ ಕನಿಷ್ಠ ಬೇಡಿಕೆಯಾದ ಬದುಕುವ ಹಕ್ಕಿನ ಕುರಿತು ನಮ್ಮ ಜನ ಪ್ರತಿನಿಧಿಗಳು ಮಾತನ್ನೇ ಆಡದೆ ಬಹು ಜನರನ್ನು ಸಂಕಷ್ಟಕ್ಕೀಡುಮಾಡುವ ಉದ್ದಿಮೆಗಳ ಪರ ವಕಾಲತ್ತು ವಹಿಸುವುದು ಬೇಸರದ ಸಂಗತಿ; ಮಾತ್ರವಲ್ಲ, ಈ ರೀತಿ ಇವರು ಕೇವಲ ೨೦ ಶೇಕಡಾದಷ್ಟಿರುವ ಕೈಗಾರಿಕಾ ಸಮಾಜದ ಮುಖವಾಣಿಯಾಗಿ, ೮೦ ಶೇಕಡಾ ಗ್ರಾಮೀಣ ಭಾರತದ ಪ್ರತಿನಿಧಿಗಳಲ್ಲವೆಂದು ಸಾಬೀತುಪಡಿಸುತ್ತಿರುವುದು ದುರದೃಷ್ಟಕರ. ನಗರ-ಗ್ರಾಮೀಣ, ಸಂಘಟಿತ-ಅಸಂಘಟಿತ ಮತ್ತು ಉದ್ದಿಮೆ-ಕೃಷಿಗಳ ನಡುವೆ ಸಂಘರ್ಷ ಬಂದಾಗ, ನಮ್ಮ ಜನನಾಯಕರು ಗುಲ್ಲೆಬ್ಬಿಸಲು ಸಮರ್ಥರಾದ ನಗರವಾಸಿಗಳನ್ನು, ಸಂಘಟಿತ ಕಾರ್ಮಿಕರನ್ನು, ಕೈಗಾರಿಕಾ ಸಮಾಜವನ್ನು ಮಾತ್ರ ಪ್ರತಿನಿಧಿಸುತ್ತಾ, ಗ್ರಾಮೀಣ ಭಾರತದ ಬದುಕಿನ ಬವಣೆಗಳನ್ನು ಸಂಪೂರ್ಣ ಕಡೆಗಣಿಸುವುದು ಈ ದೇಶದ ಸಾಮಾಜಿಕ ದುರಂತ. ಹಾಗಾಗಿಯೆ ಇಂದು ಭಾರತದಲ್ಲಿ ಸಾಮೂಹಿಕ ಧ್ವನಿಯಿಲ್ಲದೆ ಮೂಕರಾಗಿರುವ ಸಾವಿರಾರು ಕೃಷಿಕರು ಆತ್ಮಹತ್ಯೆ ಮಾಡಿಕೊಳ್ಳುವ ಹಂತ ತಲುಪಿದ್ದರೂ, ಇದು ಯಾರಿಗೂ ತಲ್ಲಣದ ಸಂಗತಿಯಾಗಿಲ್ಲ. ನಿಜಕ್ಕೂ ಇದು, ನಮ್ಮ ಗ್ರಾಮೀಣ ಪ್ರದೇಶದ ಕೋಟ್ಯಂತರ ಮೂಕಜನರ ಧ್ವನಿಯಾಗಬೇಕಾಗಿದ್ದ ಈ ಪ್ರತಿನಿಧಿಗಳ ಸ್ಮೃತಿಪಟಲದಿಂದ ಗ್ರಾಮೀಣ ಭಾರತದ ನೆನಪೇ ಕ್ರಮೇಣವಾಗಿ ಮಾಸಿಹೋಗುತ್ತಿರುವ ಸ್ಪಷ್ಟ ಸೂಚನೆಯಾಗಿದೆ.

**೭. ಮಾನವ ಗುರಾಣಿಗಳಂತೆ ಕಾರ್ಮಿಕರ ಬಳಕೆ :**

- ಕುದುರೆಮುಖ ಅದಿರು ಕಂಪೆನಿಯ ೨೦೦೦ ಕಾರ್ಮಿಕರು ಸಂಘಟಿತ ಕ್ಷೇತ್ರದ ಕಾರ್ಮಿಕರಾಗಿದ್ದಾರೆ. ಈ ದೇಶದ ಒಟ್ಟು ಕಾರ್ಮಿಕರಲ್ಲಿ ಸಂಘಟಿತ ಕಾರ್ಮಿಕರಿರುವುದು ೧೦ ಶೇಕಡಕ್ಕೂ ಕಡಿಮೆ. ಉಳಿದ ೯೦ ಶೇಕಡಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಅಸಂಘಟಿತ ಕ್ಷೇತ್ರಗಳಾದ ಕೃಷಿ, ಕೃಷಿಯಾಧಾರಿತ ಗ್ರಾಮೀಣ ಕಸುಬು, ಉಪಕಸುಬುಗಳು, ಸಣ್ಣ ಕೈಗಾರಿಕಾ ಕ್ಷೇತ್ರ, ಕರಕುಶಲ ಕೆಲಸ, ಸೇವಾ ಕ್ಷೇತ್ರಗಳಲ್ಲಿವೆ. ಈ ೯೨ ಶೇಕಡಾ ಕಾರ್ಮಿಕರಿಗೆ ಅನ್ನ ಕೊಡುವ ಅಸಂಘಟಿತ ಕ್ಷೇತ್ರದ ಲಕ್ಷಾಂತರ ಮಂದಿ ಬೇಸಾಯಗಾರರು, ಕೃಷಿ ಕಾರ್ಮಿಕರು, ಗಿರಿಜನರು ದಲಿತರ ಪರ ಮಾತಾಡದೆ, ಕುದುರೆಮುಖ ಕಂಪೆನಿಯ ಕಾರ್ಮಿಕರನ್ನು ಬಂಡವಾಳಶಾಹಿಗಳು ಮಾನವ ಗುರಾಣಿ (Human Shield) ಯಂತೆ ಬಳಸುವ ವಾದಗಳು ಸರಿಯಲ್ಲ. ಈ ೨೦೦೦ ಮಂದಿ ಸಂಘಟಿತ ಕಾರ್ಮಿಕರು ಕಳೆದ ೨೭ ವರುಷಗಳಿಂದ ಕುದುರೆಮುಖ ಅದಿರು ಕಂಪೆನಿಯಲ್ಲಿ ಉದ್ಯೋಗದಲ್ಲಿದ್ದು, ಅವರನ್ನು ರಕ್ಷಿಸುವ ಪೂರ್ಣ ಜವಾಬ್ದಾರಿ ಕಂಪೆನಿಗಿದೆ. ಯಾವೊಬ್ಬ ಕಾರ್ಮಿಕನೂ ಸಂಕಷ್ಟಕ್ಕೀಡಾಗಬಾರದು. ನಿವೃತ್ತಿಯ ಅಂಚಿನಲ್ಲಿರುವ ಈ ಕಾರ್ಮಿಕರಿಗೆ, ನಮ್ಮ ದೇಶದ ಸಂಘಟಿತ ಕಾರ್ಮಿಕರು ನ್ಯಾಯಬದ್ಧವಾಗಿ ಪಡೆಯಬೇಕಾದ ಎಲ್ಲಾ ಸೌಲಭ್ಯ ರಕ್ಷಣೆಗಳು ಸಲ್ಲಲೇಬೇಕು. ಈ ಮಂದಿಯಲ್ಲಿ ಸ್ವಲ್ಪ ಮಟ್ಟಿಗಾದರೂ

ಉಳಿತಾಯವಿರಬಹುದು, ಪಿಂಚಣಿಯೂ ದೊರೆಯಬಹುದು. ಕುದುರೆಮುಖ ಅದಿರು ಕಂಪೆನಿಯು ತನ್ನ ೩೫೦ ಕೋಟಿ ರೂಪಾಯಿ ರಿಸರ್ವ್ ಫಂಡ್‌ನಿಂದ ಈ ಮಂದಿಗೆ ನಿವೃತ್ತಿ ವೇತನ, ವಿ.ಆರ್.ಎಸ್. ಮುಂತಾದ ಸೌಲಭ್ಯಗಳನ್ನು ಒದಗಿಸುವಂತೆ ಸರಕಾರ ಕಡ್ಡಾಯಗೊಳಿಸಬೇಕು. ಗುತ್ತಿಗೆ ಕಂಪೆನಿಯ ಗುತ್ತಿಗೆ ಅವಧಿ ಮುಗಿದ ನಂತರ, ಆ ಕಾರ್ಮಿಕರ ಜವಾಬ್ದಾರಿ ಕಂಪೆನಿಯದ್ದೇ ವಿನಾ ಸರಕಾರದ್ದಲ್ಲ. ಸರಕಾರವು ಆ ಜವಾಬ್ದಾರಿಯನ್ನು ವಹಿಸಿಕೊಂಡರೆ, ಈ ಹಿಂದೆ ಮುಚ್ಚಲ್ಪಟ್ಟ, ನೂರಾರು ಕಂಪೆನಿಗಳ ಲಕ್ಷಾಂತರ ಕಾರ್ಮಿಕರ ಜವಾಬ್ದಾರಿಯನ್ನೂ ಸರಕಾರ ವಹಿಸಿಕೊಳ್ಳಬೇಕಾದೀತು.

- ಅಲ್ಲದೆ, ಕೋಲಾರ, ಚಿನ್ನದ ಗಣಿ ಮುಚ್ಚಿದಾಗ ಸರಕಾರ, ಆ ಕೆಲಸಗಾರರನ್ನು ಮರು ವಸತಿಯೂ ನೀಡದೆ ನಡೆಸಿಕೊಂಡ ರೀತಿ; ಮಾತ್ರವಲ್ಲ ಇತ್ತೀಚೆಗೆ ಅವರಿಗೆ ನೀಡಿರುವ ನೀರು, ವಿದ್ಯುಚ್ಛಕ್ತಿ ಸೌಲಭ್ಯಗಳನ್ನೂ ನಿಲ್ಲಿಸಿದ ಅಮಾನವೀಯ ರೀತಿ ಕಂಡರೆ, ಈ ಜನಪ್ರತಿನಿಧಿಗಳಿಗೆ ನಿಜಕ್ಕೂ ಕಾರ್ಮಿಕರ ಬಗ್ಗೆ ಕಳಕಳಿಯಿದೆಯೇ ಎಂಬ ಅನುಮಾನ ಬರುವುದು ಸಹಜ.
- ತನ್ನ ಸಾಮಾಜಿಕ ಜವಾಬ್ದಾರಿಯ ಪ್ರತೀಕವಾದ ಸರಕಾರೀ ಸ್ವಾಮ್ಯದ ಉದ್ಯಮಗಳನ್ನೂ ಖಾಸಗೀಕರಣಗೊಳಿಸುತ್ತ, ಸಾಮಾನ್ಯ ಜನರು ಮಾತ್ರವಲ್ಲದೆ ಸಂಘಟಿತ ಕಾರ್ಮಿಕರೂ ಇಂದು ಅತಂತ್ರರಾಗಿ ಬೀದಿ ಪಾಲಾಗುತ್ತಿದ್ದಾರೆ. ಇದರ ಜತೆ, ಅತಿತಂತ್ರಜ್ಞಾನ ಮತ್ತು ಜಾಗತೀಕರಣದ ಅತಿ ಮೋಹದಿಂದಾಗಿ ಕಳೆದ ೫ ವರುಷಗಳಲ್ಲಿ ೨,೪೦,೦೦೦ ಸಣ್ಣ ಕೈಗಾರಿಕೆಗಳು ಕರ್ನಾಟಕವೊಂದರಲ್ಲೇ ಮುಚ್ಚಲ್ಪಟ್ಟು, ಲಕ್ಷಾಂತರ ಮಂದಿ ಯುವಕರು ಇಂದು ಬೀದಿ ಪಾಲಾಗಿದ್ದಾರೆ ಎಂದು ಇತ್ತೀಚಿನ ಪತ್ರಿಕಾ ವರದಿಗಳು ತಿಳಿಸುತ್ತವೆ. ಇವರ ಉದ್ಯೋಗ ಭದ್ರತೆಯ ಬಗ್ಗೆ ಜನಪ್ರತಿನಿಧಿಗಳು ಚಿಂತಿಸಿದ್ದಾರೆಯೇ?

೪. ಮಂಗಳೂರು ಬಂದರು - ಪ್ರಶ್ನೆ :

- 'ಮಂಗಳೂರು ಬಂದರಿನ ಒಟ್ಟು ಆದಾಯದಲ್ಲಿ ೭೦ ಶೇಕಡಾದಷ್ಟು ಕುದುರೆಮುಖ ಅದಿರು ಕಂಪೆನಿಯಿಂದ ಬರುತ್ತಿದೆ. ಹಾಗಾಗಿ ಕುದುರೆಮುಖ ಕಂಪೆನಿ ಮುಚ್ಚಿದರೆ ಬಂದರದ ಭವಿಷ್ಯಕ್ಕೆ ಅಪಾಯವಿದೆ' ಎಂದು ನಂಬಿಸಲಾಗುತ್ತಿದೆ; ಮಾತ್ರವಲ್ಲ, ಮಾನ್ಯ ಮುಖ್ಯಮಂತ್ರಿಗಳಿಗೂ ಈ ತಪ್ಪು ತಿಳುವಳಿಕೆ ನೀಡಲಾಗಿದೆ. ಈ ಎರಡೂ ಕಂಪೆನಿಗಳ ಆರ್ಥಿಕ ವರದಿಗಳ ಅಧ್ಯಯನದಂತೆ, ಬಂದರಿನ ಒಟ್ಟು ಆದಾಯಕ್ಕೆ ಕುದುರೆಮುಖ ಕಂಪೆನಿಯ ಕೊಡುಗೆ ಕೇವಲ ೯.೪೬ ಶೇಕಡಾ ಮಾತ್ರ. ಅಂದರೆ, ಬಂದರಿನ ೧೬೭ ಕೋಟಿ ರೂಪಾಯಿಯ ಒಟ್ಟು ಆದಾಯದಲ್ಲಿ (೧೯೯೮-೯೯) ಕೇವಲ ೧೬ ಕೋಟಿ ರೂಪಾಯಿ ಮಾತ್ರ ಕುದುರೆಮುಖ ಅದಿರು ಕಂಪೆನಿಯದ್ದಾಗಿದೆ. ಹಾಗಾಗಿ, ಕುದುರೆಮುಖ ಗಣಿಗಾರಿಕೆ ನಿಂತರೆ ಮಂಗಳೂರು ಬಂದರಿನ ಭವಿಷ್ಯ ಕುಸಿಯುವುದೆಂಬ ವಾದ ಸರಿಯಲ್ಲ. ಮಂಗಳೂರು ಬಂದರಿನ ಒಟ್ಟು ಆದಾಯಕ್ಕೆ ಅನೇಕ ಉಳಿದ ಬೃಹತ್ ಕಂಪೆನಿಗಳ ಕೊಡುಗೆಯೂ ಕಾರಣವಾಗಿದೆ. ಈ ನಿಜ ಸಂಗತಿಯನ್ನು ಮರೆಮಾಚಬಾರದು.

- ಅದೂ ಅಲ್ಲದೆ, ಮಂಗಳೂರು ಬಂದರು, ಕುದುರೆಮುಖ ಕಂಪೆನಿಗಿಂತ ಬಹಳ ಹಿಂದೆಯೇ ಆರಂಭವಾಗಿದೆ; ಮಾತ್ರವಲ್ಲ, ಈ ಗುತ್ತಿಗೆ ಕಂಪೆನಿಯು ತಾತ್ಕಾಲಿಕ. ಆದರೆ ಬಂದರು ಶಾಶ್ವತವಾಗಿರುವಂಥದು. ಒಂದು ರಾಷ್ಟ್ರ ಒಂದು ತಾತ್ಕಾಲಿಕ ಗುತ್ತಿಗೆ ಗಣಿಗಾರಿಕೆ ಕಂಪೆನಿಗಾಗಿ ಶಾಶ್ವತ ಸಾರ್ವಕಾಲಿಕ ಬಂದರನ್ನು ತೆರೆಯುವಷ್ಟು ಆರ್ಥಿಕ ಬೋಳೇತನ ತೋರಿಸೀತೆ? ಹಾಗಾಗಿ, ಒಂದು ಬೃಹತ್ ಬಂದರಿನ ಇಡೀ ಭವಿಷ್ಯವೇ ಒಂದು ಗುತ್ತಿಗೆ ಕಂಪೆನಿಯ ಮೇಲೆ ನಿಂತಿದೆ ಎಂಬ ವಾದವೇ ಅಸಂಗತ.

- ಭಾರತದ ೪೪೦ಕ್ಕೂ ಮಿಕ್ಕಿಯಿರುವ ಜಿಲ್ಲೆಗಳಲ್ಲಿ, ಅತ್ಯಂತ ಅಭಿವೃದ್ಧಿ ಹೊಂದಿದ ೫೦ ಜಿಲ್ಲೆಗಳಲ್ಲಿ ಒಂದಾದ ದಕ್ಷಿಣ ಕನ್ನಡದ ಒಟ್ಟು ಆರ್ಥಿಕ ಭವಿಷ್ಯ, ಕೇವಲ ಒಂದು ಬಂದರಿನ ಮೇಲೆ ನಿಂತಿದೆ ಎನ್ನುವ ತರ್ಕ, ನಮ್ಮ ಬೇಸಾಯಗಾರರಿಗೆ, ತೆಂಗು, ಕಂಗು, ರಬ್ಬರ್, ಬೆಳೆಗಾರರಿಗೆ, ಬೆಸ್ತರಿಗೆ, ಸಣ್ಣ ಕೈಗಾರಿಕೆಗಳಿಗೆ, ಕರಕುಶಲಗಾರರಿಗೆ, ಪಟ್ಟಣಗಳ ಸಾಮಾನ್ಯ ಶ್ರಮಿಕ ಜನರ ಕ್ರಿಯಾಶೀಲತೆಗೆ ಬಗೆಯುವ ಅಪಚಾರವೆನ್ನದೆ ವಿಧಿಯಿಲ್ಲ. ಬಂದರವೊಂದೇ ದಕ್ಷಿಣ ಕನ್ನಡದ ಆರ್ಥಿಕತೆಯ ಬೆನ್ನೆಲುಬಾದರೆ, ಆರ್ಥಿಕವಾಗಿ ಈ ಜಿಲ್ಲೆಯಷ್ಟು ದುರ್ಬಲ ಪ್ರದೇಶ ಇನ್ನೊಂದಿರಲಾರದು. ತಿಳುವಳಿಕೆಯುಳ್ಳ ಯಾವ ಚಿಂತನಾಶೀಲ ಅರ್ಥಶಾಸ್ತ್ರಜ್ಞನೂ ಈ ವಾದವನ್ನು ಒಪ್ಪಲಾರ.

೫. ಕಂಪೆನಿಯ ಇತರ ದುರ್ಬಲವಾದಗಳು :

- "ಈ ಕಂಪೆನಿಯು ಕೋಟ್ಯಂತರ ರೂಪಾಯಿ ವಿದೇಶಿ ವಿನಿಮಯವನ್ನು ಭಾರತಕ್ಕೆ ತಂದು ಕೊಡುತ್ತಿದೆ; ಹಾಗಾಗಿ ಇದನ್ನು ಮುಚ್ಚಿದರೆ ಭಾರತದ ಬೊಕ್ಕಸಕ್ಕೆ ನಷ್ಟವಾಗುತ್ತದೆ" ಎಂದು ಹೇಳಲಾಗುತ್ತಿದೆ. ಆದರೆ ಭಾರತ ಸರಕಾರದ ವಾಣಿಜ್ಯ ಖಾತೆಯ ಇತ್ತೀಚಿನ ವರದಿಯಂತೆ, ದೇಶದ ಒಟ್ಟು ವಿದೇಶಿ ವಿನಿಮಯ ಆದಾಯಕ್ಕೆ ಈ ಕಂಪೆನಿಯ ಕೊಡುಗೆ ಕೇವಲ ೦.೩೧ಶೇಕಡಾ ಮಾತ್ರ.

- "ಕುದುರೆಮುಖ ಅದಿರು ಕಂಪೆನಿಯು ಕೋಟ್ಯಂತರ ರೂಪಾಯಿಗಳಷ್ಟು ಸ್ಥಿರಾಸ್ತಿ ಹೊಂದಿದೆ. ಅದು ವ್ಯರ್ಥವಾಗುತ್ತದೆ" ಎಂಬ ವಾದವನ್ನೂ ಮುಂದಿಡಲಾಗಿದೆ. ಆದರೆ ಈ ಕಂಪೆನಿಯ ಮಾರ್ಚ್ ೩೧, ೧೯೯೯ರ ಲೆಕ್ಕಪತ್ರದ ಪ್ರಕಾರ ೫೦೮ ಕೋಟಿ ರೂಪಾಯಿ ಆಸ್ತಿಯನ್ನು ಹೊಂದಿದೆ. ಅದರಲ್ಲಿ ಹೆಲಿಕಾಪ್ಟರ್, ಡಂಪರ್ಸ್, ವಾಹನಗಳು, ತಾತ್ಕಾಲಿಕ ನಿರ್ಮಾಣಗಳು ಮುಂತಾದ ಚರಾಸ್ತಿಗಳ ಮೌಲ್ಯವಾದ ೨೭೩ ಕೋಟಿ ರೂಪಾಯಿಯೂ ಸೇರಿದೆ. ಈ ಚರಾಸ್ತಿಗಳನ್ನು ಎಲ್ಲಿಗೂ ಸಾಗಿಸಬಹುದು. ಉಳಿದ ಕಟ್ಟಡಗಳಲ್ಲಿ "ಪಶ್ಚಿಮ ಘಟ್ಟ ಪರಿಸರ ವಿಜ್ಞಾನೀಯ ಸಂಶೋಧನಾ ಸಂಸ್ಥೆ"ಯನ್ನು ಸರಕಾರ ಆರಂಭಿಸಬಹುದು ಎಂದು ಅನೇಕ ತಜ್ಞರು ಈಗಾಗಲೇ ಸಲಹೆ ನೀಡಿದ್ದಾರೆ. ಯಾವುದೇ ತಾತ್ಕಾಲಿಕ ಗುತ್ತಿಗೆ ಕಂಪೆನಿಯು ಮಾಡಿಕೊಂಡ ಶಾಶ್ವತ ಆಸ್ತಿಗಳಿಗೆ ಸರಕಾರ ಜವಾಬ್ದಾರವಲ್ಲ. ತಮಗೆ ೩೦ ವರುಷದ ತಾತ್ಕಾಲಿಕ ಗುತ್ತಿಗೆ ಎಂಬ ಸಂಗತಿ ಈ ಸಂಸ್ಥೆಗೆ ಮೊದಲೇ ಗೊತ್ತಿತ್ತಷ್ಟೆ. ಗಣಿಗಾರಿಕೆ ಶಾಶ್ವತವಾಗಿ

ಮುಂದುವರಿಯುವುದು ಸಾಧ್ಯವಿಲ್ಲ. ಹೀಗಿರುವಾಗ ತಾನು ಮಾಡಿಕೊಂಡ ಆಸ್ತಿಗಳಿಗೆ ಯಾರು ಜವಾಬ್ದಾರಿ?

- ಸರಕಾರ ನಿಜಕ್ಕೂ ೧೯೯೪, ೧೯೯೯, ೨೦೦೦ ಇಸವಿಗಳಲ್ಲಿ ಮೂರು ಬಾರಿ, ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಕಂಪೆನಿಗೆ ಎಚ್ಚರಿಕೆ ನೀಡಿತ್ತು. ಹೀಗಿದ್ದೂ, ಕಂಪೆನಿಯು ಈ ಎಲ್ಲ ಎಚ್ಚರಿಕೆಗಳನ್ನು ಕಡೆಗಣಿಸಿ, ಮತ್ತೂ ಮತ್ತೂ ಅಂತಾರಾಷ್ಟ್ರೀಯ ಕಂಪೆನಿಗಳ ಜತೆ ಹೊಸಹೊಸ ಒಪ್ಪಂದ ಮಾಡಿಕೊಂಡು, ಇಂದು 'ಈ ಒಪ್ಪಂದಗಳನ್ನು ಮುರಿದರೆ ಭಾರತದ ಗೌರವಕ್ಕೆ ಚ್ಯುತಿ ಬರುತ್ತದೆ' ಎಂದು ವಾದಿಸುತ್ತಾ ಸರಕಾರ ಮತ್ತು ಜನರಲ್ಲಿ ಭೀತಿ ಹುಟ್ಟಿಸುವುದು ಸರಿಯಲ್ಲ. ಇದು ಗಣಿಗಾರಿಕೆಯು ಮುಂದುವರಿಸುವಂತೆ ಸರಕಾರವನ್ನು ಒತ್ತಾಯಿಸುವ ತಂತ್ರವೆನ್ನದೆ ವಿಧಿಯಿಲ್ಲ.

- ಗಣಿಗಾರಿಕೆ ನಡೆಯುವ ಪ್ರದೇಶ ಬರೇ ಬೋಳುಗುಡ್ಡೆ ಎಂಬ ಮಾತೂ ಕೇಳಿ ಬರುತ್ತಿದೆ. ಈ ಪ್ರದೇಶ ಅಂತರ್ಜಲವನ್ನು ಹಿಡಿದಿಡಲು ಸಮರ್ಥವಾದ ಪ್ರಸಿದ್ಧ ಶೋಲಾ ಕಾಡುಗಳ ಪ್ರದೇಶವಾಗಿದೆ. ಇದರ ಜತೆ ಈ ಪ್ರದೇಶದಲ್ಲಿರುವ ಒಂದು ಜಾತಿಯ ಹುಲ್ಲು ಪ್ರತಿ ಹನಿಹನಿ ನೀರನ್ನು ಭೂಗರ್ಭದಲ್ಲಿ ಇಂಗಿಸುವ ಮೂಲಕ ಅಂತರ್ಜಲ ಭರಣಕ್ಕೆ ಅತ್ಯಂತ ಸಹಕಾರಿಯಾಗಿದೆ. ಇನ್ನು ಇಲ್ಲಿರುವ ಪರಿಸರದ ಸೂಕ್ಷ್ಮತೆ, ಜೀವಜಾಲದ ವೈವಿಧ್ಯ ಮೊದಲಾದ ಪರಿಸರ ವಿಜ್ಞಾನೀಯ ಸಂಗತಿಗಳನ್ನು ವಿಜ್ಞಾನಿಗಳು ಸಾಕ್ಷ್ಯಾಧಾರಗಳೊಂದಿಗೆ ಪ್ರಕಟಪಡಿಸುತ್ತಲೇ ಬರುತ್ತಿದ್ದಾರೆ. ಇಲ್ಲಿ ಆ ಬಗ್ಗೆ ಪ್ರತ್ಯೇಕವಾಗಿ ಉಲ್ಲೇಖಿಸುವ ಅಗತ್ಯವಿಲ್ಲ. ಕಂಪೆನಿಯು ತಾವು ಮಾಡಿದ ಪ್ರಮಾದಗಳ ಪರಿಮಾರ್ಜನೆಗಾಗಿ ಅಕೇಶಿಯಾ ಮತ್ತು ಗಾಳಿಮರಗಳನ್ನು ನೆಟ್ಟು 'ತಾವು ಕಾಡು ಬೆಳೆಸಿದ್ದೇವೆ' ಎನ್ನುತ್ತಿದ್ದಾರೆ. ಈ ಜಾತಿಯ ಮರಗಳು ಹಸುರುಕಾಡು ಬೆಳೆಸಲು ಸಹಕಾರಿಯಾಗವು. ಅಲ್ಲಿನ ನೆಲ, ಜಲ, ಜೀವಜಂತುಗಳಿಗೆ ಈ ಕಾಡು, ಬೆಂಕಿಯಷ್ಟೇ ಅಪಾಯ ತಂದೊಡ್ಡುವ ಸಂಭವವಿದೆ. ಈ ಏಕರೂಪೀ ಸವಕಲು ಮರಗಳು ಕಾಡಿನ ಸಮೃದ್ಧ ಬೆಳವಣಿಗೆಗೆ ಮಾರಕವಾಗುತ್ತವೆ. ನೈಜ ಕಾಡು ಬೆಳೆಸಲು, ಮುಂದಾದರೂ ಇವನ್ನು ಕಡಿಯಲೇ ಬೇಕಾಗುತ್ತದೆ.

**೬. ಜಾಗತೀಕರಣ - ಉಕ್ಕು ಬೇಡಿಕೆ ತೀವ್ರ ಕುಸಿತ :**

- ಜಾಗತೀಕರಣದ ದೆಸೆಯಿಂದ, ಇಡೀ ಜಗತ್ತಿನ ಆರ್ಥಿಕತೆಯು ಕುಸಿದ ಪರಿಣಾಮವಾಗಿ, ಉಕ್ಕಿನ ಬೇಡಿಕೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೀವ್ರವಾಗಿ ಕುಸಿದಿದೆ. ಹಾಗಾಗಿ ಈ ಕ್ಷೇತ್ರವು ಅಂತಾರಾಷ್ಟ್ರೀಯವಾಗಿ ಅತ್ಯಂತ ಸಂಕಷ್ಟದಲ್ಲಿ ಸಿಲುಕಿದೆ. ಅಮೇರಿಕಾ ಮತ್ತು ಕೆನಡಾ ದೇಶಗಳು ತಮ್ಮ ಉಕ್ಕು ಆಮದಿನ ಮೇಲೆ 'ಆಂಟಿ ಡಂಪಿಂಗ್' ಮತ್ತು 'ಕೌಂಟರ್ - ವೇಲಿಂಗ್ ಲೆವಿ' ವಿಧಿಸಿವೆ. ಯುರೋಪು, ಜಪಾನುಗಳ ಸ್ಥಿತಿ ಕಳವಳಕಾರಿಯಾಗಿದೆ. ಇಸ್ಪಾಟ್‌ನಂತಹ, ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ಭಾರತದ ಉಕ್ಕಿನ ಕಂಪೆನಿಯೂ ಇಂದು ಸಂಕಷ್ಟದಲ್ಲಿದೆ. ೨೦೦೧-೨೦೦೨ ಸಾಲಿನ ಮೊದಲ ಮೂರು ತಿಂಗಳಲ್ಲಿ ಭಾರತದ ಉಕ್ಕು ಕೈಗಾರಿಕೆ ೧೦೦೦ ಕೋಟಿ ನಷ್ಟ ಅನುಭವಿಸಿದೆ; ಮಾತ್ರವಲ್ಲ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉಕ್ಕಿನ

ಬೆಲೆ ೪೦-೫೦ಶೇಕಡಾದಷ್ಟು ಇಳಿದಿದ್ದು, ಈ ಬಿಕ್ಕಟ್ಟು ಇನ್ನೂ ೫ ವರುಷಗಳ ಕಾಲ ಮುಂದುವರಿಯಬಹುದೆಂದು ಇತ್ತೀಚಿನ ಪತ್ರಿಕಾ ವರದಿಗಳು ತಿಳಿಸುತ್ತವೆ. ಭಾರತದ ಯೋಜನಾ ಆಯೋಗ, ಸರಕಾರೀ ಸ್ವಾಮ್ಯದ ಕಂಪೆನಿಯಾದ 'ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ' (ಸ್ಕೈಲ್)'ದ ೯೫ ಶೇಕಡಾ ಮತ್ತು 'ಎನ್.ಎಮ್.ಡಿ.ಸಿ.'ಯ ೨೨ ಶೇಕಡಾ ವೆಚ್ಚ ಕಡಿತಗೊಳಿಸಿದೆ. 'ಸ್ಕೈಲ್' ಕಂಪೆನಿಯು ತನ್ನ ಕಾರ್ಮಿಕರಿಗೆ ಸ್ವಯಂ ನಿವೃತ್ತಿ ಸೌಲಭ್ಯವನ್ನು ಘೋಷಿಸಿದೆ. ಕಬ್ಬಿಣ ಕ್ಷೇತ್ರದಲ್ಲಿ ಉದ್ಭವಿಸಿರುವ ಇಂದಿನ ತೀವ್ರ ಬಿಕ್ಕಟ್ಟಿನ ಸಂದರ್ಭದಲ್ಲಿ ಯಾವಾಗ ನಮ್ಮ ಅಂತಾರಾಷ್ಟ್ರೀಯ ರಫ್ತು ಒಪ್ಪಂದ ಕುಸಿದು ಬೀಳಬಹುದು ಎನ್ನುವುದೂ ಅಸಾಧ್ಯ. ಆಗ ಕಾರ್ಮಿಕರ ಗತಿ ಏನು?

ಅಲ್ಲದೆ ಜಾಗತೀಕರಣದ ನೇರ ಪರಿಣಾಮವಾದ ಖಾಸಗೀಕರಣದ ವಿಜೃಂಭಣೆಯಿಂದಾಗಿ ಕುದುರೆಮುಖ ಅದಿರು ಕಂಪೆನಿಯನ್ನು ಖಾಸಗೀಕರಣಗೊಳಿಸಿ, ಜಪಾನಿನ ನಿಪ್ಪಾನ್ ಕಂಪೆನಿಗೆ ಹಸ್ತಾಂತರ ಮಾಡುವ ಬಗ್ಗೆಯೂ ಮಾತು ಕೇಳಿ ಬರುತ್ತಿದೆ. ಅಂತಾರಾಷ್ಟ್ರೀಯ ಕಂಪೆನಿಗೆ ನಾವು ನಮ್ಮ ಕಂಪೆನಿಗಳನ್ನು (ಎನ್ರಾನ್ ಕಂಪೆನಿಯ ಜತೆ ನಾವು ಮಾಡಿಕೊಂಡ ಅಸಂಬದ್ಧ ಒಪ್ಪಂದದಂತೆ) ಎಲ್ಲಾ ಸಂಕಟಗಳಿಂದಲೂ ಮುಕ್ತಗೊಳಿಸಿ ಚಿನ್ನದ ತಟ್ಟೆಯಲ್ಲಿಟ್ಟು ಕೊಡಬೇಕಷ್ಟೆ. ಇಲ್ಲದಿದ್ದರೆ.ಕುದುರೆಮುಖ ಪ್ರದೇಶದ ವನ್ಯಜೀವಿ ಉಪಸಂರಕ್ಷಣಾಧಿಕಾರಿ, ಚಿಕ್ಕಮಗಳೂರಿನ ಜಿಲ್ಲಾಧಿಕಾರಿ, ಬೆಂಗಳೂರಿನ ರಾಜ್ಯಮಟ್ಟದ ವನ್ಯಜೀವಿ ಸಂರಕ್ಷಣಾ ಮುಖ್ಯಾಧಿಕಾರಿಯವರು, ಕುದುರೆಮುಖ ಅದಿರು ಕಂಪೆನಿಗೆ ಇನ್ನೂ ಗಣಿಗಾರಿಕೆಗಾಗಿ ರಾಷ್ಟ್ರೀಯ ಉದ್ಯಾನ ಪ್ರದೇಶದ ಒಂದು ಭಾಗವನ್ನು 'ಡಿ ನೋಟಿಫೈ' ಮಾಡುವುದು ಖಂಡಿತಾ ಕೂಡದು ಎಂದು ಬರೆದಾಗಲೂ, ಅದನ್ನು ಕಡೆಗಣಿಸಿ ಸರಕಾರ ಒಬ್ಬ ರೆವಿನ್ಯೂ ಅಸಿಸ್ಟೆಂಟ್ ಕಮೀಶನರರು ಈ ಕಂಪೆನಿಯನ್ನು ಸ್ಟಾರ್ ಕಂಪೆನಿಯೆಂದು ವರ್ಣಿಸಿ ಮಾಡಿದ ಶಿಫಾರಸಿನ ಮೇಲೆ ಸುಮಾರು ೩೫೦೦ ಹೆಕ್ಟೇರ್ ಡಿನೋಟಿಫೈ ಮಾಡಿದ್ದರ ರಹಸ್ಯವೇನು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಉನ್ನತ ಅಧಿಕಾರಿಗಳಿಗೂ ಅಸಿಸ್ಟೆಂಟ್ ಕಮಿಷನರರಂತೆ ಈ ದೇಶದ ಹಿತದ ಬಗ್ಗೆ ಜವಾಬ್ದಾರಿಯುತ ಕಾಳಜಿಯಿಲ್ಲವೇ?

**ಛಿದ್ರಗೊಳ್ಳುತ್ತಿರುವ ನ್ಯಾಯ - ಸಮತೆಗಳ ಕಲ್ಪನೆ :**

ಕೇವಲ ಉದ್ದಿಮೆದಾರರು, ರಾಜಕಾರಣಿಗಳು ಮಾತ್ರ ಈ ದೇಶದ ಪ್ರಜೆಗಳಲ್ಲ. ವಿಜ್ಞಾನಿಗಳು, ಚಿಂತಕರು, ಸಾಹಿತಿಗಳು, ಪ್ರಜ್ಞಾವಂತ ನಾಗರಿಕರು, ಪರಿಸರ ಕಾರ್ಯಕರ್ತರು, ಸಮಾಜಶಾಸ್ತ್ರಜ್ಞರು, ರೈತರು, ದಲಿತರು, ಕೂಲಿ ಕಾರ್ಮಿಕರು, ಬುಡಕಟ್ಟು ಜನಾಂಗದವರು, ಸಂವೇದನಾಶೀಲ ಪತ್ರಕರ್ತರು, ದೈನಂದಿನ ಬದುಕಿನ ಬವಣೆಯಲ್ಲಿ ನೊಂದ ಸಾಮಾನ್ಯ ಜನರು - ಇವರೆಲ್ಲರೂ ಈ ದೇಶದ ಪ್ರಜೆಗಳು. ಇವರೆಲ್ಲರಿಗೂ ದೇಶದ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಅದಮ್ಯ ಕಾಳಜಿಯಿದೆ. ನೆಮ್ಮದಿಯ ರಾಷ್ಟ್ರ ನಿರ್ಮಾಣದ ಕನಸುಗಳಿವೆ. ನ್ಯಾಯ, ಸಮತೆಗಳನ್ನು ಅರ್ಥಪೂರ್ಣವಾಗಿಸುವ ಪ್ರಜಾತಂತ್ರ ವ್ಯವಸ್ಥೆಯ ಆದರ್ಶ ಅವರ ಕಣ್ಣ ಮುಂದಿದೆ. ಹಾಗಾಗಿ ಕೇವಲ ರಾಜಕಾರಣಿಗಳು ಮತ್ತು ಉದ್ದಿಮೆದಾರರು ಮಾತ್ರ ಈ ರಾಷ್ಟ್ರದ ಚರಿತ್ರೆಯನ್ನು ಬರೆಯುವಂತಾಗಬಾರದು; ಈ ದೇಶದ ಭವಿಷ್ಯ ನಿರ್ಧರಿಸುವಂತಾಗಬಾರದು.

## ಅಭಿವೃದ್ಧಿ ಯಾರಿಗಾಗಿ? ಹೇಗೆ ?:

ಯಾವೊಬ್ಬ ಪ್ರಜ್ಞಾವಂತನೂ ಅಭಿವೃದ್ಧಿ ವಿರೋಧಿಯಲ್ಲ. ಆದರೆ ಅಭಿವೃದ್ಧಿ ಹೇಗೆ? ಮತ್ತು ಯಾರಿಗಾಗಿ? ಎಂಬ ನೈತಿಕ ಪ್ರಶ್ನೆಯನ್ನು ಎಲ್ಲ ಪ್ರಜ್ಞಾವಂತರೂ, ನಮ್ಮ ತಥಾಕಥಿತ ಸ್ವಯಂಘೋಷಿತ 'ಡೆವಲಪ್‌ಮೆಂಟ್' ಸಂಕೀರ್ತನಕಾರರಿಗೆ ಕೇಳಬೇಕಾಗಿದೆ; ಕೇಳುತ್ತಾರೆ. ಅಭಿವೃದ್ಧಿ ಅಂದರೆ ೮೦ ಶೇಕಡಾ ಜನರನ್ನು ಸಮಾಜದ ಅಂಚಿಗೆ ತಳ್ಳಿ ಕೇವಲ ೨೦ ಶೇಕಡಾ ಪ್ರತಿಷ್ಠಿತರಿಗೆ ಅಭಿವೃದ್ಧಿಯ ಲಾಭವನ್ನು ಹಂಚಿಕೊಳ್ಳುವ 'ಮಾಡಲ್' ಆದರೆ ಅದು ಅಭಿವೃದ್ಧಿ ಅಲ್ಲ. ಅದು ದಾರಿದ್ರ್ಯದ ಹಂಚಿಕೆಯಾಗುತ್ತದೆ. ಆಧುನಿಕ ಮನಸ್ಸಿನ ಸಮೃದ್ಧಿಯ ಕಲ್ಪನೆಯೇ, ಬಹುಜನರನ್ನು ನಿರ್ಗತಿಕರನ್ನಾಗಿ ಮಾಡುವ ವ್ಯವಸ್ಥೆಯಾದರೆ ಅದು ಅಭಿವೃದ್ಧಿಯ ಹೆಸರಲ್ಲಿ ಸಾಮಾನ್ಯ ಜನರ ಮೇಲೆ ಹೇರುವ ಹಿಂಸೆಯೆನ್ನದೆ ವಿಧಿಯಿಲ್ಲ.

## ಮಲೆಕುಡಿಯರೂ ಈ ದೇಶದ ಪ್ರಜೆಗಳು :

ಕುದುರೆಮುಖ ಕಂಪೆನಿಯನ್ನು ಸ್ಟಾರ್ ಕಂಪೆನಿಯೆಂದು ರಕ್ಷಿತ ರಾಷ್ಟ್ರೀಯ ಉದ್ಯಾನದಲ್ಲಿ ತೆರೆದ ಗಣಿಗಾರಿಕೆಗೆ ತೆರವುಗೊಳಿಸಿ ಅಲ್ಲಿ ಶತಮಾನಗಳಿಂದ ವಾಸಿಸುತ್ತಿರುವ ೨೫ ಸಾವಿರಕ್ಕೂ ಹೆಚ್ಚು ಬುಡಕಟ್ಟು ಜನಾಂಗಕ್ಕೆ ಸೇರಿದ ಮಲೆಕುಡಿಯರನ್ನು ನಮ್ಮ ಆಧುನಿಕ ಅಭಿವೃದ್ಧಿ ತರ್ಕಗಳಿಂದ ಅಳೆದು, ಅವರಿಗೆ ರಸ್ತೆ, ಶಾಲೆ, ಆರೋಗ್ಯ ಕೇಂದ್ರ ಮುಂತಾದ ಕನಿಷ್ಠ ಸೌಲಭ್ಯಗಳನ್ನೂ ರಕ್ಷಿತ ರಾಷ್ಟ್ರೀಯ ಉದ್ಯಾನ ಎಂಬ ನೆವದಲ್ಲಿ ಕೊಡದೆ ಅವರನ್ನು ಕಾಡಿನಿಂದ ಒಕ್ಕಲೆಬ್ಬಿಸುವುದು ಜನತಂತ್ರದ ಕ್ರೂರ ವ್ಯಂಗ್ಯವೆನ್ನದೆ ವಿಧಿಯಿಲ್ಲ. ಅಭಿವೃದ್ಧಿ ಯೋಜನೆಗಳೆಲ್ಲ ಇಂದು ನಿರ್ವಸಿತರಿಗೆ ಮರಣ ಶಾಸನವಾಗಿ ಪರಿಣಮಿಸುತ್ತಿವೆ. ಕಳೆದ ೫೦ ವರುಷಗಳಲ್ಲಿ, ಈ ದೇಶದ ಅಭಿವೃದ್ಧಿ ಯೋಜನೆಗಳು ಸುಮಾರು ೫ ಕೋಟಿ ಜನರನ್ನು ನಿರ್ವಸಿತರನ್ನಾಗಿ ಮಾಡಿವೆ. ಕೇವಲ ಹಣವೇ ಪರಿಹಾರವೆಂಬ ಹುಚ್ಚು ಕಲ್ಪನೆ ಈ ಅಭಿವೃದ್ಧಿ ವಾದಿಗಳಿಗಿದೆ. ಅದು ನಿಜಕ್ಕೂ ಅಭಿವೃದ್ಧಿಯ ಹೆಸರಿನಲ್ಲಿ ನಿರ್ವಸಿತರ ಬಲಿಯೆನ್ನದೆ ವಿಧಿಯಿಲ್ಲ. ಈ ಬಲಿಯಲ್ಲಿ ಬಲಿಯಾಗುವವರು "ಅವರು"; ಬಲಿ ಕೊಡುವವರು "ನಾವು". ಕಳೆದ ಹತ್ತು ವರ್ಷಗಳಿಂದಂತೂ ಜಾಗತೀಕರಣದ ಅತಿಮೋಹವು ಅಗಾಧ ಬಡಜನತೆಗೆ ನಿರ್ಗತಿಕತೆಯನ್ನೇ ಹಂಚುತ್ತಿರುವ ಸ್ಪಷ್ಟ ನಿದರ್ಶನಗಳು ನಮ್ಮ ಕಣ್ಣಮುಂದೆ ಚಾಚಿ ನಿಂತಿವೆ. ಈ ಮಂದಿಯ ಭವಿಷ್ಯದ ಕನಸುಗಳು ಇಂದು ನುಚ್ಚುನೂರಾಗುತ್ತಿವೆ. ಗ್ರಾಮೀಣ ಭಾಷೆ ಮಾತಾಡುವುದನ್ನೇ ಮರೆತ ನಮ್ಮ ಜನನಾಯಕರಿಗೆ ಈ ಎದೆ ನಡುಗಿಸುವ ವಿದ್ಯಮಾನದ ಬಗ್ಗೆ ದಿಗಿಲಿಲ್ಲ, ತಲ್ಲಣವಿಲ್ಲ.

## ಭರತವಾಕ್ಯ :

ಹಾಗಾಗಿ ಅಭಿವೃದ್ಧಿಯ ವ್ಯಾಖ್ಯೆಯ ಬಗ್ಗೆ, ಸಮೃದ್ಧಿಯ ಪರಿಕಲ್ಪನೆಯ ಬಗ್ಗೆ ಮತ್ತೆ ಮತ್ತೆ ನೈತಿಕ ಪ್ರಶ್ನೆಯನ್ನು ಜನತೆ ಎತ್ತುತ್ತಲೇ ಇರುತ್ತಾರೆ. ವ್ಯಾಸರು ಮಹಾಭಾರತದ ಕೊನೆಯಲ್ಲಿ, "ಯಾವುದು ಧರ್ಮ, ಯಾವುದು ಅಧರ್ಮ, ಯಾವುದು ನ್ಯಾಯ, ಯಾವುದು ಅನ್ಯಾಯ ಎಂಬ ಬಗ್ಗೆ ನಾನು ಈ ಸುದೀರ್ಘ ಕಥನದಲ್ಲಿ ಅಲ್ಲಲ್ಲಿ ಜಿಜ್ಞಾಸೆ ಮಾಡಿದರೂ ಕೂಡ ಒಂದು ದೇಶದಲ್ಲಿ ಧರ್ಮ, ನ್ಯಾಯಗಳು ನೆಲೆ ನಿಲ್ಲುವುದಿಲ್ಲ. ಧರ್ಮ, ನ್ಯಾಯಗಳು ದೇಶದಲ್ಲಿ ನೆಲೆ ನಿಲ್ಲಬೇಕಾದರೆ

ಅನ್ಯಾಯ, ಅಧರ್ಮಗಳು ನಡೆಯುತ್ತಿರುವುದನ್ನು ಕಂಡಾಗ, ಆ ದೇಶದ ಪ್ರಜೆಗಳು, ಅದು ತಮಗೆ ಸಂಬಂಧಪಡದಿದ್ದರೂ ಕೂಡ, "ಇದು ಅಧರ್ಮ, ಇದು ಅಧರ್ಮ", "ಇದು ಅನ್ಯಾಯ, ಇದು ಅನ್ಯಾಯ" ಎಂದು ಎರಡೂ ಕೈಗಳನ್ನೆತ್ತಿ ಘೋಷಿಸುತ್ತಿರಬೇಕು. ಆಗ ಮಾತ್ರ ಒಂದು ದೇಶದಲ್ಲಿ ಧರ್ಮ, ನ್ಯಾಯ, ಸಮತೆಗಳು ನೆಲೆಸೀತು" ಎಂದು ಭರತವಾಕ್ಯ ಘೋಷಿಸಿದ್ದಾರೆ. ಭಾರತದ ಸಾಮಾನ್ಯ ಜನತೆಯ ಪಾಡೂ ಅದೇ ಆಗಿದೆ. ಕುದುರೆಮುಖ ಗಣಿಗಾರಿಕೆಯ ವಿರುದ್ಧ ಇಂದು ನಡೆಯುತ್ತಿರುವ ಸಂಘರ್ಷವು ಕೇವಲ ಸಾಂಕೇತಿಕ ಮಾತ್ರ. ಇಲ್ಲಿ ಸೋಲು ಗೆಲುವು ಮುಖ್ಯವಲ್ಲ. ಈ ಜನಪರ ಚಳುವಳಿಯ ಇಂಗಿತ ಮುಖ್ಯ. ಅದು ದೀರ್ಘಾವಧಿಯಲ್ಲಿ ಜನತೆಯ ಮನೋಭಾವದಲ್ಲಿ ಮೂಡಿಸುವ ಜಾಗೃತಿ ಮುಖ್ಯ. ಇಂದು ಭಾರತದಲ್ಲಿ ಎಲ್ಲೆಲ್ಲೂ ಜನಪರ ಆಂದೋಲನಗಳು ಭುಗಿಲೇಳುತ್ತಿವೆ. ತತ್‌ಕ್ಷಣದಲ್ಲಿ ಈ ಜನಪರ ಚಳುವಳಿಗಳು ಗೆಲ್ಲದೇ ಹೋಗಬಹುದು. ಆದರೆ ದೀರ್ಘಾವಧಿಯಲ್ಲಿ ಇವು ಅತ್ಯಂತ ಶಕ್ತಿಶಾಲಿಯಾಗುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ. ನ್ಯಾಯ-ಸತ್ಯಗಳಿಗೆ ಗೆಲುವು ನಿಶ್ಚಿತ. ಅವಕ್ಕೆ ಅಂಕಿ ಅಂಶಗಳ ಸ್ಪಷ್ಟೀಕರಣದ ಅಗತ್ಯವಿಲ್ಲ. ಸತ್ಯ ನಮ್ಮ ಒಳಮನಸ್ಸಿನ ಅನುಭೂತಿಗೆ ದಕ್ಕುವಂಥದು. ಅನುಭವಕ್ಕೆ ತೆರೆದುಕೊಳ್ಳುವಂಥದು. ನಮ್ಮ ಹೊರತಾಗಿಯೂ "ಅದು" ಇರುವಂಥದು; ಸಾಬೀತಾಗುವಂಥದು. ಈ ನೆಲದ ವಿವೇಕವನ್ನು ನಿರ್ಲಕ್ಷಿಸಿ ಒಟ್ಟಾರೆಯಾಗಿ ಬೃಹತ್ ಉದ್ದಿಮೆಗಳ ಸ್ಥಾಪನೆ ಹಾಗೂ ಅತಿ ತಂತ್ರಜ್ಞಾನದ ಬಳಕೆಯು. ಸಾಮಾನ್ಯ ಜನರ ಮೇಲೆ ತಂದೊಡ್ಡಬಹುದಾದ ಸಂಕಷ್ಟಗಳ ಬಗ್ಗೆ ಗಾಂಧೀಜಿಯವರ ಅನುಮಾನಗಳಿಗೆ ವೈಜ್ಞಾನಿಕ ಪುರಾವೆಗಳ ಅಂಕಿ ಅಂಶಗಳ, ಸಾಕ್ಷ್ಯಾಧಾರಗಳ ಅಗತ್ಯವಿರಲಿಲ್ಲ. ಸಂವೇದನಾಶೀಲ ಮನಸ್ಸಿನ ಆಧ್ಯಾತ್ಮ ಅನುಭೂತಿಯಲ್ಲಿ ಜೀವನಾನುಭವದಲ್ಲಿ ಅವರು ಕಂಡುಕೊಂಡ ಸತ್ಯದರ್ಶನವಾಗಿತ್ತು. "ತೇನ ತ್ಯಕ್ತೇನ ಭುಂಜೀಥಾಃ" (ಈ ಭೂಮಿ ನಿನಗೆ ಸೇರಿದ್ದಲ್ಲ, ನಿನಗೆ ಅಗತ್ಯಕ್ಕಷ್ಟೇ ಭೂಮಿಯ ಸಂಪತ್ತನ್ನು ಉಳಿಸಿ, ತ್ಯಾಗದಿಂದ ಬದುಕು) ಎಂದು ಋಷಿ ಯಾಜ್ಞವಲ್ಕ್ಯರು ಹೇಳಿದ ಈ ನೆಲದ ಸತ್ಯಕ್ಕೆ ಸಾಕ್ಷ್ಯಾಧಾರ, ತರ್ಕಗಳ, ವೈಜ್ಞಾನಿಕ ಪುರಾವೆಗಳ ಹಂಗಿಲ್ಲ. ಅದು ಅವರ ಜೀವನಾನುಭೂತಿಯಿಂದ ಹೊರಹೊಮ್ಮಿದ ಉದ್ಗಾರವಾಗಿತ್ತು. ಆ ನಂಬಿಕೆಯಲ್ಲೇ ನಮ್ಮ ಬದುಕು. ಗಣಿಗಾರಿಕೆ ನಿಲ್ಲಬೇಕೆಂಬುದೇ ಬಹುಜನರ ಒಮ್ಮತದ ಆಶಯ.

❐

# ಜಾಗತೀಕರಣಕ್ಕೆ ಗಾಂಧಿಯ ಸವಾಲು: ಬೌದ್ಧಿಕತೆಯ ಆದಿಮ ಪ್ರಳಯ

ರಾಜಕೀಯ ಸ್ವಾತಂತ್ರ್ಯ ದೊರೆತ ಆರಂಭದ ವರ್ಷಗಳಲ್ಲಿ ಈ ದೇಶಕ್ಕಿದ್ದ ಕನಸುಗಳು ಇಂದು ಭಗ್ನಗೊಂಡಿವೆ. ಕನಸುಗಳಿಲ್ಲದ ದೇಶಕ್ಕೆ ಭವಿಷ್ಯವಿರಲೂ ಸಾಧ್ಯವಿಲ್ಲ. ವ್ಯಾಪಾರಕ್ಕಾಗಿ ಈ ದೇಶಕ್ಕೆ ಕಾಲಿಟ್ಟ ಒಂದು ವಿದೇಶೀ ಈಸ್ಟ್ ಇಂಡಿಯ ಕಂಪೆನಿಯು ನಮ್ಮನ್ನು ಸಂಪೂರ್ಣ ಪರತಂತ್ರಗೊಳಿಸಿದ ಕತೆ ನಮಗೆ ಗೊತ್ತಿದೆ. ಆ ಕಂಪೆನಿಯನ್ನು ಹೊರಗಟ್ಟಲು ನಮಗೆ ೨೦೦ ವರ್ಷಗಳು ಬೇಕಾದವು. ಅದರಿಂದ ಬಿಡುಗಡೆಗೊಳ್ಳಲು "ಕ್ವಿಟ್ ಇಂಡಿಯಾ" ಚಳುವಳಿಯನ್ನೇ ಹಮ್ಮಿಕೊಳ್ಳಬೇಕಾಯಿತು. ಆದರೆ ಇಂದು ನಾವು ಆ ಕಂಪೆನಿಯನ್ನೂ ಮೀರಿಸುವ ನೂರಾರು ಅಂತಾರಾಷ್ಟ್ರೀಯ ಕಂಪೆನಿಗಳನ್ನು ಕೆಂಪುಸೆಲ್ಲೆ ಹಾಸಿ ದೇಶದೊಳಗೆ ಮುದದಿಂದ ಸ್ವಾಗತಿಸುತ್ತಿದ್ದೇವೆ. ನಮ್ಮನ್ನು ಉದ್ಧರಿಸಲು ಅವರನ್ನು ಅಂಗಲಾಚುತ್ತ ನಮ್ಮ ಬೌದ್ಧಿಕ ದಾರಿದ್ರ್ಯವನ್ನು ಪ್ರದರ್ಶಿಸುತ್ತಿದ್ದೇವೆ. ನವವಸಾಹತೀಕರಣಕ್ಕೆ ನಮ್ಮನ್ನು ನಾವೇ ಒಡ್ಡಿಕೊಳ್ಳುತ್ತಿದ್ದೇವೆ. ಈ ಬಹುರಾಷ್ಟ್ರೀಯ ಕಂಪೆನಿಗಳು ಲಾಭಗಳಿಸುವ ಮಾರುಕಟ್ಟೆ ನೆಲೆ ಹುಡುಕಿಕೊಂಡು ನಮ್ಮಲ್ಲಿಗೆ ಬರುತ್ತಿವೆಯೇ ವಿನಾ ನಮ್ಮ ದೇಶವನ್ನು ಉದ್ಧಾರ ಮಾಡುವ ಸಾಮಾಜಿಕ ಕಾಳಜಿಯಿಂದಲ್ಲ. ಈ ಬೃಹತ್ ಕಂಪೆನಿಗಳ ಮಾರುಕಟ್ಟೆ-ಆಧಾರಿತ ವ್ಯಾಪಾರೀ ನೀತಿಯಲ್ಲಿ ಅಂಥ ಸಾಮಾಜಿಕ ದರ್ಶನವೇ ಇಲ್ಲ; ಮಾತ್ರವಲ್ಲ, ಸಾಮಾಜಿಕ ದರ್ಶನಕ್ಕೆ

---

ಸುಧಾ, (ವಾರಪತ್ರಿಕೆ -ಸ್ವಾತಂತ್ರ್ಯೋತ್ಸವ ವಿಶೇಷ ಲೇಖನ), (ಬೆಂಗಳೂರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಪ್ರೆಸ್ : ಆಗಸ್ಟ್ ೨೧, ೨೦೦೬)

ಬೇಕಾದ ಆಂತರಿಕ ಪರಿಕರಗಳೇ ಅವುಗಳ ಸಂರಚನೆಯಲ್ಲಿಲ್ಲ. ಹಾಗಾಗಿ ಪ್ರಾಯಃ ಆತ್ಯಂತಿಕವಾಗಿ ಇವುಗಳಿಂದ ಬಿಡುಗಡೆಗೊಳ್ಳಲು ನಾವು ಪುನಃ "ಕ್ವಿಟ್ ಇಂಡಿಯಾ" ಮಾದರಿಯ ಚಳವಳಿಯನ್ನೇ ಆರಂಭಿಸಬೇಕೋ ಏನೋ. ಅಂತೂ ಭಾರತದ ರಾಜಕೀಯ ಸ್ವಾತಂತ್ರ್ಯವೆಂಬುದು ಕೇವಲ ಕೆಲವೇ ವರ್ಗಗಳ ಸ್ವಚ್ಛಂಧತೆಯಾಗಿ, ಹಾಸ್ಯಾಸ್ಪದವಾಗುತ್ತಿದೆ, ಸುಳ್ಳಾಗುತ್ತಿದೆ.

**ಇಂಡಿಯಾ ವರ್ಸಸ್ ಭಾರತ :**

ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಬಿಡುಗಡೆ ಮಾತ್ರ ನಿಜವಾಗಿ ಒಂದು ದೇಶದ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ತುಂಬಬಲ್ಲುದು. ಆದರೆ ಈ ಮೂರೂ ಕ್ಷೇತ್ರಗಳಲ್ಲಿ ನಾವು ತೀರ ಸೋತಿದ್ದೇವೆ. ಈ ಸೋಲನ್ನು ಒಪ್ಪಿಕೊಳ್ಳಲು ತಯಾರಿಲ್ಲದಾಗ, ಭಿನ್ನ ಧ್ವನಿಯನ್ನು ಹತ್ತಿಕ್ಕಲು ದಬ್ಬಾಳಿಕೆಯ ಮೂಲಕ ರಾಜಕೀಯ ನಡೆಸುತ್ತಿದ್ದೇವೆ. ದೇಶವು ಆಂತರಿಕವಾಗಿಯೇ ವಸಾಹತೀಕರಣಗೊಳ್ಳುವ, ಸಮಾಜವು ವಿಭಜನೆಗೊಳ್ಳುವ ಸಂಕೇತ ಇದು.

ನಾವು ಸಾಮಾಜಿಕವಾಗಿ ಸ್ಪಂದನಶೀಲರಾಗಿದ್ದರೆ, ಹಲವಾರು ನೆಲೆಗಳಲ್ಲಿ ಈ ದೇಶವು ಸ್ಪಷ್ಟವಾಗಿ ವಿಭಜನೆಗೊಳ್ಳುತ್ತಿರುವುದನ್ನು ಗುರುತಿಸಬಹುದು. ಮುಖ್ಯವಾಗಿ "ಇಂಡಿಯಾ" ಮತ್ತು "ಭಾರತ" ಗಳಾಗಿ ಮತ್ತು ನೆಟಿಜನ್ಸ್ "(ನೆಟ್ ಗ್ರಾಹಕರು) ಮತ್ತು "ಸಿಟಿಜನ್ಸ್" (ನಾಗರಿಕರು) ವರ್ಗಗಳಾಗಿ ದೇಶವು ವಿಭಜನೆಗೊಳ್ಳುತ್ತಿರುವುದು ನಮ್ಮ ಕಣ್ಣಿಗೆ ರಾಚುವಂತೆ ಕಾಣುತ್ತದೆ. ಈ ದೇಶದ ನಿಜ ಸಂಪತ್ತಿನ ಉತ್ಪಾದಕರಾದ ಗ್ರಾಮೀಣ ಜನರು - ಮುಖ್ಯವಾಗಿ ಬೇಸಾಯಗಾರರು, ಕೃಕಸುಬುದಾರರು, ಕರಕುಶಲಗಾರರು, ದಲಿತರು, ಬುಡಕಟ್ಟು ಜನಾಂಗದವರು, ಪೇಟೆಯಲ್ಲಿ ಅಸಂಘಟಿತ ಕ್ಷೇತ್ರಗಳಲ್ಲಿ ದಯನೀಯ ಪರಿಸ್ಥಿತಿಯಲ್ಲಿ ದುಡಿಯುತ್ತಿರುವ ಕಾರ್ಮಿಕರು ಮತ್ತು ಇವರ ಜೊತೆ ಮಹಿಳೆಯರೂ ಸೇರಿ ಈ ದೇಶದ ಬಹುಸಂಖ್ಯಾತ ಜನರು "ಬಡ ಭಾರತ" ದಲ್ಲಿ ತೀರ ಸಂಕಷ್ಟದಲ್ಲಿ ಬದುಕುತ್ತಿದ್ದರೆ, ನಗರ ವಾಸಿಗಳು, ಆಧುನಿಕ ಔಪಚಾರಿಕ (formal) ಶಿಕ್ಷಣ ಪಡೆದವರು, ಮೇಲ್ವರ್ಗದ ಬಲಿಷ್ಠರು, ಮುಖ್ಯವಾಗಿ ಆಧುನಿಕ ಪ್ರಗತಿ "ಮಾಡೆಲ್"ನ ಕೇಂದ್ರಸ್ಥಾನದಲ್ಲಿರುವ ಯಂತ್ರ ಮಾಲಿಕರು, ಕೈಗಾರಿಕಾ ಪ್ರಭುಗಳು, ಮ್ಯಾನೇಜ್‌ಮೆಂಟ್ ದೊರೆಗಳು, ಕಂಪ್ಯೂಟರ್ ಕೂಲಿಗಳೇ ಮುಂತಾದ ೨೦ ಶೇಕಡಾ ಜನ ಶ್ರೀಮಂತ "ಇಂಗ್ಲೀಷು ಇಂಡಿಯಾ"ದಲ್ಲಿ ಬದುಕುತ್ತಿದ್ದಾರೆ. ಭಾರತದೊಳಗೇ ಇಂದು ಈ ಎರಡು ಸಮುದಾಯಗಳು ಪ್ರತ್ಯಪ್ರತ್ಯೇಕ ನಾಗರಿಕತೆಗಳಾಗಿಯೇ ದ್ವೀಪಗಳಂತೆ ಬೆಳೆಯುತ್ತ, ನಾಗರೀಕತೆಗಳ ಸಂಘರ್ಷಕ್ಕೆ ಎಡೆಮಾಡಿ ಕೊಡುತ್ತಿದೆ. ಇದರೊಟ್ಟಿಗೇ ನಾಗರಿಕರು (ಸಿಟಿಜನ್ಸ್) ಮತ್ತು ನೆಟ್ ಗ್ರಾಹಕರು (ನೆಟಿಜನ್ಸ್) ಎಂಬ ಎರಡು ಸ್ಪಷ್ಟ ವರ್ಗಗಳಾಗಿ ಸಮಾಜವು ವಿಭಜನೆಗೊಳ್ಳುತ್ತಾ ಸಾಮಾನ್ಯ ನಾಗರಿಕರು ಆಧುನಿಕ ಅಭಿವೃದ್ಧಿಯ ಪರಿಧಿಗೆ ತಳ್ಳಲ್ಪಡುತ್ತಿದ್ದಾರೆ; ಮತ್ತು ಅಲ್ಪಸಂಖ್ಯಾಕರಾದ "ನೆಟಿಜನ್ಸ್" ಅಭಿವೃದ್ಧಿ ವರ್ತುಲದ ಕೇಂದ್ರ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ.

**ಯಂತ್ರ ಸಂಸ್ಕೃತಿ ವಿಭಜನೆಯ ಮೂಲ :**

ಜನಸಂಪದ್ಭರಿತವಾದ ನಮ್ಮ ವಿಶಾಲ ದೇಶದ ಅಭಿವೃದ್ಧಿ ಮಾನದಂಡಗಳು, ಮೊದಲ ಹಂತದಲ್ಲಿ ಬಹುಜನರ ಆರ್ಥಿಕ ಹಿತಕ್ಕೆ ಪೂರಕವಾದ ವೈವಿಧ್ಯಮಯ ಗ್ರಾಮೀಣ ಕಸುಬು, ಉಪಕಸುಬುಗಳು, ವಿಕೇಂದ್ರೀಕೃತ ಸಂಪನ್ಮೂಲಗಳು ಮತ್ತು ಪಟ್ಟಣಗಳ ಅಸಂಖ್ಯ ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುವ ಕಾರ್ಮಿಕರ ಏಳಿಗೆಯಾಗಿರಬೇಕು. ಆದರೆ ವಿಪರ್ಯಾಸವೆಂದರೆ, ಬಹುಜನ ಕಲ್ಯಾಣದ "ಏಜೆಂಡಾ" ವೇ ಇಂದು ನಮ್ಮ ಪ್ರಧಾನ ಅಭಿವೃದ್ಧಿ ವ್ಯಾಖ್ಯೆಯಿಂದ ಮಾಯವಾಗುತ್ತಿದೆ. ಸೆಲ್‌ಫೋನ್, ಕಾರು ಮಾಡೆಲ್, ಟಿ.ವಿ. ಚಾನೆಲ್ ಟೆಲಿಫೋನ್ ಮೊದಲಾದ ಇಲೆಕ್ಟ್ರಾನಿಕ್ ಸಂವಹನ ಸೌಕರ್ಯಗಳು, ಕಂಪ್ಯೂಟರ್ ಜಾಲಗಳು, 'ಬಾಡಿ ಶಾಪಿಂಗ್' - 'ಔಟ್ ಸೋರ್ಸಿಂಗ್', ಅಣುಬಾಂಬು, ಭಾರೀ ಕೈಗಾರಿಕೆ, ಮಿಲಿಟರಿ ಯುದ್ಧ ಸನ್ನದ್ಧತೆ ಮುಂತಾದುವು ನಮ್ಮ ಪ್ರಗತಿಯ ಹೆಮ್ಮೆಯ ಸಂಕೇತಗಳಾಗಿವೆ.

'ಭಾರತದ ನಾಗರಿಕತೆ, ಗ್ರಾಮೀಣ ನಾಗರಿಕತೆ. ಗ್ರಾಮಗಳನ್ನು ಕಡೆಗಣಿಸಿದ ದಿನ, ಭಾರತದ ಸಂಸ್ಕೃತಿ-ಸಮಾಜಗಳು ಛಿದ್ರಗೊಳ್ಳುತ್ತವೆ' ಎಂದು ಗಾಂಧೀಜಿ ನುಡಿದಿದ್ದರು. ಒಬ್ಬ ಅರ್ಥಶಾಸ್ತ್ರಜ್ಞನಾಗಿ ನಾನು, ಆವಶ್ಯಕ ಕೈಗಾರಿಕೆಗಳು ಬೇಕು ಎನ್ನುವಾಗಲೂ ಕೂಡಾ - ಗಾಂಧೀಜಿಯ ಈ ಮಾತನ್ನು ಪ್ರಬಲವಾಗಿ ಸಮರ್ಥಿಸುತ್ತೇನೆ. ಜನಬಾಹುಳ್ಯವಿರುವ ಈ ದೇಶದಲ್ಲಿ ಒಟ್ಟಾರೆ ಯಂತ್ರಗಳ ಬಳಕೆ, ಮನುಷ್ಯನನ್ನು ಹೆಚ್ಚು ಹೆಚ್ಚು ನಿರುದ್ಯೋಗಿಯನ್ನಾಗಿ, ನಿರಾಶ್ರಿತನನ್ನಾಗಿ ಪರಿವರ್ತಿಸುತ್ತದೆ. ಯಂತ್ರಗಳನ್ನು ವಿವೇಚನೆಯಿಂದ ಬರಮಾಡಿ ಕೊಳ್ಳದಿದ್ದರೆ ಅವು ಸಮಾಜವನ್ನು ವಿಭಜಿಸುವ ಪ್ರಬಲ ಶಸ್ತ್ರವಾಗಿ ಬಿಡುತ್ತವೆ. ಯಂತ್ರದಲ್ಲಿ ಕೆಲಸ ಮಾಡುವವರು ಮತ್ತು ಮಾಡದಿರುವವರು, ಯಂತ್ರದೊಡನೆ, ಧನಾತ್ಮಕ, ಲಾಭದಾಯಕ ಸಂಬಂಧ ಹೊಂದಿರುವವರು ಮತ್ತು ಯಂತ್ರದಿಂದಲೇ ಋಣಾತ್ಮಕವಾಗಿ ಸಮಸ್ತವನ್ನು ಕಳಕೊಳ್ಳುವವರು ಎಂಬ ಎರಡು ಪ್ರಬಲ ಸಾಮಾಜಿಕ ಘಟಕಗಳೇ ನಿರ್ಮಾಣವಾಗುತ್ತದೆ. ಬಂಡವಾಳಶಾಹಿಗಳ ಕೈಯಲ್ಲೇ ಈ ಯಂತ್ರಗಳ ಒಡೆತನವಿದ್ದು, ಅದು ಹೇಗೆ ಶೋಷಣೆಯ ಪ್ರಬಲ ಅಸ್ತ್ರವಾಗಿ ಬಹುಸಂಖ್ಯೆಯಲ್ಲಿ ಜನರನ್ನು ದಾರಿದ್ರ್ಯದ ಕೂಪಕ್ಕೆ ತಳ್ಳುತ್ತದೆ ಎಂಬುದನ್ನು ನಾವು ದಿನದಿನವೂ ನೋಡುತ್ತಲಿದ್ದೇವೆ. ಇದರಿಂದಾಗಿಯೇ ಉಳ್ಳವರ ಮತ್ತು ಇಲ್ಲದವರ ನಡುವಿನ ಕಂದಕ ೧೯೬೦ ರಲ್ಲಿ ೧:೩೦ ಇದ್ದದ್ದು, ೧೯೯೦ಕ್ಕೆ ೧:೬೦ಕ್ಕೇರಿ, ಜಾಗತೀಕರಣೋತ್ತರ ಯುಗದಲ್ಲಿ (೧೯೯೭) ೧:೭೪ಕ್ಕೆ ತಲುಪಿದೆ. ಇನ್ನೂ ಕತ್ತಲ ಲೋಕದಲ್ಲೇ ಬದುಕುತ್ತ ಮಾತಾಡಲೂ ಸ್ವಾತಂತ್ರ್ಯವಿಲ್ಲದ ಅಸಂಖ್ಯ ಜನರು ಸ್ವಾತಂತ್ರ್ಯವೆಂಬ ಪದವನ್ನು ಯಾವ ರೀತಿ ವ್ಯಾಖ್ಯಾನಿಸುತ್ತಾರೆ ಎಂಬುದನ್ನು ನಾವೊಮ್ಮೆ ವ್ಯವಧಾನದಿಂದ ಕೇಳಿಸಿಕೊಳ್ಳಬೇಕು.

**ಕ್ರೌರ್ಯದ ವಿಕಾರ ಮುಖವೇ ಜಾಗತೀಕರಣ :**

ಇಂಥ ವ್ಯವಸ್ಥೆಯ ಅಂತರ್ಯದಲ್ಲಿರುವ ಹಿಂಸೆ, ಕ್ರೌರ್ಯ, ದಬ್ಬಾಳಿಕೆಗಳ ಅತ್ಯಂತ ವಿಕಾರ ಮುಖವೇ ಜಾಗತೀಕರಣ. ಇರುವ ಒಂದೇ ಭೂಮಿಯ ಸಾಂತ ಸಂಪನ್ಮೂಲಗಳು ರಾವಿನ ಗ್ರಾಹಕ ಸಂಸ್ಕೃತಿಯ ಹಸಿವನ್ನು ತಣಿಸಲು ಸಾಲದಾಗ, ಇಂದಿನ ಅಭಿವೃದ್ಧಿ ವ್ಯವಸ್ಥೆಯ ಬಲಿಷ್ಠ

ಫಲಾನುಭವಿಗಳು, ತಮ್ಮ ಸುಖದ ನಿರಂತರ ಭದ್ರತೆಗಾಗಿ ಈಗಿರುವ ವ್ಯವಸ್ಥೆಯನ್ನು ವಿಶ್ವವ್ಯಾಪಾರದ ಹೆಸರಲ್ಲಿ ದಬ್ಬಾಳಿಕೆಯ ಮೂಲಕ ಇನ್ನಷ್ಟು ಕಿರಿದುಗೊಳಿಸಲು ಮಾಡಿಕೊಂಡ ಸೂಕ್ಷ್ಮ ವ್ಯವಸ್ಥೆಯೇ ಈ ಜಾಗತೀಕರಣವಾಗಿದೆ. ಕೃಷಿಯ ಕೆಳಪಯಣದಿಂದಾಗಿ ಇತ್ತೀಚೆಗೆ ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳು, ೧೯೯೫ ರಿಂದ ಮುಚ್ಚುಗಡೆಯಾದ ೩,೭೫,೦೦೦ಕ್ಕೂ ಮಿಕ್ಕಿದ ಸಣ್ಣ ಮತ್ತು ಮಧ್ಯಮ ಮಟ್ಟದ ಕೈಗಾರಿಕೆಗಳು, ದೇಶದ ಒಟ್ಟು ಉದ್ಯೋಗಗಳಲ್ಲಿ ಶೇಕಡಾ ೯೦ಕ್ಕಿಂತಲೂ ಹೆಚ್ಚು ಉದ್ಯೋಗ ಸೃಷ್ಟಿಗೆ ಕಾರಣವಾಗಿರುವ ಅಸಂಘಟಿತ ಹಾಗೂ ವಿಕೇಂದ್ರೀಕೃತ ಆರ್ಥಿಕ ಕ್ಷೇತ್ರಗಳ ತೀವ್ರ ದುರವಸ್ಥೆ, ಕಾಲದೇಶಗಳೆರಡರಲ್ಲೂ ಹೆಚ್ಚುತ್ತಿರುವ ದಲಿತರ, ಬುಡಗಟ್ಟು ಜನಾಂಗಗಳ ಶೋಷಣೆ, ಇದ್ದ ಚೂರು ಚೂರು ಕೈಗಾರಿಕಾ ಕ್ಷೇತ್ರವೂ ಎದುರಿಸುತ್ತಿರುವ ತೀವ್ರ ಬಿಕ್ಕಟ್ಟಿನಿಂದಾಗಿ ಬೀದಿ ಪಾಲಾಗುತ್ತಿರುವ ಅಸಂಖ್ಯ ಕಾರ್ಮಿಕರು - ಇವೆಲ್ಲವೂ ಜಾಗತೀಕರಣವನ್ನು ಸೈದ್ಧಾಂತಿಕವಾಗಿ ಹಾಡಿ ಹೊಗಳುವ ಸಂಕೀರ್ತನಕಾರರ ಮುಖಕ್ಕೆ ಹಿಡಿದ ವಾಸ್ತವದ ಕೈಗನ್ನಡಿ. ಇದರ ಜೊತೆ, ಸಾಮಾಜಿಕ ದರ್ಶನ ಮತ್ತು ಗ್ರಾಮೀಣ ಸ್ಮೃತಿಯನ್ನೇ ಕಳಕೊಂಡು ಕೇವಲ ನಗರ ಸಂಸ್ಕೃತಿಗೆ ತುತ್ತಾದ ಸಂಕುಚಿತ ದೃಷ್ಟಿಯ ರಾಜಕಾರಣಿಗಳು, ರಾಜಕೀಯ ಹಾಗೂ ಸರಕಾರೀ ವ್ಯವಸ್ಥೆ, ಬಲಪಂಥೀಯವಾಗಿ ಸಾಗಲು ಆರಂಭಿಸಿರುವ ನಮ್ಮ ನ್ಯಾಯಾಂಗ, ಹಾಗೂ ಮಾಧ್ಯಮಗಳು, ರಾಕ್ಷಸ ದಕ್ಷತೆಯ ಹೆಸರಲ್ಲಿ ಖಾಸಗೀಕರಣಗೊಳ್ಳುತ್ತಿರುವ ಮೂಲಭೂತ ಆವಶ್ಯಕತೆಗಳಾದ ನೀರು, ಶಿಕ್ಷಣ, ಆರೋಗ್ಯ ಕ್ಷೇತ್ರಗಳು - ಇವೆಲ್ಲವೂ ಒಂದು ಸಮುದಾಯವನ್ನು ಆವರಿಸುತ್ತಿರುವ ಅನಾರೋಗ್ಯ ಹಾಗೂ ಅನಾಗರಿಕತೆಯ ಲಕ್ಷಣಗಳು.

**"ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ"ಯ ಅವಸಾನ :**

ಜಾಗತೀಕರಣದ ಒತ್ತಡಕ್ಕೆ ಮಣಿದು ಸರಕಾರಗಳು ಸಂವಿಧಾನದಲ್ಲಿ "ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ" ಯಲ್ಲಿ ಸೂಚಿಸಿರುವ ಸಮಸುಖೀ ರಾಜ್ಯಕಟ್ಟುವ ಸಾಮಾಜಿಕ ಜವಾಬ್ದಾರಿಯನ್ನೇ ಬಿಟ್ಟುಕೊಟ್ಟು, ಸಮಾಜದಲ್ಲಿ ದ್ವೀಪದಂತಿರುವ ಶ್ರೀಮಂತ ಲೋಕಕ್ಕೆ ಸಾಮಾನ್ಯ ಪ್ರಜಾವರ್ಗವನ್ನು ಅಡಿಯಾಳಾಗಿಸಲಿಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವ ಆಡಳಿತಕ್ಕಷ್ಟೇ ಸೀಮಿತವಾಗುತ್ತಿದೆ. ಬದುಕಿನ ಕನಿಷ್ಠ ಸೌಲಭ್ಯಗಳಾದ ಆಹಾರ ಭದ್ರತೆ, ಹಸಿವಿನಿಂದ ರಕ್ಷಣೆ, ಸಾರ್ವತ್ರಿಕ ಆರೋಗ್ಯ, ಶಿಕ್ಷಣ ಸೌಲಭ್ಯ ಮುಂತಾದುವುಗಳ ಪೂರೈಕೆಯ ತನ್ನ ಮೂಲಭೂತ ಜವಾಬ್ದಾರಿಗಳನ್ನೂ ಬಿಟ್ಟುಕೊಟ್ಟು ಜನರ ಬದುಕುವ ಹಕ್ಕನ್ನೇ ಸೂಕ್ಷ್ಮವಾಗಿ ನಿರಾಕರಿಸುವ ಸರಕಾರಗಳ ವಿಧಿ-ವಿಧಾನಗಳನ್ನು ಗಮನಿಸಿದರೆ, ಪ್ರಜಾಪ್ರಭುತ್ವವು ಪ್ರಜೆಗಳ ರಾಜಕೀಯ, ಸಾಮಾಜಿಕ ಬಲಿಷ್ಠೀಕರಣ, ಸಮಸ್ಯೆ, ಸಾಮಾಜಿಕ ನ್ಯಾಯ ಪ್ರಕ್ರಿಯೆಯಾಗಿ ಸಂಪೂರ್ಣ ಸೋಲುತ್ತಿರುವುದು ವ್ಯಕ್ತವಾಗದಿರದು. ಹಾಗಾಗಿಯೇ, ಸಾಮಾಜಿಕ ವಿಸ್ಮೃತಿ ಕವಿದ ಸರಕಾರ, ಸಾಮಾಜಿಕ ನ್ಯಾಯ ಸಮತೆಗೆ ಪೂರಕವಾದ ಮೀಸಲಾತಿ ಸೌಲಭ್ಯವಿರುವ ಸರಕಾರೀ ಸಂಸ್ಥೆಗಳನ್ನು, ಕಂಪೆನಿಗಳನ್ನು, ಖಾಸಗೀ ಕ್ಷೇತ್ರಗಳಿಗೆ ಮಾರುವ ವ್ಯಾಪಾರದಲ್ಲಿ ತೊಡಗಿದೆ. ಶಿಕ್ಷಣ ಕ್ಷೇತ್ರವನ್ನೂ ಖಾಸಗೀಕರಣಗೊಳಿಸುತ್ತಿದೆ. ಇದರ ಪರಿಣಾಮವಾಗಿ ಇನ್ನು ಮುಂದೆ ಶಿಕ್ಷಣವೂ ವ್ಯಾಪಾರದ ಸರಕಾಗಿ, ಪ್ರಾಯಃ ಈ ದೇಶದ ಮುಕ್ಕಾಲು ಪಾಲು ಮಕ್ಕಳು, ಮುಖ್ಯವಾಗಿ ಹೆಣ್ಣುಮಕ್ಕಳು, ಶಿಕ್ಷಣದಿಂದಲೇ ವಂಚಿತರಾಗುವ ಅಪಾಯವಿದೆ. ಇನ್ನೂ ಕೂಡ ೮೦ ಶೇಕಡಾ ಜನರು ಸರಕಾರೀ

ವೈದ್ಯಕೀಯ ಸೌಲಭ್ಯವನ್ನೇ ಅವಲಂಬಿಸಿದ್ದಾರೆ. ೯೦ಕ್ಕೂ ಅಧಿಕ ಹೆರಿಗೆಗಳು ಸರಕಾರೀ ಆಸ್ಪತ್ರೆಗಳಲ್ಲಿ ಅಥವಾ ಸಾಂಪ್ರದಾಯಿಕ ದಾದಿಗಳ ಮೂಲಕ ನಡೆಯುತ್ತಿವೆ. ವೈದ್ಯಕೀಯ ಕ್ಷೇತ್ರವನ್ನು ಖಾಸಗಿಗಳಿಗೆ ಬಿಟ್ಟುಕೊಟ್ಟಾಗ, ಸಾಮಾನ್ಯ ಪ್ರಜೆಗಳ ಅವಸ್ಥೆ ಏನಾದೀತು ? ಇಂಥ ದುಸ್ಥಿತಿಯಲ್ಲೂ ನಾವಿಂದು ಭಾರತವು ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲಿ ಒಂದಾಗುತ್ತಿದೆ ಎನ್ನುವುದು, ಸಾಮಾಜಿಕ ಸಂವೇದನೆಯನ್ನೇ ಕಳಕೊಂಡು ನಮ್ಮ ಮಧ್ಯಮ ವರ್ಗದ ಜನರು ಜೊಲ್ಲು ಸುರಿಸುವ ಬಾಂಬು, ಕಾರು, ಸೆಲ್‌ಫೋನ್, ಕಂಪ್ಯೂಟರ್‌ಗಳನ್ನೇ ಪ್ರಗತಿಯ ಹೆಸರಲ್ಲಿ ಮಾರುಕಟ್ಟೆಗೆ ಹರಿಸುವ ಆಳವೇ ಇಲ್ಲದ ಕ್ಯಾಲೆಂಡರ್ ಪೈಂಟಿಂಗ್‌ನ ತಳಕುಪಳಕು ತೆಳು ಬಣ್ಣಗಳನ್ನು ಕಂಡು.

ಈ ದೇಶ ನಿಜಕ್ಕೂ ಬಲಿಷ್ಠವಾಗಬೇಕಾದರೆ ಗಾಂಧೀಜಿಯೆನ್ನುವಂತೆ ನಮ್ಮೆಲ್ಲ ಪ್ರಗತಿ ಯೋಜನೆಗಳೂ ಆತ್ಯಂತಿಕವಾಗಿ ಈ ದೇಶದ ಕಟ್ಟಕಡೆಯ ದರಿದ್ರನ ಮುಖದಲ್ಲಿ ಉಲ್ಲಾಸದ ನಗೆ ಮೂಡಿಸಬೇಕು. ನೂರೈದು ಕೋಟಿ ಜನರೂ ಬಲಿಷ್ಠರಾದಾಗ ಮಾತ್ರ ಈ ರಾಷ್ಟ್ರ ಬಲಿಷ್ಠವಾದೀತೇ ಹೊರತು ಬಾಹ್ಯಾಕಾಶ ಕ್ಷಿಪಣಿಗಳ ಹಾರಾಟ, ಅಣುಬಾಂಬು, ಶಸ್ತ್ರಾಸ್ತ್ರಗಳ ದಾಸ್ತಾನದಿಂದಲ್ಲ. ಈ ದೇಶದ ಬೇಸಾಯಗಾರರು, ಕರಕುಶಲಗಾರರು, ಗುಡಿಕಾರರು, ಬೆಸ್ತರು, ಗೋಸಾಯಿಗಳು, ಬಡಗಿ, ಚಮ್ಮಾರ, ಕುಂಬಾರರೇ ಮೊದಲಾದ ವೈವಿಧ್ಯಮಯ ಕಸುಬು - ಉಪಕಸುಬುಗಳನ್ನು ಮಾಡುತ್ತ ಬದುಕುತ್ತಿರುವ ಕೋಟ್ಯಂತರ ಮಂದಿ ಶ್ರಮಿಕರು ತಮ್ಮ ಪರಂಪರಾಗತ ಅನುಭವಜನ್ಯ ಜ್ಞಾನ ಸಂಪನ್ಮೂಲಗಳಾದ ಲೋಕವಿದ್ಯೆಯ ಬಲದಿಂದಲೇ ಶತಶತಮಾನಗಳಿಂದ ಬಾಳು ಸಾಗಿಸುತ್ತ ಬಂದವರು. ಈ ಅಸಂಖ್ಯ ಜನಸಾಮಾನ್ಯರ ದೈನಂದಿನ ಬದುಕಿನ ಶ್ರೀಮಂತ ದೇಶೀ ತಿಳುವಳಿಕೆಯನ್ನು ಕಡೆಗಣಿಸುವ ಯಾವುದೇ ಪ್ರಗತಿ ಸಿದ್ಧಾಂತ ಆತ್ಯಂತಿಕವಾಗಿ ಗಾಂಧೀಜಿಯ ಕಲ್ಪನೆಯ ಸಮಸುಖೀ ರಾಮರಾಜ್ಯವನ್ನು ಕಟ್ಟುವಲ್ಲಿ ಸೋಲುವುದಂತೂ ಖಂಡಿತ.

**ಪ್ರಜಾಪ್ರಭುತ್ವದ ಸೋಲು :**

ಇಷ್ಟಿದ್ದೂ, ನಮ್ಮ ಭವ್ಯ ಭಾರತದಲ್ಲಿ ಮಂದಿರ, ಚರ್ಚು, ಮಠ, ಮಸೀದಿ ಮೊದಲಾದ ಭಾವನಾತ್ಮಕ ವಿಚಾರಗಳ ಬಗ್ಗೆ ಚರ್ಚೆಯಾಗುವ ಒಂದಂಶದಷ್ಟೂ ಸಮಯ, ಈ ದೇಶದ ೭೫ ಕೋಟಿ ಜನರ ಬದುಕನ್ನು ನೇರವಾಗಿ ತಟ್ಟುವ ಆರ್ಥಿಕ-ಸಾಮಾಜಿಕ ನೀತಿಗಳ ಬಗ್ಗೆ ಚರ್ಚೆ ನಡೆಯದಿರುವುದು ಅತ್ಯಂತ ದುರದೃಷ್ಟಕರ ಸಂಗತಿ. ನೂರಾರು ರೈತರು ಬದುಕಿನ ಸಂಕಷ್ಟತಾಳಲಾರದೆ ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ, ಈ ಕಳವಳಕಾರೀ ಘಟನೆಯ ಬಗ್ಗೆ ಯಾವ ರಾಜ್ಯಸಭೆಗಳಲ್ಲಾಗಲೀ, ಲೋಕಸಭೆಯಲ್ಲಾಗಲೀ ಗಂಭೀರವಾದ ಚಿಂತನೆಯೇ ನಡೆಯಲಿಲ್ಲ. ೨೧ನೆಯ ಶತಮಾನದ ಪ್ರಗತಿ ಸಿದ್ಧಾಂತದ ಬಗ್ಗೆ ಮಾತಿನ ಉಗುಳು ನುಂಗುವ ಮಂದಿಗೆ ಕಳೆದ ೫೫ ವರ್ಷಗಳಲ್ಲಿ ನಡೆದ ಯಾವುದೇ ಅತಿಘೋಷಿತ ಯೋಜನಾ ಫಲಗಳೂ ರೈತಾಪಿ ವರ್ಗವನ್ನು ಪರಿಣಾಮಕಾರಿಯಾಗಿ ತಲುಪದೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಏಕೆ ನಿರ್ಮಾಣ ವಾಯಿತು ಎಂಬುದು ನಮ್ಮ ಚರ್ಚಾ ಪ್ರಧಾನವಾಹಿನಿಯಲ್ಲಿ ಪ್ರಮುಖ 'ಏಜೆಂಡಾ' ಆಗದಿರುವುದು ನಮ್ಮ ಸಾಮಾಜಿಕ ದುರಂತವೆನ್ನದೆ ವಿಧಿಯಿಲ್ಲ.

**ಗಾಳಿ ತಿಂದು ಬದುಕಲು ಕಲಿಸುವ ಮೌಲ್ಯಾತೀತ ಆರ್ಥಿಕ ನೀತಿ :**

ಬಸಿರಿಗೆ ಅನ್ನ ಕೊಡುವ ಕೃಷಿಕ್ಷೇತ್ರ, ಆರಂಭದ ಹಂತದಲ್ಲಿ ಕೈಗಾರಿಕಾ ಆರ್ಥಿಕ ನೀತಿಯಿಂದ ನಗಣ್ಯವಾಯಿತು. ಇಂದು ಪ್ರಮುಖ ಉತ್ಪಾದನಾ ಕ್ಷೇತ್ರವಾದ ಕೈಗಾರಿಕಾ ಅರ್ಥನೀತಿಯೂ ಅವಗಣನೆಗೆ ತುತ್ತಾಗುತ್ತಾ, ಉತ್ಪಾದನೆಯೇ ಮಾಡದ ಕೇವಲ ಮಾಹಿತಿ ಉತ್ಪಾದಿಸುವ ಸಂವಹನಾ ಕ್ಷೇತ್ರ ಸಾರ್ವತ್ರಿಕವಾಗುತ್ತಿದೆ. ಉತ್ಪಾದನೆಯೇ ಮಾಡದೆ ಕೇವಲ ಗಾಳಿ ತಿಂದು ಬದುಕುಬಹುದೆಂಬ ಆಧುನಿಕ ಮಾನವನ ಭ್ರಮೆ, ಆತನ ಮೂರ್ಖತನವನ್ನಷ್ಟೇ ಪ್ರದರ್ಶಿಸುತ್ತಿದೆ. ಇಲ್ಲದಿದ್ದರೆ ಇಂದು ಒಬ್ಬ ಅಣುವಿಜ್ಞಾನಿ ಭಾರತದ ಶ್ರೇಷ್ಠ ಮೇಧಾವಿ ಎಂದು ಹೊಗಳಿಸಿಕೊಳ್ಳುವುದು, ಇನ್ನೊಬ್ಬ ಅಣು ವಿಜ್ಞಾನಿ ರಾಜ್ಯದ ವಿದ್ಯಾಕ್ಷೇತ್ರದ ಸುಧಾರಣೆಯ ಮುಖ್ಯ ಸಲಹೆಗಾರನಾಗುವುದು, ಕಂಪ್ಯೂಟರ್ ದೊರೆಯೊಬ್ಬ ಎಲ್ಲ ಕ್ಷೇತ್ರಗಳ ಸರ್ವಾಂತರ್ಯಾಮಿತ್ವ ಪಡೆದು ಸರಕಾರಕ್ಕೆ ಆರ್ಥಿಕ ಸಲಹೆಗಾರನಾಗಿ ಶಿಕ್ಷಣದ ಖಾಸಗೀಕರಣಕ್ಕೆ ಸಲಹೆ ನೀಡುವುದು, ಒಬ್ಬ ಬೃಹತ್ ಕೈಗಾರಿಕೋದ್ಯಮಿಯ ಮರ್ಜಿಗೆ ತಕ್ಕಂತೆ ಕಳೆದ 20 ವರ್ಷಗಳಿಂದ ಇಡಿಯ ದೇಶದ ಆರ್ಥಿಕ ಯೋಜನೆಗಳು ಸಂರಚನೆಗೊಳ್ಳುವುದು ಸಾಧ್ಯವೇ ? ಇದು ನಮ್ಮ ಬೌದ್ಧಿಕ ದಿವಾಳಿತನವನ್ನು ಸೂಚಿಸುವುದಿಲ್ಲವೇ ? ಒಬ್ಬನೇ ಒಬ್ಬ ಅನುಕಂಪಪೂರಿತ ಚಿಂತಕ, ಸಾಮಾಜಿಕ ದರ್ಶನವಿರುವ ಸಮಾಜಶಾಸ್ತ್ರಜ್ಞ, ರಾಜಕೀಯ ವಿಜ್ಞಾನಿ, ಆರ್ಥಿಕ ವಿದ್ವಾಂಸನಾದ ಯೋಜನಾಕಾರ, ಭಾರತೀಯ ಸಂಸ್ಕೃತಿಯ ಸತ್ವವನ್ನು ಅರಗಿಸಿಕೊಂಡ ಗಾಂಧೀಜಿ, ಜಯಪ್ರಕಾಶ್ ನಾರಾಯಣರಂಥ ಸಂತ ಇವತ್ತು ಭಾರತದ ಪ್ರಮುಖ ಪ್ರಗತಿ ನಿರ್ಧಾರಗಳಲ್ಲಿ ಮಹತ್ತ್ವದ ಸ್ಥಾನ ಪಡೆದಿಲ್ಲ. ಒಂದೋ ಇದು ನಮ್ಮ ಆಡಳಿತಗಾರರ, ರಾಜಕಾರಣಿಗಳ, ನಮ್ಮ ಸುಶಿಕ್ಷಿತ ಜನರ ಮತ್ತು ಅನೇಕ ಸರಕಾರೀ ವಿದ್ವಾಂಸರ ಅಜ್ಞಾನವಿರಬಹುದು ಅಥವಾ ಅವರಿಗೆ ಅವರದೇ ಆದ ''ಹಿಡನ್ ಏಜೆಂಡಾ' ಇರಬಹುದು.

**ಗಾಂಧಿಯ ಸವಾಲು :**

ನನ್ನ ಅನಿಸಿಕೆಯಂತೆ ಏಕರೂಪೀ ಕೇಂದ್ರೀಕೃತ ಪ್ರಭುತ್ವವನ್ನು ಭದ್ರಗೊಳಿಸುವ ಜಾಗತೀಕರಣ ಹಾಗೂ ಅದರ ಜೊತೆಯೇ ಉಲ್ಬಣಿಸುತ್ತಿರುವ ಎಲ್ಲ ರೀತಿಯ ಪ್ರಭುತ್ವದ ದಬ್ಬಾಳಿಕೆಯ ಭಾಷೆ, ಸಂಕೇತ, ಆಕೃತಿ, ಪ್ರಕ್ರಿಯೆಗಳನ್ನು ಎದುರಿಸಲು ಗಾಂಧಿಯತ್ತ ಮರಳುವುದು ಒಂದು ಉತ್ತಮ ಮಾರ್ಗ. ಗಾಂಧಿ ಪ್ರತಿನಿಧಿಸುವ ಮೌಲ್ಯಗಳಾದ ಗ್ರಾಮ ಸ್ವರಾಜ್ಯ, ವಿಕೇಂದ್ರೀಕೃತ ಸ್ಥಳೀಯ ಉತ್ಪನ್ನ ಹಾಗೂ ಮಾರುಕಟ್ಟೆ ಮಾದರಿ ಮತ್ತು ಇದಕ್ಕೆ ಪೂರಕವಾಗಿ ಜನರ ಸಹಭಾಗಿತ್ವದ ಪ್ರಜಾತಾಂತ್ರಿಕ ರಾಜಕೀಯವನ್ನು ಸತ್ವಯುತಗೊಳಿಸುವ ಪ್ರಕ್ರಿಯೆಯೇ ಜಾಗತಿಕ ಮಾರುಕಟ್ಟೆ ವ್ಯವಸ್ಥೆಯ ದಬ್ಬಾಳಿಕೆಗೆ ಪ್ರಬಲ ಸವಾಲಾಗಬಲ್ಲುದು. ಈ ರಾಜಕೀಯ ಮಾರ್ಗದಲ್ಲಿ ಅನೇಕ ಎಡರುತೊಡರುಗಳಿದ್ದರೂ ಕೂಡ, ಇದಕ್ಕಿಂತ ಉತ್ತಮ ಮಾರ್ಗ ನಮ್ಮ ಮುಂದಿಲ್ಲ.

ಒಂದು ಸಫಲ ಜನತಾಂತ್ರಿಕ ವ್ಯವಸ್ಥೆಯಲ್ಲಿ ಮಾತ್ರ ಜನರು ತಮ್ಮ ಏಳಿಗೆಗೆ ಅಗತ್ಯವಾದ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳಲು ಸಾಧ್ಯ. ಇಂಥ ಸಫಲ ಗಣತಂತ್ರ ವ್ಯವಸ್ಥೆಯಲ್ಲಿ ಮಾತ್ರ ಗಾಂಧೀಜಿಯ ತಳಮಟ್ಟದ ಸ್ವರಾಜ್ಯ ಕಲ್ಪನೆ ಫಲಿಸುತ್ತದೆ. ಆದರೆ ಜನತಾಂತ್ರಿಕ ರಾಜಕೀಯದ ಆಶಯ ಮತ್ತು ಮಾರುಕಟ್ಟೆ ಆಶಯಗಳು ಪರಸ್ಪರ ವಿರುದ್ಧ ಗತಿಯಲ್ಲಿ ಸಾಗುತ್ತಿರುತ್ತವೆ. ಜನರ ಸಾಮೂಹಿಕ ನಿರ್ಧಾರಗಳ ನೆಲೆ ತಳಮಟ್ಟದಲ್ಲಿ, ಪ್ರಾದೇಶಿಕ ಸಮುದಾಯಗಳಲ್ಲಿದ್ದರೆ ಮಾತ್ರ

ಜನತಂತ್ರದ ಸಮಾನತೆ, ಸಾಮಾಜಿಕ ನ್ಯಾಯದ ಆಶಯ ಸತ್ವಶಾಲಿಯಾಗುತ್ತದೆ. ಈ ನಿರ್ಧಾರದ ಮಟ್ಟ, ಜಿಲ್ಲೆ, ರಾಜ್ಯ, ಕೇಂದ್ರ ಮಟ್ಟಕ್ಕೆ ಕೇಂದ್ರೀಕೃತಗೊಂಡಂತೆ, ಜನರ ಸಹಭಾಗಿತ್ವ, ಅರ್ಥಹೀನವಾಗುತ್ತದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ, ಜಾಗತಿಕ ಮಾರುಕಟ್ಟೆಗೆ ತಳಮಟ್ಟದಲ್ಲಿ ಲಾಭ ಗಳಿಕೆಯ ಸಾಮರ್ಥ್ಯ, ನಿಯಂತ್ರಣ ಕಡಿಮೆಯಿದ್ದು, ರಾಜ್ಯ ರಾಷ್ಟ್ರಮಟ್ಟಕ್ಕೆ ಕೇಂದ್ರೀಕೃತಗೊಂಡಾಗ ಲಾಭ ಗಳಿಸುವ ಶಕ್ತಿ ರಾಕ್ಷಸೀಯವಾಗಿ ಹೆಚ್ಚಾಗುತ್ತದೆ. ತಳಮಟ್ಟದಲ್ಲಿ, ಪ್ರತೀ ಪಂಚಾಯತುಗಳ ಸ್ಥಳೀಯ ಮಾರುಕಟ್ಟೆಯ ಜೊತೆ ಜಾಗತಿಕ ಮಾರುಕಟ್ಟೆಗೆ ಸಂಧಾನ ಮಾಡುವ ಚೈತನ್ಯವೇ ಇಲ್ಲ, ಮಾತ್ರವಲ್ಲ ಅದು ಲಾಭದಾಯಕವೂ ಅಲ್ಲ. ಅದು ಏನಿದ್ದರೂ ರಾಷ್ಟ್ರೀಯ ಸರಕಾರಗಳ ಜೊತೆ ವ್ಯವಹರಿಸುತ್ತಾ, ತನಗೆ ಬೇಕಾದ ರೀತಿಯ ವ್ಯಾಪಾರ ನಿಯಮಗಳನ್ನು ರೂಪಿಸುವಂತೆ ಪ್ರಭಾವ ಬೀರಬಲ್ಲದು. (ಈಗಿನ ಪೆಪ್ಸಿ, ಕೋಕಾಕೋಲಾಗಳು, ಭಾರತ ಸರಕಾರದ ಜೊತೆ ವ್ಯವಹರಿಸುವುದನ್ನು ಗಮನಿಸಿ) ಹಾಗಾಗಿಯೇ, ಜಾಗತಿಕ ವ್ಯಾಪಾರೀ ಶಕ್ತಿ ಜನರ ಸಹಭಾಗಿತ್ವದ ವಿರುದ್ಧ ಕೆಲಸ ಮಾಡುತ್ತಿರುತ್ತದೆ. ಕೈಗಾರಿಕಾ ಸಮಾಜದ ಗರ್ಭದಲ್ಲೇ ಸೂಕ್ಷ್ಮವಾಗಿ ಅಡಗಿರುವ ಕೇಂದ್ರೀಕರಣದ ಸೆಳೆತವನ್ನು ತಿಳಿದೇ ಗಾಂಧೀಜಿ, ಗ್ರಾಮ ಸ್ವರಾಜ್ಯದ ವಿಕೇಂದ್ರೀಕರಣಕ್ಕೆ ಅಷ್ಟೊಂದು ಮಹತ್ವ ಕೊಟ್ಟಿರುವುದು.

**ಜಾಗತೀಕರಣಕ್ಕೆ ಸಾಮಾನ್ಯ ಬದುಕಿನ ಉತ್ತರ :**

ಹಾಗಾಗಿ ನಾವು ಗಾಂಧೀಜಿಯ ವಿಕೇಂದ್ರೀಕೃತ ಪ್ರಜಾಪ್ರಭುತ್ವದ ನೆಲೆಗಳನ್ನು ಭದ್ರಗೊಳಿಸುವುದು ಸಮಷ್ಟಿ ಹಿತ, ಸಮಾನತೆಯ ಅಭಿವೃದ್ಧಿಯ ನಮ್ಮ ಆದರ್ಶಗಳಿಗೆ ಅನಿವಾರ್ಯ. ಇಂಥ ರಾಜಕೀಯದಲ್ಲಿ ಸರಕಾರಗಳ ಕ್ರಿಯಾತ್ಮಕ ಪಾತ್ರ ಬಹಳ ಅವಶ್ಯವಾಗಿದೆ. ಜನತಾಂತ್ರಿಕ ಪ್ರಜಾಪ್ರಭುತ್ವ ಸರಕಾರಗಳು ಮಾತ್ರ ಪರಿಣಾಮಕಾರಿಯಾಗಿ ಎಲ್ಲ ವರ್ಗಗಳನ್ನೂ ಒಳಗೊಳ್ಳುವಂತೆ ಸಾಮಾಜಿಕ ಒಳಿತನ್ನು ಸಾಧಿಸುವ ಶಕ್ತಿ ಸಾಧ್ಯತೆಯನ್ನು ಪಡೆದಿದೆಯೆಂದು ನನ್ನ ನಂಬಿಕೆ. ಪ್ರಜಾಪ್ರಭುತ್ವ ರಾಜಕೀಯದಲ್ಲಿ ಕೆಲವು ದೋಷಗಳಿದ್ದರೂ, ಆದರೆ ಸದ್ಯದ ಮಟ್ಟಿಗೆ ಅದಕ್ಕೆ ಪರ್ಯಾಯವಿಲ್ಲ. ಏಕೆಂದರೆ ಈ 'ಸಿಸ್ಟಮ್'ನಲ್ಲಿ ಮಾತ್ರ ಜನಸಾಮಾನ್ಯರಲ್ಲಿ ಹುದುಗಿರುವ ಅಗಾಧ ಅನುಭವಜನ್ಯ ದೇಶೀ ಜ್ಞಾನ ಸಂಪನ್ಮೂಲದ ನಿಜಶಕ್ತಿ ಅರಳಿಕೊಳ್ಳಲು ಸಹಕಾರಿ ಯಾಗಬಲ್ಲುದು.

ಈ ಪ್ರಕ್ರಿಯೆ ಜಾಗತೀಕರಣದ ದಬ್ಬಾಳಿಕೆಯ ಸಂದರ್ಭದಲ್ಲಿ ಅನಿವಾರ್ಯ ಕೂಡ. ಏಕೆಂದರೆ ಸಾಮಾನ್ಯ ಜನರ ದೈನಂದಿನ ಬದುಕಿನ ಸತ್ಯಗಳಲ್ಲೇ ಜಾಗತೀಕರಣದ ವಿದ್ರೋಹೀ ನೆಲೆಗಳು ನಿಜಕ್ಕೂ ಮೂರ್ತವಾಗಿ ಹರಳುಗಟ್ಟಲು ಸಾಧ್ಯ. ಇಂದಿನ ಬಿಕ್ಕಟ್ಟಿನ ಸಂದರ್ಭದಲ್ಲಿ, ಮತ್ತೆ ಮತ್ತೆ ನಾವು ಜನಸಾಮಾನ್ಯರ ದೈನಂದಿನ ಕಾರ್ಯದ ಬದುಕಿನ ಬತ್ತದ ನೆಲೆಗಳನ್ನು ಸಂದರ್ಶಿಸಿ ಅದರಲ್ಲಡಕವಾಗಿರುವ ಅತ್ಯಂತ ಮೂಲಭೂತವಾದ ಬದುಕಿನ ಕ್ರಮದಲ್ಲಿರುವ ಸತ್ಯವನ್ನು ಮರುವಿಮರ್ಶೆಗೊಡ್ಡಬೇಕು.

**ರ್‍ಯಾಡಿಕಲ್ ರಾಜಕೀಯ ಚಿಂತನೆ :**

ಜನಸಮುದಾಯದ ದೈನಂದಿನ ಬದುಕಿನ ಕ್ರಮಗಳು ನಿರಂತರ ಅಭಿವೃದ್ಧಿಗೆ (ಸಸ್ಟೈನೇಬಲ್) ಪೂರಕವಾಗಿದೆ. ಸಾಮಾನ್ಯ ಜನ ಸಮುದಾಯಗಳು, ಸತ್ಯವನ್ನು ತಮ್ಮ ಬದುಕಿನ ಜೀವಶಕ್ತಿಯ ಮೂಲಕವೇ ಸತತವಾಗಿ ಕಟ್ಟುತ್ತಾ, ಮುರಿಯುತ್ತಾ ವರ್ತಮಾನದ ಜೀವಂತಿಕೆಯಲ್ಲೇ ಬದುಕನ್ನು

ರೂಪಿಸುತ್ತಿರುತ್ತವೆ. ಈ ಸಮಾಜಗಳಲ್ಲಿ ಅಡಕವಾಗಿರುವ ಜೀವನದರ್ಶನದಲ್ಲಿ ಶತಮಾನಗಳಿಂದ ದತ್ತವಾಗಿ ಹರಿದು ಬಂದಿರುವ ವೈವಿಧ್ಯಮಯ ಹಾಗೂ ಸಂಚಿತ ಅನುಭವಜನ್ಯ ತಿಳುವಳಿಕೆಯು, ಅಗತ್ಯಗಳಿಗೆ ತಕ್ಕಂತೆ ಹೊಸ ಹೊಸ ತಂತ್ರಜ್ಞಾನೀಯ ಆವಿಷ್ಕಾರಗಳಾಗಿ, ವಿನ್ಯಾಸಗಳಾಗಿ ರೂಪಾಂತರಗೊಳ್ಳುವ ಶಕ್ತಿ ಪಡೆದಿದೆ. ಸಮುದಾಯದ ಈ ರೂಪಾಂತರ ಪ್ರತಿಭೆ ನಿಜಕ್ಕೂ ಒಂದು ದೇಶದ ಮೂಲ ಆಸ್ತಿ. ಈ ಜನಸಾಮಾನ್ಯರ ಪ್ರತಿಭೆ ನಮ್ಮನ್ನು ಬಿಡುಗಡೆಗೊಳಿಸುವಂಥದು. ಇದು ಗಾಂಧೀಜಿಯ ದೃಷ್ಟಿ ಕೂಡ. ಜನಸಮುದಾಯಗಳ ಈ ಜೀವನ ತತ್ತ್ವ ತನ್ನಲ್ಲಡಗಿರುವ ದಿಗ್ಭ್ರಮೆಗೊಳಿಸುವ 'ಅಪರಿಚಿತ' ಹಾಗೂ ಅನಿರೀಕ್ಷಿತ ಬಹುಮುಖೀ ಹತಾರಗಳನ್ನು ವಿಸರ್ಜಿಸುವ ಮೂಲಕ ಏಕಮುಖೀ ಜಾಗತೀಕರಣಕ್ಕಿಂತಲೂ ದೊಡ್ಡ ರಾಕ್ಷಸನನ್ನು ಎದುರಿಸಬಲ್ಲುದು.

ಬೇಸಾಯಗಾರರು, ಕೈಕಸುಬುದಾರರು, ಕರಕುಶಲಗಾರರು, ದಲಿತರು, ಮಹಿಳೆಯರೇ ಮೊದಲಾದ ಈ ದೇಶದ ೭೫ ಅರೆವಾಸಿಗಿಂತಲೂ ಅಧಿಕ ಜನರು ಈ ಅಪ್ರತಿಮ ಸೃಜನಶೀಲ ಪ್ರತಿಭೆಯ ವಾರಿಸುದಾರರು, 'ರ್‍ಯಾಡಿಕಲ್' ಆದ ಚಿಂತನರೂಪಿಗಳು. ಬದಲಾವಣೆಯ ವ್ಯಾಖ್ಯೆ ಇವರಿಂದ ಮಾತ್ರ ಬರೆಯಲು ಸಾಧ್ಯ. ಆದರೆ ಈ ಜನರು ರಾಜಕೀಯ ಪ್ರಕ್ರಿಯೆಯ ಮೂಲಕ ಶಕ್ತಿ ಪಡೆದವರಲ್ಲ. ಈ ಜನರ ಹಾಗೂ ಇವರ ರಾಜಕೀಯೇತರ ಶಕ್ತಿಯನ್ನು ಗಟ್ಟಿಗೊಳಿಸುವುದೇ ಜಾಗತೀಕರಣದ ವಿರದ್ಧ ನಿರ್ಣಾಯಕ ಪ್ರತಿರೋಧದ ಮಾರ್ಗ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಬದಿಗೆ ಸರಿದ ಈ ಜನಾಂಗೀಯ ಮೂಲ ಪ್ರತಿಭೆಗೆ ಸ್ವಾತಂತ್ರ್ಯ ದೊರಕಿದ ಸಂದರ್ಭದಲ್ಲಿ ಗಾಂಧೀಜಿಯ ಆಶಯದಂತೆ, 'ಫಾರ್ಮಲ್' ವಿದ್ಯೆಯ ಸ್ಥಾನಮಾನ ಕೊಟ್ಟು ಬಲಿಷ್ಠೀಕರಿಸಿದರೆ, ಈ ದೇಶದ ನಾಗರೀಕತೆ ಇಂದಿನ ಈ ತೀವ್ರ ಬಿಕ್ಕಟ್ಟಿನ ಸ್ಥಿತಿ ತಲುಪುತ್ತಿರಲಿಲ್ಲ. ದೇಶವನ್ನು ನ್ಯಾಯ -ಸಮತೆಗಳ ಭದ್ರಬುನಾದಿಯ ಮೇಲೆ ಕಟ್ಟಲು ಸಾಮರ್ಥ್ಯವಿರುವ ಈ ಜ್ಞಾನ ಪರಂಪರೆಯನ್ನು ನಮ್ಮೆಲ್ಲ ಅಭಿವೃದ್ಧಿ ವ್ಯಾಖ್ಯೆಗಳ ಕೇಂದ್ರ ಸ್ಥಾನದಲ್ಲಿ ಕೂಡಿಸುವುದು ಹೇಗೆ ? ಗಾಂಧೀಜಿ ತನ್ನ ಚರಕ, ಗುಡಿಕೈಗಾರಿಕೆ, ವಿಕೇಂದ್ರೀಕೃತ ಸ್ಥಳೀಯ ಉತ್ಪಾದನೆ - ಮಾರುಕಟ್ಟೆ ಸಂಕೇತಗಳ ಮೂಲಕ, ತಮ್ಮ ಬದುಕಿನ ಕ್ರಮದ ಮೂಲಕ, ಸತತವಾಗಿ ಈ ಸಂದೇಶವನ್ನು ನೀಡುತ್ತಿದ್ದರು. ಇಂಥ ಜನಸಾಮಾನ್ಯರ ಜ್ಞಾನವನ್ನು ಗಟ್ಟಿಗೊಳಿಸಲು ಇನ್ನಾದರೂ ಆಗಬೇಕಾದ ಮಹತ್ತ್ವದ ಮೊದಲ ಕಾರ್ಯವೆಂದರೆ, ರಾಜಕೀಯೇತರ ಮಾರ್ಗಗಳನ್ನು ಭದ್ರಗೊಳಿಸಿ, ರಾಜಕೀಯವನ್ನೇ ಮೂಲಭೂತವಾಗಿ ಮಾರ್ಪಡಿಸಲು ಪ್ರಯತ್ನಿಸುವುದು. ಆದಕ್ಕಾಗಿ ಗಾಂಧೀಜಿ ಕನಸು ಕಂಡ, ವಿಕೇಂದ್ರೀಕರಣ, ಗ್ರಾಮ ಸ್ವಾಯತ್ತತೆಗಳಿಗಾಗಿ ಜನಸಂಘರ್ಷ, ಚಳುವಳಿಗಳನ್ನು ರೂಪಿಸುವುದು ಸಂಪೂರ್ಣ ವಿಕೇಂದ್ರೀಕೃತ ಸ್ವಾಯತ್ತತೆಗೆ ಪ್ರಯತ್ನಿಸುವುದು.

**ಸ್ಥಳೀಯ ಮಾರುಕಟ್ಟೆ ಕ್ರಾಂತಿ :**

ಚಳವಳಿ ಎಲ್ಲಿಂದ ಆರಂಭವಾಗಬೇಕು ? ಪ್ರಾಯಃ ಸ್ಥಳೀಯ ಮಾರುಕಟ್ಟೆ ವ್ಯವಸ್ಥೆಗಳನ್ನು ಗಟ್ಟಿಗೊಳಿಸುವ ಮೂಲಕ ಕೈಕಸುಬುದಾರರು, ಕೃಷಿಕರು, ಬುಡಗಟ್ಟು ಜನರು, ದಲಿತರು, ಮಹಿಳೆಯರ ಸಂಘಟನೆಗಳು ಪರಸ್ಪರ ಕೈ ಜೋಡಿಸಿ ಒಗ್ಗೂಡಿ ಸ್ಥಳೀಯ ಮಾರುಕಟ್ಟೆಯನ್ನು ಹಿಡಿತದಲ್ಲಿಟ್ಟುಕೊಳ್ಳುವ ಕಾಲ ಪ್ರಾಪ್ತವಾದಾಗ, ಇದು ಜಾಗತಿಕ ಮಾರುಕಟ್ಟೆ ಅರ್ಥವ್ಯವಸ್ಥೆಯ ಮೂಲಕ್ಕೇ ಕೊಡಲಿಯೇಟು ಹಾಕಬಲ್ಲದು. ಸ್ಥಳೀಯ ಮಾರುಕಟ್ಟೆ ಕೇಂದ್ರಗಳ ಸಮಗ್ರ ಜಾಲ,

ಜಾಗತಿಕ ಮಾರುಕಟ್ಟೆ, ವ್ಯವಸ್ಥೆಯನ್ನು ನಿಯಂತ್ರಿಸಬಲ್ಲುದು; ಮಾತ್ರವಲ್ಲ, ರಾಷ್ಟ್ರದ ರಾಜಕೀಯ ಪ್ರಭುತ್ವವನ್ನೂ ನಿಯಂತ್ರಿಸಬಲ್ಲುದು. ಇಲ್ಲೊಂದು ಪ್ರಮುಖ ಬದಲಾವಣೆ ಗಮನಿಸಬೇಕು. ಗಾಂಧೀಜಿಯೆನ್ನುವಂತೆ, ಸ್ಥಳೀಯ ಉತ್ಪಾದನೆ ಮೊದಲಲ್ಲ, ಸ್ಥಳೀಯ ಮಾರುಕಟ್ಟೆಯ ವ್ಯವಸ್ಥೆ ಮೊದಲು. ಏಕೆಂದರೆ ಮಾರುಕಟ್ಟೆಯೇ ಜಾಗತೀಕರಣಗೊಂಡ ಈ ವ್ಯವಸ್ಥೆಯಲ್ಲಿ, ಸ್ಥಳೀಯ ಉತ್ಪಾದನೆ, ತಾನೇ ತಾನಾಗಿ ಗಾಂಧೀಜಿಯ ಕಾಲದಂತೆ, ಪ್ರಬಲ ಸ್ಥಳೀಯ ಮಾರುಕಟ್ಟೆಯನ್ನು ಕಂಡುಕೊಳ್ಳಲಾರದು. ಆದರೆ ಮಾರುಕಟ್ಟೆ ಸ್ಥಳೀಯವಾಗಿ ಭದ್ರವಾದಾಗ, ಕೆಲವೇ ತಿಂಗಳಲ್ಲಿ ಆ ಮಾರುಕಟ್ಟೆಗೆ, ಸ್ಥಳೀಯ ಪ್ರತಿಭೆಗಳ ಅನಂತ ಗರ್ಭದಿಂದ ವೈವಿಧ್ಯಮಯ ಸ್ಥಳೀಯ ಉತ್ಪನ್ನಗಳ, ವಸ್ತುಗಳ ಮಹಾಪೂರವೇ ಹರಿದು ಬರುತ್ತದೆ.

**ಬೌದ್ಧಿಕ ಆದಿಮ ಪ್ರಳಯದ ಅನಿವಾರ್ಯತೆ :**

ಆದರೆ ಈ ಪ್ರಕ್ರಿಯೆಗೆ ಪ್ರಬಲವಾದ ತೊಡಕಿರುವುದು ರಾಜಕೀಯವಾಗಿ ಸಂಘಟಿಸಲ್ಪಟ್ಟಿರುವ ವೈಜ್ಞಾನಿಕ ನೆಲೆಗಟ್ಟಿನ ಆಧುನಿಕ ಶಿಕ್ಷಣದಲ್ಲಿ ಮತ್ತು ನಿರ್ದಿಷ್ಟ ರೀತಿಯಲ್ಲೇ ಸಾಗುತ್ತಿರುವ ನಮ್ಮ ಇಂದಿನ ಬೌದ್ಧಿಕ ಚಿಂತನೆಯ ದಾರಿಯಲ್ಲಿ. ಇದು ಇಂದು ಅಚ್ಚಿನ ಮನೆಯಿಂದ ಹೊರಬಂದಂತೆ ಏಕರೂಪಿಯಾಗಿದೆ. ಪಾಶ್ಚಾತ್ಯ ಅಭಿವೃದ್ಧಿ ಪಥದ ಹೊರಗೆ ಮಾನವ ಕಲ್ಯಾಣಕ್ಕೆ ವಿವಿಧ ಸ್ತರಗಳ ಬಹುಮುಖೀ ಸಾಧ್ಯತೆಗಳಿವೆ, ಅನಂತ ಅವಕಾಶಗಳು ಇರಲು ಸಾಧ್ಯತೆಯಿದೆಯೆಂದೇ ಈ ಶಿಕ್ಷಣದ 'ಮಾಡೆಲ್' ಪರಿಗಣಿಸುವುದಿಲ್ಲ. ಇತರೆಲ್ಲ ಸೃಷ್ಟಿ, ಪ್ರತಿಭೆಗಳನ್ನೂ ಅಲ್ಲಗಳೆಯುವ ಈ ಶೈಕ್ಷಣಿಕ ಜಗತ್ತಿನಲ್ಲಿ 'ಆದಿಮ ಪ್ರಳಯವೇ' ಅತ್ಯಂತ ಸೃಜನಶೀಲ ಸ್ಥಿತಿ. ಈ ಬೌದ್ಧಿಕ ಪ್ರಳಯ, ಹೊಸ ಬಗೆಯ ಚಿಂತನೆಗೆ ದಾರಿ ಮಾಡಿಕೊಟ್ಟೀತು. "ಈ ದೇಶವನ್ನು ಸಮಸ್ತ ಪ್ರಜೆಗಳ ಹಿತಕ್ಕೆ ಪೂರಕವಾಗಿ ನಡೆಸಬೇಕಾದರೆ ಕಳೆದ ಹಲವಾರು ದಶಕಗಳಿಂದ ಕಲಿಯುತ್ತ ಬಂದ ಶಿಕ್ಷಣದ ಭಾರವನ್ನು ನಾವು ಮೊದಲು ಕಳಚಿಕೊಳ್ಳಬೇಕು" ಎಂದು ೧೯೪೭ರ ಮೊದಲೇ ಹೇಳಿದ್ದ ಗಾಂಧೀಜಿಯೇ ಈ ಮಹತ್ತ್ವದ ಬದಲಾವಣೆಗೆ ಮತ್ತೊಮ್ಮೆ ನಮಗೆ ಆರಂಭದ ನೆಲೆ. ಗಾಂಧೀಜಿ ಬ್ರಿಟಿಷರ ವಿರುದ್ಧ ತನ್ನ ಪ್ರತಿರೋಧದ ಆಕೃತಿಗಳ ಆಯ್ಕೆಗಾಗಿ ಮತ್ತೆ ಮತ್ತೆ ಸಾಮಾನ್ಯ ಜನರ ಲೋಕವಿದ್ಯೆಯ ನೆಲೆಗಟ್ಟಿಗೆ ಮರಳುತ್ತಿದ್ದರು. ಈ ಲೋಕವಿದ್ಯೆಯ ನೆಲೆಗಟ್ಟಿನಲ್ಲೇ ಜಾಗತಿಕ ಶಕ್ತಿಗಳನ್ನೂ ದಂಗುಪಡಿಸುವ, ಅವುಗಳಿಗೆ ತಿರುಮಂತ್ರವಾಗಬಹುದಾದ, ತೀರ ಅಗ್ರಾಹ್ಯವಾದ ವಿದ್ರೋಹೀ ಪ್ರತಿಭೆಯಿದೆ ಎಂದು ನನ್ನ ನಂಬಿಕೆ.

❑

---

ಈ ಲೇಖನದ ಕೊನೆಯ ಕೆಲವು ಪ್ಯಾರಾಗಳು "ಜಾಗತೀಕರಣ : ಪರ್ಯಾಯ ಸಾಧ್ಯತೆಗಳು" ಲೇಖನದಲ್ಲಿ ಬಂದಿದೆ. ಆದರೆ ಈ ವಿಶೇಷ ಲೇಖನದ ಪ್ರತ್ಯೇಕ ಆಶಯ, ವಿನ್ಯಾಸದ ಅಖಂಡತೆಗಳಿಗಾಗಿ ಅದನ್ನು ಇಟ್ಟುಕೊಳ್ಳಲಾಗಿದೆ.

# ಪ್ಲಾಸ್ಟಿಕ್ ಕಶ್ಮಲ : ಎಚ್ಚರ ಅಗತ್ಯ

ಮಣ್ಣು ಈ ಭೂಮಿಯ ಸಹಜ ಸ್ಥಿತಿ, ಮೂಲದ ಆಸ್ತಿ. ಜಗತ್ತಿನಲ್ಲಿರುವ ಪ್ರತಿಯೊಂದು ಕೊನೆಗೆ ಮಣ್ಣಾಗಬೇಕು. ಇದು ನಿಸರ್ಗ ನಿಯಮ. ನಾವು, ನೀವು, ಪಶು, ಪಕ್ಷಿ, ಸಸ್ಯ, ಕಲ್ಲುಬಂಡೆ, ಲೋಹಗಳು - ಎಲ್ಲವೂ ಮಣ್ಣಾಗುತ್ತವೆ. ಮನುಷ್ಯ ತನ್ನ ಸೌಕರ್ಯಕ್ಕಾಗಿ ಸೃಷ್ಟಿಸಿಕೊಂಡ ಎಲ್ಲ ವಸ್ತುಗಳೂ ಸುಲಭದಲ್ಲಿ ಮಣ್ಣಾಗುವಂತಿರಬೇಕು. ಯಾವುದು ಸುಲಭದಲ್ಲಿ ಮಣ್ಣಾಗುವುದಿಲ್ಲವೋ ಅದು ಕೊಳೆಯಾಗಿ, ತ್ಯಾಜ್ಯವಾಗಿ ಪರಿಣಮಿಸುತ್ತದೆ. ಸಕಲ ಜೀವಜಾತಿಗಳ ಬದುಕಿಗೇ ಕುತ್ತಾಗುತ್ತದೆ.

ಪ್ರತಿಯೊಂದು ಜೀವಿ ಬದುಕುವಾಗಲೂ ಕೊಳೆ ನಿರ್ಮಾಣವಾಗುತ್ತಲೇ ಇರುತ್ತದೆ. ಆದರೆ ಅಲ್ಪ ಪ್ರಮಾಣದ ಈ ಕೊಳೆಯನ್ನು ಪ್ರಕೃತಿ ಸತತವಾಗಿ ಶುದ್ಧೀಕರಿಸುತ್ತಲೇ ಇರುತ್ತದೆ. ನಾವು ಬಿಟ್ಟ ಉಸಿರನ್ನು ಸಸ್ಯಗಳು ಶುದ್ಧೀಕರಿಸುತ್ತವೆ. ಮಣ್ಣ ಮೇಲೆ ವಿಸರ್ಜಿಸಿದ ಮೂತ್ರವನ್ನು ಕೆಲವೇ ಗಂಟೆಗಳಲ್ಲಿ ಗಾಳಿ-ಬಿಸಿಲುಗಳು ಗೊಬ್ಬರವಾಗಿ ಪರಿವರ್ತಿಸಿ ಮಣ್ಣುಪಾಲು ಮಾಡುತ್ತವೆ. ಆದರೆ ದೈತ್ಯಾಕಾರದ ಕಾರ್ಖಾನೆಗಳು ಉಗುಳುವ ಭಾರೀ ಪ್ರಮಾಣದ ಹೊಗೆಯನ್ನು ಅಥವಾ ಪಟ್ಟಣದಲ್ಲಿ ಸಾವಿರಾರು ಜನರು ಒಂದೇ ಕಡೆ ವಿಸರ್ಜಿಸಿದ ಭಾರೀ ಪ್ರಮಾಣದ ಮೂತ್ರವನ್ನು ಪ್ರಕೃತಿಗೆ ನಿಭಾಯಿಸಲಿಕ್ಕಾಗುವುದಿಲ್ಲ. ಆಗ ಅಲ್ಲಿ ವಾಸನೆ ಹೊಡೆಯಲು ಆರಂಭವಾಗುತ್ತದೆ. ಈ ವಾಸನೆ ಎಂಬುದು, 'ತನಗೆ ಒಂದೇ ಕಡೆ ಕಲೆತ ಈ ಭಾರೀ ವಿಷವನ್ನು ನಿಭಾಯಿಸಲಿಕ್ಕಾಗುವುದಿಲ್ಲ' ಎಂದು ಭೂಮಿಯು ಎಚ್ಚರಿಸುವ ಎಚ್ಚರದ ಕರೆಗಂಟೆ. ಹಾಗಾಗಿ, ಪಟ್ಟಣಗಳಲ್ಲಿ

ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮದ ಕುರಿತು ಉಡುಪಿ ನಗರಸಭೆಯು ಮೇ ೨೭, ೨೦೦೦ದಂದು ಹಮ್ಮಿಕೊಂಡ ಒಂದು ದಿನದ ಕಾರ್ಯಾಗಾರದಲ್ಲಿ ಮಂಡಿಸಿದ ಪ್ರಬಂಧ

ಜೈವಿಕ (organic) ಕೊಳೆ ರಾಶಿಯ ವಿಲೇವಾರಿಯೂ ಒಂದು ದೊಡ್ಡ ಸಮಸ್ಯೆಯಾಗಿ ಬಿಡುತ್ತದೆ.

'ಪ್ಲಾಸ್ಟಿಕ್'ನಂಥ ಜೈವಿಕವಲ್ಲದ ರಾಸಾಯನಿಕ (inorganic) ವಸ್ತುಗಳ ಕತೆಯಂತೂ ಇನ್ನೂ ಭೀಕರವಾದುದು. ಅತ್ಯಂತ ಸಣ್ಣ ಪ್ಲಾಸ್ಟಿಕ್ ಚೂರನ್ನು ಕೂಡಾ ಪ್ರಕೃತಿಗೆ ನಿಭಾಯಿಸಲಿಕ್ಕೆ ಆಗುವುದಿಲ್ಲ. ಅವು ಮಣ್ಣಲ್ಲಿ ಸೇರುವುದೇ ಇಲ್ಲ. ಹಾಗಾಗಿ ಇಂದು ಪ್ಲಾಸ್ಟಿಕ್ ಕೊಳೆಯ ರಾಶಿಯು ದಿನದಿಂದ ದಿನಕ್ಕೆ ಬೆಳೆಯುತ್ತಿದೆ; ಮಾತ್ರವಲ್ಲ, ಈ ಭೂಮಿಯ ಜೀವಂತಿಕೆಗೇ ಕುತ್ತಾಗುವ ಹಂತಕ್ಕೆ ತಲುಪುತ್ತಿದೆ. ೫೦ ಮಿಲಿಯ ವರುಷಗಳ ಹಿಂದೆ ಒಂದು ಜಾತಿಯ ಕ್ರಿಮಿ ತನ್ನ ಸುತ್ತ ಎಷ್ಟು ಕೊಳೆ ನಿರ್ಮಾಣ ಮಾಡಿತೆಂದರೆ, ಆ ಕೊಳೆಯ ನಡುವೆಯೇ ಅದು ಹೂತುಹೋಗಿ ಅದರ ಪೀಳಿಗೆ ನಾಶವಾಯಿತಂತೆ. ಇಂದು ಮಾನವ ತನ್ನ ತೀರದ ಸುಖ ಲೋಲುಪತೆಯಿಂದ ಈ ಭೂಮಿಯನ್ನು ಎಂಥ ದೊಡ್ಡ ಪ್ಲಾಸ್ಟಿಕ್ ತಿಪ್ಪೆ ಗುಂಡಿಯನ್ನಾಗಿ ಪರಿವರ್ತಿಸುತ್ತಿದ್ದಾನೆಂದರೆ, ಮುಂದೊಂದು ದಿನ ಆತ ಆ ಕೊಳೆಯಲ್ಲೇ ಹೂತುಹೋಗಿ ಆತನ ಸಂತತಿ ನಿರ್ವಂಶವಾಗುವ ಸಂಭವವಿದೆ; ಮಾತ್ರವಲ್ಲ, ಆತನ ಜತೆ ಯಾವ ತಪ್ಪೂ ಮಾಡದ ಮುಗ್ಧ ಪಶು, ಪಕ್ಷಿ, ಸಸ್ಯಜಾತಿಗಳೂ ಅಳಿಸಿಹೋಗುವ ಸಾಧ್ಯತೆಯಿದೆ. ಇರುವ ಒಂದೇ ಭೂಮಿಯನ್ನು ತನ್ನ ಅಹಂಕಾರದ ಹೂಂಕಾರದಿಂದ ಈ ರೀತಿ ಮಲಿನಗೊಳಿಸಿದರೆ ಜೀವಿಗಳು ಬದುಕುವುದಾದರೂ ಹೇಗೆ ? ಮನುಷ್ಯ ಮಾಡುವ ಈ ಪಾಪದ ಹೊರೆ ಹೊರುವವರ್ಯಾರು

### ಹಾರುವ ಪ್ಲಾಸ್ಟಿಕ್ ಪರಂಪರೆ

ನಮ್ಮ ಮನೆಯಂಗಳದಲ್ಲಿ ಹೊರಗೆ ರಸ್ತೆ -ಉದ್ಯಾನಗಳಲ್ಲಿ, ಗುಡ್ಡ, ಬಯಲು, ಕಾಡು, ಮೇಡುಗಳಲ್ಲಿ, ಕೆರೆ-ಕೊಳ್ಳ, ಹಳ್ಳಗಳಲ್ಲಿ, ನದಿ-ಸಮುದ್ರ ತೀರಗಳಲ್ಲಿ, ಮತ್ತು ಆಧುನಿಕ ಮನುಷ್ಯ ವಿಹಾರಕ್ಕಾಗಿ ಓಡಾಡುವ ಎಲ್ಲೆಲ್ಲೂ ಪ್ಲಾಸ್ಟಿಕ್ ಕೊಳೆ ಹಾರಾಡುತ್ತಿದೆ, ರಾರಾಜಿಸುತ್ತಿದೆ. ಇದರ ಬಗ್ಗೆ ಪ್ರಸ್ತಾವಿಸುತ್ತಾ ಒಬ್ಬ ಪ್ರಸಿದ್ಧ ನಿಸರ್ಗಪ್ರಿಯ ಚಿಂತಕ, "ಭೂಮಿಯ ಮೇಲೆ ಆಧುನಿಕ ಮನುಷ್ಯನ ಕೊನೆಯಿರದ ದುರಾಕ್ರಮಣದಿಂದಾಗಿ, ಇನ್ನು ಕೆಲವೇ ದಶಕಗಳಲ್ಲಿ ಭೂಮಿಯ ಹಸಿರೆಲ್ಲಾ ಬರಿದಾಗಿ, ಭೂಮಿ ಬರಡಾಗಿ, ಮತ್ತೀನ ಬಿಸಿಗಾಳಿ ಯಾವ ತಡೆಯೂ ಇಲ್ಲದ ರಭಸದಿಂದ ಬೀಸಲು ಆರಂಭಿಸಿದಾಗ ಕೇವಲ ಪ್ಲಾಸ್ಟಿಕ್ ವಸ್ತುಗಳೇ ಭೂಮಂಡಲದಲ್ಲೆಲ್ಲಾ ಹಾರಾಡುತ್ತಿರಬಹುದು" ಎಂದು ಹತಾಶನಾಗಿ ನುಡಿದಿದ್ದ. ಮಠ-ಮಂದಿರಗಳನ್ನೂ ಬಿಡದ ಈ ಪ್ಲಾಸ್ಟಿಕ್ ಹಾವಳಿ, ರಾಜಕೀಯ ಪಕ್ಷಗಳ ಧ್ವಜಗಳವರೆಗೂ ಇಂದು ಬಂದಿದೆ. ಇದನ್ನೆಲ್ಲ ಗಮನಿಸಿದರೆ ಕೃತಕ ಪ್ಲಾಸ್ಟಿಕ್ ಸಂಸ್ಕೃತಿಯು ನಮ್ಮ ದೇಶದ ಸಾಂಸ್ಕೃತಿಕ ಬದುಕನ್ನೇ ಕೃತಕತೆಯತ್ತ ಒಯ್ಯುವುದೋ ಎಂಬ ಅನುಮಾನ ಬರದಿರದು.

ಪ್ಲಾಸ್ಟಿಕ್ ಕೊಳೆರಾಶಿಯಲ್ಲಿ, ಪೆಪ್ಸಿ-ಕೋಕಾಕೋಲ, ಬಿಸ್ಲರಿ ಮುಂತಾದ 'ಸರಕು ಸಂಸ್ಕೃತಿ'ಗೆ ಆಸೆಪಡುವ ಪಟ್ಟಣದ, ಮೇಲ್ಮಧ್ಯಮ ವರ್ಗದ ಮತ್ತು ಶ್ರೀಮಂತರ ಪಾಲು ಅಮಾಯಕ ಹಳ್ಳಿಯವರಿಗಿಂತ ಹೆಚ್ಚು. ತನ್ನ ಕಾಂಪೌಂಡಿನಿಂದ ಹೊರಗೆ ಬಿಸಾಡಿ ಕೈಚೆಲ್ಲಿ ಹಾಯಾಗಿ ಕೂರಲು ಬಯಸುವ ಸ್ವಾರ್ಥಿ ಮನುಷ್ಯನಿಗೆ ಮುಂದೊಂದು ದಿನ ಈ ಕೊಳೆಗೆ ತಾನೇ ಬಲಿಪಶುವಾಗಬಹುದೆಂಬ ಅರಿವಿದ್ದಂತಿಲ್ಲ.

**ಪ್ಲಾಸ್ಟಿಕ್ ತ್ಯಾಜ್ಯದ ದುಷ್ಪರಿಣಾಮ***

**(i) ವೈಯಕ್ತಿಕ ಆರೋಗ್ಯದ ದೃಷ್ಟಿಯಿಂದ**

" ಈ ಜಗತ್ತಿನ ೨೦ ಅತ್ಯಂತ ಹಾನಿಕರ ಕೈಗಾರಿಕಾ ಕಶ್ಮಲಗಳಲ್ಲಿ ಪ್ಲಾಸ್ಟಿಕ್ ಒಂದು, ಮತ್ತು ಇದು ಒಟ್ಟು ಕಶ್ಮಲದ ೨೫ ಶೇಕಡಾ ಆವರಿಸಿಬಿಟ್ಟಿದೆ" ಎಂದು ಅಮೇರಿಕಾ ಪರಿಸರ ಸಂರಕ್ಷಣಾ ಸಂಸ್ಥೆಯು ೧೯೮೬ರಲ್ಲೇ ಉಲ್ಲೇಖಿಸಿತು.

ಪ್ಲಾಸ್ಟಿಕ್ ತಯಾರಿಯಲ್ಲಿ 'ಟೈಟಾನಿಯಂ ಡೈ ಆಕ್ಸೈಡ್' ಮತ್ತು 'ಕಾಡ್ಮಿಯಂ' ಅಥವಾ ಸೀಸದಿಂದ ಕೂಡಿದ ರಾಸಾಯನಿಕವನ್ನು ಬಳಸುತ್ತಾರೆ. ಪ್ಲಾಸ್ಟಿಕ್ ಮೃದುವಾಗಲು ಬಳಸುವ 'ಪ್ಲಾಸ್ಟಿಸೈಸರ್' ಎಂಬ ಹಾನಿಕಾರಕ ರಾಸಾಯನಿಕಗಳಲ್ಲಿ 'ಫಾಸ್ಫೇಟ್', 'ಥಾಲೈಟ್ಸ್', 'ಪಾಲಿಕ್ಲೋರಿನೇಟೆಡ್ ಬೈಫಿನೈಲ್' ಮುಂತಾದ ದ್ರವಗಳು ಗಣನೀಯ ಅಂಶದಲ್ಲಿ ಬೆರೆತಿರುತ್ತವೆ. ಹಾಗಾಗಿ ಪ್ಲಾಸ್ಟಿಕ್ ಪದಾರ್ಥವನ್ನು ನಿರಂತರವಾಗಿ ಬಳಸುವುದರಿಂದ ಮಕ್ಕಳ ಎಲುಬು ವಿರೂಪಗೊಳ್ಳಬಹುದು, ಕ್ಯಾನ್ಸರಿಗೂ ಕಾರಣವಾಗಬಹುದು. ಇದರಲ್ಲಿ ಇರುವ ಸೀಸದ ಅಂಶ ಮೆದುಳನ್ನು ಬಾಧಿಸುತ್ತದೆ.

ಪ್ಲಾಸ್ಟಿಕ್ ಲಕೋಟೆಗಳಲ್ಲಿ, ಜಾಡಿಗಳಲ್ಲಿ ಹಾಕಿಟ್ಟ ಪದಾರ್ಥದ ಜೊತೆ, ಪ್ಲಾಸ್ಟಿಕ್ ಪ್ರತಿಕ್ರಿಯಿಸಿ, ನಿಧಾನವಾಗಿ ಆಹಾರವನ್ನು ವಿಷವಾಗಿ ರೂಪಾಂತರಗೊಳಿಸುವ ವಿಷಗಳು ಪ್ಲಾಸ್ಟಿಕ್‌ನಲ್ಲಿರುವುದರಿಂದ, ದ್ರವಪದಾರ್ಥಗಳನ್ನು ಮತ್ತು ತೇವಾಂಶವಿರುವ ಪದಾರ್ಥಗಳನ್ನು ಹಾಕಿಡುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ.

ಪ್ಲಾಸ್ಟಿಕ್‌ನಲ್ಲಿ ಇರುವ 'ಥಾಯಿಲಾಯಿಟ್ಸ್' ರಾಸಾಯನಿಕವಂತೂ ತಾಯಿಯ ಗರ್ಭದಲ್ಲಿರುವ ಮಗುವಿನ ಬೆಳವಣಿಗೆಯನ್ನು ಕುಂಠಿತಗೊಳಿಸಿ, ನರಮಂಡಲದ ಕೇಂದ್ರ ತಲುಪಿ, ಮೆದುಳು, ಕಣ್ಣುಗಳನ್ನು ಹಾನಿ ಮಾಡುವ ಸಾಧ್ಯತೆ ಇದೆ.

ತರಕಾರಿ, ಹಣ್ಣುಹಂಪಲು, ಸಿಹಿತಿಂಡಿ, ಮೊಸರು ಮುಂತಾದ ಆಹಾರವಸ್ತುಗಳಿಗೆ ನಾವು ಯಾವಾಗಲೂ ಅಂಗಡಿಯಲ್ಲಿ ಕೊಡುವ ಬಣ್ಣಬಣ್ಣದ ತೆಳು ಪ್ಲಾಸ್ಟಿಕ್ ಚೀಲವನ್ನೇ ವಿಪುಲವಾಗಿ ಬಳಸುತ್ತೇವಲ್ಲ. ಇವುಗಳ ಬಳಕೆಯಿಂದ ದಿನನಿತ್ಯವೂ ನಾವು ತಾಮ್ರ (ನೀಲಿ ಚೀಲ), ಬೇರಿಯಂ (ಹಸುರು ಚೀಲ), ಕ್ರೋಮಿಯಂ (ಕೆಂಪು ಚೀಲ) ಮುಂತಾದ ಪದಾರ್ಥಗಳನ್ನು ತಿಳಿಯದೆಯೇ ಸೇವಿಸುತ್ತಿರುತ್ತೇವೆ. ಹಾಗಾಗಿ ಇವು ಇನ್ನಷ್ಟು ಅಪಾಯಕಾರಿ. ಯಾಕೆಂದರೆ, ಹಾಲಿನ ಲಕೋಟೆ, ಕ್ರಿಮಿನಾಶಕ ಲಕೋಟೆ, ಪಿ.ವಿ.ಸಿ. ಪೈಪ್ಸ್, 'ಶೂಸೋಲ್', 'ಆಸಿಡ್ ಕ್ಯಾನ್' ಮುಂತಾದ ಹಳೆಯ ಪ್ಲಾಸ್ಟಿಕ್ ಸರಕುಗಳನ್ನು ಕರಗಿಸಿ ರಾಸಾಯನಿಕಗಳಲ್ಲಿ ಹಾಯಿಸಿ ಮರುಬಳಕೆ ಮಾಡುವ ಈ ಬಣ್ಣದ ತೆಳು ಚೀಲಗಳು ನಿಜಕ್ಕೂ ಮರು ಬಳಕೆಯ ಪ್ರಕ್ರಿಯೆಯಲ್ಲಿ ಇನ್ನಷ್ಟು ಕೀಳುಗುಣಮಟ್ಟಕ್ಕಿಳಿದು ಗಂಭೀರವಾದ ಮೂತ್ರಜನಕಾಂಗದ ಕಾಯಿಲೆಗಳಿಗೆ ಕ್ಯಾನ್ಸರ್ ಕಾಯಿಲೆಗಳಿಗೆ, ಕಾರಣವಾಗುವ ಸಂಭವವಿದೆ. ತಾಯಿಯ ಎದೆಹಾಲಲ್ಲೂ ಈ ವಿಷ ಸೇರಿಕೊಳ್ಳುತ್ತದೆ.

ಒಮ್ಮೆ ಬಳಕೆಯಾದ ಪ್ಲಾಸ್ಟಿಕ್ ರಾಶಿಯಲ್ಲಿರುವ ೧೦ ಶೇಕಡಾದಷ್ಟು ಪ್ಲಾಸ್ಟಿಕನ್ನು ಮಾತ್ರ 'ರಿಸೈಕಲಿಂಗ್' (ಪುನರಾವರ್ತಿ) ಮಾಡಬಹುದೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ಆದರೆ ಭಾರತದಲ್ಲಿ ಇಂದು ೯೦ ಶೇಕಡಾದಷ್ಟು ಹಳೆಯ ಪ್ಲಾಸ್ಟಿಕ್‌ಗಳು 'ರಿಸೈಕಲಿಂಗ್' ಆಗುತ್ತಿದೆ. ಇದು ನಿಜಕ್ಕೂ 'ರಿಸೈಕಲಿಂಗ್' ಅಲ್ಲ, 'ಡೌನ್ ಸೈಕಲಿಂಗ್' ಎಂದೇ ಹೇಳಬೇಕು. ಇಂಥ ಸಂಸ್ಕರಿತ ಪ್ಲಾಸ್ಟಿಕ್ ಚೀಲಗಳನ್ನು ಬಳಸಲು ಕೇಂದ್ರ ಸರಕಾರ ನಿಷೇಧ ಹೇರಿ ೧೯೯೯ರ ಸೆಪ್ಟೆಂಬರ ೨ ರಂದು ಗಜೆಟ್ ಪ್ರಕಟಣೆಯನ್ನೂ ಹೊರಡಿಸಿದೆ. ಆದರೆ ಇದನ್ನು ಯಾರೂ ಗಂಭೀರವಾಗಿ ಪರಿಗಣಿಸಿದಂತಿಲ್ಲ.

ಪ್ಲಾಸ್ಟಿಕ್ ಉಪಕರಣಗಳ ತಯಾರಿಯಲ್ಲಿ ಸಾಧಾರಣವಾಗಿ 'ಆರ್ತೋ ಟ್ರೈಕ್ರಿಸಾಯಿನ್' ಎಂಬ ರಾಸಾಯನಿಕವನ್ನು ಬೆರೆಸುತ್ತಾರೆ. ನರಮಂಡಲದ ಕೇಂದ್ರವನ್ನು ವ್ಯಾಪಿಸಿ ನಿಶ್ಚಲಗೊಳಿಸುವ ಈ ಭೀಕರ ರಾಸಾಯನಿಕವನ್ನು ಇತ್ತೀಚೆ ಬಂಗಾಳದಲ್ಲಿ ಕೆಲವು ವ್ಯಾಪಾರಿಗಳು ಲಾಭದ ದುರಾಸೆಯಿಂದ ಸಾಸಿವೆ ಎಣ್ಣೆಗೆ ಬೆರಸಿ ಮಾರಿದ್ದರಿಂದ ಕಲ್ಕತ್ತಾದ ಕೊಳಚೆ ಪ್ರದೇಶದಲ್ಲಿರುವ ನಿವಾಸಿಗಳು, ಕೈಕಾಲುಗಳನ್ನೇ ನಿಷ್ಕ್ರಿಯಗೊಳಿಸುವ ಪಕ್ಷಪಾತಕ್ಕೆ ಸಾಮೂಹಿಕವಾಗಿ ಬಲಿಯಾದ ದುರಂತದ ಚಿತ್ರಣ ನಮ್ಮ ಕಣ್ಣ ಮುಂದೆ ಇನ್ನೂ ಜೀವಂತವಿದೆ.

ಪ್ಲಾಸ್ಟಿಕ್ ಆಟಿಕೆಗಳ ಅತಿ ಬಳಕೆಯಿಂದ ಮಕ್ಕಳ ಯಕೃತ್ತು ಮತ್ತು ಮೇದೋಜೀರಕಗಳ ಮೇಲೆ ದುಷ್ಪರಿಣಾಮವಾಗುತ್ತದೆಂದು ಸಂಶೋಧನೆಗಳು ತಿಳಿಸುತ್ತವೆ.

ಇಂದು ಸಾರ್ವತ್ರಿಕವಾಗಿ ಬಳಸಲಾಗುವ ಪಾಲಿಥಿನ್ ಪ್ಲಾಸ್ಟಿಕಂತೂ ಪ್ಲಾಸ್ಟಿಕ್ ವರ್ಗಗಳಲ್ಲೇ ಅತ್ಯಂತ ಹಾನಿಕರವಾದುದು. 'ಎಥಿಲಿನ್' ಎಂಬ ರಾಸಾಯನಿಕ ಪದಾರ್ಥವನ್ನು 'ಇನ್ಸುಲೇಶನ್ ಟೇಪು', ಲಕೋಟೆ-ಪ್ಯಾಕೇಟುಗಳ ತಯಾರಿಯಲ್ಲಿ, 'ಪೊಲಿವಿನೈಲ್ ಕ್ಲೋರೈಡ್'ನ್ನು ಪಿ.ವಿ.ಸಿ. ಪೈಪು ಮತ್ತು ಶೀಟುಗಳ ತಯಾರಿಯಲ್ಲಿ, 'ಪೆಜೀನ್'ನ್ನು ಜಿಡ್ಡು ಹಿಡಿಯದ, ಬಿಸಿಯಾದರೂ ಕರಗದ ಪ್ಲಾಸ್ಟಿಕ್ ತಯಾರಿಯಲ್ಲಿ ಉಪಯೋಗಿಸುತ್ತಾರೆ. 'ಪೊಲಿವಿನೈಲ್ ಕ್ಲೋರೈಡ್' ಮೆದುಳಿನ ಸಂಕೇತಗಳನ್ನು ಗ್ರಹಿಸುವ ಹೈಪೋಥಲಾಮಸ್ ಅಂಗವನ್ನು ದುರ್ಬಲಗೊಳಿಸುವುದರ ಜತೆಗೆ ಕೈಕಾಲುಗಳ ಬೆರಳುಗಳ ರಕ್ತಚಲನೆಯನ್ನೂ ಸ್ಥಗಿತಗೊಳಿಸಿ, ಎಲುಬಿಗೆ ಹಾನಿಯೊಡ್ಡುತ್ತದೆ. ಪಿ.ವಿ.ಸಿ ತಯಾರಿಸುವಾಗ ಉಪಯೋಗಿಸುವ 'ಡಯಾಕ್ಸಿನ್' ಅತ್ಯಂತ ಅಪಾಯಕಾರಿ ವಿಷವೆಂದು ತಜ್ಞರು ತಿಳಿಸುತ್ತಾರೆ. ಇದು ಕ್ಯಾನ್ಸರಿಗೆ ಕಾರಣವಾಗುತ್ತದೆ. ಆದರೆ ಮೋಜಿನ ಸಂಗತಿಯೆಂದರೆ ಪಿ.ವಿ.ಸಿ. ತಯಾರಿಸುವ ಉದ್ದಿಮೆಯನ್ನೇ ಈ ವಿಷದ ಹೆಸರಿನಿಂದ (ಡಯಾಕ್ಸಿನ್) ಕರೆಯುತ್ತಾರೆ.

**(ii) ಪ್ಲಾಸ್ಟಿಕ್ ಸುಟ್ಟಾಗ :**

ಪ್ಲಾಸ್ಟಿಕ್ ಚೀಲಗಳನ್ನು ಸುಟ್ಟು ನಾಶಗೊಳಿಸುವುದೂ ಅಪಾಯಕಾರಿ. ಸುಟ್ಟಾಗ ಹೊರಬರುವ ಫೋಸ್ಜೀನ್, ಕಾರ್ಬನ್ ಮೊನಾಕ್ಸೈಡ್, ಕ್ಲೋರಿನ್, ಸಲ್ಫರ್ ಡೈಆಕ್ಸೈಡ್, ಡಯಾಕ್ಸಿನ್ ಮುಂತಾದ ವಿಷಾನಿಲಗಳು ವಾತಾವರಣ ಸೇರಿ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಮುಖ್ಯವಾಗಿ ಪಾಲಿಥಿನ್ ಚೀಲಗಳನ್ನು ಸುಡುವಾಗ ಹೊರಬರುವ ನ್ಯೂಕ್ಲಿಯರ್ ಹೈಡ್ರೋಕಾರ್ಬನ್, ಡಯಾಕ್ಸಿನ್ ವಿಷಾನಿಲಗಳು ಕ್ಯಾನ್ಸರ್ ರೋಗಕ್ಕೆ ಕಾರಣವಾಗುತ್ತವೆ.

ಸುಟ್ಟ ಮೇಲೂ ಪ್ಲಾಸ್ಟಿಕ್ ಸಮಸ್ಯೆ ಪರಿಹಾರವಾಗುವುದಿಲ್ಲ. ಅದು ತನ್ನ ಸ್ವಸ್ವರೂಪ ಕಳಕೊಂಡರೂ ಮಣ್ಣಲ್ಲಿ ಸೇರಿಕೊಳ್ಳದೆ, ಮುದ್ದೆಯಾಗಿ ಹಾಗೆಯೇ ಉಳಿದುಕೊಂಡು ಬಿಡುತ್ತದೆ.

**(iii) ಸಾಮಾಜಿಕ ಹಾಗೂ ಪಾರಿಸರಿಕ ದುಷ್ಪರಿಣಾಮಗಳು :**

ಪ್ಲಾಸ್ಟಿಕ್ ಇದ್ದ ಮಣ್ಣಲ್ಲಿ ಎರೆಹುಳು ಬೆಳೆಯಲಾರದು. ಸಸ್ಯಗಳ ಬೇರುಗಳು ಪಸರಿಸಿಕೊಳ್ಳಲು ಪ್ಲಾಸ್ಟಿಕ್ ಅಡ್ಡಿ ಮಾಡುತ್ತದೆ. ಮಣ್ಣಿನ ಸಾರವನ್ನು ಕಳೆದು ನಿರ್ಜೀವಗೊಳಿಸುತ್ತದೆ. ಗದ್ದೆಗಳಲ್ಲಿ ಹಾರುವ ಪ್ಲಾಸ್ಟಿಕ್‌ಗಳಂತೂ ಕೃಷಿಕರಿಗೆ ಒಂದು ಭಯಂಕರ ಪಿಡುಗಾಗಿ ಪರಿಣಮಿಸುತ್ತಿದೆ.

ಮಣ್ಣಲ್ಲಿ ಸೇರಿಕೊಂಡ ಪ್ಲಾಸ್ಟಿಕ್ ನೀರು ಇಂಗಲು ಅಡ್ಡಿ ಮಾಡುತ್ತದೆ. ನಮ್ಮ ಬಾವಿ, ಕೆರೆಗಳಿಗೆ ಬರುವ ನೀರಿನ ಒಸರನ್ನು ತಡೆಯುತ್ತದೆ.

ಮುಖ್ಯವಾಗಿ ಪಟ್ಟಣಗಳಲ್ಲಿ ಪೈಪು, ಚರಂಡಿಗಳಲ್ಲಿ ಸಿಲುಕಿಕೊಂಡ ಪ್ಲಾಸ್ಟಿಕ್ ನೀರಿನ ಸರಾಗ ಹರಿವಿಗೆ ತಡೆಯೊಡ್ಡುತ್ತದೆ. ಇದು ನುಸಿ ಉತ್ಪತ್ತಿಗೆ, ಸಾಂಕ್ರಾಮಿಕ ರೋಗಗಳಿಗೂ ಕಾರಣವಾಗುವ ಸಾಧ್ಯತೆಯಿದೆ. ಒಳಚರಂಡಿಯ ಕೊಳವೆಗಳಲ್ಲಿ ಪ್ಲಾಸ್ಟಿಕ್ ರಾಶಿ ಸಿಲುಕಿ ಅಲ್ಲಿಂದ ಮಿಥೇನ್ ಹೊರಬರಲು ತಡೆಯುಂಟಾಗಿ ಅಪೂರ್ವ ಸಂದರ್ಭಗಳಲ್ಲಿ ಕೊಳವೆ ಸ್ಫೋಟವಾಗುವ ಅಪಾಯವೂ ಇದೆ.

**(iv) ಪ್ರಾಣಹಿಂಸೆ :**

ಹುಲ್ಲು ಮೇವಿನ ಜತೆ ಪ್ಲಾಸ್ಟಿಕ್ ಸರಕುಗಳು ಬೆರೆತು ದನಕರುಗಳ ಹೊಟ್ಟೆ ಸೇರಿ ಅವುಗಳ ಸಾವಿಗೆ ಕಾರಣವಾಗುತ್ತಿರುವುದು ಇಂದು ಸಾಮಾನ್ಯವಾಗುತ್ತಿದೆ. ಗುಜರಾತಿನ ಕಛ್ ಜಿಲ್ಲೆಯಲ್ಲಿ ಒಂದು ದನ ಆಹಾರ ಸೇವಿಸಲಿಕ್ಕಾಗದೆ ಚಡಪಡಿಸುತ್ತಿರುವುದನ್ನು ಕಂಡು ಪರೀಕ್ಷಿಸಿದಾಗ, ಅದರ ಹೊಟ್ಟೆಯಲ್ಲಿ ೪೫ ಕೆ.ಜಿ. ತೂಕದ ೪೦೦೦ ಪ್ಲಾಸ್ಟಿಕ್ ಲಕೋಟೆಗಳು, ಬಟ್ಟೆ ಚೂರು, ಲೋಹದ ತಂತಿ, ಸ್ಕ್ರೂ ಇತ್ಯಾದಿ ಕಂಡುಬಂತು. ಶಿರಸಿಯ ಮನೆಯಲ್ಲಿ ಒಂದು ಗಬ್ಬದ ದನಕ್ಕೆ ಇದೇ ಸಮಸ್ಯೆ ತಲೆದೋರಿದಾಗ ದನದ ಹೊಟ್ಟೆಯಲ್ಲಿ ಚರ್ಮದ ಚಪ್ಪಲಿ, ಸಿಮೆಂಟ್ ಚೀಲ, ಹೇರಳ ಪ್ಲಾಸ್ಟಿಕ್ ಚೀಲಗಳು ದೊರೆತವು. ತಿರುವನಂತಪುರದ ಪ್ರಾಣಿ ಸಂಗ್ರಹಾಲಯದಲ್ಲಿ ಆಕಸ್ಮಾತ್ತಾಗಿ ಸತ್ತ ಮೂರು ಜಿಂಕೆಗಳನ್ನು 'ಪೋಸ್ಟ್ ಮಾರ್ಟಮ್' ಮಾಡಿದಾಗ ಅವುಗಳ ಹೊಟ್ಟೆಯಲ್ಲಿ ಕೆ.ಜಿ.ಗಟ್ಟಲೆ ಪ್ಲಾಸ್ಟಿಕ್ ಚೀಲ, ಚಪ್ಪಲಿ ಕಂಡುಬಂತು.

ಉಡುಪಿಯಲ್ಲೇ ಇತ್ತೀಚೆ ಮುನಿಸಿಪಾಲಿಟಿಯ ಕಸದ ದೊಡ್ಡಿಯಲ್ಲಿ ಮೇಯುತ್ತಿದ್ದ ಒಂದು ದನದ ಬಾಯಿ, ಮೂಗಿನ ಹೊಳ್ಳೆ, ಮುಸುಡುಗಳಲ್ಲಿ ಬಳಸಿ ಬಿಸಾಡಿದ ಅನೇಕ ಇಂಜಕ್ಷನ್ ಸೂಜಿಗಳು ಹೆಟ್ಟಿಕೊಂಡಿದ್ದು, ದನ ಬಾಯಿ ಮುಚ್ಚಲಿಕ್ಕಾಗದೆ ನೋವಿನಿಂದ ಒದ್ದಾಡುತ್ತಿತ್ತು. ಇದನ್ನು ಕಂಡ ಜನರು ದನದ ಬಾಯಿಯಿಂದ ಸೂಜಿ ತೆಗೆದು, ದನವನ್ನು ರಕ್ಷಿಸಿದ ಘಟನೆಯನ್ನು ನನ್ನ ಗೆಳೆಯರು ವಿವರಿಸಿದರು.

ಕೇವಲ ಮಜಾ ಮಾಡಲಿಕ್ಕಾಗಿಯೇ ಪ್ರವಾಸ ಮಾಡುವ ಪ್ರವಾಸಿಗಳು ತಾವು ತಿಂದು ಕುಡಿದು ತೇಗಿ ಉಳಿದ ತ್ಯಾಜ್ಯವನ್ನು, ಪ್ಲಾಸ್ಟಿಕ್ ಬ್ಯಾಗ್, ಕ್ಯಾನ್, ಬಾಟ್ಲಿಗಳನ್ನು ರಸ್ತೆಯಲ್ಲಿ, ನದಿಯಲ್ಲಿ, ಸಮುದ್ರ ಕಿನಾರೆಯಲ್ಲಿ, ಬೆಟ್ಟ-ಬಯಲು-ಕಾಡುಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ನಗರಗಳ ಕಸದ

ತೊಟ್ಟಿಗಳಲ್ಲಿ, ಎಲ್ಲೆಂದರಲ್ಲಿ ಬೇಜವಾಬ್ದಾರಿಯಿಂದ ಬಿಸಾಡಿ ಏನೂ ತಿಳಿಯದ ಮುಗ್ಧ ಪಶುಪಕ್ಷಿಗಳ ಸಾವಿಗೆ ಕಾರಣರಾಗುತ್ತಾರಲ್ಲ, ಇದಕ್ಕೆ ಏನೆನ್ನೋಣ ?

**(vi) ಸೌಂದರ್ಯ ನಾಶ :**

ಇದೆಲ್ಲದರ ಜತೆ ಪ್ಲಾಸ್ಟಿಕ್ ನಮ್ಮ ಮನೆ ಪರಿಸರದ ಸೌಂದರ್ಯ ಕೆಡಲು ಕಾರಣವಾಗುತ್ತದೆ. ನಿಮ್ಮ ಮನೆ ಎಷ್ಟೇ ಸುಂದರವಿರಲಿ, ಸ್ವಚ್ಛವಿರಲಿ, ಮನೆಯ ಸುತ್ತಮುತ್ತ, ಮನೆಯೆದುರಿನ ರಸ್ತೆಯಲ್ಲಿ ಹಾರುವ ಪ್ಲಾಸ್ಟಿಕ್‌ಗಳು ಯದ್ವಾತದ್ವಾ ಬಿದ್ದಿದ್ದರೆ, ದಾರಿಯಲ್ಲಿ ಹೋಗುವ ಜನರಿಗೆ, ನಿಮ್ಮ ಮನೆ ಆ ಪ್ಲಾಸ್ಟಿಕ್ ಕೊಳೆಯ ಜತೆಜತೆಯೇ ದರ್ಶನವಾಗುವುದರಿಂದ ನಿಮ್ಮ ಮನೆ ಅಂದಗೇಡಿಯಾಗಿ ಕಾಣುತ್ತದೆ. ಒಂದು ಮನೆ ಸುಂದರವಾಗಿ ಕಾಣಲು ಅದರ ಸುತ್ತಮುತ್ತ ಕಸದ ರಾಶಿಯಿರದೆ ಹಸುರು ಹಸುರಾಗಿರಬೇಕು. ಮರಗಿಡಗಳ ಹಸಿರಿನ ಮರೆಯಲ್ಲಿ ಕಾಣುವ ಮನೆ, ಬೋಳು ನೆಲದ ಮೇಲೆ, ಹಾರುವ ಪ್ಲಾಸ್ಟಿಕ್‌ಗಳ ನಡುವೆ ಇರುವ ಮನೆಗಿಂತ ಚೆಂದ, ಸುಂದರ.

ನಿಮ್ಮ ಮನೆಯ ಡ್ರಾಯಿಂಗ್ ರೂಮ್, ಅಥವಾ ಚಾವಡಿ-ಪಡಸಾಲೆಗಳು ಎಷ್ಟೇ ಚೆಂದವಿರಲಿ, ಅಲ್ಲಿ ಜೀವಂತ ಹೂ-ಗಿಡಗಳ ಬದಲು ಪ್ಲಾಸ್ಟಿಕ್ ಹೂ-ಗಿಡಗಳು ಬಂದರೆ, ಆ ಮಟ್ಟಿಗೆ ಮನೆ ಕುರೂಪಗೊಂಡಂತೆ.

ನಮ್ಮ ಆರೋಗ್ಯ ಕೆಡಿಸುವ, ಪಶು-ಪಕ್ಷಿ, ಸಸ್ಯಗಳಿಗೆ ಕುತ್ತು ತರುವ, ಪರಿಸರವನ್ನು ಮಲಿನಗೊಳಿಸುವ, ಮನೆ-ಮನಗಳ ಅಂದಕೆಡಿಸುವ ಪ್ಲಾಸ್ಟಿಕ್ ಬೇಕೆ ? ಯೋಚಿಸಿ. ಪ್ಲಾಸ್ಟಿಕ್ ಬಳಕೆ ಎಂಬುದು ನಿಧಾನವಾಗಿ ನಮ್ಮನ್ನೇ ನಾವು ನಾಶ ಮಾಡಿಕೊಳ್ಳುವ ವಿಧಾನ. ಪ್ಲಾಸ್ಟಿಕ್ ಬಳಸುವುದು ಗೌರವದ ಸಂಕೇತವಲ್ಲ, ಅಜ್ಞಾನದ ಸಂಕೇತ.

**ಭಾರತದ ಸ್ಥಿತಿ**

ಇಡಿಯ ಜಗತ್ತಿನಲ್ಲಿ ಭಾರತವು ಅತೀ ಹೆಚ್ಚು ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸುವ ದೇಶ. ಸುಮಾರು ೧೮ ಲಕ್ಷ ಟನ್ನು ಪ್ಲಾಸ್ಟಿಕ್ ಭಾರತದಲ್ಲಿ ಉತ್ಪಾದನೆಯಾಗುತ್ತದೆ. ಅಮೇರಿಕಾ, ಜರ್ಮನಿಗಳಂತಹ ಮುಂದುವರಿದ ದೇಶಗಳಲ್ಲಿ ಪ್ಲಾಸ್ಟಿಕ್ ಉದ್ದಿಮೆಯು ವರುಷಕ್ಕೆ ಸರಾಸರಿ ೫ರಿಂದ ೬ ಶೇಕಡಾ ಬೆಳೆಯುತ್ತಿದ್ದರೆ, ಭಾರತದಲ್ಲಿ ೧೮ ಶೇಕಡಾದಷ್ಟು ಬೆಳೆಯುತ್ತಿವೆ. ಭಾರತೀಯನೊಬ್ಬನ ತಲಾ ಪ್ಲಾಸ್ಟಿಕ್ ಬಳಕೆಯ ಪ್ರಮಾಣ ಕಡಿಮೆಯಿದ್ದರೂ, ನೂರು ಕೋಟಿ ಜನರಿರುವ ಈ ಜನ ಸಂಪದ್ಭರಿತ ರಾಷ್ಟ್ರದಲ್ಲಿ, ಪ್ಲಾಸ್ಟಿಕ್ ಎಷ್ಟು ಕಡಿಮೆ ಬಳಸಿದರೂ ಅದರ ಒಟ್ಟು ಮೊತ್ತ ಹಿಮಾಲಯಪರ್ವತದಷ್ಟು ದೊಡ್ಡದಾಗುತ್ತದೆ. ಹಾಗಾಗಿ ನಾವು ಪ್ಲಾಸ್ಟಿಕ್ ಬಳಸುವುದನ್ನು ಕಡಿಮೆ ಮಾಡುವುದು ಅನಿವಾರ್ಯವಾಗಿದೆ.

**ದೇಶಸೇವೆ - ಈ ರೀತಿ ಮಾಡೋಣ**

ತರಕಾರಿ ತರಲು ಸಂತೆಗೆ ಹೋಗುವಾಗ, ಸಾಮಾನು ತರಲು ಅಂಗಡಿಗೆ ಹೋಗುವಾಗ ನಾವು ಯಾವಾಗಲೂ ನಮ್ಮದೇ ಬಟ್ಟೆಚೀಲವನ್ನು ಒಯ್ಯುವುದು ಒಳ್ಳೆಯದು, ಅಂಗಡಿಗಳಲ್ಲಿ ಕೊಡುವ

ಪ್ಲಾಸ್ಟಿಕ್ ಚೀಲಗಳನ್ನು ಬೇಡವೆನ್ನುವುದು, ಭಾರತದ ಸ್ವಚ್ಛತೆ-ಆರೋಗ್ಯ ಕಾಪಾಡಲು ನಾವು ಮಾಡುವ ದೊಡ್ಡ ದೇಶಸೇವೆ.

ಹಿಂದೆ ಕಾಗದದ ಲಕೋಟೆಗಳಿದ್ದುವು. ಮನೆಯಲ್ಲಿ ಕಾಗದದ ಲಕೋಟೆ ಮಾಡುವ ಗುಡಿಕೈಗಾರಿಕೆಯಿತ್ತು. ಲಕ್ಷಾಂತರ ಮಂದಿಗೆ ಇದರಲ್ಲಿ ಉದ್ಯೋಗವು ದೊರಕುತ್ತಿತ್ತು. ದಿನದಿನವೂ ಲಕ್ಷ-ಲಕ್ಷ ಟನ್ನುಗಳಷ್ಟು ಉತ್ಪಾದನೆಯಾಗುವ ಪತ್ರಿಕೆ ರದ್ದಿಯು ಲಕೋಟೆಗಳ ಮೂಲಕ ಮರುಬಳಕೆಯಾಗಿ ಮತ್ತೆ ಮಣ್ಣು ಸೇರುತ್ತಿತ್ತು. ಇಂದು ಪ್ಲಾಸ್ಟಿಕ್ ಉದ್ದಿಮೆಗಳಿಂದಾಗಿ ಈ ಗುಡಿಕೈಗಾರಿಕೆಯು ಅವನತಿಯ ಹಂತ ತಲುಪಿ ಉದ್ಯೋಗ ಅವಕಾಶ ತಪ್ಪಿದೆ. ಭಾರತದ ಸಂವೇದನಾಶೀಲ ಪ್ರಜೆಗಳಾಗಿ ನಾವು ಕಾಗದದ ಲಕೋಟೆಯನ್ನು ಬಳಸುವ ಮೂಲಕ ವಿಪುಲ ಉದ್ಯೋಗಾವಕಾಶ ಇರುವ ಕಾಗದದ ಲಕೋಟೆ ತಯಾರಿಯ ಗುಡಿಕೈಗಾರಿಕೆಯನ್ನು ಮತ್ತೆ ಊರ್ಜಿತಕ್ಕೆ ಬರುವಂತೆ ಪ್ರೋತ್ಸಾಹಿಸಬೇಕು.

ಒಮ್ಮೆ ಬಳಸಿದ ಪ್ಲಾಸ್ಟಿಕ್ ಚೀಲಗಳನ್ನು ಜೋಪಾನವಾಗಿಟ್ಟುಕೊಂಡು, ಮರುಬಳಸುವ ಮೂಲಕ ತೊಟ್ಟೆಗಳ ಸಂಖ್ಯೆ ಕಡಿಮೆ ಮಾಡಬಹುದು.

ಮನೆಯಲ್ಲಿ ಜೈವಿಕ, ಮತ್ತು ಪ್ಲಾಸ್ಟಿಕ್ ತ್ಯಾಜ್ಯವನ್ನು ಪ್ರತ್ಯಪ್ರತ್ಯೇಕವಾಗಿ ಶೇಖರಿಸಿ, ಅವುಗಳನ್ನು ಜವಾಬ್ದಾರಿಯುತವಾಗಿ ವಿಲೇವಾರಿ ಮಾಡಬೇಕು. ಬೀದಿಗಳಲ್ಲಿ, ಸಾರ್ವಜನಿಕ ಕಸದ ತೊಟ್ಟಿಗಳ ಒಳಗೆ-ಹೊರಗೆ ಒಟ್ಟಾರೆ ಬಿಸಾಡಿ, ಪ್ರಾಣಿಗಳ ಜೀವಕ್ಕೆ ಅಪಾಯವುಂಟಾಗದಂತೆ ಎಚ್ಚರವಹಿಸಬೇಕು.

ತಾತ್ಕಾಲಿಕ ಕ್ರಮವಾಗಿ, ನಿರ್ದಿಷ್ಟ ಪ್ರದೇಶದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಹೂಳಬಹುದು. ಆದರೆ ಅವು ಯಾವುವೂ ದೀರ್ಘಾವಧಿಯ ಶಾಶ್ವತ ಪರಿಹಾರವಲ್ಲ.

ಕ್ರಮೇಣ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣ ನಿಲ್ಲಿಸುವುದೊಂದೇ ಉತ್ತಮ ಪರಿಹಾರ ದಾರಿ.

**ಭೂಮಿ ಯಾರಿಗೂ ಸೇರಿದ್ದಲ್ಲ**

ಇರುವುದು ಒಂದೇ ಭೂಮಿ. ಈ ಭೂಮಿ ಯಾರಿಗೂ ಸೇರಿದ್ದಲ್ಲ. ನಾವು ಇಂದು ಇದ್ದು ನಾಳೆ ಹೋಗುವವರು. ನಮ್ಮನ್ನು ಪೊರೆಯುವ, ಲಾಲನೆ-ಪಾಲನೆ ಮಾಡುವ ಭೂತಾಯಿಯ ಮೈಯನ್ನು ಮಲಿನ ಮಾಡಲು ನಮಗೆ ಹಕ್ಕನ್ನು ಕೊಟ್ಟವರಾದರೂ ಯಾರು ? ಈ ನೆಲ ಮನುಷ್ಯನಿಗೆ ಮಾತ್ರ ಬಂದ ಬಳುವಳಿಯಲ್ಲ. ಸಮಸ್ತ ಜೀವಜಾಲಕ್ಕೆ ಇಲ್ಲಿ ಬದುಕುವ ಹಕ್ಕಿದೆ. ಹಾಗಾಗಿ ಇದ್ದಷ್ಟು ದಿನ ನಾವು ವಿನಯದಿಂದ ಸ್ವಚ್ಛ ಬದುಕು ಬದುಕಿ, ಸ್ವಚ್ಛ ಭೂಮಿಯನ್ನು ನಾಳೆಗೆ ಉಳಿಸಿ ನಮ್ಮ ಮುಂದಿನ ಪೀಳಿಗೆಗೆ, ಸಮಸ್ತ ಜೀವಕೋಟಿಗೆ ಬಿಟ್ಟುಹೋಗೋಣ.

❒

# ಸೌರಯುಗದ ಹೊಸ ಬೆಳಕಿನತ್ತ

ಯಂತ್ರ ಯುಗದ ಕಣ್ಣುಕ್ಕುಕ್ಕುವ 'ಬಯಲ'ಲ್ಲಿ ಬೆರಗಿನಿಂದ ಸುತ್ತಾಡುತ್ತಿರುವ ಮನುಷ್ಯ, 'ಆಲಯ'ದ ಮರೆ, ಬೆಚ್ಚಗಿನ ಸುಖ ಕಳೆಕೊಂಡು, ತಬ್ಬಲಿಯಾಗಿದ್ದಾನೆ. "ಪ್ರಭುತ್ವ" ಮತ್ತು "ಪ್ರಗತಿ"ಗಳು ಆತನ ಬೀಜಮಂತ್ರಗಳಾಗಿವೆ. 'ರಾಷ್ಟ್ರೀಯ ಪ್ರಭುತ್ವ' ಮತ್ತು ಆರ್ಥಿಕ ಪ್ರಗತಿಯ ಹೆಸರಲ್ಲಿ ಕಳೆದ ಶತಮಾನದಲ್ಲಿ ನಡೆದಷ್ಟು ನರಮೇಧ, ಹಿಂಸೆಗಳು ಪ್ರಾಯಃ ಜಗತ್ತಿನಲ್ಲಿ ಹಿಂದೆಂದೂ ನಡೆದಿರಲಿಲ್ಲ. ಅತಿ ತಾಂತ್ರಿಕತೆಯ ವೇಗ ಮತ್ತು ರಭಸಗಳು ತಂದೊಡ್ಡುತ್ತಿರುವ ತರ್ಕಬದ್ಧ, ಅತ್ಯಂತ ದಕ್ಷ ಹಾಗೂ ಭಾವನಾರಹಿತವಾದ ಹಿಂಸೆಯು, ಭಾವನಾತ್ಮಕವಾದ ಧರ್ಮದ ಹೆಸರಲ್ಲಿ ನಡೆದ ಹಿಂದಿನ ಎಲ್ಲಾ ಹಿಂಸೆಯನ್ನು ಮೀರಿಸಿಬಿಟ್ಟಿದೆ. ಯಂತ್ರ ನಾಗರೀಕತೆಯ ಸೌಕರ್ಯವು ಇಂದು ಜಗತ್ತನ್ನು ಹಿಂದೆಂದಿಗಿಂತಲೂ ಆಳವಾಗಿ, ಯಂತ್ರ-ಮನುಷ್ಯ, ಪ್ರಕೃತಿ-ಮನುಷ್ಯ, ಪ್ರಾಣಿ-ಮನುಷ್ಯ, ಹೆಣ್ಣು-ಗಂಡು, ಶ್ರೀಮಂತ-ಬಡವ, ಪ್ರಭು-ಪ್ರಜೆ, ಉತ್ಪಾದನೆ-ಉಪಭೋಗ, ಮೊದಲ ಜಗತ್ತು-ತೃತೀಯ ಜಗತ್ತು ಮುಂತಾಗಿ ಒಡೆಯುತ್ತಿದೆ.

ಶಕ್ತಿಯ ಉಪಾಸನೆಯ ಪರಾಕಾಷ್ಠೆಯಿಂದಾಗಿ ದೇವರ ಸೃಷ್ಟಿಗೆ ಸವಾಲೆಸೆಯುವ ಅಣುಬಾಂಬು ಮನುಷ್ಯನ ಒಂದು ಕೈಯಲ್ಲಿದ್ದರೆ, ಭೂಮಾತೆಯನ್ನು ಸಂಪೂರ್ಣ ಬತ್ತಲುಗೊಳಿಸಿ ಆಕೆಯ ಗರ್ಭವನ್ನೇ ಬಗೆಯುವ ತವಕದ ಪ್ರಗತಿ ಮಾದರಿ ಇನ್ನೊಂದು ಕೈಯ್ಯಲ್ಲಿದೆ. ನೂರು ಭೂಮಿಗಳ ಸಂಪತ್ತೂ ಜಾಗತೀಕರಣದ ದುರಾಸೆಯ ಕಾವನ್ನು ತಣಿಸಲು ಸಾಲದಾಗಿದೆ. ಆಗೋಳಿ ಮಂಜಣ್ಣನಂತೆ ಮನುಷ್ಯ ತನ್ನ ಕಾಲಿಗೇ ತಾನು ಕೊಡಲಿಯೇಟು ಹಾಕಿಕೊಳ್ಳುತ್ತಿದ್ದಾನೆ.

---

ಉದಯವಾಣಿ, ಜನವರಿ ೩, ೨೦೦೦

ಅತಿರೇಕ ಭೌತಿಕ ಸಂಪತ್ತಿನ ರಾಶಿಯ ನಡುವೆ ಮುರುಟಿಹೋದ ಮನುಷ್ಯನ ಅಂತಃಕರಣವನ್ನು ಅರಳಿಸುವ ನೈಜ ಸಾಂಸ್ಕೃತಿಕ - ಆಧ್ಯಾತ್ಮಿಕ ಬದುಕಿಗೆ ಇಂದು ಮಬ್ಬು ಕವಿದಿದೆ. ಜೀವಪರ ಮೌಲ್ಯಗಳಾದ ಉಪನಿಷತ್ ಋಷಿಗಳ ಶಾಂತಿ-ಸಹಕಾರ ಭಾವ; ಬುದ್ಧನ ಆಸೆಯ ಸಂಯಮ-ಅನುಕಂಪ, ಮಹಾವೀರನ ಅಹಿಂಸೆ-ಋತಶೀಲತೆ, ಏಸುಕ್ರಿಸ್ತನ ಜೀವಪ್ರೀತಿ -ಕ್ಷಮಾ ಪೂರ್ಣವಾದ ಧಾರ್ಮಿಕ ಮನಸ್ಸನ್ನು ಮನುಷ್ಯ ಕಳಕೊಂಡಿದ್ದಾನೆ. ತನ್ನ ಸುತ್ತಲಿರುವ ಸಕಲ ಸುಂದರ ಸಂಗತಿಗಳೊಡನೆ ತನ್ನನ್ನು ತಾನು ಬೆಸೆದುಕೊಂಡು ಬದುಕನ್ನು ಅರ್ಥಪೂರ್ಣಗೊಳಿಸುವ ನೈಜ ಧಾರ್ಮಿಕತೆಯ ಮರೆವಿನಿಂದಾಗಿ ಮನುಷ್ಯ ಇಂದು, ಧರ್ಮವನ್ನು ಒಂದು ರಣರಂಗ ಮಾಡಿ ಸದ್ದು, ಗದ್ದಲ, ಪ್ರದರ್ಶನಗಳೇ ಧಾರ್ಮಿಕತೆಯೆಂಬಂತೆ ವೀರಾವೇಶದಲ್ಲಿ ಮತಾಂಧನಾಗಿ ಒಂದೆಡೆ ಹೂಂಕರಿಸುತ್ತಿದ್ದರೆ; ಇನ್ನೊಂದೆಡೆ, ಧರ್ಮವನ್ನು ಆಕರ್ಷಕ ಪ್ಯಾಕೇಜುಗಳಲ್ಲಿ ಮಾರುಕಟ್ಟೆಯ ಸರಕಾಗಿ ಪರಿವರ್ತಿಸಿ ಈ ನೆಲದ ಸಂಬಂಧ ಕಳಕೊಂಡು ಮಾನಸಿಕ ಅಭದ್ರತೆಯಿಂದ ನರಳುವ ಆಧುನಿಕ ತ್ರಿಶಂಕುಗಳಿಗೆ ಮಾರುವ ವ್ಯಾಪಾರೀ ಹೈ-ಟೆಕ್ ಗುರುಗಳು ಎಲ್ಲೆಂದರಲ್ಲಿ ರಾರಾಜಿಸುತ್ತಿದ್ದಾರೆ. ಈ ಧಾರ್ಮಿಕ ವಿಕಲ್ಪಗಳಿಗೆ ಸಜ್ಜನ ಧಾರ್ಮಿಕನ ಘನತೆ-ಗೌರವಗಳೇ ಬಲಿಯಾಗುತ್ತಿವೆ. ನಿಜಕ್ಕೂ ಈತ ಈ ಸಪ್ಪಳಗಳ ಮಧ್ಯೆ ಹಾಸ್ಯಾಸ್ಪದ ವ್ಯಕ್ತಿಯಾಗುತ್ತಿದ್ದಾನೆ.

**ಭರವಸೆಯ ಬೆಳಕು - ಗಾಂಧಿ :**

ಆದರೆ ಈ ಶತಮಾನದ ಎಲ್ಲ ತಲ್ಲಣಗಳ ನಡುವೆಯೂ , ಹೊಸಯುಗದ ಭರವಸೆಯ ಬೆಳಕು ಹರಿಯುತ್ತಿರುವುದೂ ಅಷ್ಟೇ ನಿಚ್ಚಳವಾಗಿ ವ್ಯಕ್ತವಾಗುತ್ತಿದೆ. ಇಂದಿನ ಗಂಭೀರ ಬಿಕ್ಕಟ್ಟುಗಳಿಗೆ ಪರಿಹಾರವಾಗಿ, ಗಾಂಧಿ ಎಲ್ಲಾ ಧರ್ಮಗಳ ತಿರುಳಾದ ಸತ್ಯ-ಶಾಂತಿ-ಅಹಿಂಸೆ-ಸರಳತೆ-ಸಂಯಮ-ಅಸ್ತೇಯ- ಪರಸ್ಪರ ಸಹಕಾರವೇ ಮೊದಲಾದ ಸಾತ್ವಿಕ ಸಂಹಿತೆಗಳನ್ನು ಸುಂದರವಾಗಿ ಏಕಸೂತ್ರದಲ್ಲಿ ಪೋಣಿಸಿ ತನ್ನ ರಾಜಕೀಯ ಆರ್ಥಿಕ, ನೈತಿಕ, ಧಾರ್ಮಿಕ ಬದುಕನ್ನು ರೂಪಿಸಿಕೊಂಡರಲ್ಲಾ, ಅವರ ಆ ಬದುಕಲ್ಲೇ ಭರವಸೆಯ ಭವಿಷ್ಯದ ಚಿಗುರೊಡೆಯುತ್ತಿದೆ. ಗಾಂಧಿಯ ಬದುಕು ಬಿಂಬಿಸುವ ಬಾಳ ನೀತಿಸಂಹಿತೆಯು ಇಡೀ ಜಗತ್ತಿನಲ್ಲಿ ಮತ್ತೆ ಸತ್ವಶಾಲಿಯಾಗುವ ಎಲ್ಲ ಲಕ್ಷಣಗಳೂ ಇಂದು ನಮಗೆ ಗೋಚರಿಸುತ್ತಿವೆ. ಇದಕ್ಕೆ ಸಾಕ್ಷಿಯಾಗಿ ಪಾಶ್ಚಾತ್ಯ ಜಗತ್ತು ಗಾಂಧಿಯನ್ನು ಈ ಶತಮಾನದ ಅತ್ಯಂತ ಶ್ರೇಷ್ಠ ವ್ಯಕ್ತಿಯೆಂದು ಗುರುತಿಸಿದೆ. ಅಮೇರಿಕಾದ ಜನಪ್ರಿಯ 'ಟಾಯಮ್' ವಾರಪತ್ರಿಕೆ ತನ್ನ ವಿಶೇಷ ಲೇಖನದಲ್ಲಿ ಇತ್ತೀಚೆ, "ಮನುಷ್ಯ ಸಂತತಿಯ ವಿನಾಶ ತಪ್ಪಿಸಲು ಇರುವ ಏಕೈಕ ಮಾರ್ಗವೆಂದರೆ ಗಾಂಧಿ. ಹಾಗಾಗಿ ೨೧ನೆಯ ಶತಮಾನದಲ್ಲಿ ಗಾಂಧೀಜಿ ಇಡೀ ಜಗತ್ತಿನಲ್ಲೇ ಪ್ರಬಲಶಾಲಿಯಾಗುತ್ತಾರೆ" ಎಂದು ತನ್ನ ಅಭಿಪ್ರಾಯ ವ್ಯಕ್ತಪಡಿಸಿದೆ.

ಇರುವ ಒಂದೇ ಭೂಮಿಯ ಸಾಂತ ಸಂಪತ್ತನ್ನು ತನ್ನ ಅನಂತ ಆಸೆಗಳ ಪೂರೈಕೆಗಾಗಿ ಚತುರತೆಯಿಂದ ಉಪಯೋಗಿಸಿಕೊಳ್ಳುವ ಕಲೆಯನ್ನು ತಿಳಿಸುವ ಅರ್ಥಶಾಸ್ತ್ರದ ಬದಲು ತುದಿ ಮೊದಲಿಲ್ಲದ ತನ್ನ ಆಸೆಗಳಿಗೆ ಕಡಿವಾಣ ಹಾಕಿ 'ಭೂಮಿ ಯಾರಿಗೂ ಸೇರಿದ್ದಲ್ಲ, ಹಾಗಾಗಿಯೇ ಸಮಸ್ತ ಜೀವಜಾಲಕ್ಕೆ ಸೇರಿದ್ದು' ಎಂಬ ಈ ನೆಲದ ವಿವೇಕದಿಂದ ಮನುಷ್ಯ, ತನ್ನ ಮೂಲಭೂತ ಅವಶ್ಯಗಳಿಗೆ ತಕ್ಕಷ್ಟೇ ಭೂ ಸಂಪತ್ತನ್ನು ಬಳಸಿಕೊಳ್ಳುವ ಸಂಯಮ ತೋರಿಸಬೇಕು. ಇದು ಮಾತ್ರ

ಆತನನ್ನು ವಿನಾಶದಿಂದ ಪಾರುಮಾಡಬಲ್ಲುದು ಎಂಬ ಗಾಂಧಿಯ ಅರ್ಥ ಸಂಹಿತೆ ಮುಂದಿನ ಶತಮಾನದಲ್ಲಿ ಇಡಿಯ ಜಗತ್ತಿನ ತುಡಿತವಾಗುವ ಸಾಧ್ಯತೆಗಳಿವೆ. ಮನುಷ್ಯನನ್ನು ಭೌತಿಕ ಉತ್ಕರ್ಷದಿಂದ ಅಂತರಂಗದ ಉತ್ಕರ್ಷಕ್ಕೆ ಹೊರಳಲು ಉತ್ತೇಜನ ನೀಡುವ ವಿಕೇಂದ್ರೀಕರಣದ ತುಡಿತ, ಪರಿಸರ ಸಮತೋಲನದ ಕಾಳಜಿ, ಆಧ್ಯಾತ್ಮಿಕತೆಯತ್ತ ಒಲವು, ಪುಷ್ಪವತೀ ಭೂಮಿಯ ಸಂವಾದಿಯಾದ ಸ್ತ್ರೀತ್ವದ ವಿಶಿಷ್ಟತೆಯನ್ನು ಪೊರೆಯುವ ಚಳುವಳಿಗಳು ಮತ್ತು ಸರಳತೆ, ಅಸ್ವಾದ, ಅಹಿಂಸೆ ಮೊದಲಾದ ನೈತಿಕ ಮೌಲ್ಯಗಳ ಮರು ಶೋಧದತ್ತ ಈಗಾಗಲೇ ಜಗತ್ತಿನ ಗಮನ ಹರಿಯಲಾರಂಭಿಸಿದೆ.

**ಪರ್ಯಾಯ ಜಾಗತೀಕರಣ**

ಇದನ್ನು ಪರ್ಯಾಯ ಜಾಗತೀಕರಣ ಪ್ರಕ್ರಿಯೆಯೆಂದು ನಾನು ಕರೆಯುತ್ತೇನೆ. ಈ ಪ್ರಕ್ರಿಯೆಯಲ್ಲಿ ಮದಭರಿತ ಅಮೇರಿಕಾವು ತನ್ನ ದೊಡ್ಡಣ್ಣನ ಪಟ್ಟದಿಂದ ಹಿಂದೆ ಸರಿಯುವ ಸಾಧ್ಯತೆ ಒಂದೆಡೆಯಿದ್ದರೆ, ಜಪಾನು ತನ್ನ ಯಾಂತ್ರಿಕ ಶಿಸ್ತಿನ ಅತಿರೇಕತೆಯಲ್ಲಿಯೇ ಆಂತರಿಕವಾಗಿ ಸೊರಗಿ ಹೋಗಬಹುದು. ಚೀನಾವು ಮುಂದಿನ ಶತಮಾನದ ಆರಂಭದ ಹಂತದಲ್ಲಿ ಪ್ರಬಲವಾಗುವ ಎಲ್ಲ ಸೂಚನೆಗಳಿದ್ದರೂ ಕೂಡ, ತನ್ನ ನೆಲದ ವಿವೇಕ - ಸಂಸ್ಕೃತಿಗಳನ್ನು ಪೂರಾ ಕೈ ಬಿಟ್ಟು, ವ್ಯತಿರಿಕ್ತವಾಗಿ ಟಿಬೇಟಿನ ಅತೀ ಪ್ರಾಚೀನ ಸಂಸ್ಕೃತಿಯನ್ನು ಸಂಪೂರ್ಣನಾಶಮಾಡಿದುದರ ಪರಿಣಾಮವಾಗಿ, ಆತ್ಯಂತಿಕವಾಗಿ ಹಿನ್ನಡೆ ಕಾಣುವ ಸಾಧ್ಯತೆಯಿದೆ. ಯುರೋಪು ಇನ್ನೊಂದೆಡೆ ಈ ಜಾಗತಿಕ ಚದುರಂಗದಾಟದಲ್ಲಿ ಸೋಲುತ್ತ, ತೆವಳುತ್ತ ಮುದುಡಿಕೊಳ್ಳುತ್ತ, ಆದರೂ ತನ್ನ ಹಿಂಜರಿತದಲ್ಲಿ ಅತ್ಯುಗ್ರ ಪ್ರತಿರೋಧ ತೋರಿಸುತ್ತಾ ಬೋಸ್ನಿಯಾ, ಪ್ಯಾಲೆಸ್ಟೈನ್ ಮುಂತಾದ ಕಡೆಗಳಲ್ಲಾಗುವಂತೆ ಬಹಳಷ್ಟು ಜನಾಂಗೀಯ ಹಿಂಸೆ -ಕ್ರೌರ್ಯಗಳಿಗೆ ಕಾರಣವಾಗಬಹುದು.

ಈ ಜಾಗತಿಕ ವಿದ್ಯಮಾನಗಳ ನಡುವೆ ನೂರಾರು ವರುಷಗಳ ಅನುಭವ ಜನ್ಯ ಸ್ಥಳೀಯ ತಿಳುವಳಿಕೆಯನ್ನು ಇನ್ನೂ ಸೃಜನಾತ್ಮಕವಾಗಿ ಬಳಸಿಕೊಂಡು ಬರುತ್ತಿರುವ ಭಾರತದಂತಹ ರಾಷ್ಟ್ರಗಳಿಗೆ ತಮ್ಮದೇ ಆದ ರಾಜಕೀಯ 'ಸ್ಪೇಸ್' ನಿರ್ಮಾಣವಾಗುವ ಸಾಧ್ಯತೆಗಳು ಬಹಳಷ್ಟಿವೆ. ಇಂದಿನ 'ಇಲೆಕ್ಟ್ರಾನಿಕ್' ಯುಗದಲ್ಲಿ, 'ಕಂಪ್ಯೂಟರ್ ಚಿಪ್'ನಿಂದ ಹಿಡಿದು ಹಲವಾರು ಇಲೆಕ್ಟ್ರಾನಿಕ್ ಅರೆಸರಕುಗಳ 'ಮಾಹಿತಿ' ತಂತ್ರಜ್ಞಾನದ 'ಸಾಫ್ಟ್‌ವೇರ್' ರಚನೆಗಳೂ ಗುಡಿ ಕೈಗಾರಿಕೆಯಂತೆ ಮನೆ ಮನೆಗೆ ವಿಕೇಂದ್ರೀಕರಣವಾಗುತ್ತಿದೆ. 'ಇಲೆಕ್ಟ್ರಾನಿಕ್' ಸಂಪರ್ಕ ಮಾಧ್ಯಮ ಮತ್ತು ಮಾಹಿತಿ ಯುಗದಲ್ಲಿ ಒಟ್ಟು ಉತ್ಪಾದನೆಯ ಹಲವಾರು ಹಂತಗಳು ವಿಕೇಂದ್ರೀಕೃತ ನೆಲೆಗಳಿಗೆ ಮರಳುವ ಸಾಧ್ಯತೆಯಿರುವುದರಿಂದ ಮುಂದಿನ ೫೦ ವರುಷಗಳಲ್ಲಿ ಪಾರಂಪರಿಕ ಕರಕುಶಲಗಾರರಾದ ಕುಂಬಾರ, ನೇಕಾರ, ಕಮ್ಮಾರರಿಂದ ಹಿಡಿದು ಕಂಪ್ಯೂಟರ್ 'ಚಿಪ್ಸ್' ತನಕ ವಿಶಾಲವಾಗಿ ಹಮ್ಮಿಕೊಂಡಿರುವ ವಿಭಿನ್ನ ಉತ್ಪಾದನಾ ಕರಕುಶಲಗಾರರು ಒಟ್ಟಾಗಿ ಬೃಹತ್ತಾದ ಒಂದು ಹೊಸ "ಸೋಶಿಯಲ್ ಕ್ಲಾಸ್" ಆಗಿ ರೂಪುತಳೆಯುವ ಸಾಧ್ಯತೆಗಳಿವೆ; ಮಾತ್ರವಲ್ಲ ಈ ವರ್ಗ ಸತ್ವಶಾಲಿಯಾಗಿ ತಮ್ಮ ಪರ್ಯಾಯ 'ಏಜೆಂಡಾ'ವನ್ನು ಮಂಡಿಸುವ ಎಲ್ಲ ಸಾಧ್ಯತೆಗಳೂ ಇವೆ.

ಇದರ ಜತೆ, ಮುಂದಿನ ಶತಮಾನದಲ್ಲಿ ಇಡಿಯ ಜಗತ್ತಿನ ರಾಜಕೀಯ, ಆರ್ಥಿಕ ಭೂಪಟದ ಪುನರ್ರಚನೆಯ ಸಂಭವದ ಸೂಚನೆಗಳೂ ಸಾಕಷ್ಟಿವೆ. ಈ ಬದಲಾವಣೆಯ ಹಂತದಲ್ಲಿ ಲಕ್ಷಾಂತರ ಹಳ್ಳಿಗಳ ಬದುಕಿನ ಉಸಿರಾದ ವಿಕೇಂದ್ರೀಕೃತ ಉತ್ಪಾದನಾ ವಿಧಾನಗಳು, ಅವು ಸವಕಳಿಯಾದರೂ ಕೂಡ, ಪರಂಪರಾಗತವಾಗಿ ಇನ್ನೂ ಹರಿದು ಬರುತ್ತಿರುವ ಭಾರತಕ್ಕೆ, ೨೧ನೆಯ ಶತಮಾನದ ಎಲ್ಲ ಸಾಧ್ಯ ವಿದ್ಯಮಾನಗಳು ತಮ್ಮದೇ ಆದ ವಿಪುಲ ಅವಕಾಶಗಳನ್ನು ಒದಗಿಸುವುದಂತೂ ಸ್ಪಷ್ಟ. ಒದಗಿ ಬರುವ ಈ 'ಸ್ಪೇಸ್'ನ್ನು ಬಳಸಿಕೊಂಡು ತನ್ನ ಬಸಿರಲ್ಲಿ ಕಾಪಿಟ್ಟುಕೊಂಡು ಬಂದ ಲೋಕವಿದ್ಯೆಯ ಪರ್ಯಾಯ ವಿಜೇಂಡಾವನ್ನು ಅಭಿವೃದ್ಧಿ ವಾಗ್ವಾದಗಳ ವೇದಿಕೆಯ ಕೇಂದ್ರ ಸ್ಥಾನಕ್ಕೆ ತಂದು ನಿಲ್ಲಿಸುವ ಜಾಣ್ಮೆಯನ್ನು ಭಾರತ ತೋರಬೇಕು. ಇದೇ, ಜನಪದ ವಿವೇಕದ ಕಾಯಕವನ್ನು ಬೆಳವಣಿಗೆಯ ಕೇಂದ್ರ ಬಿಂದುವಾಗಿ ಮಾಡಿಕೊಳ್ಳಬೇಕೆಂದು ಒತ್ತಾಯಿಸುವ ಗಾಂಧಿಗೆ ನಿಜವಾದ ಅರ್ಥದಲ್ಲಿ ಸಲ್ಲಿಸುವ ಗೌರವವಾಗಿದೆ.

ಆದರೆ ಈ ತಿಳುವಳಿಕೆಗಳೆಲ್ಲ ಒಗ್ಗೂಡುತ್ತ, ಸತ್ವಶಾಲಿಯಾಗುತ್ತ ಮುನ್ನಡೆಯುತ್ತಿದ್ದಂತೆ ಪ್ರಬಲ ಕೈಗಾರಿಕಾ ಸಮಾಜದ ಕಡೆಯಿಂದ ಪ್ರಬಲವಾದ ಪ್ರತಿರೋಧವನ್ನೂ ಇವು ಎದುರಿಸಬೇಕಾಗುತ್ತದೆ; ತೀವ್ರ ಸಂಘರ್ಷಕ್ಕೆ ಸಜ್ಜಾಗಬೇಕಾಗುತ್ತದೆ. ಯಾಕೆಂದರೆ ಜಾಗತೀಕರಣದ ವೇಗಕ್ಕೊಳಪಟ್ಟ ಇಂದಿನ ಮಾಹಿತಿ ತಂತ್ರಜ್ಞಾನ ಪ್ರೇರಿತ ಕೈಗಾರಿಕಾ ಜಗತ್ತಿಗೆ ಅದರದೇ ಆದ ಅತ್ಯುಗ್ರ ಲೆಕ್ಕಾಚಾರಗಳಿವೆ. ಕೈಗಾರಿಕಾ ಸಮಾಜದ ಕ್ರೌರ್ಯದ ಕಬಂಧ ಬಾಹುಗಳು ಸುಮ್ಮನೇ ತಾವು ಹಿಂಜರಿಯುವುದಿಲ್ಲ. ೨೧ನೆಯ ಶತಮಾನದ ಆರಂಭದಲ್ಲಿ ಹಾಗಾಗಿ, ಎಗ್ಗಿಲ್ಲದ ಪ್ರಗತಿ ಪ್ರೇರಿತ ಜಗತ್ತಿಗೆ ನೈತಿಕ ಚೌಕಟ್ಟಿನ ಲಗಾಮನ್ನು ತೊಡಿಸಲು  ಪ್ರಯತ್ನಿಸುವ ಚಳುವಳಿಗಳು, ಹಿಂಸೆ, ಕ್ರೌರ್ಯ, ದಬ್ಬಾಳಿಕೆ, ಸ್ತ್ರೀಯರ ಮೇಲಿನ ದೌರ್ಜನ್ಯ, ಬುಡಕಟ್ಟು ಜನಾಂಗಗಳ ಮೇಲಿನ ಅತ್ಯುಗ್ರ ಆಕ್ರಮಣಗಳಿಗೆ ಕಾರಣವಾಗಬಹುದು.

ಇದರ ಜತೆ, ಕ್ಲಾಸಿಕಲ್ ಅರ್ಥಶಾಸ್ತ್ರದ ಎಲ್ಲ ಸಿದ್ಧಾಂತಗಳೂ ತಲೆಕೆಳಗಾಗುವ ಸಂಭವವಿದೆ. ಕಳೆದ ೨೦೦ ವರುಷಗಳಿಂದ ಕೈಗಾರಿಕಾ ಬಂಡವಾಳವು ನಮ್ಮ ಅರ್ಥಶಾಸ್ತ್ರೀಯ ಸಿದ್ಧಾಂತದ ತಳಪಾಯವಾಗಿದ್ದರೆ, ಇಂದು ಈ ಸಿದ್ಧಾಂತ ಕ್ರಮೇಣ ಹಿನ್ನಡೆ ಕಂಡು, ಮಾಹಿತಿ ತಂತ್ರಜ್ಞಾನ ಆಧಾರಿತ ಹಣಕಾಸು ಬಂಡವಾಳದ ಅರ್ಥಶಾಸ್ತ್ರದ ಹೊಸಯುಗ ಆರಂಭವಾಗುತ್ತಿದೆ. ಉತ್ಪಾದನೆಯೇ ಇಲ್ಲದೆ ಕೇವಲ ಮಾಹಿತಿಯನ್ನೇ ಶಕ್ತಿಯನ್ನಾಗಿ ಬಳಸುವ ಈ ಯುಗವು ಅತ್ಯುಗ್ರ ಹಿಂಸಾಕಾರಿಯಾಗಿ ಪರಿಣಮಿಸುವ ಸಾಧ್ಯತೆಯಿದೆ. ಇಲ್ಲಿ ಹಿಂದಿನ ನಮ್ಮ  ಯಾವ ಅರ್ಥಶಾಸ್ತ್ರದ ಸಿದ್ಧಾಂತಗಳೂ ಕೆಲಸ ಮಾಡುವುದಿಲ್ಲ.

**ಸೌರಯುಗಕ್ಕೆ ದಾರಿ :**

ಈ ಹಿಂಸಾ ಮಾದರಿಯಿಂದ ಸಮಗ್ರವನ್ನು ಒಳಗೊಳ್ಳುವ ಪರಿಸರ ವಿಜ್ಞಾನೀಯ ಸೌರಯುಗಕ್ಕೆ ದಾರಿಯೇನೂ ಸುಗಮವಲ್ಲ. ಆದರೂ ಅನಿವಾರ್ಯವಾಗಿ ಈ ಪರಿವರ್ತನೆ ಆಗಿಯೇ ತೀರಬೇಕಾಗುತ್ತದೆ. ಈಗಾಗಲೇ ಜಗತ್ತಿನ ಅನೇಕ ವಿಭಿನ್ನ ಸಮಾಜಗಳು ಯಾಂತ್ರಿಕ ವಿಶ್ವದೃಷ್ಟಿಯಿಂದ ಅಖಂಡವಾದ ಪರಿಸರ ವಿಜ್ಞಾನೀಯ ವಿಶ್ವದೃಷ್ಟಿಯತ್ತ ಹೊರಳಲು ಆರಂಭಿಸಿವೆ. ಆದರೆ ಈ

ಉದಯಿಸುವ ಈ ಹೊಸ ಸಂಸ್ಕೃತಿಯ ಸೈದ್ಧಾಂತಿಕ, ಅಮೂರ್ತ ಸಂಕೀರ್ಣತೆಗಳನ್ನು ಅರ್ಥೈಸಿಕೊಂಡು ತನಗೆ ಒದಗಿ ಬಂದ ವಿಪುಲ ಅವಕಾಶಗಳನ್ನು ಉಪಯೋಗಿಸಿಕೊಳ್ಳುವ ಮಾನಸಿಕ ಸಿದ್ಧತೆ ಮತ್ತು ಮೌಲ್ಯಗಳ ಪರಿವರ್ತನೆ ಭಾರತದಲ್ಲಾಗಬೇಕಾಗಿದೆ.

ಆದರೆ, ಮಾರುಕಟ್ಟೆ ಬೇಡಿಕೆಗನುಗುಣವಾಗಿ ರೂಪುಗೊಳ್ಳುತ್ತಿರುವ ನಮ್ಮ ಇಂದಿನ ಶುಷ್ಕ, ಯಾಂತ್ರಿಕ ಶಿಕ್ಷಣಪದ್ಧತಿಯಿಂದಂತೂ ಈ ಪರಿವರ್ತನೆ ಸಾಧ್ಯವೇ ಇಲ್ಲ.

# ಅವಿಭಜಿತ ದಕ್ಷಿಣ ಕನ್ನಡದ ವೈಶಿಷ್ಟ್ಯ: ಇನ್ನೊಂದು ಮುಖ

ಉಡುಪಿಯಿಂದ ಮಣಿಪಾಲಕ್ಕೆ ನಾನು ಖಾಸಗಿ ಬಸ್ಸೊಂದರಲ್ಲಿ ಪ್ರಯಾಣಿಸುತ್ತಿದ್ದೆ. ಬಸ್ಸು ತುಂಬಿತ್ತು. ಒಂದು ಸೀಟಿನಲ್ಲಿ ಬಿಜಾಪುರದ ಕೂಲಿ ಮಹಿಳೆ ಕೂತಿದ್ದಳು. ಆಕೆಯ ಪಕ್ಕದಲ್ಲಿ ಒಂದು ಸೀಟು ಖಾಲಿ ಇತ್ತು. ಆಕೆಯ ಬಳಿಯಲ್ಲೇ ಒಬ್ಬ 'ಜಂಟಲ್ ಮ್ಯಾನ್' ಆ ಖಾಲಿ ಸೀಟನ್ನು ಕಂಡು ನಿಂತೇ ಇದ್ದ. ಉಳಿದೆಲ್ಲಾ ಸೀಟುಗಳು ಭರ್ತಿ ಯಾಗಿದ್ದನ್ನು ಕಂಡ ಕಂಡಕ್ಟರ್, ಆತನನ್ನು ಆ ಮಹಿಳೆಯ ಪಕ್ಕದ ಸೀಟಲ್ಲಿ ಕೂತುಕೊಳ್ಳಲು ಹೇಳಿದ. ಆದರೆ ಆ ವ್ಯಕ್ತಿ ಕೂತುಕೊಳ್ಳಲಿಲ್ಲ. ಕೆಲವು ನಿಮಿಷಗಳ ನಂತರ, ಮುಂದಿನ ಸೀಟಿನಲ್ಲಿ ಕೂತಿದ್ದ ಪ್ರಯಾಣಿಕನ ಪಕ್ಕದ ಸೀಟು ಖಾಲಿಯಾಯಿತು. ಆತ ಗಬಕ್ಕನೆ ಆ ಸೀಟನ್ನು ಹಿಡಿದು ಕೂತ. ದಕ್ಷಿಣ ಕನ್ನಡಿಗನ (ಉಡುಪಿ ಜಿಲ್ಲೆಯೂ ಸೇರಿ) ಮನೋಭಾವಕ್ಕೆ ಇದೊಂದು ಸಂಕೇತಿಕ ನಿದರ್ಶನ.

ಬಿಜಾಪುರದ ಕೂಲಿ ಮಹಿಳೆ ಹರಕು-ಕೊಳಕು ಬಟ್ಟೆ ತೊಟ್ಟು, ಹೇಸಿಕೆ ಕಾಣುತ್ತಾಳೆ; ವಾಸನೆ ಬರುತ್ತಾಳೆ. ಈ 'ಜಂಟಲ್ ಮ್ಯಾನ್' ಆಕೆಯ ಬಳಿ ಹೇಗೆ ಕೂತಾನು ? ಈ ಕೂಲಿ ಮಹಿಳೆಯಂತಿರುವ ಬಡಜನರಿಂದಲೇ ತುಂಬಿರುವ ಭಾರತದ ಈ ಮುಕ್ಕಾಲು ಭಾಗದ ಜನರ ಪರಿಚಯವೇ ಈತನಿಗಿಲ್ಲ. ಈ ಜನ, ಆತನ ಭಾರತದಲ್ಲಿ 'ಅವರು' ಆಗಿ ಬಿಡುತ್ತಾರೆ. ತನ್ನ ಭಾರತದಲ್ಲಿ ಇಂಥ ಮಂದಿಗೆ ಬದುಕುವ ಹಕ್ಕುಕೂಡ ಇಲ್ಲ ಎಂಬ ಮನೋಭಾವದ ಪ್ರತಿಷ್ಠಿತರನ್ನು ಬೇರೆ ಜಿಲ್ಲೆಗಳಿಗಿಂತ ಹೆಚ್ಚು ಈ ಜಿಲ್ಲೆಯಲ್ಲಿ ಕಾಣಬಹುದು. "ಗಟ್ಟದ ಮೇಲಿನ ಜನರು" ಎಂದು

---

ಲಂಕೇಶ್ ಪತ್ರಿಕೆ (ದೀಪಾವಳಿ ವಿಶೇಷಾಂಕ), ೧೯೯೭

ತಾತ್ಸಾರದಿಂದ ಕಾಣುವ ದಕ್ಷಿಣಕನ್ನಡಿಗ "ನಿನಗಿಂತ ನಾನು ಪವಿತ್ರ" (holier than thou) ಎಂಬ ದುರಹಂಕಾರ ಪೀಡಿತನಾಗಿದ್ದಾನೆ. ಪ್ರದರ್ಶನಶೀಲತೆ, ಒಣಜಂಬ, ಆಡಂಬರಗಳು ದಕ್ಷಿಣ ಕನ್ನಡಿಗನನ್ನು ಎಲ್ಲಿದ್ದರೂ ಪ್ರತ್ಯೇಕವಾಗಿ ಪರಿಚಯಿಸಿ ಬಿಡುವುದು, ಇಂದಿನ ದಕ್ಷಿಣ ಕನ್ನಡದ ಪ್ರಮುಖ ವೈಶಿಷ್ಟ್ಯ ಎನ್ನಬಹುದು.

ಆಹಾರ ಸಾಮಾಗ್ರಿ ಅಕ್ರಮದಾಸ್ತಾನು ಮಾಡಿದ ಅಂಗಡಿಗೆ ಸರಕಾರೀ ಅಧಿಕಾರಿಗಳು ಧಾಳಿಮಾಡಿ, ಆ ವ್ಯಾಪಾರಿಯನ್ನು ಬಂಧಿಸುತ್ತಾರೆ. ಮರುದಿನ, ಆ ವ್ಯಾಪಾರಿಯ ಪರವಾಗಿ ದಕ್ಷಿಣಕನ್ನಡದ ಆ ಪೇಟೆ ಹರತಾಳ ಆಚರಿಸುತ್ತದೆ. ಚಿನ್ನದ ಗಟ್ಟಿಗಳ ಕಾಳಸಂತೆ ಕೋರನನ್ನು ಮಾಲು ಸಹಿತ ಹಿಡಿದಾಗಲೂ ಪೇಟೆ ಆತನ ಪರವಾಗಿ ಪ್ರತಿಭಟನೆ ಸಲ್ಲಿಸುತ್ತದೆ. ಹಲವಾರು ಕೊಲೆಗಳಿಂದ ಪ್ರಸಿದ್ಧವಾದ ಕೆಳಜಗತ್ತಿನ ಮಾಫಿಯಾ ದೊರೆಯನ್ನು ಸೆರೆ ಹಿಡಿದಾಗ, ಆತನನ್ನು ಬಿಡುಗಡೆಗೊಳಿಸಬೇಕೆಂದು ಸಾರ್ವಜನಿಕ ಪ್ರತಿಭಟನೆ ನಡೆಯುತ್ತದೆ. ಆದರೆ ವಿಪರ್ಯಾಸವೆಂದರೆ ಬಹುಜನರ ಹಿತಕ್ಕಾಗಿ, ಸಾಮಾಜಿಕ ನ್ಯಾಯಕ್ಕಾಗಿ, ರೈತರು ಸಂಕಷ್ಟದಿಂದ ಕಂಗಲಾಗಿ ಸಾಮೂಹಿಕ ಆತ್ಮಹತ್ಯೆಗೆ ತೊಡಗಿದಾಗ ಮಹಿಳೆ - ದುರ್ಬಲರ ಶೋಷಣೆಯ ವಿರುದ್ಧ ಹೋರಾಟ ನಡೆಸಿದ ದಾಖಲೆಯೇ ಪ್ರಾಯಃ ಈ ಜಿಲ್ಲೆಯಲ್ಲಿ ಇಲ್ಲ. 1870ನೇ ಇಸವಿಯಿಂದೀಚೆ ಮಂಗಳೂರಿನ ಕುದಮಲ್ ರಂಗರಾಯರ ಹರಿಜನೋದ್ಧಾರ ಚಳವಳಿಯನ್ನು ಮತ್ತು ಅಲ್ಲೊಬ್ಬ ಇಲ್ಲೊಬ್ಬ ಶಿವರಾಮ ಕಾರಂತರಂತಹ ವ್ಯಕ್ತಿಗಳು ಸಾಮಾಜಿಕ ನ್ಯಾಯಕ್ಕಾಗಿ ವ್ಯಕ್ತಿಗತವಾಗಿ ಪ್ರತಿಭಟಿಸಿದ್ದನ್ನು ಬಿಟ್ಟರೆ, ದಕ್ಷಿಣಕನ್ನಡದ ಒಟ್ಟೂ ಸಮುದಾಯ ಸಾಮಾಜಿಕ ಹೋರಾಟ ನಡೆಸಿದ್ದೇನಾದರೂ ಇದೆಯೇ ಎಂಬುದನ್ನು ನಾವು ಮತ್ತೆ ವಿಮರ್ಶಿಸಬೇಕಾಗಿದೆ.

೨೦ನೆಯ ಶತಮಾನದ ಮಧ್ಯಭಾಗದಿಂದ ವ್ಯಾಪಾರ-ವಾಣಿಜ್ಯ ಆಸಕ್ತಿಗಳು ಹೆಚ್ಚಾದಂತೆ ದಕ್ಷಿಣಕನ್ನಡಕ್ಕೆ ದಿಢೀರ್ ಮೇಲೇರುವ ಹವಣಿಕೆ ಆರಂಭವಾಯಿತು. ಅಂದು ಬಡಿದ ವಿವೇಚನಾ ಶೂನ್ಯ 'ಡೆವಲಪ್‌ಮೆಂಟ್ ಜ್ವರ' ಜನರ ಬದುಕಿನ ವೇಗವನ್ನು ತೀವ್ರವಾಗಿ ಹೆಚ್ಚಿಸಿ, ಇಂದು ಇಡಿಯ ಜಿಲ್ಲೆಯ ಸಾಮಾಜಿಕ-ಸಾಂಸ್ಕೃತಿಕ ವೈಶಿಷ್ಟ್ಯವನ್ನೇ ಕುರೂಪಗೊಳಿಸುವಷ್ಟು ಮುಂದುವರಿದು ಬಿಟ್ಟಿದೆ. ನಾವು ಮೈಮೇಲೆ ಎಳೆದುಕೊಳ್ಳುತ್ತಿರುವ ಆಧುನಿಕೀಕರಣ, ಕೈಗಾರಿಕೀಕರಣದ ರಭಸ ಮತ್ತು ಇದರಿಂದ ಸಂಭವಿಸುತ್ತಿರುವ ನಗರೀಕರಣದ ಭೂತ, ಸಮಗ್ರ ಜಿಲ್ಲೆಯನ್ನೇ ಆತ್ಮವಿಹೀನವನ್ನಾಗಿ ಮಾಡುತ್ತಿದೆ. ಗೊತ್ತು ಗುರಿಯಿಲ್ಲದ ಮೇಲ್ಮುಖದ ಚಲನೆಯ ಪೈಪೋಟಿಯ ಸನ್ನಿಗೆ ಒಳಗಾದ ನಮ್ಮ ಜನರು ಮುಂಬಯಿ ಅಥವಾ ಸಾಧ್ಯವಾದರೆ ನ್ಯೂಯಾರ್ಕಿನ ಜೀವನ ಶೈಲಿಯನ್ನೇ ಇಲ್ಲಿ ಸಾಕ್ಷಾತ್ಕರಿಸಿಕೊಳ್ಳುವ ತರಾತುರಿಯಲ್ಲಿದ್ದಾರೆ. ಈ ದುರಾಸೆಯಿಂದಾಗಿ, 'ಸೋಶಿಯಲ್ ಟೆನ್‌ಶನ್', ಸಾಮಾಜಿಕ ಅಸಮಾನತೆ, ಭೂಗತ ಚಟುವಟಿಕೆ, ಸಾಮಾಜಿಕ ಜೀವನದ ಪಾತಕೀಕರಣ ದಿನೇ ದಿನೇ ಹೆಚ್ಚುತ್ತಿದೆ. ವೈಶಿಷ್ಟ್ಯಪೂರ್ಣ ಜೀವನಕ್ರಮ, ಸಾಮಾಜಿಕ ಪ್ರಕ್ರಿಯೆಗಳು, ಸಾಂಸ್ಕೃತಿಕ ನಡವಳಿಕೆಗಳು ತೀವ್ರವ್ಯಾಪಾರೀಕರಣಕ್ಕೆ ತುತ್ತಾಗುತ್ತಿವೆ. ಪರಂಪರಾಗತ ಜ್ಞಾನಸಂಪನ್ಮೂಲವೇ ತಮ್ಮ ಬದುಕಿನ ಆರ್ಥಿಕ ಶಕ್ತಿಯಾಗಿದ್ದ ಲಕ್ಷಾಂತರ ಮಂದಿಯ ಬದುಕು ದುರ್ಬಲವಾಗುತ್ತಿದೆ. ಕೇವಲ ದಕ್ಷತೆ-ಲಾಭಗಳ ಉಪಾಸನೆಯ ಮೇಲೆಯೇ ನಿಂತಿರುವ ಖಾಸಗೀಕರಣವನ್ನು ಹಾಡಿಹೊಗಳುವವರ ಮುಂದೆ, ಕೃಷಿಕನ ರಕ್ಷಣೆ, ಹಳ್ಳಿಯ ರಕ್ಷಣೆ, ದುರ್ಬಲರ

ರಕ್ಷಣೆ, ನಿಸರ್ಗ ರಕ್ಷಣೆ ಎಂಬುದರ ಸಾಮಾಜಿಕ ನ್ಯಾಯ, ಸಾರ್ವಜನಿಕ ಸೇವೆಯಲ್ಲಿ ಸಮಾನತೆ, ಬಹುಜನರ ಹಿತಕಾರೀ ಅಭಿವೃದ್ಧಿ ಎಂದೆಲ್ಲಾ ಬಗ್ಗೆಲ್ಲಾ ಮಾತಾಡುವವರು ಹಾಸ್ಯಾಸ್ಪದರಾಗಿ ಕಾಣುತ್ತಿದ್ದಾರೆ. "ಬಲವಿದ್ದವನ ಉಳಿವು " ಸಿದ್ಧಾಂತದ ಮೇಲೆ ನಿಂತಿರುವ ಬಂಡವಾಳ ಶಾಹೀ 'ಕಾಡಿನ ನ್ಯಾಯ' ಮೇಲ್ಗೈ ಪಡೆಯುತ್ತಿದೆ. ಫಾರ್ಮಲ್ ಶಿಕ್ಷಣದ "ಬುದ್ಧಿಯ" ಅತಿ ವೈಭವೀಕರಣದಿಂದಾಗಿ, ಹೃದಯದ ಭಾಷೆ ಮಾಯವಾಗುತ್ತದೆ. ಪ್ರಬಲ ವ್ಯಾಪಾರಿಗಳ ಲಾಬಿ, ಖಾಸಗೀಕರಣ ಪರ ಲಾಬಿ, ಉದ್ಯಮಪತಿಗಳ ಲಾಬಿ, 'ಬಿಲ್ಡರ್ಸ್' ಲಾಬಿ ಮತ್ತು ಇತ್ತೀಚೆ 'ಮತಾಂಧತೆಯ ಲಾಭಿ' ಈ ಜಿಲ್ಲೆಯನ್ನು ಎಂಥ ಬಲಿಷ್ಠ ಕಪಿಮುಷ್ಠಿಯಲ್ಲಿಟ್ಟುಕೊಂಡಿದೆಯೆಂದರೆ, ಈ ಶಕ್ತಿಗಳ ವಿರುದ್ಧ ಸರಕಾರವೇ ತನ್ನ ಕಾನೂನನ್ನು ರಕ್ಷಿಸಿಕೊಳ್ಳಲಾರದಷ್ಟು ದುರ್ಬಲವಾಗುತ್ತ ಹೋಗುತ್ತಿದೆ. ಇದೇ ರೀತಿ ಮುಂದುವರಿದರೆ ಪ್ರಾಯಃ ಇನ್ನು ಹತ್ತು ವರುಷಗಳಲ್ಲಿ ಈ ಜಿಲ್ಲೆಯ ಸ್ವರೂಪವೇ ಬದಲಾಗಿ ದಕ್ಷಿಣಕನ್ನಡವು ಬದುಕಲು ಅಸಾಧ್ಯವಾದ ತಿಪ್ಪೇಗುಂಡಿಯಾದೀತು; ಮಾತ್ರವಲ್ಲ, ರಭಸದ ಅಭಿವೃದ್ಧಿಯು ಒಟ್ಟು ಜೀವಸಂಕುಲದ ಮೇಲೆ ತಂದೊಡ್ಡಬಹುದಾದ ಕ್ರೌರ್ಯದ ಅಧ್ಯಯನಕ್ಕೆ ಪ್ರಾಯಃ ಭಾರತದಲ್ಲೇ ಈ ಜಿಲ್ಲೆ ಅತ್ಯಂತ ಉತ್ತಮ ನಿದರ್ಶನವಾದೀತು.

ದಕ್ಷಿಣಕನ್ನಡವನ್ನು ಕರ್ನಾಟಕದ ಇತರ ಜಿಲ್ಲೆಗಳು 'ಬುದ್ಧಿವಂತ ಜಿಲ್ಲೆ' ಎಂದು ಕರೆದಾಗ ನನಗೆ ನಿಜಕ್ಕೂ ತಮಾಷೆಯೆನಿಸುತ್ತದೆ. ಹೊರಗಿನ ಆಕರ್ಷಣೆಗಳನ್ನು ಆಮದು ಮಾಡಿಕೊಳ್ಳುವಲ್ಲಿ, ತಮ್ಮ ಸ್ವಂತಿಕೆ, ವಿವೇಚನೆಗಳನ್ನು ಸಂಪೂರ್ಣ ಒತ್ತೆಯಿಡಲು ತಯಾರಿರುವ ಇಂಥ ಸಮುದಾಯವನ್ನು ನಾನು ಬೇರೆಲ್ಲೂ ಕಂಡಿಲ್ಲ. ದಕ್ಷಿಣಕನ್ನಡ ಕರ್ನಾಟಕದಲ್ಲೇ ಅತ್ಯಂತ ಅಕ್ಷರಸ್ಥರಿರುವ ಜಿಲ್ಲೆ, ಆದರೆ, ಈ 'ಫಾರ್ಮಲ್' ಶಿಕ್ಷಣ ಸ್ಥಳೀಯ ಸಂಸ್ಕೃತಿಯ ಒಡಲಲ್ಲಿ ಅಂತರ್ಗತವಾಗಿರುವ ಪ್ರಾದೇಶಿಕ ತಿಳುವಳಿಕೆಯನ್ನು ಒಟ್ಟೂ, ಜನಸಮುದಾಯದ ಅನುಭವ ಜನ್ಯ ಜ್ಞಾನ ಸಂಪನ್ಮೂಲವನ್ನು ಸಂಪೂರ್ಣ ಕಳಕೊಳ್ಳುವ ಹಂತಕ್ಕೆ ಕೊಂಡೊಯ್ದು, ನಮ್ಮನ್ನು ಕೇವಲ ಬ್ಯಾಂಕು ಕ್ಲಾರ್ಕುಗಳಾಗಲಿಕ್ಕೆ ಲಾಯಕ್ಕು ಎಂಬ ಆಘಾತಕರ 'ಮಿಡಿಯೋಕರ್' ಸಮಾಜವನ್ನಾಗಿ ರೂಪಾಂತರಿಸುತ್ತಿರುವುದೂ ಸುಳ್ಳಲ್ಲ. (ಈ ಮಾತು ಆಧುನಿಕ ಶಿಕ್ಷಣದ ವಿರೋಧವಲ್ಲ, ಅದರ ಇನ್ನೊಂದು ಮಗ್ಗುಲಿನ ಪರಿಚಯ ಅಷ್ಟೆ). "ಆಧುನಿಕ ಶಿಕ್ಷಣವು ಮನುಷ್ಯನನ್ನು ಅಜ್ಞಾನೀಯನ್ನಾಗಿ ಮಾಡುತ್ತದೆ" (modern education makes man illiterate) ಎಂದ ಈ ಕಾಲದ ಪ್ರಸಿದ್ಧ ತತ್ವಜ್ಞಾನಿ ಆನಂದ ಕುಮಾರ ಸ್ವಾಮಿಯ ಮಾತಿಗೆ ದಕ್ಷಿಣಕನ್ನಡದ ಶಿಕ್ಷಿತ ಸಮುದಾಯ ಒಂದು ಜೀವಂತ ನಿದರ್ಶನವೆನ್ನಬಹುದು. ಪ್ರತಿಷ್ಠಿತ ಆರ್ಥಿಕ ಸವಲತ್ತಿಗಾಗಿ ಕೇವಲ ಮಾಹಿತಿ ಜ್ಞಾನ ಪಂಡಿತರಾಗುತ್ತಿರುವ ಈ ಮಂದಿ ನಿಜಕ್ಕೂ ತಿಳುವಳಿಕೆ, ವಿವೇಕ ಕಳೆದುಕೊಳ್ಳುತ್ತಿರುವ ದಡ್ಡರಾಗುತ್ತಿದ್ದಾರೆ. ಜ್ಞಾನ ತಿಳುವಳಿಕೆಗಳ ಬಗ್ಗೆ ಇಲ್ಲಿನ ಜನ ಕುತೂಹಲವೇ ಕಳಕೊಳ್ಳುತ್ತಿರುವುದನ್ನು ನಾವು ಸಾಹಿತ್ಯಲೋಕವನ್ನು ಒಮ್ಮೆ ಅವಲೋಕಿಸಿದರೆ ತಿಳಿಯುತ್ತದೆ. ಸಾಹಿತ್ಯಕ್ಷೇತ್ರದಲ್ಲಿ ಇಂದು ಆವರಿಸಿದ "ಮಿಡಿಯೋಕ್ರಿಟಿ"ಯಿಂದಾಗಿ ಸಾಹಿತ್ಯಿಕವಾಗಿ ಈ ಜಿಲ್ಲೆಗೆ ಮಬ್ಬು ಕವಿದಿದೆ. ಅಭಿವೃದ್ಧಿ ಹೊಂದಿದ ಶ್ರೀಮಂತ ರಾಷ್ಟ್ರಗಳ ಮಂಚೂಣಿಯಲ್ಲಿರುವ ಅಮೇರಿಕಾ -ಇಂಗ್ಲೇಂಡುಗಳಂತಹ ರಾಷ್ಟ್ರಗಳಿಂದ ಇಂದು ಹೇಳಿಕೊಳ್ಳುವಂತಹ ಪ್ರಮುಖ ಸಾಹಿತ್ಯಕೃತಿ ಬರುತ್ತಿಲ್ಲ. ಬದಲಿಗೆ, ಲ್ಯಾಟಿನ್ ಅಮೇರಿಕಾ, ಆಫ್ರಿಕಾ ಅಥವಾ ಇತರ ತೃತೀಯ ಜಗತ್ತಿನ ರಾಷ್ಟ್ರಗಳಿಂದ ಇಂಗ್ಲೀಷೇತರ ಭಾಷೆಗಳಲ್ಲಿ ಇಂದು ಉತ್ತಮ ಕೃತಿಗಳು ಬರುತ್ತಿವೆ. ದಕ್ಷಿಣ

ಕನ್ನಡದಲ್ಲೂ ಕಾರಂತ ಅಡಿಗರಂಥ ಸೃಜನಶೀಲ ಸಾಹಿತಿಗಳ ಮಟ್ಟಕ್ಕೆ, ಪಂಜೆ, ಸೇಡಿಯಾಪು, ಗೋವಿಂದ ಪೈಯವರಂಥ ಸಾಹಿತ್ಯಿಕ ವಿದ್ವಾಂಸರ ಹತ್ತಿರ ಹತ್ತಿರಕ್ಕೆ ಸುಳಿಯುವ ಸಾಹಿತಿಗಳನ್ನೇ ಇಂದು ನಾವು ಕಾಣುತ್ತಿಲ್ಲ. ಮನುಷ್ಯ -ಮನುಷ್ಯ, ಮನುಷ್ಯ-ಪ್ರಾಣಿ-ನಿಸರ್ಗ ಸಂಬಂಧಗಳ ಪಾವಿತ್ರ್ಯತೆಯನ್ನೇ ಕಡೆಗಣಿಸಿ ಹೃದಯದ ಭಾಷೆಯನ್ನೇ ಕಳಕೊಂಡು ಕೇವಲ ಲೆಕ್ಕಾಚಾರದ ಮಿದುಳಿನ ಪ್ರಾಣಿಗಳಾಗುತ್ತಿರುವ (cerebral) ದಕ್ಷಿಣ ಕನ್ನಡದ ಜನರನ್ನು "ಮಹಾಬುದ್ಧಿವಂತ ಜನ" ಎಂದಾಗ, ಅದನ್ನು ಯಾವ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದೆಂಬುದೇ ತಿಳಿಯದಾಗಿದೆ, ದಕ್ಷಿಣಕನ್ನಡದ ಈ ಸ್ಥಿತಿಗೆ ಕಾರಣವೇನು ?

ಈ ಶತಮಾನದ ಆದಿಭಾಗದಲ್ಲಿ ಮದ್ರಾಸು ಪ್ರೆಸಿಡೆನ್ಸಿಗೆ ಸೇರಿದ್ದ ದಕ್ಷಿಣಕನ್ನಡ ಅಂದಿನ ಮುಖ್ಯ ಪಟ್ಟಣದಿಂದ ಬಹಳ ದೂರವಿದ್ದು ಸಾಕಷ್ಟು ಅವಗಣನೆಗೆ ಒಳಗಾಗಿ, ಹೇಳಿಕೊಳ್ಳುವ ಯಾವುದೇ ಅಭಿವೃದ್ಧಿ ಕಾಣದ ಹಿಂದುಳಿದ ಜಿಲ್ಲೆಯಾಗಿತ್ತು. ಏರುಪೇರಿನ ಭೂಪ್ರದೇಶ, ಅಷ್ಟೇನೂ ಫಲವತ್ತಲ್ಲದ ಭೂಮಿಯ ಗುಣದಿಂದಾಗಿ, ಕೃಷಿಯಲ್ಲೂ ಜಿಲ್ಲೆ ಸ್ವಾವಲಂಬಿಯಾಗಿರಲಿಲ್ಲ, ಅಂದಿನ ಸರಕಾರದಿಂದ ಕಡೆಗಣಿಸಲ್ಪಟ್ಟಿದ್ದ ಈ ಜಿಲ್ಲೆ ತನಗೆ ಬೇಕಾದ ಸೌಕರ್ಯಗಳನ್ನು ಅಭಿವೃದ್ಧಿ ಕಾರ್ಯಗಳನ್ನು ಖಾಸಗಿಯಾಗಿಯೇ ನಿರ್ವಹಿಸಿಕೊಳ್ಳುವುದು ಅನಿವಾರ್ಯವಾಯಿತು. ಶಿಕ್ಷಣ, ವೈದ್ಯಕೀಯ, ಸಾರಿಗೆ ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ಖಾಸಗೀ ಚಟುವಟಿಕೆ ಬಿರುಸಿನಿಂದ ನಡೆಯಿತು. ಅನೇಕ ಮೇಲ್ಜಾತಿಗಳು ತಮ್ಮ ತಮ್ಮ ಜಾತಿಯ ವಾಣಿಜ್ಯ-ವ್ಯಾಪಾರೀ ಆಸಕ್ತಿಗಳನ್ನು ರಕ್ಷಿಸಿಕೊಳ್ಳಲು ಬ್ಯಾಂಕುಗಳನ್ನು ಆರಂಭಿಸಿದವು. ಹತ್ತಾರು ಬ್ಯಾಂಕು - ಹಣಕಾಸು ಸಂಸ್ಥೆಗಳ ಉದಯದಿಂದ ಒಂದೇ ಸವನೆ ಜಿಲ್ಲೆಯ ವಾಣಿಜ್ಯ - ವ್ಯಾಪಾರಗಳು ಕುದುರಿಕೊಂಡವು. ಜತೆಗೆ, ಬಾಸೆಲ್ ಮಿಶನ್‌ನಂತಹ ಪರದೇಶದ ಕ್ರೈಸ್ತ ಮಿಶನರಿಗಳ ಪ್ರಯತ್ನದಿಂದಾಗಿ ಆರೋಗ್ಯ ಮತ್ತು ಶಿಕ್ಷಣಕ್ಷೇತ್ರಗಳಲ್ಲಿ ದಕ್ಷಿಣಕನ್ನಡ ಪ್ರಗತಿ ಕಂಡಿತು. ಜತೆಜತೆಗೇ, ಆಧುನಿಕ ವಿದ್ಯೆಗೆ ಮೊದಲು ಆಕರ್ಷಿತರಾದ ಬ್ರಾಹ್ಮಣರು ವಿದ್ಯೆ ಕಲಿತು ದೂರದ ನಗರಗಳಿಗೆ ವಲಸೆ ಹೋಗಲು ಆರಂಭಿಸಿದರು. ಇವರ ಜತೆ ಬಡತನದ ಒತ್ತಡದಿಂದಾಗಿ ಉದ್ಯಮಶೀಲ ಬಂಟರು, ಬಿಲ್ಲವರೂ ಬೊಂಬಾಯಿಯಂಥ ಮಹಾನಗರಗಳಿಗೆ ವಲಸೆ ಹೋಗಿ ನೆಲೆಸಲು ಆರಂಭಿಸಿದರು; ಮತ್ತು ಅಲ್ಲಿಂದ ಊರಿಗೆ ಹಣಗಳಿಸಲು ಆರಂಭಿಸಿದರು. ಇತ್ತೀಚೆಗಂತೂ ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಹಿಂದುಗಳು ಕೂಡ ಮುಖ್ಯವಾಗಿ ಮಧ್ಯಪ್ರಾಚ್ಯ ದೇಶಗಳಿಗೆ ಉದ್ಯೋಗಕ್ಕಾಗಿ ತೆರಳಿ ಅಲ್ಲಿಂದ ಭಾರೀ ಹಣ ಹರಿಸಲು ಆರಂಭಿಸಿದ್ದಾರೆ. ಭಾರೀ ಮೊತ್ತದ ಹಣದ ಈ ಒಳ ಹರಿವನ್ನು ಗಮನಿಸಿದ ಅನೇಕ ಪ್ರಸಿದ್ಧ ಅರ್ಥಶಾಸ್ತ್ರಜ್ಞರು ದಕ್ಷಿಣಕನ್ನಡದ ಆರ್ಥಿಕತೆಯನ್ನು "ಮನಿಆರ್ಡರ್ ಇಕಾನಮಿ" ಎಂದು ಕರೆದದ್ದುಂಟು. ಈ ಹಣದ ಜತೆ ಹೊರಗೆ ವಲಸೆ ಹೋದವರು ಮತ್ತು ಸ್ಥಳೀಯರ ಪರಸ್ಪರ ಪ್ರಭಾವದಿಂದಾಗಿ, ಇಲ್ಲಿನ ಸಮಾಜವು ರಭಸದಿಂದ ಆಧುನಿಕವಾಗುತ್ತ, ಸಂಕೀರ್ಣಗೊಳ್ಳುತ್ತ ಹೋಯಿತು; ಮಾತ್ರವಲ್ಲ, ಆ ನಗರಗಳ ಸಾಮಾಜಿಕ ರೀತಿ - ನೀತಿಗಳೂ, ತೀವ್ರವಾದ ಪಾಶ್ಚಾತ್ಯ ಪ್ರಭಾವವೂ ಜಿಲ್ಲೆಗೆ ಆಮದಾಗಲು ಆರಂಭವಾಯಿತು. ಮುಖ್ಯವಾಗಿ ಪಶ್ಚಿಮದ ಹೆಬ್ಬಾಗಿಲಾದ ಬೊಂಬಾಯಿಯ ಸಂಸ್ಕೃತಿಯ ಒಳಹರಿವು, ದಕ್ಷಿಣಕನ್ನಡತನವನ್ನು ಕ್ರಮೇಣ ಸಡಿಲು ಮಾಡಲಾರಂಭಿಸಿತು.

ಈ ಭಾರೀ ಮೊತ್ತದ ಹಣದ ಒಳ ಹರಿವಿನ ಜತೆ, ಇಂದು ತೀವ್ರವಾಗುತ್ತಿರುವ ವ್ಯಾಪಾರೀಕರಣ, ಬಿರುಸಿನ ಕಟ್ಟಡ ನಿರ್ಮಾಣ ದುಬಾರಿಯಾಗುತ್ತ ಆಕರ್ಷಣೆ ಕಳೆಕೊಳ್ಳುತ್ತಿರುವ ಬೇಸಾಯದಿಂದಾಗಿ ದಕ್ಷಿಣಕನ್ನಡವು ತನ್ನ ಗ್ರಾಮೀಣ ಸಂಸ್ಕೃತಿಯ ಆರ್ಥಿಕ-ಸಾಮಾಜಿಕ ವೈಶಿಷ್ಟತೆಯನ್ನೇ ಕಳೆಕೊಂಡು ಇಡಿಯ ಜಿಲ್ಲೆಗೆ ಜಿಲ್ಲೆಯೇ, ಅಂದರೆ ಮೂಲೆ ಮೂಲೆಯ ಹಳ್ಳಿಗಳೂ ಪೇಟೆಗಳಾಗುತ್ತಿವೆ; ಮಾತ್ರವಲ್ಲ, ಪೇಟೆಯ ಎಲ್ಲ ರೀತಿಯ ಬಿಕಟ್ಟನ್ನು ತಮ್ಮ ಮೇಲೆ ಎಳೆದುಕೊಳ್ಳುತ್ತಿವೆ. ಹಳ್ಳಿಯು ತನ್ನ ಬಸಿರಲ್ಲಿಟ್ಟುಕೊಂಡಿರುವ ಜೀವ ಸಂರಕ್ಷಣ ವೈಶಿಷ್ಟ್ಯಗಳು, ಸೃಜನಶೀಲ ಕೌಶಲ್ಯಗಳು ಅಲ್ಲಲ್ಲೇ ಅರಳುವಂತೆ ಹಳ್ಳಿಗಳನ್ನು ಊರ್ಜಿತಗೊಳಿಸಿ, ಗ್ರಾಮೀಣ ಜನರ ಬದುಕನ್ನು ಹಸನಾಗಿ ಮಾಡುವ ಬದಲು ಪೇಟೆ ಸೌಕರ್ಯಗಳನ್ನು ಹೇರುತ್ತಾ ಹಳ್ಳಿಗಳನ್ನು ಪೇಟೆ ಮಾಡಿ, ಆ ಹಳ್ಳಿ ಜನರ ಅಮೂಲ್ಯ ಜ್ಞಾನಸಂಪತ್ತನ್ನು ಸಂಪೂರ್ಣ ಕಡೆಗಣಿಸುವ ಅವರನ್ನು ತ್ರಿಶಂಕು ಸ್ಥಿತಿಗೆ ತಂದಿಡುವ 'ಹೈ-ಟೆಕ್' ಗ್ರಾಮಾಭಿವೃದ್ಧಿಯನ್ನು ಅಳವಡಿಸಿಕೊಳ್ಳುತ್ತಿದೆ. ನಿಸರ್ಗಕ್ಕೆ ಹೊಂದುವ (eco friendly) ಜನಹಿತ ಸೂಕ್ತ ತಂತ್ರಜ್ಞಾನ (appropriate technology) ಸಂಪೂರ್ಣವಾಗಿ ಕಡೆಗಣಿಸಲ್ಪಡುತ್ತಿದೆ. ಹಳ್ಳಿಯನ್ನು ಪೇಟೆ ಮಾಡುವುದು ಗ್ರಾಮಾಭಿವೃದ್ಧಿ ಅಲ್ಲ. ಹಳ್ಳಿಯನ್ನು ದಿಢೀರ್ ಪೇಟೆ ಮಾಡುವಾಗ, ಅದರ ಜತೆ ಆ ಜನರ ಆರ್ಥಿಕ ಚಟುವಟಿಕೆಗಳಿಗೆ ಅಗತ್ಯವಾದ ಸಂಪನ್ಮೂಲಗಳ ಒಡೆತನ ಅವರ ಕೈ ತಪ್ಪಿ ಅವರು ಇನ್ನೂ ದುರ್ಬಲರಾಗಿ, ಪೇಟೆಯ ಅರ್ಥವಾಗದ ಸಂಕೀರ್ಣ ಅರ್ಥವ್ಯವಸ್ಥೆ - ಮಾರುಕಟ್ಟೆಯ ಜಾಲದಲ್ಲಿ ಶೋಷಿಸಲ್ಪಡುತ್ತಾರೆ. ಒಂದು ಜಿಲ್ಲೆ ಸಂಪೂರ್ಣವಾಗಿ ಪೇಟೆಯಾಗಿ, ಹಳ್ಳಿಯ ತಳಗಟ್ಟೇ ಮಾಯವಾದರೆ ಆ ಜಿಲ್ಲೆ ಉಸಿರುಗಟ್ಟಿ ಸಾಯುತ್ತದೆ ಎಂಬುದು ಈ ಜಿಲ್ಲೆಯ ಜನ ತಿಳಿದಂತಿಲ್ಲ. ಇಂದು ಗ್ರಾಮೀಣ ಕಲ್ಪನಾ ಸಾಮರ್ಥ್ಯಗಳು, ಸೆನಪುಗಳು, ಸೃಜನಶೀಲತೆಗಳು, ರಾಜಕಾರಣಗಳು ನೆಸಪಿನಿಂದಲೂ ಅಳಿಸಿ ಹೋಗುತ್ತಿದ್ದು, ಅವರು ಪೇಟೆ ಸಂಸ್ಕೃತಿಯೇ ನಿಜ ಅಭಿವೃದ್ಧಿ ಎಂದು ಭ್ರಮಿಸಿದ್ದಾರೆ.

ಅನೇಕ ಅಭಿವೃದ್ಧಿ ಪರಿಕರಗಳು, ಮೊದಲಿಗೆ ಪುರೋಗಾಮಿಯಾಗಿದ್ದರೂ, ದೀರ್ಘಾವಧಿಯ ಕಾಲಾಪ್ರವಾಹದಲ್ಲಿ ಅನೇಕ ಬಾರಿ ತೀವ್ರ ಬಿಕ್ಕಟ್ಟನ್ನೇ ನಿರ್ಮಿಸಿ ಬಿಡುವುದಕ್ಕೆ ಅಸಂಖ್ಯ ನಿದರ್ಶನಗಳಿವೆ. ಉದಾಹರಣೆಗೆ, ಮನುಷ್ಯನ ಮೋಹಕ ಆಸೆಗಳನ್ನು ಪೋಷಿಸುವ ಸಾವಿರಾರು ಹಣಕಾಸು ಕಂಪೆನಿಗಳು ಜನರಲ್ಲಿ ತೀರದ ಸುಖದ ಭ್ರಮೆ ಹುಟ್ಟಿಸಿ, ಅವರು ನಿರಂತರ ಸಾಲ-ದುಃಖಗಳ ವರ್ತುಲದಲ್ಲಿ ತೊಳಲುವಂತೆ ಮಾಡುತ್ತಿವೆ. ದಕ್ಷಿಣ ಕನ್ನಡದ ಪ್ರಗತಿಗೆ ಬ್ಯಾಂಕುಗಳು ಆರಂಭದ ಹಂತದಲ್ಲಿ ಪೂರಕವಾಗಿಯೇ ಇದ್ದರೂ, ದೀರ್ಘಾವಧಿಯಲ್ಲಿ ಈ ವಿತ್ತ ಸಂಸ್ಥೆಗಳು ದಕ್ಷಿಣಕನ್ನಡಿಗರ ಕಲ್ಪನಾ ಸಾಮರ್ಥ್ಯ, ಬೌದ್ಧಿಕ ಕುತೂಹಲ, ಸೃಜನಶೀಲತೆ ಮತ್ತು ವಿಪುಲವಾದ ಸೃಜನಾತ್ಮಕ ಕನುಬುಗಳನ್ನೇ ಹೊಸಕಿ ಹಾಕುವ ನಿಟ್ಟಿನಲ್ಲಿ ಜಿಲ್ಲೆಗೆ ಅಭಿಶಾಪವಾಗಿಯೂ ಪರಿಣಮಿಸಿದೆ ಎಂದು ನನ್ನ ನಂಬಿಕೆ. ಈ ಜಿಲ್ಲೆಯ ಪ್ರತಿಭಾನ್ವಿತ ಯುವಕರೂ ಕೂಡ ತಮ್ಮ ಶಿಕ್ಷಣದ ಅಂತಿಮ ಉದ್ದೇಶವು ಕೈಕೆಸರು ಮಾಡಿಕೊಳ್ಳದೆ, ಗರಿಗರಿ ಇಸ್ತ್ರಿ ಬಟ್ಟೆ ಹಾಕಿಕೊಳ್ಳಬಹುದಾದ ಬಿಳಿ ಕೊರಳಪಟ್ಟಿಯ ಬ್ಯಾಂಕು, ಎಲ್.ಐ.ಸಿ. ಮುಂತಾದ ಸಂಸ್ಥೆಗಳಲ್ಲಿ ಕೆಲಸಕ್ಕೆ ಸೇರುವಷ್ಟಕ್ಕೇ ಸೀಮಿತರಾಗಿದ್ದಾರೆ; ಮತ್ತು ಈ ಪ್ರವೃತ್ತಿ ದಕ್ಷಿಣಕನ್ನಡದಲ್ಲಿ ನೌಕರರ ಒಂದು ಅಗಾಧ ಮಧ್ಯಮವರ್ಗವನ್ನು ಸೃಷ್ಟಿಸಿತು. ಈ ಮಧ್ಯಮವರ್ಗ ಯಾವ ಸಾಮುದಾಯಿಕ ಹಿತಾಸಕ್ತಿಗೂ

ಸ್ಪಂದಿಸದೆ ಕೇವಲ ತಮ್ಮ ವೈಯಕ್ತಿಕ ಹಿತಾಸಕ್ತಿಯನ್ನಷ್ಟೆ ಕಾಯುವ ಅಭಿವೃದ್ಧಿಯ ಕಲ್ಪನೆಗೆನೇ ಒತ್ತು ಕೊಡುತ್ತಾ ಬರಲು ಆರಂಭಿಸಿತು. ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ರಂಗಗಳಲ್ಲೆಲ್ಲಾ ಇವರದೇ ಮೇಲುಗೈಯಿದ್ದು. ಇವರಿಗೆ ಈ ಜಿಲ್ಲೆಯ ಅಸಂಖ್ಯ ಬೇಸಾಯಗಾರರು, ಬೆಸ್ತರು, ಕುಂಬಾರರು, ಕಮ್ಮಾರರು, ಬಡಗಿಗಳು, ಬುಟ್ಟಿಹೆಣೆಯುವವರು, ಲೋಹದ ಕರಕುಶಲಗಾರರ ಸಮುದಾಯಗಳ ಜತೆ ಸಂವಾದವೇ ಇಲ್ಲ. ಹಾಗಾಗಿ, ಈ ಅಸಂಖ್ಯ ಸಾಮಾನ್ಯರು, ಜಿಲ್ಲೆಯ ಪ್ರಗತಿಯ ಫಲದಿಂದಲೇ ವಂಚಿತರಾಗಿ ದುರ್ಬಲರಾಗಿಯೇ ಉಳಿದರು. ಈ ಇತಿಹಾಸ ತಿರುವು ಮುರುವಾದದ್ದು ಇಂದಿರಾ ಗಾಂಧಿಯವರ ಕಾಲದಲ್ಲಿ.

ಅಂದು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸರು ಜ್ಯಾರಿಗೊಳಿಸಿದ ಅತ್ಯಂತ ಪುರೋಗಾಮಿಯಾದ ಭೂ ಸುಧಾರಣಾ ಕಾನೂನು ಈ ಜಿಲ್ಲೆಯ ಸುಮಾರು ೩-೪ ಲಕ್ಷ ಗೇಣಿದಾರರನ್ನು ಒಮ್ಮೆಲೇ ತಮ್ಮ ತಮ್ಮ ಭೂಮಿಯ ಒಡೆಯರನ್ನಾಗಿ ಮಾಡಿ, ದುರ್ಬಲ ವರ್ಗಕ್ಕೆ ಮೊತ್ತ ಮೊದಲಬಾರಿಗೆ ಚೈತನ್ಯ ನೀಡಿತು. ದುರ್ಬಲವರ್ಗಕ್ಕೆ ಈ ರೀತಿ ಶಕ್ತಿ ತುಂಬುವ ಕಾರ್ಯ ಪಾಯಃ ಜರಗಿದ್ದೇ ಭಾರತದಲ್ಲಿ ಅಪರೂಪವೆನ್ನಬಹುದು. ಇದರಿಂದಾಗಿ ಮೊತ್ತ ಮೊದಲ ಬಾರಿಗೆ ಈ ವರ್ಗಕ್ಕೆ ಮಾತಾಡುವ - ಪ್ರತಿಭಟಿಸುವ ಶಕ್ತಿ -ಧೈರ್ಯ ಬಂತು.

ಅಂದಿನಿಂದ ದಕ್ಷಿಣಕನ್ನಡದ ಆರ್ಥಿಕ- ರಾಜಕೀಯ -ಸಾಮಾಜಿಕ ಸ್ವರೂಪವೇ ಬದಲಾಯಿತು. ಅಂದಿನವರೆಗೆ, ಈ ಜಿಲ್ಲೆಯ ಪ್ರತಿನಿಧಿಗಳಾಗಿ ಮೇಲ್ವರ್ಗದವರು ಮಾತ್ರ ಆರಿಸಿ ಬರುತ್ತಿದ್ದರೆ, ಈ ಮೌನ ಕ್ರಾಂತಿಯ ಬಳಿಕ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳೂ ಕೆಳವರ್ಗದಿಂದಲೇ ಬರಲು ಆರಂಭವಾಯಿತು. ಮೇಲ್ವರ್ಗದ ಒಬ್ಬ ಪ್ರತಿನಿಧಿಯೂ ಆರಿಸಿ ಬರುವುದು ಅಸಾಧ್ಯವೆನ್ನುವ ಹಂತಕ್ಕೆ ಬಂತು. ಸಾಮಾನ್ಯ ಜನರಿಗಂತೂ ಇಂದಿರಾಗಾಂಧಿ ತಮ್ಮನ್ನು ಉದ್ಧಾರ ಮಾಡಬಲ್ಲ ದೇವತೆಯಾಗಿಬಿಟ್ಟಿದ್ದರು. ಅದೊಂದು ಉತ್ತಮ ಕಾಲ. ಮತಾಂಧತೆ, ಕೋಮು ಘರ್ಷಣೆಗಳಿಗೆ ದಕ್ಷಿಣ ಕನ್ನಡದಲ್ಲಿ ಎಡೆಯೇ ಇರಲಿಲ್ಲ.

ಆದರೆ ನವ ಚೈತನ್ಯವನ್ನು ಪಡೆದ ಈ ಕೆಳವರ್ಗದ ಜನರು ಕ್ರಮೇಣ ಮೇಲ್ವರ್ಗದ ರೀತಿ ರಿವಾಜು, ಶಿಕ್ಷಣ, ಉದ್ಯೋಗ, ಧಾರ್ಮಿಕ ನಂಬಿಕೆ, ಜೀವನ ಶೈಲಿಗಳ ಅಂಧಾನುಕರಣೆಗೆ ತೊಡಗಿ ಅವರಂತಾಗಲು ಹಾತೊರೆಯುತ್ತಾ ತಮ್ಮ ಪರಂಪರಾಗತ ಜ್ಞಾನ ಸಂಪನ್ಮೂಲವನ್ನು ಒಂದೆಡೆ ಕಳಕೊಳ್ಳುತ್ತಾ, ಇನ್ನೊಂದೆಡೆ ತಮಗೆ ದಕ್ಕಿದ ಹೊಸ ರಾಜಕೀಯ ಶಕ್ತಿಯನ್ನು ಕ್ರಮೇಣ ಕಳಕೊಳ್ಳುತ್ತಾ ಪೈಪೋಟಿಯಲ್ಲಿ ಪುನಃ ಶಕ್ತಿ ಹೀನರಾಗುತ್ತಿರುವುದು ಇಂದಿನ ಚಾರಿತ್ರಿಕ ದುರಂತ. ತಮಗೆ ದೊರೆತ ಹೊಸ ಶಕ್ತಿಯನ್ನು, ತಮ್ಮ ವೃತ್ತಿಕೌಶಲವನ್ನು ದಕ್ಷರೀತಿಯಲ್ಲಿ ಹೆಚ್ಚಿಸಿಕೊಳ್ಳಲು, ಮತ್ತು ತಮ್ಮ ವಿಶಿಷ್ಟ ಉತ್ಪಾದನಾ ಪ್ರಕ್ರಿಯೆಯ ಹಿಂದೆ ಮತ್ತು ಮುಂದೆ ಇರುವ ತೊಡಕನ್ನು ನಿವಾರಿಸುವತ್ತ ಉಪಯೋಗಿಸಿಕೊಳ್ಳದೆ, ಕೇವಲ ಅನುಕರಣಶೀಲರಾಗುತ್ತಿರುವುದರಿಂದ, ಇವರು ತಮ್ಮ ವಿಶಿಷ್ಟ, ಬಹುರೂಪೀ ಉತ್ಪಾದನಾ ಸಾಮರ್ಥ್ಯವನ್ನು ಬಿಟ್ಟುಕೊಡುತ್ತಾ, ಅದರ ಜತೆ ಬೆಸೆದುಕೊಂಡಿರುವ ಸಾಮಾಜಿಕ ಸಾಂಸ್ಕೃತಿಕ ವಿಶಿಷ್ಟತೆಯನ್ನೂ ಕಳೆದುಕೊಂಡು, ಎಲ್ಲ ಆಧುನಿಕರಂತೆ ಸ್ವಂತಿಕೆಯ ಮುಖ ಕಳಕೊಂಡ ಅಂದಗೇಡಿಗಳಾಗುತ್ತಿದ್ದಾರೆ. ಹಿಂದೆ ಭೂಮಿ ಕಳಕೊಂಡು ಅಧಿಕಾರದಿಂದ ಹಿಂದೆ ಸರಿದ

ಬಲಿಷ್ಠರು ಇಂದು ಬೊಂಬಾಯಿಯಂಥ ನಗರಗಳಿಂದ ದುಡ್ಡಿನ ಶಕ್ತಿಯ ಜತೆ, ಸರಕಾರದ ಪ್ರೋತ್ಸಾಹವನ್ನು ದುರುಪಯೋಗಗೊಳಿಸುತ್ತ ನಾನಾ ತರದ ಕೈಗಾರಿಕೆಗಳ ಮಾಲಕರಾಗಿ, ನಿರ್ದೇಶಕರಾಗಿ ಪುನಃ ಮೇಲ್ವರ್ಗದಿಂದಲೇ ಜನಪ್ರತಿನಿಧಿಗಳು ಆರಿಸಿ ಬರಲು ಆರಂಭವಾಗಿದೆ. ಇಂದು ಈ ಮಂದಿಯ ಶೋಷಣೆಯ ಕೊಂಡಿಗಳು, ಬೊಂಬಾಯಿಯ ಕೆಳಜಗತ್ತಿನ ಶಕ್ತಿಯನ್ನೂ ಪಡಕೊಂಡು, ಸಮಾಜದ ಅತೀ ಆಳದವರೆಗೆ ಕಳವಳಕಾರಿಯಾಗಿ ಪಸರಿಸಿಕೊಳ್ಳುತ್ತಿದೆ. ಹಾಗಾಗಿ ಇಂದು ದಕ್ಷಿಣಕನ್ನಡದಲ್ಲಿ ಯಾವುದೇ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವುದು ಹಿಂದೆಂದಿಗಿಂತಲೂ ಅಪಾಯಕಾರಿಯಾಗಿದೆ.

ಈ ಪೇಟೆ ಸಂಸ್ಕೃತಿಯ ವ್ಯಾಪಕತೆ ಮತ್ತು ನಮ್ಮ ಏಕಮಾದರಿಯ ಯಾವ ವಿಶಿಷ್ಟ ಶಕ್ತಿಯನ್ನು ತುಂಬದ ಶಿಕ್ಷಣ (not enabling education) ದಕ್ಷಿಣ ಕನ್ನಡ ಇದುವರೆಗೆ ಕಂಡರಿಯದ ಕೋಮುವಿಷವನ್ನು ಹೆಚ್ಚಿಸಿದೆ. ಏಕರೀತಿಯ ಶಿಕ್ಷಣಕ್ರಮ, ಬದುಕಿನ ಬಗ್ಗೆ ಒಳನೋಟಗಳನ್ನು ಕೊಡದೆ ಮಕ್ಕಳನ್ನು ತನ್ನ ನೆಲದಿಂದಲೇ ಸಾಂಸ್ಕೃತಿಕವಾಗಿ ಬುಡಮೇಲು ಮಾಡಿ, ಪರಕೀಯರನ್ನಾಗಿ ಮಾಡಿ, ಮಾನಸಿಕವಾಗಿ ಅಭದ್ರರನ್ನಾಗಿ ಮಾಡುತ್ತಿದೆ. ಇದರ ಫಲವಾಗಿ ಈ 'ಕಲಿತ' ಮಂದಿ ತಮ್ಮ 'ಮಾನಸಿಕವಾಗಿ ಭದ್ರತೆಗಾಗಿ ಅವಲಂಬನೆಯನ್ನು ಅರಸುತ್ತಾ ಧರ್ಮದ ವೈಭವೀಕರಣ ಹುಸಿಮುಖದತ್ತ ಮೋಹಿತರಾಗಿ ಅವು ಬೀಳುತ್ತಿದ್ದರೆ ನೈಜ ತತ್ವದ ಅರಿವು ಅವರು ಎಂದೋ ಕಳಕೊಂಡಿದ್ದಾರೆ. ಒಂದೇ ರೀತಿಯಲ್ಲಿ ಯೋಚಿಸಲು- ಪ್ರತಿಕ್ರಯಿಸಲು ತರಬೇತಿ ಕೊಡುವ ಶಿಕ್ಷಣದಿಂದಾಗಿ ಜಿಲ್ಲೆಯಲ್ಲಿ ಕುರಿಮಂದೆ ಪ್ರವೃತ್ತಿ ಬೆಳೆಯುತ್ತಿದೆ. ಯಾವುದೇ ಸಮಸ್ಯೆ ಬಿಕ್ಕಟ್ಟುಗಳಲಿ, ಎಲ್ಲಾ ಶಿಕ್ಷಿತರೂ ಏಕರೀತಿಯಲ್ಲಿ ಪ್ರತಿಕ್ರಿಯಿಸುತ್ತಾ, ಒಬ್ಬರನ್ನೊಬ್ಬರು ಅನುಕರಣೆ ಮಾಡುವುದರಲ್ಲಿ ನಿಸ್ಸೀಮರಾಗುತ್ತಿದ್ದಾರೆ. ಇದಕ್ಕೆ ಒಳ್ಳೆಯ ಉದಾಹರಣೆಯೆಂದರೆ ಎಲ್ಲೆಂದರಲ್ಲಿ ಹುಸಿ ಧಾರ್ಮಿಕತೆಯ ಅನುಕರಣೆ ನಾಯಿಕೊಡೆಯಂತೆ ಪಸರಿಸುತ್ತಿರುವ ಏಕರೀತಿಯ ಹುಸಿ ಧಾರ್ಮಿಕ ಆಚರಣೆಗಳ ವಿಜೃಂಭಿತ್ ಪ್ರದರ್ಶನ. ಇಲ್ಲಿ ಎಲ್ಲೋ, ನೈಜಧಾರ್ಮಿಕ ಜೀವನ ಕಳೆದುಹೋಗಿದೆ. ಸಂಯಮದ ನೈತಿಕ ಬದುಕು ಕಳೆಗುಂದಿದೆ.

ಈ ಹಿನ್ನೆಲೆಯಲ್ಲಿ ನೋಡಿದರೆ, ಇತ್ತೀಚಿನ ಪರಿಸರ ಚಳವಳಿಯು ನಿಜಕ್ಕೂ ದಕ್ಷಿಣಕನ್ನಡದ ಈ ಶತಮಾನದ ಪ್ರಮುಖ ಜನಾಂದೋಲನವಾಗಿ ರೂಪುಗೊಳ್ಳುತ್ತಿರುವುದು ಒಂದು ಚೇತೋಹಾರಿಯಾದ ಸಂಗತಿ. ಮೀನುಗಾರರು, ಬೇಸಾಯಗಾರರು, ಹಳ್ಳಿಮಂದಿಯೇ ಅಸಂಖ್ಯವಾಗಿರುವ ಈ ಚಳವಳಿಯನ್ನು ವಿರೋಧಿಸುವವರು ದುರಾದೃಷ್ಟವಶಾತ್ ಆಧುನಿಕ ಶಿಕ್ಷಣ ಪಡೆದ ಜನಾಂಗವಾಗಿದೆ. ಅವರು ತಮ್ಮ ಯೋಚನೆಗಳನ್ನೂ ಕೈಗಾರಿಕಾ ಸಮಾಜ ತನ್ನ ಅನುಕೂಲಕ್ಕಾಗಿ ಹುಟ್ಟುಹಾಕಿದ ಶಿಕ್ಷಣದ ಬ್ರೈನ್ ವಾಷ್ ಆಗಿ ಪಡಕೊಂಡವರಾದ್ದರಿಂದ , ಜನಪರ ಚಳುವಳಿಯ ಸೂಕ್ಷ್ಮತೆಯನ್ನು ಅರಿಯಲು ಬೇಕಾಗುವ ಪರಕಾಯಪ್ರವೇಶ ಶಕ್ತಿಯನ್ನೇ ಕಳಕೊಂಡಿದ್ದಾರೆ.

ಅತ್ಯಂತ ಅವಸರದಲ್ಲಿರುವ ಇಂದಿನ ದಕ್ಷಿಣ ಕನ್ನಡಿಗನ ಆಕ್ರಮಣಕಾರೀ ಪ್ರವೃತ್ತಿಯಿಂದಾಗಿ ಆತನ ಮುಂದೆ ಚಾಚಿ ನಿಂತಿರುವ, ಈ ಭೂಮಿ, ನೀರು, ಕಲ್ಲುಬಂಡೆ, ಮರಮಟ್ಟುಗಳು, ಪ್ರಾಣಿಗಳು, ಮುಂತಾದ ನಿಸರ್ಗದ ಪ್ರತಿಯೊಂದು ಸಂಗತಿಯೂ, ಆತನಿಗೆ ತನ್ನ ಉಪಭೋಗ ವಸ್ತುಗಳಾಗಿಯೇ

**ಜನಪರ ರಾಜಕಾರಣೆಯ ಉದಾಹರಣೆ :** ಇತ್ತೀಚೆ ನಾನು ಮಾನ್ಯ ಜಾರ್ಜ್ ಫೆರ್ನಾಂಡಿಸರನ್ನು ಊಟಿಯಲ್ಲಿ ಒಂದು ಸಭೆಯಲ್ಲಿ ಭೇಟಿ ಆಗಿದ್ದೆ. ಅಲ್ಲಿ ಅವರೊಂದು ಘಟನೆ ವಿವರಿಸಿದರು. ಕೆಲವು ತಿಂಗಳ ಹಿಂದೆ ಬೃಹತ್ ಕೈಗಾರಿಕಾ ಮಾಲಿಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಸರಕಾರ ಯಾವ ರೀತಿಯ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ನಮಗೆ ಬುದ್ಧಿವಾದ ಹೇಳಲು ಡೆಲ್ಲಿಯ ಪಂಚತಾರಾ ಅಶೋಕ ಹೋಟೇಲಲ್ಲಿ ಸರಕಾರದ ಜತೆ ಸಮಾಲೋಚನೆ ಏರ್ಪಡಿಸಿದ್ದರು. ನನ್ನನ್ನೂ ಆಹ್ವಾನಿಸಿದ್ದರು. ನಾನು ಅದರಲ್ಲಿ ಪಾಲುಗೊಳ್ಳುವುದು ಮುಖ್ಯ ಎಂದು ಅಧಿಕಾರಿಗಳು ಮೆಚ್ಚಿಸಿದರು. ಕೆಲವು ದಿನಗಳ ನಂತರ ಕರ್ನಾಟಕದಿಂದ ೨೦೦೦ ಜನ ಬಡ ಬಟ್ಟೆ ನೇಕಾರರು, ಹತ್ತಿ ಬೆಳೆಗಾರರು ಸರಕಾರದ ಧೋರಣೆಯಿಂದಾಗಿ ತಾವು ಪಡುತ್ತಿರುವ ಸಂಕಷ್ಟವನ್ನು ಸರಕಾರದ ಜತೆ ಚರ್ಚಿಸಲು ಡೆಲ್ಲಿಗೆ ಬಂದು ಅವಕಾಶ ಸಿಗದೆ, ಡೆಲ್ಲಿಯ ಬೀದಿಯಲ್ಲಿ ಧರಣಿ ಮುಷ್ಕರ ಹೂಡುತ್ತಿದ್ದರು. ನನ್ನನ್ನು ಅವರು ಕಾಣಲು ಅಪೇಕ್ಷೆಪಟ್ಟಾಗ, ನನ್ನ ಅಧಿಕಾರಿಗಳು ನಾನು ಅಲ್ಲಿ ಅವರನ್ನು ಸಂಧಿಸುವುದು ಸರಿಯಲ್ಲ ಎಂದು ಪ್ರತಿಬಂಧಿಸಿದರು. ಆಗ ನಾನು, 'ನಮಗೆ ಬುದ್ಧಿ ಹೇಳಲು ಬಂದ ಕೈಗಾರಿಕಾ ಪ್ರತಿನಿಧಿಗಳನ್ನು ನಾನು ಪಂಚತಾರಾ ಹೊಟೇಲಲ್ಲಿ ಸಂಧಿಸಬಹುದಾದರೆ, ಸಾವಿರಾರು ದುರ್ಬಲರನ್ನು ಬೀದಿಯಲ್ಲಿ ನೋಡುವುದು ಅಷ್ಟೇ ಪವಿತ್ರ ಕರ್ತವ್ಯ' ಎಂದು ಅಧಿಕಾರಿಗಳ ಎಚ್ಚರಿಕೆಯನ್ನು ತಿರಸ್ಕರಿಸಿ, ನೇಕಾರರ ಜತೆ ಮಾತನಾಡಿ, ಅವರ 'ಡೆಲಿಗೇಶನ್'ನ್ನು ಪ್ರಧಾನಿಯ ಬಳಿ ಒಬ್ಬ ವಿರೋಧ ಪಕ್ಷದ ನಾಯಕನಂತೆ ಕೊಂಡು ಹೋಗಿ ಅವರ ಮನವಿಯನ್ನು ಪ್ರಧಾನಿಗೆ ಒಪ್ಪಿಸಿದೆವು." ಎಂದು ಜಾರ್ಜ್ ನುಡಿದರು.

ಒಬ್ಬ ರಾಜಕಾರಣಿ ಬಡಜನರ ಶೋಷಣೆಯ ಅಸಂಖ್ಯ ಅದೃಶ್ಯ ಕೊಂಡಿಗಳನ್ನು ಈ ರೀತಿ ತಿಳಿಯಲು ಸಾಧ್ಯವಾದಾಗ ಈ ದೇಶವು 'ಸಮಸುಖೀ ರಾಜ್ಯ'ವಾದೀತು.

"ಬೃಹತ್ ಕೈಗಾರಿಕೆಗಳಿಂದ ಉದ್ಯೋಗಾವಕಾಶ ಹೆಚ್ಚಾಗುವ ಬದಲು ಕಡಿಮೆ ಆಗುವ ಸಂಭವವೇ ಹೆಚ್ಚು" ಎಂದು ನಮ್ಮ ರಾಜಕಾರಣಿಗಳು ತಿಳಿದಿರಬೇಕು. ಹಾಗಾಗಿ ನಮಗೆ ಮಧ್ಯಮ, ಮತ್ತು ಸಣ್ಣ ಕೈಗಾರಿಕೆಗಳ ಅಗತ್ಯವಿದೆ ಎಂಬುದನ್ನು ಗಾಂಧೀಜಿ ಬಾರಿ ಬಾರಿಗೆ ಹೇಳುತ್ತಿದ್ದರು. ಕೈಗಾರಿಕೆಗಳು ಬೇಕು ಆದರೆ ಕೈಗಾರಿಕೆಗಳು ಒಟ್ಟಾರೆಯಾಗಿ ಬೆಳೆದಾಗ, ಈ ಜನಸಂಪದ್ಭರಿತ ದೇಶದ ಉದ್ಯೋಗಾವಕಾಶವನ್ನು ಧ್ವಂಸ ಮಾಡುತ್ತದೆ. ಪ್ರತೀ ವರುಷ ನಿರುದ್ಯೋಗಿಗಳಾಗಿ ಮಾರುಕಟ್ಟೆಗೆ ಬರುವ ಯುವಕರಲ್ಲಿ, ೦.೩ ಶೇಕಡಾ ಉದ್ಯೋಗವನ್ನು ಮಾತ್ರ ಬೃಹತ್ ಕೈಗಾರಿಕೆಗಳನ್ನು ಸೃಷ್ಟಿಸುತ್ತಿವೆ. ಈ ದೇಶದ ಒಟ್ಟು ಉದ್ಯೋಗಾವಕಾಶದ ೯೨ ಶೇಕಡವು ಅಸಂಘಟಿತ ಚಿಕ್ಕ ಚಿಕ್ಕ ಕೈಗಾರಿಕಾ ಕ್ಷೇತ್ರ, ಗುಡಿ ಕೈಗಾರಿಕೆಗಳು, ಸೇವಾಕ್ಷೇತ್ರ, ಬೇಸಾಯ ಕ್ಷೇತ್ರದಲ್ಲೇ ನಿರ್ಮಾಣವಾಗುತ್ತಿದೆ. ಈ ಸರಳ ವಿಷಯವನ್ನು ಮಾನ್ಯ ಸಚಿವರು ತಿಳಿದಿರಬೇಕು.

**ಮುಕ್ತ ಸಂವಾದಕ್ಕಾಗಿ ಮಾನ್ಯ ಸಚಿವರಿಗೆ ಮನವಿ :** ಶ್ರೀ ಧನಂಜಯ ಕುಮಾರರಲ್ಲಿ ನಮ್ಮ

ಪ್ರಾರ್ಥನೆಯಿಂದ, ವಿಚಾರ ಮಂಥನದಿಂದ, ಪರಸ್ಪರ ತಿಳಿದುಕೊಳ್ಳುವುದರಿಂದ, ಸಂವಾದದಿಂದ ಮಾತ್ರ ಸಾಮಾನ್ಯ ಜನರನ್ನು ಬಲಿಷ್ಠ ಲಾಬಿಗಳಿಂದ ರಕ್ಷಿಸಲು ಸಾಧ್ಯ. ಪರಿಸರ ಕಾರ್ಯಕರ್ತರು, ವಿಜ್ಞಾನಿಗಳು, ಸಮಾಜಸೇವಾಕಾರ್ಯಕರ್ತರು ಮತ್ತು ರಾಜಕಾರಣಿಗಳ ನಡುವೆ ದಯವಿಟ್ಟು ಮುಕ್ತ ಸಂವಾದವೇರ್ಪಡಿಸಬೇಕು. ನಿಮ್ಮ ಅನುಕೂಲದ ಸಮಯಕ್ಕೆ, ಸ್ಥಳಕ್ಕೆ ನಾವು ಬರಲು ಸಿದ್ಧ. ಸಂವಾದದಿಂದ ನಮ್ಮಲ್ಲಿರುವ ದೋಷಗಳನ್ನು ನಾವು ತಿದ್ದಿಕೊಳ್ಳಬಹುದು. ನಾವು ಪರಸ್ಪರ ಅರಿಯಬಹುದು. ❐

# ಅಶ್ವತ್ಥಮರ ಉರುಳಿಸುವ ಮುನ್ನ

**ನಂಬಿಕೆಯ ಪ್ರಶ್ನೆ**

ಅಶ್ವತ್ಥಮರ ಭಾರತೀಯ ಸಂಸ್ಕೃತಿಯ ಅತ್ಯಂತ ಪವಿತ್ರ ಪ್ರತೀಕ. ಸನಾತನ ಧರ್ಮದ ಲಾಂಛನ. ಗೀತಾಚಾರ್ಯ ಕೃಷ್ಣ ಈ ವಿಶ್ವವನ್ನು ಅಶ್ವತ್ಥಕ್ಕೆ ಹೋಲಿಸುತ್ತಾನೆ (ಭಗವದ್ಗೀತೆ : ಅ. ೧೫ : ಶ್ಲೋಕ ೧-೪). "ವೃಕ್ಷಗಳಲ್ಲಿ ನಾನು ಅತ್ಯಂತ ಶ್ರೇಷ್ಠವಾದ ಅಶ್ವತ್ಥವಾಗಿದ್ದೇನೆ" ಎನ್ನುತ್ತಾನೆ. (ಅಶ್ವತ್ಥ: ಸರ್ವ ವೃಕ್ಷಾಣಾಂ" - ಗೀತೆ - ಅ. ೧೦ : ಶ್ಲೋಕ .೨೬)

"ಮನುಷ್ಯ ಹುಟ್ಟಿದರದಿನಿಂದ ಸಾಯುವವರೆಗೆ ಕೊನೆಯಪಕ್ಷ ಪ್ರತೀ ಐದು ವರ್ಷಕ್ಕೊಂದು ಗಿಡ ನೆಟ್ಟು, ಈ ಭೂಮಿಯ ಋಣ ತೀರಿಸಬೇಕು ಎಂದು ಬುದ್ಧ ಸಾರುತ್ತಾನೆ.

ಒಂದು ಪ್ರಾರ್ಥನಾ ಶ್ಲೋಕ ಅಶ್ವತ್ಥ ವೃಕ್ಷವನ್ನು ಈ ರೀತಿ ವರ್ಣಿಸುತ್ತದೆ :

**ಮೂಲತೋ ಬ್ರಹ್ಮರೂಪಾಯ ಮಧ್ಯತ: ವಿಷ್ಣುರೂಪಿಣೇ ।**
**ಅಗ್ರತ: ಶಿವರೂಪಾಯ ವೃಕ್ಷರಾಜಾಯ ತೇ ನಮ: ॥**

"ಅಶ್ವತ್ಥ ಮೂಲದಲ್ಲಿ ಬ್ರಹ್ಮನೂ, ಮಧ್ಯೆ ವಿಷ್ಣುವೂ, ತುದಿಯಲ್ಲಿ ಈಶ್ವರನೂ ಸನ್ನಿಹಿತರಾಗಿದ್ದಾರೆ" ಎಂಬುದು ಹಿಂದೂ ನಂಬಿಕೆ. ಹಾಗಾಗಿಯೇ ಅಶ್ವತ್ಥವು ಪೂಜಾರ್ಹ ವೃಕ್ಷವೆಂದು ಪರಿಗಣಿಸಲ್ಪಟ್ಟಿದೆ. ಅಶ್ವತ್ಥದ ಬುಡಕ್ಕೆ ಕಟುಕ ಕೊಡಲಿಯಿಕ್ಕಿದರೆ ಬ್ರಹ್ಮನ ಕಾಲಿಗೇ ಕೊಡಲಿಯಿಕ್ಕಿದಂತೆ, ಮಧ್ಯದ ಗೆಲ್ಲುಗಳನ್ನು ಕತ್ತರಿಸಿದರೆ ವಿಷ್ಣುವಿನ

---

ಜನವಾಹಿನಿ, ಮಾರ್ಚ್ ೯, ೨೦೦೩

ಕೈಕಾಲು- ಅವಯವಗಳನ್ನೇ ಕತ್ತರಿಸಿದಂತೆ, ಅಶ್ವತ್ಥದ ತಲೆ ಹಾರಿಸುವುದೆಂದರೆ ಶಿವನ ರುಂಡವನ್ನು ಚೆಂಡಾಡಿದಂತೆ.

**ಅಶ್ವತ್ಥಮೇಕಂ ಪಿಚುಮಂದಮೇಕಂ ನ್ಯಗ್ರೋಧಮೇಕಂ ದಶಚಿಂಚಣೀಕಂ ।**
**ಕಪಿತ್ಥ ಬಿಲ್ವ ಆಮ್ಲಕಿ ತ್ರಯಾಂಚ ಪಂಚಾಮ್ರ ರೋಪಾ ನರಕಂ ನಪಶ್ಯೇತ್ ॥**

ಪವಿತ್ರ ವನಗಳಲ್ಲಿರಬೇಕಾದ ಮರಗಳನ್ನು ವರ್ಣಿಸುತ್ತಾ ನಮ್ಮ ಪ್ರಾಚೀನ ಗ್ರಂಥಗಳು, "ಅಶ್ವತ್ಥ -೧, ಪಿಚುಮಂದ (ಬೇವು)-೧, ನ್ಯಗ್ರೋಧ (ಆಲ) -೧, ಚಿಂಚಣಿ (ಹುಣಸೆ) ೧೦, ಕಪಿತ್ಥ (ಬೇಲ) - ೩, ಬಿಲ್ವ -೩, ಆಮ್ಲಕಿ (ನೆಲ್ಲಿ) - ೩, ಆಮ್ರ (ಮಾವು) -೫ - ಹೀಗೆ ೨೭ ಗಿಡಗಳನ್ನು ನೆಟ್ಟು ಬೆಳೆಸಿದವನಿಗೆ ನರಕ ದರ್ಶನವಿಲ್ಲ" ಎಂದು ಸಾರುತ್ತವೆ. ಅಶ್ವತ್ಥವನ್ನು ಕಡಿದವನಿಗೆ ಬಿಡುಗಡೆಯೇ ಇಲ್ಲವೆಂದೂ ಎಚ್ಚರಿಸುತ್ತದೆ. ಮಕ್ಕಳಾಗದವರು ಅಶ್ವತ್ಥಕ್ಕೆ ಪ್ರದಕ್ಷಿಣೆ ಬಂದರೆ ಮಕ್ಕಳಾಗುವುದೆಂಬ ನಂಬಿಕೆ ಹಲವರಲ್ಲಿದೆ. ಶನಿಗ್ರಹದ ಗ್ರಹಚಾರಕ್ಕೆ ಅಶ್ವತ್ಥ ಪೂಜೆಯನ್ನು ಜ್ಯೋತಿಷ್ಯ ಫಲಶಾಸ್ತ್ರ ಹೇಳುತ್ತದೆ. ಅರಳೀ ಮರದ ಬುಡದಲ್ಲೇ ಬುದ್ಧನಿಗೆ ಜ್ಞಾನೋದಯವಾದದ್ದು ಕೂಡ. ರಾಮಕೃಷ್ಣ ಪರಮಹಂಸರಿಗೆ ಆಧ್ಯಾತ್ಮ ದರ್ಶನವಾದುದ್ದು, ಅಶ್ವತ್ಥ, ಆಲ, ನೆಲ್ಲಿ, ಬಿಲ್ವ, ಶಮೀ - ಹೀಗೆ ೫ ವೃಕ್ಷಗಳ ಸಮುಚ್ಚಯವಾದ ಪಂಚವಟಿಯಲ್ಲಿ. ಅಶ್ವತ್ಥದ ಸಮಿಧೆ (ಕಟ್ಟಿಗೆ) ಯಜ್ಞ-ಯಾಗ, ಹೋಮ-ಹವನಗಳಿಗಷ್ಟೇ ಉಪಯೋಗ. ಹಿಂದಿನ ಕಾಲದಲ್ಲಿ ಅಶ್ವತ್ಥ ಕಡಿಯುವುದಿರಲಿ, ಅಶ್ವತ್ಥಮರ ತುಳಿದುಹತ್ತಲೂ ಜನ ಹಿಂಜರಿಯುತ್ತಿದ್ದರು.

ವಾಸ್ತವ

ಇದು ಅಶ್ವತ್ಥದ ವೈಭವೀಕರಣವಲ್ಲ. ಈ ಹೆಚ್ಚಳಕ್ಕೆ ಕಾರಣವೂ ಇದೆ. ನೀರಿಲ್ಲದ ಬರಡು ಭೂಮಿಯಲ್ಲೂ ದಷ್ಟಪುಷ್ಟವಾಗಿ ಬೆಳೆದು ನೂರಾರು ವರ್ಷಗಳ ಕಾಲ ಬಾಳಿ ಬದುಕುವ ಅಶ್ವತ್ಥದ ಬೇರುಗಳು ಭೂಮಿಯ ಆಳಕ್ಕೆ ವಿಶಾಲವಾಗಿ ಹಮ್ಮಿಕೊಂಡು, ನೆಲದ ಮೇಲೆ ಬಿದ್ದ ಮಳೆಯನ್ನು ಹರಿದು ಸಮುದ್ರ ಪಾಲಾಗದಂತೆ ತನ್ನ ಬೇರುಗಳಿಂದ ತಡೆದು ಭೂಮಿಯ ಆಳಕ್ಕೆ ಹಿಂಗಿಸುವ ಮೂಲಕ ಭೂಮಿಯ ಅಂತರ್ಜಲದ ಒರತೆಗಳನ್ನು ಹೆಚ್ಚಿಸುತ್ತದೆ. ಬಿರುಸಾದ ಮಳೆಯಲ್ಲಿ ಫಲವತ್ತಾದ ಮಣ್ಣು ಕೊರೆದು ಕೊಚ್ಚಿಕೊಂಡು ಹೋಗದಂತೆ, ಭಲ್ಲೆಯಂತೆ ದಟ್ಟವಾಗಿ ಹೆಣೆದುಕೊಂಡಿರುವ ಬೇರುಗಳು ತಡೆಯುತ್ತವೆ. ಬಂಡೆಕಲ್ಲುಗಳಿಂದಲೇ ತುಂಬಿದ ಕಠಿಣ ಭೂಮಿಯನ್ನೂ ಅಶ್ವತ್ಥದ ಬೇರುಗಳು ಪುಡಿಪುಡಿ ಮಾಡಿ ಫಲವತ್ತಾದ ಮಣ್ಣಾಗಿ ಪರಿವರ್ತಿಸುತ್ತದೆ.

ಅಶ್ವತ್ಥಮರ, ಇತರ ಮರಗಳಿಗಿಂತ ಹತ್ತುಪಟ್ಟು ಹೆಚ್ಚು ಆಮ್ಲಜನಕವನ್ನು ಉತ್ಪಾದಿಸುವ ಮೂಲಕ, ತನ್ನ ಒಟ್ಟು ಆಯಸ್ಸಿನಲ್ಲಿ, 85 ವರ್ಷ ಕಾಲ ಬದುಕುವ ಸುಮಾರು 100 ಮಂದಿ ಮನುಷ್ಯರಿಗೆ ಜೀವನವಿಡೀ ಉಸಿರಾಡಲು ಬೇಕಾಗುವಷ್ಟು ಆಮ್ಲಜನಕ ಒದಗಿಸುತ್ತದೆ. ನಗರಮಧ್ಯಗಳಲ್ಲಿರುವ ಅಶ್ವತ್ಥ ಮರ, ಕಾರು ಬಸ್ಸುಗಳು ಉಗುಳುವ ಹೊಗೆಯಿಂದ ಆಗುವ ವಾಯು-ಮಾಲಿನ್ಯವನ್ನು ನಿವಾರಿಸುವ ಜೊತೆ, ಶಬ್ದ ಮಾಲಿನ್ಯವನ್ನೂ ಹೀರಿಕೊಂಡು ನಮ್ಮ

ಆರೋಗ್ಯವನ್ನು ಪೂರೆಯುತ್ತದೆ. ಈ ಎಲ್ಲಾ ಉಪಯೋಗಗಳನ್ನು ಲೆಕ್ಕಹಾಕಿ ಒಬ್ಬ ವಿಜ್ಞಾನಿ ಅಶ್ವತ್ಥ ಮರದ ಬೆಲೆ ೩೩೦ ಕೋಟಿ ಡಾಲರುಗಳೆಂದು ಅಂದಾಜು ಮಾಡಿದ್ದ!

ಈ ಮರದ ಪ್ರತಿಯೊಂದು ಅವಯವವೂ ಮದ್ದಿನ ಗುಣ ಹೊಂದಿದ್ದು, ಆರೋಗ್ಯ ವರ್ಧಕವಾಗಿದೆ. ಅಶ್ವತ್ಥದ ಎಲೆ ಹಾಕಿ ಕುದಿಸಿದ ನೀರು, ಅಕ್ವಾಗಾರ್ಡ್ ಅಥವಾ ಫಿಲ್ಟರ್‌ನಿಂದ ಶುದ್ಧೀಕರಿಸಿದ ನೀರಿಗಿಂತಲೂ ಪರಿಶುದ್ಧವಾಗಿರುತ್ತದೆ. ಅಶ್ವತ್ಥದ ಎಲೆ ನಮ್ಮ ರಕ್ತ ಶುದ್ಧಗೊಳಿಸುತ್ತದೆ. ಚರ್ಮ ಕಾಯಿಲೆ ನಿವಾರಿಸುತ್ತದೆ.

ಅಶ್ವತ್ಥಮರದ ಗಾಳಿ ವಾತಾವರಣದಲ್ಲಿಲ್ಲದಿದ್ದರೆ, ಯಾವುದೇ ಬೀಜ ತನ್ನ ಮೊಳೆಯುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ ಎಂದು ವೃಕ್ಷಾಯುರ್ವೇದದಲ್ಲಿ ಉಲ್ಲೇಖವಿದೆ.

ಸದಾ ಚಲನಶೀಲವಾದ ಅಶ್ವತ್ಥ ಮರವು ನೋಡಿನೋಡಿದಷ್ಟೂ ಬೆರಗು ಹುಟ್ಟಿಸುತ್ತದೆ. ಅಶ್ವತ್ಥದ ಹಣ್ಣು ಅಸಂಖ್ಯ ಹಕ್ಕಿಗಳು ಆಹಾರ, ಆಶ್ರಯಸ್ಥಾನ. ಬೇರೆಲ್ಲ ಮರಗಳಿಗಿಂತ ಸುಮಾರು 10ಪಟ್ಟು ಹೆಚ್ಚು ಎಲೆಗಳಿರುವ ಈ ಮರ ವರ್ಷವರ್ಷವೂ ಚಿಗುರುತ್ತಿರುವಾಗ ರಕ್ತ ಕೆಂಪಿನಿಂದ ಕಂಗೊಳಿಸುತ್ತಿರುತ್ತದೆ. ಮುಂದೆ ಎಳೆ ಹಸುರಿಗೆ ತಿರುಗಿ ಹಸುರು ರಥದಂತೆ ಜೀವಸೆಲೆಯ ಸಂಕೇತವಾಗಿ ಮೆರೆಯುತ್ತದೆ. ಒಂದೊಂದು ಅಶ್ವತ್ಥಮರ ಒಂದೊಂದು ಕಾಲದಲ್ಲಿ ಚಿಗುರುವ ಸೌಂದರ್ಯವನ್ನು ಕಣ್ಣಿದ್ದವನು ಗಮನಿಸದಿರಲಾರ. ಋಷಿಮುನಿಗಳ, ಕವಿಗಳ, ಬೇಸಾಯಗಾರರ, ಹಳ್ಳಿಯ ಶ್ರಮಿಕರ, ಸಮಸ್ತ ಜನರ ಸ್ಫೂರ್ತಿಯ ಸೆಲೆಯಾದ ಅಶ್ವತ್ಥದ ಬುಡಕ್ಕೆ ಕೊಡಲಿ ಏಟು ಹಾಕುವುದು ಪಾಪದ ಕೆಲಸ. ಹಣದ ದುರಾಸೆ ಮಾತ್ರ ಈ ಕೆಟ್ಟ ಕೆಲಸವನ್ನು ನಮ್ಮಿಂದ ಮಾಡಿಸಬಲ್ಲುದು.

**ಹಸುರು ಅನುಶಾಸನ : ಅಗತ್ಯ**

ಭೂಮಿಯ ಗರ್ಭದಲ್ಲಿರುವ ಕಲ್ಲಿದ್ದಲು, ಪೆಟ್ರೋಲು, ಬಂಡೆಕಲ್ಲು, ಮುರಕಲ್ಲು, ವಿವಿಧ ಖನಿಜಗಳೇ ಮೊದಲಾದ ಅನರ್ಘ್ಯ ಸಂಪತ್ತಿನ ದಾಸ್ತಾನು ಒಮ್ಮೆ ಬರಿದಾದರೆ ಅವನ್ನು ನಾವು ಮತ್ತೆ ಮರಳಿ ಪಡೆಯಲಾರೆವು. ಅವು ಶಾಶ್ವತವಾಗಿ ಭೂಮಿಯಿಂದ ಮರೆಯಾಗುತ್ತವೆ. ಆದರೆ ಸಸ್ಯ ಸಂಪತ್ತು ಹಾಗಲ್ಲ. ಕಡಿಕಡಿದಷ್ಟು ಮತ್ತೆ ಹುಟ್ಟಿಕೊಳ್ಳುವಂಥವುಗಳು. ಹಾಗಾಗಿ ಮರಗಳನ್ನು ಕಡಿಯಲೇಬಾರದು ಎನ್ನುವುದು ಮೂರ್ಖತನವಾದೀತು. ಒಬ್ಬ ಬಡರೈತ ಹೊಟ್ಟೆಪಾಡಿಗಾಗಿ ತನ್ನ ಚಿಕ್ಕ ಖಾಸಗೀ ಜಾಗದಲ್ಲಿ, ಆರ್ಥಿಕವಾಗಿ ಹೆಚ್ಚು ಪ್ರಯೋಜನವಿರುವ ಮರ ಬೆಳೆಸಲು, ಅಥವಾ ಕೃಷಿಮಾಡಲು ಅಥವಾ ಮನೆಕಟ್ಟಲು ಇದ್ದ ಮರಗಳನ್ನು ಕಡಿಯುವುದು ಅನಿವಾರ್ಯವಾದೀತು. ಮನೆ, ಮಠ, ಮಂದಿರ, ಮಸೀದಿ, ಚರ್ಚು, ಭೂತಾಲಯಗಳನ್ನು ಕಟ್ಟಲು ಮರಗಳ ಆವಶ್ಯಕತೆಯಿದೆ. ಬಡವನಿಗೆ ದಿನನಿತ್ಯದ ಗಂಜಿ ಬೇಯಿಸಲು ಉರುವಲಾಗಿ ಕೂಡ ಕಟ್ಟಿಗೆ ಬೇಕು. ಆದರೆ ಮರಗಳನ್ನು ಉಪಯೋಗಸಲಿಕ್ಕೊಂದು "ಹಸುರು ನೀತಿ" ಬೇಕು. ಯಾವ ಮರ ಕಡಿಯಬಹುದು? ಎಷ್ಟು ಕಡಿಯಬಹುದು? ಯಾಕಾಗಿ ಕಡಿಯಬಹುದು ? ಕಡಿದಷ್ಟೇ ಹೊಸ ಮರಗಳನ್ನು ನೆಡುವ ಕಾರ್ಯಯೋಜನೆಯಿದೆಯೇ? - ಮುಂತಾದ ನೈತಿಕ ಪ್ರಶ್ನೆಗಳಿಗೆ ಉತ್ತರ ನೀಡುವ "ಹಸುರು ಕಾನೂನೊಂದು"ಇರಬೇಕು.

ಮುಖ್ಯವಾಗಿ ಸಾರ್ವಜನಿಕ ಸ್ಥಳದಲ್ಲಿರುವ ಅಲ್ಪಸ್ವಲ್ಪ ಮರಗಳನ್ನು ಒಟ್ಟಾರೆ ಕಡಿಯುವ ಮೊದಲಂತೂ ನೂರು ಬಾರಿ ಯೋಚಿಸಬೇಕು. ಜಗತ್ತಿನಾದ್ಯಂತ ಸಸ್ಯ ಸಂಪತ್ತು ತಡೆಯಿರದೆ ನಾಶವಾಗುತ್ತಿರುವಾಗ, ಸಾರ್ವಜನಿಕ ಸ್ಥಳಗಳಲ್ಲಿ ಹಸಿರು ಶ್ವಾಸಕೋಶಗಳಂತಿದ್ದು ನಮ್ಮ ಆರೋಗ್ಯ ಕಾಯುವ ಮರಗಳನ್ನೂ ಕಡಿದುರುಳಿಸಲು ನಮಗೆ ಮನಸ್ಸು ಹೇಗೆ ಬಂದೀತು ?

**ಸಾಂಸ್ಕೃತಿಕ ಅನುಶಾಸನ**

ಈ ಭೂಮಿ ಯಾರಿಗೂ ಸೇರಿದ್ದಲ್ಲ. ಇದು ನಿನ್ನೆ ನನ್ನದಾಗಿರಲಿಲ್ಲ. ಇಂದು 'ನನ್ನದು' ಎಂದು ಭಿಂಕದಿಂದ ನುಡಿಯುವ ಈ ತುಂಡು ಭೂಮಿಯನ್ನು, ಹಿಂದೆ ಅನೇಕ ಜನ "ನನ್ನದು", "ನನ್ನದು" ಎಂದು ಹೇಳುತ್ತಲೇ ಬಂದು, ಮಣ್ಣುಪಾಲಾಗಿದ್ದಾರೆ. ಇಂದು ನಾನು ಈ ನೆಲವನ್ನು "ನನ್ನದು" ಎನ್ನುತ್ತಿದ್ದೇನೆ. ಆದರೆ ನಾಳೆ ನಾನೂ ಮಣ್ಣುಪಾಲಾಗುತ್ತೇನೆ. ನಾಳೆ ಇನ್ನೊಬ್ಬ ಈ ನೆಲವನ್ನು "ನನ್ನದು" ಎನ್ನುತ್ತಾನೆ. ಆದರೆ ಭೂಮಿ ಯಾರದ್ದೂ ಆಗಿರದೆ ಕೇವಲ ಇರುತ್ತದೆ.

ಹಾಗಾಗಿ ಭೂಮಿ 'ಎಲ್ಲರಿಗೂ ಸೇರಿದ್ದು', 'ಮುಂದಿನ ಪೀಳಿಗೆಗೂ ಸೇರಿದ್ದು' ಎಂಬ ಭಾವನೆಯಿಂದ ನಮ್ಮ ಆವಶ್ಯಕತೆಗೆ ತಕ್ಕಷ್ಟೇ ಭೋಗಿಸುವ ವಿವೇಕ ತೋರಬೇಕು. ಇಂದು ನಾನು ಆವಶ್ಯಕತೆಗಿಂತ ಹೆಚ್ಚಿನ ದುರಾಸೆಯಿಂದ ಭೋಗಿಸುವುದು, ಮುಂದಿನ ಪೀಳಿಗೆಯ ಹಕ್ಕನ್ನು ಕಸಿದುಕೊಂಡಂತೆ. ಇದು ಅಧರ್ಮ, ಪಾಪದ ಕೆಲಸ. ಉಪನಿಷತ್ ಋಷಿಗಳು ಕಂಡ "ಮಾಗೃಧಃ ಕಸ್ಯಸ್ವಿದ್ಧನಮ್" ಎಂಬ ಸತ್ಯ ಸಾರುವುದು ಇದನ್ನೆ. ಗಾಂಧೀಜಿಯವರು, "ಭೂಮಿ ನಮ್ಮ ದುರಾಸೆಯನ್ನು ತಣಿಸಲು ಅಕ್ಷಯ ಪಾತ್ರೆಯೇನಲ್ಲ" ಎಂದು ಹೇಳುವುದೂ ಇದನ್ನೆ.

ಸಾರ್ವಜನಿಕ ಸ್ಥಳದಲ್ಲಿರುವ ಮರಗಳನ್ನು ಮುಖ್ಯವಾಗಿ ಅಶ್ವತ್ಥ, ಆಲ, ಧೂಪ, ಹುಣಸೆ ಮುಂತಾದ ಹೆಮ್ಮರಗಳನ್ನು ಜುಜುಬಿ ಕಾರಣಕ್ಕಾಗಿ ಕಡಿಯುವುದು ಘೋರ ಅಪರಾಧ. ಅಶ್ವತ್ಥಮರ ಮನೆಗಳ ಮೇಲೆ ಉರುಳಿ ಬಿದ್ದ ನಿದರ್ಶನವೇ ಇಲ್ಲದಿರುವಾಗ ಅರಣ್ಯ ಇಲಾಖೆಗಾದರೂ ಈ ಬಗ್ಗೆ ವಿವೇಕ ಬೇಕು. ಅಜ್ಞಾನವೇ ಅರಣ್ಯ ಇಲಾಖೆಗೆ ಮಾನದಂಡನಾಗಬಾರದು. ರಾಜಕಾರಣಿಗಳ ಜತೆ ಶಾಮೀಲಾಗುವ ಎಚ್ಚರ ತಪ್ಪಿದ ಒಬ್ಬ ಅರಣ್ಯ ಇಲಾಖಾಧಿಕಾರಿ ಉಳಿದ ಪ್ರಾಮಾಣಿಕ ಅಧಿಕಾರಿಗಳಿಗೆ ಕಳಂಕ ಹಚ್ಚುವ ಜೊತೆ, ಸಮಸ್ತ ಜೀವಜಾಲಕ್ಕೂ ಕಂಠಕ ಪ್ರಾಯನಾಗುತ್ತಾನೆ. ❒

# ಕಾಡನ್ನು ಸೀಳಿ ಮುನ್ನುಗ್ಗಿದ ಪೈಪ್‌ಲೈನ್

ಭೂಮಿಯ ಯಾವ ಎಚ್ಚರದ ಕರೆಗಂಟೆಯನ್ನು ಆಲಿಸದಷ್ಟು ದುರಾಸೆಯನ್ನು ಬೆಳೆಸಿಕೊಂಡಿದ್ದೇವೆ ನಾವು. ನಮ್ಮ ಅಜ್ಞಾನ-ಭಿಂಕಗಳು ದುರಾಕ್ರಮಣಕ್ಕೆ ಭಾರತದ ಸಂವಿಧಾನದ ಯಾವ ರಕ್ಷಣೆಯೂ ಎದುರಿಲ್ಲ. ನಮ್ಮ ಜನಪ್ರತಿನಿಧಿಗಳೆನಿಸಿಕೊಂಡವರ ಮೌಢ್ಯದ ಅಭಿವೃದ್ಧಿ ರಥ ಯಾವುದನ್ನು ತಾನೇ ಉಳಿಸೀತು ? ನಮ್ಮನ್ನು ಸಲಹುವ ಮಣ್ಣು, ನೀರು, ಗಾಳಿ, ಕಾಡು-ಮೇಡು, ಪಶು, ಪಕ್ಷಿ, ಮನುಷ್ಯ, ಹಾಗೆಯೇ ಸಾಮಾಜಿಕ ನ್ಯಾಯ, ಸಮತೆ, ಬಹುಜನ ಹಿತ ಮೊದಲಾದ ಪ್ರಜಾಸತ್ತಾತ್ಮಕ ಮೌಲ್ಯಗಳು - ಎಲ್ಲವೂ ಈ ಅಭಿವೃದ್ಧಿ ಯಜ್ಞದಲ್ಲಿ ಉರಿದು ಬೂದಿಯಾಗುವ ಯಜ್ಞಪಶುಗಳು. ತಪ್ಪು ಅಭಿವೃದ್ಧಿ ಮಾಡೆಲ್‌ಗಳ ಉಸ್ತುವಾರೀ ಪ್ರತಿನಿಧಿಗಳು ಈ ಗ್ರಾಮೀಣ ಭಾರತದಲ್ಲಿ ವಾಸಿಸುವ ಕೋಟ್ಯಂತರ ಜನರಿಗೆ ಧ್ವನಿ ಕೊಡುವ ಏಕೈಕ ವ್ಯವಸ್ಥೆಯಾದ ಅತ್ಯಂತ ಪವಿತ್ರವಾದ ಗ್ರಾಮ ಪಂಚಾಯತುಗಳ ಧ್ವನಿಯನ್ನೇ ಹತ್ತಿಕುತ್ತಾ, ಆ ಮೂಲಕ ನಮ್ಮ ಸಂವಿಧಾನದ ಜನಪರ ಆಶಯಗಳನ್ನೇ ಹೊಸಕಿ ಹಾಕುತ್ತಿದ್ದಾರೆ.

ಮಂಗಳೂರಿನಿಂದ ಬೆಂಗಳೂರಿಗೆ ತೈಲೋತ್ಪನ್ನ ಸಾಗಣೆಗಾಗಿ ಹಾಕಲು ಆರಂಭಿಸಿದ "ಎಚ್.ಪಿ.ಸಿ.ಎಲ್. ಪೈಪು ಲೈನ್" ಪಂಚಾಯತುಗಳ, ವಿಜ್ಞಾನಿಗಳ, ವಿಷಯ ತಜ್ಞರ, ಸ್ಥಳೀಯ ಜನರ ಯಾರ ಎಚ್ಚರಿಕೆಯನ್ನೂ ಲೆಕ್ಕಿಸದೆ, ಜಗತ್ತಿನ ೧೮ ಅತೀ ಸೂಕ್ಷ್ಮ ಪರಿಸರಗಳಲ್ಲಿ ಒಂದಾದ ಪಶ್ಚಿಮಘಟ್ಟದ ಗೊಂಡಾರಣ್ಯವನ್ನು ೩೦ ಮೀಟರ್

---

ಹೊಸದಿಗಂತ, (ದೈನಿಕ) ಮಂಗಳೂರು, ಫೆಬ್ರವರಿ ೨೭, ೨೦೦೧

ಅಗಲದಲ್ಲಿ ಸೀಳುತ್ತಾ ಆಕ್ರಮಣಕಾರಿಯಾಗಿ ಮುನ್ನುಗ್ಗುತ್ತಿದೆ. ಲಕ್ಷಾಂತರ ಮರಗಳನ್ನು ಈಗಾಗಲೇ ನಾಶಮಾಡಿ ಭೂಗರ್ಭದಡಿ ಸೇರಿಸಿಯಾಗಿದೆ. ಆನೆಗಳ ಅಭಯಾರಣ್ಯದ ಪ್ರದೇಶದಲ್ಲಿ ಅಗತ್ಯವಾದ ಬೆದುರಿನ ಹಿಂಡುಹಿಂಡುಗಳನ್ನೇ ನಾಶಮಾಡಿ ನೂರಾರು ಟ್ರಕ್ಕುಗಳಲ್ಲಿ ಸಾಗಿಸುವ ಕೈಂಕರ್ಯ ಸಾಗಿದೆ. ಅನೇಕ ಪ್ರಮುಖ ಪರಿಸರ ಕಾರ್ಯಕರ್ತರ ವಿನಂತಿಯ ಮೇರೆಗೆ ಮಾನ್ಯ ಪ್ರಧಾನ ಮಂತ್ರಿ ಶ್ರೀ ವಾಜಪೇಯಿಯವರು 'ಈ ಬಗ್ಗೆ ಕೂಲಂಕಷ ಅಧ್ಯಯನ ನಡೆಸುತ್ತೇನೆ' ಎಂದು ಆಶ್ವಾಸನೆಯಿತ್ತಿದ್ದರೂ ಅದು ಇಂದು ಸುಳ್ಳಾಗುತ್ತಿದೆ.

ಒಂದು ಮರ ಕಡಿದರೆ ಹತ್ತು ಮಕ್ಕಳನ್ನು ಕೊಂದಷ್ಟು ಪಾಪವೆಂದು ಸಾರುವ ನಮ್ಮ ಸಂಸ್ಕೃತಿಯ ನೆಲದಲ್ಲಿ ಈ ರೀತಿ, ವಿವೇಚನೆಯಿಲ್ಲದೆ ಸಾವಿರಾರು ಮರಗಳು ಉರುಳುವುದನ್ನು ಕಂಡಾಗ ಸಂಕಟವಾಗುತ್ತದೆ.

**ಸಂವಿಧಾನಕ್ಕೆ ಅಪಚಾರ**

ಯಾವುದೇ ಒಂದು ಪ್ರದೇಶದಲ್ಲಿ ಏನೇ ಅಭಿವೃದ್ಧಿ ಯೋಜನೆ ಜ್ಯಾರಿಗೊಳಿಸಬೇಕಾದರೂ, ಮೊತ್ತಮೊದಲು ಅಲ್ಲಿನ ಸ್ಥಳೀಯ ಪಂಚಾಯತಿನ ಅನುಮತಿ ಬೇಕೆಂದು ಇತ್ತೀಚಿನ ಸಂವಿಧಾನ ತಿದ್ದುಪಡಿ ಕಲಮುಗಳು ಹೇಳುತ್ತವೆ. ಹಾಗಾಗಿಯೇ ಗೋವಾದಲ್ಲಿ ಅಮೇರಿಕಾದ ಬಲಿಷ್ಠ ಬಹುರಾಷ್ಟ್ರೀಯ ಕಂಪೆನಿ 'ದು ಪಾಂಟ್'ಗೆ ಅಲ್ಲಿನ ಸ್ಥಳೀಯ ಪಂಚಾಯತಿನ ವಿರೋಧದಿಂದಾಗಿ ತನ್ನ ಘಟಕವನ್ನು ಸ್ಥಾಪಿಸಲಾಗಲಿಲ್ಲ. ಆದರೆ ಈ ದಕ್ಷಿಣ ಕನ್ನಡ - ಉಡುಪಿ ಜಿಲ್ಲೆಗಳಲ್ಲಿ ಅಭಿವೃದ್ಧಿ ಸಂಕೀರ್ತನಕಾರರಿಗೆ ಯಾವ ಕಾನೂನೂ ಲಗಾವಾಗುವುದಿಲ್ಲ. ಪೈಪ್ಲೈನು ಹಾದು ಹೋಗುವ ಹಳ್ಳಿಗಳಲ್ಲಿರುವ ೨೩ ಪಂಚಾಯತುಗಳಲ್ಲಿ ೨೧ಪಂಚಾಯತುಗಳು, "ಈ ಯೋಜನೆಯು ಸಂಪೂರ್ಣ ಜನವಿರೋಧಿ ಆಗಿರುವುದರಿಂದ, ಪಂಚಾಯತು ಈ ಯೋಜನೆಯನ್ನು ವಿರೋಧಿಸುತ್ತದೆ" ಎಂದು ಠರಾವು ಪಾಸು ಮಾಡಿದ್ದರೂ ಕೂಡ, ಇದಕ್ಕೆ ಕಿಮ್ಮತ್ತೂ ಬೆಲೆಕೊಡದೆ, ಜನರ ಆಶಯಗಳನ್ನೆಲ್ಲಾ ಗಾಳಿಗೆ ತೂರಲಾಗುತ್ತಿದೆ.

ಈ ಬಗ್ಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ 'ಸಾರ್ವಜನಿಕ ಆಲಿಕೆ' ಸಭೆಯಲ್ಲಿ, ಸಾರ್ವಜನಿಕರು ಕೇಳಿದ ಒಂದು ಪ್ರಶ್ನೆಗೂ ಸರಿಯಾದ ಉತ್ತರ ನೀಡಲಾಗಲಿಲ್ಲ. ಸಾರ್ವಜನಿಕ ಆಲಿಕೆ ಸಭೆಯು ಮಾಹಿತಿಯನ್ನು ಗ್ರಾಮ ಪಂಚಾಯತುಗಳಿಗೆ ಒದಗಿಸದೆ, ಜನರನ್ನು ಕತ್ತಲಲ್ಲಿಡಲಾಗಿದೆ. ಪೈಪ್ಲೈನು ಪ್ರದೇಶವನ್ನು "ಸೆಟಲೈಟ್ ಸರ್ವೇ" ಮೂಲಕ ಗುರುತಿಸಲಾಗಿದೆಯೇ ವಿನಾ, ಸ್ಥಳದಲ್ಲಿ ಸರ್ವೇ ನಡೆಯಲಿಲ್ಲ. ಹಾಗಾಗಿ ಅದು ಅನೇಕ ತಪ್ಪು, ವಿರೋಧಾಭಾಸ ಮಾಹಿತಿಗಳನ್ನು ಹೊಂದಿದೆ. ಈ 'ಕಪೋಲ ಕಲ್ಪಿತ' ವರದಿಯಲ್ಲಿ ಪೈಪ್ಲೈನು ಹಾದು ಹೋಗುವ ಪಶ್ಚಿಮಘಟ್ಟ ಭಾಗದಲ್ಲಿ ಬರೀ ಹುಲ್ಲು, ಭಲ್ಲೆ ಮಾತ್ರ ಇದೆ ಎಂದು ಉಲ್ಲೇಖಿಸಲಾಗಿದೆ. ದ.ಕ. ಜಿಲ್ಲಾ ಸಾರ್ವಜನಿಕ ಸಭೆಯಲ್ಲಿ ನೀಡಿದ ಆಕ್ಷೇಪಣೆ ಅರ್ಜಿಗಳನ್ನು ಪ್ರತ್ಯೇಕವಾಗಿ ಗ್ರಾಮಗಳಲ್ಲಿ ವಿಚಾರಣೆ ನಡೆಸಲಾಗಿದೆ ಎಂದಿದ್ದಾರೆ. ಆದರೆ ಇಂಥ ವಿಚಾರಣೆಗಳೇ ನಡೆಯಲಿಲ್ಲ ಮಾತ್ರವಲ್ಲ, ಈ ವರದಿಯನ್ನು ಗ್ರಾಮಪಂಚಾಯತುಗಳ ಜತೆಯೂ ಚರ್ಚಿಸಿಲ್ಲ.

**ಕಾನೂನುಗಳೆಲ್ಲ ಕಸದ ತೊಟ್ಟಿಗೆ**

ಯೋಜನಾ ಆಯೋಗದ ಹೇಳಿಕೆಯಂತೆ ಒಂದು ಮೂಲಭೂತ ವ್ಯವಸ್ಥೆಯ (infrastructure) ಪೂರ್ಣ ಬಳಕೆಯಾಗದೆ ಇನ್ನೊಂದು ವ್ಯವಸ್ಥೆ ರೂಪಿಸಕೂಡದು. ಅದೊಂದು ರಾಷ್ಟ್ರೀಯ ನಷ್ಟ. ಹಾಗಿರುವಾಗ ರೈಲ್ವೆಯಲ್ಲಿ ತೈಲಸಾಗಾಟ ಸಾಗಣೆ ಸಾಧ್ಯವಿರುವಾಗ (ಅದೂ ಕೂಡ ೨೦೦ಕೋಟಿ ರೂಪಾಯಿ ವೆಚ್ಚದಲ್ಲಿ ಬ್ರಾಡ್‌ಗೇಜ್ ಹಾಕಿ), ಆ ವ್ಯವಸ್ಥೆಯನ್ನು ಬಳಸದೆ ಇನ್ನೊಂದು ವ್ಯವಸ್ಥೆಯನ್ನು ರೂಪಾಯಿ ೧,೫೦೦ ಕೋಟಿ ರೂಪಾಯಿ ವೆಚ್ಚದಲ್ಲಿ ರೂಢಿಸುವುದು ಕಾನೂನು ಬಾಹಿರ ಮಾತ್ರವಲ್ಲ, ಈ ಬಡದೇಶದ ಬೊಕ್ಕಸದ ಲೂಟಿ ಎಂದೇ ಹೇಳಬಹುದು. ಈ ಉದ್ದೇಶಕ್ಕಾಗಿಯೇ ರೈಲ್ವೆ ಬ್ರಾಡ್‌ಗೇಜ್ ಹಾಕಲು ಮೀಟರ್‌ಗೇಜನ್ನು ಕಿತ್ತು ಹಾಕಲಾಯಿತು. ಈಗ ಇದಕ್ಕೆ ೨೦೦ ಕೋಟಿ ರೂ. ಹಣವಿಲ್ಲವೆಂದು ಸಬೂಬು ಹೇಳಿ ವರುಷಗಟ್ಟಲೆ ವಿಳಂಬ ಮಾಡಲಾಗುತ್ತಿದೆ.

**ರೈಲು ಅಧಿಕಾರಿಗಳ ಅಭಿಪ್ರಾಯ**

ರೈಲ್ವೆ ಮೂಲಕ ಎಂ. ಆರ್. ಪಿ. ಎಲ್. ತೈಲೋತ್ಪನ್ನಗಳನ್ನು ಸಾಗಿಸಲು ಸಾಧ್ಯವೆಂದು ರೈಲ್ವೇ ಅಧಿಕಾರಿಗಳು ಹಿಂದಿನಿಂದ ಹೇಳುತ್ತಾ ಬಂದಿದ್ದಾರೆ. ಈ ಬಗ್ಗೆ ಅದರ ಅಧಿಕಾರಿ, ಎನ್. ಮಧುಸೂದನ ರಾವ್, ಡೈರೆಕ್ಟರ್, ಟ್ರಾಫಿಕ್ ಟ್ರಾನ್ಸ್‌ಪೋರ್ಟೇಶನ್ ಇವರು ಎಚ್.ಪಿ.ಸಿ.ಎಲ್. ರವರಿಗೆ ತಾ. ೩.೩.೧೯೯೯ರಂದು ಬರೆದ ಪತ್ರದಲ್ಲಿ ವಿವರಿಸಿದ್ದಾರೆ. ಇತ್ತೀಚೆಗೆ (೨೧.೯.೨೦೦೦) ರೈಲ್ವೇ ಉನ್ನತ ಅಧಿಕಾರಿಗಳಾದ ಪಾಲ್ಘಾಟ್ ಡಿವಿಜನಿನ ಮುಖ್ಯಸ್ಥರು ಈ ಬಗ್ಗೆ ಪುನಃ ಸ್ಪಷ್ಟಪಡಿಸುತ್ತಾ, ೯ ಮಿಲಿಯ ಟನ್ ಮಾತ್ರವಲ್ಲ ೧೫ರಿಂದ ೨೦ ಮಿಲಿಯ ಟನ್ ಕೂಡಾ ಸಾಗಿಸಬಹುದೆಂದು ಹೇಳಿದ್ದಾರೆ. ಎತ್ತರ ಪ್ರದೇಶದಲ್ಲಿ ಹೋಗಲು ತಾಂತ್ರಿಕವಾಗಿ ಹೈಪವರ್ 'ಲೋಕೋ' ಬಳಸಲಾಗುತ್ತದೆ ಎಂದಿದ್ದಾರೆ. ೪,೦೦೦ ಮೀಟರ್ ಎತ್ತರದಲ್ಲಿರುವ ಬೆಂಗಳೂರಿಗೆ ಪೈಪಿನಲ್ಲಿ ಸಾಗಿಸಲು ಬೇಕಾದ ಒತ್ತಡಕ್ಕೆ ಖರ್ಚಾಗುವ ಇಂಧನ ಶಕ್ತಿ ಅಗಾಧ ಮತ್ತು ಇದು ಅವೈಜ್ಞಾನಿಕ ಎಂದು ವಿಷಯತಜ್ಞರು ಹೇಳುತ್ತಾರೆ.

**ರಾಜಕೀಯ ನಿರ್ಧಾರ**

ಜಿಲ್ಲಾ ಉಸ್ತುವಾರಿ ಸಚಿವರು ೧೮.೯.೨೦೦೦ದಂದು ಪಂಚಾಯತು ಅಧ್ಯಕ್ಷರ ಸಭೆ ಕರೆದು ಚರ್ಚಿಸಿದಾಗ ರೈಲ್ವೆ ಅಧಿಕಾರಿಗಳ ಸಭೆ ಕರೆಯಲಾಗುವುದಾಗಿಯೂ, ರೈಲ್ವೆಯಿಂದ ತೈಲಸಾಗಣೆ ಸಾಧ್ಯವಿಲ್ಲದಿದ್ದರೆ ಮಾತ್ರ ಪರ್ಯಾಯ ವ್ಯವಸ್ಥೆ ಮಾಡುವುದಾಗಿಯೂ ಹೇಳಿದ್ದರು. ದಕ್ಷಿಣ ಕನ್ನಡ ಸಂಸದೀಯ ಮಂಡಳಿಯೂ ಇಂತಹ ನಿರ್ಣಯ ಮಾಡಿ ಪೆಟ್ರೋಲಿಯಂ ಮಂತ್ರಿಗಳಿಗೆ ಬರೆದಿದ್ದಾರೆ. ಇಂದಿನ ಕೇಂದ್ರ ಮಂತ್ರಿಗಳಾದ ಮಾನ್ಯ ಧನಂಜಯ ಕುಮಾರ್ ಅವರು, ಪೆಟ್ರೋಲಿಯಂ ಮಂತ್ರಿ ಶ್ರೀರಾಮ ಮೂರ್ತಿಯವರಿಗೆ ೫.೩.೧೯೯೯ರಲ್ಲಿ ಪತ್ರ ಬರೆದು, "ಈಗಿರುವ ಮಂಗಳೂರು - ಬೆಂಗಳೂರು ರೈಲ್ವೆ ಮೂಲಕವೇ ತೈಲ ಸಾಗಣೆಕೆ ಸಾಧ್ಯ ಎಂದು ಬಲವಾಗಿ ನಂಬಿದ್ದೇನೆ. ದಯವಿಟ್ಟು ಈ ಬಗ್ಗೆ ಗಮನ ಹರಿಸಿ" ಎಂದು ಬರೆದಿದ್ದಾರೆ.

ವಿಜ್ಞಾನಿಗಳ ಅಭಿಪ್ರಾಯಗಳು

1. ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸಿನ' "ಸೆಂಟರ್ ಫಾರ್ ಇಕಲಾಜಿಕಲ್ ಸಾಯನ್ಸ್" ವಿಜ್ಞಾನಿಗಳು, ನೆರಿಯಾದಲ್ಲಿ ಮಾಡಿದ ಸರ್ವೇಯಲ್ಲಿ ಇಲ್ಲಿನ ಅಮೂಲ್ಯವಾದ ಸಸ್ಯ ಸಂಪತ್ತು ಮತ್ತು ವನ್ಯಜೀವಿಗಳ ಮೇಲೆ ಆಗ ತಕ್ಕ ಪರಿಣಾಮವನ್ನು ಸ್ಪಷ್ಟವಾಗಿ ಸೂಚಿಸುತ್ತಾ, ಒಂದು ಸಲ ಇದು ನಾಶವಾದರೆ ಮರಳಿ ಸೃಷ್ಟಿಸಲಾರೆವು" ಎಂದಿದ್ದಾರೆ.

2. ಪುಣೆಯ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ ಸಂಸ್ಥೆಯು, "ಪಶ್ಚಿಮ ಘಟ್ಟಗಳ ಪ್ರದೇಶದಲ್ಲಾಗುವ ಕಾಡಿನ ನಾಶದಿಂದ ಮಂಗನ ಕಾಯಿಲೆಗಳಂಥ ಕಾಯಿಲೆಗಳು ಮರುಕಳಿಸುವ ಸಾಧ್ಯತೆಯಿದೆಯೆಂದು" ಎಚ್ಚರಿಸಿದ್ದಾರೆ.

3. ನೆರಿಯಾ ಗ್ರಾಮದಲ್ಲಿ ಪಶ್ಚಿಮ ಘಟ್ಟ ಪ್ರದೇಶದ ದಟ್ಟವಾದ ಅರಣ್ಯ ಪ್ರದೇಶದಲ್ಲಿ ಪೈಪ್‌ಲೈನ್ ಹಾದು ಹೋಗುವುದರಿಂದ ಈ ಸೂಕ್ಷ್ಮ ಅರಣ್ಯದ ಒಟ್ಟು ಜೀವಜಾಲ ವ್ಯವಸ್ಥೆಯ ಬಾರೀ ವ್ಯತ್ಯಾಸವುಂಟಾಗುತ್ತದೆ. ಬೆಂಗಳೂರಿನ, 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ್'ನ" ಏಶಿಯನ್ ಎಲಿಫೆಂಟ್ ರಿಸರ್ಚ್ ಎಂಡ್ ಕನ್ಸರ್ವೇಶನ್ ಕೇಂದ್ರ"ದ ವಿಜ್ಞಾನಿಗಳು ಏಪ್ರಿಲ್ ೧೯೯೯ರಲ್ಲಿ ನೀಡಿದ ಮಧ್ಯಂತರ ವರದಿಯಂತೆ, ಪೈಪುಲೈನ್ ಹಾದುಹೋಗುವ ಪ್ರದೇಶದ ಜೀವಜಾಲದ ಮೇಲೆ, ಮುಖ್ಯವಾಗಿ ಆನೆಗಳ ಮೇಲೆ, ಆಗ ತಕ್ಕ ದುರಂತ ಪರಿಣಾಮವನ್ನು ವಿಸ್ತಾರವಾಗಿ ಹೇಳಿದ್ದಾರೆ. ಇದು ಒಂದು ಸಂಕೇತ ಮಾತ್ರ. ಪಶ್ಚಿಮಘಟ್ಟದ ಈ ಭಾಗವೇ ಪಾರಿಸಾರಿಕ ವಿನಾಶವನ್ನು ಅನುಭವಿಸಲಿದೆ. ಈಗಾಗಲೇ ಭಯಗೊಂಡ ಆನೆಗಳ ಹಿಂಡು ಈ ವಿಕೃತವಾಗಿ ನಿರ್ಮಿತವಾದ ಪೈಪ್‌ಲೈನ್ ಹೆದ್ದಾರಿಯಲ್ಲಿ, ಪ್ರತ್ಯಕ್ಷವಾಗಿದ್ದಾವೆಂಬ ವರದಿಗಳೂ ಬರುತ್ತಿವೆ.

ಅಸಂಬದ್ಧ ಅಭಿವೃದ್ಧಿ ವ್ಯಾಖ್ಯೆ

ಅರ್ಥಶಾಸ್ತ್ರ ಸಿದ್ಧಾಂತ ಹೇಳುವಂತೆ, ಯಾವುದೇ ಒಂದು ಯೋಜನೆಯನ್ನು ಮಾಡುವಾಗ ಅದರ ಲಾಭ-ನಷ್ಟಗಳನ್ನು ತುಲನೆ ಮಾಡಬೇಕು. ಇದಕ್ಕೆ "ಟರ್ಮ್ಸ್ ಆಫ್ ಟ್ರೇಡ್" (Terms of Trade) ಎನ್ನುತ್ತಾರೆ. ಯಾವುದನ್ನಾದರೂ ಪಡೆಯುವಾಗ ಕಳಕೊಳ್ಳುವುದೆಷ್ಟು ಎಂಬುದನ್ನು ತುಲನೆ ಮಾಡಿ ವೈಜ್ಞಾನಿಕವಾಗಿ ಮುಂದುವರಿಯಬೇಕು.

ಈ ಪೈಪುಲೈನ್ ಯೋಜನೆಯಲ್ಲಿ, ಪಡೆಯುವುದಕ್ಕಿಂತ ನಾವು ಕಳಕೊಳ್ಳುವುದು ಹೆಚ್ಚು, ಆರ್ಥಿಕ ನಷ್ಟ (ಮೇಲೆ ಹೇಳಿದಂತೆ), ಸಾಮಾಜಿಕ ಹೊರೆ, ನಷ್ಟ, ಸಂಕಷ್ಟಗಳು, ಪ್ರಾಕೃತಿಕ ಸಂಪತ್ತಿನ ನಷ್ಟ, ೬೬ ಗ್ರಾಮಗಳ ಸಾವಿರಾರು ರೈತರ ಕುಟುಂಬದ ನಿರಾಶ್ರಿತರ ಸಮಸ್ಯೆ, ನೀರಿನಿಂದ ತುಂಬಿತುಳುಕುತ್ತ "ನೀರು ಏತಿಯ"ವೇ ಆದ ಭಾಗದ ಕಾಡಿನ ನಾಶದಿಂದ ಎದುರಿಸಬೇಕಾದ ನೀರಿನ ಬರಗಾಲ ಮತ್ತು ಮಿಲಿಯಾಂತರ ವರುಷಗಳಲ್ಲಿ ಮೂಡಿ ಬಂದ ಊಹೆಗೂ ನಿಲುಕದ ಪ್ರಾಕೃತಿಕ ಜೀವಜಾಲದ ನಷ್ಟ, ಇವುಗಳ "ಬ್ಯಾಲೆನ್ಸ್ ಶೀಟ್" ತೆಗೆದರೆ, ಲಾಭಕ್ಕಿಂತ ನೂರಾರು

ಪಾಲು ಕಳೆದುಕೊಳ್ಳುತ್ತೇವೆ. ಇಂಥ ಪ್ರಗತಿ ಪರವಲ್ಲದ ಜೀವ ಪರವಲ್ಲದ ನಿಸರ್ಗ ವಿರೋಧಿಯಾದ, ಅತಾರ್ಕಿಕ, ಅವೈಜ್ಞಾನಿಕ ಯೋಜನೆ ಅದೂ ಕೂಡ ಸಮರ್ಥಕವಾದ ಬದಲೀ ವ್ಯವಸ್ಥೆಯಿರುವಾಗ, ಬೇಕೇ ಎಂಬುದನ್ನು ಗಂಭೀರವಾಗಿ ಚಿಂತಿಸಬೇಕಾಗಿದೆ. ಭೂಮಿಯಿಂದಲೇ ಮೂಡಿ ಬಂದ ನಾವು, ಭೂಮಿಯ ಭಾಷೆಯನ್ನೇ ಮರೆತರೆ, ಗುಜರಾತಿನ ದುರಂತ (ಭೂಕಂಪ: ಪ್ರಕೃತಿ ವಿಕೋಪ) ದಲ್ಲಾದಂತೆಯೇ, ಈ ನೆಲ ನಮಗೆ ಬಲವಂತವಾಗಿ ಈ ನೆಲದ ಭಾಷೆ ಕಲಿಸದೆ ಬಿಡದು. ಆಗ ನಾವು-ನೀವು ಇರದಿರಬಹುದು. ಆದರೆ, ಮುಂದಿನ ಪೀಳಿಗೆ ಇದರ ಫಲ ಉಣ್ಣಬೇಕಾಗುತ್ತದೆ ಅದಕ್ಕೆ ಈ ನೆಲದ ವಿವೇಕವನ್ನು ಕಂಡುಕೊಂಡು ಮುಂದೆ ಸಾಗುವುದು ಒಳ್ಳೆಯದು. ❐

## ಪರಿಸರ ಕಾರ್ಯಕರ್ತರ ಕೆಲಸ:

# ಸ್ವಾಮೀಜಿಯವರಲ್ಲಿ ಮನವಿ

ಗೌರವಾನ್ವಿತರಾದ ಶ್ರೀ ಆದಿಚುಂಚನಗಿರಿ ಸ್ವಾಮಿಗಳು ಇತ್ತೀಚೆಗೆ ಮಂಗಳೂರಿನಲ್ಲಿ ಮಾತಾಡುತ್ತಾ, "ಪರಿಸರವಾದಿಗಳು ತುಂಬಾ ಮಾತಾಡುತ್ತಾರೆ. ಆದರೆ ಕೆಲಸ ಮಾಡುವುದಿಲ್ಲ". ಎಂಬರ್ಥದ ಹೇಳಿಕೆ ಕೊಟ್ಟದ್ದನ್ನು ಪತ್ರಿಕೆಗಳಲ್ಲಿ ಗಮನಿಸಿದೆ. ಪೂಜ್ಯರು ಈ ಮಾತು ಹೇಳಿದ್ದು ಹೌದಾದರೆ ಇದು ಅತ್ಯಂತ ದುರಾದೃಷ್ಟಕರ. ಪೂಜ್ಯ ಸ್ವಾಮೀಜಿಯವರು ಕರ್ನಾಟಕ ಸರಕಾರದ ಹಸಿರು ಯೋಜನೆ ಯಶಸ್ವಿಯಾಗುವಂತೆ ಕಾರ್ಯನಿರ್ವಹಿಸುತ್ತಿರುವುದು ನಿಜಕ್ಕೂ ಸಂತಸದ ಸಂಗತಿ. ಕರ್ನಾಟಕ ಸರಕಾರದ ಅರಣ್ಯ ಇಲಾಖೆಯು ಕಳೆದ ಹತ್ತು ತಿಂಗಳಿನಿಂದ ದಕ್ಷಿಣ ಕನ್ನಡ ಮತ್ತು ಉಡುಪಿ - ಈ ಎರಡು ಜಿಲ್ಲೆಗಳಲ್ಲೇ ತಮ್ಮ ಬೇರೆ ಬೇರೆ ನರ್ಸರಿಗಳಲ್ಲಿ ಸುಮಾರು ೨೦ ಲಕ್ಷ ರೂಪಾಯಿ ಖರ್ಚಿನಲ್ಲಿ ಐದು ಲಕ್ಷ ಸಸಿಗಳನ್ನು (ಅವುಗಳಲ್ಲಿ ಹಲವಾರು ಔಷಧೀಯ ಸಸ್ಯಗಳೂ ಸೇರಿ) ನೆಟ್ಟು, ಸಾಕಿ ಸಲಹಿ, ಬೆಳೆಸಿದೆ. ಇಡಿಯ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಒಟ್ಟು ಕೆಲವು ಕೋಟಿ ಗಿಡಗಳನ್ನು ಅರಣ್ಯ ಇಲಾಖೆ ಬೆಳೆಸಿದೆ. ಆ ಗಿಡಗಳನ್ನು ಪೂಜ್ಯ ಸ್ವಾಮೀಜಿಯವರ ಸನಿಹಕ್ಕೆ ತಂದುಕೊಟ್ಟು, ಅವನ್ನು ಸರಿಯಾದ ರೀತಿಯಲ್ಲಿ ಸಸಿ ನೆಡುವ ಆಸಕ್ತರಿಗೆ ತಲುಪಿಸುವಂತೆ ಪ್ರಯತ್ನಿಸುತ್ತಾ ಸ್ವಾಮೀಜಿಯವರ ವೃಕ್ಷನೆಡುವ ಆದಮ್ಯ ಕಾಳಜಿಗೆ ಅನುಕೂಲ ಮಾಡಿಕೊಡುತ್ತಿರುವುದು ನಿಜಕ್ಕೂ ಅತ್ಯಂತ ಸ್ತುತ್ಯರ್ಹ ಕೆಲಸ. ಪೂಜ್ಯ ಸ್ವಾಮೀಜಿಯವರ ವೃಕ್ಷ ಸಂವರ್ಧನೆ ಟ್ರಸ್ಟ್‌ನ ಕೆಲಸವನ್ನು ನಿಜಕ್ಕೂ

---

ಜನವಾಹಿನಿ, ಆಗಸ್ಟ್ ೨೫, ೨೦೦೨

ಮೆಚ್ಚತಕ್ಕದ್ದು. ಸರಕಾರಿಯೇತರ ಸಂಸ್ಥೆಗಳ ಜವಾಬ್ದಾರಿಯೇ ಇದು. ಎಲ್ಲ ಮಠಗಳೂ, ದೇವಸ್ಥಾನಗಳೂ, ಸೇವಾಸಂಸ್ಥೆಗಳೂ ಇಂಥ ಪವಿತ್ರ ಕಾರ್ಯಗಳಿಗೆ ತೊಡಗಬೇಕು. ಇದು ನಿಜಕ್ಕೂ ಧಾರ್ಮಿಕ ಕೆಲಸ. ಹಾಗಾಗಿ ಅನುಕರಣೀಯ.

ಈ ಬಾರಿ ಅರಣ್ಯ ಇಲಾಖೆ ಗಿಡ ಬೆಳೆಸುವ ನಿಟ್ಟಿನಲ್ಲಿ ಒಳ್ಳೆಯ ಕೆಲಸ ಮಾಡಿದೆ. ನಾನೇ ಕೆಲವು ನರ್ಸರಿಗಳಲ್ಲಿ ಆದ ಕೆಲಸವನ್ನು ನೋಡಿದ್ದೇನೆ. ಆದರೆ ಸರಕಾರದ ಅನೇಕ ಜನಪರ ಯೋಜನೆಗಳು ಜ್ಯಾರಿಗೊಳಿಸುವ ಹಂತದಲ್ಲಿ ವಿಫಲವಾಗುತ್ತವೆ. ಸರಕಾರದ ಜನಹಿತ ಯೋಜನೆಗಳ ಫಲ ಸೋರಿಹೋಗದಂತೆ ಅವನ್ನು ನಿಜಫಲಾನುಭವಿಗಳಿಗೆ ತಲುಪುವಂತೆ ಅನೇಕ ಸರಕಾರೇತರ ಸ್ವಯಂ ಸೇವಾಸಂಸ್ಥೆಗಳು (ಎನ್.ಜಿ.ಓ.) ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುತ್ತವೆ. ಎನ್.ಜಿ.ಓ.ಗಳ ಈ ಪಾತ್ರ ಬಹಳ ಮುಖ್ಯವಾದದ್ದು. ಒಂದುಕಡೆ ಸರಕಾರದ ಸಂಕೀರ್ಣ ಯೋಜನಾ ವ್ಯವಸ್ಥೆಯಿದೆ. ಇನ್ನೊಂದುಕಡೆ ಸರಳ ಮನಸ್ಸಿನ ಜನಸಾಮಾನ್ಯರಿದ್ದಾರೆ. ಜನಸಾಮಾನ್ಯರ ಸರಳ ಮನಸ್ಸಿಗೆ ಸರಕಾರದ ಜನಪರ ಯೋಜನೆಗಳ ಸಂಕೀರ್ಣತೆ ಅರ್ಥವಾಗದು. ಹಾಗಾಗಿ ಹೆಚ್ಚಿನ ಸರಕಾರೀ ಯೋಜನೆಗಳು ಸರಿಯಾದ ಫಲಾನುಭವಿಗಳಿಗೆ ತಲುಪುವಲ್ಲಿ ವಿಫಲವಾಗುತ್ತವೆ. ಇಂಥಲ್ಲಿ ಸರಕಾರ ಮತ್ತು ಜನರ ನಡುವೆ  ಒಂದು ಮಧ್ಯವರ್ತಿ ಸಂಘಟನೆಯಿದ್ದರೆ ಒಳ್ಳೆಯದು. ಇದನ್ನು ಸರಕಾರವೂ ಬಯಸುತ್ತದೆ. ಈ ಮಧ್ಯವರ್ತಿ ಸೇವಾಸಂಸ್ಥೆ ಸರಕಾರದ ಸಂಕೀರ್ಣ ವ್ಯವಸ್ಥೆಯನ್ನೂ ಮತ್ತು ಜನಸಾಮಾನ್ಯರ ಸರಳ ಮನಸ್ಸನ್ನೂ ಏಕಕಾಲದಲ್ಲಿ ಅರ್ಥಮಾಡಿಕೊಂಡು ಜನರಿಗೆ ಸಹಾಯಕವಾಗಬಲ್ಲದು. ಸರಕಾರ ಮತ್ತು ಸರಕಾರೇತರ ಸಂಘಟನೆಗಳು ಈ ದೃಷ್ಟಿಯಲ್ಲಿ ಜಂಟಿ ಕಾರ್ಯಾಚರಣೆ ನಡೆಸಿದರೆ ದೇಶದ ಒಟ್ಟು ಅಭಿವೃದ್ಧಿ ಸಾಧ್ಯ. ಸರಕಾರದ ಕಾರ್ಯಗಳಲ್ಲಿ ಈ ರೀತಿ ಜನರ ಸಹಭಾಗಿತ್ವ, ನಿಜಕ್ಕೂ ಒಂದು ಆದರ್ಶ ಮಾದರಿಯಾದೀತು. ಕರ್ನಾಟಕದಾದ್ಯಂತ ಬೃಹತ್ ಗಿಡನೆಡುವ ಕಾರ್ಯಕ್ರಮದಲ್ಲಿ ಸರಕಾರದ ಜೊತೆ ಪೂಜ್ಯ ಸ್ವಾಮೀಜಿಯವರು ಕೈ ಜೋಡಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆನ್ನುವ ಅವರ ಮನೋಭಾವ ದೊಡ್ಡದು; ಮತ್ತು ಮೆಚ್ಚತಕ್ಕದ್ದು.

ಆದರೆ....., ಪರಿಸರ ಕಾರ್ಯಕರ್ತರ ಬಗ್ಗೆ ಅವರಾಡಿದ ಲಘುಮಾತುಗಳು ಪ್ರಾಯಃ ಅನುಭವದ ಕೊರತೆಯಿಂದ ಬಂದಿರಬೇಕು. ಸರ್ವಶ್ರೀ ಶಿವರಾಮ ಕಾರಂತ, ಸುಂದರಲಾಲ ಬಹುಗುಣ, ಮೇಧಾ ಪಾಟ್ಕರ್, ವಂದನಾ ಶಿವ, ಕ್ಲಾಡ್ ಆಲ್ವಾರಿಸ್ ಮತ್ತು ದಕ್ಷಿಣ ಕನ್ನಡದ ಪರಿಸರಾಸಕ್ತ ಒಕ್ಕೂಟ, ಮತ್ತು ಇಂಥ ಅನೇಕ ಪರಿಸರ ಸಂಘಟನೆಗಳು ಮಾಡುತ್ತಿರುವ ಕೆಲಸಗಳು ಅತ್ಯಂತ ಮೂಲಭೂತವಾದದ್ದು. ಸಸಿ ನೆಡುವುದು ಒಟ್ಟು ಪರಿಸರ ರಕ್ಷಣೆಯ ಒಂದು ಚಿಕ್ಕ ಅಂಗ ಮಾತ್ರ. ಅತ್ತ ಒಂದು ಮರ ನೆಡುವಾಗ, ಇತ್ತ ಹತ್ತು ಮರಗಳನ್ನು ಕೇವಲ ಹಣ, ವ್ಯಾಪಾರ, ಕೈಗಾರಿಕಾ ಬೆಳವಣಿಗೆಯ ಕ್ಷುಲ್ಲಕ ನೆಪವೊಡ್ಡಿ ಬಲಿಷ್ಠ ಮಾರುಕಟ್ಟೆ ಶಕ್ತಿಗಳು  ನಾಶಮಾಡುತ್ತಿರುತ್ತವೆ. ಹಾಗಾಗಿ ಗಿಡ ನೆಡುವುದರ ಜೊತೆ, ವಿನಾಶವನ್ನು ತಡೆಗಟ್ಟುವುದೂ ಒಟ್ಟೊಟ್ಟಿಗೇ ನಡೆಯಬೇಕಾಗುತ್ತದೆ. ಬೆಟ್ಟ , ಗುಡ್ಡ ಕಾಡು, ಹಳ್ಳ, ಕೊಳ್ಳ ಕಣಿವೆ, ನದಿ, ಬಯಲು, ಸಮುದ್ರ, ಸಮಸ್ತ ಜೀವಜಾಲದ ಸಂರಕ್ಷಣೆ, ಮತ್ತು ನೆಲ, ಜಲ, ವಾಯು, ಶಬ್ದ ಮಾಲಿನ್ಯಗಳನ್ನು ತಡೆಗಟ್ಟುವುದೂ ಅತ್ಯಂತ

ಮಹತ್ತ್ವದ ಪರಿಸರ ರಕ್ಷಣೆಯ ಕೆಲಸ. ಹಲವು ಬಾರಿ ಇಂಥ ಸಂದರ್ಭಗಳಲ್ಲಿ ಸಂಘರ್ಷ ಅನಿವಾರ್ಯ ವಾಗಬಹುದು. ದಕ್ಷಿಣಕನ್ನಡದಲ್ಲಿ ಕೊಜೆಂಟ್ರಿಕ್ಸ್ ಥರ್ಮಲ್ ವಿದ್ಯುತ್ ಯೋಜನೆಯ ವಿರುದ್ಧ ಚಳವಳಿಯಾಗಲೀ, "ಪಶ್ಚಿಮ ಘಟ್ಟ ಉಳಿಸಿ" ಹೋರಾಟವಾಗಲೀ ಈ ದೃಷ್ಟಿಯಿಂದ ಅತ್ಯಂತ ಅಮೂಲ್ಯವಾದದ್ದು. ಈ ಪರಿಸರ ಹೋರಾಟಗಳು ಮೀನುಗಾರರ ಬದುಕಿನ ಹಕ್ಕಿನ ಹೋರಾಟವಾಗಿ, ಸಮಸ್ತ ಜನತೆಯ ಹೋರಾಟವಾಗಿ ರೂಪುಗೊಂಡಿತ್ತು. ಪರಿಸರ ಕಾರ್ಯಕರ್ತರು ಕರಾವಳಿ ಜಿಲ್ಲೆಗಳಲ್ಲಿ ಜನಜಾಗೃತಿ ಮೂಡಿಸುವಲ್ಲಿ ಸಾಕಷ್ಟು ಯಶಸ್ಸುಗಳಿಸಿದ್ದಾರೆ. ಹಾಗಾಗಿ ಇಂದು ಪರಿಸರ ಹೋರಾಟ ಜನರ ಹೋರಾಟವಾಗಿದೆ.

ಮಾಲಿನ್ಯಕಾರಕ ಕೈಗಾರಿಕೆಗಳ ಬಲಿಷ್ಠ ಲಾಬಿಗಳು ಸರಕಾರದ ಮೇಲೂ ಪ್ರಭಾವ ಬೀರಿ ತಮ್ಮ ಲಾಭಕ್ಕಾಗಿ ಪರಿಸರದ ಮೇಲೆ ದೌರ್ಜನ್ಯವೆಸಗುವುದನ್ನು ನಾವು ದಿನನಿತ್ಯ ನೋಡುತ್ತೇವೆ. ಈ ಶಕ್ತಿಗಳ ಜೊತೆ ಹೋರಾಟ ಮಾಡುವ ಅತ್ಯಂತ ಅಪಾಯಕಾರೀ ಹಾಗೂ ಕ್ಲಿಷ್ಟ ಕೆಲಸ ಪರಿಸರ ಕಾರ್ಯಕರ್ತರಿಗೆ ಸವಾಲಾಗಿ ನಿಂತಿದೆ. ಅಭಿವೃದ್ಧಿಯ ಹೆಸರಲ್ಲಿ ದುರ್ಬಲರು ಮಾತ್ರ ಎಲ್ಲ ಕಡೆಯಲ್ಲೂ ಬಲಾತ್ಕಾರದ ಸ್ಥಳಾಂತರದಿಂದ ನಾಶವಾಗುವ ಸ್ಥಿತಿಯಲ್ಲಿದ್ದಾರೆ. ಇಲ್ಲಿ ಪೂಜ್ಯ ಸ್ವಾಮೀಜಿಯವರ ಸಹಾಯ, ಬೆಂಬಲ ದುರ್ಬಲ ಜನತೆಗೆ ಬೇಕು. ಪೂಜ್ಯ ಸ್ವಾಮೀಜಿಯವರು ತುಂಬಾ ಶಕ್ತಿಶಾಲಿಗಳು, ಬೃಹತ್ ಸಮಾಜದ ಮೇಲೆ ಪ್ರಭಾವ ಬೀರಲು ಸಮರ್ಥರು; ಮತ್ತು , ಅದರ ಜೊತೆಗೇ, ಆಳುವ ವರ್ಗಕ್ಕೂ ತಿಳಿಹೇಳಲು ಶಕ್ತಿಯಿದ್ದವರು. ಮಾರುಕಟ್ಟೆ ಶಕ್ತಿಗಳ ಜೊತೆ ನಾವು ಇರುವವರೆಗೆ ನಮ್ಮಿಂದ ಏನೂ ಮೂಲಭೂತವಾದುದ್ದನ್ನು ಮಾಡಲು ಸಾಧ್ಯವಾಗುವುದಿಲ್ಲ. ಸರ್ವವನ್ನೂ ತ್ಯಾಗ ಮಾಡಿದ ಪೂಜ್ಯ ಸ್ವಾಮೀಜಿಗಳಿಗೆ ಯಾರ ಹಂಗೇನು? ಅವರಿಗೆ ವ್ಯಷ್ಟಿ ಹಿತಾಸಕ್ತಿಯಿಲ್ಲ; ಸಮಷ್ಟಿ ಹಿತದ ಕಡೆ ಮಾತ್ರ ಲಕ್ಷ್ಯ. ಹಾಗಾಗಿ ಪೂಜ್ಯರು ನಮ್ಮೆಲ್ಲರಿಗಿಂತಲೂ ಹೆಚ್ಚು ನಿರ್ಭೀತಿಯಿಂದ ಈ ದೆಸೆಯಲ್ಲಿ ಮುಂದುವರೆಯಲು ಸಾಧ್ಯ. ಅವರು ಈ ಒಟ್ಟು ಚಳುವಳಿಯ ನೇತಾರರಾಗಬಹುದು. ಆಗ ಪರಿಸರ ಚಳುವಳಿ ಖಂಡಿತವಾಗಿ ಸತ್ವಶಾಲಿಯಾಗುತ್ತದೆ.

ಒಂದಕ್ಕೊಂದು ಪರಸ್ಪರ ಪೂರಕವಾಗಿ ಹೆಣೆದುಕೊಂಡಿರುವ ನಿಸರ್ಗದ ಈ ಅಂತರ್ಗತ ಅಖಂಡತ್ವವನ್ನು ಅರಿತು ಈ ಭೂಮಿಯನ್ನು ಜೊತೆಗೆ ಸಮಸ್ತ ಜೀವಸಂಕುಲವನ್ನು, ರಕ್ಷಿಸುವ, ಪೋಷಿಸುವ ಆಧ್ಯಾತ್ಮ ಆಯಾಮವನ್ನು ಈ ನಿಸರ್ಗ ಸಂರಕ್ಷಣೆಗೆ ಪೂಜ್ಯರು ಕೊಡಬೇಕು ಎಂಬುದು ನಮ್ಮೆಲ್ಲರ ಆಶಯ. ಪರಿಸರ ಸಂರಕ್ಷಣೆ ನಮ್ಮ ನಡುವಿರುವ ಕಟ್ಟ ಕಡೆಯ ಅತಿದುರ್ಬಲರ ಬದುಕಿನ ಹಕ್ಕಿನ ರಕ್ಷಣೆಯ ಹೋರಾಟವೂ ಆಗಿ ರೂಪುಗೊಳ್ಳಬೇಕು. ಇದು ಪೂಜ್ಯರಿಂದ ಆದೀತು. ಇದೇ ನೈಜ ಧಾರ್ಮಿಕತೆ. ಎಲ್ಲಾ ಸ್ವಾಮಿಗಳೂ ಈ ಕಾರ್ಯಕ್ರಮದಲ್ಲಿ ತೊಡಗುವಂತಾಗಬೇಕು. ಪೂಜ್ಯ ಆದಿಚುಂಚನಗಿರಿಯವರು ಈಗಾಗಲೇ ಮುಂಚೂಣಿಯಲ್ಲಿರುವುದು ನಿಜಕ್ಕೂ ಅಭಿಮಾನದ ಸಂಗತಿ.

ಅರಿಯಲು ಸಮರ್ಥರಾಗಿದ್ದರು. ಆದರೆ ಅವರದು ಅಮೃತ ಮಂಥನದ ವಂಚನೆಯ ದಾರಿಯಾಗಿರಲಿಲ್ಲ. ಸಿಕ್ಕದನ್ನು ಹೆಕ್ಕಿ ತಿನ್ನದೆ, ಹಂಚಿಕೊಂಡು ಬೆಳೆಯುವ ನಿಲುವು. ಅಂತೆಯೇ ಒಂದು ದಿನ ರೂಮಿ ಕಂಡ. ಎಲ್ಲರಿಗೂ ರೂಮಿಯ ಸಿಹಿ ಹಂಚಿದರು. ಇನ್ನೊಂದು ದಿನ ನಾಗಾರ್ಜುನ, ಬುದ್ಧ; ಮತ್ತೊಂದು ದಿನ ಅಲ್ಲಮ, ಅಭಿನವ ಗುಪ್ತ ಹೀಗೆ ಈ ನೆಲವನ್ನು ಬಗೆಯುವ ಡಿ. ಆರ್.ರ ಕಾಯಕ ನಿರಂತರವಾಗಿತ್ತು ಕೊನೆ ಕೊನೆಗೆ ಅವರ ಬದುಕೇ ದ್ರವ್ಯವಾಗಿತ್ತು. ದ್ರವ ರಸವೂ ಆಗಿತ್ತು. 'ಕವಿ ರಸೋ ವೈಸಃ.' ❒

# "ನಾನು ಸಾಹಿತಿಯಲ್ಲ, ಸಮಾಜಶಾಸ್ತ್ರ ವಿದ್ಯಾರ್ಥಿ" - ಶಿವರಾಮ ಕಾರಂತ

ಕರ್ನಾಟಕದ ಒಂದು ಪ್ರಸಿದ್ಧವಾದ ವಾರಪತ್ರಿಕೆಗಾಗಿ ನಾನು ಒಮ್ಮೆ ಕಾರಂತರನ್ನು ಅವರ ೯೦ರ ಇಳಿ ವಯಸ್ಸಿನಲ್ಲಿ ಸಾಕಷ್ಟು ದೀರ್ಘವಾದ ಇಂಟರ್‌ವ್ಯೂ ಮಾಡಿದ್ದೆ. ನನ್ನ ಒಂದು ಪ್ರಶ್ನೆ ಹೀಗಿತ್ತು : " ಹಲವು ಕ್ಷೇತ್ರಗಳಲ್ಲಿ ದುಡಿದ ನೀವು, ನಿಮ್ಮನ್ನು ಸಾಹಿತಿ ಅಂತ ಗುರುತಿಸಿಕೊಳ್ಳುತ್ತೀರಾ ? " ಅದಕ್ಕೆ ಅವರು, "ಇರಬಹುದು, ಕೆಲವು ಕಾದಂಬರಿ, ನಾಟಕ ಬರೆದಿದ್ದೇನೆ. ಅಲ್ಲಿಗೆ ಬಿಟ್ಟುಬಿಡಿ. ನನ್ನ ಬರವಣಿಗೆ ಅನೇಕ ಬಗೆಯಲ್ಲಿ ಬದಲಾಗಿದೆ. ನನ್ನ ಜ್ಞಾನ ಕುತೂಹಲ ವಿವಿಧ ಕ್ಷೇತ್ರಗಳಿಗೆ ಹರಡಿಕೊಂಡಿದೆ. ಅಂದಾಗ ನೀವು ಏನೂಂತ ನನ್ನನ್ನು ಕರೀತೀರಿ, ಹೇಳಿ. ನಿಮಗೆ ಬೇರೆ ಯಾವ ವಿಷಯದಲ್ಲೂ ಅಭಿರುಚಿ ಇಲ್ಲದಿದ್ದರೆ, ನನ್ನ ಕತೆ ಪುಸ್ತಕ ಮಾತ್ರ ಓದಿದವರಾದರೆ ನಿಮಗೆ ಕಾರಂತ ಸಾಹಿತಿ. ಆದರೆ ನಾನು ಚರಿತ್ರೆ ಬರೆದಿದ್ದೇನೆ. ವಿಜ್ಞಾನ ಬರೆದಿದ್ದೇನೆ. ಹಾಗಾಗಿ ನನ್ನನ್ನು ಕೇವಲ ಸಾಹಿತಿ ಅಂತ ಕರೆದರೆ "ಪ್ರೊಟೆಸ್ಟ್" ಮಾಡ್ತೇನೆ. ಸಾಹಿತ್ಯಕ್ಕೆ ನನ್ನನ್ನು ಸೀಮಿತ ಮಾಡಬೇಡಿ. ನಾನು ಸಾಹಿತಿ ಅಲ್ಲ. ಒಬ್ಬ ಸಮಾಜಶಾಸ್ತ್ರ ವಿದ್ಯಾರ್ಥಿ" ಎಂದು ಉತ್ತರಿಸಿದ್ದರು.

ಪರಿಸರ ಸಂರಕ್ಷಣೆಯ ಕ್ಷೇತ್ರದಲ್ಲಿ ಅವರ ಜತೆ ನಾನು ಅನೇಕ ವಿಷಯ ಮಾತಾಡುತ್ತಿದ್ದೆ. ಸಭೆಗಳಲ್ಲಿ, ಚಳವಳಿಗಳಲ್ಲಿ ಭಾಗವಹಿಸುತ್ತಿದ್ದೆ. ಈ ವಿಷಯದಲ್ಲಿ ಕಾರಂತರು ತನ್ನ ಉಸಿರಿನ ಕೊನೆಯ ತನಕವೂ

---

ವಿಜಯ ಕರ್ನಾಟಕ (ದೈನಿಕ), ಬೆಂಗಳೂರು, ಆಕ್ಟೋಬರ್ ೬, ೨೦೦೨

ತೀವ್ರವಾಗಿ ತೊಡಗಿಸಿಕೊಂಡಿದ್ದವರು. ದೇಶದ ಯಾವುದೋ ಮೂಲೆಯಲ್ಲಿ ನಡೆಯುವ ಚಳವಳಿಯಲ್ಲೂ, ಕರೆದಾಗ ಭಾಗವಹಿಸುತ್ತಿದ್ದರು. ೯೦ರ ಇಳಿವಯಸ್ಸಿನಲ್ಲಿ ಮೇಧಾಪಾಟ್ಕರ್ ನರ್ಮದಾ ಬಚಾವೋ ಆಂದೋಲನಕ್ಕೆ ಕರೆದಾಗಲೆಲ್ಲಾ ಹೋಗಿ ಪಾಲುಗೊಳ್ಳುತ್ತಿದ್ದರು. "ಈ ವಯಸ್ಸಿನಲ್ಲಿ ನೀವು ಒಂಟಿಯಾಗಿ ಹೀಗೆ ಪ್ರಯಾಣ ಮಾಡುವಾಗ ನಡುವೆ ಎಲ್ಲಾದರೂ ಸತ್ತರೆ ?" ಎಂದು ನಾನು ಒಮ್ಮೆ ಕೇಳಿದ್ದೆ. ಅದಕ್ಕವರು, "ಸತ್ತರೆ ಎಲ್ಲಿ ಸತ್ತಿದ್ದೇನೋ ಅಲ್ಲೆ ನನ್ನನ್ನು ಕೂಡಲೇ ಬೂದಿ ಮಾಡಿ ಬಿಡಬೇಕು ಎಂದು ಎಲ್ಲರಿಗೂ ಹೇಳಿದ್ದೇನೆ. ಸತ್ತ ಮೇಲೆ ಇದು ಬರೇ ಕೊರಡು. ಕೊರಡಿಗೆ ಪೂಜೆ, ಅಲಂಕಾರ, ಮೆರವಣಿಗೆ, ವೈಭವ ಎಲ್ಲ ಇರ ಕೂಡದು " ಎಂದು ತನ್ನ ಜೀವನದರ್ಶನದಲ್ಲಿ ಪ್ರಕಟಿಸಿದ್ದರು.

ಕೈಗಾ ಅಣುಸ್ಥಾವರದ ವಿರೋಧೀ ಚಳವಳಿಯಲ್ಲಿ ಸಕ್ರಿಯವಾಗಿ ಪಾಲುಗೊಂಡ ಕಾರಂತರು ಇದೇ 'ಇಶ್ಯೂ'ವಿನ ಮೇಲೆ ಚುನಾವಣೆಗೂ ನಿಂತಿದ್ದರಷ್ಟೆ. ಒಮ್ಮೆ ಈ ಸ್ಥಾವರದ ಸಾಧಕ - ಬಾಧಕಗಳ ಬಗ್ಗೆ ಚರ್ಚಿಸಲು ಮಂಗಳೂರು ವಿಶ್ವವಿದ್ಯಾಲಯದಲ್ಲಿ ವಿಜ್ಞಾನಿಗಳ, ಪರಿಸರ ತಜ್ಞರ, ಚಿಂತಕರ, ನಾಗರಿಕರ ಸಮಾವೇಶ ನಡೆದಿತ್ತು. ಅಲ್ಲೊಬ್ಬ ಪ್ರಸಿದ್ಧ ವಿಜ್ಞಾನಿಗಳು, "ಭಾರತದ ಸಮಸ್ಯೆಗೆ ಅಣುಶಕ್ತಿಯೊಂದೇ ಶಾಶ್ವತ ಪರಿಹಾರ. ಇಲ್ಲದಿದ್ದರೆ ಭಾರತ ಮೂರಲ್ಲ, ನಾಲ್ಕನೇ ದರ್ಜೆಯ ರಾಷ್ಟ್ರವಾದೀತು" ಎಂದರು. ಅಲ್ಲೇ ಇದ್ದ ಕಾರಂತರು ಅಧ್ಯಕ್ಷತೆ ವಹಿಸಿದ್ದ ಉಪಕುಲಪತಿಗಳನ್ನು ಉದ್ದೇಶಿಸಿ, "ನೋಡಿ ಆ ಮನುಷ್ಯನನ್ನು ಬಾಯಿಮುಚ್ಚಲಿಕ್ಕೆ ಹೇಳಿ. ಆತನಿಗೆ ಏನೂ ಗೊತ್ತಿಲ್ಲ" ಎಂದು ಆಕ್ರೋಶದಿಂದ ನುಡಿದಿದ್ದರು.

ಮುಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಜೆಂಟ್ರಿಕ್ ಉಷ್ಣವಿದ್ಯುತ್ ಸ್ಥಾವರ, ಮತ್ತು ಮೂವತ್ತಕ್ಕೂ ಹೆಚ್ಚು ಇತರ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಿಲು ಕರ್ನಾಟಕ ಸರಕಾರ ಅನುಮತಿ ನೀಡುವ ಸನ್ನಾಹದಲ್ಲಿದ್ದಾಗ, ಪಶ್ಚಿಮ ಘಟ್ಟದಂತಹ ಜೀವ ವೈವಿಧ್ಯವಿರುವ ಸೂಕ್ಷ್ಮ ಪರಿಸರದಲ್ಲಿ ಈ ಮಾಲಿನ್ಯಕಾರೀ ಕೈಗಾರಿಕೆಗಳನ್ನಂತೂ ಸ್ಥಾಪಿಸುವುದು ಸರಿಯಲ್ಲವೆಂದು ದಕ್ಷಿಣಕನ್ನಡದ ಜನರು, ಮುಖ್ಯವಾಗಿ ಇಲ್ಲಿನ ಮೀನುಗಾರರು, ಪ್ರಬಲ ವಿರೋಧ ವ್ಯಕ್ತ ಪಡಿಸಿದರು. ಆ ಸಂದರ್ಭದಲ್ಲೂ ಕಾರಂತರು ಆ ಚಳವಳಿಯಲ್ಲಿ ಸಕ್ರಿಯರಾಗಿದ್ದರು. ಆದರೆ ಕರ್ನಾಟಕ ಸರಕಾರ ಮಾತ್ರ ಆಗ ನಮ್ಮ ಅಳಲಿಗೆ ಕಿವಿಕೊಡಲಿಲ್ಲ. ಅಂದಿನ ಮುಖ್ಯಮಂತ್ರಿ ಶ್ರೀ ಜೆ. ಎಚ್. ಪಟೇಲರು, "ನಮ್ಮ ಕೈಗಾರಿಕಾ ಅಭಿವೃದ್ಧಿ ರಥ ಹೊರಟಿದೆ. ಸಣ್ಣ ಪುಟ್ಟ ಎಡರು -ತೊಡರುಗಳ ಮೇಲೆಯೇ ಅಭಿವೃದ್ಧಿ ರಥ ಸಾಗುತ್ತದೆ" ಎಂದು ತನ್ನ ಪ್ರಭು ಶಕ್ತಿಯ ಠೇಂಕಾರದ ಮಾತನ್ನಾಡಿದರು. ಕಾರಂತರು ಇದರಿಂದ ತುಂಬಾ ಸಿಟ್ಟಾಗಿದ್ದರು. ಮುಂದೆ ದಕ್ಷಿಣ ಕನ್ನಡ ಪರಿಸರಾಸಕ್ತ ಒಕ್ಕೂಟ ಸರಕಾರದ ಈ ನಿಲುವನ್ನು ವಿರೋಧಿಸಿ ಒಂದು ಬೃಹತ್ ಹಕ್ಕೊತ್ತಾಯ ಜಾಥಾವನ್ನು ಮಂಗಳೂರಿನಲ್ಲಿ ಏರ್ಪಡಿಸಿತ್ತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಕಾರಂತ, ಅನಂತಮೂರ್ತಿ - ಇಬ್ಬರೂ ಈ ಜಾಥಾದಲ್ಲಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ೫೦,೦೦೦ಕ್ಕೂ ಮಿಕ್ಕಿ ಚಳವಳಿಗಾರರ ಎದುರು ಕಾರಂತರು, "ನಮ್ಮ ಮುಖ್ಯಮಂತ್ರಿಗಳು ಹೇಳುತ್ತಾರೆ, 'ಮಾಡಿಯೇ ತೀರುತ್ತೇನೆ' ಎಂದು. ಅವರು 'ತೀರಿ ಮಾಡುವುದು ಒಳ್ಳೆಯದು' ಈ ಉದ್ಧಟತನ ಸಲ್ಲದು" ಎಂದು ಗುಡುಗಿದ್ದರು. ಅನೇಕ ಪತ್ರಿಕೆಗಳು ಈ ಮಾತನ್ನು ಶಿರೋನಾಮೆಯಲ್ಲೇ ದಾಖಲಿಸಿದ್ದವು.

ಪರಿಸರದ ಪ್ರಶ್ನೆ ಬಂದಾಗ, ಒಂದು ಸಣ್ಣ ಪತ್ರಿಕೆಯ 'ಸಂಪಾದಕರಿಗೆ ಪತ್ರ' ಕಾಲಮಿಗೂ ಬರೆದು ಕಾರ್ಯಕರ್ತರಿಗೆ ಬೆಂಬಲ ಸೂಚಿಸುವ ಅಪೂರ್ವ ವಿನಯ ಕಾರಂತರಲ್ಲಿತ್ತು. ಅವರಿಗೆ 'ಇಶ್ಯೂ' ಮುಖ್ಯವಾಗಿತ್ತು, ಸತ್ಯ ಮುಖ್ಯವಾಗಿತ್ತು.

ಪರಿಸರ ವಿಜ್ಞಾನಕ್ಕೆ ಸಂಬಂಧ ಪಟ್ಟ, ಅನೇಕ ಇಂಗ್ಲೀಷು ಪುಸ್ತಕಗಳನ್ನು (Citizens Report ಮುಂತಾದವು) ಕನ್ನಡಿಗರ ಮೇಲಿನ ಪ್ರೀತಿಯಿಂದ ಸ್ವಯಂ ಇಚ್ಛೆಯಿಂದ ಕನ್ನಡಕ್ಕೆ ಭಾಷಾಂತರಿಸಿದ್ದರು. ಅವರು ಸಾಯುವುದಕ್ಕೆ ಮೂರು ತಿಂಗಳು ಮೊದಲು ನಾನು ಅವರ ಮನೆಗೆ ಹೋಗಿದ್ದಾಗ, ಹತ್ತಾರು ಪ್ರಸಿದ್ಧ ಪರಿಸರ ವಿಜ್ಞಾನೀಯ ಗ್ರಂಥಗಳನ್ನು, ವಿಶ್ವಕೋಶಗಳನ್ನು ವಿಸ್ತಾರವಾಗಿ ಹರಡಿಟ್ಟುಕೊಂಡು ಏನೋ ಬರೆಯುತ್ತಿದ್ದರು. ಅದಕ್ಕಾಗಿಯೇ ಸಾವಿರಾರು ರೂಪಾಯಿಯ ಪುಸ್ತಕಗಳನ್ನು ವಿದೇಶದಿಂದ ತರಿಸಿಕೊಂಡಿದ್ದರು. "ಏನು ಬರೆಯುತ್ತಿದ್ದೀರಿ" ಎಂದು ನಾನು ಅವರನ್ನು ಕೇಳಿದೆ. ಅದಕ್ಕವರು, ದೇಹ ನಿಶ್ಶಕ್ತವಾದರೂ, ಈ ತಲೆ ಸರಿಯಾಗಿ ಫಂಕ್ಷನ್ ಮಾಡ್ತಿದೆ. ಹಾಗಾಗಿ ಏನಾದರೂ ಮಾಡಬೇಕು. ಅಂದಾಕ್ಷಣ, 'ಏನು ಮಾಡಬೇಕು' ಎಂಬ ಪ್ರಶ್ನೆ ಬಂದಾಗ, ನಮ್ಮ ಮಕ್ಕಳಿಗೆ ಹಕ್ಕಿಗಳ ಬಗ್ಗೆ ಕನ್ನಡದಲ್ಲಿ ಒಳ್ಳೆಯ ಪುಸ್ತಕ ಇಲ್ಲ. ಬರೀ ಬೇಕು. ಯಾರು ಬರೀ ಬೇಕು ? ಅವರಿವರನ್ನು ಹೇಳಿ ಪ್ರಯೋಜನವಿಲ್ಲ. ಅದಕ್ಕೆ ನಾನೇ ಬರೀತಿದ್ದೇನೆ" ಎಂದಿದ್ದರು. ಸಾಯುವ ಮುಂಚೆ ನೂರಾರು ಪುಟಗಳಷ್ಟು ಬರೆದಿದ್ದರು ಕೂಡ ಎಂದು ಕೇಳಿದ್ದೇನೆ.

ಕೊನೆ ತನಕವೂ ಧೀರನಾಗಿ ಬದುಕಿದ ಕಾರಂತರು, ಸಾಯುವಾಗಲೂ ಕೂಡ ವೀರನಂತೆ ಸತ್ತಿದ್ದರು. ಮಣಿಪಾಲ ಆಸ್ಪತ್ರೆಯ 'ಇಂಟೆನ್ಸಿವ್ ಕ್ಯಾರ್' ವಿಭಾಗದಲ್ಲಿ ಪ್ರಜ್ಞಾಶೂನ್ಯರಾಗಿದ್ದ ಕಾರಂತರನ್ನು ಅಂಗಿ ತೆಗೆದು ಅಂಗಾತನೆ ಮಲಗಿಸಲಾಗಿತ್ತು. ಕೂದಲು ಹರಡಿಕೊಂಡಿತ್ತು. ಕೈಕಾಲುಗಳು ಅಗಲವಾಗಿ ಚೆಲ್ಲಿಕೊಂಡಿತ್ತು. ಒಬ್ಬ ವೀರ ಮಲಗಿದ ಭಂಗಿಯಲ್ಲಿ ನನಗವರು ಕಂಡರು. ಆ ಕ್ಷಣ ಅವರ ಮುಖ ಚಹರೆ ೨೦ನೇ ಶತಮಾನದ ಪ್ರಸಿದ್ಧ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್‌ನಂತೆ ಶೋಭಿಸುತ್ತಿತ್ತು. ಮುಂದೆರಡು ದಿನಗಳಲ್ಲಿ ಕಾರಂತರು ತೀರಿಕೊಂಡರು. ದಕ್ಷಿಣ ಕನ್ನಡ - ಉಡುಪಿ ಜಿಲ್ಲೆಗಳಿಗೆ, ಕುಟುಂಬದ ಯಜಮಾನನಂತಿದ್ದ ಕಾರಂತರನ್ನು ಕಳಕೊಂಡಾಗ ತಬ್ಬಲಿತನದ ಅನುಭವ. ಪರಿಸರ ಪ್ರೇಮಿಗಳಿಗಂತೂ ಅವರಿಲ್ಲದ ಕೊರತೆ ಇನ್ನೂ ಕಾಡುತ್ತಿದೆ.

❐

# ಅಂದು ಉಪ್ಪು, ಇಂದು ಬೀಜ: ನವ ಸ್ವಾತಂತ್ರ್ಯ ಚಳವಳಿಗೆ ನಾಂದಿ

"ಸಮಸ್ತ ಜೀವ ಸಂಕುಲವನ್ನು, ಆಹಾರ ಬೆಳೆಯನ್ನು ಮತ್ತು ಮಾನವ ವಂಶದ ಅಳಿವು ಉಳಿವನ್ನೇ ನಿಯಂತ್ರಿಸುವ - ಈ ಭೂಗ್ರಹದ ಇತಿಹಾಸ ಇದುವರೆಗೆ ಕಂಡರಿಯದ - ವಂಚನೆಯ, ಅಪಾಯಕಾರೀ ಪರಿಣಾಮ ಬೀರುವ, ಅತ್ಯಂತ ಸಮರ್ಪಕ ಯೋಜನಾ ತಂತ್ರವೊಂದನ್ನು ಮನುಷ್ಯ ಸೃಷ್ಟಿಸುತ್ತಿದ್ದಾನೆ. ಈ ಭೂಮಿಯ ಸಕಲ ಜೀವಿಗಳನ್ನು ಪೊರೆಯುವ 'ಸಸ್ಯ-ಬೀಜ-ಸಸ್ಯ-ಬೀಜ-ಸಸ್ಯ-ಬೀಜ-ಸಸ್ಯ-ಬೀಜ'ದ ನಿಸರ್ಗ ಸಹಜ ಸೃಷ್ಟಿ ಚಕ್ರವನ್ನು ಇನ್ನೆಂದಿಗೂ ಮರಳಿ ಪಡೆಯದ ರೀತಿಯಲ್ಲಿ ಮನುಷ್ಯನ ಕೈಗಳು, ಒಂದೇ ಕ್ರೂರ ಬೀಸುವಿನಿಂದ ತುಂಡರಿಸಲು ಹವಣಿಸುತ್ತಿವೆ. ಇದರಿಂದಾಗಿ ರೈತ ಪರರಿಂದ ಹೆಚ್ಚೆಚ್ಚು ಬೀಜ ಕೊಂಡುಕೊಳ್ಳದಿದ್ದರೆ, ಆತನಿಗೆ ಬೀಜವೂ ಇಲ್ಲ, ಅನ್ನವೂ ಇಲ್ಲ. ಈ ಬೀಜ ನಿರ್ವಂಶೀಕರಣ ತಂತ್ರಜ್ಞಾನವು (Termination Technology) ನಿಜಕ್ಕೂ ಒಂದು ಅದ್ಭುತ ವಿಜ್ಞಾನ ಮತ್ತು ಅತ್ಯಂತ ಹೆಚ್ಚು ಲಾಭ ತರುವ ವ್ಯಾಪಾರ ಕೂಡ. ಆದರೆ ಅತ್ಯಂತ ಕೆಟ್ಟ ಉದ್ದೇಶ ಹೊಂದಿರುವ ಈ ವಿನಾಶಕಾರೀ ತಂತ್ರಜ್ಞಾನದ ಹುಟ್ಟು, ಮನುಷ್ಯನ ಪ್ರತಿಭೆ ಮತ್ತು ಬುದ್ಧಿಭ್ರಮಣೆ, ಇವುಗಳ ನಡುವಿನ ಸೂಕ್ಷ್ಮವಾದ ಗಡಿಯನ್ನೇ ಮೀರಿ ನಿಂತಿವೆ. ಹಾಗಾಗಿ ಇದನ್ನು ಬಹಿಷ್ಕರಿಸಬೇಕಾಗಿದೆ, ಸಂಪೂರ್ಣ ನಿಷೇಧಿಸ ಬೇಕಾಗಿದೆ. "

**-ಗೆರಿ ಗುಡೆಟ, ದಿ ಆರ್ಕ್ ಇನ್‌ಸ್ಟಿಟ್ಯೂಟ್**

---

**ಸಮುದಾಯದ ಒಟ್ಟು ಜಾಗೃತಿಯ ಆಶಯದಿಂದ ಪ್ರಜಾವಾಣಿ, ಉದಯವಾಣಿ, ಜನವಾಹಿನಿ, ಕನ್ನಡ ಜನಾಂತರಂಗ ಪತ್ರಿಕೆಗಳು ಈ ಲೇಖನವನ್ನು ೧೯೯೯ ಮಾರ್ಚ್ ತಿಂಗಳಲ್ಲಿ ಒಟ್ಟೊಟ್ಟಿಗೇ ಪ್ರಕಟಿಸಿ ತಮ್ಮ ಸಾಮಾಜಿಕ ಕಾಳಜಿಯನ್ನು ಪ್ರಕಟಪಡಿಸಿವೆ.**

## ಅಂದು ಉಪ್ಪು, ಇಂದು ಬೀಜ...!

ಗಾಂಧಿ ಅಂದು ದಂಡಿಯ ಸಮುದ್ರ ತಡಿಯಲ್ಲಿ ಕಾನೂನನ್ನು ಧಿಕ್ಕರಿಸಿ ಒಂದು ಹಿಡಿ ಉಪ್ಪನ್ನು ಕೈಯ್ಯಲ್ಲಿ ಎತ್ತಿದರಲ್ಲ, ಅಂದೇ ಬ್ರಿಟಿಷರ ವಸಾಹತುಶಾಹೀ ಪ್ರಭುತ್ವವು ಬುಡದಲ್ಲೇ ಕುಸಿಯಲು ಆರಂಭವಾಗಿತ್ತು. ಇಂದು ಮತ್ತೆ ನಮ್ಮನ್ನು ನವ ವಸಾಹತು ಶಾಹೀದಾಸ್ಯಕ್ಕೆ ಕೆಡಹುವ ಹುನ್ನಾರಗಳ ವಿರುದ್ಧ ನವ ಸ್ವಾತಂತ್ರ್ಯ ಚಳವಳಿ ಆರಂಭಿಸಬೇಕಾಗಿದೆ. ಉದಾರೀಕರಣದ ಸೋಗಿನಲ್ಲಿ ನಮ್ಮೆಲ್ಲ ಸರಕಾರಗಳು (ಕಾಂಗ್ರೆಸು, ಜನತಾದಳ, ಬಿಜೆಪಿ) ಬಹುರಾಷ್ಟ್ರೀಯ ಕಂಪೆನಿಗಳನ್ನು ಸೆಲ್ಲೆಹಾಸಿ ಸ್ವಾಗತಿಸುತ್ತಿವೆಯಲ್ಲ, ಇದು ಅತ್ಯಂತ ದಿಗಿಲಿನ ಸಂಗತಿ. ಅಂದು ಒಂದು ಈಸ್ಟ್ ಇಂಡಿಯಾ ಕಂಪೆನಿಯಾದರೆ ಇಂದು ಅಂಥ ಹತ್ತಾರು ವಿದೇಶೀ ಕಂಪೆನಿಗಳು; ದೇಶದೊಳಗೆ ನುಗ್ಗಲು ಹಸಿರು ಅವಕಾಶಕ್ಕಾಗಿ ಕಾಯುತ್ತಾ ನಮ್ಮ ಗಡಿಯ ಸುತ್ತ ಹೊಂಚು ಹಾಕಿ ಕೂತಿವೆ. ಅಂದು ಒಂದು ಕಂಪೆನಿಯ ವಿರುದ್ಧ ಚಳವಳಿ ನಡೆದಿದ್ದರೆ, ಇಂದು ಅಂಥ ಹತ್ತಾರು ಬಲಿಷ್ಠ ಕಂಪೆನಿಗಳ ವಿರುದ್ಧ ಸಮರವೇ ನಡೆಯಬೇಕಾಗಿದೆ. ಅಂದು ಶತ್ರುವು ಹೊರಗಿನ 'ಅನ್ಯ'ನಾದರೆ, ಇಂದಿನ ಶತ್ರು ವಿದೇಶೀ ಕಂಪೆನಿಗಳ ಜತೆ ಸೇರಿ ನಮ್ಮನ್ನು ಪರತಂತ್ರಕ್ಕೆ ತಳ್ಳುವ ಒಳಗಿನ 'ನಮ್ಮ ಪ್ರಭು'ವೇ ಆಗಿದ್ದಾನೆ. ನಮ್ಮವರಿಗೇ 'ಕ್ವಿಟ್ ಇಂಡಿಯಾ' ಎಂದು ಹೇಳುವ ಅತ್ಯಂತ ದುರದೃಷ್ಟದ ಹಂತಕ್ಕೆ ನಾವಿಂದು ತಲುಪಿದ್ದೇವೆ.

ಉಪ್ಪು ಸಮಸ್ತ ಜೀವಿಗಳ ಉಳಿವಿಗೆ ಅತ್ಯಂತ ಅವಶ್ಯವಾದುದು. ಭೂ ತಾಯಿಯು ಪುಕ್ಕಟೆಯಾಗಿ ಬಳುವಳಿಯಿತ್ತ ಈ ಅಮೂಲ್ಯ ಸಂಪತ್ತನ್ನು ಮಾರುವ 'ಕಮ್ಮಡಿಟಿ' ಮಾಡಿ ಲಾಭ ಗಳಿಸಲು ಹವಣಿಸಿದ ಬ್ರಿಟಿಷರ ವಿರುದ್ಧ ಗಾಂಧೀಜಿ ಸೊಲ್ಲೆತ್ತಿ, ಆ ಜೀವ ವಿರೋಧಿ ಕಾನೂನನ್ನು ಧಿಕ್ಕರಿಸಿದರು. ಆಹಾರ ಬೀಜಗಳು ಕೂಡ ಉಪ್ಪಿನಂತೆಯೇ ಈ ಭೂಮಿಯಲ್ಲಿ ಜೀವಿಗಳ ಉಳಿವಿಗೆ ಅತ್ಯಂತ ಅಗತ್ಯ. ಆಹಾರ ಬೆಳೆಸಿಕೊಳ್ಳಲು ನಿಸರ್ಗವು ನಮಗಿತ್ತ ಮೂಲಭೂತ ಸಂಪತ್ತು ಇದು. ಜಗತ್ತಿನಾದ್ಯಂತ ರೈತರು ಉತ್ತಮ ಫಸಲು ತೆಗೆಯಲು ಶ್ರೇಷ್ಠ ಬೀಜದ ತಳಿಗಳನ್ನು ಪರಂಪರಾಗತವಾಗಿ ರಕ್ಷಿಸಿಕೊಂಡು ಬರುತ್ತಿದ್ದಾರೆ. ಉತ್ತಮ ತಳಿಗಳ ರಕ್ಷಣೆ, ಮತ್ತು ಅವುಗಳ ಮರು ಬಿತ್ತನೆ, ಮನುಷ್ಯ ಬೇಸಾಯ ಕಲಿತಂದಿನಿಂದ ಇಂದಿನವರೆಗೆ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಇದರ ಫಲವಾಗಿ ಕೇವಲ ನಮ್ಮ ದೇಶವೊಂದರಲ್ಲೇ ಸುಮಾರು ೩೬೦೦ ಕ್ಕೂ ಮಿಕ್ಕಿ ಭತ್ತದ ತಳಿಗಳಿವೆಯಂತೆ. ಈ ಭೂಮಿಯಲ್ಲಿ ಭತ್ತದ ತಳಿಗಳೇ ೩೬,೦೦೦ಕ್ಕೂ ಮಿಕ್ಕಿ ಇವೆಯಂತೆ. ಈ ಅಸಂಖ್ಯ ವಿಭಿನ್ನ ತಳಿಗಳು ಆಯಾಯಾ ನೆಲ, ಹವಾಮಾನ, ಪರಿಸರಗಳಿಗೆ ತಕ್ಕಂತೆ ಸಾವಿರಾರು ವರುಷಗಳಿಂದ ಭೂ ತಾಯಿಯು ತನ್ನ ಗರ್ಭದಿಂದ ಹೊರಚೆಲ್ಲುತ್ತ ಬಂದ ಅದ್ಭುತ ಸೃಷ್ಟಿ. ಆಯಾಯಾ ಸ್ಥಳಗಳ ಸ್ಥಳೀಯ ತಳಿಗಳು ಆಯಾಯಾ ಪ್ರದೇಶದ ಜೀವಿಗಳ ಆರೋಗ್ಯವನ್ನು ಪೊರೆಯುವಂಥವು. ನಮ್ಮದಲ್ಲದ ದೂರದೂರಿನ ಒಂದು ತಳಿಯಿಂದ ಬೆಳೆಸಿದ ಆಹಾರವು ಈ ಊರಿನ ಜೀವಿಗಳಿಗೆ ಆರೋಗ್ಯದ ದೃಷ್ಟಿಯಿಂದ ಅಷ್ಟು ಒಳ್ಳೆಯದಲ್ಲ ಎಂಬ ಅಂಶವನ್ನು ಇಂದು ಆಹಾರ ಸಂಶೋಧನೆಗಳು ತಿಳಿಸುತ್ತಿವೆ. ನಮ್ಮ ನಮ್ಮ ಪ್ರದೇಶದಲ್ಲಿ ಬೆಳೆಯುವ ಸ್ಥಳೀಯ ಆಹಾರ ಬೆಳೆಗಳು, ಹಣ್ಣುಹಂಪಲು, ತರಕಾರಿ, ದವಸಧಾನ್ಯಗಳು ನಮ್ಮ ದೇಹ ಪ್ರಕೃತಿಗೆ ಒಗ್ಗಿಕೊಂಡಿರುವುದರಿಂದ ಅವು ಒಳ್ಳೆಯದೆಂಬ ವಿವೇಕ ಇಂದು ಮೂಡುತ್ತಿದೆ. ಹಾಗಾಗಿಯೇ ಆಹಾರ

ತಳಿಗಳನ್ನಾಗಲೀ, ಆಹಾರ ಪದ್ಧತಿಯನ್ನಾಗಲೀ ಒಟ್ಟಾರೆಯಾಗಿ ಏಕರೂಪಿಗೊಳಿಸುವುದು ಜೀವಿಗಳಿಗೆ ಒಳ್ಳೆಯದಲ್ಲ. ವಿಪುಲ ವೈವಿಧ್ಯತೆಯ ಸಾಧ್ಯತೆಯು ಸೃಷ್ಟಿ ನಿಯಮ.

**ಸೃಷ್ಟಿ ನಿಯಮಕ್ಕೆ ಸವಾಲೆಸೆಯುವ 'ಮೊನ್ಸೆಂಟೊ' ಕಂಪೆನಿ**

ಆದರೆ ಇಂಥ ಸೃಷ್ಟಿನಿಯಮವನ್ನೇ ತಿರುಚಿ, ಬೀಜ ತಳಿಗಳನ್ನು 'ಪೇಟೆಂಟ್' ಮಾಡಿ ದುರ್ಬಲ ಕೃಷಿಕರಿಗೆ ತಮ್ಮ ತಮ್ಮ ಸ್ಥಳೀಯ ತಳಿಗಳ ಮೇಲಿರುವ ಸಾಮುದಾಯಿಕ ಹಕ್ಕಿನ ಮೇಲೆಯೇ ಆಕ್ರಮಣ ಮಾಡಲು ಅಮೇರಿಕಾದ ಮೊನ್ಸೆಂಟೊದಂಥ ಕಂಪನಿಗಳು ಆರಂಭಿಸಿವೆ. ಇಂಥ ಕ್ರೌರ್ಯದ ವಿರುದ್ಧ ನಾವಿಂದು ಹೋರಾಟ ನಡೆಸುವುದು ಅನಿವಾರ್ಯವಾಗಿದೆ.

"ನಾವು ಬಿತ್ತುವ ಬೀಜದ ತಳಿಗಳು ಸಮೃದ್ಧವಾಗಲಿ, ಅನಂತವಾಗಲಿ" ಎಂದು ಪ್ರತೀ ರೈತ ಪ್ರತಿಬಾರಿ ಬಿತ್ತನೆ ಮಾಡುವಾಗಲೂ ಪ್ರಾರ್ಥಿಸಿದರೆ, ಈ ಬೀಜವನ್ನು ಪೇಟೆಂಟ್ ಮಾಡುವ ಮೊನ್ಸೆಂಟೋದಂಥ ಕಂಪೆನಿಗಳು," ಹೆಚ್ಚೆಚ್ಚು ಬೀಜದ ತಳಿಗಳು ನಿರ್ವಂಶವಾಗಿ ಇರುವ ಕೆಲವೇ ತಳಿಗಳು ನಮ್ಮ ಸ್ವಾಮ್ಯಕ್ಕೆ ಬರಲಿ ನಮ್ಮ ಲಾಭ ಎಂದೂ ಬತ್ತದಿರಲಿ" ಎಂದು ಪ್ರಾರ್ಥಿಸುತ್ತವೆ.

ಸಮುದಾಯದ ಸಾಮೂಹಿಕ ಒಡೆತನದಲ್ಲಿರುವ ಬೀಜಗಳ ಅಸಂಖ್ಯ ತಳಿಗಳನ್ನು ಪೇಟೆಂಟ್ ಮಾಡಿ, ಅವನ್ನು ಬಳಸುವ, ರಕ್ಷಿಸುವ, ಮರುಬಳಸುವ, ವಿನಿಮಯ ಮಾಡಿಕೊಳ್ಳುವ ರೈತನ ಮೂಲಭೂತ ಹಕ್ಕನ್ನೇ ಆತನಿಂದ ಕಸಿದುಕೊಳ್ಳುವ ಮೊನ್ಸೆಂಟೋದಂಥ ಕಾರ್ಪರೇಟ್ ಕಂಪೆನಿಗಳು ಪ್ರಕೃತಿಯ ಮೂಲಭೂತ ನಿಯಮಗಳಿಗೇ ಅಪಚಾರ ಮಾಡುತ್ತಿವೆ. ತಳಿಗಳ ಅನುವಂಶೀಯತೆಯನ್ನು ವ್ಯತ್ಯಯಗೊಳಿಸುವ ತಂತ್ರಜ್ಞಾನವನ್ನು ಬಳಸುತ್ತಾ ಬೀಜಗರ್ಭದಲ್ಲೇ ಅವು ಸ್ವಯಂ ನಾಶಮಾಡಿಕೊಳ್ಳುವ ವಿಷ ಉತ್ಪತ್ತಿ ಮಾಡುವ ಮೂಲಕ ಅಸಂಖ್ಯ ದೇಸೀ ತಳಿಗಳನ್ನು ನಿರ್ವಂಶ ಮಾಡಿ, ತಮ್ಮಲ್ಲಿದ್ದ ಕೆಲವೇ ತಳಿಗಳನ್ನು ಉಳಿಸಿಕೊಂಡು, ಆ ಬೀಜಗಳನ್ನು ಕೂಡಿಟ್ಟು, ಇಡಿಯ ಭೂಮಿಯ ಬೇಸಾಯಗಾರರನ್ನು ಶೋಷಿಸುವುದು ಸೃಷ್ಟಿ ನಿಯಮಕ್ಕೇ ಸವಾಲೆಸೆಯುವ ಮನುಷ್ಯನ ಅತ್ಯಂತ ಹೇಯ ಕೆಲಸವೆನ್ನದೆ ವಿಧಿಯಿಲ್ಲ. ಆದಕ್ಕಾಗಿಯೇ ಚಿಲಿದೇಶದಲ್ಲಿ ಈ ತಂತ್ರ ಜ್ಞಾನವನ್ನು ಬೇಸಾಯಕ್ಕೆ ಹಾಕುವ 'ನ್ಯೂಟ್ರಾನ್ ಬಾಂಬ್' ಎಂದೇ ವರ್ಣಿಸುತ್ತಾರೆ. ತಳಿಗಳನ್ನು ವ್ಯತ್ಯಯಗೊಳಿಸುವ ಬ್ಯಾಕ್ಟೀರಿಯಾ ತಂತ್ರಜ್ಞಾನದ ಮೂಲಕ, ಗಿಡಗಳನ್ನೇ ವಿನಾಶಕಾರೀ ಕೀಟಗಳ ಉತ್ಪತ್ತಿಯ ಫ್ಯಾಕ್ಟರಿಗಳಾಗಿ ಪರಿವರ್ತಿಸಲಾಗುತ್ತದೆ. ಉಪಯೋಗೀ ತಳಿಗಳನ್ನು ನಿರ್ವಂಶಗೊಳಿಸಲಿಕ್ಕಾಗಿಯೇ ವಿನಾಶಕಾರೀ ಕೀಟಗಳನ್ನು ಈ ಕಾರ್ಪರೇಟ್ ಭೂತಗಳು ಸೃಷ್ಟಿಸುತ್ತವೆ. (ಹಿಂದೆ ಹಸಿರು ಕ್ರಾಂತಿಯ ಹೆಸರಲ್ಲಿ ಕೆಲವೇ ವಿದೇಶೀ ಬೀಜಗಳನ್ನು ಜನಪ್ರಿಯಗೊಳಿಸಿ, ನೂರಾರು ಸ್ಥಳೀಯ ಉತ್ತಮ ತಳಿಗಳು ನಿರ್ವಂಶವಾದ ಕಣ್ಣೀರಿನ ಕತೆಯನ್ನು ಇಲ್ಲಿ ಸ್ಮರಿಸಬಹುದು.)

ಮೊನ್ಸೆಂಟೊ ಒಂದೆಡೆ ಬೀಜ ನಿರ್ವಂಶಕ ತಂತ್ರಜ್ಞಾನದ ಮೂಲಕ ಬೀಜಗಳು ತಾವು ತಾವಾಗಿಯೇ ಬಂಜೆ ಬೀಜಗಳನ್ನು ಸೃಷ್ಟಿಸುವಂತೆ ಪ್ರೇರೇಪಿಸುವ ಹುನ್ನಾರ ನಡೆಸಿದರೆ, ಇನ್ನೊಂದೆಡೆ ಜೈವಿಕ ಪೇಟೆಂಟ್ ಕಾನೂನಿನಡಿ ರೈತರು ಪ್ರತಿವರ್ಷವೂ ತಮ್ಮ ಬೇಸಾಯಕ್ಕಾಗಿ ಬೀಜವನ್ನು ಕೊಂಡುಕೊಳ್ಳಬೇಕಾದ ಅತಂತ್ರ ಸ್ಥಿತಿಯನ್ನು ನಿರ್ಮಾಣ ಮಾಡುತ್ತದೆ. ಈ ಸ್ವಯಂ ನಿರ್ವಂಶ ತಂತ್ರಜ್ಞಾನದಿಂದ ಸೃಷ್ಟಿಗೊಂಡ ತಳಿಗಳು ಇತರ ಸಸ್ಯಲೋಕಕ್ಕೂ ಲಗ್ಗೆಯಿಟ್ಟು, ಅನೇಕ ಸಸ್ಯ

ಜಾತಿಗಳೇ ನಿರ್ವಂಶವಾಗುವ ಅಪಾಯವೂ ಇದೆಯೆಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಇಂಥ ವಿನಾಶಕಾರೀ 'ನಿರ್ಜೀವ ವಿಜ್ಞಾನ'ವನ್ನು ಕಾರ್ಪರೇಟ್ ರಾಕ್ಷಸರು 'ಜೀವ ವಿಜ್ಞಾನ' ಸಂಶೋಧನೆಯೆಂದು ಕರೆಯುತ್ತಾರೆ. ಜೀವರಸವನ್ನೇ ಬತ್ತಿಸುವ ಈ ನಿರ್ಜೀವ ವಿಜ್ಞಾನವು, ಸೃಷ್ಟಿ ಚೈತನ್ಯವನ್ನೇ ವಸಾಹತೀಕರಣಗೊಳಿಸುವ ನಿಸರ್ಗ ವಿರೋಧಿ ಹಂತಕ್ಕೂ ತಲುಪುತ್ತಿದೆ.

ಇಂಥ ನಿಸರ್ಗ ವಿರೋಧೀ ಚಟುವಟಿಕೆಯ ವಿರುದ್ಧ ಹಮ್ಮಿಕೊಂಡ ಪವಿತ್ರ ಚಳುವಳಿಯೇ ಈ ಪವಿತ್ರವಾದ ಬೀಜ ಸತ್ಯಾಗ್ರಹ. ಈ ಬೀಜ ಸತ್ಯಾಗ್ರಹವು, ಬೀಜವನ್ನು ಕಾನೂನು ಮತ್ತು ಜೈವಿಕ ಪೇಟೆಂಟ್‌ಗಳಿಂದ ಮುಕ್ತಗೊಳಿಸಲು, ಮತ್ತು ಬೇಸಾಯವನ್ನು ಎಲ್ಲ ರೀತಿಯ ವಿಷಗಳಿಂದ ಮತ್ತು ಕಾರ್ಪರೇಟ್ ನಿಯಂತ್ರಣಗಳಿಂದ ಸಂಪೂರ್ಣ ಮುಕ್ತಗೊಳಿಸಲು, ಮತ್ತು ಆ ಮೂಲಕ ಈ ಭೂಮಿ ಮತ್ತು ಮನುಷ್ಯನನ್ನು ಪೋಷಿಸಲು ಅಗತ್ಯವಾದ ಜೀವ ವೈವಿಧ್ಯತೆಯನ್ನು ರಕ್ಷಿಸಲು ಭಾರತದುದ್ದಗಲಕ್ಕೆ 'ಬೀಜಯಾತ್ರೆ'ಯನ್ನು ನಡೆಸಲು ಉದ್ದೇಶಿಸಿದೆ.

**ಬೀಜ ಸತ್ಯಾಗ್ರಹ - ಸ್ವರೂಪ**

ಪೇಟೆಂಟ್ ಕಾನೂನಿನ ವಿರುದ್ಧ ತೀವ್ರ ಸ್ವರೂಪದ ಚಳುವಳಿಯನ್ನು ನಡೆಸುತ್ತಿರುವ ದೇಶದ ಹೆಸರಾಂತ ಪರಿಸರ ಕಾರ್ಯಕರ್ತೆ, ವಿಜ್ಞಾನಿ, ದಿಲ್ಲಿಯ 'ರಿಸರ್ಚ್ ಫೌಂಡೇಶನ್ ಫಾರ್ ಸಾಯನ್ಸ್, ಟೆಕ್ನಾಲಜಿ, ಇಕಾಲಜಿ" ಸಂಸ್ಥೆಯ ನಿರ್ದೇಶಕಿ ಡಾ। ವಂದನಾ ಶಿವ ಮತ್ತು ಅವರ ಸಂಸ್ಥೆ ಈ ಬೀಜ ಸತ್ಯಾಗ್ರಹದ ಮೂಲಪ್ರೇರಣೆಯಾಗಿದೆ. ಗಾಂಧೀಜಿಯ ಉಪ್ಪಿನ ಸತ್ಯಾಗ್ರಹದ ನಂತರ ನಡೆಯುತ್ತಿರುವ ಅತ್ಯಂತ ಪವಿತ್ರವಾದ ಈ ಬೀಜ ಚಳವಳಿಗೆ ಇಡಿಯ ಭಾರತವೇ ತೆರಕೊಳ್ಳಬೇಕಾಗಿದೆ.

ಬದುಕು ಎಲ್ಲಕ್ಕಿಂತ ಪವಿತ್ರ; ಬದುಕನ್ನು ಹೊಸಕಿ ಹಾಕುವ ಪೇಟೆಂಟ್ ಅಲ್ಲ. ನಿಸರ್ಗದ ಅದ್ಭುತ - ನಿಗೂಢ ಸಂಗತಿಗಳೆಲ್ಲವೂ ತಮಗೆ ಕೊಳ್ಳೆ ಹೊಡೆಯಲು ಇರುವ ನಿರ್ಜೀವ ಆಸ್ತಿ ಎಂದು ಪರಿಗಣಿಸುವ ಮೂಲಕ, ರೈತನ ಬದುಕುವ ಮೂಲಭೂತ ಹಕ್ಕನ್ನೇ ಕಸಿದು ಕೊಂಡು ಆತನನ್ನು ನಿಸ್ಸತ್ತ್ವಗೊಳಿಸುವ ಪೇಟೆಂಟ್ ಕಾನೂನಿನ ವಿರುದ್ಧ ಶ್ರೀಮತಿ ವಂದನಾ ಕೈಗೊಂಡ ಕೈಗೊಂಡ ಬೀಜ ಸತ್ಯಾಗ್ರಹ ಯಶಸ್ಸು ಕಾಣುವುದು ಸಮಷ್ಟಿ ಹಿತದ ದೃಷ್ಟಿಯಿಂದ ಬಹಳ ಮುಖ್ಯವಾಗಿದೆ.

**ಬದುಕಿನ ವೈವಿಧ್ಯತೆ ಪವಿತ್ರ, ಪೇಟೆಂಟ್ ಅಲ್ಲ**

ಕೆಲವು ದಶಕಗಳ ಹಿಂದೆ ಗಾಂಧೀಜಿ ದಂಡೀಯಾತ್ರೆಯನ್ನು ಘೋಷಿಸಿದ ಮಾರ್ಚ್ ೫ ರಂದೇ ಆರಂಭವಾದ ಬೀಜ ಸತ್ಯಾಗ್ರಹ, ದಂಡೀಯಾತ್ರೆ ಆರಂಭವಾದ ದಿನವಾದ (ಮಾರ್ಚ್ ೧೨) ಇಂದು ಮೊದಲ ಹಂತವನ್ನು ಮುಗಿಸಿ, ಎರಡನೆಯ ಹಂತಕ್ಕೆ ಕಾಲಿಡುತ್ತಿದೆ. ಇಂದಿನಿಂದ ಏಪ್ರಿಲ್ ೧೩ರ ವರೆಗೆ ಒಂದು ತಿಂಗಳ ಈ ಹಂತದಲ್ಲಿ, ಈ ಬೀಜ ಸತ್ಯಾಗ್ರಹದ ಮೂಲಕ ಪೇಟೆಂಟ್ ಕಾನೂನಿನ ದುಷ್ಪರಿಣಾಮದ ಬಗ್ಗೆ, ಪೈರುಗಳ ವಂಶವನ್ನೇ ವ್ಯತ್ಯಯಗೊಳಿಸುವ ಕ್ರಮಗಳ ಬಗ್ಗೆ, ಆಹಾರ ಭದ್ರತೆ ಮತ್ತು ಜೀವ ವೈವಿಧ್ಯತೆಯ ಮಹತ್ತ್ವದ ಬಗ್ಗೆ ಪರಿಸರ ಕಾರ್ಯಕರ್ತರು, ರೈತರು,

ಪ್ರಜ್ಞಾವಂತರು, ಸಮಾಜ ಸೇವಾಕಾರ್ಯಕರ್ತರು ಊರೂರುಗಳಲ್ಲಿ ಪ್ರಚಾರ ಮಾಡುವ ಕಾರ್ಯಕ್ರಮ ಇಟ್ಟುಕೊಳ್ಳಬೇಕು. ಮನೆ ಮನೆಗೆ ತೆರಳಿ ನಮ್ಮ ಮನೆ ಬಾಗಿಲಿಗೆ ಬಂದ ಅಪಾಯದ ಬಗ್ಗೆ ಎಚ್ಚರಿಸಬೇಕು.

ಮುಂದೆ ಮೂರನೆಯ ಹಂತದಲ್ಲಿ, ೨೦೦೦ನೇ ಇಸವಿಯ ಮಾರ್ಚ್‌ತನಕ ಒಂದು ವರುಷ ಈ ಚಳುವಳಿಯನ್ನು ಮುಂದುವರಿಸಬೇಕು ಮತ್ತು ಮುಂದಿನ ವರುಷ ಮಾರ್ಚ್ ೫ ರಿಂದ ೧೨ರ ಅವಧಿಯಲ್ಲಿ ಬೀಜ ಸತ್ಯಾಗ್ರಹದ ಯಶಸ್ಸು ರೈತನ ಯಶಸ್ಸಾಗಿ, ರೈತನ ಯಶಸ್ಸು ಜನಶಕ್ತಿಯ ಯಶಸ್ಸಾಗಿ ಉತ್ಸವದಂತೆ ಸಂಭ್ರಮದಿಂದ ಆಚರಿಸುವಂತಾಗಬೇಕು.

ಈ ಅಖಂಡ ಜೀವಜಾಲದ ಸಮರಸ-ಶಾಂತಿ-ನೆಮ್ಮದಿಗಾಗಿ ಹಳ್ಳಿ ಹಳ್ಳಿಗಳಲ್ಲಿ ಈ ಪವಿತ್ರ ಸತ್ಯಾಗ್ರಹವು ನಡೆಯುವಂತಾದರೆ, ಈ ಬೀಜ ಸತ್ಯಾಗ್ರಹವು ಪ್ರಾಯಃ ದೇಶದ ಸಮಷ್ಟಿ ಪ್ರಜ್ಞೆಗೇ ಒಂದು ಹೊಸ ತಿರುವುಕೊಟ್ಟು, ನಿಸರ್ಗ ಪೋಷಕ ಬದುಕಿನ ಕ್ರಮದತ್ತ ನಾವು ಹೊಸಹೆಜ್ಜೆ ಇಡಲು ಸಾಧ್ಯವಾದೀತು. ಅಭಿವೃದ್ಧಿಯ ಕಲ್ಪನೆಯೇ ಒಂದು ಮಹತ್ತ್ವದ ತಿರುವು ಪಡೆಕೊಂಡು ನಿಸರ್ಗದ ಅಂತರ್ಗತ ಅಖಂಡತ್ವದ ದರ್ಶನವಾಗಬಹುದು. □

# ನೀರು ಜೀವನ..... ಕೋಲಾ ?

ಅಮರಕೋಶದಲ್ಲಿ ನೀರಿಗೆ ಇನ್ನೊಂದು ಹೆಸರು ಜೀವನ. ನೀರು ಬದುಕಿನ ಮೂಲದ್ರವ್ಯ. ಆದರೆ ಇಂದಿನ ವಿಪರೀತ ಬುದ್ಧಿಗೆ ನೀರಿಗಿಂತ ಕೋಕ್ ಪಾನೀಯವೇ ಪ್ರಿಯ. ಆದರೆ ಕೋಲಾ ಮಿಶ್ರಿತ ಲಘುಪಾನೀಯಗಳನ್ನು ಪ್ರತಿಷ್ಠೆಯ ಸಂಕೇತವೆಂದು ಇಷ್ಟಪಡುವವರು ಗಮನಿಸಬೇಕಾದ ಗಂಭೀರ ಅಂಶಗಳು ಇಲ್ಲಿವೆ.

**ಬೇಕೇ ಈ ಪೇಯ ?**

೧. ಅಮೇರಿಕದ ಅನೇಕ ರಾಜ್ಯಗಳಲ್ಲಿ ಹೆದ್ದಾರಿಯ ರಕ್ಷಣೆಯ ಗಸ್ತು ಪಡೆಗಳು ವಾಹನ ಅಪಘಾತದಲ್ಲಿ ರಸ್ತೆ ಮೇಲೆ ಚೆಲ್ಲಿ ಒಣಗಿದ ರಕ್ತವನ್ನು ತೆಗೆಯಲು, ತಮ್ಮ ವಾಹನಗಳಲ್ಲಿ ಯಾವಾಗಲೂ ಕನಿಷ್ಠ ಎರಡು ಗ್ಯಾಲನಿನಷ್ಟು ಕೋಕ್ ಪಾನೀಯ ದಾಸ್ತಾನು ಇಟ್ಟುಕೊಳ್ಳುತ್ತಾರಂತೆ.

೨. ಕೋಕ್ ಪಾನೀಯ ತುಂಬಿದ ಒಂದು ಬೋಗುಣಿಯಲ್ಲಿ ಎಲುಬನ್ನು ಮುಳುಗಿಸಿಟ್ಟರೆ ಎರಡು ದಿನಗಳಲ್ಲಿ ಅದು ಕರಗಿ ಮಾಯ; ಉಗುರು 4 ದಿನಗಳಲ್ಲಿ; ಹಲ್ಲು 7 ದಿನಗಳಲ್ಲಿ ಮಾಯ!

೩. ಪಿಂಗಾಣಿಯ ಪಾಯಿಖಾನೆ ಗುಳಿಯಲ್ಲಿ ಹಿಡಿದ ಗಟ್ಟಿಯಾದ ಮಲದ ಮೇಲೆ ಒಂದು ಚಿಕ್ಕ ಕ್ಯಾನ್ ಕೋಲಾ ಪಾನೀಯ ಸುರಿಸಿ ಒಂದು ಗಂಟೆ ಬಿಟ್ಟು, ಬಳಿಕ ರಭಸದಲ್ಲಿ ನೀರು ಹಾಯಿಸಿದರೆ ಕಶ್ಮಲವೆಲ್ಲ ಹೋಗಿ ಶುಭ್ರವಾಗುತ್ತದೆ. ಕೋಕಿನಲ್ಲಿರುವ ಸಿಟ್ರಿಕ್ ಆಮ್ಲ ಪಿಂಗಾಣಿಯ ಕಲೆ ಕಳೆಯುವ ಗುಣ ಹೊಂದಿದೆ.

೪. ಕಾರಿನ ಮುಂದಿರುವ ಲೋಹದ ಬಂಪರಿನಲ್ಲಿ ತುಕ್ಕಿನ

---

ಉದಯವಾಣಿ, ಮಾರ್ಚ್ ೧೨, ೨೦೦೩

ಚುಕ್ಕಿಗಳಿದ್ದರೆ ತೆಳುವಾದ ಅಲ್ಯುಮಿನಿಯಂ ಹಾಳೆಯನ್ನು ಕೋಲಾಕ್ಕೆ ಅದ್ದಿ ಬಂಪರನ್ನು ಉಜ್ಜಿದರೆ ಸ್ವಚ್ಛವಾಗುತ್ತದೆ.

೫. ತುಕ್ಕು ಹಿಡಿದ ಬೋಲ್ಟುಗಳನ್ನು ತೆಗೆಯಲು, ಕೋಲಾದಲ್ಲಿ ಅದ್ದಿದ ಬಟ್ಟೆಯನ್ನು ಕೆಲವೇ ನಿಮಿಷಗಳ ಕಾಲ ಆ ಬೋಲ್ಟುಗಳಿಗೆ ಸುತ್ತಿಟ್ಟರೆ, ಬೋಲ್ಟು ಸಡಿಲವಾಗಿ ಸುಲಭದಲ್ಲಿ ಬರುತ್ತದೆ.

೬. ಕಾರು ಬ್ಯಾಟರಿ ಟರ್ಮಿನಲ್ ಸವೆದು ಜೀರ್ಣವಾದ ಪ್ರದೇಶಕ್ಕೆ ಒಂದು ಲೀಟರ್ ಕೋಕಾಕೋಲಾ ಸುರಿದರೆ, ಸವೆದು ಜೀರ್ಣವಾದ ಅಂಶ ನೊರೆನೊರೆಯಾಗಿ ಹೊರ ಹರಿದು ಸ್ವಚ್ಛವಾಗುತ್ತದೆ.

೭. ಬಟ್ಟೆಗಳಿಗೆ ತಗಲಿದ ಗ್ರೀಸ್ ಅಥವಾ ಯಾವುದೇ ಜಿಡ್ಡು ಪದಾರ್ಥಗಳನ್ನು ತೆಗೆಯಲು, ಬಟ್ಟೆಯ ರಾಶಿಯನ್ನು ಸಾಬೂನಿನ ಪುಡಿಯಲ್ಲಿ ಅದ್ದಿಡುವಾಗ, ಅದಕ್ಕೆ ಒಂದು ಡಬ್ಬ ಕೋಲಾ ಸುರಿದು ಇಡಿ. ಕೋಲಾ ಜಿಡ್ಡಿನ ಕಲೆಗಳನ್ನು ತೆಗೆಯಲು ಸಹಾಯ ಮಾಡುತ್ತದೆ. ಆವಿಯಿಂದ ಮಸುಕಾದ ಕಾರಿನ ಗ್ಲಾಸ್‌ಗಳನ್ನು ಕೋಲಾ ಸ್ವಚ್ಛಗೊಳಿಸುತ್ತದೆ.

ಏನಿದೆ ಇದರಲ್ಲಿ ?

೧. ಕೋಲಾದಲ್ಲಿ ಅತ್ಯಂತ ಬಿರುಸಿನಿಂದ ಪ್ರತಿಕ್ರಿಯಿಸುವ ಫೋಸ್ಫೋರಿಕ್ ಆಮ್ಲ ಪಿ. ಎಚ್. ಮಾಪಕದಲ್ಲಿ ೨.೮ ರಷ್ಟಿದೆ. ಫೋಸ್ಫೋರಿಕ್ ಆಮ್ಲವು ಎಲುಬಿನಿಂದ ಕ್ಯಾಲ್ಸಿಯಂ ಅಂಶವನ್ನು ಹೀರುವುದರಿಂದ ಕ್ರಮೇಣ ಇದು ಮೂಳೆಗಳು ಮೆದುಗೊಳ್ಳುವ ರೋಗಕ್ಕೆ (osteoporosis) ಕಾರಣವಾಗುತ್ತದಂತೆ.

೨. ಕೋಲಾದ ಸಾಂದ್ರ ದ್ರಾವಣವನ್ನು ತೆಗೆದುಕೊಂಡು ಹೋಗುವ ವಾಹನಗಳು ಇತರ ಅಪಾಯಕಾರೀ ಪದಾರ್ಥಗಳನ್ನು ತೆಗೆದುಕೊಂಡು ಹೋಗುವಾಗ ಹಾಕುವ 'ಅಪಾಯದ ವಸ್ತು' ಎಂಬ ಫಲಕವನ್ನು ಹಾಕಿಕೊಳ್ಳಬೇಕಾಗುತ್ತದಂತೆ.

೩. ಕೋಲಾದ ವಿತರಕರು, ತಮ್ಮ ಟ್ರಕ್ಕಿನ ಇಂಜಿನನ್ನು ತೊಳೆದು ಸ್ವಚ್ಛಗೊಳಿಸಲು ಕಳೆದ ೨೦ ವರುಷಗಳಿಂದ ಕೋಲಾವನ್ನೇ ಬಳಸುತ್ತಾರಂತೆ.

ನೀರು = ಜೀವನ

೧. ಅಮೆರಿಕದಲ್ಲಿ ೭೫ ಶೇಕಡಾ ಜನರು ದೇಹದಲ್ಲಿ ನೀರಿನ ಅಂಶ ಕಡಿಮೆ ಆಗಿ ಬಳಲುತ್ತಿದ್ದಾರೆ ಎಂದು ಅಧ್ಯಯನಗಳು ತಿಳಿಸುತ್ತವೆ.

೨. ದೇಹದಲ್ಲಿ ಸ್ವಲ್ಪ ಜಲಾಂಶ ಕಡಿಮೆ ಆದರೂ ದೇಹದಲ್ಲಿರುವ ಜೀವಪೋಷಕ ದ್ರವ್ಯದ ಕ್ರಿಯೆ (metabolism)ಯು, ೩ ಶೇಕಡಾದಷ್ಟು ನಿಧಾನವಾಗುತ್ತದೆ.

೩. ದೇಹದಲ್ಲಿ ನೀರಿನ ಕೊರತೆಯು ಹಗಲು ಹೊತ್ತಿನಲ್ಲಿ ಬಳಲಿಕೆ - ಆಯಾಸಗಳನ್ನು ತೀವ್ರಗೊಳಿಸುತ್ತದೆ.

೪. ಬೆನ್ನು ನೋವು ಮತ್ತು ಸಂಧಿ ನೋವುಗಳಿಂದ ನರಳುವವರಲ್ಲಿ ಶೇಕಡಾ ೮೫ರಷ್ಟು ಜನರಿಗೆ ದಿನಕ್ಕೆ ೮-೧೦ ಲೋಟ ನೀರು ಕುಡಿದಾಗ ಈ ನೋವು ಉಪಶಮನವಾದ ಅಂಶವನ್ನು ಅಧ್ಯಯನ ತಿಳಿಸಿಕೊಡುತ್ತದೆ.

೫. ದೇಹದಲ್ಲಿ ಕೇವಲ ೨ ಶೇಕಡಾದಷ್ಟು ನೀರಿನ ಅಂಶ ಕಡಿಮೆ ಆದರೆ, ಅದು ತತ್‌ಕ್ಷಣದ ನೆನಪುಶಕ್ತಿಯನ್ನು ಕುಂದಿಸಿ ಅಸ್ಪಷ್ಟಗೊಳಿಸುತ್ತದೆ, ಗಣಿತ ಅಭ್ಯಾಸಕ್ಕೆ ತೊಡಕಾಗುತ್ತದೆ ಮತ್ತು ಕಂಪ್ಯೂಟರ್ ಪರದೆ ಅಥವಾ ಇನ್ಯಾವುದೇ ಓದುವ ಹಾಳೆಯ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸುವುದು ಕಷ್ಟವಾಗುತ್ತದೆ.

೬. ಪ್ರತೀದಿನ ೫ ಲೋಟ ನೀರು ಸೇವನೆ ಸುಮಾರು ೪೫ ಶೇಕಡಾದಷ್ಟು ಕರುಳಿನ ಕ್ಯಾನ್ಸರ್ ೭೯ ಶೇಕಡಾದಷ್ಟು ಸ್ತನದ ಕ್ಯಾನ್ಸರ್ ಮತ್ತು ೫೦ ಶೇಕಡಾ ಮೂತ್ರ ಕೋಶದ ಕ್ಯಾನ್ಸರ್‌ಗಳಾಗುವ ಸಂಭವವನ್ನು ಕಡಿಮೆಗೊಳಿಸುತ್ತದೆ.

ಈಗ ಹೇಳಿ ನಿಮಗೆ ಒಂದು ಲೋಟ ನೀರು ಬೇಕೋ? ಅಥವಾ ಕೋಲಾವೋ ?

**ಆದರೆ ಯಾವ ನೀರು ? (ಮಿನೆರಲ್ ವಾಟರ್ vs ಬಾಟ್ಲಿ ನೀರು)**

ಬಂಡೆಗಳ ನಡುವಿನಿಂದ ಹರಿದು ಬರುವ ಪರಿಶುದ್ಧ ನೀರು ಮಿನೆರಲ್ ವಾಟರ್. ಈ ನೀರು ಜೀವಪೋಷಕವಾದ ಎಲ್ಲ ಖನಿಜಾಂಶಗಳನ್ನು ಒಳಗೊಂಡಿರತ್ತದೆ. ನಿಜಕ್ಕೂ ಬಾವಿಯ ನೀರು 'ಮಿನೆರಲ್ ವಾಟರ್'. ಆದರೆ ಇಂದು ಹಾಲಿಗಿಂತ ದುಬಾರಿಯಾದ 'ಮಿನೆರಲ್ ವಾಟರ್' ಬಾಟಲಿಗಳ ಆಕರ್ಷಣೆ, ಆಧುನಿಕ ನಾಗರಿಕತೆಯ ಕ್ರೂರ ದುರಂತವೆನ್ನದೆ ವಿಧಿಯಿಲ್ಲ. ಬಾವಿಯ ಶುದ್ಧನೀರು ನಿಜಕ್ಕೂ ಜೀವಪೋಷಕ. ಅದಕ್ಕೇ ಅದನ್ನು ಅಮೃತೋದಕ ಎಂದು ಪ್ರಾಚೀನರು ಕರೆದು, ಎಲ್ಲ ಪಾನೀಯಗಳಿಗಿಂತ ಶ್ರೇಷ್ಠವೆಂದು ಪರಿಗಣಿಸಿದರು.

ಆದರೆ ಮಿನರಲ್ ವಾಟರ್ ಬಾಟಲಿಯ ನೀರನ್ನು ಹಾಗೆ ಕರೆಯಬಹುದೇ ? ಅನುಮಾನವಿದೆ. ನೀರಿನ ಆರೋಗ್ಯಕ್ಕೆ ಗಾಳಿ ಸಂಚಾರ ಅತೀ ಅಗತ್ಯ. ಗಾಳಿ ಸಂಚಾರವಿಲ್ಲದಂತೆ ಸೀಲು ಮಾಡಿದ ಬಾಟಲಿಯ ಆಯುಷ್ಯ ಕೇವಲ ಆರು ತಿಂಗಳು. ಮುಂದೆ ಅದರಲ್ಲಿ ಬ್ಯಾಕ್ಟೀರಿಯಾ ಉತ್ಪತ್ತಿ ಯಾಗುತ್ತದೆ (ಬಾವಿ ನೀರಿನಲ್ಲಿ ಈ ಪ್ರಮೇಯ ಇಲ್ಲ). ಅದಕ್ಕಾಗಿಯೇ ಆರು ತಿಂಗಳಿಗಿಂತಲೂ ಹೆಚ್ಚುಕಾಲ ಕೆಡದಂತೆ ಶೇಖರಣೆ ಮಾಡಿಟ್ಟುಕೊಳ್ಳಲು ಬಾಟ್ಲಿ ನೀರಿಗೆ ಅನೇಕ ತರದ ಕ್ರಿಮಿನಾಶಕ, ರಾಸಾಯನಿಕ ಪದಾರ್ಥಗಳನ್ನು ಸೇರಿಸುತ್ತಾರೆ. ಈ ಎಲ್ಲಾ 'ಪ್ರಿಸರ್ವೇಟಿವ್ಸ್'ಗಳೂ ಆತಂಕಕಾರಿ. ದೇಹದ ಮೇಲೆ ಗಂಭೀರ ಪರಿಣಾಮ ಬೀರುವಂಥವುಗಳು. ದುರದೃಷ್ಟವಶಾತ್, ಹೆಸರುವಾಸಿಯಾದ ದೊಡ್ಡ ದೊಡ್ಡ ಕಂಪೆನಿಗಳು ಈ ಕೆಲಸ ಮಾಡುತ್ತಿವೆ.

ಬಾವಿಯ ನೀರಿನಲ್ಲಿ ಕೆಲವೊಮ್ಮೆ ಬ್ಯಾಕ್ಟೀರಿಯಾಗಳಿರಬಹುದು. ಆದರೆ ಬ್ಯಾಕ್ಟೀರಿಯಾದ ವಿರುದ್ಧ ದೇಹ ಹೋರಾಡಬಹುದು. ದೇಹಕ್ಕೆ ಆ ಶಕ್ತಿ ಇದೆ. ಮಾತ್ರವಲ್ಲ ಕೆಲವೊಂದು ಬ್ಯಾಕ್ಟೀರಿಯಾಗಳು ದೇಹದ ಪೋಷಣೆಗೆ, ಆಹಾರ ಪಚನಕ್ಕೆ ಅಗತ್ಯವೂ ಹೌದು. ಆದರೆ ಕ್ರಿಮಿನಾಶಕ ಕೇವಲ ವಿಷ. ದೇಹವನ್ನು ವಿನಾಶ ಮಾತ್ರ ಮಾಡಬಲ್ಲುದು.

ಈಗ ಹೇಳಿ ಯಾವುದು ಜೀವನ ? ಬಾವಿಯ ಕುದಿಸಿದ ಶುದ್ಧ ನೀರೇ ? ಅಥವಾ ಬಾಟ್ಲಿ ನೀರೇ ? ❒

# ಪರಿಸರದ ಪ್ರಶ್ನೆ : ಮಾನ್ಯ ಮಂತ್ರಿಯವರ ಜೊತೆ ಮುಕ್ತ ಸಂವಾದ

ಪತ್ರಿಕೆಗಳಲ್ಲಿ ಇತ್ತೀಚೆ ಕೇಂದ್ರ ಸಚಿವರಾದ ಮಾನ್ಯ ಧನಂಜಯ ಕುಮಾರ್ ಅವರ ಜನಹಿತ ಪರಿಸರ ಕಾರ್ಯಕರ್ತರನ್ನು "ಪಟ್ಟಭದ್ರ ಹಿತಾಸಕ್ತಿಗಳೆಂದು" ಮತ್ತು "ಯುವಕರಿಗೆ ಉದ್ಯೋಗಾವಕಾಶ ಹೆಚ್ಚಿಸಲು ಬೃಹತ್ ಕೈಗಾರೀಕರಣ ಅತೀ ಅಗತ್ಯ" ಎಂಬ ಹೇಳಿಕೆಗಳು ಪ್ರಕಟವಾಗಿವೆ. ಇದು ನಿಜವಾಗಿದ್ದಲ್ಲಿ, ಈ ಹೇಳಿಕೆಗಳು, ಮಾನ್ಯ ಸಚಿವರು "ಹಸಿರು ಅನಕ್ಷರಸ್ಥರು" (green illiterate) ಎಂಬುದನ್ನು ಸೂಚಿಸುತ್ತದೆ. ಆಧುನಿಕೋತ್ತರ ಜಗತ್ತಿನ ಚಿಂತನೆಯ ಯಾವ ಸ್ಪರ್ಶವೂ ಇಲ್ಲದೆ, ಸಾಂಪ್ರದಾಯಿಕ ಅರ್ಥಶಾಸ್ತ್ರ ವಿಚಾರಗಳ ಮೇಲೆ ಮಾತಾಡುವ ಮಾನ್ಯ ಸಚಿವರಿಗೆ ಕೆಲವೊಂದು ಪ್ರಮುಖ ವಿಷಯಗಳ ಬಗ್ಗೆ ಸ್ಪಷ್ಟೀಕರಣ ನೀಡುವ ಅಗತ್ಯವಿದೆ. ಹಾಗಾಗಿ, ಈ ಬಗ್ಗೆ ಒಂದು ಮುಕ್ತ ಸಂವಾದವನ್ನು ಏರ್ಪಡಿಸಲು ಮಾನ್ಯ ಸಚಿವರನ್ನು ಪ್ರಾರ್ಥಿಸುತ್ತೇನೆ. ಈ ಮಾತುಗಳನ್ನು ಒಬ್ಬ ಅರ್ಥಶಾಸ್ತ್ರಜ್ಞನಾಗಿ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ.

೧. "ಪಟ್ಟ ಭದ್ರರು" ಎಂದು ಒಂದು ವರ್ಗವನ್ನೇ ಒಟ್ಟಾರೆ ದೂಷಿಸುವುದು ಯಾರಿಗೂ ಶೋಭಿಸುವುದಿಲ್ಲ. ಬ್ಯಾಂಕುಗಳಲ್ಲಿ, ಸರಕಾರೀ ಅಧಿಕಾರಿ ವರ್ಗಗಳಲ್ಲಿ, ವೈದ್ಯ- ಇಂಜಿನೀಯರ್-ವಕೀಲರುಗಳಲ್ಲಿ, ಲೇಖಕರಲ್ಲಿ, ಬುದ್ಧಿಜೀವಿಗಳಲ್ಲಿ, ಸಂತರಲ್ಲಿ ಧರ್ಮಗುರುಗಳಲ್ಲಿ, ರಾಜಕಾರಣಿಗಳಲ್ಲಿ ಹೀಗೆ ಎಲ್ಲ

---

ಜನವಾಹಿನಿ, ೨೦೦೦

ವರ್ಗಗಳಲ್ಲೂ ಪಟ್ಟಭದ್ರರು, ಠಕ್ಕರು ಇದ್ದೇ ಇರುತ್ತಾರೆ. ಡಾ| ಕೆ. ಶಿವರಾಮ ಕಾರಂತ, ಯು. ಆರ್. ಅನಂತಮೂರ್ತಿ, ನಂದಲಾಲ ಬಹುಗುಣರಂಥವರನ್ನೂ ಪಟ್ಟಭದ್ರರ ಸಾಲಿಗೆ ಸೇರಿಸಬಹುದೇ ?

೨. "ಭಾರತವು ಯುರೋಪಿನಂತೆ ನಗರ ನಾಗರಿಕತೆಯಲ್ಲ. ಗ್ರಾಮೀಣ ನಾಗರಿಕತೆಯ ದೇಶ. ಹಾಗಾಗಿ ಇಲ್ಲಿನ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ಭಾರತದ ಗ್ರಾಮೀಣ ಪ್ರದೇಶದಲ್ಲಿ ಬದುಕುವ ಅಸಂಖ್ಯ ಜನರ ಹಿತಕ್ಕೆ ಪೂರಕವಾಗಿರಬೇಕು" ಎಂದು ಗಾಂಧೀಜಿ ನುಡಿದಿದ್ದರು. ಆದರೆ ದುರದೃಷ್ಟವಶಾತ್, ಈ ದೇಶವನ್ನು ದಿಢೀರ್ ಅಭಿವೃದ್ಧಿಗೊಳಿಸಲು ಹೊರಟ ನಮ್ಮ ನೇತಾರರು, ಈ ದೇಶದಲ್ಲಿ ಸಾವಿರಾರು ವರುಷಗಳಿಂದ ಜನರ ಆರ್ಥಿಕ ಬದುಕಿನ ಉಸಿರಾಗಿ, ಬಸಿರಿಗೆ ಅನ್ನಕೊಟ್ಟು ಪೊರೆದ ಅಸಂಖ್ಯ ಕಸುಬು, ಉಪಕಸುಬುಗಳ ಅನುಭವ ಜನ್ಯ ದೇಶೀಯ ಜ್ಞಾನ ಸಂಪತ್ತನ್ನು ಸಂಪೂರ್ಣ ಕಡೆಗಣಿಸಿ ಬೃಹತ್ ಕೈಗಾರಿಕೀಕರಣ ಪರ, ಪಾಶ್ಚಾತ್ಯ ಕೇಂದ್ರಿತ ಯೋಜನಾ ಮಾದರಿಗಳನ್ನು ಸಾರಾಸಗಟಾಗಿ ಅಳವಡಿಸಿಕೊಂಡರು. ಇದರ ಫಲವಾಗಿ, ನಮ್ಮ ಸಾಮಾನ್ಯ ಜನರು ಅಭಿವೃದ್ಧಿ ವೃತ್ತದ ಕೇಂದ್ರದಿಂದ ಹೊರ ಪರಿಧಿಗೆ ತಳ್ಳಲ್ಪಟ್ಟು ಆರ್ಥಿಕವಾಗಿ ಇನ್ನಷ್ಟು ಶಕ್ತಿಹೀನರಾದರು. ಇದು ಭಾರತದ ಪ್ರಸ್ತುತ ಸಾಂಸ್ಕೃತಿಕ ದುರಂತ.

ಇಡಿಯ ಭಾರತವನ್ನೇ ವಿವೇಚನಾರಹಿತ ನಗರೀಕರಣ - ಔದ್ಯಮೀಕರಣ ಪೋಷಕವಾದ ಕೇಂದ್ರೀಕರಣ 'ಹೈಟೆಕ್' ಪ್ರಗತಿ ಮಾದರಿಗೆ ಒಗ್ಗಿಸುವುದೆಂದರೆ, ಭಾರತದ ೫,೪೦,೦೦೦ ಹಳ್ಳಿಗಳಲ್ಲಿ ವಿಕೇಂದ್ರೀಕೃತ ನೆಲೆಯಲ್ಲಿ ಬದುಕುವ ೭೦ ಶೇಕಡಾ ಜನರ ಬದುಕನ್ನು ಶೋಷಣೆಗೆ ಒಡ್ಡಿ ಉಸಿರು ಕಟ್ಟಿಸುವುದೆಂದೇ ಅರ್ಥ. ಹಿಂದೆಂದೂ ಕಾಣದ ತೀವ್ರ ಅಸಮಾನತೆಗೆ ಕಾರಣವಾಗಿ ಇಡಿಯ ಜಗತ್ತನ್ನೇ ಬಡವ-ಶ್ರೀಮಂತ ಎಂಬ ಎರಡು ಪ್ರತ್ಯಪ್ರತ್ಯೇಕ ನಾಗರಿಕತೆಗಳನ್ನಾಗಿಯೇ ಮುಖಾಮುಖಿಯಾಗಿ ನಿಲ್ಲಿಸಿ, ಸಂಘರ್ಷ-ಕೌರ್ಯ-ದಬ್ಬಾಳಿಕೆಗಳಿಗೆ ಕಾರಣವಾಗುವ ಈ 'ಕ್ಲಾಸಿಕಲ್' ಕೈಗಾರಿಕಾ ಆರ್ಥಿಕ 'ಮಾಡೆಲ್' ಇಂದು ಜಗತ್ತಿನಾದ್ಯಂತ ಪ್ರಶ್ನಾರ್ಹವಾಗುತ್ತಿದೆ. ಪ್ರಸ್ತುತ ಆರ್ಥಿಕ ಚಿಂತನೆ ಮಾನವೀಯ ಆಯಾಮದತ್ತ, ಮಾನವೀಕರಣದತ್ತ ಸಾಗುತ್ತಿದೆ. ಅಭಿವೃದ್ಧಿ ಅರ್ಥಶಾಸ್ತ್ರದಲ್ಲಿ ಇಂದು ನಡೆಯುತ್ತಿರುವ ವಿಭಿನ್ನ ವಾಗ್ವಾದಗಳ ಸಂಕೀರ್ಣತೆಯನ್ನರಿಯದೆ ಹಳೆಯ ಆರ್ಥಿಕ ಚಿಂತನೆಯ ಆಧಾರದ ಮೇಲೆ ಇಂದು ಹೇಳಿಕೆಗಳನ್ನು ನೀಡುವುದು ಸೂಕ್ತವಲ್ಲ.

೩. ಗಂಭೀರ ಪರಿಸರ ಕಾರ್ಯಕರ್ತರು ಒಟ್ಟಾರೆಯಾಗಿ ಕೈಗಾರಿಕಾ ವಿರೋಧಿಗಳಲ್ಲ, ತಂತ್ರಜ್ಞಾನ, ಪ್ರಗತಿ ವಿರೋಧಿಗಳಲ್ಲ. ಯಾವುದೇ ಅಭಿವೃದ್ಧಿ ಯೋಜನೆಯ ಜ್ಯಾರಿ ಹೇಗೆ ? ಮತ್ತು ಯಾರಿಗಾಗಿ ? ಎಂಬುದು ಅವರ ಮೂಲಭೂತ ನೈತಿಕ ಪ್ರಶ್ನೆ. ಎಲ್ಲಾ ಕೈಗಾರಿಕೆಗಳು, ಅಭಿವೃದ್ಧಿ ಕಾರ್ಯಗಳು ಅತ್ಯಂತಿಕವಾಗಿ ಬಹುಜನ ಹಿತವಾಗಿರಬೇಕು, ಜನರ ಕೈಗಳನ್ನು ಬಳಸಿಕೊಳ್ಳುವ ಸೂಕ್ತ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಪ್ರಗತಿಯ ಫಲ ಜನರ ಕೈಗಳಿಗೆ ಹಂಚಿಕೆಯಾಗುವಂತಿರಬೇಕು, ಪರಿಸರ ಪರವಾಗಿ 'ಸಸ್ಟೈನೇಬಲ್' ಆಗಿರಬೇಕು.

ಭಾರತದಂತಹ ಒಂದು ಜನಸಂಪದ್ಭರಿತ ರಾಷ್ಟ್ರದಲ್ಲಿ ಸಮಸುಖೀ ರಾಜ್ಯಸ್ಥಾಪನೆಗೆ ಕೇವಲ ೨೦ ಶೇಕಡಾ ನಗರದ ಅಕ್ಷರಸ್ಥರಿಗೆ, ಆಧುನಿಕ ಕಾರ್ಯಕ್ಷೇತ್ರಗಳಲ್ಲಿ ದುಡಿಯುವವರಿಗೆ ಮಾತ್ರ ಲಾಭವಾಗಿ ಉಳಿದ ೮೦ ಶೇಕಡಾ ಜನರನ್ನು ಪ್ರಗತಿಪಥದಿಂದ ಹೊರಗಿಡುವ ಅಥವಾ ಪಟ್ಟಭದ್ರ ಲಾಬಿಗಳ ಕೈಗಳನ್ನು ಬಲಪಡಿಸಿ ದುರ್ಬಲರ ಶೋಷಣೆ ದಬ್ಬಾಳಿಕೆಗಳಿಗೆ ಇಂಬುಕೊಡುವ ಕೇಂದ್ರೀಕೃತ ಯೋಜನಾ ಮಾದರಿಗಳು ಸಹಾಯಕವಾಗಲಾರದು. ಉದಾಹರಣೆಗೆ, ಒಂದು ಪ್ರಸಿದ್ಧ ರಾಷ್ಟ್ರೀಯ ಆಂಗ್ಲ ಪತ್ರಿಕೆಯಲ್ಲಿ ಕೆಲವು ದಿನಗಳ ಹಿಂದೆ ಭಾರತವು ೯ ವರುಷಗಳ ಹಿಂದೆ ಉದಾರೀಕರಣ ನೀತಿಯನ್ನು ಜ್ಯಾರಿಗೊಳಿಸಲು ಆರಂಭಿಸಿದ ಮೇಲೆ ಬಡತನದ ರೇಖೆಯಿಂದ ಕೆಳಗಿರುವ ಜನರ ಪ್ರಮಾಣ ಜಾಸ್ತಿ ಆಗಿದೆಯೆಂದು ಸರಕಾರೀ ಅಂಕಿ ಅಂಶಗಳೇ ಹೊರಗೆಡಹಿದ ಸುದ್ದಿ ಪ್ರಕಟವಾಗಿತ್ತು. ಕೇಂದ್ರೀಕೃತ, ಮಾಡೆಲ್‌ನ ಪರಿಣಾಮಗಳಿಗೆ ಇದೊಂದು ಚಿಕ್ಕ ನಿದರ್ಶನ ಅಷ್ಟೆ.

ಒಂದು ಪ್ರಜಾಪ್ರಭುತ್ವದಲ್ಲಿ ಅಭಿವೃದ್ಧಿಯು ನ್ಯಾಯಸಮ್ಮತವಾಗಿದ್ದು, ಸಾಮಾಜಿಕ ನ್ಯಾಯ-ಸಮಾನತೆಗಳ ಜತೆ ಸಾಗಬೇಕು. ಅನೇಕ ಬೃಹತ್ ಕೈಗಾರಿಕೆಗಳು ಅವುಗಳ ಸ್ವರೂಪದಲ್ಲೇ ವಿಕೇಂದ್ರೀಕೃತ ಆರ್ಥಿಕ ನಿರ್ಮಿತಿಯನ್ನು ಧ್ವಂಸಗೊಳಿಸಿ ತನ್ನಲ್ಲಿ ಅಗಾಧ ಆರ್ಥಿಕ-ರಾಜಕೀಯ ಶಕ್ತಿಯನ್ನು ಕೇಂದ್ರೀಕರಿಸಿಕೊಂಡು ಬಡವ-ಶ್ರೀಮಂತ, ಹಳ್ಳಿ-ಪಟ್ಟಣ, ಅಕ್ಷರಸ್ಥ-ಅನಕ್ಷರಸ್ಥರ ನಡುವೆ ಇರುವ ಅಸಮಾನತೆಯನ್ನು ಇನ್ನಷ್ಟು ತೀವ್ರಗೊಳಿಸುತ್ತ ದೇಶವನ್ನೇ ಇಬ್ಭಾಗ ಮಾಡುವ ಸಂಭವವಿದೆ. ಹೀಗಾಗದಂತೆ ತಡೆಯಲು ಜನಪ್ರತಿನಿಧಿಗಳು ಬದ್ಧರಾಗಿರಬೇಕಲ್ಲವೇ ? ಯಾಕೆಂದರೆ, ಇಂಥ ಕಂಪೆನಿಗಳಿಂದ ಕಾನೂನು ಬಾಹಿರ ದಬ್ಬಾಳಿಕೆ ನಡೆದಾಗ ಅವುಗಳ ವಿರುದ್ಧ ತಮ್ಮ ಹೊಟ್ಟೆ ಬಟ್ಟೆ ಕಟ್ಟಿ ದೀರ್ಘಾವಧಿಯಲ್ಲಿ ಹೋರಾಟ ನಡೆಸಲು ಸಾಮಾನ್ಯ ಜನರಿಗೆ ಸಾಧ್ಯವಾಗುವುದಿಲ್ಲ. ದಕ್ಷಿಣಕನ್ನಡದ ಲಕ್ಷಾಂತರ ಮೀನುಗಾರರು ತಮ್ಮ ಬದುಕಿನ ಹಕ್ಕಿಗಾಗಿ ಒಂದು ದಿನದ ಹೋರಾಟ ನಡೆಸಬೇಕಾದರೆ, ತಮ್ಮ ದಿನನಿತ್ಯದ ಅನ್ನ ಸಂಪಾದನೆಯನ್ನು ಬಿಟ್ಟು ಬಿಡಬೇಕಾಗುತ್ತದೆ. ಹಾಗಾಗಿ ಕೈಗಾರಿಕಾ ಲಾಬಿಗಳು ಇಂಥ ಜನತಾ ಹೋರಾಟಗಳನ್ನು ದೀರ್ಘಾವಧಿಯಲ್ಲಿ ಹೊಸಕಿ ಹಾಕಲು ಸಮರ್ಥರು; ಮಾತ್ರವಲ್ಲ, ಇದಕ್ಕಾಗಿ ಯಾವ 'ಮೆಥೆಡ್'ನ್ನು ಬಳಸಲೂ ಸಮರ್ಥರು. ಹಾಗಾಗಿ, ನಮ್ಮ ರಾಜಕಾರಣಿಗಳು, ಅಥವಾ ಸರಕಾರ ಅವರ ಪರ ಮೃದುಧೋರಣೆಯನ್ನು ತಳೆಯುವುದೆಂದರೆ, ಈ ದೇಶದ ಬಹುಸಂಖ್ಯಾಕರನ್ನು ವಂಚಿಸಿದಂತೆ. ಯಾಕೆಂದರೆ, ಕೊನೆಗೂ ಒಬ್ಬ ಪ್ರಜ್ಞಾವಂತ ರಾಜಕಾರಣಿ, ಪರಿಸರ ಸಂಘಟನೆ, ಜನ ಸೇವಾ ಸಂಘಟನೆ, ಸಾಮಾಜಿಕ ಸಂಸ್ಥೆಗಳಂಥವುಗಳ ಸೀಮಿತ ಕಾರ್ಯಕ್ಷೇತ್ರಕ್ಕಿಂತ ವಿಶಾಲ ಬೀಸುವಿನಲ್ಲಿ ತಳಮಟ್ಟದಲ್ಲಿ ಕೆಲಸ ಮಾಡುವ ಸಾಮರ್ಥ್ಯವನ್ನು ಪಡೆದಿರುತ್ತಾನೆ. ಹಾಗಾಗಿ ಜನಪ್ರತಿನಿಧಿಗಳಾದ ಮಾನ್ಯ ಸಚಿವರು ಜನಪರ ಹೋರಾಟಗಳಲ್ಲಿ ಬಹಳ ಮುಖ್ಯರಾಗಿ ಬಿಡುತ್ತಾರೆ. ಅದಕ್ಕಾಗಿಯೇ, ಅವರು ಇಂದಿನ ಅಭಿವೃದ್ಧಿ ಪಥದ ಒಳಿತು-ಕೆಡುಕುಗಳ ಎಲ್ಲ ಸಂಕೀರ್ಣತೆಯನ್ನು ತಿಳಿದುಕೊಳ್ಳುವಷ್ಟು ಪ್ರಜ್ಞಾವಂತರಾಗಬೇಕಲ್ಲವೇ ?

ಆದರೆ ದುರದೃಷ್ಟವಶಾತ್, ನಮ್ಮ ದೇಶದಲ್ಲಿ ಸರಕಾರವು ಶಕ್ತಿಶಾಲೀ ಬೃಹತ್ ಕಂಪೆನಿಗಳು

ಮಾಡುವ ಅನ್ಯಾಯದ ವಿರುದ್ಧ ಜನಸಾಮಾನ್ಯರು ಧ್ವನಿ ಎತ್ತಿದಾಗ, ಅವರ ಧ್ವನಿ ಹತ್ತಿಕ್ಕಲು ಅರೆಮಿಲಿಟರಿ ಸೈನ್ಯ ತಂದು ಕಾನೂನು ಉಲ್ಲಂಘನೆ ಮಾಡುವ ಕಂಪೆನಿಗಳನ್ನೇ ರಕ್ಷಿಸಲು ಉತ್ಸಾಹ ತೋರಿಸುತ್ತದೆ - ಅದೂ ಅಭಿವೃದ್ಧಿಯ ನೆಪದಲ್ಲಿ. ಎಂ. ಆರ್. ಪಿ. ಎಲ್. ಪ್ರತಿಭಟನೆಯಲ್ಲಿ, ಕೊಜೆಂಟ್ರಿಕ್ಸ್ ಸರ್ವೇ ಸಮಯದಲ್ಲಿ ನಡೆದದ್ದು ಇದೇನೆ. ತೃತೀಯ ಜಗತ್ತಿನ ರಾಷ್ಟ್ರಗಳ ಸರಕಾರಗಳು ಮೃದುಸರಕಾರಗಳು (soft state) ಆಗಿರುವುದರಿಂದ ಅಭಿವೃದ್ಧಿ ಆಗುತ್ತಿಲ್ಲ ಎಂದು ವಿಶ್ವಬ್ಯಾಂಕು ಅಭಿಪ್ರಾಯಪಡುತ್ತದೆ. ಆದರೆ ಭಾರತದಲ್ಲಿ ಸರಕಾರಕ್ಕೆ ದ್ವಿಮುಖ ಧೋರಣೆ ಇದೆ. ಸರಕಾರವು ಬಲಿಷ್ಠ ಮೆಗಾ ಕಂಪೆನಿಗಳಿಗೆ ಅಂತಾರಾಷ್ಟ್ರೀಯ ಬಂಡವಾಳ ಹೂಡಿಕೆದಾರರಿಗೆ ಲಾಬಿಗಳಿಗೆ ಸಬ್ಸಿಡಿಗಳನ್ನು, ಇತರ ಅನುಕೂಲತೆಗಳನ್ನು ಘೋಷಿಸುವಲ್ಲಿ ಮೃದುವಾಗಿ (soft) ವರ್ತಿಸಿದರೆ ಸಾಮಾನ್ಯ ಜನಸ್ತೋಮದ ವಿರುದ್ಧ ತನ್ನ ದಬ್ಬಾಳಿಕೆ, ಶಕ್ತಿ, ಕ್ರೌರ್ಯಗಳನ್ನು ತೋರಿಸುತ್ತ ಗಡಸಾಗಿ ವರ್ತಿಸುತ್ತಿದೆ. ಈ ಎಲ್ಲ ಸೂಕ್ಷ್ಮಗಳನ್ನು ತಿಳಿದು ರಾಜಕಾರಣಿಗಳು ಜವಾಬ್ದಾರಿಯಿಂದ ವರ್ತಿಸಿದಾಗ ಮಾತ್ರ, ಈ ದೇಶದ ಬಡ ಜನರು, ಗ್ರಾಮೀಣ ಪ್ರದೇಶದಲ್ಲಿ ವಾಸಿಸುವವರು ನೆಮ್ಮದಿಯ ಉಸಿರುಬಿಟ್ಟಾರು. ಇಲ್ಲದಿದ್ದರೆ ರಾಜಕಾರಣಿಗಳೇ ಜನಸಾಮಾನ್ಯರನ್ನು ಹಿಂಸೆಗೊಡ್ಡುವ ಸ್ಥಾಪಿತ ಹಿತಾಸಕ್ತಿಗಳಾದಾರು.

**ರಾಜಕಾರಣಿಗಳು ಬಹಳ ಮುಖ್ಯ :** ಕೆಲವೊಂದು ಪರಿಸರ ಕಾರ್ಯಕರ್ತರು ಬೃಹತ್ ಕೈಗಾರಿಕೆಗಳ ಆಮಿಷಕ್ಕೆ ಕೈವೊಡ್ಡಿ ಅವರ ಜತೆ ಶಾಮಿಲಾದ್ದನ್ನು ಮಾನ್ಯ ಸಚಿವರು ವಿವರಿಸಿದ್ದಾರೆ. ಪರಿಸರ ಕಾರ್ಯಕರ್ತರನ್ನೇ ಕೊಳ್ಳುವಷ್ಟು ಸಾಮರ್ಥ್ಯವಿರುವ ಪ್ರಭುಶಕ್ತಿಯ ಮೆಗಾ ಕೈಗಾರಿಕೆಗಳ ದಬ್ಬಾಳಿಕೆಯಿಂದ ಜನಸಾಮಾನ್ಯರನ್ನು ಆತ್ಯಂತಿಕವಾಗಿ ರಕ್ಷಿಸಬೇಕಾದವರು ಯಾರು ? ಜನಪ್ರತಿನಿಧಿಗಳು. ಪರಿಸರವೇ ಇರಲಿ ಇತರ ಯಾವುದೇ ಖಾಸಗಿ ಸಮಾಜಸೇವಾ ಸಂಸ್ಥೆಗಳೇ ಇರಲಿ ಕೈಗಾರಿಕೆಗಳ ಇಂಥ ಆಮಿಷಕ್ಕೆ ಬಲಿಬೀಳುವ ಸಾಧ್ಯತೆಯಿದೆ ಎಂದರೆ, ಅಂಥ ಕಂಪೆನಿಗಳ ಹಣ ಬಲ ಎಷ್ಟಿದೆ ಎಂದು ನಾವು ಊಹಿಸಿಕೊಳ್ಳಬಹುದು. ಇಂಥ ಸಂದರ್ಭಗಳಲ್ಲಿ ಜನಪ್ರತಿನಿಧಿಗಳು ಜನರ ಆತ್ಯಂತಿಕ ಆಪದ್ಬಾಂಧವರಾಗುತ್ತಾರೆ. ಹಾಗಾಗಿ ರಾಜಕಾರಣಿಗಳು ಪ್ರಜಾಪ್ರಭುತ್ವದಲ್ಲಿ ಬಹಳ ಮುಖ್ಯರಾಗುತ್ತಾರೆ. ರಾಜಕೀಯ ಮಾತ್ರ ಇಂಥ ಕಣ್ಣಿಗೆ ಕಾಣದ ಶೋಷಣೆಗಳನ್ನು ಹತ್ತಿಕ್ಕಲು ಸಾಧ್ಯ. ಇದರ ಬದಲು, ರಾಜಕಾರಣಿಗಳು ಬಹುರಾಷ್ಟ್ರೀಯ ಕಂಪೆನಿಗಳನ್ನು ವಿವೇಚನೆಯಿಲ್ಲದೆ ನಮ್ಮ ಪ್ರಭುಗಳೆನ್ನುವಂತೆ ಸ್ವಾಗತಿಸಲು ತವಕಿಸುತ್ತಿದ್ದರೆ, ಈ ದೇಶದ ಒಪ್ಪಂದ ಜನರ ಬಾಳಿನ 'ಏಜೆಂಡಾ'ವೇ ನಮ್ಮ ಪ್ರಗತಿ ವ್ಯಾಖೆಯಲ್ಲಿ ಇಲ್ಲವಾಗಬಹುದು. ಸ್ವಾತಂತ್ರ್ಯಾನಂತರ ನಾವು ಕಟ್ಟಿದ ಕೆಲವು ಬೃಹತ್ ಅಣೆಕಟ್ಟುಗಳಿಂದ ೨೨ ಮಿಲಿಯ ಜನರು ನಿರಾಶ್ರಿತರಾದ ಕತೆಯಂತೆಯೇ, ನಮ್ಮ ಸಾಮಾನ್ಯ ಜನರ ಚರಿತ್ರೆಯು ಅಭಿವೃದ್ಧಿಯ ಕ್ರೌರ್ಯದ ಕತೆಯಾಗಬಹುದು, ದೇಶದಲ್ಲೆಲ್ಲಾ ನಿರಾಶ್ರಿತರೇ ತುಂಬಿರಬಹುದು. ಯಾವ ಮೂಲಭೂತ ಸೌಲಭ್ಯಗಳೂ ಒದಗದ, ಇಂಥ ನಿರಾಶ್ರಿತರ ಕ್ಯಾಂಪುಗಳು ಹೆಚ್ಚುತ್ತಿರುವುದು ನಾವಿಂದು ಕಾಣುತ್ತಿದ್ದೇವೆ.

**ಜನಪರ ರಾಜಕಾರಣಿಯ ಉದಾಹರಣೆ :** ಇತ್ತೀಚೆ ನಾನು ಮಾನ್ಯ ಜಾರ್ಜ್ ಫೆರ್ನಾಂಡಿಸರನ್ನು ಊಟಿಯಲ್ಲಿ ಒಂದು ಸಭೆಯಲ್ಲಿ ಭೇಟಿ ಆಗಿದ್ದೆ. ಅಲ್ಲಿ ಅವರೊಂದು ಘಟನೆ ವಿವರಿಸಿದರು. ಕೆಲವು ತಿಂಗಳ ಹಿಂದೆ ಬೃಹತ್ ಕೈಗಾರಿಕಾ ಮಾಲಿಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಸರಕಾರ ಯಾವ ರೀತಿಯ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ನಮಗೆ ಬುದ್ಧಿವಾದ ಹೇಳಲು ದೆಲ್ಲಿಯ ಪಂಚತಾರಾ ಅಶೋಕ ಹೋಟೇಲಲ್ಲಿ ಸರಕಾರದ ಜತೆ ಸಮಾಲೋಚನೆ ಏರ್ಪಡಿಸಿದ್ದರು. ನನ್ನನ್ನೂ ಆಹ್ವಾನಿಸಿದ್ದರು. ನಾನು ಅದರಲ್ಲಿ ಪಾಲುಗೊಳ್ಳುವುದು ಮುಖ್ಯ ಎಂದು ಅಧಿಕಾರಿಗಳು ಮೆಚ್ಚಿಸಿದರು. ಕೆಲವು ದಿನಗಳ ನಂತರ ಕರ್ನಾಟಕದಿಂದ ೨೦೦೦ ಜನ ಬಡ ಬಟ್ಟೆ ನೇಕಾರರು, ಹತ್ತಿ ಬೆಳೆಗಾರರು ಸರಕಾರದ ಧೋರಣೆಯಿಂದಾಗಿ ತಾವು ಪಡುತ್ತಿರುವ ಸಂಕಷ್ಟವನ್ನು ಸರಕಾರದ ಜತೆ ಚರ್ಚಿಸಲು ದೆಲ್ಲಿಗೆ ಬಂದು ಅವಕಾಶ ಸಿಗದೆ, ದೆಲ್ಲಿಯ ಬೀದಿಯಲ್ಲಿ ಧರಣಿ ಮುಷ್ಕರ ಹೂಡುತ್ತಿದ್ದರು. ನನ್ನನ್ನು ಅವರು ಕಾಣಲು ಅಪೇಕ್ಷಿಪಟ್ಟಾಗ, ನನ್ನ ಅಧಿಕಾರಿಗಳು ನಾನು ಅಲ್ಲಿ ಅವರನ್ನು ಸಂಧಿಸುವುದು ಸರಿಯಲ್ಲ ಎಂದು ಪ್ರತಿಬಂಧಿಸಿದರು. ಆಗ ನಾನು, 'ನಮಗೆ ಬುದ್ಧಿಹೇಳಲು ಬಂದ ಕೈಗಾರಿಕಾ ಪ್ರತಿನಿಧಿಗಳನ್ನು ನಾನು ಪಂಚತಾರಾ ಹೊಟೇಲಲ್ಲಿ ಸಂಧಿಸಬಹುದಾದರೆ, ಸಾವಿರಾರು ದುರ್ಬಲರನ್ನು ಬೀದಿಯಲ್ಲಿ ನೋಡುವುದು ಅಷ್ಟೇ ಪವಿತ್ರ ಕರ್ತವ್ಯ' ಎಂದು ಅಧಿಕಾರಿಗಳ ಎಚ್ಚರಿಕೆಯನ್ನು ತಿರಸ್ಕರಿಸಿ, ನೇಕಾರರ ಜತೆ ಮಾತನಾಡಿ, ಅವರ 'ಡೆಲಿಗೇಶನ್'ನ್ನು ಪ್ರಧಾನಿಯ ಬಳಿ ಒಬ್ಬ ವಿರೋಧ ಪಕ್ಷದ ನಾಯಕನಂತೆ ಕೊಂಡು ಹೋಗಿ ಅವರ ಮನವಿಯನ್ನು ಪ್ರಧಾನಿಗೆ ಒಪ್ಪಿಸಿದೆವು." ಎಂದು ಜಾರ್ಜ್ ನುಡಿದರು.

ಒಬ್ಬ ರಾಜಕಾರಣಿ ಬಡಜನರ ಶೋಷಣೆಯ ಅಸಂಖ್ಯ ಅದೃಶ್ಯ ಕೊಂಡಿಗಳನ್ನು ಈ ರೀತಿ ತಿಳಿಯಲು ಸಾಧ್ಯವಾದಾಗ ಈ ದೇಶವು 'ಸಮಸುಖೀ ರಾಜ್ಯ'ವಾದೀತು.

"ಬೃಹತ್ ಕೈಗಾರಿಕೆಗಳಿಂದ ಉದ್ಯೋಗಾವಕಾಶ ಹೆಚ್ಚಾಗುವ ಬದಲು ಕಡಿಮೆ ಆಗುವ ಸಂಭವವೇ ಹೆಚ್ಚು" ಎಂದು ನಮ್ಮ ರಾಜಕಾರಣಿಗಳು ತಿಳಿದಿರಬೇಕು. ಹಾಗಾಗಿ ನಮಗೆ ಮಧ್ಯಮ, ಮತ್ತು ಸಣ್ಣ ಕೈಗಾರಿಕೆಗಳ ಅಗತ್ಯವಿದೆ ಎಂಬುದನ್ನು ಗಾಂಧೀಜಿ ಬಾರಿ ಬಾರಿಗೆ ಹೇಳುತ್ತಿದ್ದರು. ಕೈಗಾರಿಕೆಗಳು ಬೇಕು ಆದರೆ ಕೈಗಾರಿಕೆಗಳು ಒಟ್ಟಾರೆಯಾಗಿ ಬೆಳೆದಾಗ, ಈ ಜನಸಂಪದ್ಭರಿತ ದೇಶದ ಉದ್ಯೋಗಾವಕಾಶವನ್ನು ಧ್ವಂಸ ಮಾಡುತ್ತದೆ. ಪ್ರತೀ ವರುಷ ನಿರುದ್ಯೋಗಿಗಳಾಗಿ ಮಾರುಕಟ್ಟೆಗೆ ಬರುವ ಯುವಕರಲ್ಲಿ, ೦.೩ ಶೇಕಡಾ ಉದ್ಯೋಗವನ್ನು ಮಾತ್ರ ಬೃಹತ್ ಕೈಗಾರಿಕೆಗಳನ್ನು ಸೃಷ್ಟಿಸುತ್ತಿವೆ. ಈ ದೇಶದ ಒಟ್ಟು ಉದ್ಯೋಗಾವಕಾಶದ ೯೨ ಶೇಕಡವು ಅಸಂಘಟಿತ ಚಿಕ್ಕ ಚಿಕ್ಕ ಕೈಗಾರಿಕಾ ಕ್ಷೇತ್ರ, ಗುಡಿ ಕೈಗಾರಿಕೆಗಳು, ಸೇವಾಕ್ಷೇತ್ರ, ಬೇಸಾಯ ಕ್ಷೇತ್ರದಲ್ಲೇ ನಿರ್ಮಾಣವಾಗುತ್ತಿದೆ. ಈ ಸರಳ ವಿಷಯವನ್ನು ಮಾನ್ಯ ಸಚಿವರು ತಿಳಿದಿರಬೇಕು.

**ಮುಕ್ತ ಸಂವಾದಕ್ಕಾಗಿ ಮಾನ್ಯ ಸಚಿವರಿಗೆ ಮನವಿ :** ಶ್ರೀ ಧನಂಜಯ ಕುಮಾರರಲ್ಲಿ ನಮ್ಮ

ಪ್ರಾರ್ಥನೆಯಿಷ್ಟೆ. ವಿಚಾರ ಮಂಥನದಿಂದ, ಪರಸ್ಪರ ತಿಳಿದುಕೊಳ್ಳುವುದರಿಂದ, ಸಂವಾದದಿಂದ ಮಾತ್ರ ಸಾಮಾನ್ಯ ಜನರನ್ನು ಬಲಿಷ್ಠ ಲಾಬಿಗಳಿಂದ ರಕ್ಷಿಸಲು ಸಾಧ್ಯ. ಪರಿಸರ ಕಾರ್ಯಕರ್ತರು, ವಿಜ್ಞಾನಿಗಳು, ಸಮಾಜಸೇವಾಕಾರ್ಯಕರ್ತರು ಮತ್ತು ರಾಜಕಾರಣಿಗಳ ನಡುವೆ ದಯವಿಟ್ಟು ಮುಕ್ತ ಸಂವಾದವೇರ್ಪಡಿಸಬೇಕು. ನಿಮ್ಮ ಅನುಕೂಲದ ಸಮಯಕ್ಕೆ, ಸ್ಥಳಕ್ಕೆ ನಾವು ಬರಲು ಸಿದ್ಧ. ಸಂವಾದದಿಂದ ನಮ್ಮಲ್ಲಿರುವ ದೋಷಗಳನ್ನು ನಾವು ತಿದ್ದಿಕೊಳ್ಳಬಹುದು. ನಾವು ಪರಸ್ಪರ ಅರಿಯಬಹುದು. ❐

# ಅಶ್ವತ್ಥಮರ ಉರುಳಿಸುವ ಮುನ್ನ

ನಂಬಿಕೆಯ ಪ್ರಶ್ನೆ

ಅಶ್ವತ್ಥಮರ ಭಾರತೀಯ ಸಂಸ್ಕೃತಿಯ ಅತ್ಯಂತ ಪವಿತ್ರ ಪ್ರತೀಕ. ಸನಾತನ ಧರ್ಮದ ಲಾಂಛನ. ಗೀತಾಚಾರ್ಯ ಕೃಷ್ಣ ಈ ವಿಶ್ವವನ್ನು ಅಶ್ವತ್ಥಕ್ಕೆ ಹೋಲಿಸುತ್ತಾನೆ (ಭಗವದ್ಗೀತೆ : ಅ. ೧೫ : ಶ್ಲೋಕ ೧-೪). "ವೃಕ್ಷಗಳಲ್ಲಿ ನಾನು ಅತ್ಯಂತ ಶ್ರೇಷ್ಠವಾದ ಅಶ್ವತ್ಥವಾಗಿದ್ದೇನೆ" ಎನ್ನುತ್ತಾನೆ. (ಅಶ್ವತ್ಥ: ಸರ್ವ ವೃಕ್ಷಾಣಾಂ" - ಗೀತೆ - ಅ. ೧೦ : ಶ್ಲೋಕ .೨೬)

"ಮನುಷ್ಯ ಹುಟ್ಟಿದರದಿನಿಂದ ಸಾಯುವವರೆಗೆ ಕೊನೆಯಪಕ್ಷ ಪ್ರತೀ ಐದು ವರ್ಷಕ್ಕೊಂದು ಗಿಡ ನೆಟ್ಟು ಈ ಭೂಮಿಯ ಋಣ ತೀರಿಸಬೇಕು ಎಂದು ಬುದ್ಧ ಸಾರುತ್ತಾನೆ.

ಒಂದು ಪ್ರಾರ್ಥನಾ ಶ್ಲೋಕ ಅಶ್ವತ್ಥ ವೃಕ್ಷವನ್ನು ಈ ರೀತಿ ವರ್ಣಿಸುತ್ತದೆ :

**ಮೂಲತೋ ಬ್ರಹ್ಮರೂಪಾಯ ಮಧ್ಯತ: ವಿಷ್ಣುರೂಪಿಣೇ ।**
**ಅಗ್ರತ: ಶಿವರೂಪಾಯ ವೃಕ್ಷರಾಜಾಯ ತೇ ನಮ: ॥**

"ಅಶ್ವತ್ಥ ಮೂಲದಲ್ಲಿ ಬ್ರಹ್ಮನೂ, ಮಧ್ಯೆ ವಿಷ್ಣುವೂ, ತುದಿಯಲ್ಲಿ ಈಶ್ವರನೂ ಸನ್ನಿಹಿತರಾಗಿದ್ದಾರೆ" ಎಂಬುದು ಹಿಂದೂ ನಂಬಿಕೆ. ಹಾಗಾಗಿಯೇ ಅಶ್ವತ್ಥವು ಪೂಜಾರ್ಹ ವೃಕ್ಷವೆಂದು ಪರಿಗಣಿಸಲ್ಪಟ್ಟಿದೆ. ಅಶ್ವತ್ಥದ ಬುಡಕ್ಕೆ ಕಟುಕ ಕೊಡಲಿಯಿಕ್ಕಿದರೆ ಬ್ರಹ್ಮನ ಕಾಲಿಗೇ ಕೊಡಲಿಯಿಕ್ಕಿದಂತೆ, ಮಧ್ಯದ ಗೆಲ್ಲುಗಳನ್ನು ಕತ್ತರಿಸಿದರೆ ವಿಷ್ಣುವಿನ

---

ಜನವಾಹಿನಿ, ಮಾರ್ಚ್ ೯, ೨೦೦೩

ಕೈಕಾಲು- ಅವಯವಗಳನ್ನೇ ಕತ್ತರಿಸಿದಂತೆ, ಅಶ್ವತ್ಥದ ತಲೆ ಹಾರಿಸುವುದೆಂದರೆ ಶಿವನ ರುಂಡವನ್ನು ಚೆಂಡಾಡಿದಂತೆ.

**ಅಶ್ವತ್ಥಮೇಕಂ ಪಿಚುಮಂದಮೇಕಂ ನ್ಯಗ್ರೋಧಮೇಕಂ ದಶಚಿಂಚಣೀಕಂ ।**
**ಕಪಿತ್ಥ ಬಿಲ್ವ ಆಮ್ಲಕಿ ತ್ರಯಾಂಚ ಪಂಚಾಮ್ರ ರೋಪಾ ನರಕಂ ನಪಶ್ಯೇತ್ ॥**

ಪವಿತ್ರ ವನಗಳಲ್ಲಿರಬೇಕಾದ ಮರಗಳನ್ನು ವರ್ಣಿಸುತ್ತಾ ನಮ್ಮ ಪ್ರಾಚೀನ ಗ್ರಂಥಗಳು, "ಅಶ್ವತ್ಥ -೧, ಪಿಚುಮಂದ (ಬೇವು)-೧, ನ್ಯಗ್ರೋಧ (ಆಲ) -೧, ಚಿಂಚಣಿ (ಹುಣಸೆ) ೧೦, ಕಪಿತ್ಥ (ಬೇಲ) - ೩, ಬಿಲ್ವ -೩, ಆಮ್ಲಕಿ (ನೆಲ್ಲಿ) - ೩, ಆಮ್ರ (ಮಾವು) -೫ - ಹೀಗೆ ೨೭ ಗಿಡಗಳನ್ನು ನೆಟ್ಟು, ಬೆಳೆಸಿದವನಿಗೆ ನರಕ ದರ್ಶನವಿಲ್ಲ" ಎಂದು ಸಾರುತ್ತವೆ. ಅಶ್ವತ್ಥವನ್ನು ಕಡಿದವನಿಗೆ ಬಿಡುಗಡೆಯೇ ಇಲ್ಲವೆಂದೂ ಎಚ್ಚರಿಸುತ್ತದೆ. ಮಕ್ಕಳಾಗದವರು ಅಶ್ವತ್ಥಕ್ಕೆ ಪ್ರದಕ್ಷಿಣೆ ಬಂದರೆ ಮಕ್ಕಳಾಗುವುದೆಂಬ ನಂಬಿಕೆ ಹಲವರಲ್ಲಿದೆ. ಶನಿಗ್ರಹದ ಗ್ರಹಚಾರಕ್ಕೆ ಅಶ್ವತ್ಥ ಪೂಜೆಯನ್ನು ಜ್ಯೋತಿಷ್ಯ ಫಲಶಾಸ್ತ್ರ ಹೇಳುತ್ತದೆ. ಅರಳೀ ಮರದ ಬುಡದಲ್ಲೇ ಬುದ್ಧನಿಗೆ ಜ್ಞಾನೋದಯವಾದದ್ದು ಕೂಡ. ರಾಮಕೃಷ್ಣ ಪರಮಹಂಸರಿಗೆ ಆಧ್ಯಾತ್ಮ ದರ್ಶನವಾದುದ್ದು, ಅಶ್ವತ್ಥ, ಆಲ, ನೆಲ್ಲಿ, ಬಿಲ್ವ, ಶಮೀ - ಹೀಗೆ ೫ ವೃಕ್ಷಗಳ ಸಮುಚ್ಚಯವಾದ ಪಂಚವಟಿಯಲ್ಲಿ. ಅಶ್ವತ್ಥದ ಸಮಿಧೆ (ಕಟ್ಟಿಗೆ) ಯಜ್ಞ-ಯಾಗ, ಹೋಮ-ಹವನಗಳಿಗಷ್ಟೇ ಉಪಯೋಗ. ಹಿಂದಿನ ಕಾಲದಲ್ಲಿ ಅಶ್ವತ್ಥ ಕಡಿಯುವುದಿರಲಿ, ಅಶ್ವತ್ಥಮರ ತುಳಿದುಹತ್ತಲೂ ಜನ ಹಿಂಜರಿಯುತ್ತಿದ್ದರು.

ವಾಸ್ತವ

ಇದು ಅಶ್ವತ್ಥದ ವೈಭವೀಕರಣವಲ್ಲ. ಈ ಹೆಚ್ಚಳಕ್ಕೆ ಕಾರಣವೂ ಇದೆ. ನೀರಿಲ್ಲದ ಬರಡು ಭೂಮಿಯಲ್ಲೂ ದಷ್ಟಪುಷ್ಟವಾಗಿ ಬೆಳೆದು ನೂರಾರು ವರ್ಷಗಳ ಕಾಲ ಬಾಳಿ ಬದುಕುವ ಅಶ್ವತ್ಥದ ಬೇರುಗಳು ಭೂಮಿಯ ಆಳಕ್ಕೆ ವಿಶಾಲವಾಗಿ ಹಮ್ಮಿಕೊಂಡು, ನೆಲದ ಮೇಲೆ ಬಿದ್ದ ಮಳೆಯನ್ನು ಹರಿದು ಸಮುದ್ರ ಪಾಲಾಗದಂತೆ ತನ್ನ ಬೇರುಗಳಿಂದ ತಡೆದು ಭೂಮಿಯ ಆಳಕ್ಕೆ ಹಿಂಗಿಸುವ ಮೂಲಕ ಭೂಮಿಯ ಅಂತರ್ಜಲದ ಒರತೆಗಳನ್ನು ಹೆಚ್ಚಿಸುತ್ತದೆ. ಬಿರುಸಾದ ಮಳೆಯಲ್ಲಿ ಫಲವತ್ತಾದ ಮಣ್ಣು ಕೊರೆದು ಕೊಚ್ಚಿಕೊಂಡು ಹೋಗದಂತೆ, ಛಲ್ಲೆಯಂತೆ ದಟ್ಟವಾಗಿ ಹೆಣೆದುಕೊಂಡಿರುವ ಬೇರುಗಳು ತಡೆಯುತ್ತವೆ. ಬಂಡೆಕಲ್ಲುಗಳಿಂದಲೇ ತುಂಬಿದ ಕಠಿಣ ಭೂಮಿಯನ್ನೂ ಅಶ್ವತ್ಥದ ಬೇರುಗಳು ಪುಡಿಪುಡಿ ಮಾಡಿ ಫಲವತ್ತಾದ ಮಣ್ಣಾಗಿ ಪರಿವರ್ತಿಸುತ್ತದೆ.

ಅಶ್ವತ್ಥಮರ, ಇತರ ಮರಗಳಿಗಿಂತ ಹತ್ತುಪಟ್ಟು ಹೆಚ್ಚು ಆಮ್ಲಜನಕವನ್ನು ಉತ್ಪಾದಿಸುವ ಮೂಲಕ, ತನ್ನ ಒಟ್ಟು ಆಯಸ್ಸಿನಲ್ಲಿ, 85 ವರ್ಷ ಕಾಲ ಬದುಕುವ ಸುಮಾರು 100 ಮಂದಿ ಮನುಷ್ಯರಿಗೆ ಜೀವನವಿಡೀ ಉಸಿರಾಡಲು ಬೇಕಾಗುವಷ್ಟು ಆಮ್ಲಜನಕ ಒದಗಿಸುತ್ತದೆ. ನಗರಮಧ್ಯಗಳಲ್ಲಿರುವ ಅಶ್ವತ್ಥ ಮರ, ಕಾರು ಬಸ್ಸುಗಳು ಉಗುಳುವ ಹೊಗೆಯಿಂದ ಆಗುವ ವಾಯು-ಮಾಲಿನ್ಯವನ್ನು ನಿವಾರಿಸುವ ಜೊತೆ, ಶಬ್ದ ಮಾಲಿನ್ಯವನ್ನೂ ಹೀರಿಕೊಂಡು ನಮ್ಮ

ಆರೋಗ್ಯವನ್ನು ಪೂರೆಯುತ್ತದೆ. ಈ ಎಲ್ಲಾ ಉಪಯೋಗಗಳನ್ನು ಲೆಕ್ಕಹಾಕಿ ಒಬ್ಬ ವಿಜ್ಞಾನಿ ಅಶ್ವತ್ಥ ಮರದ ಬೆಲೆ ೩೩೦ ಕೋಟಿ ಡಾಲರುಗಳೆಂದು ಅಂದಾಜು ಮಾಡಿದ್ದ!

ಈ ಮರದ ಪ್ರತಿಯೊಂದು ಅವಯವವೂ ಮದ್ದಿನ ಗುಣ ಹೊಂದಿದ್ದು, ಆರೋಗ್ಯ ವರ್ಧಕವಾಗಿದೆ. ಅಶ್ವತ್ಥದ ಎಲೆ ಹಾಕಿ ಕುದಿಸಿದ ನೀರು, ಅಕ್ವಾಗಾರ್ಡ್ ಅಥವಾ ಫಿಲ್ಟರ್‌ನಿಂದ ಶುದ್ಧೀಕರಿಸಿದ ನೀರಿಗಿಂತಲೂ ಪರಿಶುದ್ಧವಾಗಿರುತ್ತದೆ. ಅಶ್ವತ್ಥದ ಎಲೆ ನಮ್ಮ ರಕ್ತ ಶುದ್ಧಗೊಳಿಸುತ್ತದೆ. ಚರ್ಮ ಕಾಯಿಲೆ ನಿವಾರಿಸುತ್ತದೆ.

ಅಶ್ವತ್ಥಮರದ ಗಾಳಿ ವಾತಾವರಣದಲ್ಲಿಲ್ಲದಿದ್ದರೆ, ಯಾವುದೇ ಬೀಜ ತನ್ನ ಮೊಳೆಯುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ ಎಂದು ವೃಕ್ಷಾಯುರ್ವೇದದಲ್ಲಿ ಉಲ್ಲೇಖಿಸಿದೆ.

ಸದಾ ಚಲನಶೀಲವಾದ ಅಶ್ವತ್ಥ ಮರವು ನೋಡಿನೋಡಿದಷ್ಟೂ ಬೆರಗು ಹುಟ್ಟಿಸುತ್ತದೆ. ಅಶ್ವತ್ಥದ ಹಣ್ಣು ಅಸಂಖ್ಯ ಹಕ್ಕಿಗಳು ಆಹಾರ, ಆಶ್ರಯಸ್ಥಾನ. ಬೇರೆಲ್ಲ ಮರಗಳಿಗಿಂತ ಸುಮಾರು 10ಪಟ್ಟು ಹೆಚ್ಚು ಎಲೆಗಳಿರುವ ಈ ಮರ ವರ್ಷವರ್ಷವೂ ಚಿಗುರುತ್ತಿರುವಾಗ ರಕ್ತ ಕೆಂಪಿನಿಂದ ಕಂಗೊಳಿಸುತ್ತಿರುತ್ತದೆ. ಮುಂದೆ ಎಳೆ ಹಸುರಿಗೆ ತಿರುಗಿ ಹಸುರು ರಥದಂತೆ ಜೀವಸೆಲೆಯ ಸಂಕೇತವಾಗಿ ಮೆರೆಯುತ್ತದೆ. ಒಂದೊಂದು ಅಶ್ವತ್ಥಮರ ಒಂದೊಂದು ಕಾಲದಲ್ಲಿ ಚಿಗುರುವ ಸೌಂದರ್ಯವನ್ನು ಕಣ್ಣಿದ್ದವನು ಗಮನಿಸದಿರಲಾರ. ಋಷಿಮುನಿಗಳ, ಕವಿಗಳ, ಬೇಸಾಯಗಾರರ, ಹಳ್ಳಿಯ ಶ್ರಮಿಕರ, ಸಮಸ್ತ ಜನರ ಸ್ಫೂರ್ತಿಯ ಸೆಲೆಯಾದ ಅಶ್ವತ್ಥದ ಬುಡಕ್ಕೆ ಕೊಡಲಿ ಏಟು ಹಾಕುವುದು ಪಾಪದ ಕೆಲಸ. ಹಣದ ದುರಾಸೆ ಮಾತ್ರ ಈ ಕೆಟ್ಟ ಕೆಲಸವನ್ನು ನಮ್ಮಿಂದ ಮಾಡಿಸಬಲ್ಲುದು.

**ಹಸುರು ಅನುಶಾಸನ : ಅಗತ್ಯ**

ಭೂಮಿಯ ಗರ್ಭದಲ್ಲಿರುವ ಕಲ್ಲಿದ್ದಲು, ಪೆಟ್ರೋಲು, ಬಂಡೆಕಲ್ಲು, ಮುರಕಲ್ಲು, ವಿವಿಧ ಖನಿಜಗಳೇ ಮೊದಲಾದ ಅನರ್ಘ್ಯ ಸಂಪತ್ತಿನ ದಾಸ್ತಾನು ಒಮ್ಮೆ ಬರಿದಾದರೆ ಅವನ್ನು ನಾವು ಮತ್ತೆ ಮರಳಿ ಪಡೆಯಲಾರೆವು. ಅವು ಶಾಶ್ವತವಾಗಿ ಭೂಮಿಯಿಂದ ಮರೆಯಾಗುತ್ತವೆ. ಆದರೆ ಸಸ್ಯ ಸಂಪತ್ತು ಹಾಗಲ್ಲ. ಕಡಿಕಡಿದಷ್ಟು ಮತ್ತೆ ಹುಟ್ಟಿಕೊಳ್ಳುವಂಥವುಗಳು. ಹಾಗಾಗಿ ಮರಗಳನ್ನು ಕಡಿಯಲೇಬಾರದು ಎನ್ನುವುದು ಮೂರ್ಖತನವಾದೀತು. ಒಬ್ಬ ಬಡರೈತ ಹೊಟ್ಟೆಪಾಡಿಗಾಗಿ ತನ್ನ ಚಿಕ್ಕ ಖಾಸಗೀ ಜಾಗದಲ್ಲಿ, ಆರ್ಥಿಕವಾಗಿ ಹೆಚ್ಚು ಪ್ರಯೋಜನವಿರುವ ಮರ ಬೆಳೆಸಲು, ಅಥವಾ ಕೃಷಿಮಾಡಲು ಅಥವಾ ಮನೆಕಟ್ಟಲು ಇದ್ದ ಮರಗಳನ್ನು ಕಡಿಯುವುದು ಅನಿವಾರ್ಯ ವಾದೀತು. ಮನೆ, ಮಠ, ಮಂದಿರ, ಮಸೀದಿ, ಚರ್ಚು, ಭೂತಾಲಯಗಳನ್ನು ಕಟ್ಟಲು ಮರಗಳ ಆವಶ್ಯಕತೆಯಿದೆ. ಬಡವನಿಗೆ ದಿನನಿತ್ಯದ ಗಂಜಿ ಬೇಯಿಸಲು ಉರುವಲಾಗಿ ಕೂಡ ಕಟ್ಟಿಗೆ ಬೇಕು. ಆದರೆ ಮರಗಳನ್ನು ಉಪಯೋಗಿಸಲಿಕ್ಕೊಂದು "ಹಸುರು ನೀತಿ" ಬೇಕು. ಯಾವ ಮರ ಕಡಿಯಬಹುದು? ಎಷ್ಟು ಕಡಿಯಬಹುದು? ಯಾಕಾಗಿ ಕಡಿಯಬಹುದು ? ಕಡಿದಷ್ಟೇ ಹೊಸ ಮರಗಳನ್ನು ನೆಡುವ ಕಾರ್ಯಯೋಜನೆಯಿದೆಯೇ? - ಮುಂತಾದ ನೈತಿಕ ಪ್ರಶ್ನೆಗಳಿಗೆ ಉತ್ತರ ನೀಡುವ "ಹಸುರು ಕಾನೂನೊಂದು"ಇರಬೇಕು.

ಮುಖ್ಯವಾಗಿ ಸಾರ್ವಜನಿಕ ಸ್ಥಳದಲ್ಲಿರುವ ಅಲ್ಪಸ್ವಲ್ಪ ಮರಗಳನ್ನು ಒಟ್ಟಾರೆ ಕಡಿಯುವ ಮೊದಲಂತೂ ನೂರು ಬಾರಿ ಯೋಚಿಸಬೇಕು. ಜಗತ್ತಿನಾದ್ಯಂತ ಸಸ್ಯ ಸಂಪತ್ತು ತಡೆಯಿರದೆ ನಾಶವಾಗುತ್ತಿರುವಾಗ, ಸಾರ್ವಜನಿಕ ಸ್ಥಳಗಳಲ್ಲಿ ಹಸಿರು ಶ್ವಾಸಕೋಶಗಳಂತಿದ್ದು ನಮ್ಮ ಆರೋಗ್ಯ ಕಾಯುವ ಮರಗಳನ್ನೂ ಕಡಿದುರುಳಿಸಲು ನಮಗೆ ಮನಸ್ಸು ಹೇಗೆ ಬಂದೀತು ?

**ಸಾಂಸ್ಕೃತಿಕ ಅನುಶಾಸನ**

ಈ ಭೂಮಿ ಯಾರಿಗೂ ಸೇರಿದ್ದಲ್ಲ. ಇದು ನಿನ್ನ ನನ್ನದಾಗಿರಲಿಲ್ಲ. ಇಂದು 'ನನ್ನದು' ಎಂದು ಬಿಂಕದಿಂದ ನುಡಿಯುವ ಈ ತುಂಡು ಭೂಮಿಯನ್ನು, ಹಿಂದೆ ಅನೇಕ ಜನ "ನನ್ನದು", "ನನ್ನದು" ಎಂದು ಹೇಳುತ್ತಲೇ ಬಂದು, ಮಣ್ಣುಪಾಲಾಗಿದ್ದಾರೆ. ಇಂದು ನಾನು ಈ ನೆಲವನ್ನು "ನನ್ನದು" ಎನ್ನುತ್ತಿದ್ದೇನೆ. ಆದರೆ ನಾಳೆ ನಾನೂ ಮಣ್ಣುಪಾಲಾಗುತ್ತೇನೆ. ನಾಳೆ ಇನ್ನೊಬ್ಬ ಈ ನೆಲವನ್ನು "ನನ್ನದು" ಎನ್ನುತ್ತಾನೆ. ಆದರೆ ಭೂಮಿ ಯಾರದ್ದೂ ಆಗಿರದೆ ಕೇವಲ ಇರುತ್ತದೆ.

ಹಾಗಾಗಿ ಭೂಮಿ 'ಎಲ್ಲರಿಗೂ ಸೇರಿದ್ದು', 'ಮುಂದಿನ ಪೀಳಿಗೆಗೂ ಸೇರಿದ್ದು' ಎಂಬ ಭಾವನೆಯಿಂದ ನಮ್ಮ ಆವಶ್ಯಕತೆಗೆ ತಕ್ಕಷ್ಟೇ ಭೋಗಿಸುವ ವಿವೇಕ ತೋರಬೇಕು. ಇಂದು ನಾನು ಆವಶ್ಯಕತೆಗಿಂತ ಹೆಚ್ಚಿನ ದುರಾಸೆಯಿಂದ ಭೋಗಿಸುವುದು, ಮುಂದಿನ ಪೀಳಿಗೆಯ- ಹಕ್ಕನ್ನು ಕಸಿದುಕೊಂಡಂತೆ. ಇದು ಅಧರ್ಮ, ಪಾಪದ ಕೆಲಸ. ಉಪನಿಷತ್ ಋಷಿಗಳು ಕಂಡ "ಮಾಗೃಧಃ ಕಸ್ಯಸ್ವಿದ್ಧನಮ್" ಎಂಬ ಸತ್ಯ ಸಾರುವುದು ಇದನ್ನೆ. ಗಾಂಧೀಜಿಯವರು, "ಭೂಮಿ ನಮ್ಮ ದುರಾಸೆಯನ್ನು ತಣಿಸಲು ಅಕ್ಷಯ ಪಾತ್ರೆಯೇನಲ್ಲ" ಎಂದು ಹೇಳುವುದೂ ಇದನ್ನೆ.

ಸಾರ್ವಜನಿಕ ಸ್ಥಳದಲ್ಲಿರುವ ಮರಗಳನ್ನು ಮುಖ್ಯವಾಗಿ ಅಶ್ವತ್ಥ, ಆಲ, ಧೂಪ, ಹುಣಸೆ ಮುಂತಾದ ಹೆಮ್ಮರಗಳನ್ನು ಬುಜುಬಿ ಕಾರಣಕ್ಕಾಗಿ ಕಡಿಯುವುದು ಘೋರ ಅಪರಾಧ. ಅಶ್ವತ್ಥ ಮರ ಮನೆಗಳ ಮೇಲೆ ಉರುಳಿ ಬಿದ್ದ ನಿದರ್ಶನವೇ ಇಲ್ಲದಿರುವಾಗ ಅರಣ್ಯ ಇಲಾಖೆಗಾದರೂ ಈ ಬಗ್ಗೆ ವಿವೇಕ ಬೇಕು. ಅಜ್ಞಾನವೇ ಅರಣ್ಯ ಇಲಾಖೆಗೆ ಮಾನದಂಡನಾಗಬಾರದು. ರಾಜಕಾರಣಿಗಳ ಜತೆ ಶಾಮೀಲಾಗುವ ಎಚ್ಚರ ತಪ್ಪಿದ ಒಬ್ಬ ಅರಣ್ಯ ಇಲಾಖಾಧಿಕಾರಿ ಉಳಿದ ಪ್ರಾಮಾಣಿಕ ಅಧಿಕಾರಿಗಳಿಗೆ ಕಳಂಕ ಹಚ್ಚುವ ಜೊತೆ, ಸಮಸ್ತ ಜೀವಜಾಲಕ್ಕೂ ಕಂಠಕ ಪ್ರಾಯನಾಗುತ್ತಾನೆ. ❒

# ಕಾಡನ್ನು ಸೀಳಿ ಮುನ್ನುಗ್ಗಿದ ಪೈಪ್‌ಲೈನ್

ಭೂಮಿಯ ಯಾವ ಎಚ್ಚರದ ಕರೆಗಂಟೆಯನ್ನು ಆಲಿಸದಷ್ಟು ದುರಾಸೆಯನ್ನು ಬೆಳೆಸಿಕೊಂಡಿದ್ದೇವೆ ನಾವು. ನಮ್ಮ ಅಜ್ಞಾನ-ಭಂಕಗಳು ದುರಾಕ್ರಮಣಕ್ಕೆ ಭಾರತದ ಸಂವಿಧಾನದ ಯಾವ ರಕ್ಷಣೆಯೂ ಎದುರಿಲ್ಲ. ನಮ್ಮ ಜನಪ್ರತಿನಿಧಿಗಳೆನಿಸಿಕೊಂಡವರ ಮೌಢ್ಯದ ಅಭಿವೃದ್ಧಿ ರಥ ಯಾವುದನ್ನು ತಾನೇ ಉಳಿಸೀತು ? ನಮ್ಮನ್ನು ಸಲಹುವ ಮಣ್ಣು, ನೀರು, ಗಾಳಿ, ಕಾಡು-ಮೇಡು, ಪಶು, ಪಕ್ಷಿ, ಮನುಷ್ಯ, ಹಾಗೆಯೇ ಸಾಮಾಜಿಕ ನ್ಯಾಯ, ಸಮತೆ, ಬಹುಜನ ಹಿತ ಮೊದಲಾದ ಪ್ರಜಾಸತ್ತಾತ್ಮಕ ಮೌಲ್ಯಗಳು - ಎಲ್ಲವೂ ಈ ಅಭಿವೃದ್ಧಿ ಯಜ್ಞದಲ್ಲಿ ಉರಿದು ಬೂದಿಯಾಗುವ ಯಜ್ಞಪಶುಗಳು. ತಪ್ಪು ಅಭಿವೃದ್ಧಿ ಮಾಡೆಲ್‌ಗಳ ಉಸ್ತುವಾರೀ ಪ್ರತಿನಿಧಿಗಳು ಈ ಗ್ರಾಮೀಣ ಭಾರತದಲ್ಲಿ ವಾಸಿಸುವ ಕೋಟ್ಯಂತರ ಜನರಿಗೆ ಧ್ವನಿ ಕೊಡುವ ಏಕೈಕ ವ್ಯವಸ್ಥೆಯಾದ ಅತ್ಯಂತ ಪವಿತ್ರವಾದ ಗ್ರಾಮ ಪಂಚಾಯತುಗಳ ಧ್ವನಿಯನ್ನೇ ಹತ್ತಿಕುತ್ತಾ, ಆ ಮೂಲಕ ನಮ್ಮ ಸಂವಿಧಾನದ ಜನಪರ ಆಶಯಗಳನ್ನೇ ಹೊಸಕಿ ಹಾಕುತ್ತಿದ್ದಾರೆ.

ಮಂಗಳೂರಿನಿಂದ ಬೆಂಗಳೂರಿಗೆ ತೈಲೋತ್ಪನ್ನ ಸಾಗಣೆಗಾಗಿ ಹಾಕಲು ಆರಂಭಿಸಿದ "ಎಚ್.ಪಿ.ಸಿ.ಎಲ್. ಪೈಪು ಲೈನ್" ಪಂಚಾಯತುಗಳ, ವಿಜ್ಞಾನಿಗಳ, ವಿಷಯ ತಜ್ಞರ, ಸ್ಥಳೀಯ ಜನರ ಯಾರ ಎಚ್ಚರಿಕೆಯನ್ನೂ ಲೆಕ್ಕಿಸದೆ, ಜಗತ್ತಿನ ೧೮ ಅತೀ ಸೂಕ್ಷ್ಮ ಪರಿಸರಗಳಲ್ಲಿ ಒಂದಾದ ಪಶ್ಚಿಮಘಟ್ಟದ ಗೊಂಡಾರಣ್ಯವನ್ನು ೩೦ ಮೀಟರ್

---

ಹೊಸದಿಗಂತ, (ದೈನಿಕ) ಮಂಗಳೂರು, ಫೆಬ್ರವರಿ ೨೬, ೨೦೦೧

ಅಗಲದಲ್ಲಿ ಸೀಳುತ್ತಾ ಆಕ್ರಮಣಕಾರಿಯಾಗಿ ಮುನ್ನುಗ್ಗುತ್ತಿದೆ. ಲಕ್ಷಾಂತರ ಮರಗಳನ್ನು ಈಗಾಗಲೇ ನಾಶಮಾಡಿ ಭೂಗರ್ಭದಡಿ ಸೇರಿಸಿಯಾಗಿದೆ. ಆನೆಗಳ ಅಭಯಾರಣ್ಯದ ಪ್ರದೇಶದಲ್ಲಿ ಅಗತ್ಯವಾದ ಬಿದುರಿನ ಹಿಂಡುಹಿಂಡುಗಳನ್ನೇ ನಾಶಮಾಡಿ ನೂರಾರು ಟ್ರಕ್ಕುಗಳಲ್ಲಿ ಸಾಗಿಸುವ ಕೈಂಕರ್ಯ ಸಾಗಿದೆ. ಅನೇಕ ಪ್ರಮುಖ ಪರಿಸರ ಕಾರ್ಯಕರ್ತರ ವಿನಂತಿಯ ಮೇರೆಗೆ ಮಾನ್ಯ ಪ್ರಧಾನ ಮಂತ್ರಿ ಶ್ರೀ ವಾಜಪೇಯಿಯವರು 'ಈ ಬಗ್ಗೆ ಕೂಲಂಕಷ ಅಧ್ಯಯನ ನಡೆಸುತ್ತೇನೆ' ಎಂದು ಆಶ್ವಾಸನೆಯಿತ್ತಿದ್ದರೂ ಅದು ಇಂದು ಸುಳ್ಳಾಗುತ್ತಿದೆ.

ಒಂದು ಮರ ಕಡಿದರೆ ಹತ್ತು ಮಕ್ಕಳನ್ನು ಕೊಂದಷ್ಟು ಪಾಪವೆಂದು ಸಾರುವ ನಮ್ಮ ಸಂಸ್ಕೃತಿಯ ನೆಲದಲ್ಲಿ ಈ ರೀತಿ, ವಿವೇಚನೆಯಿಲ್ಲದೆ ಸಾವಿರಾರು ಮರಗಳು ಉರುಳುವುದನ್ನು ಕಂಡಾಗ ಸಂಕಟವಾಗುತ್ತದೆ.

**ಸಂವಿಧಾನಕ್ಕೆ ಅಪಚಾರ**

ಯಾವುದೇ ಒಂದು ಪ್ರದೇಶದಲ್ಲಿ ಏನೇ ಅಭಿವೃದ್ಧಿ ಯೋಜನೆ ಜ್ಯಾರಿಗೊಳಿಸಬೇಕಾದರೂ, ಮೊತ್ತಮೊದಲು ಅಲ್ಲಿನ ಸ್ಥಳೀಯ ಪಂಚಾಯತಿನ ಅನುಮತಿ ಬೇಕೆಂದು ಇತ್ತೀಚಿನ ಸಂವಿಧಾನ ತಿದ್ದುಪಡಿ ಕಲಮುಗಳು ಹೇಳುತ್ತವೆ. ಹಾಗಾಗಿಯೇ ಗೋವಾದಲ್ಲಿ ಅಮೇರಿಕಾದ ಬಲಿಷ್ಠ ಬಹುರಾಷ್ಟ್ರೀಯ ಕಂಪೆನಿ 'ದು ಪಾಂಟ್'ಗೆ ಅಲ್ಲಿನ ಸ್ಥಳೀಯ ಪಂಚಾಯತಿನ ವಿರೋಧದಿಂದಾಗಿ ತನ್ನ ಘಟಕವನ್ನು ಸ್ಥಾಪಿಸಲಾಗಲಿಲ್ಲ. ಆದರೆ ಈ ದಕ್ಷಿಣ ಕನ್ನಡ - ಉಡುಪಿ ಜಿಲ್ಲೆಗಳಲ್ಲಿ ಅಭಿವೃದ್ಧಿ ಸಂಕೀರ್ತನಕಾರರಿಗೆ ಯಾವ ಕಾನೂನೂ ಲಗಾವಾಗುವುದಿಲ್ಲ. ಪೈಪುಲೈನು ಹಾದು ಹೋಗುವ ಹಳ್ಳಿಗಳಲ್ಲಿರುವ ೨೩ ಪಂಚಾಯತುಗಳಲ್ಲಿ ೨೧ಪಂಚಾಯತುಗಳು, "ಈ ಯೋಜನೆಯು ಸಂಪೂರ್ಣ ಜನವಿರೋಧಿ ಆಗಿರುವುದರಿಂದ, ಪಂಚಾಯತು ಈ ಯೋಜನೆಯನ್ನು ವಿರೋಧಿಸುತ್ತದೆ" ಎಂದು ಠರಾವು ಪಾಸು ಮಾಡಿದ್ದರೂ ಕೂಡ, ಇದಕ್ಕೆ ಕಿಮ್ಮತ್ತೂ ಬೆಲೆಕೊಡದೆ, ಜನರ ಆಶಯಗಳನ್ನೆಲ್ಲಾ ಗಾಳಿಗೆ ತೂರಲಾಗುತ್ತಿದೆ.

ಈ ಬಗ್ಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ 'ಸಾರ್ವಜನಿಕ ಆಲಿಕೆ' ಸಭೆಯಲ್ಲಿ, ಸಾರ್ವಜನಿಕರು ಕೇಳಿದ ಒಂದು ಪ್ರಶ್ನೆಗೂ ಸರಿಯಾದ ಉತ್ತರ ನೀಡಲಾಗಲಿಲ್ಲ. ಸಾರ್ವಜನಿಕ ಆಲಿಕೆ ಸಭೆಯ ಮಾಹಿತಿಯನ್ನು ಗ್ರಾಮ ಪಂಚಾಯತುಗಳಿಗೆ ಒದಗಿಸದೆ, ಜನರನ್ನು ಕತ್ತಲಲ್ಲಿಡಲಾಗಿದೆ. ಪೈಪುಲೈನು ಪ್ರದೇಶವನ್ನು "ಸೆಟಲೈಟ್ ಸರ್ವೇ" ಮೂಲಕ ಗುರುತಿಸಲಾಗಿದೆಯೇ ವಿನಾ, ಸ್ಥಳದಲ್ಲಿ ಸರ್ವೇ ನಡೆಯಲಿಲ್ಲ. ಹಾಗಾಗಿ ಅದು ಅನೇಕ ತಪ್ಪು, ವಿರೋಧಾಭಾಸ ಮಾಹಿತಿಗಳನ್ನು ಹೊಂದಿದೆ. ಈ 'ಕಪೋಲ ಕಲ್ಪಿತ' ವರದಿಯಲ್ಲಿ ಪೈಪುಲೈನು ಹಾದು ಹೋಗುವ ಪಶ್ಚಿಮಘಟ್ಟ ಭಾಗದಲ್ಲಿ ಬರೀ ಹುಲ್ಲು, ಭರ್ಲ್ಲ ಮಾತ್ರ ಇದೆ ಎಂದು ಉಲ್ಲೇಖಿಸಲಾಗಿದೆ. ದ.ಕ. ಜಿಲ್ಲಾ ಸಾರ್ವಜನಿಕ ಸಭೆಯಲ್ಲಿ ನೀಡಿದ ಆಕ್ಷೇಪಣೆ ಅರ್ಜಿಗಳನ್ನು ಪ್ರತ್ಯೇಕವಾಗಿ ಗ್ರಾಮಗಳಲ್ಲಿ ವಿಚಾರಣೆ ನಡೆಸಲಾಗಿದೆ ಎಂದಿದ್ದಾರೆ. ಆದರೆ ಇಂಥ ವಿಚಾರಣೆಗಳೇ ನಡೆಯಲಿಲ್ಲ ಮಾತ್ರವಲ್ಲ, ಈ ವರದಿಯನ್ನು ಗ್ರಾಮಪಂಚಾಯತುಗಳ ಜತೆಯೂ ಚರ್ಚಿಸಿಲ್ಲ.

**ಕಾನೂನುಗಳೆಲ್ಲ ಕಸದ ತೊಟ್ಟಿಗೆ**

ಯೋಜನಾ ಆಯೋಗದ ಹೇಳಿಕೆಯಂತೆ ಒಂದು ಮೂಲಭೂತ ವ್ಯವಸ್ಥೆಯ (infrastructure) ಪೂರ್ಣ ಬಳಕೆಯಾಗದೆ ಇನ್ನೊಂದು ವ್ಯವಸ್ಥೆ ರೂಪಿಸಕೂಡದು. ಅದೊಂದು ರಾಷ್ಟ್ರೀಯ ನಷ್ಟ. ಹಾಗಿರುವಾಗ ರೈಲ್ವೆಯಲ್ಲಿ ತೈಲಸಾಗಾಟ ಸಾಗಣೆ ಸಾಧ್ಯವಿರುವಾಗ (ಅದೂ ಕೂಡ ೨೦೦ಕೋಟಿ ರೂಪಾಯಿ ವೆಚ್ಚದಲ್ಲಿ ಬ್ರಾಡ್‌ಗೇಜ್ ಹಾಕಿ), ಆ ವ್ಯವಸ್ಥೆಯನ್ನು ಬಳಸದೆ ಇನ್ನೊಂದು ವ್ಯವಸ್ಥೆಯನ್ನು ರೂಪಾಯಿ ೧,೫೦೦ ಕೋಟಿ ರೂಪಾಯಿ ವೆಚ್ಚದಲ್ಲಿ ರೂಢಿಸುವುದು ಕಾನೂನು ಬಾಹಿರ ಮಾತ್ರವಲ್ಲ, ಈ ಬಡದೇಶದ ಬೊಕ್ಕಸದ ಲೂಟಿ ಎಂದೇ ಹೇಳಬಹುದು. ಈ ಉದ್ದೇಶಕ್ಕಾಗಿಯೇ ರೈಲ್ವೆ ಬ್ರಾಡ್‌ಗೇಜ್ ಹಾಕಲು ಮೀಟರ್‌ಗೇಜನ್ನು ಕಿತ್ತು ಹಾಕಲಾಯಿತು. ಈಗ ಇದಕ್ಕೆ ೨೦೦ ಕೋಟಿ ರೂ. ಹಣವಿಲ್ಲವೆಂದು ಸಬೂಬು ಹೇಳಿ ವರುಷಗಟ್ಟಲೆ ವಿಳಂಬ ಮಾಡಲಾಗುತ್ತಿದೆ.

**ರೈಲು ಅಧಿಕಾರಿಗಳ ಅಭಿಪ್ರಾಯ**

ರೈಲ್ವೆ ಮೂಲಕ ಎಂ. ಆರ್. ಪಿ. ಎಲ್. ತೈಲೋತ್ಪನ್ನಗಳನ್ನು ಸಾಗಿಸಲು ಸಾಧ್ಯವೆಂದು ರೈಲ್ವೇ ಅಧಿಕಾರಿಗಳು ಹಿಂದಿನಿಂದ ಹೇಳುತ್ತಾ ಬಂದಿದ್ದಾರೆ. ಈ ಬಗ್ಗೆ ಅದರ ಅಧಿಕಾರಿ, ಎಸ್. ಮಧುಸೂದನ ರಾವ್, ಡೈರೆಕ್ಟರ್, ಟ್ರಾಫಿಕ್ ಟ್ರಾನ್ಸ್‌ಪೋರ್ಟೇಶನ್ ಇವರು ಎಚ್.ಪಿ.ಸಿ.ಎಲ್. ರವರಿಗೆ ತಾ. ೩.೩.೧೯೯೯ರಂದು ಬರೆದ ಪತ್ರದಲ್ಲಿ ವಿವರಿಸಿದ್ದಾರೆ. ಇತ್ತೀಚೆಗೆ (೨೧.೯.೨೦೦೦) ರೈಲ್ವೇ ಉನ್ನತ ಅಧಿಕಾರಿಗಳಾದ ಪಾಲ್ಘಾಟ್ ಡಿವಿಜನಿನ ಮುಖ್ಯಸ್ಥರು ಈ ಬಗ್ಗೆ ಪುನಃ ಸ್ಪಷ್ಟ ಪಡಿಸುತ್ತಾ, ೯ ಮಿಲಿಯ ಟನ್ ಮಾತ್ರವಲ್ಲ ೧೫ರಿಂದ ೨೦ ಮಿಲಿಯ ಟನ್ ಕೂಡಾ ಸಾಗಿಸಬಹುದೆಂದು ಹೇಳಿದ್ದಾರೆ. ಎತ್ತರ ಪ್ರದೇಶದಲ್ಲಿ ಹೋಗಲು ತಾಂತ್ರಿಕವಾಗಿ ಹೈಪವರ್ 'ಲೋಕೋ' ಬಳಸಲಾಗುತ್ತದೆ ಎಂದಿದ್ದಾರೆ. ೪,೦೦೦ ಮೀಟರ್ ಎತ್ತರದಲ್ಲಿರುವ ಬೆಂಗಳೂರಿಗೆ ಪೈಪಿನಲ್ಲಿ ಸಾಗಿಸಲು ಬೇಕಾದ ಒತ್ತಡಕ್ಕೆ ಖರ್ಚಾಗುವ ಇಂಧನ ಶಕ್ತಿ ಅಗಾಧ ಮತ್ತು ಇದು ಅವೈಜ್ಞಾನಿಕ ಎಂದು ವಿಷಯತಜ್ಞರು ಹೇಳುತ್ತಾರೆ.

**ರಾಜಕೀಯ ನಿರ್ಧಾರ**

ಜಿಲ್ಲಾ ಉಸ್ತುವಾರಿ ಸಚಿವರು ೧೮.೯.೨೦೦೦ದಂದು ಪಂಚಾಯತು ಅಧ್ಯಕ್ಷರ ಸಭೆ ಕರೆದು ಚರ್ಚಿಸಿದಾಗ ರೈಲ್ವೆ ಅಧಿಕಾರಿಗಳ ಸಭೆ ಕರೆಯಲಾಗುವುದಾಗಿಯೂ, ರೈಲ್ವೆಯಿಂದ ತೈಲಸಾಗಣೆ ಸಾಧ್ಯವಿಲ್ಲದಿದ್ದರೆ ಮಾತ್ರ ಪರ್ಯಾಯ ವ್ಯವಸ್ಥೆ ಮಾಡುವುದಾಗಿಯೂ ಹೇಳಿದ್ದರು. ದಕ್ಷಿಣ ಕನ್ನಡ ಸಂಸದೀಯ ಮಂಡಳಿಯೂ ಇಂತಹ ನಿರ್ಣಯ ಮಾಡಿ ಪೆಟ್ರೋಲಿಯಂ ಮಂತ್ರಿಗಳಿಗೆ ಬರೆದಿದ್ದಾರೆ. ಇಂದಿನ ಕೇಂದ್ರ ಮಂತ್ರಿಗಳಾದ ಮಾನ್ಯ ಧನಂಜಯ ಕುಮಾರ್ ಅವರು, ಪೆಟ್ರೋಲಿಯಂ ಮಂತ್ರಿ ಶ್ರೀರಾಮ ಮೂರ್ತಿಯವರಿಗೆ ೫.೩.೧೯೯೯ರಲ್ಲಿ ಪತ್ರ ಬರೆದು, "ಈಗಿರುವ ಮಂಗಳೂರು - ಬೆಂಗಳೂರು ರೈಲ್ವೆ ಮೂಲಕವೇ ತೈಲ ಸಾಗಣೆಕೆ ಸಾಧ್ಯ ಎಂದು ಬಲವಾಗಿ ನಂಬಿದ್ದೇನೆ. ದಯವಿಟ್ಟು ಈ ಬಗ್ಗೆ ಗಮನ ಹರಿಸಿ" ಎಂದು ಬರೆದಿದ್ದಾರೆ.

ವಿಜ್ಞಾನಿಗಳ ಅಭಿಪ್ರಾಯಗಳು

1. ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸಿನ' "ಸೆಂಟರ್ ಫಾರ್ ಇಕಲಾಜಿಕಲ್ ಸಾಯನ್ಸ್" ವಿಜ್ಞಾನಿಗಳು, ನೆರಿಯಾದಲ್ಲಿ ಮಾಡಿದ ಸರ್ವೇಯಲ್ಲಿ ಇಲ್ಲಿನ ಅಮೂಲ್ಯವಾದ ಸಸ್ಯ ಸಂಪತ್ತು ಮತ್ತು ವನ್ಯಜೀವಿಗಳ ಮೇಲೆ ಆಗ ತಕ್ಕ ಪರಿಣಾಮವನ್ನು ಸ್ಪಷ್ಟವಾಗಿ ಸೂಚಿಸುತ್ತಾ, ಒಂದು ಸಲ ಇದು ನಾಶವಾದರೆ ಮರಳಿ ಸೃಷ್ಟಿಸಲಾರೆವು" ಎಂದಿದ್ದಾರೆ.

2. ಪುಣೆಯ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ ಸಂಸ್ಥೆಯು, "ಪಶ್ಚಿಮ ಘಟ್ಟಗಳ ಪ್ರದೇಶದಲ್ಲಾಗುವ ಕಾಡಿನ ನಾಶದಿಂದ ಮಂಗನ ಕಾಯಿಲೆಗಳಂಥ ಕಾಯಿಲೆಗಳು ಮರುಕಳಿಸುವ ಸಾಧ್ಯತೆಯಿದೆಯೆಂದು" ಎಚ್ಚರಿಸಿದ್ದಾರೆ.

3. ನೆರಿಯಾ ಗ್ರಾಮದಲ್ಲಿ ಪಶ್ಚಿಮ ಘಟ್ಟ ಪ್ರದೇಶದ ದಟ್ಟವಾದ ಅರಣ್ಯ ಪ್ರದೇಶದಲ್ಲಿ ಪೈಪ್‌ಲೈನ್ ಹಾದು ಹೋಗುವುದರಿಂದ ಈ ಸೂಕ್ಷ್ಮ ಅರಣ್ಯದ ಒಟ್ಟು ಜೀವಜಾಲ ವ್ಯವಸ್ಥೆಯ ಬಾರೀ ವ್ಯತ್ಯಾಸವುಂಟಾಗುತ್ತದೆ. ಬೆಂಗಳೂರಿನ, 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ್'ನ" ಏಶಿಯನ್ ಎಲಿಫೆಂಟ್ ರಿಸರ್ಚ್ ಎಂಡ್ ಕನ್ಸರ್ವೇಶನ್ ಕೇಂದ್ರ"ದ ವಿಜ್ಞಾನಿಗಳು ಏಪ್ರಿಲ್ ೧೯೯೯ರಲ್ಲಿ ನೀಡಿದ ಮಧ್ಯಂತರ ವರದಿಯಂತೆ, ಪೈಪ್ಲೈನ್ ಹಾದುಹೋಗುವ ಪ್ರದೇಶದ ಜೀವಜಾಲದ ಮೇಲೆ, ಮುಖ್ಯವಾಗಿ ಆನೆಗಳ ಮೇಲೆ, ಆಗ ತಕ್ಕ ದುರಂತ ಪರಿಣಾಮವನ್ನು ವಿಸ್ತಾರವಾಗಿ ಹೇಳಿದ್ದಾರೆ. ಇದು ಒಂದು ಸಂಕೇತ ಮಾತ್ರ. ಪಶ್ಚಿಮಘಟ್ಟದ ಈ ಭಾಗವೇ ಪಾರಿಸಾರಿಕ ವಿನಾಶವನ್ನು ಅನುಭವಿಸಲಿದೆ. ಈಗಾಗಲೇ ಭಯಗೊಂಡ ಆನೆಗಳ ಹಿಂಡು ಈ ವಿಕೃತವಾಗಿ ನಿರ್ಮಿತವಾದ ಪೈಪ್‌ಲೈನ್ ಹದ್ದಾರಿಯಲ್ಲಿ, ಪ್ರತ್ಯಕ್ಷವಾಗಿದ್ದಾವೆಂಬ ವರದಿಗಳೂ ಬರುತ್ತಿವೆ.

ಅಸಂಬದ್ಧ ಅಭಿವೃದ್ಧಿ ವ್ಯಾಖ್ಯೆ

ಅರ್ಥಶಾಸ್ತ್ರ ಸಿದ್ಧಾಂತ ಹೇಳುವಂತೆ, ಯಾವುದೇ ಒಂದು ಯೋಜನೆಯನ್ನು ಮಾಡುವಾಗ ಅದರ ಲಾಭ-ನಷ್ಟಗಳನ್ನು ತುಲನೆ ಮಾಡಬೇಕು. ಇದಕ್ಕೆ "ಟರ್ಮ್ಸ್ ಆಫ್ ಟ್ರೇಡ್" (Terms of Trade) ಎನ್ನುತ್ತಾರೆ. ಯಾವುದನ್ನಾದರೂ ಪಡೆಯುವಾಗ ಕಳಕೊಳ್ಳುವುದೆಷ್ಟು ಎಂಬುದನ್ನು ತುಲನೆ ಮಾಡಿ ವೈಜ್ಞಾನಿಕವಾಗಿ ಮುಂದುವರಿಯಬೇಕು.

ಈ ಪೈಪ್ಲೈನ್ ಯೋಜನೆಯಲ್ಲಿ, ಪಡೆಯುವುದಕ್ಕಿಂತ ನಾವು ಕಳಕೊಳ್ಳುವುದು ಹೆಚ್ಚು, ಆರ್ಥಿಕ ನಷ್ಟ (ಮೇಲೆ ಹೇಳಿದಂತೆ), ಸಾಮಾಜಿಕ ಹೊರೆ, ನಷ್ಟ, ಸಂಕಷ್ಟಗಳು, ಪ್ರಾಕೃತಿಕ ಸಂಪತ್ತಿನ ನಷ್ಟ, ೩೩ ಗ್ರಾಮಗಳ ಸಾವಿರಾರು ರೈತರ ಕುಟುಂಬದ ನಿರಾಶ್ರಿತರ ಸಮಸ್ಯೆ, ನೀರಿನಿಂದ ತುಂಬಿತುಳುಕುತ್ತ, "ನೀರು ವಿತಿಯ"ವೇ ಆದ ಭಾಗದ ಕಾಡಿನ ನಾಶದಿಂದ ಎದುರಿಸಬೇಕಾದ ನೀರಿನ ಬರಗಾಲ ಮತ್ತು ಮಿಲಿಯಾಂತರ ವರುಷಗಳಲ್ಲಿ ಮೂಡಿ ಬಂದ ಊಹೆಗೂ ನಿಲುಕದ ಪ್ರಾಕೃತಿಕ ಜೀವಜಾಲದ ನಷ್ಟ, ಇವುಗಳ "ಬ್ಯಾಲೆನ್ಸ್ ಶೀಟ್" ತೆಗೆದರೆ, ಲಾಭಕ್ಕಿಂತ ನೂರಾರು

ಪಾಲು ಕಳೆದುಕೊಳ್ಳುತ್ತೇವೆ. ಇಂಥ ಪ್ರಗತಿ ಪರವಲ್ಲದ ಜೀವ ಪರವಲ್ಲದ ನಿಸರ್ಗ ವಿರೋಧಿಯಾದ, ಅತಾರ್ಕಿಕ, ಅವೈಜ್ಞಾನಿಕ ಯೋಜನೆ ಅದೂ ಕೂಡ ಸಮರ್ಪಕವಾದ ಬದಲೀ ವ್ಯವಸ್ಥೆಯಿರುವಾಗ, ಬೇಕೇ ಎಂಬುದನ್ನು ಗಂಭೀರವಾಗಿ ಚಿಂತಿಸಬೇಕಾಗಿದೆ. ಭೂಮಿಯಿಂದಲೇ ಮೂಡಿ ಬಂದ ನಾವು, ಭೂಮಿಯ ಭಾಷೆಯನ್ನೇ ಮರೆತರೆ, ಗುಜರಾತಿನ ದುರಂತ (ಭೂಕಂಪ: ಪ್ರಕೃತಿ ವಿಕೋಪ) ದಲ್ಲಾದಂತೆಯೇ, ಈ ನೆಲ ನಮಗೆ ಬಲವಂತವಾಗಿ ಈ ನೆಲದ ಭಾಷೆ ಕಲಿಸದೆ ಬಿಡದು. ಆಗ ನಾವು-ನೀವು ಇರದಿರಬಹುದು. ಆದರೆ, ಮುಂದಿನ ಪೀಳಿಗೆ ಇದರ ಫಲ ಉಣ್ಣಬೇಕಾಗುತ್ತದೆ ಅದಕ್ಕೆ ಈ ನೆಲದ ವಿವೇಕವನ್ನು ಕಂಡುಕೊಂಡು ಮುಂದೆ ಸಾಗುವುದು ಒಳ್ಳೆಯದು. ❒

## ಪರಿಸರ ಕಾರ್ಯಕರ್ತರ ಕೆಲಸ:

# ಸ್ವಾಮೀಜಿಯವರಲ್ಲಿ ಮನವಿ

ಗೌರವಾನ್ವಿತರಾದ ಶ್ರೀ ಆದಿಚುಂಚನಗಿರಿ ಸ್ವಾಮಿಗಳು ಇತ್ತೀಚೆಗೆ ಮಂಗಳೂರಿನಲ್ಲಿ ಮಾತಾಡುತ್ತಾ, "ಪರಿಸರವಾದಿಗಳು ತುಂಬಾ ಮಾತಾಡುತ್ತಾರೆ. ಆದರೆ ಕೆಲಸ ಮಾಡುವುದಿಲ್ಲ". ಎಂಬರ್ಥದ ಹೇಳಿಕೆ ಕೊಟ್ಟಿದ್ದನ್ನು ಪತ್ರಿಕೆಗಳಲ್ಲಿ ಗಮನಿಸಿದೆ. ಪೂಜ್ಯರು ಈ ಮಾತು ಹೇಳಿದ್ದು ಹೌದಾದರೆ ಇದು ಅತ್ಯಂತ ದುರಾದೃಷ್ಟಕರ. ಪೂಜ್ಯ ಸ್ವಾಮೀಜಿಯವರು ಕರ್ನಾಟಕ ಸರಕಾರದ ಹಸಿರು ಯೋಜನೆ ಯಶಸ್ವಿಯಾಗುವಂತೆ ಕಾರ್ಯನಿರ್ವಹಿಸುತ್ತಿರುವುದು ನಿಜಕ್ಕೂ ಸಂತಸದ ಸಂಗತಿ. ಕರ್ನಾಟಕ ಸರಕಾರದ ಅರಣ್ಯ ಇಲಾಖೆಯು ಕಳೆದ ಹತ್ತು ತಿಂಗಳಿನಿಂದ ದಕ್ಷಿಣ ಕನ್ನಡ ಮತ್ತು ಉಡುಪಿ - ಈ ಎರಡು ಜಿಲ್ಲೆಗಳಲ್ಲೇ ತಮ್ಮ ಬೇರೆ ಬೇರೆ ನರ್ಸರಿಗಳಲ್ಲಿ ಸುಮಾರು ೨೦ ಲಕ್ಷ ರೂಪಾಯಿ ಖರ್ಚಿನಲ್ಲಿ ಐದು ಲಕ್ಷ ಸಸಿಗಳನ್ನು (ಅವುಗಳಲ್ಲಿ ಹಲವಾರು ಔಷಧೀಯ ಸಸ್ಯಗಳೂ ಸೇರಿ) ನೆಟ್ಟು ಸಾಕಿ ಸಲಹಿ, ಬೆಳೆಸಿದೆ. ಇಡಿಯ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಒಟ್ಟು ಕೆಲವು ಕೋಟಿ ಗಿಡಗಳನ್ನು ಅರಣ್ಯ ಇಲಾಖೆ ಬೆಳೆಸಿದೆ. ಆ ಗಿಡಗಳನ್ನು ಪೂಜ್ಯ ಸ್ವಾಮೀಜಿಯವರ ಸನಿಹಕ್ಕೆ ತಂದುಕೊಟ್ಟು ಅವನ್ನು ಸರಿಯಾದ ರೀತಿಯಲ್ಲಿ ಸಸಿ ನೆಡುವ ಆಸಕ್ತರಿಗೆ ತಲುಪಿಸುವಂತೆ ಪ್ರಯತ್ನಿಸುತ್ತಾ ಸ್ವಾಮೀಜಿಯವರ ವೃಕ್ಷನೆಡುವ ಆದಮ್ಯ ಕಾಳಜಿಗೆ ಅನುಕೂಲ ಮಾಡಿಕೊಡುತ್ತಿರುವುದು ನಿಜಕ್ಕೂ ಅತ್ಯಂತ ಸ್ತುತ್ಯರ್ಹ ಕೆಲಸ. ಪೂಜ್ಯ ಸ್ವಾಮೀಜಿಯವರ ವೃಕ್ಷ ಸಂವರ್ಧನೆ ಟ್ರಸ್ಟಿನ ಕೆಲಸವನ್ನು ನಿಜಕ್ಕೂ

---

ಜನವಾಹಿನಿ, ಆಗಸ್ಟ್ ೨೫, ೨೦೦೩

ಮೆಚ್ಚತಕ್ಕದ್ದು. ಸರಕಾರಿಯೇತರ ಸಂಸ್ಥೆಗಳ ಜವಾಬ್ದಾರಿಯೇ ಇದು. ಎಲ್ಲ ಮಠಗಳೂ, ದೇವಸ್ಥಾನಗಳೂ, ಸೇವಾಸಂಸ್ಥೆಗಳೂ ಇಂಥ ಪವಿತ್ರ ಕಾರ್ಯಗಳಿಗೆ ತೊಡಗಬೇಕು. ಇದು ನಿಜಕ್ಕೂ ಧಾರ್ಮಿಕ ಕೆಲಸ. ಹಾಗಾಗಿ ಅನುಕರಣೀಯ.

ಈ ಬಾರಿ ಅರಣ್ಯ ಇಲಾಖೆ ಗಿಡ ಬೆಳೆಸುವ ನಿಟ್ಟಿನಲ್ಲಿ ಒಳ್ಳೆಯ ಕೆಲಸ ಮಾಡಿದೆ. ನಾನೇ ಕೆಲವು ನರ್ಸರಿಗಳಲ್ಲಿ ಆದ ಕೆಲಸವನ್ನು ನೋಡಿದ್ದೇನೆ. ಆದರೆ ಸರಕಾರದ ಅನೇಕ ಜನಪರ ಯೋಜನೆಗಳು ಜ್ಯಾರಿಗೊಳಿಸುವ ಹಂತದಲ್ಲಿ ವಿಫಲವಾಗುತ್ತವೆ. ಸರಕಾರದ ಜನಹಿತ ಯೋಜನೆಗಳ ಫಲ ಸೋರಿಹೋಗದಂತೆ ಅವನ್ನು ನಿಜಫಲಾನುಭವಿಗಳಿಗೆ ತಲುಪುವಂತೆ ಅನೇಕ ಸರಕಾರೇತರ ಸ್ವಯಂ ಸೇವಾಸಂಸ್ಥೆಗಳು (ಎನ್.ಜಿ.ಓ.) ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುತ್ತವೆ. ಎನ್.ಜಿ.ಓ.ಗಳ ಈ ಪಾತ್ರ ಬಹಳ ಮುಖ್ಯವಾದದ್ದು. ಒಂದುಕಡೆ ಸರಕಾರದ ಸಂಕೀರ್ಣ ಯೋಜನಾ ವ್ಯವಸ್ಥೆಯಿದೆ. ಇನ್ನೊಂದುಕಡೆ ಸರಳ ಮನಸ್ಸಿನ ಜನಸಾಮಾನ್ಯರಿದ್ದಾರೆ. ಜನಸಾಮಾನ್ಯರ ಸರಳ ಮನಸ್ಸಿಗೆ ಸರಕಾರದ ಜನಪರ ಯೋಜನೆಗಳ ಸಂಕೀರ್ಣತೆ ಅರ್ಥವಾಗದು. ಹಾಗಾಗಿ ಹೆಚ್ಚಿನ ಸರಕಾರೀ ಯೋಜನೆಗಳು ಸರಿಯಾದ ಫಲಾನುಭವಿಗಳಿಗೆ ತಲುಪುವಲ್ಲಿ ವಿಫಲವಾಗುತ್ತವೆ. ಇಂಥಲ್ಲಿ ಸರಕಾರ ಮತ್ತು ಜನರ ನಡುವೆ ಒಂದು ಮಧ್ಯವರ್ತಿ ಸಂಘಟನೆಯಿದ್ದರೆ ಒಳ್ಳೆಯದು. ಇದನ್ನು ಸರಕಾರವೂ ಬಯಸುತ್ತದೆ. ಈ ಮಧ್ಯವರ್ತಿ ಸೇವಾಸಂಸ್ಥೆ ಸರಕಾರದ ಸಂಕೀರ್ಣ ವ್ಯವಸ್ಥೆಯನ್ನೂ ಮತ್ತು ಜನಸಾಮಾನ್ಯರ ಸರಳ ಮನಸ್ಸನ್ನೂ ಏಕಕಾಲದಲ್ಲಿ ಅರ್ಥಮಾಡಿಕೊಂಡು ಜನರಿಗೆ ಸಹಾಯಕವಾಗಬಲ್ಲದು. ಸರಕಾರ ಮತ್ತು ಸರಕಾರೇತರ ಸಂಘಟನೆಗಳು ಈ ದೃಷ್ಟಿಯಲ್ಲಿ ಜಂಟಿ ಕಾರ್ಯಾಚರಣೆ ನಡೆಸಿದರೆ ದೇಶದ ಒಟ್ಟು ಅಭಿವೃದ್ಧಿ ಸಾಧ್ಯ. ಸರಕಾರದ ಕಾರ್ಯಗಳಲ್ಲಿ ಈ ರೀತಿ ಜನರ ಸಹಭಾಗಿತ್ವ, ನಿಜಕ್ಕೂ ಒಂದು ಆದರ್ಶ ಮಾದರಿಯಾದೀತು. ಕರ್ನಾಟಕದಾದ್ಯಂತ ಬೃಹತ್ ಗಿಡನೆಡುವ ಕಾರ್ಯಕ್ರಮದಲ್ಲಿ ಸರಕಾರದ ಜೊತೆ ಪೂಜ್ಯ ಸ್ವಾಮೀಜಿಯವರು ಕೈ ಜೋಡಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆನ್ನುವ ಅವರ ಮನೋಭಾವ ದೊಡ್ಡದು; ಮತ್ತು ಮೆಚ್ಚತಕ್ಕದ್ದು.


ಆದರೆ....., ಪರಿಸರ ಕಾರ್ಯಕರ್ತರ ಬಗ್ಗೆ ಅವರಾಡಿದ ಲಘುಮಾತುಗಳು ಪ್ರಾಯಃ ಅನುಭವದ ಕೊರತೆಯಿಂದ ಬಂದಿರಬೇಕು. ಸರ್ವಶ್ರೀ ಶಿವರಾಮ ಕಾರಂತ, ಸುಂದರಲಾಲ ಬಹುಗುಣ, ಮೇಧಾ ಪಾಟ್ಕರ್, ವಂದನಾ ಶಿವ, ಕ್ಲಾಡ್ ಆಲ್ವಾರಿಸ್ ಮತ್ತು ದಕ್ಷಿಣ ಕನ್ನಡದ ಪರಿಸರಾಸಕ್ತ ಒಕ್ಕೂಟ, ಮತ್ತು ಇಂಥ ಅನೇಕ ಪರಿಸರ ಸಂಘಟನೆಗಳು ಮಾಡುತ್ತಿರುವ ಕೆಲಸಗಳು ಅತ್ಯಂತ ಮೂಲಭೂತವಾದದ್ದು. ಸಸಿ ನೆಡುವುದು ಒಟ್ಟು ಪರಿಸರ ರಕ್ಷಣೆಯ ಒಂದು ಚಿಕ್ಕ ಅಂಗ ಮಾತ್ರ. ಅತ್ತ ಒಂದು ಮರ ನೆಡುವಾಗ, ಇತ್ತ ಹತ್ತು ಮರಗಳನ್ನು ಕೇವಲ ಹಣ, ವ್ಯಾಪಾರ, ಕೈಗಾರಿಕಾ ಬೆಳವಣಿಗೆಯ ಕ್ಷುಲ್ಲಕ ನೆಪವೊಡ್ಡಿ ಬಲಿಷ್ಠ ಮಾರುಕಟ್ಟೆ ಶಕ್ತಿಗಳು ನಾಶಮಾಡುತ್ತಿರುತ್ತವೆ. ಹಾಗಾಗಿ ಗಿಡ ನೆಡುವುದರ ಜೊತೆ, ವಿನಾಶವನ್ನು ತಡೆಗಟ್ಟುವುದೂ ಒಟ್ಟೊಟ್ಟಿಗೇ ನಡೆಯಬೇಕಾಗುತ್ತದೆ. ಬೆಟ್ಟ, ಗುಡ್ಡ ಕಾಡು, ಹಳ್ಳ, ಕೊಳ್ಳ ಕಣಿವೆ, ನದಿ, ಬಯಲು, ಸಮುದ್ರ, ಸಮಸ್ತ ಜೀವಜಾಲದ ಸಂರಕ್ಷಣೆ, ಮತ್ತು ನೆಲ, ಜಲ, ವಾಯು, ಶಬ್ದ ಮಾಲಿನ್ಯಗಳನ್ನು ತಡೆಗಟ್ಟುವುದೂ ಅತ್ಯಂತ

ಮಹತ್ತ್ವದ ಪರಿಸರ ರಕ್ಷಣೆಯ ಕೆಲಸ. ಹಲವು ಬಾರಿ ಇಂಥ ಸಂದರ್ಭಗಳಲ್ಲಿ ಸಂಘರ್ಷ ಅನಿವಾರ್ಯ ವಾಗಬಹುದು. ದಕ್ಷಿಣಕನ್ನಡದಲ್ಲಿ ಕೊಜೆಂಟ್ರಿಕ್ಸ್ ಥರ್ಮಲ್ ವಿದ್ಯುತ್ ಯೋಜನೆಯ ವಿರುದ್ಧ ಚಳವಳಿಯಾಗಲೀ, "ಪಶ್ಚಿಮ ಘಟ್ಟ ಉಳಿಸಿ" ಹೋರಾಟವಾಗಲೀ ಈ ದೃಷ್ಟಿಯಿಂದ ಅತ್ಯಂತ ಅಮೂಲ್ಯವಾದದ್ದು. ಈ ಪರಿಸರ ಹೋರಾಟಗಳು ಮೀನುಗಾರರ ಬದುಕಿನ ಹಕ್ಕಿನ ಹೋರಾಟವಾಗಿ, ಸಮಸ್ತ ಜನತೆಯ ಹೋರಾಟವಾಗಿ ರೂಪುಗೊಂಡಿತ್ತು. ಪರಿಸರ ಕಾರ್ಯಕರ್ತರು ಕರಾವಳಿ ಜಿಲ್ಲೆಗಳಲ್ಲಿ ಜನಜಾಗೃತಿ ಮೂಡಿಸುವಲ್ಲಿ ಸಾಕಷ್ಟು ಯಶಸ್ಸುಗಳಿಸಿದ್ದಾರೆ. ಹಾಗಾಗಿ ಇಂದು ಪರಿಸರ ಹೋರಾಟ ಜನರ ಹೋರಾಟವಾಗಿದೆ.

ಮಾಲಿನ್ಯಕಾರಕ ಕೈಗಾರಿಕೆಗಳ ಬಲಿಷ್ಠ ಲಾಬಿಗಳು ಸರಕಾರದ ಮೇಲೂ ಪ್ರಭಾವ ಬೀರಿ ತಮ್ಮ ಲಾಭಕ್ಕಾಗಿ ಪರಿಸರದ ಮೇಲೆ ದೌರ್ಜನ್ಯವೆಸಗುವುದನ್ನು ನಾವು ದಿನನಿತ್ಯ ನೋಡುತ್ತೇವೆ. ಈ ಶಕ್ತಿಗಳ ಜೊತೆ ಹೋರಾಟ ಮಾಡುವ ಅತ್ಯಂತ ಅಪಾಯಕಾರೀ ಹಾಗೂ ಕ್ಲಿಷ್ಟ ಕೆಲಸ ಪರಿಸರ ಕಾರ್ಯಕರ್ತರಿಗೆ ಸವಾಲಾಗಿ ನಿಂತಿದೆ. ಅಭಿವೃದ್ಧಿಯ ಹೆಸರಲ್ಲಿ ದುರ್ಬಲರು ಮಾತ್ರ ಎಲ್ಲ ಕಡೆಯಲ್ಲೂ ಬಲಾತ್ಕಾರದ ಸ್ಥಳಾಂತರದಿಂದ ನಾಶವಾಗುವ ಸ್ಥಿತಿಯಲ್ಲಿದ್ದಾರೆ. ಇಲ್ಲಿ ಪೂಜ್ಯ ಸ್ವಾಮೀಜಿಯವರ ಸಹಾಯ, ಬೆಂಬಲ ದುರ್ಬಲ ಜನತೆಗೆ ಬೇಕು. ಪೂಜ್ಯ ಸ್ವಾಮೀಜಿಯವರು ತುಂಬಾ ಶಕ್ತಿಶಾಲಿಗಳು, ಬೃಹತ್ ಸಮಾಜದ ಮೇಲೆ ಪ್ರಭಾವ ಬೀರಲು ಸಮರ್ಥರು; ಮತ್ತು , ಅದರ ಜೊತೆಗೇ, ಆಳುವ ವರ್ಗಕ್ಕೂ ತಿಳಿಹೇಳಲು ಶಕ್ತಿಯಿದ್ದವರು. ಮಾರುಕಟ್ಟೆ ಶಕ್ತಿಗಳ ಜೊತೆ ನಾವು ಇರುವವರೆಗೆ ನಮ್ಮಿಂದ ಏನೂ ಮೂಲಭೂತವಾದುದ್ದನ್ನು ಮಾಡಲು ಸಾಧ್ಯವಾಗುವುದಿಲ್ಲ. ಸರ್ವವನ್ನೂ ತ್ಯಾಗ ಮಾಡಿದ ಪೂಜ್ಯ ಸ್ವಾಮೀಜಿಗಳಿಗೆ ಯಾರ ಹಂಗೇನು? ಅವರಿಗೆ ವ್ಯಷ್ಟಿ ಹಿತಾಸಕ್ತಿಯಿಲ್ಲ; ಸಮಷ್ಟಿ ಹಿತದ ಕಡೆ ಮಾತ್ರ ಲಕ್ಷ್ಯ. ಹಾಗಾಗಿ ಪೂಜ್ಯರು ನಮ್ಮೆಲ್ಲರಿಗಿಂತಲೂ ಹೆಚ್ಚು ನಿರ್ಭೀತಿಯಿಂದ ಈ ದೆಸೆಯಲ್ಲಿ ಮುಂದುವರೆಯಲು ಸಾಧ್ಯ. ಅವರು ಈ ಒಟ್ಟು ಚಳುವಳಿಯ ನೇತಾರರಾಗಬಹುದು. ಆಗ ಪರಿಸರ ಚಳುವಳಿ ಖಂಡಿತವಾಗಿ ಸತ್ವಶಾಲಿಯಾಗುತ್ತದೆ.

ಒಂದಕ್ಕೊಂದು ಪರಸ್ಪರ ಪೂರಕವಾಗಿ ಹೆಣೆದುಕೊಂಡಿರುವ ನಿಸರ್ಗದ ಈ ಅಂತರ್ಗತ ಅಖಂಡತ್ವವನ್ನು ಅರಿತು ಈ ಭೂಮಿಯನ್ನು ಜೊತೆಗೆ ಸಮಸ್ತ ಜೀವಸಂಕುಲವನ್ನು, ರಕ್ಷಿಸುವ, ಪೋಷಿಸುವ ಆಧ್ಯಾತ್ಮ ಆಯಾಮವನ್ನು ಈ ನಿಸರ್ಗ ಸಂರಕ್ಷಣೆಗೆ ಪೂಜ್ಯರು ಕೊಡಬೇಕು ಎಂಬುದು ನಮ್ಮೆಲ್ಲರ ಆಶಯ. ಪರಿಸರ ಸಂರಕ್ಷಣೆ ನಮ್ಮ ನಡುವಿರುವ ಕಟ್ಟ ಕಡೆಯ ಅತಿದುರ್ಬಲರ ಬದುಕಿನ ಹಕ್ಕಿನ ರಕ್ಷಣೆಯ ಹೋರಾಟವೂ ಆಗಿ ರೂಪುಗೊಳ್ಳಬೇಕು. ಇದು ಪೂಜ್ಯರಿಂದ ಆದೀತು. ಇದೇ ನೈಜ ಧಾರ್ಮಿಕತೆ. ಎಲ್ಲಾ ಸ್ವಾಮಿಗಳೂ ಈ ಕಾರ್ಯಕ್ರಮದಲ್ಲಿ ತೊಡಗುವಂತಾಗಬೇಕು. ಪೂಜ್ಯ ಆದಿಚುಂಚನಗಿರಿಯವರು ಈಗಾಗಲೇ ಮುಂಚೂಣಿಯಲ್ಲಿರುವುದು ನಿಜಕ್ಕೂ ಅಭಿಮಾನದ ಸಂಗತಿ. □

# ಕಿಟಕಿಗಳು ಕನ್ನಡಿಗಳು



ಡಾ.ನಿ.ಮುರಾರಿ ಬಲ್ಲಾಳ ನಮ್ಮ ನಡುವಿನ ಸಮರ್ಥ ಸಾಂಸ್ಕೃತಿಕ ಚಿಂತಕರು. ಅವರು ಕಳೆದ ಕಾಲು ಶತಮಾನಕ್ಕೂ ಮೀರಿ ಪೂರ್ವದ ಚಿಂತಕರ ಜೊತೆ ನಡೆಸಿದ ವಾಗ್ವಾದ-ಸಂವಾದಗಳು ಬಹು ವಿಶೇಷವಾಗಿವೆ. ಇಲ್ಲಿಯ ಲೇಖನಗಳು ಸಮಕಾಲೀನ ಸಂದರ್ಭದ ಹಲವು ವಿನ್ಯಾಸಗಳನ್ನು ಸೂಕ್ಷ್ಮವಾಗಿ ಹಿಡಿಯುತ್ತವೆ, ವ್ಯಾಖ್ಯಾನಿಸುತ್ತವೆ. ಸಂಸ್ಕೃತಿ ಚಿಂತನೆ ಕನ್ನಡಿಗಳಾಗುವುದೂ ಕಿಟಕಿಗಳಾಗುವುದೂ ಜೀವಂತ ರೂಪಕವಾಗುವುದೂ ಈ ಬಗೆಗಳಲ್ಲಿಯೇ. ಇಲ್ಲಿಯ ಲೇಖನಗಳು ಅಂತಿಮವಾಗಿ ಗಾಂಧಿಯ ಮಹಾ ರೂಪಕದ ಮೂಲಕ ಕಥನಗೊಳ್ಳುತ್ತವೆ. ಸಮಕಾಲೀನ ವೈಚಾರಿಕತೆ ಹಾಗೂ ಪೂರ್ವದ ತತ್ವಚಿಂತಕರ ಜೊತೆ ಜಗಳವನ್ನೂ ಸ್ನೇಹವನ್ನೂ ಒಟ್ಟಿಗೆ ಅವು ಹಿಡಿಯುತ್ತವೆ. ಮುಖ್ಯವಾಗಿ ನಿ.ಮುರಾರಿ ಬಲ್ಲಾಳರು ಸಂವಾದ ರೂಪಿಕೆಯ ದೀಪ ಹಿಡಿಯಲು ಯತ್ನಿಸಿದ್ದಾರೆ. ನಮಗೆ ಬೆಳಕು ಬೇಕು, ಬೆಂಕಿ ಬೇಡ. ಬೆಳಕು ನಮ್ಮನ್ನು ಮುಂದೆ ಕರೆದೊಯ್ಯುತ್ತದೆ. ಬೆಂಕಿ ನಮ್ಮನ್ನು ಸುಟ್ಟು ಹಾಕುತ್ತದೆ. ಸಂಸ್ಕೃತಿ ಚಿಂತನೆ ಅಂತಿಮವಾಗಿ ಬೆಳಕಾಗುವುದು ಈ ಬಗೆಗಳಲ್ಲಿಯೇ. ನಿನ್ನೆಯು ಇಂದಾಗಿ, ಇಂದು ನಾಳೆಯ ಬೆಳಕಲ್ಲಿ ಮುಳುಗುವ ಪರಿ ಇಲ್ಲಿಯ ಲೇಖನಗಳ ವಿನ್ಯಾಸವಾಗಿದೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ

ರೂ.100

ISBN 81-7713-170-2